


894.814 3
RAJ N91
ಗ್ರಂಥ ಸ್ವಾಮ್ಯ ವಿಭಾಗ

# ಯಂಡಮೂರಿ ವೀರೇಂದ್ರನಾಥ್

ಅವರ ಕುತೂಹಲಭರಿತ ಕಾದಂಬರಿ

# ಡೈರಿ ತಂದ ಸೌಭಾಗ್ಯ

META ENTERED

DEPARTMENT OF PUBLIC LIBRARIES ★ STATE CENTRAL LIBRARY, BANGALORE ★
COPYRIGHT BUREAU
No.

ಯಂಡಮೂರಿ ವೀರೇಂದ್ರನಾಥ್

# ಡೈರಿ ತಂದ ಸೌಭಾಗ್ಯ

10,329 1991

ರಾಜಾ ಚೆಂಡೂರ್

ಹಂಸಧ್ವನಿ ಪ್ರಕಾಶನ
(ನಗರ ಕೇಂದ್ರ ಗ್ರಂಥಾಲಯದ ಬಳಿ)
ಭಾಷ್ಯಂ ರಸ್ತೆ, ಕಾಟನ್‌ಪೇಟೆ ಮುಖ್ಯ ರಸ್ತೆ,
ಬೆಂಗಳೂರು - 560 053.

Dairy Tanda Sowbhagya—a novel by Yendamuri Veerendranath, Kannada translation by Raja Chendur, Published by M/s. Hamsa Dhwani Prakashana, Central Library Buildings, Cottonpet Main Road, Bangalore-53
Phone : 353918 & 77750

---

First Edition : 1991

49269

ಹಕ್ಕು : ಕಾದಿರಿಸಲಾಗಿದೆ

ಮುದ್ರಕರು :
ನಿಸರ್ಗ ಎಂಟರ್‌ಪ್ರೈಸಸ್
ಪ್ರಕಾಶನಗರ, ಬೆಂಗಳೂರು,

## ಜನಪ್ರಿಯ ಸಾಹಿತಿಗಳ ಅಪೂರ್ವ ಪುಸ್ತಕಗಳು

| | |
|---|---|
| ಉಷಾ ನವರತ್ನರಾಮ್ | ಎಂ. ನೀಲಪ್ಪ |
| ಯಂಡಮೂರಿ | ಕೊರಟಿ ಶ್ರೀನಿವಾಸರಾವ್ |
| ವೀರೇಂದ್ರನಾಥ್ | ಸಂಪಟೂರು ವಿಶ್ವನಾಥ್ |
| ಟಿ. ಕೆ. ರಾಮರಾವ್ | ಕೆ. ರಮೇಶ್ ಕಾಮತ್ |
| ಡಾ|| ವಿ. ಎನ್. ಮೂರ್ತಿ | ಉದಯ್ ಜಾದೂಗಾರ್ |
| ಬಿ. ಗೋ. ರಮೇಶ್ | ಶಶಿಧರ ವಿಶ್ವಾಮಿತ್ರ |
| ಡಾ|| ಎನ್. ಕಪನೀಪತಯ್ಯ | ಕೆ. ಇಂದುಮತಿ |
| ಮಲ್ಲಾದಿ ವೆಂಕಟ | ಎಸ್. ಲಲಿತ |
| ಕೃಷ್ಣಮೂರ್ತಿ | ಹೊ. ಶಾ. ಅರುಣ್ |
| 'ರಘುಸುತ' | ಶಾಂತಿ ರಮೇಶ್ |
| ರಾಜಾ ಚೆಂಡೂರ್ | ಸ. ನಾರಾಯಣ |
| ಎಸ್. ಡಿ. ಕುಮಾರ್ | ಡಾ|| ಟಿ. ಎಸ್. |
| ಶಾರದಾತನಯ | ರಾಜಶೇಖರಯ್ಯ |
| ಕೆ. ಟಿ. ಗಟ್ಟಿ | ಆರ್. ಜೈಕುಮಾರ್ |
| ಶೈಲಜಾ ಪ್ರಕಾಶ್ | ಡಾ|| ಸೂರ್ಯನಾಥ್ ಕಾಮತ್ |
| ವಿಮಲಾ ರಾಘವೇಂದ್ರ | 'ಪ್ರಭಾ' |
| ಕಾಕೋಳು ರಾಘವೇಂದ್ರ | ಎಸ್. ರಾಮಮೂರ್ತಿ |
| ಕೆ. ಸತ್ಯನಾರಾಯಣ | ಡಿ. ಎಸ್. ಶ್ರೀನಾಥ್ |

ಇನ್ನೂ ನೂರಾರು ಲೇಖಕ, ಲೇಖಕಿಯರ ಕನ್ನಡ ಪುಸ್ತಕಗಳ ಸಂಗ್ರಹ.

**ನಮ್ಮ ಕೆಳಕಂಡ ಹೊಸ ಮಾರಾಟ ಮಳಿಗೆಗೆ ಭೇಟಿ ಕೊಡಿ**

# ಹಂಸಧ್ವನಿ ಪ್ರಕಾಶನ

(ನಗರ ಕೇಂದ್ರ ಗ್ರಂಥಾಲಯದ ಬಳಿ)

**ಭಾಷ್ಯಂ ರಸ್ತೆ, ಕಾಟನ್‌ಪೇಟೆ ಮುಖ್ಯ ರಸ್ತೆ, ಬೆಂಗಳೂರು–560 053**

**ಬೆಲೆ : 40–00 ಗ್ರಂಥಾಲಯ ಪ್ರತಿ : 50–00**

ಬಟ್ಟೆಗಳು ಕೂಡಾ ಬಿಡುಗಡೆ ಪಡೆದಿವೆ, ಅವನೊಡನೆ ಸಹಕರಿಸಬೇಕೆಂದು ಕೂಡಾ ಅವಳಿಗೆ ತೋಚುತ್ತಿಲ್ಲ. ಮೊದಲ ಅನುಭವದ ಮತ್ತಿನಲ್ಲಿ ಹಾಗೆಯೇ ಇದ್ದು ಬಿಟ್ಟಿದ್ದಾಳೆ.

ಅವಳ ಕತ್ತಿನ ಮೇಲಿನಿಂದ ಅವನ ಕೈ ಕೆಳಗೆ ಜಾರಿತು.

ಅಲ್ಲಿದ್ದ ಪರ್ವತರಾಜನ ಮಗಳು ಮತ್ತಷ್ಟು ಕೆಳಗೆ ಜಾರಲು ತಿಳಿಸಿದಳು,

'ಸವತಿಯನ್ನು ನೋಡಿಕೋ' ಎಂಬಂತೆ !

ಗಂಗೆ ಇರುವುದು ಹಿಮಾಲಯದ ಕೆಳಗೆ ತಾನೆ !

ಅವನ ಕೈ ಮತ್ತಷ್ಟು ಕೆಳಗೆ ಜಾರಿತು !

ಅವಳ ಹೊಟ್ಟೆ ಗಂಗಾ....

ಮತ್ತೊಮ್ಮೆ ಹಿಂದಕ್ಕೆ ಹೋಗಿ
64ನೇ ಪುಟ ನೋಡಿ

**ಮುಗಿಯಿತು**

"ಯಾವ ಗಂಡ ಹೆಂಡತಿಯೂ ಇಷ್ಟು ಒಳ್ಳೆಯ ಕಮ್ಯೂನಿಕೇಷನ್‌ನಿಂದ ತಮ್ಮ ಮೊದಲ ರಾತ್ರಿಯನ್ನು ಕಳೆದಿರುವುದಿಲ್ಲ."

ಅವನು ಚಕ್ಕನೆ ಮುಂದಕ್ಕೆ ಬಾಗಿದ.

ಗ್ರಂಥ ಸ್ವಾಮ್ಯ ವಿಭಾಗ
ರಾಜ್ಯ ಕೇಂದ್ರ ಗ್ರಂಥಾಲಯ
ಬೆಂಗಳೂರು.

## 23 : 50 : 05

"ಏನು ಯೋಚಿಸುತ್ತಿದ್ದೀರಿ ?"

"ಯಾವುದೋ ಹುಚ್ಚು ಆಲೋಚನೆ.... ಬಿಡು.

"ನಮ್ಮ ನಡುವೆ ಷರತ್ತಿದೆ. ಮರೆತುಬಿಟ್ಟಿರಾ ?'

"ಹೇಳಲೇ ಬೇಕಾ ?"

"ವಿಧಿಯಿಲ್ಲ."

"ನಮಗೆ ಹೆಣ್ಣಾಗಿ, ಬೆಳೆದು ದೊಡ್ಡವಳಾದರೆ, ಹಾಸ್ಟೆಲಿನಲ್ಲಿ ಸೇರಿಸ ಬೇಕಾಗಿ ಬಂದರೆ ಹೇಗೆಂದು ಯೋಚಿಸುತ್ತಿದ್ದೆ."

"ಮೈ ಗಾಡ್, ಒಂದು ಹಾಸ್ಟೆಲ್ ಹಾಗಿದೆಯೆಂದು, ಎಲ್ಲಾ ಹಾಸ್ಟೆಲ್‌ಗಳೂ ಹಾಗೆಯೇ ಇರುತ್ತವೆಯೆಂದು ಕೊಂಡಿದ್ದೀರಾ ? ಆದರೂ ಮೊದಲ ದಿನವೇ ಮಗುವಿನ ಬಗ್ಗೆ ಎಂತ ಯೋಚನೆ ? ಮಾನವ ಪ್ರಯತ್ನವಿಲ್ಲದೆ —

"ಅವನೇನೂ ಹೇಳುತ್ತಿದ್ದರೆ, ಅವಳು ನಾಚಿಕೆಯಿಂದ ಅವನ ಬಾಯನ್ನು ಮುಚ್ಚಿದಳು. ಅವನು ಅವಳನ್ನು ಬಿಗಿಯಾಗಿ ಹಿಡಿದುಕೊಂಡ, ಸುವಾಸನೆ ಒಂದು ಅಲೆಯಾಗಿ ಬಂದು ಅವರನ್ನು ಆವರಿಸುತ್ತಿದ್ದಂತೆ, ತುಟಿಗಳು ಸೇರಿದವು.

## 23 : 56 : 00

ಅವಳೊಂದು ಸುಷುಪ್ತಾವಸ್ಥೆಯಲ್ಲಿ ಮಲಗಿದ್ದಾಳೆ. ಕತ್ತಲು ನಾಚಿಕೆಯನ್ನು ತನ್ನೊಡನೆ ಎಳೆದುಕೊಂಡು ಹೋಗಿದೆ. ಅವರಿಬ್ಬರೇ ಇದ್ದಾರೆ.

ಅನುಭವಿಸಬೇಕು, ಅದಕ್ಕೆ ಇದನ್ನು ಮರೆತು ನಿಮ್ಮ ಕೇರೀರ್ ಮೇಲೆ ಕೃಷಿ ಮಾಡಿದರೆ ಈ ಜನವೇ.

ಚಪ್ಪಾಳೆ ಕೇಳಿದ್ದರಿಂದ ಇಬ್ಬರೂ ಅತ್ತನೋಡಿದರು. ರಾಷ್ಟ್ರಪತಿಗಳು ಜ್ಯೋತಿ ಬೆಳಗಿಸಿದರು.

## 23 : 45 : 07

ರೂಮಿನಲ್ಲಿ ಅಗರಬತ್ತಿಗಳ ಹೊಗ, ಸುವಾಸನೆಯನ್ನು ಬೀರುತ್ತಿವೆ. ಮಲ್ಲಿಗೆ ಪರಿಮಳದೊಂದಿಗೆ ಸೇರಿ ಅದೊಂದು ರೀತಿಯ ಮತ್ತು ಬರಿಸುತ್ತಿದೆ.

ಅವಳು ನಗುತ್ತಾ ಅವನ ಕಡೆಗೆ ನೋಡಿದಳು. ಅವನು ಮಾತನಾಡಲಿಲ್ಲ. ಎಲ್ಲಾ ಭಾವನೆಗಳನ್ನು ಮಾತಿನಲ್ಲಿ ಹೇಳಲಾಗುವುದಿಲ್ಲ. ಮುಖ್ಯವಾಗಿ ಅಪ್ಯಾಯತೆಯನ್ನು, ಪ್ರೀತಿಯನ್ನು – ಅದೂ ಬರೀ ಪ್ರೀತಿಯಲ್ಲ ಕೃತಜ್ಞತೆ ಕೂಡಾ.

"ನಮ್ಮಿಬ್ಬರ ನಡುವೆ ಒಂದು ಒಪ್ಪಂದವಿದೆ ನೆನಪಿದೆಯಾ ? ಹೇಳಿ.... ಈಗ ನೀವೇನು ಯೋಚಿಸುತ್ತಿದ್ದೀರಿ ?"

"ನಾವಿಬ್ಬರೂ ಫ್ರೆಷಾಗಿ ಮತ್ತೆ ಈ ಪ್ರಸ್ಥವನ್ನು ಎರಡನೆ ಸಲ ಏರ್ಪಾಡು ಮಾಡಿಕೊಂಡಿರುವ ಬಗ್ಗೆ —"

"ನನಗಂತೂ ಈ ಅನುಭವದ ಫ್ರೆಷ್‌ನೆಸ್ ಹಾಳಾಗಕೂಡದೆನ್ನಿಸಿತು. ಬದುಕಿನಲ್ಲಿ ಒಂದೇ ಸಲ ತಾನೆ ಇದು ಬರುವುದು. ಅಂದ ಹಾಗೆ ಮೊದಲನೆಯದಕ್ಕೂ, ಇದಕ್ಕೂ ಏನು ವ್ಯತ್ಯಾಸ ಹೇಳಿ ನೋಡೋಣ."

"ಏನು ?"

ಯರು ಮಾನಸಿಕವಾಗಿ ದುರ್ಬಲರು. ಲಕ್ಷ್ಮಿಯನ್ನು ನಾನಲ್ಲದಿದ್ದರೂ ಬೇರೊಬ್ಬರು ಕೆಡಿಸುತ್ತಿದ್ದರು."

ರಾಯಣ್ಣ ಚಕ್ಕನೆ ತಲೆ ಎತ್ತಿದ, "ಲಕ್ಷ್ಮಿ ಕೆಟ್ಟು ಹೋಗಿದ್ದಳೆಂದು ನೀವು ನಂಬುತ್ತೀರಾ ?"

"ಹೌದು, ಆದರೆ ನನ್ನಿಂದಲ್ಲ.... ತನ್ನಿಂದ ತಾನೆ ! ಮದುವೆಯಾದ ನಿಮ್ಮನ್ನು ಪ್ರೀತಿಸಿ ಮೊದಲ ಸಲ, ನೀವು ನಿರಾಕರಿಸಿದಾಗ ನನ್ನನ್ನು ಪ್ರೀತಿಸುತ್ತೇನೆಂದು ಎರಡನೆ ಸಲ ! ಈ ಎರಡು ಕೆಟ್ಟು ಹೋಗುವುದನ್ನು ಹೋಲಿಸಿದರೆ, ಶಾರೀರಿಕ ಸಂಬಂಧವಿಟ್ಟುಕೊಳ್ಳುವುದು ದೊಡ್ಡ ಕೆಟ್ಟು ಹೋಗುವುದಲ್ಲ ಎಂದು ನನ್ನ ಅಭಿಪ್ರಾಯ. ಅಫ್‌ಕೋರ್ಸ್ ಇವೆಲ್ಲಾ ನನ್ನ ಅನುಕೂಲಕ್ಕೆ ಮಾಡಿಕೊಂಡಿರುವ ಥಿಯರಿಗಳು ಬಿಡಿ. ನೀವು ಮುಗ್ಧರು ! ನನ್ನಂತೆ ಯೋಚಿಸಬೇಡಿ. ನಿಮ್ಮ ಕ್ಯಾರಿಯರ್ ಬಗ್ಗೆ ಚೆನ್ನಾಗಿ ಕೃಷಿಮಾಡಿ. ಬೆಸ್ಟಾಫ್ ಲಕ್."

"ನನ್ನಿಂದಾಗಿ ನಿಮ್ಮ ಬಗ್ಗೆ ಪೇಪರ್‌ಗಳಲ್ಲಿ ಏನೂ ಬರುವುದಿಲ್ಲ ತಾನೆ? " ಸಂದಿಗ್ಧತೆಯಿಂದ ಕೇಳಿದ ರಾಯಣ್ಣ.

ರಾಜಾರಾವ್ ಗಹಗಹಿಸಿ ನಕ್ಕುಬಿಟ್ಟ. "ನಾನು ನಿಮ್ಮಷ್ಟು ದೊಡ್ಡವನಲ್ಲ. ನನ್ನ ಬಗ್ಗೆ ಬರೆದರೆ ಪೇಪರ್ ವೇಸ್ಟೆಂದು ಪೇಪರ್‌ನವರಿಗೆ ಗೊತ್ತು. ಇನ್ನು ನಿಮ್ಮ ಬಗ್ಗೆ ಕೂಡಾ ಬರೆಯುವುದಿಲ್ಲ."

"ಯಾಕೆ ?"

"ನೀವು ಕೋರ್ಟಿಗೆ ಹೋದರೆ ಅದೇ ಸೆನ್ಸೇಷನ್ ! ಕೋರ್ಟಿಗೆ ಕೂಡಾ ಹೋಗದಂತೆ ನೀವು ನಿರ್ದೋಷಿಗಳೆಂದು ತಿಳಿದ ಮೇಲೆ ಇನ್ನು ಅದರಲ್ಲಿ ಉತ್ಸಾಹವೇನಿರುತ್ತೆ ? ಅದಕ್ಕೆಂದೇ ಅವರು ಈ ಸುದ್ದಿ ಪ್ರಕಟಿಸುವುದರಲ್ಲಿ ಯಾವ ಉತ್ಸಾಹವನ್ನೇ ತೋರಿಸುತ್ತಿಲ್ಲ. ಲಕ್ಷ್ಮಿಯೊಡನೆ ನಿಮಗೆ ಯಾವ ಶಾರೀರಕ ಸಂಬಂಧವೂ ಇಲ್ಲವೆಂದು ಗಂಟಲು ಕಿತ್ತುಬರುವಂತೆ ಕಿರುಚಿದರೂ ಅದನ್ನು ಕೇಳಲು ಪ್ರಜೆಗಳ ಮನಸ್ಸು ಇಷ್ಟಪಡುವುದಿಲ್ಲ. ಪ್ರಜೆಗಳ ಮನಸ್ಸಿಗೆ ಸಂತೃಪ್ತಿ ನೀಡದ ವಾರ್ತೆಗಳನ್ನು ಪ್ರಕಟಿಸಲು ಪತ್ರಿಕೆಗಳಿಗೆ ಸ್ಪೇಸ್ ಇರುವುದಿಲ್ಲ. ನೀವು ಈ ಅಪವಾದವನ್ನು ಬದುಕಿರುವವರೆಗೂ

ಭಾರತದ ಟೀಂ ಸೀರೀಸ್ ಗೆದ್ದ ಸಂದರ್ಭದಲ್ಲಿ ರಾಷ್ಟ್ರಪತಿಯವರಿಂದ ಬಹುಮಾನ ವಿತರಣೆ ಸಮಾರಂಭ.

ಆಟಗಾರರು, ಅವರ ಹೆಂಡತಿಯರು, ಉಳಿದ ಗೆಸ್ಟ್‌ಗಳು – ಹಾಲಿನಲ್ಲೇ ತುಂಬಿದ್ದಾರೆ. ಕಿರಣ್ಮಯಿ ದೂರದಲ್ಲಿ ಯಾರೊಡನೆಯೋ ಮಾತನಾಡುತ್ತಿದ್ದಾಳೆ. ರಾಯಣ್ಣ, ರಾಜಾರಾವ್ ಒಂದೆಡೆ ನಿಂತಿದ್ದಾರೆ, ಯಾವುದೋ ಪ್ರದರ್ಶನ ಕೂಡಾ ಇದೆ. ರಾಷ್ಟ್ರಪತಿ ಜ್ಯೋತಿ ಬೆಳಗಿಸಿದರು. ಜನ ಗುಂಪು ಗುಂಪಾಗಿ ಸೇರಿ ಮಾತನಾಡಿಕೊಳ್ಳುತ್ತಿದ್ದಾರೆ.

ರಾಜಾರಾವ್ ಹೇಳಿದ "ನಮ್ಮ ತಂದೆ ಗವರ್ನರ್. ಅವರು ಈಗ ತಾನೇ ಹೇಳಿದರು, ಪೋಲೀಸರು ನಿಮ್ಮ ಮೇಲಿನ ಕೇಸನ್ನು ಹಿಂತೆಗೆದುಕೊಳ್ಳುತ್ತಿದ್ದಾರಂತೆ. ನೀವಿನ್ನು ಕೋರ್ಟಿಗೆ ಹೋಗಬೇಕಾಗಿಲ್ಲ."

"ಇದರ ಹಿಂದೆ ನಿಮ್ಮ ಸಹಾಯವಿದೆಯೆಂದು ಕಿರಣ್ಮಯಿ ಹೇಳಿದಳು, ನಿಮಗೆ ಹೇಗೆ ಥ್ಯಾಂಕ್ಸ್ ಹೇಳಬೇಕೆಂದೇ ನನಗೆ ತೋಚುತ್ತಿಲ್ಲ."

"ಲಕ್ಷ್ಮಿ ಆತ್ಮಹತ್ಯೆ ಮಾಡಿಕೊಂಡಿದ್ದಾಳೆಂದು ನನಗೆ ಗೊತ್ತು. ಆದರೆ ನಿಮ್ಮ ಮೇಲೆ ಎನ್‌ಕ್ವಯರಿ ಎನ್ನುತ್ತಿದ್ದಂತೆ ನನಗೆ ತಿಳಿಯದ ವಿಷಯಗಳು ಇನ್ನೂ ಏನಾದರೂ ಇದೆಯೇನೋ ಅಂದುಕೊಂಡೆ. ನಿಮ್ಮ ಹೆಂಡತಿ ನನ್ನ ಬಳಿಗೆ ಬಂದು 'ಕಾಗದದ' ಬಗ್ಗೆ ಪ್ರಸ್ತಾಪಿಸಿದಾಗ ನಿಜವೇನೆಂದು ತಿಳಿಯಿತು. ನಮ್ಮ ತಂದೆಯವರಿಗೆ ಎಲ್ಲಾ ವಿಷಯವನ್ನೂ ತಿಳಿಸಿದೆ."

"ಎಲ್ಲಾ ಅಂದರೆ.... ನಿಮ್ಮ ಬಗ್ಗೆಯೂ ?" ಆಶ್ಚರ್ಯದಿಂದ ಕೇಳಿದ ರಾಯಣ್ಣ.

"ನಿಮ್ಮ ಪ್ರಾಣಕ್ಕಿಂತಲೂ ನನ್ನ ಪ್ರತಿಷ್ಠೆ ಮುಖ್ಯ ಅಂದುಕೊಳ್ಳಲಿಲ್ಲ" ಎಂದು ನಿಲ್ಲಿಸಿ, ನಂತರ ನಿಧಾನವಾಗಿ ಹೇಳಿದ— "....ನಾನು ಕೆಟ್ಟವನಾದರೂ ದುರ್ಮಾರ್ಗನಲ್ಲ."

"ತುಂಬಾ ಜನ ಒಳ್ಳೆಯವರಂತೆ ಕಾಣುವವರಿಗಿಂತಲೂ ನೀವು ಒಳ್ಳೆಯವರೆ..." ಮನಸ್ಫೂರ್ತಿಯಾಗಿ ಹೇಳಿದ ರಾಯಣ್ಣ.

"ನೀವು ತುಂಬಾ ಅದೃಷ್ಟವಂತರು ರಾಯಣ್ಣ. ಕಿರಣ್ಮಯಿಯವರಂತಹ ಹೆಣ್ಣನ್ನೂ ಹೆಂಡತಿಯಾಗಿ ಪಡೆದಿದ್ದೀರಿ. ತುಂಬಾ ಜನ ಹುಡುಗಿ

ವೆಂಕಟ್ರಾಜು ಬಿದ್ದ. ಭರ್ಜಿಯಂತಹ ಒಂದು ರಾಡ್ ಮೇಲೆ ಅವನ ಶರೀರ ಬೀಳುತ್ತಿದ್ದಂತೆ ಅದರ ಮೇಲೆ ರಾಘವರೆಡ್ಡಿಯ ಭಾರೀ ಶರೀರ ಬಿತ್ತು ಅದರಿಂದ ಆ ಕಬ್ಬಿಣದ ಸರಳು ಇಬ್ಬರ ಶರೀರಗಳನ್ನು ಇಬ್ಭಾಗ ಮಾಡಿತು. ವೆಂಕಟ್ರಾಜುವಿನ ಕೂಗು ಪ್ರೇಕ್ಷಕರ ಕೂಗಿನೊಡನೆ ಸೇರಿ ಹೋಯಿತು. ಅದರ ಹಿಂದೆಯೇ ರಾಘವರೆಡ್ಡಿಯದು.

ಕ್ರೀಡಾರಂಗದಲ್ಲಿ ರಾಜಕೀಯ ಪ್ರವೇಶಿಸಿದರೆ ಅಂತರಾಷ್ಟ್ರೀಯ ಪಂದ್ಯಗಳಲ್ಲಿ ಸಣ್ಣ ಸಣ್ಣ ದೇಶಗಳೆದುರು ಕೂಡಾ ಭಾರತಮಾತೆ ಹೇಗೆ ತಲೆ ತಗ್ಗಿಸಿಕೊಳ್ಳಬೇಕೆಂದು ಸೂಚಿಸುತ್ತಿರುವಂತೆ ಆ ನಿರ್ಜೀವವಾದ ಕೈಗಳು ಗಾಳಿಯಲ್ಲಿ ತೇಲಾಡುತ್ತಿದ್ದವು. ಒಂದು ಸ್ವರ್ಣ ಪದಕವನ್ನು ಪಡೆಯದ ತಿವರ್ಣ ಬಾವುಟದವರಂತೆ ಅವರ ಶರೀರಗಳು ನಿಸ್ಸಹಾಯಕವಾಗಿ ತೂಗಾಡುತ್ತಿದ್ದವು. ಒಬ್ಬ ಬಲಹೀನ ವರ್ಗದ ವ್ಯಕ್ತಿ ಕೇವಲ ತನ್ನ ಸ್ವಶಕ್ತಿಯ ಮೂಲಕ ಮೇಲೆ ಬರಲು ಪ್ರಯತ್ನಿಸಿದರೆ, ತಮಗಿರುವ ಹಣದಿಂದ, ರೆಕಮೆಂಡೇಶನ್‌ಗಳಿಂದ, ಮಾಡದ ಅಪವಾದಕ್ಕೆ ಅವನನ್ನು ಸಿಲುಕಿಸಿ, ಅವನನ್ನು ಮಾನಸಿಕವಾಗಿ ಬಲಹೀನನನ್ನಾಗಿ ಮಾಡಲು, ಜನರಿಂದ ಹೀನಮಾತುಗಳನ್ನಾಡಿಸಿ, ಚಪ್ಪಾಳೆಗಳನ್ನು ಹೊಡೆಸಿ, ಕೋರ್ಟಿಗೆಳೆದು, ಪೇಪರ್‌ಗಳಲ್ಲಿ ಹಾಕಿಸಿ, ಧರಣಿಗಳನ್ನು ಮಾಡಿಸಿ, ನಾಶಮಾಡಬೇಕೆಂದಿದ್ದ ರಾಕ್ಷಸರಿಗೆ ಆ ಕ್ರೀಡಾ ಸ್ಥಳವೇ ರಣರಂಗವಾಗಿ, ರಕ್ತವನ್ನು ರುಚಿನೋಡಿತು.

## ಉಪಸಂಹಾರ

"ಕಂಗ್ರಾಜುಲೇಷನ್ಸ್"

"ನಾನಿನ್ನೂ ನಂಬಲಾರದೆ ಹೋಗುತ್ತಿದ್ದೇನೆ." ರಾಯಣ್ಣ ಹೇಳಿದ. "ನಿಜವಾಗಿಯೂ ಕೇಸೇ ಇಲ್ಲವಾ? ನಾನಿನ್ನು ಕೋರ್ಟಿಗೆ ಹೋಗಬೇಕಾಗಿಲ್ಲವಾ?"

"ಬರುವ ವರ್ಷ ಮತ್ತೆ ಪ್ರಯತ್ನ ಮಾಡೋಣ ಬಿಡು. ಈ ಸಲ ನಮ್ಮ ದುರದೃಷ್ಟ ಅಂದುಕೊಳ್ಳೋಣ ಅಷ್ಟೆ."

ಜೇಬಿನಲ್ಲಿದ್ದ ಅವನ ಕೈ ಶೀಷೆಯ ಮುಚ್ಚಳ ಬಿಚ್ಚಿತು. ಇಂತಹ ಅನುಭವಗಳು ಅವನಿಗೆ ತುಂಬಾ ಇತ್ತು.

ರಾಘವರೆಡ್ಡಿ ಪಕ್ಕದಲ್ಲೇ ಇದ್ದ ಕುರ್ಚಿಯಲ್ಲಿ ಕುಳಿತುಕೊಳ್ಳುತ್ತಾ, "ಈ ಆಲೋಚನೆ ನಮಗೆ ಮೊದಲೇ ಬಂದಿದ್ದರೆ ವಿಮಾನ ಛಾರ್ಜುಗಳು, ಮೂರು ಸಾವಿರ ಖರ್ಚು ತಪ್ಪುತ್ತಿತ್ತು...." ಅವನ ಮಾತಿನ್ನು ಪೂರ್ತಿಯಾಗಿರಲಿಲ್ಲ. ಮಿಂಚಿನ ವೇಗದಿಂದ ವೆಂಕಟ್ರಾಜುವಿನ ಕೈ ಜೇಬಿನಿಂದ ಹೊರಬರುವುದಕ್ಕೂ, ಶೀಷೆಯಲ್ಲಿದ್ದ ದ್ರವ ನೇರವಾಗಿ ರಾಘವರೆಡ್ಡಿ ಕಣ್ಣಿನಲ್ಲಿ ಬೀಳುವುದಕ್ಕೂ ಸರಿಹೋಯಿತು.

ಮೊದಲು ತಣ್ಣನೆಯ ಅನುಭವ.

ಅನಂತರ ಎರಡು ಬೆಂಕಿ ಕಡ್ಡಿ ಹತ್ತಿಸಿ ಕಣ್ಣಿನಲ್ಲಿ ಚುಚ್ಚಿದಂತೆ ಭಗ್ಗನೆ ಉರಿ.... ಕಿಟಾರನೆ ಕಿರುಚಿದ. ಕಣ್ಣು ಮುಂದೆ ಕಪ್ಪನೆಯ ಪರದೆ ಜಾರಿದಂತೆ ಕತ್ತಲು.

ನಡೆದದ್ದೇನೆಂದು ಅವನಿಗೆ ಅರ್ಥವಾಯಿತು. ಭಯಪಡಲಿಲ್ಲ ನೋವು ಪಡಲಿಲ್ಲ. ಸಾವಿಗೆ ಸಿದ್ಧವಾದಾಗ ಬೇರೆ ಯೋಜನೆ ಬರುವುದಿಲ್ಲ. ಅದು ಭಯವನ್ನು, ನೋವನ್ನು ಡಾಮಿನೇಟ್ ಮಾಡುತ್ತದೆ. ಆ ವೇಗದಿಂದಲೇ ಅವನು ಮುಂದಕ್ಕೆ ಹೋದ. ಮುಂದಕ್ಕೆ ಅವನನ್ನು ತಳ್ಳಿಕೊಂಡು ಹೋದ. ಮುಂದಕ್ಕೆ.... ಮುಂದಕ್ಕೆ.... ಗ್ಯಾಲರಿಗೆ ಕಟ್ಟಿದ್ದ ರೆಯಿಲಿಂಗ್ ತಗುಲಿತು. ತಗುಲಿತು, ರಾಘವರೆಡ್ಡಿಗೆ ಏನೂ ಕಾಣುತ್ತಿಲ್ಲ. ಕಣ್ಣು ಉರಿ ಕಾಣುತ್ತಿತ್ತು ಕಣ್ಣು ಹೋಯಿತೆಂದು ತಿಳಿಯುತ್ತಿತ್ತು. ಬಿಡಿಸಿಕೊಳ್ಳಲು ಯತ್ನಿಸುತ್ತಿದ್ದ ವೆಂಕಟ್ರಾಜು ಕಾಣುತ್ತಿದ್ದ ಅವನು ತನ್ನ ಪ್ರಯತ್ನವನ್ನು ತೀವ್ರಗೊಳಿಸುತ್ತಿದ್ದಂತೆಯೆ ವೇಗದಿಂದ ರೆಯಿಲಿಂಗ್‌ಗೆ ಡಿಕ್ಕಿ ಹೊಡೆದ.

ಮರುಕ್ಷಣವೇ ಅವರಿಬ್ಬರೂ ಗಾಳಿಯಲ್ಲಿದ್ದರು.

ಆದರೂ ರೆಡ್ಡಿ ವೆಂಕಟ್ರಾಜುವನ್ನು ಬಿಡಲಿಲ್ಲ. ಪ್ರೇಕ್ಷಕರು ಗ್ರೌಂಡಿನೊಳಗೆ ಬರದಂತೆ ಅಡ್ಡ ಕಟ್ಟಿದ್ದ ಕಬ್ಬಿಣದ ಸರಳುಗಳ ಮೇಲೆ, ಮೊದಲು

## ಪ್ರಿಯ ಓದುಗರೇ...

ಈಗೆರಡು ವರ್ಷಗಳ ಹಿಂದೆ 'ಲೇಡೀಸ್ ಹಾಸ್ಟೆಲ್' ಎಂಬ ಅಪೂರ್ಣ ಕಾದಂಬರಿ ಬಂದಾಗಿನಿಂದಲೂ ರಾಜ್ಯದ ವಿವಿಧ ಮೂಲೆಗಳಿಂದ ಅಭಿಮಾನಿ ಓದುಗರು, 'ಇದರ ಮುಂದಿನ ಭಾಗ ಯಾವಾಗ ?', 'ಈ ಕಾದಂಬರಿಯ ಅಂತ್ಯ ಅರ್ಥವಾಗುತ್ತಿಲ್ಲ, ಇನ್ನೂ ಇದೆಯೇ? ಇದ್ದರೆ ಯಾವಾಗ ಬರುತ್ತದೆ?' ಇಂತಹ ಹಲವಾರು ಕಾಗದಗಳನ್ನು ನನಗೆ ಬರೆಯುತ್ತಲೇ ಇದ್ದರು. ಇಗೋ ! ಅದಕ್ಕೀಗ ಉತ್ತರ ಈ 'ಡೈರಿ ತಂದ ಸೌಭಾಗ್ಯ'.

ಇದು ಯಂಡಮೂರಿ ವೀರೇಂದ್ರನಾಥರ 'ಲೇಡೀಸ್ ಹಾಸ್ಟೆಲ್‌ನ' ಸಂಪೂರ್ಣ ಕಾದಂಬರಿಯ ಕನ್ನಡ ಅನುವಾದ.

ಮೂಲ ಲೇಖಕರಿಗೂ—

ಹಂಸಧ್ವನಿ ಪ್ರಕಾಶನದ ಶ್ರೀ ಸು. ರಂಗಸ್ವಾಮಿಯವರಿಗೂ—

ತಾಳ್ಮೆಯಿಂದ ಇಷ್ಟು ದಿನ ಕಾದಿದ್ದ ಓದುಗರೇ ನಿಮಗೂ—
—ನಾನು ಕೃತಜ್ಞ

**ರಾಜಾ ಚೆಂಡೂರ್**

ನಂ. 35' ಆರನೇ ಅಡ್ಡರಸ್ತೆ,
ಹನುಮಂತನಗರ,
ಬೆಂಗಳೂರು-560 019.

DEPARTMENT OF PUBLIC LIBRARIES
COPY RIGHT

"ಹಾಗಾದರೆ....

ನಮ್ಮ ಹಾಸ್ಟೆಲ್ ಮೇಲೆ ನೀವು ಕಾದಂಬರಿ ಬರೆಯುತ್ತಿದ್ದೀರಾ ?" ಆ ವಾರ್ಡನ್ ಕೇಳಿದರು—ಸುಲ್ತಾನ್ ಬಜಾರಿನ ಆಕೆಯ ಮನೆಗೆ ಹೋದಾಗ "ಅಲ್ಲ. ಒಂದು ಹುಡುಗಿಯ ಮಾನಸಿಕ ಸಂಘರ್ಷಣದ ಬಗ್ಗೆ ಬರೆಯುತ್ತೇನೆ. ನೀವು ವಿವರಗಳನ್ನು ಕೊಡುತ್ತೀರೇನೋ ಎಂದು ಬಂದೆ, ಇಗೋ ಇದುವರೆ ವಿಗೂ ನಾನು ಸಂಗ್ರಹಿಸಿದವು—"

ಆ ಫೋಟೋಗಳನ್ನೆಲ್ಲಾ ನೋಡಿದರಾಕೆ ! ಪೇಪರ್‌ಗಳು, ನೋಟ್ಸು ಗಳನ್ನೂ ಪರಿಶೀಲಿಸಿದರು.

"ಮೈ ಗಾಡ್-ಎಲ್ಲಿಯವು ?" ಎಂದು ಕೇಳಿದರು.

"—ನಿಮ್ಮ ಹಾಸ್ಟೆಲಿನದೇ" ಅಂದೆ.

ಆಕೆ ತುಂಬಾ ಹೊತ್ತು ಮಾತನಾಡಲಿಲ್ಲ. ನಂತರ ತಮ್ಮ ಕಡೆಯ ಸಮಸ್ಯೆಗಳನ್ನು ಹೇಳಿದರು.

"....ಥ್ಯಾಂಕ್ಸ್. ಇಷ್ಟು ಹೊತ್ತೂ ನಿಮ್ಮ ದೃಷ್ಟಿಯಿಂದ ಆಲೋಚಿಸ ಲಿಲ್ಲ. ಅದನ್ನು ಕೂಡಾ ಬರೆಯುತ್ತೇನೆ." ಎನ್ನುತ್ತಾ ಮೇಲೆದ್ದೆ.

"ಕೊನೆಯದಾಗಿ ಒಂದು ಪ್ರಶ್ನೆ ! ನೀವು ವಾರ್ಡನ್ ಆಗಿರುವ ಈ ಹಾಸ್ಟೆಲಿನಲ್ಲಿ ನಿಮ್ಮ ಹುಡುಗಿಯನ್ನು ಸೇರಿಸಬೇಕಾಗಿ ಬಂದರೆ ಸೇರಿಸುತ್ತೀರ ?"

ಆಕೆ ತಡವರಿಸದೆ ಹೇಳಿದರು—"ಸೇರಿಸುವುದಿಲ್ಲ."

—ಯಂಡಮೂರಿ ವೀರೇಂದ್ರನಾಥ್

(ಇದು ಇನ್‌ವೆಸ್ಟಿಗೇಟೀವ್ ಕಾದಂಬರಿ ಅಲ್ಲ.)

## ಎಪಿಲೋಗ್...

ಅರ್ಧ ರಾತ್ರಿಯ ಸಮಯ, ಊರೆಲ್ಲಾ ನಿದ್ರೆಯಲ್ಲಿ ಮುಳುಗಿತ್ತು. ಆ ನಿಶ್ಶಬ್ಧವನ್ನು ಭಂಗಪಡಿಸುತ್ತಾ ಒಂದು ಪೊಲೀಸ್ ಜೀಪ್ ನಿರ್ಮಾನುಷ್ಯವಾಗಿ ರಸ್ತೆಗಳಲ್ಲಿ ಬರುತ್ತಿತ್ತು. ಆ ಶಬ್ಧಕ್ಕೆ ಎಚ್ಚರಗೊಂಡ ನಾಯಿಗಳು ಎರಡು-ಮೂರು ಸಲ ಬೊಗಳಿ ಮತ್ತೆ ಮಲಗುತ್ತಿದ್ದವು. ಒಂದು ನಿಶ್ಶಬ್ಧ ಚಲನಚಿತ್ರದಲ್ಲಿ ಅಪಶೃತಿಯಂತಿದೆ ಆ ಶಬ್ಧ.

ಜೀಪು ಐದು ನಿಮಿಷಗಳ ಕಾಲ ಪ್ರಯಾಣಿಸಿ ಒಂದು ಮನೆಯ ಮುಂದೆ ನಿಂತಿತು. ಆ ಮನೆಯ ಮುಂದೆ ಚಪ್ಪರ ಹಾಕಿದೆ. ಮಾವಿನ ಎಲೆಯ ತೋರಣ ಕಟ್ಟಲಾಗಿದೆ. ಮದುವೆ ಕಳೆ ಇನ್ನೂ ಕಡಿಮೆಯಾಗಿಲ್ಲ. ಸೀರೀಸ್ ಸೆಟ್ ಲೈಟುಗಳನ್ನು ಇನ್ನೂ ತನ್ನ ಸಾಮಗ್ರಿಗಳನ್ನು ತೆಗೆದುಕೊಂಡು ಹೋಗಿಲ್ಲ. ಚಪ್ಪರದ ಬಳಿ ಹಾಕಿದ್ದ ಬೋರ್ಡುಗಳು ಹಾಗೆಯೇ ಇವೆ.

**ಕಿರಣ್ಮಯಿ**

weds

**ರಾಯಣ್ಣ**

ಜೀಪಿನಿಂದ ಇಳಿದ ಇನ್ಸ್‌ಪೆಕ್ಟರ್ ಮನೆಯ ಕಡೆ ನಡೆದರು. ಚಪ್ಪರದ ಕೆಳಗೆ ಹಾಸಿದ್ದ ಜಮಕಾನದ ಮೇಲೆ ಮಲಗಿ ಒಂದಿಬ್ಬರು ನಿದ್ರಿಸುತ್ತಿದ್ದರು. ಜಗುಲಿಯ ಮೇಲೆ ಒಬ್ಬ ವಯಸ್ಸಾದ ವ್ಯಕ್ತಿ ನಿದ್ರಿಸುತ್ತಿದ್ದಾನೆ. ಅವರ ನಡುವೆ ಹೋಗಿ ಬಾಗಿಲು ತಟ್ಟಿದ.

ಒಳಗೆಲ್ಲಾ ಗಾಢವಾದ ನಿದ್ರೆಯಲ್ಲಿರುವಂತೆ ತುಂಬಾ ಹೊತ್ತು ಬಾಗಿಲು ತೆರೆಯಲಿಲ್ಲ. ಸುಮಾರು ಐದು ನಿಮಿಷಗಳ ನಂತರ ಒಬ್ಬ ದಢೂತಿ ಹೆಂಗಸು ಬಂದು ಚಿಲಕ ತೆಗೆದು ಪೊಲೀಸ್ ಡ್ರೆಸ್ಸಿನಲ್ಲಿದ್ದ ವ್ಯಕ್ತಿಯನ್ನು ಕಂಡು ಬೆಚ್ಚಿದಳು. ಆಗ ಸಮಯ್ಸರಿಯಾಗಿ ಹನ್ನೆರಡು ಗಂಟೆಯಾಗಿತ್ತು.

# ಡೈರಿ ತಂದ ಸೌಭಾಗ್ಯ

## 22 : 32 : 34 Hrs

ಅವಳು ರೂಮಿನೊಳಗೆ ಹೆಜ್ಜೆ ಇಡುತ್ತಿದ್ದಂತೆಯೇ ಒಮ್ಮೆಗೇ ಮಲ್ಲಿಗೆಯ ಪರಿಮಳ ಆವಳನ್ನು ಸುತ್ತುವರೆಯಿತು. ತಲೆಯಲ್ಲಿ ಎಷ್ಟೇ ದೊಡ್ಡ ಹೂವಿನ ದಂಡೆಯನ್ನು ಮುಡಿದಿದ್ದರೂ ಅದರ ಪರಿಮಳ ಕತ್ತಿನ ಹಿಂಭಾಗದಿಂದ ಮೇಲಕ್ಕೆ ನಿಲ್ಲುವ ಮೂಗಿಗೇ ಪರಿಮಿತವಾಗಿರುವುದು ಪುರುಷನಿಗೆ ದೇವರು ಕೊಟ್ಟಿರುವ ವರ.

ಅವಳು ತಲೆ ಎತ್ತಿ ಅವನೆಡೆಗೆ ನೋಡಬೇಕೆಂದುಕೊಂಡಳು. ಆದರೆ ಹಿಮಾಲಯದಿಂದ ಕನ್ಯಾಕುಮಾರಿಯವರೆಗೂ ವ್ಯಾಪಿಸಿರುವ ಭಾರತೀಯ ಸಂಸ್ಕೃತಿ, ಜೊತೆಗೆ ಹಿಮಾಲಯದಿಂದ ಕನ್ಯಾಕುಮಾರಿಯ ಮಧ್ಯೆಯ ಶರೀರಕಂಪನ ಅದನ್ನು ಸಾಧ್ಯಪಡಿಸಲಿಲ್ಲ... ಅವಳಿಗೆ ಆಶ್ಚರ್ಯವಾಯಿತು.

ಮನಶ್ಶಾಸ್ತ್ರದಲ್ಲಿ ಅವಳಿಗಿದ್ದ ಪಾಂಡಿತ್ಯ ಕೂಡಾ ಇದಕ್ಕೆ ಯಾವ ವಿಧವಾದ ವಿವರಣೆಯನ್ನೂ ಕೊಡಲು ಅಸಮರ್ಥವಾಯಿತು. ಅವಳು ಆಲೋಚಿಸಿದಳು. ಅವನ ಬಗ್ಗೆ ತನಗೇನೂ ಹೆಚ್ಚಿಗೆ ಗೊತ್ತಿಲ್ಲ. ಮದುವೆಗೆ ಮುಂಚೆ ನೋಡುವ ಶಾಸ್ತ್ರ ಐದು ನಿಮಿಷಗಳಿಗೂ ಹೆಚ್ಚಿಗೆ ನಡೆಯಲಿಲ್ಲ.

'ಏನಾದರೂ ಮಾತನಾಡಿಕೊಳ್ಳುತ್ತೀರಾ ?' ಎಂದು ಕೇಳುವ ಸಂಸ್ಕಾರ ತಮ್ಮ ಮನೆಯ ಹಿರಿಯರಲ್ಲಿಲ್ಲ. ಆಕಡೆ--ಗಂಡನ ಕಡೆಯವರಿಂದಲೂ ಆ ಬಗ್ಗೆ ಪ್ರಸ್ತಾಪ ಬರಲಿಲ್ಲ. ಅವರಾದರೋ ಸಂಪೂರ್ಣವಾಗಿ ಗ್ರಾಮೀಣ ಹಿನ್ನಲೆಯಿಂದ ಬಂದವರು. ಒಬ್ಬನೇ ಮಗ. ತಂದೆಗೆ ಸಾಕಷ್ಟು ಜಮೀನು, ಆಸ್ತಿಯಿದೆ. ಬಿಳಿ ಪಂಚೆಯನ್ನು ಉಟ್ಟುಕೊಂಡು, ಹೆಗಲಿನಮೇಲೆ ಒಂದು ಶಲ್ಯವನ್ನು ಹೊದ್ದಿದ್ದಾನೆ. ಅಮಾಯಕನಂತಿದ್ದಾನೆ. ಸದೃಢನಾಗಿ, ಎತ್ತರವಾಗಿರುವ ಅವನಿಗೆ ಕುಳಿತಿರುವಕುರ್ಚಿ ಪೂರ್ತಿಯಾಗಿ ಸರಿಹೋಗುತ್ತಿಲ್ಲ.

ತಾನು ಪಟ್ಟಣದವರೊಡನೆ ಬೆರೆಯುತ್ತಿದ್ದೇನೆಂಬ ಭಯ ಸ್ವಲ್ಪವಾಗಿ ಕಾಣುತ್ತಿದೆ. ಅದರ ಅಡ್ವಾಂಟೇಜ್ ತೆಗೆದುಕೊಂಡು ಅಣ್ಣ ಮತ್ತು ಅಪ್ಪ ಜೋರಾಗಿ ಮಾತಾಡುತ್ತಿದ್ದಾರೆ. ಆದರೆ ತಮಗಿಂತಲೂ ಅವರು ಆರ್ಥಿಕವಾಗಿ ಮುಂದು ಎಂಬುದನ್ನು ಅವಳು ಗ್ರಹಿಸಿದ್ದಳು.

ಈ ಸಂಬಂಧದ ಬಗ್ಗೆ ಅವಳು ಆಸೆಯೇ ಇಟ್ಟುಕೊಂಡಿರಲಿಲ್ಲ. ಒಂಭತ್ತು ಮಂದಿ ಮಕ್ಕಳಲ್ಲಿ ಅವಳು ಆರನೆಯವಳು. ತಂದೆ ತಾಲ್ಲೂಕ್ ಆಫೀಸಿನಲ್ಲಿ ಹೆಡ್‌ಗುಮಾಸ್ತೆ ಲಂಚ ತೆಗೆದುಕೊಳ್ಳುತ್ತಿದ್ದಾಗ ಸಿಕ್ಕಿಬಿದ್ದು ಸಸ್ಪೆಂಡ್ ಆಗಿದ್ದ ಅಣ್ಣಂದಿರಿಬ್ಬರು ಅತ್ತುಕೊಂಡೇ ತಿಂಗಳಿಗೆ ತಲಾ ನಾನ್ನೂರು ರೂಪಾಯಿ ಕೊಡುತ್ತಾರೆ. ಅದರಿಂದ ಸಂಸಾರ ನಡೆಯುತ್ತಿದೆ, ಅವಳೊಬ್ಬಳೇ ಸೈಕಾಲಜಿಯಲ್ಲಿ ಎಂ. ಎ. ಓದಿದವಳು. ಅದೂ ಮನೆಯವರೆಲ್ಲರ ವಿರೋಧದ ಮಧ್ಯೆ.... ಷೆಡ್ಯೂಲ್ ಕ್ಯಾಸ್ಟ್ ಆದದ್ದರಿಂದ ಸ್ಕಾಲರ್‌ಷಿಪ್ ದೊರಕಿತ್ತು. ಅದೊಂದೇ ಆಶಾಕಿರಣವೆಂಬಂತೆ ಮನೆಯವರೊಡನೆ ಹಠಮಾಡಿ ಓದಿದಳು.

ಅವಳಿಗಿಂತಲು ಮೊದಲು ನಾಲ್ವರು ಅಣ್ಣಂದಿರೂ, ಒಬ್ಬ ಅಕ್ಕ ಇದ್ದಾರೆ. ಅಕ್ಕನಿಗೆ ಮತ್ತೆ ಆರು ಮಕ್ಕಳು. ಭಾವ ಸಾರಾಯಿ ಕಂಟ್ರಾಕ್ಟರ್. ಅದೇ ಸಂಸ್ಕೃತಿ ! ಚಿಕ್ಕಂದಿನಿಂದಲೂ ಅವಳು ಆ ಮನೆಯಿಂದ ದೂರವಾಗಿಯೇ ಇರುತ್ತಿದ್ದಳು ಮಾನಸಿಕವಾಗಿ.

ಎಂ. ಎ. ಪಾಸಾದ ನಂತರ ಎರಡು ವರ್ಷಗಳಿಗೆ ಬಂದಿತ್ತು ಈ ಸಂಬಂಧ ! ಮೊದಲನೆಯದು. ಅವಳಿಗೆ ಅಗಲೇ ಮದುವೆ ಮಾಡುವುದು ಮನೆಯವರಿಗೆ. ಮುಖ್ಯವಾಗಿ ತಂದೆಗೆ ಇಷ್ಟವಿರಲಿಲ್ಲ. ಅಷ್ಟೊಂದು ಓದಿರುವುದರಿಂದ ತನ್ನ ಮಗಳಿಗೆ ಕಡೆಯ ಪಕ್ಷ ಒಂದೂವರೆ ಸಾವಿರ ಸಂಬಳ ಬರುವುದೆಂದೂ ಅವನಿಗೆ ಗೊತ್ತು. ಆದರಿಂದ 'ಇಷ್ಟು ಬೇಗ' ಅವಳನ್ನು ಕಳೆದುಕೊಳ್ಳಲು ಇಷ್ಟವಿಲ್ಲವೆಂಬುದನ್ನು ತುಂಬಾ ನಾಜೂಕಾಗಿ ಹೇಳುತ್ತಿದ್ದ. ವರನ ಹೆಸರು ರಾಯಣ್ಣ.

ಹೆಸರು ಚೆನ್ನಾಗಿಲ್ಲ. ಚೆನ್ನಾಗಿರುವ ಹೆಸರಿನವರು ಆರಡಿ ಎತ್ತರವಿರಲಿಲ್ಲ. ಆದರೆ ರಾಯಣ್ಣ ಆರಡಿ ಎತ್ತರದ ಮನುಷ್ಯ.

## 22 : 32 ; 46 Hrs

ರೂಮಿನಲ್ಲಿ ಹೆಜ್ಜೆ ಇಟ್ಟ ಹನ್ನೆರಡು ಸೆಕೆಂಡುಗಳ ನಂತರ ಅವಳು ತಲೆ ಎತ್ತಿ ಅವನ ಕಡೆ ನೋಡಿದಳು. ಅವನಿಗೆ ತಾನು ಭುಜಗಳ ತನಕ ಬರುತ್ತೇನೆಂದು ಅಂದುಕೊಂಡಳು. ಅಷ್ಟರಲ್ಲೇ. ಅವನೂ ತನ್ನೆಡೆಗೇ ನೋಡುತ್ತಿರುವುದನ್ನು ಗಮನಿಸಿ ತಕ್ಷಣವೇ ದೃಷ್ಟಿ' ಕೆಳಗಿಳಿಸಿದಳು. ಆದರೆ ರೆಪ್ಪೆ ಹೊಡೆದಷ್ಟು ಆ ಸಮಯದಲ್ಲಿಯೇ. ಅವನೂ ತನ್ನಂತೆಯೇ ಈ ನಿಶ್ಶಬ್ದ ಯುದ್ಧಕ್ಕೆ ಶಾಂತಿಯನ್ನು ಉಂಟುಮಾಡಲು ರಾಜಿ ಮಾಡಿಕೊಂಡು ಹತ್ತಿರ ಬರಲು ಪ್ರಯತ್ನಿಸುತ್ತಿದ್ದಾನೆಂದು ಗ್ರಹಿಸಿದಳು. ಅಪ್ರಯತ್ನವಾಗಿ ಬಂದ ನಗುವನ್ನು ಅತೀ ಕಷ್ಟದಿಂದ ಅವನಿಗೆ ಕಾಣಿಸದಂತೆ ಮುಚ್ಚಿಡಲು ವಿಫಲಳಾದಳು.

ಈ ವಿವಾಹ ನಡೆಯುತ್ತದೆಂದು ಅವಳು ಅಷ್ಟು ಆಸೆ ಇಟ್ಟುಕೊಳ್ಳಲು ಮತ್ತೊಂದು ಕಾರಣ ಅವನ ಕ್ವಾಲಿಫಿಕೇಷನ್ ! ಅವನು ಗ್ರ್ಯಾಜುಯೇಟ್ ಕೂಡಾ ಅಲ್ಲ. ಇದು ಅವಳಿಗೇನೂ ಅಭ್ಯಂತರವಿರಲಿಲ್ಲವಾದರೂ. ತುಂಬಾ ಜನ ಗಂಡಸರು ತಮಗಿಂತಲೂ ಹೆಚ್ಚು ಓದಿರುವ ಹುಡುಗಿಯರು ಹೆಂಡತಿಯಾಗಿರಲು ಇಷ್ಟಪಡುವುದಿಲ್ಲವೆಂದು ಅವಳಿಗೆ ಗೊತ್ತು. ಆದರೂ ಅವರು ಮದುವೆಗೆ ಮುಂಚೆ 'ನೋಡಲು' ಅವಳು ಸಮ್ಮತಿಸಿದರೆಂದು ತಿಳಿದು ಆಶ್ಚರ್ಯಪಟ್ಟಿದ್ದಳು.

ಅವಳು ಅವನನ್ನು ಮೊದಲ ಬಾರಿ ನೋಡಿದ್ದು ರಣಜೀಟ್ರೋಫಿ ಮ್ಯಾಚೊಂದರಲ್ಲಿ. ರಾಯಣ್ಣ ಆಂಧ್ರದ ಕಡೆ ಒಬ್ಬ ಪ್ರಮುಖ ಆಟಗಾರ.

ಈ ಸಂಬಂಧದವರು ಹೆಣ್ಣನ್ನು ನೋಡಲು ಬರುತ್ತಾರೆಂದು ತಿಳಿದ ನಂತರ ಅವಳ ನಾಲ್ಕನೇ ಅಣ್ಣ (ಅವನೊಬ್ಬನೇ ಅವಳೊಡನೆ ಮನೆಯಲ್ಲಿ ಸ್ನೇಹದಿಂದಿರುವವನು) ಹಠ ಹಿಡಿದು ಅವಳನ್ನು ಮ್ಯಾಚಿಗೆ ಕರೆದೊಯ್ದ. ಅವಳಿಗೆ ಕ್ರಿಕೆಟ್ ಬಗ್ಗೆ ಚೆನ್ನಾಗಿ ತಿಳಿದಿತ್ತಾದರೂ ಅಷ್ಟೊಂದು ಉತ್ಸಾಹವಿರಲಿಲ್ಲ. ಅವಳು ಬೇಡವೆಂದಳು. ಅವನಾರೋ ಇನ್ನೂ ನೋಡಿಯೇ

ಇಲ್ಲ, ಹೀಗೇಕೆ ಹೋಗಬೇಕು ಎಂದು ವಾದಿಸಿದರೂ ಅವಳ ಅಣ್ಣ ಕೇಳಿರಲಿಲ್ಲ.

ಎಲ್ಲಾ ಮಾಮೂಲು ರಣಜೀ ಮ್ಯಾಚುಗಳಂತೆಯೇ ಆದರೂ ಆಂಧ್ರ ಹೈದರಾಬಾದ್ ನಡುವೆ ಆದ್ದರಿಂದ ಅಷ್ಟೊಂದು ಪ್ರೇಕ್ಷಕರಿರಲಿಲ್ಲ. ಇಬ್ಬರೂ ಟಿಕೆಟ್ಟು ಕೊಂಡು ತಮ್ಮ ಸ್ಥಳಗಳಲ್ಲಿ ಕುಳಿತರು. ಎತಕ್ಕೋ ಡ್ರೆಸ್ಸಿಂಗ್ ರೂಮಿನಿಂದ ಹೊರಗೆ ಬಂದ ರಾಯಣ್ಣನ ಕಡೆ ಅವಳ ಅಣ್ಣ ಕೈ ಆಡಿಸಿದ. ರಾಯಣ್ಣ ಗುರುತಿಸಲಿಲ್ಲ ಅವನನ್ನು. ಅಂದು ಮಾತುಕತೆಗೆ ತಂದೆಯೊಡನೆ ಅಣ್ಣನೂ ಹೋಗಿದ್ದ. ಅಷ್ಟು ದೂರದಿಂದ ಗುರುತು ಸಿಗಲಿಲ್ಲವೇನೋ ? ಅದಕ್ಕೇ ಅವನು ಕೈ ಆಡಿಸಿದಾಗ ರಾಯಣ್ಣನ ಮುಖದಲ್ಲಿ ಆಶ್ಚರ್ಯ ಕಾಣಿಸಿತು. ಅವನು ಮತ್ತೆ ಒಳಗೆ ಸರಿದುಹೋದ.

ಆಟ ಪ್ರಾರಂಭವಾದ ಇಪ್ಪತ್ತು ನಿಮಿಷಗಳಲ್ಲೇ ಆಂಧ್ರದ ಮೂರು ವಿಕೆಟ್ಟುಗಳು ಉರುಳಿದವು. ರಾಯಣ್ಣ ಐದನೆಯವನು. ಅವನು ಬ್ಯಾಟನ್ನು ಹಿಡಿದು ಫೀಲ್ಡ್‌ನಲ್ಲಿ ಬರುತ್ತಾ ಇವರು ಕುಳಿತ ಕಡೆ ನೋಡಿದ. ಆಗ ತಕ್ಷಣ ನೆನಪಿಗೆ ಬಂದಂತೆ ಮುಖವನ್ನು ಅಗಲಿಸಿದ ಮುಗುಳ್ನಗೆಯಿಂದ. ಅವನ ನೋಟ ತನ್ನೆಡೆಗೆ ಸರಿಯುವ ಮುನ್ನವೇ ಪ್ರೇಕ್ಷಕರ ಚಪ್ಪಾಳೆಯ ಮಧ್ಯ ಅವನು 'ಪಿಚ್'ನೆಡೆಗೆ ನಡೆದಿದ್ದ ಬ್ಯಾಟನ್ನು ಗಾಳಿಯಲ್ಲಿ ಆಡಿಸುತ್ತಾ. ಈಗ ಆಂಧ್ರದ ಬ್ಯಾಟಿಂಗ್ ಸಂಪೂರ್ಣವಾಗಿ ರಾಯಣ್ಣನನ್ನು ನಂಬಿದೆ. ಅವನು ಕೂಡಾ ನಿರಾಶೆಗೊಳಿಸಲಿಲ್ಲ. ಸ್ಕೋರು ನಿಧಾನವಾಗಿ ಏರತೊಡಗಿತು. ಲಂಚ್ ಸಮಯಕ್ಕೆ ಅವನು ಐವತ್ತು ರನ್ನುಗಳನ್ನು ಪೇರಿಸಿದ್ದ. ಸಂಜೆ ಆಟ ಮುಗಿಯುವ ಹೊತ್ತಿಗೆ ಆಂಧ್ರದ ಒಟ್ಟು ಮೊತ್ತ 238 ಹಾಗೂ ಅವನ ಸೆಂಚುರಿಗೆ ಕೇವಲ ಎರಡು ರನ್ನುಗಳು ಬಾಕಿ ಇದ್ದವು. ನೆರೆದಿದ್ದುದು ಕೆಲವೇ ಪ್ರೇಕ್ಷಕರಾದರೂ ಸಾಕಷ್ಟು ಚಪ್ಪಾಳೆಗಳನ್ನು ಗಿಟ್ಟಿಸಿದ್ದ. ಅವನು ಮರಳಿ ಪೆವಿಲಿಯನ್ ಬರುತ್ತಿರುವಾಗ ಅವನ ದೃಷ್ಟಿ ಸಂಪೂರ್ಣವಾಗಿ ತನ್ನ ಮೇಲೆ ಇರುವುದನ್ನು ಅವಳು ಗಮನಿಸಿದಳು. ಅವಳು ತನ್ನನ್ನು ಗುರುತಿಸಿದ್ದಾನೆ.

ಹುಡುಗರೂ, ಹುಡುಗಿಯರೂ ಅವನ ಸುತ್ತಲೂ ನೆರೆದು ಆಟೋಗ್ರಾಫ್ ತೆಗೆದುಕೊಳ್ಳುತ್ತಿದ್ದಾರೆ. ಹೊರಗೆ ಬರುತ್ತಿದ್ದಂತೆಯೇ ಅಣ್ಣ

ಕೇಳಿದ 'ಹೇಗಿದ್ದಾನೆ?' ಎಂದು ಆವಳು ಉತ್ತರಿಸಲಿಲ್ಲ. ಫಸ್ಟ್ ಇಂಪ್ರೆಷನ್ ಈಸ್ ಬೆಸ್ಟ್ ಇಂಪ್ರೆಷನ್ ಎನ್ನುವುದು ಬಹಳ ಕಡೆ ಅನ್ವಯಿಸುವುದೇನೋ ಆಗಲಿ, ತನ್ನ ಬಾಳ ಸಂಗಾತಿಯನ್ನು ಆರಿಸುವಾಗ ಮಾತ್ರ ಅಲ್ಲ. ಮದುವೆ ಆದ ಮೊದಲ ವರ್ಷ ಪೂರ್ತಿ ರೂಮಿನಲ್ಲೇ ಬಾಗಿಲು ಭದ್ರಪಡಿಸಿ ಕಾಲ ಕಳೆದ ದಂಪತಿಗಳು ಕೂಡಾ—ಹತ್ತು ವರ್ಷದ ನಂತರ ಒಂದು ರೀತಿಯಾದ ಶೂನ್ಯತೆಯನ್ನು ಅನುಭವಿಸುವುದನ್ನು ತಾನು ಸೈಕಾಲಜಿ ಸ್ಟೂಡೆಂಟ್ ಆಗಿ ಗಮನಿಸಿದ್ದಾಳೆ. ಹಾಗೆ ಗ್ರಹಿಸಲು ಅವಳಿಗೆ ಪ್ರಪಂಚವನ್ನು ನೋಡಲೇ ಬೇಕಾಗಿರಲಿಲ್ಲ. ತನ್ನ ಮನೆಯಲ್ಲಿಯೇ ಇದ್ದಾರೆ ನಾಲ್ವರು ದಂಪತಿಯರು ತನ್ನ ತಂದೆ-ತಾಯಿಯೂ ಸೇರಿ!

ಅದಕ್ಕೇ ಈ ಸಂಬಂಧಕ್ಕೆ ಅವರು ಒಪ್ಪಿಕೊಂಡಿದ್ದಾರೆಂದು ತಿಳಿದು ಅವಳು ಭಯಪಟ್ಟಳು. ಮೊದಮೊದಲು ತನ್ನ ಗಂಡನೊಡನೆ ಮಾನಸಿಕ ಸಂಬಂಧ ಹೇಗಿರುವುದೋ ಎಂದು! ಅವನ ಕಾಂಪ್ಲೆಕ್ಸ್‌ಗಳೂ, ಗೂಢಗಳೂ ಅವನಿಂದಾಗಿ ಉಂಟಾಗುವ ಮನೆಯ ವಾತಾವರಣಕ್ಕೆ ತನ್ನ ಹೊಂದಾಣಿಕೆ ಎಲ್ಲದರ ಬಗ್ಗೆಯೂ ಅನುಮಾನ ಬಂದಿತು. ಅತ್ತೆಯ ಮನೆಗೆ ಹೋಗುವ ಪ್ರತಿ ಹುಡುಗಿಯರಲ್ಲಿಯೂ ಈ ಭಯವಿರುತ್ತದೆಯಾದರೂ, ಅವಳಿಗೆ ತನ್ನ ಸ್ವಂತ ಮನೆಯ ವಾತಾವರಣ, ಮುಚ್ಚಿರುವ ಬಾಗಿಲುಗಳ ಹಿಂದಿನಿಂದ ಕೇಳಿಸುವ ಗಲಾಟೆಗಳು, ಎಲ್ಲಕ್ಕಿಂತಲೂ ಮುಖ್ಯವಾಗಿ ತಾನು ಓದಿದ 'ಟ್ರಾನ್ಸ್ಯಾಕ್ಷನಲ್ ಅನಾಲಿಸಿಸ್' ಈ ಭಯವನ್ನು ಹೆಚ್ಚು ಮಾಡಿತು.

ಕಿರಣ್ಮಯಿ ವಿಪರೀತ ಓದುವ ಹವ್ಯಾಸ ಹೊಂದಿದವಳು. ಕಾಲೇಜಿಗೆ ಹೋಗುತ್ತಿದ್ದ ದಿನಗಳಲ್ಲಿ ಅವಳ ಬಹಳ ಕಾಲ ಓದುವುದರಲ್ಲೇ ಕಳೆಯುತ್ತಿದ್ದಳು. ವಿದ್ಯಾಭ್ಯಾಸ ಪೂರ್ತಿಯಾದ ಸರೇಸರಿ! ಓದಿರುವ ಪುಸ್ತಕಗಳ ಆಧಾರದ ಮೇಲೊಂದು ಥಿಸೀಸ್ ಬರೆದಿದ್ದರೆ ಈ ಎರಡು ವರ್ಷಗಳಲ್ಲಿ ಅವಳಿಗೆ ಪಿ. ಹೆಚ್. ಡಿ. ಸಿಗುತ್ತಿತ್ತು.

ಅವಳ ಭಯ ಅದೇ ಯಾರೋ ಹೇಳಿದಂತೆ–'ಜ್ಞಾನ' ಮತ್ತು 'ಹಲ್ಲು' ಬರುವಾಗ ತುಂಬಾ ನೋವನ್ನುಂಟು ಮಾಡುತ್ತವೆ. ಈ ಅನಾಲಿಸಿಸ್‌ನಿಂದಾಗಿ ತನ್ನ ಗಂಡ ಯಾವ ರೀತಿಯಿಂದಲೂ ತನ್ನೊಡನೆ ಸರಿಯಾಗಿ

'ವೈಬ್ರೇಟ್' ಆಗದಿದ್ದರೂ ತಾನು ರಾಜಿ ಮಾಡಿಕೊಳ್ಳಲು ಸಿದ್ಧಳಿಲ್ಲವೆಂದು ಅವಳಿಗೆ ಚೆನ್ನಾಗಿ ಗೊತ್ತು.

ಮಾಮೂಲು ಹುಡುಗರಿಗೂ, ಹುಡುಗಿಯರಿಗೂ ಇರುವ ಸಾಮಾನ್ಯ ಭಾವನೆಗಳಿಗೆ, ಥ್ರಿಲ್‌ಗಳಿಗೆ ಅವಳೇನೂ ಅತೀತವಲ್ಲ. ಅಂದು ಬ್ಯಾಟಿಂಗ್ ಮುಗಿಸಿ ತನ್ನ ಕಡೆಯೇ ನೋಡುತ್ತಾ, ಕಣ್ಣರಳಿಸಿಕೊಂಡು ಮುಗುಳ್ನಕ್ಕದ್ದು ; ನೋಡುವ ಶಾಸ್ತ್ರದ ನಂತರ "ನಿಮ್ಮನ್ನು ಮೊನ್ನೆ ಕ್ರಿಕೆಟ್ ಪಿಚ್‌ನಲ್ಲಿ ನೋಡಿದ್ದೆ" ಎಂದು ಕಿರು ನಗುತ್ತಾ ಹೇಳಿದ್ದು, ಮತ್ತೆ ಮತ್ತೆ ನೆನಪಿಗೆ ಬರುತ್ತಿದೆ. ಕೆಲವು ಅನುಭವಗಳು, ಅನುಭವಿಸುವ ಸಮಯಕ್ಕಿಂತಲೂ, ನೆನಪಾಗಿ ಬದಲಾದ ನಂತರ ಚೆನ್ನಾಗಿರುತ್ತದೆ. ಅವಳಿಗೆ ಅದೊಂದೇ ನಿರಾಶೆ ಗೊಳಿಸಿದ್ದು ಅವನು 'ನೋಡಲು' ಬಂದಾಗ ತನ್ನೊಡನೆ ಮತ್ತೇನನ್ನೂ ಮಾತನಾಡದೇ ಇದ್ದುದ್ದು.

## 22 : 33 : 04 Hrs

ಅದುವರೆವಿಗೆ ಮೂವತ್ತು ಸುದೀರ್ಘ ಸೆಕೆಂಡುಗಳು ಕಳೆದವು. ಅವನಿನ್ನೂ ಹತ್ತಿರ ಬಂದಿರಲಿಲ್ಲ, ತಾನೇ ಹೆಜ್ಜೆ ಮುಂದೆ ಹಾಕಿ ಅಲ್ಲಿಗೆ ಹೋಗ ಬೇಕೋ ಬೇಡವೋ ಎಂಬ ತಿಳಿಯದ ಸ್ಥಿತಿ. ಅವನು ತನಗಿಂತಲೂ ಹೆಚ್ಚು ಮುಜುಗರ ಪಡುತ್ತಿರುವ ವಿಷಯ ಅವಳಿಗೆ ಆಶ್ಚರ್ಯವುಂಟುಮಾಡಿತು, ರಣಜೀ ಪ್ಲೇಯರ್ ಅದೃಷ್ಟವಿದ್ದರೆ ಇಷ್ಟರಲ್ಲೇ ಟೆಸ್ಟ್ ಸ್ಟಾರ್ ಆಗುವವ–ಇಷ್ಟೊಂದು ನಾಚುವುದು ಅವಳಿಗೆ ಗಮ್ಮತ್ತಾಯೇ ಇದೆ. ಸಾಮಾನ್ಯವಾಗಿ ಆಟಗಾರರಿಗೆ ಮುಖ್ಯವಾಗಿ ಕ್ರಿಕೆಟ್ ಆಟಗಾರರಿಗೆ ತುಂಬಾ ಜನ ಫ್ಯಾನ್ಸ್ ಇರುತ್ತಾರೆಂದು ಅವಳು ಅಂದುಕೊಂಡಿದ್ದಳು. ಆದರೆ ಇವರು ಶಿವರಾಮ ಕೃಷ್ಣನ್, ಅಜಾರುದ್ದೀನ್‌ರ ಮಟ್ಟದಲ್ಲಿ ನಾಚಿಕೊಳ್ಳುತ್ತಿರುವಂತೆ ಕಾಣ ಸುತ್ತಿದ್ದಾನಾ ?

ಆ ಬಾಗಿಲ ಬಳಿ ಅಷ್ಟು ಸಮಯ ನಿಲ್ಲುವುದು ಅವಳಿಗೆ ಮುಜುಗರ ವೆನ್ನಿಸಿ, ಹೆಜ್ಜೆ ಮುಂದಿಟ್ಟಳು. ಆಗ ಕೇಳಿಸಿತು 'ಹಲೋ' ಎಂದು ರೂಮಿನೊಳಗೆ ಪ್ರವೇಶಿಸಿದ ನಲವತ್ತೆರಡು ಯುಗಗಳ ನಂತರ ಕೇಳಿಸಿದ ಆ ಒಂದು ಮಾತಿನ ನಂತರ ಮತ್ತೆ ಗಾಢವಾದ ನಿಶ್ಶಬ್ಧ ! ಅವಳು ಕೂಡಾ ಹಲೋ ಎನ್ನೋಣವೆಂದುಕೊಂಡಳಾದರೂ ಅದು ಇಂಗ್ಲೀಷ್ ಟೈಪ್ ಪ್ರಸ್ತವಾಗುತ್ತದೆಂದು ಸುಮ್ಮನಾದಳು !

ಅವನು ಅವನ ಕೈಯನ್ನು ತನ್ನ ಕೈಯೊಳಗೆ ತೆಗೆದುಕೊಳ್ಳುತ್ತಾ 'ಹಲೋ ಎಂದರೆ ಉತ್ತರಿಸುವುದಿಲ್ಲವೇ ?' ಎಂದು ಏನು ಹೇಳಬೇಕು ಎಂಬಂತೆ ಅವಳು ತಲೆತಗ್ಗಿಸಿದಳು. ನಿಶ್ಚಿತವಾಗಿಯೇ ನಾಚಿಕೆಯಿಂದಲ್ಲ.

ವಾಟ್ ಡು ಯೂ ಸೇ ಆಫ಼ನ್ ಯೂ ಸೇ ಹಲೋ ?

ಎರಿಕ್ ಬನ್ ಬರೆದ ಪುಸ್ತಕ ! 'ಹಲೋ' ಎಂದ ನಂತರ ಏನನ್ನು ಮಾತನಾಡಬೇಕೆಂದು.

ಏನ್ರೀ ಚೆನ್ನಾಗಿದ್ದೀರಾ....ಚೆನ್ನಾಗಿದ್ದೀನಿ ನೀವು ?....ನಾನು ಕೂಡಾ ಮನೆಯಲ್ಲಿ ಎಲ್ಲರೂ ಆರೋಗ್ಯವಾ ?.... ಆ್ಞಂ ಮಕ್ಕಳೇನು ಓದುತ್ತಿದ್ದಾರೆ? ದೊಡ್ಡೋನು ಎಂಟನೇ ಕ್ಲಾಸಿನಲ್ಲಿದ್ದಾನೆ. ಎರಡನೆಯವಳು ಆರು. ಬಿಸಿಲು ಸುಟ್ಟುಹೋಗುತ್ತಿದೆ ಸ್ವಾಮಿ. ನಿಮ್ಮ ಊರಿನಲ್ಲಿ ಹೇಗೆ ? ಮತ್ತೆ ಇಷ್ಟಿಲ್ಲ. ಅಂದಹಾಗೆ ರಾಮರಾವ್ ಮಿನಿಷ್ಟ್ರಿ ಬಿದ್ದುಹೋಗುತ್ತದೆ ಎನ್ನುತ್ತಿದ್ದಾರಲ್ಲಾ ನಿಜವೇನಾ ?....ಸುಳ್ಳು ಇನ್ನೂ ಹತ್ತು ವರ್ಷ ಬೀಳುವುದಿಲ್ಲ. ಗ್ಯಾರಂಟಿ ಕೊಡುತ್ತೇನೆ. ನಿಮಗೆ ಗೊತ್ತಾ ರಾಜೀವ್‌ಗಾಂಧಿ ನಮ್ಮ ರಾಜ್ಯದೊಳಗೆ ಸಾವಿರ ಮಂದಿ ಸಿ ಐ ಡಿ ಗಳನ್ನು ಕಳುಹಿಸಿದ್ದಾನಂತೆ ಮಿನಿಷ್ಟ್ರಿ ಬೀಳಿಸಲು, ನಿಜವೇನಾ ? (ಇನ್ನೂ ಹತ್ತು ಮಂದಿಗೆ ಹೇಳಬೇಕು) ಬರ್ತೀನಿ.

ವಾಟ್‌ಡೂಯು ಸೇ ಆಫ್ಟರ್ ಯುಸೇ ಹಲೋ ಕಿರಣ್ಮಯಿ ?

ಒಂದು ಹಲೋಗೆ ಉತ್ತರವಾಗಿ ಮತ್ತೊಂದು ಹಲೋ ಹೇಳುವಾಗ ಆ ವ್ಯಕ್ತಿಯನ್ನು ಸಂಧಿಸಿದ ಸಂತೋಷ ಮುಖದಲ್ಲಿ ಸ್ಪಷ್ಟವಾಗಿ ಕಾಣಿಸಬೇಕಂತೆ ! ಪ್ರಸೂತಿ ಗೃಹದಿಂದ ಹೊರಗೆ ಬಂದ ಕ್ಷಣದಿಂದಲೂ, ಆ ಕ್ಷಣದ

ವರೆವಿಗೂ ಉಂಟಾಗಿರಬಹುದಾದ ಕಷ್ಟಗಳನ್ನು ನೋವುಗಳನ್ನು ಮರೆತು, ಹೃದಯದ ಒಳಗಿನಿಂದ ಹೇಳಬೇಕಂತೆ ಆ ಶಬ್ದವನ್ನು. ಅದು ಸಾಧ್ಯವಾಗ ದಿದ್ದರೆ--'ಹಲೋ' ಎನ್ನುವುದಕ್ಕಿಂತಲೂ ಸುಮ್ಮನಿರುವುದೇ ಮೇಲಂತೆ ! ನಿಜವೇ ಕರ್ತವ್ಯವೆಂಬಂತೆ ಮಾತನಾಡುವುದಕ್ಕಿಂತಲೂ ಸಂಭಾಷಣಾ ರಹಿತದೇ ಉತ್ತಮ ! ಒಮ್ಮೆ ಹಲೋ-ಹಲೋ ಎಂದುಗೊಂಡ ಮನುಷ್ಯರು ನಂತರ ಗಂಟೆಗಟ್ಟಲೇ ಮಾತನಾಡುವ 'ಟ್ರ್ಯಾಪ್' ಕುರಿತು ನಾಲ್ಕು ನೂರು ಪುಟದ ಪುಸ್ತಕ ಬರೆದ ಎರಿಕ್ ಬರ್ನ್ ತನ್ನ ಹೆಂಡತಿಯೊಡನೆ ಮೊದಲ ರಾತ್ರಿ ಏನು ಮಾತನಾಡಿರಬಹುದು ? ಜೀವನಪೂರ್ತಿ ಕಲೆತು ಬಾಳಬೇಕಾದ ಇಬ್ಬರ ಮಧ್ಯೆ ಇರುವ ನಿಶ್ಶಬ್ದದ ಗೋಡೆಯನ್ನು ಉರುಳಿಸಿ, ಮಾತಿನ ಸಹಾಯ ದಿಂದ ತಮ್ಮ ಬೆಸುಗೆಯನ್ನು ಬಿಗಿಗೊಳಿಸುವ ದಂಪತಿಗಳು, ತಮ್ಮ ಮೊದಲನೆ ರಾತ್ರಿ--ಮೊತ್ತ ಮೊದಲನೇ ಮಾತು ಏನೆಂಬುದನ್ನು ಎಷ್ಟು ಕಾಲ ಜ್ಞಾಪಕ ದಲ್ಲಿಟ್ಟುಕೊಂಡಿರುತ್ತಾರೆ ? ಅದಕ್ಕವರು ಎಷ್ಟು ಪ್ರಾಮುಖ್ಯತೆಕೊಡುತ್ತಾರೆ? ಮೂರನೇ ಒಂದು ಭಾಗದ ಜನ ಮರೆತೇಹೋಗಿರುತ್ತಾರೆ.

"ನೋಡಿದೆಯಾ ನನ್ನ ಕೈ ಹೇಗೆ ನಡುಗುತ್ತಿದೆ ?"

ಅವಳು ಬೆಚ್ಚಿ, ಅವನ ಕೈಯನ್ನು ನೋಡಿದಳು. ತನ್ನ ಕೈಯನ್ನು ಹಿಡಿದಿದ್ದ ಆ ಕೈ ನಿಜ, ನಡುಗುತ್ತಿದೆ ಸಣ್ಣಗೆ. ಅವಳು ಕಿರು ನಗೆಯನ್ನು ಅತಿಕಷ್ಟದಿಂದ ತಡೆದಳು.

ಅವನು ತನ್ನ ಕೈಯೆಡೆಗೇ ನಿಧಾನವಾಗಿ ನೋಡುತ್ತಾ "ಇದು ಎರಡನೆ ಬಾರಿ ಹೀಗೆ ನಡುಗುತ್ತಿರುವುದು....ಇದಕ್ಕೆ ಮೊದಲು ಒಮ್ಮೆ ಒಂದೇ ಒಂದು ಬಾರಿ ಹೀಗೆಯೇ ಆಗಿತ್ತು—" ಎಂದ.

ಅವಳು ಚಕ್ಕನೇ ತಲೆ ಎತ್ತಿದಳು.

ಮದುವೆ ಆದ ಹೊಸದರಲ್ಲಿ ಗಂಡ-ಹೆಂಡತಿಯರು ತಮ್ಮ ಗತಜೀವ ನವನ್ನು ಕುರಿತು, ಅನುಭವಗಳನ್ನು ಕುರಿತು, ಅಭ್ಯಾಸಗಳನ್ನು ಕುರಿತು ತಮ್ಮ ವ್ಯಕ್ತಿತ್ವವನ್ನು ನಿರೂಪಿಸಿಕೊಳ್ಳುವ ಪ್ರಯತ್ನದಲ್ಲಿ, ಹೊರಗಿನವರಿಗೆ ತಿಳಿಸಿ, ಆನಂತರ ಅವರ ಸಂಪೂರ್ಣ ಜೀವನದುದ್ದಕ್ಕೂ ಅದರ ಪರಿಣಾಮಗಳನ್ನು

ಎದುರಿಸುತ್ತಾರೆಂದು ಮೊದಲನೇ ದಿವಸ ಕ್ಲಾಸಿನಲ್ಲಿ ಸೈಕಾಲಜಿ ಪ್ರೊಫೆಸರ್ ಹೇಳಿದ್ದು ನೆನಪಿಗೆ ಬಂತು ಅವಳಿಗೆ. ತನ್ನ ಮೊದಲ ರಾತ್ರಿಯೂ ಹಾಗೆಯೇ ನಡೆಯುತ್ತದೆಯಾ ? ಅವನು ಸೀರಿಯಸ್ಸಾಗಿ ಹೇಳಲು ಪ್ರಾರಂಭಿಸುತ್ತಿದ್ದಂತೆಯೇ, ಅವಳು ಬೆದರಿದ ಕಣ್ಣುಗಳನ್ನು ಮೇಲಕ್ಕೆತ್ತಿದಳು.

"ಹೌದು, ಇದು ಎರಡನೇ ಬಾರಿ....ಮೈಕೇಲ್ ಹೋಲ್ಡಿಂಗ್ ಗೊತ್ತಾ? ವೆಸ್ಟ್ ಇಂಡೀಸ್‌ನವರು. ಹಿಂದಿನ ಬಾರಿ ಪ್ರವಾಸ ಬಂದಿದ್ದಾಗ ನಾನು ದಕ್ಷಿಣ ಭಾರತದ ಪರವಾಗಿ ಆಡಿದೆ. ಅವನ ಮೊದಲನೇ ಬಾಲ್ ಫೇಸ್ ಮಾಡುವಾಗಲೂ ಬ್ಯಾಟನ್ನು ಹಿಡಿದಿದ್ದ ನನ್ನ ಕೈ ಹೀಗೆಯೇ ನಡುಗಿತ್ತು. ಅದು ಮೊದಲು–ಇದು ಸೆಕೆಂಡ್ ಟೈಮ್."

ಅವಳು ಪಕ್ಕನೆ ನಕ್ಕಳು.

ಹಾಗೆ ಒಡೆಯಿತು ಈ ಸಂದಿಗ್ಧತೆಯ ಅಣೆಕಟ್ಟು.

ವಾಟ್‌ಡೂಯೂಸೇ ಆಫ್ಟರ್ ಯು ಸೇ ಹಲೋ ಕಿರಣ್ಮಯಿ ?

ಏನೂ ಹೇಳಬೇಕಾಗಿಲ್ಲ. ಒಂದು ಕಿರುನಗೆ ಸಾಕು.

## 23 : 02 : 34 Hrs

ಸರಿಯಾಗಿ ಅರ್ಧಗಂಟೆಯ ನಂತರ ಮಾತಿನ ನಡುವೆ ಅವನೆಂದ "––ನಾನು ಕಡಿಮೆ ಓದಿಕೊಂಡಿದ್ದೇಂದ ನಿನಗೇನೂ ಅನ್ನಿಸುವುದಿಲ್ಲವೇ ?" ಎಂದು ಅವಳು ಬಿಳಿಚಿಕೊಂಡಳು,

"ನನಗೇನೂ ಇಲ್ಲ ! ನೀವೇ ಏನಾದರೂ ಅಂದುಕೊಳ್ಳುತ್ತೀರೇನೋ ಎಂದು ನಾನಂದುಕೊಳ್ಳುತ್ತಿದೇನೆ."

ಅವನು ನಕ್ಕು "ಕ್ರಿಕೆಟ್‌ನ್ನು ಬಿಟ್ಟು ಬೇರೆ ಯಾವುದರ ಬಗ್ಗೆಯೂ ನಾನು ಯೋಚಿಸುವುದಿಲ್ಲ. ಅಂದಹಾಗೆ ನಿನಗೆ ಕ್ರಿಕೆಟ್ ಉತ್ಸಾಹವಿದೆಯೊ ?" ಕೇಳಿದ.

"ಸ್ವಲ್ಪ ಇದೆ. ಆದರೆ ಇನ್ನು ಮುಂದೆ ಬೆಳೆಸಿಕೊಳ್ಳುತ್ತೇನೆ. ನಿಮ್ಮೊಡನೆ ಚರ್ಚಿಸುತ್ತಾ ಇರಬೇಕಲ್ಲಾ"

ಅವನು ಮತ್ತೆ ನಕ್ಕ 'ಥ್ಯಾಂಕ್ಸ್' ಹೇಳುತ್ತಾ.

ಅವನ ನಗುವಿನಲ್ಲಿ ಒಂದು ಪ್ರತ್ಯೇಕತೆಯನ್ನು ಗಮನಿಸಿದಳು ಅವಳು ಈ ಪ್ರಪಂಚದಲ್ಲಿ ಅದ್ಭುತವಾಗಿ ನಗುವವರೆಂದರೆ 'ಫೀಜಿ' ದ್ವೀಪದವರಂತೆ. ಡಾಕ್ಟರ್ ಮ್ಯಾಕ್ಸ್ ಲೂಜರ್ ಬರೆದಿದ್ದಾರೆ. ಅವರ ನಗು ನೆಮ್ಮದಿಯಿಂದ ಪ್ರಾರಂಭವಾಗಿ. ಮುಖದಲ್ಲೆಲ್ಲಾ ನೈಜತೆಯಿಂದ ತುಂಬಿ, ಬೇರೆಯುವರು ಅದನ್ನು ಗುರುತಿಸುವವರೆಗೂ ನಿಂತು, ಕೊನೆಗೆ ದೀಪದ ಬತ್ತಿಯಂತೆ ತಿಳಿಯದೆಯೇ ಅದೃಶ್ಯವಾಗುತ್ತದಂತೆ. ಈ ಮಾತು ನಿಜವೋ, ಅಲ್ಲವೋ ಎಂದು ನಿರ್ಧರಿಸಲು ಅವಳು ಫಿಜಿ ಸಿನಿಮಾ ಒಂದಕ್ಕೆ ಹೋಗಿ ನೋಡಿದಳು! ಆ ನಗುವಿಗೂ ಈ ಮಾತಿಗೂ ಸಂಬಂಧವಿತ್ತು.

ಆ ವಿಷಯವನ್ನೇ ಅವನಿಗೆ ಹೇಳಿದಳು.

"ಮದುವೆ ಆದ ಮೊದಲಲ್ಲಿ ಎಲ್ಲವೂ ಬ್ಯೂಟಿಯಾಗಿ, ಅದ್ಭುತವಾಗಿ ಕಾಣತ್ತದೆ" ಎಂದುಬಿಟ್ಟ.

ಅವಳು ಹುಸಿಕೋಪದಿಂದ "ನಾನು ಎಲ್ಲರಂತೆ ಸುಮ್ಮನೆ ಹೇಳುತ್ತಿಲ್ಲ. ಮ್ಯಾಕ್ಸ್‌ಲೂಜರ್ ಬರೆದಿದ್ದನ್ನು ಸ್ವಯಂ ನೋಡಿ ನಿರ್ಧರಿಸಿಕೊಂಡು ಹೇಳುತ್ತಿದ್ದೇನೆ."

"ಸರಿಸರಿಸರಿ–ಒಪ್ಪಿಕೊಂಡೆ–ಸರಿತಾನೇ"

ಆನಂತರದ ಟಾಪಿಕ್ ಅವರ ತಂದೆ–ತಾಯಿಯರ ಬಗ್ಗೆ ಹೊರಳಿತು ಅವನು ಹೇಳಿದ, "ಅಪ್ಪ ಜೋರು. ಅವಳಿಗೆ ಓದಿರುವ ಹುಡುಗಿ ಇಷ್ಟವಿರಲಿಲ್ಲ. ಆದರೆ ಅದೇಕೋ ಅಪ್ಪನೇ ಇಷ್ಟಪಟ್ಟ. ಅವರೂ ಹೆಚ್ಚು ಓದಿದವರಲ್ಲ. ಸರೀ, ನನ್ನ ಓದಿನ ಬಗ್ಗೆ ನಿನಗೇ ಗೊತ್ತಿದೆಯಲ್ಲಾ, ಕನಿಷ್ಟ ಮನೆಗೆ ಬರುವ ಸೊಸೆಯಾದರೂ ಓದಿರಲೆಂದು ಅವರು ನಿನ್ನನ್ನು ಒಪ್ಪಿರಬೇಕು."

"ಮತ್ತೆ ನೀವು?"

"ನಾನಾ – ನಿಜ ಹೇಳಲಾ ? –"

"ಊಂ."

"ಯಾವ ಕಲ್ಲಾದರೇನು ಹಲ್ಲು ಉದುರಿಸಿಕೊಳ್ಳಲು ಎಂದು ಒಪ್ಪಿ...."

ಆ ವಾಕ್ಯ ಪೂರ್ತಿಯಾಗುವ ಮುಂಚೆಯೇ ಅವನು ಕಿರುಚಿದ ಶಬ್ದ ಆ ರೂಮಿನಲ್ಲಿ ಪ್ರತಿಧ್ವನಿಸಿತು. ಅವನ ಕೈ ಮೇಲೆ ಅವಳ ಉಗುರಿನ ಮುದ್ರೆ ಸ್ಪಷ್ಟವಾಗಿ ಬಿದ್ದಿತ್ತು. ಅವನು ಉಫ್, ಉಫ್ ಎಂದು ಊದಿಕೊಳ್ಳುತ್ತಾ ಇದ್ದುಬಿಟ್ಟು ತಾನು ಮಾಡಿದ ಕೆಲಸ ಅರ್ಥವಾಗುತ್ತಿದ್ದಂತೆಯೇ ಅವಳಿಗೆ ಆಶ್ಚರ್ಯವಾಯಿತು. ಇಷ್ಟು ಧೈರ್ಯ ತನಗೆ ಎಲ್ಲಿಂದ ಬಂತು ? ಅವನಿಗೆ ಸಾರಿ ಹೇಳಿದ ನಂತರವೂ ಅವಳು ಇದನ್ನೇ ಯೋಚಿಸತೊಡಗಿದಳು. ಪೇರೆಂಟ್–ಅಡಲ್ಟ್–ಚೈಲ್ಡ್– ಅನಾಲಿಸಿಸ್‌ಗೆ ಅತೀತವಾದ ವಿಷಯ ಇದು.

ಅಷ್ಟರಲ್ಲಿಯೇ ಅವನು ಹೇಳಿದ.

"ನಿನ್ನನ್ನು ಏನೆಂದು ಕರೆಯಲಿ ? ನಿನ್ನ ಹೆಸರು ದೊಡ್ಡದಾಗಿದೆ"

"ಕಿರಣ್."

"ನೋ ಬಹುಶಃ ಮನೆಯಲ್ಲಿ ನಿನ್ನನ್ನು ಎಲ್ಲರೂ ಅದೇ ರೀತಿ ಕರೆಯುತ್ತಿರಬೇಕು. ನಾನು ಹಾಗೆಯೇ ಕರೆದರೆ ಚೆನ್ನಾಗಿರುವುದಿಲ್ಲ, ಇನ್ನೇನಾದರೂ ಬೇರೆ ಸೂಚಿಸು." ಅವಳು ಮಾತನಾಡಲಿಲ್ಲ. ಅವನ 'ಸೆನ್ಸ್ ಆಫ್ ಬಿಲಾಂಗಿಗ್‌ನೆಸ್' ಬಗ್ಗೆ ಮಾತ್ರ ಸ್ವಲ್ಪ ಆಶ್ಚರ್ಯಪಟ್ಟಳು. ಅವನೇ ಹೇಳಿದ 'ನಿನ್ನ ಹೆಸರಿನ ಅಕ್ಷರಗಳ ಹೊಂದಾಣಿಕೆ ಸರಿ ಬರುವುದಿಲ್ಲ. 'ಕಿರ್' ಎಂದರೆ ಮಂಚದ ಶಬ್ದದಂತಿರುತ್ತದೆ. 'ಮರಣ್' ಎಂದರೆ ಅಶುಭ...."

....ಅವಳಿಗೆ ಕೇಳಿಸುತ್ತಿದೆ, ಅವನು ತನ್ನನ್ನು ಡಾಮಿನೇಟ್ ಮಾಡುತ್ತಿರುವುದು ಅವಳಿಗೆ ಸಂತೋಷದಾಯಕವಾಗಿದೆ. ಅವಳಿಗೆ ಕೋಪಬರಲಿಲ್ಲ, ಅವನಿಗೆ ತನ್ನ ಓದಿನ ಬಗ್ಗೆ ಯಾವ ವಿಧವಾದ ಕಾಂಪ್ಲೆಕ್ಸೂ ಇಲ್ಲ, ಅದೂ ಸಂತೋಷವೇ, ಸದಾ ಸಂತೋಷದಿಂದಿರುವ ಗಂಡಸರೇ ಕಡಮೆ, ಆ ಕೆಲವೇ ವ್ಯಕ್ತಿಗಳಲ್ಲಿ ಇವನೊಬ್ಬ.

ನೀನು ಕೆಲಸಕ್ಕೆ ಹೋಗುತ್ತೀಯಾ ? ನನಗಿಷ್ಟವಿಲ್ಲ—ಎಂದಾಗಲೀ, ಇಲ್ಲವೇ ಇಷ್ಟು ಓದಿ ನೀನು ಕೆಲಸ ಮಾಡದಿದ್ದರೆ ಹೇಗೆ ! ಓದಿರುವ

ಹುಡುಗಿಯನ್ನು ನಾನು ಮದುವೆ ಆದದ್ದು ಅದಕ್ಕೆ - ಎಂಬಂಥಹ ಅಭಿಪ್ರಾಯ ಗಳನ್ನು ಮೊದಲ ದಿನವೇ ತನ್ನ ಮೇಲೆ ಹೇರಲಿಲ್ಲ. ನಿನ್ನ ಅಭಿಮಾನದ ಹೀರೋ ಯಾರು ? ಯಾವ ವಾರಪತ್ರಿಕೆಗಳನ್ನು ಓದುತ್ತೀಯಾ ? ಇಂಥಹ ಸಪ್ಪೆ ಸಂಭಾಷಣೆಗಳಿಂದಲೂ ಕಾಲ ಕಳೆಯಲಿಲ್ಲ. ಹ್ಯೂಮರ್ ಸೃಷ್ಟಿಸ ಬೇಕಾದರೂ ಸ್ಪಾಂಟೇನಿಯಿಟಿ ಬೇಕು. ಸಂಭಾಷಣೆ ಚೆನ್ನಾಗಿರಬೇಕಾದರೆ ಮಾತನಾಡುದವರಿಗೆ ಬುದ್ಧಿವಂತಿಕೆ ಬೇಕು. ಕಳೆದ ಅರ್ಧಗಂಟೆಯಲ್ಲಿ ಅವಳು ಅವನಲ್ಲಿ ಅಂಥಹ ಗುಣವನ್ನು ಕಂಡುಕೊಂಡಳು.

"ನೀವು ಸಿಗರೇಟ್ ಸೇದುತ್ತೀರಾ ?"

"ಯಸ್. ಯಾಕೆ ?"

ಅವಳು ಸ್ವಲ್ಪ ತಡವರಿಸುತ್ತಾ "ನನಗೆ ಸಿಗರೇಟ್ ಅಂದರೆ ಸರಿ ಹೋಗುವುದಿಲ್ಲ" ಎಂದಳು.

"ಈ ಕ್ಷಣದಿಂದಲೇ ಸಿಗರೇಟ್ ಸೇದುವುದಿಲ್ಲ. ಪ್ರಮಾಣ ಮಾಡು ತ್ತಿದ್ದೇನೆ" ಎಂದ. ಅವಳು ಬಿಳಿಚಿಕೊಂಡು ತಲೆ ಎತ್ತಿದಳು. ಅವನು ನಗು ತ್ತಿದ್ದಾನೆ. ನಗುತ್ತಲೇ ಹೇಳುತ್ತಿದ್ದಾನೆ."

" ಎಂದು ಹೇಳುವುದಿಲ್ಲ, ಸರಿ ನಿನಗೆ ನಾನು ಸೇದುವುದು ಇಷ್ಟ ವಿಲ್ಲವಾ ? ಹೊಗೆ ಇಷ್ಟವಿಲ್ಲವಾ ?"

ಅವಳು ಹುಸಿಕೋಗದಿಂದ ನೋಡಲು ಆಗುವುದಿಲ್ಲ. "ಹೊಗೆ ಕೂಡಾ" ಅಂದಳು. ಅವನೊಂದು ಕ್ಷಣ ಯೋಚಿಸಿ—"ಸರಿ ಆದರೆ ಒಂದು ಅಗ್ರಿ ಮೆಂಟ್‌ಗೆ ಬರೋಣ ! ನಿನ್ನ ಮುಂದೆ ನಾನು ಸೇದುವುದಿಲ್ಲ. ಅಥವಾ ಸೇದುವವನಂತೆ ಕಾಣಿಸುವುದಿಲ್ಲ. ಹಾಗೆಯೇ—ನಿನ್ನ ಬಳಿಗೆ ಬರುವುದಕ್ಕೆ ಮುಂಚೆ ಕ್ಲೋಜಪ್ ಟೂತ್ ಪೇಸ್ಟಿನಿಂದ ಹಲ್ಲುಜ್ಜಿ, ತೊಳೆದುಕೊಂಡು ಬರುತ್ತೇನೆ. ಈ ಎರಡೂ ಆದರೆ ನಿನಗೇನೂ ಅಭ್ಯಂತರವಿಲ್ಲವಲ್ಲಾ ?"

ಅವಳಿಗೇನೂ ಅಭ್ಯಂತರಗಳೂ ಕಾಣಲಿಲ್ಲ. "ಸರಿ" ಎಂದಳು.

ಅವನು ಹಾಯಾಗಿ ಉಸಿರುಬಿಡುತ್ತಾ "ಥ್ಯಾಂಕ್ಸ್. ನಮ್ಮ ಸಂಸಾರ ತುಂಬಾ ಹಾಯಾಗಿ ನಡೆಯುತ್ತದೆಂದು ನನಗೆ ನಂಬಿಕೆ ಬರುತ್ತದೆ" ಎಂದ.

"ಏಕೋ" ಎಂದಳು ಓರೆನೋಟ ಬೀರುತ್ತಾ. ಅವಳಿಗೆ ಮೊದಲಿದ್ದ ಮುಜುಗರ ಮಾಯವಾಗಿ, ಅವನೆಂದರೆ ಒಂದು ರೀತಿಯ ಸೆಳೆತ, ಇಷ್ಟ ಉಂಟಾಯಿತು. ಹೊಸಬನೆಂಬ ಭಾವನೆಯೇ ಮಾಯವಾಯಿತು.

"ಸಾಧಾರಣವಾಗಿ ಬೇರೆ ಹುಡುಗಿಯಾಗಿದ್ದರೆ ಬೇರೆ ರೀತಿಯೇ ಪ್ರವರ್ತಿಸುತ್ತಿದ್ದರು. ಈ ಮೊದಲ ರಾತ್ರಿಯ ಅಡ್ವಾಂಟೇಜ್ ತೆಗೆದುಕೊಂಡು ನನ್ನನ್ನು ಇನ್‌ಫ್ಲೂಯೆನ್ಸ್ ಮಾಡಲು ಪ್ರಯತ್ನಿಸುತ್ತಿದ್ದರು."

"ಅಂಥಹ ಇನ್‌ಫ್ಲೂಯೆನ್ಸ್‌ನಿಂದ ಯಾರನ್ನೂ ಹೆಚ್ಚು ಕಾಲ ಹಿಡಿದಿಡಲು ಸಾಧ್ಯವಿಲ್ಲ"

"ನಾನು ಹೇಳುವುದು ಅದೇ ! ಇಬ್ಬರ ಮಧ್ಯೆ ಅಂಥಹ ಅವಗಾಹನೆ ಬೇಕೆಂದರೆ ಮತ್ತೊಬ್ಬರಿಗೆ ತೊಂದರೆ ಕೊಡದೆ ರೀಸನಬಲ್ ಆಗಿ ಯೋಚಿಸಿ ಇಬ್ಬರೂ ಒಂದು ಒಪ್ಪಂದಕ್ಕೆ ಬರುವುದು ಸರಿ. ಇದು ಮೊದಲ ವಿಷಯ ಇನ್ನು ಎರಡನೆಯದು--ಕ್ರಿಕೆಟ್ ಬಗ್ಗೆ ಮಾತು ಬಂದಾಗ 'ನಾನೂ ಅದರ ಬಗ್ಗೆ ಹೆಚ್ಚು ತಿಳಿದುಕೊಳ್ಳುತ್ತೇನೆ' ಎಂದು ನೆನಪಿವೆಯೋ ? ಎಷ್ಟು ಮಂದಿಗೆ ತಮ್ಮ ಜೀವನದ ಸಂಗಾತಿಗಳ ಆಸಕ್ತಿಗಳ ಬಗ್ಗೆ ಮನಸ್ಸು ಕೊಡುತ್ತಾರೆ ? ಎಷ್ಟೋ ಮಂದಿ ಹೆಣ್ಣುಗಳು ಕೇವಲ ಗಂಡಂದಿರಿಂದ ಪ್ರೋತ್ಸಾಹವಿಲ್ಲದೆ ಮದುವೆ ಆದಕೂಡಲೇ ತಮ್ಮ ಸಂಗೀತ, ಕಲೆಗಳನ್ನು ಮೂಲೆಗೆ ಸೇರಿಸುವುದನ್ನು ನಾನೇ ಕಂಡಿದ್ದೇನೆ, ಅಂದಹಾಗೆ ಕೇಳಲು ಮರೆತೆ ನಿನಗೆ ಉತ್ಸಾಹವಿರುವ ವಿಷಯವೇನು ?"

ಓದುವುದನ್ನು ಬಿಟ್ಟು ಅವಳಿಗೆ ಬೇರೇನೂ ಇಲ್ಲ. ಅದರಲ್ಲೂ ಸೈಕಾಲಜಿ ಸದ್ಯಕ್ಕಂತೂ ತನ್ನ ಮನೆಯ ಮುಜುಗರದ ವಾತಾವರಣದಿಂದ ಹೊರಗೆ ಬಂದರೆ ಸಾಕೆಂದು ಅವಳು ಪ್ರಾರ್ಥಿಸಿಕೊಳ್ಳುತ್ತಿದ್ದಾಳೆ. ಆ ವಿಷಯವನ್ನೇ ಅವನಿಗೆ ಹೇಳಿದಳು. ಅವನು ನಕ್ಕುಬಿಟ್ಟ ಅವಳು ಕ್ಷಣ ಚಡಪಡಿಸಿ "ನಾನೊಂದು ವಿಷಯ ಹೇಳಲಾ ?" ಎಂದಳು

"ಹೇ, ಏನದು ?"

"ನಾನು ತುಂಬಾ ಭಯಪಟ್ಟಿದ್ದೆ. ನಿಜಕ್ಕೂ ಇದನ್ನು ಹೇಳಬಾರದು. ಆದರೆ ನಿಜವಾಗಿಯೂ ಭಯಪಟ್ಟಿದ್ದೆ ಏನೇನೋ ಅರ್ಥವಿಲ್ಲದ ಅನುಮಾನ

ಗಳು ನನ್ನನ್ನು ಬಾಧಿಸಿದವು ಎಂಥಹ ಕಷ್ಟಗಳನ್ನು ಎದುರಿಸಬೇಕೋ, ಹೇಗೆ ಹೊಂದಿಕೊಳ್ಳುತ್ತೇನೋ ಎಂಬ ಆತಂಕವೇ ಹೆಚ್ಚಾಗಿತ್ತು—ಮುಖ್ಯವಾಗಿ ಕಾಂಪ್ಲೆಕ್ಸ್‌ಗಳ ಬಗ್ಗೆ—ಏನಾಗುತ್ತದೋ ಏನೋ ಎಂದು ಭಯಪಟ್ಟಿದ್ದೆ, ನಾನು ತುಂಬಾ ಅದೃಷ್ಟವಂತ"

"ನಾನೊಂದು ವಿಷಯ ಹೇಳಲಾ ?" ಅವನೆಂದ.

"ಏನು ?"

"ಮದುವೆ ಆದ ಮೊದಲ ರಾತ್ರಿ ಮೊದಲ ಗಂಟೆಯ ನಂತರ ಪ್ರತಿ ಹೆಣ್ಣೂ ಹೀಗೆಯೇ ಅಂದುಕೊಳ್ಳುತ್ತಾಳೆ."

## 23 ; 32 : 34 Hrs

ಅವಳು ಆ ಮಾತಿಗೆ ಸ್ತಬ್ಧಳಾಗಿ ಅವನೆಡೆಗೆ ನೋಡಿದಳು. ಅವನೇನು ಹೇಳುತ್ತಿದ್ದಾನೆ ? ತಾನೆಷ್ಟೋ ಪುಸ್ತಕಗಳನ್ನು ಓದಿ ಎಷ್ಟೋ 'ಅನಾಲಿಸಿಸ್' ಎಂದುಕೊಂಡದನ್ನು ತುಂಬಾ ಸಾಧಾರಣವಾಗಿ ಹೇಳುತ್ತಿದ್ದಾನೆ ! ಬಹುಶಃ ಚಿಕ್ಕತನದಿಂದ ಕ್ರಿಕೆಟ್ ಹೆಸರಿನಲ್ಲಿ ಬಹಳ ಜನ ವ್ಯಕ್ತಿಗಳೊಡನೆ ತಿರುಗಾಡಿ ಊರೂರು ಸುತ್ತಿರುವುದರಿಂದ ಬಂದಿರುವ ನೈಪುಣ್ಯತೆಯಿರಬಹುದು ಅವಳಿಗೆ ಸಂತೋಷವಾಯಿತು. ವಿಶಾಲವಾದ ಭಾವನೆಗಳ ಪರಿಧಿಯುಳ್ಳ ಮನುಷ್ಯ—ಅದು ಹೆಣ್ಣಾಗಲೀ ಗಂಡಾಗಲೀ ಸರಿ—ಅಂಥಹ ವ್ಯಕ್ತಿಯಲ್ಲದೇ ಬೇರೇನು ಬೇಕು ? ಅದರಲ್ಲಿಯೂ ಇದು ಜೀವನ ಪರ್ಯಂತ ಇರುವ ಕಂಪನಿ !!

"ಇನ್ನು ಅಸಲು ವಿಷಯಕ್ಕೆ ಬರೋಣವೇ ?"

ಅವಳು ತನ್ನದೇ ಆಲೋಚನೆಯಲ್ಲಿ ಮುಳುಗಿದ್ದಳು ಕೂಡಲೇ "ಏನು ?" ಎಂದಳು ಆ ಮಾತಿಗೇ ಕಾದಿದ್ದವನಂತೆ, ಅವಳ ಬಳಿಗೆ ಸರಿದು "ನೀನು ಸೈಕಾಲಜೀ ಬಿಟ್ಟು ಫಿಸಿಯಾಲಜಿ ಬಗ್ಗೆ ಯೋಚಿಸಲೇ ಇಲ್ಲವೇ ?" ನಗುತ್ತಾ ಕೇಳಿದ ನೀಲಿ ಮೇಘಗಳು ಭೂದೇವಿಯನ್ನು ಸ್ಪರ್ಶಿಸುವುದಕ್ಕೆ ಮುಂಚೆ, ತಂಪಾದ ಗಾಳಿಯನ್ನು ರಾಯಭಾರಿಯನ್ನಾಗಿ ಕಳಿಸುವಂತೆ, ಅವನ

ಮೇಲಿಂದ ಬರುತ್ತಿರುವ ಗಾಳಿ ಅವಳನ್ನು ಸುತ್ತುವರೆಯಿತು, ಅಂಥಹ ವಾಸನೆಯನ್ನು ಆಸ್ವಾದಿಸುವ ಶಕ್ತಿ ಕೇವಲ ಸ್ತ್ರೀಯರ ಮೂಗಿಗೆ ಮಾತ್ರ ಪರಿಮಿತವಾಗಿರುವುದು ಆ ದೇವರು ಅವರಿಗೆ ಕೊಟ್ಟಿರುವ ವರ !

ಅವನು ಅವಳ ಕೈಯನ್ನು ಹತ್ತಿರಕ್ಕೆ ತೆಗೆದುಕೊಂಡು ಚುಂಬಿಸಿ, ಅಷ್ಟರಲ್ಲಿ ಅವಳು ತನ್ನೊಳಗೇ ತಾನು ನಗುತ್ತಿರುವುದನ್ನು ಗಮನಿಸಿ "ಏಕೆ ನಗುತ್ತಿದ್ದಿ ?" ಎಂದು ಕೇಳಿದ,

"ಏನೋ ನೆನಪಿಗೆ ಬಂತು, "

" ಏನು ? "

ಅವಳು ತಡಬಡಿಸುತ್ತಾ " ಏನು ಇಲ್ಲ " ಎಂದಳು.

"ಗಂಡ ಮೊದಲ ಬಾರಿ ಚುಂಬಿಸಿದ ನಂತರ ಹೆಂಡತಿಯಾದವಳು ಹೀಗೆ ನಕ್ಕರೆ ಅವನಿಗೆ ತುಂಬಾ ಅನುಮಾನ ಬರುತ್ತದೆ ಹುಡುಗಿ––ಯಾವ ಹಳೆಯ ನೆನಪನ್ನು ನೆನೆಸಿಕೊಂಡು ತನ್ನಲೇ ನಗುತ್ತಾಳೋ ಎಂದು" ಎಂದ. ಅವಳು ಚಕ್ಕನೇ ತಲೆ ಎತ್ತಿ ಅವನಲ್ಲಿ ಸೀರಿಯಸ್‌ನೆಸ್ ಇಲ್ಲದಿರುವುದನ್ನು ಗಮನಿಸಿ, ತಾನು ಕೂಡಾ ಹಾಯಾಗಿ ನಗುತ್ತಾ "ನಾನು ನಕ್ಕಿದ್ದು ಇದಕ್ಕಾಗಿ ಅಲ್ಲ" ಎಂದಳು,

"ನೀನು ಹೇಳದಿದ್ದರೆ ಅಪಾರ್ಥ ಮಾಡಿಕೊಳ್ಳುತ್ತೇನೆ ಅಷ್ಟೆ" ಕೋಪ ನಟಿಸಿದ,

"ನನ್ನಿಂದ ಹೇಳಿಸಬೇಕೆಂದು ತಾನೇ ಈ ಕೋಪದ ನಟನೆ ?"

"ನೀನೇನಾದರೂ ಅಂದುಕೋ "

"ಪ್ಲೇಬೋಯಲ್ ಬರೆದ ಒಂದು ಕೋಟೇಷನ್ ನೆನಪಿಗೆ ಬಂತು,"

"ಏನದು ?"

"ಕಿಸ್ ಇಸ್ ಆಸ್ ಅಪ್ಲಿಕೇಷನ್ ಫಾರ್ ಬೆಟರ್ ಪೊಸಿಷನ್"

"ಈಗಲೇ ಬೆಟರ್ ಪೊಸಿಷನ್ ಬೇಡ. ಇನ್ನೊಂದು ಗಂಟೆ ಕಳೆಯಲಿ" ಎಂದು ಕಿಟಾರನೆ ಕಿರಚಿ "ನಿನಗೆ ಚಿವುಟುವುದು ಚೆನ್ನಾಗಿ ಅಭ್ಯಾಸವಿದೆ ಯಲ್ಲಾ–" ಎಂದ,

ಆ ಸಮಯಕ್ಕೆ ಸರಿಯಾಗಿ ಆ ಮನೆಯ ಮುಂದೆ ಒಂದು ಪೋಲಿಸ್ ವ್ಯಾನ್ ಬಂದು ನಿಂತಿತು.

ಅವಳು ಸುಂದರವಾಗಿ ನಗುತ್ತಾ "ಕಡಿಮೆ ಮಾಡಿಕೊಳ್ಳುತ್ತೇನೆ ಬಿಡ್ರಿ" ಎಂದಳು. ಅವಳು ಮನಸ್ಸು ಒಂದು ಕಡಿದಾದ ಕೋಣೆಯಿಂದ (ಅದು ಅವಳ ಮನೆ) ಹೊರಗೆ ಬಂದಂತೆ. ಸ್ವೇಚ್ಛಾಲೋಕದಲ್ಲಿ ಹಗುರವಾಗಿ ಹಾರಿ ಹೋಗುತ್ತಿರುವಂತೆ ಅನ್ನಿಸಿತು.

ಆ ವೇಳೆಗೆ ಅವಳು ಆ ರೂಮಿನಲ್ಲಿ ಕಾಲಿಟ್ಟು ಒಂದೂವರೆ ಗಂಟೆ ದಾಟಿತ್ತು.

ಮಾತುಗಳೊಡನೆ ಕೈಗಳು ಜೋಡಿಯಾಗಿ, ಆ ಜೋಡಿ ಒಂದಕ್ಕೊಂದು ಬೆಸೆದುಕೊಳ್ಳುತ್ತಿದ್ದಂತೆಯೇ–

ಕೈಗಳ ಮೇಲೆ ಮೊದಲ ಚುಂಬನ,
ಮೈಯೆಲ್ಲಾ ಕಂಪನ ;
ಕೆನ್ನೆಯ ಮೇಲೊಂದು ಚುಂಬನ,
ಶರೀರಾದ್ಯಂತ ರೋಮಾಂಚನ;
ಕಿವಿಯ ಮೇಲೊಂದು ಚುಂಬನ,
ದೇಹವೆಲ್ಲಾ ಪ್ರತಿಕಂಪನ ;
ತುಟಿಯ ಮೇಲೊಂದು ಚುಂಬನ,
ನರನಾಡಿಗಳೂ ರೋಮಾಂಚನ ;
ಕತ್ತಿನ ಕೆಳಗೊಂದು ಚುಂಬನ,
ಲೆಕ್ಕಕ್ಕೆ ಸಿಗದ ಆನಂದಮಾಪನ !

ಅವಳು ಪ್ರತಿಕ್ಷಣವನ್ನೂ ಆನಂದಿಸುತ್ತಿದ್ದಾಳೆ. ಅದು ಕೇವಲ ಥ್ರಿಲ್ಲೇ ಅಲ್ಲ. ತಿಳಿಯದಿದ್ದುದನ್ನು ದಾಟಿ ತಿಳುವಳಿಕೆಯಿಂದ ಬಂದ ಆನಂದ ! ಅಂಥಹ ಅಪರೂಪದ ಅವಕಾಶವನ್ನು ಕೇವಲ ಊಹೆಯಿಂದಲೂ ಆಲೋಚಿಸಿರದಿದ್ದುದರಿಂದ ಗಲಿಬಿಲಿಯಿಂದ ಎಷ್ಟೋ ಮಾಮೂಲಾಗಿ ಕಳೆದು ಬಾವೀ ಜೀವನದಲ್ಲಿ ಅದನ್ನು ಒಂದು ಸವಿನೆನಪಾಗಿ ಉಳಿಸಿಕೊಳ್ಳದ ನಿರ್ಭಾಗ್ಯೆ ಆಗಬಾರದೆಂದು ಆ ಅನುಭವಗಳನ್ನು ಚೆನ್ನಾಗಿ ಗ್ರಹಿಸುತ್ತಿದ್ದಾಳೆ.

ಕಾಲೇಜಿನಲ್ಲಿ ಮೊದಲ ದಿನವೇ ಮುಕುಂದ್ ಮಹರ್ಷಿ ಬರೆದ "ಭಾರತ ದೇಶದಲ್ಲಿ ಸ್ತ್ರೀ" ಎನ್ನುವ ಪುಸ್ತಕದ ಮೇಲೆ, ಸೈಕಾಲಜೀ ಪ್ರೊಫೆಸರ್ ಕೊಟ್ಟ ಲೆಕ್ಚರ್‌ನ ಪ್ರತಿ ವಾಕ್ಯವೂ ಅವಳಿಗೆ ನೆನಪಿದೆ. "....ಸೈನ್ಸ್, ಆರ್ಟ್ಸ್, ಕಾಮರ್ಸ್ ಎಂದು ವಿಭಾಗಿಸಿ ವಿದ್ಯಾರ್ಥಿಗಳಿಗೆ ಯಾವುದಾದರೊಂದನ್ನು ಆರಿಸಿಕೊಳ್ಳಿ ಎಂದು ಹೇಳುವುದೇ ಮೊದಲ ತಪ್ಪು. ಸೈನ್ಸ್ ಓದಿದ ವಿದ್ಯಾರ್ಥಿಗೆ ಪೆಟಲ್ಸ್, ಸೆಪಲ್ಸ್—ಆಕ್ಸಿಜನ್ನೂ. ಆರ್ಕಿಮಿಡೀಸೂ ಬಿಟ್ಟು ಮತ್ತೇನೂ ಗೊತ್ತಿರುವುದಿಲ್ಲ, ಕಾಮರ್ಸ್ ವಿದ್ಯಾರ್ಥಿಗಳಿಗೆ ಡಬಲ್ ಎಂಟ್ರಿ ಬಿಟ್ಟು ಮತ್ತೇನೂ ತಿಳಿದಿರುವುದಿಲ್ಲ. ಬಿ. ಎ. ಪಾಸಾದ ಬಹಳ ಮಂದಿಗೆ 'ಕಂಪನಿ'ಗೂ 'ಫರ್ಮ್'ಗೂ ಕೂಡಾ ವ್ಯತ್ಯಾಸ ಗೊತ್ತಿರುವುದಿಲ್ಲ. ಎಲ್ಲರಿಗೂ ಬೇಕಾದ ವಿಷಯಗಳನ್ನು ಸಣ್ಣ ಸಣ್ಣ ಸಬ್ಜೆಕ್ಟುಗಳಾಗಿ ಮಾಡಿ ಏತಕ್ಕೆ ಬೋಧಿಸುವುದಿಲ್ಲವೋ ನನಗಂತೂ ಅರ್ಥವಾಗುವುದಿಲ್ಲ. ಒಬ್ಬ ಪೋಲಿಸ್ ಇನ್ಸ್‌ಪೆಕ್ಟರ್ ನಮ್ಮನ್ನು ಅರೆಸ್ಟ್ ಮಾಡಲು ಬಂದಾಗ ನಮಗಿರುವ ಹಕ್ಕುಗಳೇನು ಎಂದು ಕ್ಲಾಸ್ ರೂಮಿನಲ್ಲಿ ನಮಗೆ ತಿಳಿಸಿರುವುದಿಲ್ಲ. ಪ್ರಥಮ ಚಿಕಿತ್ಸೆ, ಸಣ್ಣ ಮಕ್ಕಳನ್ನು ಬೆಳೆಸಲು ಬೇಕಾದ ಜಾಗ್ರತೆಗಳು. ಶರೀರವನ್ನು ಆರೋಗ್ಯವಾಗಿ ಕಾಪಾಡಿಕೊಳ್ಳುವ ಬಗ್ಗೆ, ನಾಲ್ಕು ಜನ ಸೇರಿದಾಗ ಹೇಗೆ ಮಾತನಾಡಬೇಕೆಂಬ ಬಗ್ಗೆ, ಎಲ್ಲಕ್ಕೂ ಮುಖ್ಯವಾಗಿ 'ಬಿಹೇವಿಯರ್ ಸೈನ್ಸ್—ಇವೇನೂ ಬೋಧಿಸುವುದಿಲ್ಲ. ವಿದ್ಯಾರ್ಥಿಯೊಬ್ಬ ತನ್ನ ಸಂಪೂರ್ಣ ವಿದ್ಯಾಭ್ಯಾಸದಲ್ಲಿ ಓದಿರುವ ವಿಷಯಗಳು ಅವನ ಜೀವನದಲ್ಲಿ ಎಷ್ಟು ಉಪಯೋಗಕರವಾಗಿರುತ್ತದೆ ? ಹೃದಯವನ್ನು ಕೊಯ್ದು ಪರೀಕ್ಷಿಸುವುದಕ್ಕಿಂತಲೂ, ಅದರ ಅವಶ್ಯಕತೆ ಇರದ ವಿದ್ಯಾರ್ಥಿಗಳಿಗೆ ಹೆಂಡತಿ ಊರಿಗೆ ಹೋದಾಗ ಹೇಗೆ ಮಾಡಿ ಕೊಳ್ಳಬೇಕೆಂದು ತಿಳಿಸಿದರೆ ಉತ್ತಮ ಅಲ್ಲವೇ ? (ಕ್ಲಾಸಿನಲ್ಲೆಲ್ಲಾ ನಗೆ) ಮೈಕ್ರೋಸ್ಕೋಪಿನಲ್ಲಿ ಹೂವುಗಳನ್ನು, ಬೆಟ್ಟಗಳನ್ನು ಪರೀಕ್ಷಿಸುವುದಕ್ಕಿಂತಲೂ ವಿದ್ಯಾರ್ಥಿಗಳಿಗೆ 'ಎಟಿಟ್ಯೂಟ್' ಬಗ್ಗೆ ತಿಳಿಸುವುದು ಯೋಗ್ಯ (ಕ್ಲಾಸೆಲ್ಲಾ ಚಪ್ಪಾಳೆ....ಶಿಳ್ಳೆ.)

"ನೀವೇಕೆ ಹೀಗೆ ಚಪ್ಪಾಳೆ ತಟ್ಟುತ್ತಿದ್ದೀರೋ ನನಗರ್ಥವಾಗುತ್ತಿಲ್ಲ. ನಾನು ಮಾತನಾಡುತ್ತಿರುವುದು ಸೆಕ್ಸುಯುಲ್ ಎಟಿಟ್ಯೂಟ್ ಬಗ್ಗೆ ಅಲ್ಲ,

ಬದುಕಿನಲ್ಲಿ ಮನುಷ್ಯನಿಗಿರಬೇಕಾದ ಎಟಿಟ್ಯೂಟ್ ಬಗ್ಗೆ, ನಾವೀಗ ನಿಮಗೆ ಬೋಧಿಸುತ್ತಿರುವ ಮಾನಸಿಕ ಶಾಸ್ತ್ರ ತುಂಬಾ ಹಳೆಯದು. ಆದರೂ ನೀವು ಅದೃಷ್ಟವಂತರು. ಕನಿಷ್ಟ ಆ ಸೈಕಾಲಜಿಯನ್ನಾದರೂ ಓದುತ್ತಿದ್ದೀರಿ. ಆದರೆ ಇದನ್ನು ಕೇವಲ ಓದಿಗೇ ಪರಿಮಿತಿಗೊಳಿಸಿಕೊಳ್ಳದೇ, ನಿಮ್ಮ ನಿಜ ಜೀವನದ ದಲ್ಲಿ ಅಳವಡಿಸಿಕೊಳ್ಳಿ. ಅದರ ಬಗ್ಗೆ ಬರುವ ಹೊಸ ಹೊಸ ಪುಸ್ತಕಗಳನ್ನು ಓದಿ ! ನಿಜವಾದ ಸೈಕಾಲಜೀ ವಿದ್ಯಾರ್ಥಿಗಳಿಗೆ ಎಂದಿಗೂ ಕೋಪ ಬರುವುದಿಲ್ಲ. ಯಾರ ಮೇಲೆಯೂ ದ್ವೇಷ ಬೆಳೆಯುವುದಿಲ್ಲ. ತನ್ನ ಬದುಕಿನ ಬಗ್ಗೆ ಅವರಿಗೆ ಎಷ್ಟೋ ಪ್ರೀತಿ ಇರುತ್ತದೆ. ಅವರೊಡನೆ ಹೆಚ್ಚಿನ ಸಮಯ ಕಳೆಯಲು ಸ್ನೇಹಿತರು ಇಷ್ಟಪಡುತ್ತಾರೆ. ಇದೆಲ್ಲಾ ಯಾವುದರಿಂದ ? ಕೋಪ ಬರಬಹುದಾದ ಪರಿಸ್ಥಿತಿಗಳಲ್ಲಿ ತನ್ನನ್ನೇ ತಾನು ಅನಲೈಸ್ ಮಾಡಿಕೊಳ್ಳುವುದರಿಂದ ! ಯಾರೊಡನೆಯಾದರೂ ಶತೃತ್ವ ಏರ್ಪಡುವ ಸಮಯದಲ್ಲಿ ಅದರಿಂದ ಉಂಟಾಗುವ ಸಮಸ್ಯೆಗಳನ್ನು ಯೋಚಿಸುವುದರಿಂದ ! ಜೀವನವನ್ನು ಎಷ್ಟೋ ಆನಂದಕರವಾಗಿ ಉಂಟುಮಾಡಿಕೊಳ್ಳುವ ಸಾಮರ್ಥ್ಯ ಏರ್ಪಡುವುದರಿಂದ, ಅವರು ತಮ್ಮ ಸುತ್ತಲೂ ಇರುವವರನ್ನು ಸದಾ 'ಟ್ರಾನ್ಸಾಕ್ಷನಲ್—ಅನಾಲಿಸಿಸ್' ನಿಂದ ನೋಡುತ್ತಿರುತ್ತಾರೆ. ಅದರಿಂದಾಗಿ ಸದಾ ಅವರು ಮುಖದಲ್ಲಿ ಮುಗುಳ್ನಗೆ ತುಂಬಿರುತ್ತದೆ. ಇದೆಲ್ಲಾ ಕೇವಲ ಸೈಕಾಲಜಿ ಓದುವುದರಿಂದ ಮಾತ್ರ ಬರುವುದಿಲ್ಲ. ಈಗ ನೀವೆಲ್ಲಾ ಅದನ್ನು ಮೂರು ವರ್ಷಗಳಿಂದಲೂ ಓದುತ್ತಿದ್ದೀರಿ ಇನ್ನೂ ಎರಡು ವರ್ಷಗಳು ಕೂಡಾ ಓದುವ ಅವಕಾಶ ಪಡೆದಿದ್ದೀರಿ ಆದರೆ ನಿಮ್ಮಲ್ಲಿ ಅದೆಷ್ಟು ಮಂದಿ ಅದನ್ನು ನಿಮ್ಮ ಜೀವನದಲ್ಲಿ ಅಡಾಪ್ಟ್ ಮಾಡಿಕೊಂಡಿದ್ದೀರಿ ?...." ಒಂದು ಕ್ಷಣ ನಿಲ್ಲಿಸಿ ಎಲ್ಲರ ಮುಖವನ್ನೂ ನೋಡಿ ಮುಂದುವರೆಸಿದರು.

"ಎಷ್ಟೋ ದೂರ ಹೋಗಬೇಕಾಗಿಲ್ಲ. ನಿಮ್ಮ ಮನೆಯ ಸಭ್ಯರನ್ನೂ ಹೊಸದಾಗಿ ಬಂದ ಅತ್ತಿಗೆಯರನ್ನೂ, ದೊಡ್ಡವರಾಗುತ್ತಿರುವ ತಂಗಿಯರನ್ನೂ ಗಮನಿಸಿ. ಅಂದವಾದ ಊಹೆಗೂ ವಾಸ್ತವಿಕತೆಗೂ ವ್ಯತ್ಯಾಸ ಕಾಣಿಸುತ್ತಿರುತ್ತದೆ. ಜಡತ್ವಕ್ಕೆ ಅದು ಮೊದಲ ಮೆಟ್ಟಿಲು. ಹೇಗೋ ಗಾಣದ ಎತ್ತಿನಂತೆ ಬದುಕೋಣವೆಂಬ ಭಾವನೆ ಅಲ್ಲಿಂದಲೇ ಪ್ರಾರಂಭವಾಗುತ್ತದೆ ಅನು

ಕ್ಷಣವೂ ಕಷ್ಟಪಡಲು ಬೇಕಾದ ಶಕ್ತಿಯನ್ನು ಅನುಕ್ಷಣವೂ ಆನಂದದಿಂದಿರುವುದರೊಂದಿಗ ಪಡೆಯಿರಿ.

ತುಂಬಾ ಸಣ್ಣ ಘಟನೆಗಳೂ, ಸಣ್ಣ ಬರಹಗಳೂ, ಸಣ್ಣ ಉಪನ್ಯಾಸಗಳೂ ಕೂಡಾ ಮನುಷ್ಯರ ಮೇಲೆ ಒಮ್ಮೊಮ್ಮೆ ತುಂಬಾ ಪ್ರಭಾವ ಬೀರುತ್ತದೆ. ಕಿರಣ್ಮಯಿ ವಿಷಯದಲ್ಲಿಯೂ ಹಾಗೆಯೇ ನಡೆಯಿತು. ಮೊದಲೇ ಒಂದು ಕಡೆ ಹೇಳಿದಂತೆ ಅವಳ ಮನೆಯೇ ಒಂದು ಪ್ರಪಂಚ ಅಲ್ಲಿಯ ಮನುಷ್ಯರೆಲ್ಲರೂ 'ಏತಕ್ಕೆ ಹುಟ್ಟಿದೆವೋ ಭಗವಂತಾ' ಎಂದುಕೊಂಡು ಬದುಕುತ್ತಿರುವವರು. ಅಷ್ಟು ಸಣ್ಣ ಮನೆಯಲ್ಲಿಯೇ ಗ್ರೂಪುಗಳು. ದೊಡ್ಡ ಸೊಸೆ ಮೂರನೇ ಸೊಸೆ ಎಂದು ಗ್ರೂಪು. ಎರಡನೇ ಸೊಸೆ, ನಾಲ್ಕನೇ ಸೊಸೆ ಒಂದು ಗ್ರೂಪು. ಮತ್ತೆ ನಾಲ್ವರೂ ಒಂದೆಡೆ ಕಲೆತರೆ ನಗುತ್ತಲೇ ಮಾತನಾಡಿಕೊಳ್ಳುತ್ತಿರುತ್ತಾರೆ. ಅತ್ತೆಯವರ ವಿಶ್ವಾಸವನ್ನು ಪಡೆಯಲು ಎಲ್ಲರೂ ಒಬ್ಬೊಬ್ಬರಾಗಿಯೂ, ಗುಂಪು ಗುಂಪಾಗಿಯೂ ಪ್ರಯತ್ನಿಸುತ್ತಿರುತ್ತಾರೆ. ತುಂಬಾ ಸಮಯದವರೆಗೂ ನಾಲ್ಕನೇ ಅಣ್ಣನಿಗೆ ಕೆಲಸ ಸಿಕ್ಕಿರಲಿಲ್ಲ. ಅದುವರೆವಿಗೂ ಆ ಸೊಸೆ ಅನಿಷ್ಟದವಳಾಗಿದ್ದಳು. 'ಷೆಡ್ಯೂಲ್ ಕ್ಯಾಸ್ಟ್ ರಿಸರ್ವೇಷನ್––' ಅಣ್ಣನಿಗೆ ದೊಡ್ಡ ಕೆಲಸ ಬಂದ ಕೂಡಲೇ ರಾತ್ರೋರಾತ್ರಿ ಆ ಸೊಸೆ ಮನೆಗೆ ಮಹಾಲಕ್ಷ್ಮಿಯಾದಳು.

ಈ ವೈಬ್ರೇಷನ್ಸ್‌ನ ವ್ಯತ್ಯಾಸ ದೊಡ್ಡವರಲ್ಲಿ ಮಾತ್ರವಲ್ಲದೇ ಬೆಳೆಯುತ್ತಿರುವ ಸಣ್ಣ ಮಕ್ಕಳಲ್ಲಿ ಕೂಡಾ ಕಾಣಿಸುತ್ತಿರುವುದು ಅವಳಿಗೆ ಆಶ್ಚರ್ಯವಾಯಿತು. ದೊಡ್ಡಣ್ಣನ ಮಕ್ಕಳಿಗೂ, ಎರಡನೇ ಅಣ್ಣನ ಮಕ್ಕಳಿಗೂ ಒಂದು ಕ್ಷಣವೂ ಹೊಂದಾಣಿಕೆ ಆಗುವುದಿಲ್ಲ. ದೊಡ್ಡಣ್ಣನ ಹದಿಮೂರು ವರ್ಷದ ಮಗಳು ಆಗಲೇ ಪ್ರೇಮದಲ್ಲಿ ಬಿದ್ದಿದ್ದಾಳೆಂದು ಅವಳ ನೋಟ್ ಪುಸ್ತಕದ ಹಾಳೆಗಳನ್ನು ನೋಡಿದ ದಿನವೇ ತಿಳಿಯಿತು ಆವಳ ಪ್ರಾಣತೆಗೆದು ಬಿಡುವವರಂತೆ ಮನೆಯಲ್ಲಿಯವರೆಲ್ಲಾ ಸೈನ್ಯ ಕಟ್ಟಿಕೊಂಡು ಕಾಯುತ್ತಿದ್ದುದನ್ನು ಕಂಡ ಕಿರಣ್ಮಯಿಗೆ–ಒಬ್ಬ ಸೈಕಾಲಜೀ ವಿದ್ಯಾರ್ಥಿನಿಯಾಗಿ ಏನನ್ನೂ ಅರ್ಥಮಾಡಿಕೊಳ್ಳಲು ಆಗಲಿಲ್ಲ, ಬೆಳೆಯುತ್ತಿರುವ ಮಕ್ಕಳಿಗೆ ಈ ಮನೆಯಲ್ಲಿ ಎಂದಾದರೂ ಪ್ರೀತಿ ಪ್ರೇಮಗಳು ಸಿಗುತ್ತವೆಯೇ ? ಅಥವಾ ಈ ಮನೆಯಲ್ಲಿ

ನಾಲ್ವರು ಒಟ್ಟಿಗೆ ಒಂದೆಡೆ ಕುಳಿತು ಒಂದು ಸಮಸ್ಯೆಯನ್ನಾಗಲೀ, ಭವಿಷ್ಯತ್ತಿನ ಬಗ್ಗೆಯಾಗಲೀ ಎಂದಾದರೂ ಚರ್ಚಿಸಿದ್ದಾರಾ ? ಚರ್ಚಿಸುತ್ತಾರೆ ಆದರೆ ಅದು ಯಾವ ಕೆಲಸಕ್ಕೂ ಬಾರದ ಚರ್ಚೆ. ಮೂರನೇ ಸೊಸೆಯ ದೊಡ್ಡಪ್ಪನ ಮಗಳು ಓಡಿಹೋದದ್ದು, ಎರಡನೇ ಮಗಳ ಗಂಡನ ತಮ್ಮನ ಪ್ರೇಮ ವಿವಾಹ, ಮಾತನಾಡಿಕೊಳ್ಳಲು ಅದೇ ದೊಡ್ಡ ಟಾಪಿಕ್ ಆಗಿ ಕಾಣಿಸುತ್ತದೆ ಅವರಿಗೆ ...ಅಷ್ಟೆ.

ಪ್ರತಿಯೊಬ್ಬರೂ ಮತ್ತೊಬ್ಬರ ಬಳಿ ಒಳ್ಳೆಯತನವನ್ನು ಎಸ್ಟಾಬ್ಲಿಷ್ ಮಾಡಿಕೊಳ್ಳುವುದಕ್ಕಾಗಿ, ಮೂರನೇ ವ್ಯಕ್ತಿಯ ಬಗ್ಗೆ ಕೆಟ್ಟದಾಗಿ ಮಾತನಾಡಿಕೊಳ್ಳುವುದು ತಪ್ಪಿದರೆ, ತನ್ನ ವ್ಯಕ್ತಿತ್ವವನ್ನು ಬೆಳೆಸಿಕೊಳ್ಳುವ ಒಂದೇ ಒಂದು ಮಾತನ್ನೂ ಆಡುವುದಿಲ್ಲ.

ಕಿರಣ್ಮಯಿ ಬಿ. ಎ. ನಲ್ಲಿ ಮೊದಲ ದರ್ಜೆಯಲ್ಲಿ ಪಾಸಾದ ದಿನ ಆ ಮನೆಯಲ್ಲಿ ಒಂದಿಬ್ಬರನ್ನು ಬಿಟ್ಟರೆ ಯಾರೂ ಸಂತೋಷಪಡಲಿಲ್ಲ. ಅವಳಿಗೆ ಅತ್ಯಂತ ಆಶ್ಚರ್ಯ ತರಿಸಿದ ವಿಷಯವೆಂದರೆ ಅವಳ ಬಳಿ ಸಂತೋಷ ವ್ಯಕ್ತಪಡಿಸಿದ ಆ ಇಬ್ಬರೂ ಮೂವರೇ ನಂತರ ತಮ್ಮ ಹೆಂಡತಿಯರ ಬಳಿ (ಇಲ್ಲವೇ ಗಂಡಂದಿರ ಬಳಿ) ಅತ್ತೆಯ ಸಹಾನುಭೂತಿ ಹೊಂದಲು—"ಇಷ್ಟು ಹಣ ಖರ್ಚು ಮಾಡಿ ಏಕೆ ಓದು ?" ಎಂದು ಹೇಳಿದ್ದನ್ನೂ ಅವಳು ಕೇಳಿಸಿಕೊಂಡಿದ್ದಳು.

ಮನುಷ್ಯರು ನೂರಕ್ಕೆ ನೂರರಷ್ಟು ಸತ್ಯವಂತರಾಗಿರಬೇಕೆಂದು, ಇರುತ್ತಾರೆಂದೂ ಅವಳೆಂದೂ ಆಶಿಸಿರಲಿಲ್ಲ. ಅದು ಅಸಾಧ್ಯ ಕೂಡಾ. ರೆಸ್ಟಿಜನ್ ತನ್ನ "ದಿ ಚಾನ್ಸಿ ಚಾನ್ಸಿ ಚಾನ್ಸಿ ವರ್ಲ್ಡ್" ಪುಸ್ತಕವದಲ್ಲಿ ಬರೆದಂತೆ, ತನಗೆ ಲಾಭ ಬರುವ ಸಂದರ್ಭದಲ್ಲಿ, ಹೊರಗಿನ ವ್ಯಕ್ತಿಗೆ ವ್ಯಾಪಾರ ಸಂಬಂಧವಾದ ಕಷ್ಟ ಕೊಟ್ಟರೂ....ಅಷ್ಟರವರೆಗೂ ಮನುಷ್ಯ ಸ್ವಾರ್ಥಿಯಾಗಿ ವರ್ತಿಸಬಹುದು ಆದರೆ ಮಾನಸಿಕ ಸಂಬಂಧದ ವಿಷಯಗಳಲ್ಲಿ ಕೂಡಾ. ಅದರಲ್ಲಿಯೂ ತಮಗೇನೂ ಲಾಭವಿಲ್ಲವೆಂದು ತಿಳಿದೂ ಕೂಡ ಈ ಮನುಷ್ಯರು ತನ್ನನ್ನು ಎದುರಿಗೆ ಹೊಗಳಿ ಪರೋಕ್ಷವಾಗಿ ಏಕೆ ತುಳಿಯುತ್ತಾರೋ ಅವಳಿಗರ್ಥವಾಗಲಿಲ್ಲ.

ತಾನು ಎಮ್. ಎ. ಓದುವುದು ಮನೆಯಲ್ಲಿ ಯಾರಿಗಾದರೂ ಇಷ್ಟವಿಲ್ಲದಿದ್ದರೆ ಅವರು ತನ್ನ ಎದುರಾಗಿ ಆ ವಿಷಯವನ್ನು ಹೇಳಿ ಅದಕ್ಕೆ ಕಾರಣಗಳನ್ನು ವಿವರಿಸಿದರೆ ಅದು ಉತ್ತಮವಾದ ಪದ್ಧತಿ. ತಮ್ಮ ಅಭಿಪ್ರಾಯಗಳನ್ನು ವ್ಯಕ್ತಪಡಿಸದೇ ಇರುವುದು ಮಧ್ಯಮ ಆದರೆ ತನ್ನ ಮುಂದೆ-- "ಬೇರೆಯವರು ಏನೆಂದುಕೊಂಡರೂ ಪರವಾಗಿಲ್ಲ ನೀನು ಓದು" ಎಂದು ಹೇಳಿ, ಮತ್ತೆ ತನ್ನ ತಾಯಿಯ ಬಳಿ, ಆಕೆ ತಾನು ಓದುವುದನ್ನು ಇಷ್ಟಪಡುವುದಿಲ್ಲವೆಂದು ತಿಳಿದಕೂಡಲೇ "ನಾನೂ ಹಾಗೆಯೇ ಅಂದುಕೊಳ್ಳುತ್ತಿದ್ದೇನೆ" ಎಂದು ಹೇಳುವುದು ಹೀನಕ್ಕಿಂತಲೂ ಅಧಮ. ಮನೆಯಲ್ಲಿ ಎಲ್ಲರೂ ಹಾಗೆಯೇ ಪ್ರವರ್ತಿಸುತ್ತಿದ್ದಾರೆ. ಭೂತಗಾಜನ್ನು ಮೇಲೆತ್ತಿದರೆ ಪ್ರಪಂಚದಲ್ಲಿ ಹೀಗೆಯೇ ಮತ್ತೆಷ್ಟೋ ಜನ.

"ನೀನು ಯಾವಾಗಲೂ ಆಲೋಚಿಸುತ್ತಲೇ ಇರುತ್ತೀಯಾ ?"

ಅವಳು ಪೆಚ್ಚಾಗಿ ನಗುತ್ತಾ "ಇಲ್ಲವಲ್ಲಾ" ಅಂದಳು.

"ಇಲ್ಲ, ನಿನು ಆಲೋಚಿಸುತ್ತಿದ್ದಿ."

ಅವಳು ನಗುತ್ತಲೇ "ಆ ಮಾತಿಗೆ ಬಂದರೆ ಪ್ರತಿಯೊಬ್ಬರೂ ಯಾವಾಗಲೂ ಆಲೋಚಿಸುತ್ತಲೇ ಇರುತ್ತಾರೆ" ಅಂದಳು.

"ಆದರೆ ಆಲೋಚಿಸುತ್ತಲೇ ತಮ್ಮ ಪ್ರಪಂಚದಲ್ಲೇ ಮುಳುಗಿ ಹೋಗಿರುವುದಿಲ್ಲ"

"ಹಾಗಾದರೆ ಸರಿ. ನೀವು ಮಾತನಾಡುತ್ತಿರಿ, ನಾನು ಕೇಳುತ್ತಿರುತ್ತೀನಿ."

"ನೀನು ನನಗೊಂದು ಪ್ರಾಮಿಸ್ ಮಾಡಬೇಕು."

"ಏನು ?"

"ಯಾವಾಗಲಾದರೂ ನೀನು ದೀರ್ಘವಾಗಿ ಆಲೋಚಿಸುತ್ತಿರುವಾಗ ನಾನು ಚಟಕ್ಕನೇ 'ನೀನೇನು ಈಗ ಆಲೋಚಿಸುತ್ತಿರುವುದು' ಎಂದು ಕೇಳಿದ ಕೂಡಲೇ ನೀನು ಅದನ್ನು ಹೇಳಬೇಕು."

"ಸರಿ"

"ಸರಿ ಎಂದು ಅಷ್ಟು ಸುಲಭವಾಗಿ ಹೇಳಿಬಿಡಬೇಡ, ಅದು ಎಷ್ಟೇ ನಾಚಿಕೆಯಾದರೂ. ಎಷ್ಟೇ ನೋವು ಕೊಡುವ ವಿಷಯವಾದರೂ, ಕೊನೆಗೆ

ನನಗೆ ಮನಸ್ಸಿಗೆ ನೋವಾಗುವಂಥಹ ವಿಷಯವಾದರೂ ನಿಜವನ್ನೇ ಹೇಳಬೇಕು."

"ಮತ್ತೆ ನಾನು ಕೇಳಿದಾಗಲೂ ನೀವು ಹಾಗೆಯೇ ಹೇಳಬೇಕು."

"ಓ. ಕೆ."

"ಎಷ್ಟೇ ಸಿಲ್ಲಿಯಾದಾದರೂ." ನಗುತ್ತಾ ಅಂದಳು.

"ನನಗೆ ಸಿಲ್ಲಿ ಎಂದು ಯಾವುದೂ ಇಲ್ಲ. ನಾನು ಹೇಳುತ್ತಿದ್ದಂತೆಯೇ ನೀನೇ ಕಿವಿ ಮುಚ್ಚಿಕೊಂಡು 'ಶಿವ ಶಿವಾ' ಎಂದು ಕಿವಿಮುಚ್ಚಿಕೊಳ್ಳಬೇಕು"

"ಅಂದರೆ ? ನಾನು ಕೇಳಿದೆನೆಂದು ಆಗಲಾಗಲೇ ಕಲ್ಪಿಸಿಕೊಂಡು ಏನೋ ಹೇಳಿ ಮತ್ತೆ ನಾನು ಕೇಳದಂತೆ ಮಾಡುತ್ತೀರಾ ?" ಕೋಪವನ್ನು ನಟಿಸುತ್ತಾ ಕೇಳಿದಳು.

"ಇಲ್ಲ ಇಲ್ಲ ನಿಜವನ್ನೇ ಹೇಳುತ್ತೇನೆ. ಇಷ್ಟಕ್ಕೂ ಈ ಆಲೋಚನೆ ಚೆನ್ನಾಗಿದೆಯಾ ?" ಅವಳಿಗೆ ನಿಜಕ್ಕೂ ಚೆನ್ನಾಗಿತ್ತು. ಇಂತಹ ಸಣ್ಣ ಸಣ್ಣ ವಿಷಯಗಳೇ ಮನುಷ್ಯರನ್ನು ಹತ್ತಿರ ಮಾಡುವುದು. ಮುಖ್ಯವಾಗಿ ಗಂಡ ಹೆಂಡತಿಯರನ್ನು

ಅವಳು ತಲೆ ಅಡಿಸಿದಳು.

ಅವನು ದಿಂಬನ್ನು ಎಳೆದುಕೊಂಡು ಆಕಳಿಸುತ್ತಾ "ಇನ್ನು ಮಲಗೋಣವೇ. ನಿದ್ರೆ ಬರುತ್ತಿದೆ. ಗುಡ್‌ನೈಟ್" ಅವಳು ಬಿಳಿಚಿಕೊಂಡಳು.

ಎರಡನೇ ತಲೆ ದಿಂಬನ್ನು ತಾನು ಎಳೆದುಕೊಂಡು "ಗುಡ್ ನೈಟ್" ಹೇಳಿದಳು. ಅವಳನ್ನು ಸರಿಯಾಗಿ ಮಲಗಿಕೊಳ್ಳುವ ಮುಂಚೆಯೇ ಅವನು ಸುಳಿಗಾಳಿಯಂತೆ ಅವಳನ್ನು ಬರಸೆಳೆದು ತನ್ನ ಕಡೆಗೆ ತಿರುಗಿಸಿಕೊಳ್ಳುತ್ತಾ "ಹೇಳು ಈಗ ಸರಿಯಾಗಿ ಏನನ್ನು ಆಲೋಚಿಸುತ್ತಿದ್ದಿ ?" ಕೇಳಿದ.

ಅವಳು ಈ ಬಾರಿ ನಿಜಕ್ಕೂ ಸುಸ್ತಾದಳು. ಇಷ್ಟೊಂದು ನಾಟಕೀಯವಾಗಿ ಅವನು ತನ್ನ ಬುಟ್ಟಿಯಲ್ಲಿ ಹಾಕಿಕೊಳ್ಳುತ್ತಾನೆ ಎಂದುಕೊಂಡಿರಲಿಲ್ಲ ಅವಳು. ಕೋಪದಿಂದ "ಈಗ ತಾನೇ ಅಂದುಕೊಂಡು ಆಗಲೇ ಕೇಳಿಬಿಡುವುದಾ" ಎಂದಳು.

"ನಾನಂದುಕೊಂಡದ್ದರಲ್ಲಿ ಆ ರೂಲ್ ಏನಿರಲಿಲ್ಲವಲ್ಲಾ. ಬೇಕಾದರೆ ಮುಂದಿನ ಸಾರಿಯಿಂದ ಹಾಗೆ ಕೇಳಬೇಕೆಂಬ ಕಂಡೀಷನ್ ಹಾಕಿಕೊಳ್ಳೋಣ

ಬಿಡು. ಈಗ ಮಾತ್ರ ಹೇಳದೇ ವಿಧಿಯಿಲ್ಲ."

ಅವಳು ನಾಚಿದಳು. ಆದರೆ ಅವನು ಬಿಡುವಂತೆ ಕಾಣಲಿಲ್ಲ. ಅವಳು ತಲೆತಗ್ಗಿಸಿಕೊಂಡು "ಅಪ್ಪಾ! ಇನ್ನು ಹಾಯಾಗಿ ನಿದ್ರಿಸಬಹುದು ಎಂದುಕೊಂಡೆ" ಅಂದಳು.

"ಚಿವುಟುವುದು ನನಗೂ ಬರುತ್ತದೆ, ಹೇಳು ಮತ್ತೆ ನಿಜ ಹೇಳು."

"ನಾನು ಏನು ಅಂದುಕೊಂಡೆನೋ ನಿಮಗೂ ಗೊತ್ತು."

"ಹಾಗೆ ತಪ್ಪಿಸಿಕೊಂಡರೆ ಆಗುವುದಿಲ್ಲ. ಹೇಳಲೇಬೇಕು."

"ಸರಿ! ಯಾವಾಗ ಎಂದು ನಿಮ್ಮ ಪ್ರಶ್ನೆ? ನೀವು ಗುಡ್‌ನೈಟ್ ಹೇಳಿದಾಗಲಾ? ಏನು ಹೀಗೆ ಆಲೋಚಿಸುತ್ತಿದ್ದಿ ಎಂದಾಗಲಾ?" ಲಾಜಿಕ್ ಆಗಿ ಕೇಳಿದಳು.

"ಗುಡ್‌ನೈಟ್ ಹೇಳಿದಾಗ."

"ಕಿವಿಯಲ್ಲಿ ಹೇಳುತ್ತೇನೆ."

"ಸಾಧ್ಯವಿಲ್ಲ. ಜೋರಾಗಿಯೇ ಹೇಳಬೇಕು."

"ನಮ್ಮ ಅಗ್ರಿಮೆಂಟಿನಲ್ಲಿ ಹಾಗಿಲ್ಲವಲ್ಲಾ" ದೃಢವಾಗಿ ಹೇಳಿದರು.

"ಸರಿ. ಹಾಗೆಯೇ ಹೇಳು"

ಅವಳು ತಡಬಡಿಸಿ. ಇನು ತಪ್ಪಿಸಿಕೊಳ್ಳಲು ಸಾಧ್ಯವಿಲ್ಲವೆಂಬಂತೆ ಸರ್ವಶಕ್ತಿಗಳನ್ನೂ ಕೂಡಿಸಿಕೊಂಡು. ಅಷ್ಟರಲ್ಲಿಯೇ ಮತ್ತೆ ನಾಚಿಕೊಂಡು, ಅದನ್ನು ಬಹಳಷ್ಟು ಕಷ್ಟದಿಂದ ಪಕ್ಕಕ್ಕಿಟ್ಟು. ಅವನ ಕಿವಿಯ ಬಳಿ ಮುಖವಿಟ್ಟು ನೆಮ್ಮದಿಯಿಂದ ಹೇಳಿದಳು. ತಾನೇನೆಂದುಕೊಂಡಳೋ ಅದನ್ನು.

ಅವನ ಪಕ್ಕನೇ ನಕ್ಕ. ಅವಳು ಕೆನ್ನೆಗಳನ್ನು ಕೆಂಪಗೆ ಮಾಡಿಕೊಂಡು "ನೀವು ಹಾಗೆ ನಕ್ಕರೆ ಇನ್ನು ಮುಂದೆ ಏನನ್ನೂ ಹೇಳುವುದಿಲ್ಲ" ಎಂದಳು.

"ಸರಿ, ಸರಿ. ನಗುವುದಿಲ್ಲ ಬಿಡು.... ಇನ್ನು ಈಗ ಹೇಳು ಎರಡನೆಯದು."

"ಎರಡನೆಯದು ಏನು?"

"ಏನು ಹಾಗೆ ಆಲೋಚಿಸುತ್ತಿದ್ದಿ?" ಎಂದು ಕೇಳಿದಾಗ "ಏಮೀನ್ ಅಂದಕೂಡಲೇ, ಏನನ್ನು ಆಲೋಚಿಸುತ್ತಿದ್ದಿ?"

"ನೀವಷ್ಟು ಬೇಗ ಕೇಳುತ್ತೀರೆಂದುಕೊಂಡಿರಲಿಲ್ಲ. ತುಂಬಾ ಸುಲಭವಾಗಿ ಬಟ್ಟೆಯಲ್ಲಿಬಿದ್ದೆನೆಂದು ಅಂದುಕೊಂಡೆ ಇನ್ನೂ...." ಅವಳು

ಹೇಳುವುದನ್ನು ನಿಲ್ಲಿಸಿ ಕೆಳತುಟಿ ಕಚ್ಚಿಕೊಂಡಳು.

"ಊ್ಹಾಂ—ಇನ್ನೂ ?"

"ಏನೂ ಇಲ್ಲ"

"ಏನೋ ಇದೆ. ತಡಬಡಿಸುತ್ತಿದ್ದಿ "

"ನಿಜವಾಗಿ ಏನೂ ಇಲ್ಲ."

"ಸುಳ್ಳನ್ನು ಹೇಳಬಾರದೆಂಬ ನಮ್ಮ ಮಧ್ಯೆ ಇರುವ ಅಗ್ರಿಮೆಂಟನ್ನು ಮರೆತುಬಿಟ್ಟೆಯಾ ?"

ಅವಳು ಧ್ವನಿ ತಗ್ಗಿಸಿ ಹೇಳಿದಳು.

"ಈ ಮನುಷ್ಯನಿಗೆ ತುಂಬಾ ಜನ ಹೆಣ್ಣುಗಳೊಡನೆ ಸ್ನೇಹವಿರಬೇಕು, ಇಲ್ಲದಿದ್ದರೆ ಈ ರೀತಿಯಾದ ಸ್ಪಾಟೇನಿಯಿಟಿ ಬರುವುದಿಲ್ಲ ಎಂದುಕೊಂಡೆ."

"ಮೈಗಾಡ್ ! ನನಗ್ಯಾರೂ ಪರಿಚಯವಿಲ್ಲ."

"ಏನೋ ಮತ್ತೆ ! ನನಗನ್ನಿಸಿದ್ದನ್ನು ಹೇಳಿದೆ. ಹೊರಗಿನವರ ಹುಳುಕನ್ನು ಹೋಗಲಾಡಿಸಲು ನಾವು ಏನಾದರೂ ಮಾಡಬೇಕೆಂದರೆ ಮೊದಲು ಅದರ ಅನುಭವ ಅವರಿಂದ ನಮಗಾಗಿರಬೇಕಲ್ಲಾ "

"ಓಹೋ ! ನೀನು ನಿಜಕ್ಕೂ ಸೈಕಾಲಜಿ ಸ್ಟೂಡೆಂಟ್ ಥರಾನೆ ಇದ್ದಿ ಕಣೆ" ಎಂದು ನಕ್ಕ.

"ನಾನೀಗ ಹೆಸರಾಂತ ಕ್ರಿಕೆಟ್ ಆಟಗಾರ. ಮಾಮೂಲು ಫ್ಯಾನ್ಸ್ ಇರುತ್ತಾರಲ್ಲಾ ! ಅದಕಿಂತಲೂ ಹೆಚ್ಚಿನ ಪರಿಚಯಗಳಿಲ್ಲ" ಎಂದ.

"ನಾನೇನೂ ನಿಮ್ಮನ್ನು ಅದೆಲ್ಲಾ ಕೇಳಲಿಲ್ಲವಲ್ಲಾ. ನೀನೇನು ಯೋಚಿಸುತ್ತಿದ್ದೀ ಎಂಬ ನಿಮ್ಮ ಪ್ರಶ್ನೆಗೆ ಮಾತ್ರ ಉತ್ತರಿಸಿದ್ದೆ."

"ಕನ್ನಿಷ್ಟ ಪಕ್ಷ ತಿಳಿದುಕೊಳ್ಳಬೇಕೆಂಬ ಕುತೂಹಲವೂ ಇಲ್ಲವೇ ?"

ಅವಳು ಮುಜುಗರದಿಂದ ನೋಡಿ "ಮೊದಲನೇ ದಿನವೇ ಈ ರೀತಿಯ ಸಂಭಾಷಣೆಯೇ ?" ಎಂದು ಕೇಳಿದಳು.

"ಸರಿ ಹಾಗಾದರೆ ಇನ್ನೇನು ಮಾತನಾಡಬೇಕೋ ನೀನೇ ತಿಳಿಸು

"ಇನ್ನೇನಾದರೂ ಸರಿ—"

"ಕ್ರಿಕೆಟ್ ಬಿಟ್ಟು ನನಗೆ ಮತ್ತೇನೂ ಗೊತ್ತಿಲ್ಲ."

"ಹೋಗಲೀ ಅದನ್ನೇ ಹೇಳಿ. ಕೇಳುತ್ತೇನೆ."

## 23 ; 45 ; 07 Hrs

ಅವನು ತೋರುಬೆರಳನ್ನೂ ಹೆಬ್ಬೆಟ್ಟನ್ನೂ ಅರ್ಧಚಂದ್ರಾಕಾರವಾಗಿ ಮಾಡಿ ಬಲದಿಂದ ಎಡಕ್ಕೆ ತಿರುಗಿಸುತ್ತಾ "ನಾನ್ ಲೆಫ್ಟ್‌ಹ್ಯಾಂಡರ್. ಇಗೋ ಈ ರೀತಿ ತಿರುಗಿಸಿದರೆ ಲೆಗ್‌ಸ್ಪಿನ್ ಎನ್ನುತ್ತಾರೆ. ಈ ರೀತಿ ತಿರುಗಿಸಿದರೆ ಆಫ್‌ಸ್ಪಿನ್ ಎನ್ನುತ್ತಾರೆ. ವೇಗದ ಬೌಲರ್‌ಗಳು ಚೆಂಡನ್ನು ಈ ರೀತಿ ಹಿಡಿದು ಕೊಳ್ಳುತ್ತಾರೆ. ಗೂಗ್ಲಿ ಎಂದು ಬೇರೆ ಇದೆ. ಗೂಗ್ಲಿಯಿಂದ ನಾವು ಪ್ರತಿಸ್ಪರ್ಧಿಯನ್ನು ಚೆನ್ನಾಗಿ ಮೋಸಗೊಳಿಸಬಹುದು. ಈ ಕಡೆ ಚೆಂಡನ್ನು ತಿರುಗಿಸಿದಂತೆ ನಟಿಸಿ ಕೊನೆಯ ಕ್ಷಣದಲ್ಲಿ ಹೀಗೆ ಆ ಕಡೆ ತಿರುಗಿಸುತ್ತಿವಿ....ಸರಿಯಾಗಿ ಈಗೇನೆಂದುಕೊಳ್ಳುತ್ತಿದ್ದಿ ನೀನು ?....ಬೇಡಬಿಡು ಹೇಳಬೇಡ. ನಿನಗೆ ತೊಂದರೆ ಕೊಡುವುದಿಲ್ಲ. ನೀನೇನೆಂದುಕೊಳ್ಳುತ್ತಿದ್ದಿಯೆಂದ ನಾನೇ ಹೇಳಿಬಿಡುತ್ತೇನೆ. ಟೇಬಲ್ ಮೇಲೆ ಅಷ್ಟೊಂದು ವಸ್ತುಗಳಿರುವಾಗ ಅದರ ಡೆಮಾನ್‌ಸ್ಟ್ರೇಟ್ ಮಾಡಬಹುದಲ್ಲಾ ನನಗೇಕೆ ಹಿಂಸೆಕೊಡುತ್ತೀರಿ—ಅಫ್‌ಕೋರ್ಸ್ ಚೆನ್ನಾಗಿಯೇ ಇದೆ. ಆಗಲೀ....ಎಂದು ಕೊಳ್ಳುತ್ತಿದ್ದೀತಾನೇ ?"

"ನನಗೇನೂ ಚೆನ್ನಾಗಿಲ್ಲ. ನಾನೇನೂ ಅದನ್ನು ಯೋಚಿಸುತ್ತಿಲ್ಲ."

"ಮತ್ತೇನು ಆಲೋಚಿಸುತ್ತಿದ್ದಿ ?"

"ಈಗಲಾದರೂ ಬೆರಳುಗಳನ್ನು ಸರಿಯಾಗಿ ಇಟ್ಕೊಳ್ತೀರಾ ?" ಕೋಪದಿಂದ ಕೇಳಿದಳು.

"ಊ್ಞ....ಹೇಳು" ಸ್ವಲ್ಪ ದೂರ ಸರಿದು ಹೇಳಿದ.

"ಇದೇ ಕೊನೆಯಬಾರಿ ಇನ್ನು ಇವತ್ತು ಈ ರೀತಿ ಕೇಳಕೂಡದು."

"ನಿನಗೆ ದೂರದೃಷ್ಟಿ ತುಂಬಾ ಹೆಚ್ಚಾಗಿರುವಂತಿದೆಯಲ್ಲಾ" ಎಂದು ಅವನು ನಕ್ಕ....ಸರಿಯಾಗಿ ಅರ್ಧಗಂಟೆಯ ನಂತರ ಏನಾಗುತ್ತದೆಂದು ನಿನಗೆ ಗೊತ್ತು. ಕರೆಕ್ಟಾಗಿ ಆ ಸಮಯಕ್ಕೆ ಸರಿಯಾಗಿ ಮತ್ತೆ ಕೇಳೋಣವೆಂದು ಈಗಲೇ ಅಂದುಕೊಳ್ಳುತ್ತಿದ್ದೀನಿ. ಆದಾಗಿದ್ದರೆ ಇಕ್ಕಟ್ಟನಲ್ಲಿ ಸಿಕ್ಕಿಹಾಕಿ ಕೊಳ್ಳುತ್ತಿದ್ದೆ. ಸರಿಬಿಡು ! ಕೇಳುವುದಿಲ್ಲ.

"ನಾನು ನಿಜಕ್ಕೂ ಆ ಸಮಯಕ್ಕೆ ಕಾರ್ಲ್‌ಮಾರ್ಕ್ಸ್ ಬಗ್ಗೆ ಯೋಚಿಸುತ್ತಿಸುತ್ತಿದ್ದೆ" ಅಂದಳು.

ರಾಯಣ್ಣ ಕಿಟಾರನೇ ಕಿರುಚಿದಂತೆ ಮಾಡಿ "ಮೈಗಾಡ್ ! ಮೊದಲನೇ ದಿನ–ಪ್ರಸ್ತ. ಸರಿಯಾಗಿ ಅರ್ಧರಾತ್ರಿಯಾಗುತ್ತಿದ್ದಂತೆಯೇ ಎಲ್ಲವನ್ನೂ ಬಿಟ್ಟು ಕಾರ್ಲ್‌ಮಾರ್ಕ್ಸ್ ಬಗ್ಗೆ ಆಲೋಚಿಸುವುದಾ" ಎಂದ.

ಸರಿಯಾಗಿ ಅದೇ ಸಮಯಕ್ಕೆ ದೊಡ್ಡವರೆಲ್ಲಾ ಎಷ್ಟೇ ಹೇಳಿದರೂ ಕೇಳದೆ ಇನ್ಸ್‌ಪೆಕ್ಟರ್ ಆ ರೂಮಿನೆಡೆಗೆ ಬರುತ್ತಿದ್ದಾರೆ.

"ಕಾರ್ಲ್‌ಮಾರ್ಕ್ಸ್ ಏನು ಹೇಳಿದ್ದಾನೆಂದು ನಿಮಗೆ ಗೊತ್ತಾ ?"

"ಏನೆಂದಿದ್ದಾನೆ ?"

"ಬಲಯುತವಾದ ಪ್ರೇಮಾನುಬಂಧವನ್ನು ಏರ್ಪಡಿಸುವ ಮಹೋತ್ತರವಾದ ಶಕ್ತಿ ಕೇವಲ ಅನುಭೂತಿ; ಸೋಮಾರಿತನ, ನಿಸ್ಸಹಾಯಕತೆ ಪ್ರೇಮಬಂಧವನ್ನು ಏರ್ಪಡಿಸಲಾರವು. ಸೌಂದರ್ಯವನ್ನು ಆನಂದಿಸಬೇಕೆಂದರೆ, ಅದಕ್ಕೆ ಮುಂಚೆ ನೀನು ಅದನ್ನು ಆಸ್ವಾದಿಸುವ ಶಕ್ತಿಯನ್ನು ಬೆಳೆಸಿಕೊಳ್ಳಬೇಕು. ವ್ಯಕ್ತಿಗಳಿಂದ, ಪರಿಸರಗಳಿಂದ ಪ್ರೇರಣೆ ಪಡೆಯಬೇಕು. ನನಗೆ ಈ ಕೊಟೇಷನ್ ಅಂದರೆ ತುಂಬಾ ಇಷ್ಟ.

"... ವ್ಯಕ್ತಿ ವ್ಯಕ್ತಿಯೊಡನೆ ಬೆಳೆಸಿಕೊಳ್ಳುವ ಸಂಬಂಧ, ಕಾಲ್ಪನಿಕತೆಯಿಂದ ಮಾತ್ರವಲ್ಲದೆ, ಸ್ವಂತ ಆಲೋಚನೆಯಿಂದಲೂ, ಇಷ್ಟದಿಂದಲೂ ಸ್ಪಷ್ಟವಾದ ರೂಪದೊಡನೆ ವಾಸ್ತವಿಕ ರೂಪವೂ ಮಾಡಿಕೊಂಡಿರಬೇಕು. ವ್ಯಕ್ತಿಯೊಬ್ಬನಿಂದ ಪ್ರೇಮದ ಪ್ರೇರಣೆ ಹೊಂದಿದವನು ಪ್ರೀತಿಸಲು ಅನರ್ಹ ವಾಸ್ತವಿಕತೆಯನ್ನು ಎದುರಿಸಲಾರದ ಪ್ರೀತಿ ನಿರರ್ಥಕವಾದುದು...."

ಅವನು ಬೆಂಕಿಯ ಉಂಡೆಗಳಂಥ ಕಣ್ಣುಗಳಿಂದ ನೋಡುತ್ತಾ "ನೀನು ತುಂಬಾ ತಿಳುವಳಿಕೆಯುಳ್ಳವಳು" ಎಂದ.

"ನನ್ನ ತಿಳುವಳಿಕೆ ಬುದ್ಧಿವಂತಿಕೆಗಳನ್ನು ಹೇಳಿಕೊಳ್ಳಲು ನಾನು ಈ ಕೊಟೇಷನ್ ಹೇಳಿಕೊಳ್ಳಲಿಲ್ಲ. ನೀನೇನು ಆಲೋಚಿಸುತ್ತಿದ್ದಿ ಎಂದು ಕೇಳಿದ್ದಕ್ಕೆ—ನಿಮ್ಮ ನಡುವೆ ಅಗ್ರಿಮೆಂಟ್ ಇದೆಯಾದ್ದರಿಂದ ನಾನು ಆಲೋಚಿಸುತ್ತಿರುವುದನ್ನು ಹೇಳಿದೆ ಅಷ್ಟೆ." ಅವಳು ನಗುತ್ತಾ ಹೇಳಿದಳು "ನಿಮಗೆ ಮಾತ್ರವಲ್ಲ. ತುಂಬಾ ಮಂದಿ ಮಾರ್ಕ್ಸಿಸ್ಟರಿಗೇ ಇದು ಗೊತ್ತಿಲ್ಲ."

"ಟೈಮೆಷ್ಟಾಯಿತು ?"

ಅವಳು ಬರೀಕೈ ನೋಡಿಕೊಂಡು "ನಾನು ವಾಚ್ ಕಟ್ಟಿಕೊಳ್ಳುವುದಿಲ್ಲ" ಎಂದಳು.

ಅವನು ಗಡಿಯಾರಕ್ಕಾಗಿ ರೂಮೆಲ್ಲಾ ಕಣ್ಣಾಡಿಸಿ ಅದಿಲ್ಲದಿದ್ದುದರಿಂದ ಬೇಸರದಿಂದ, "ಇವರಿಗೆ ಬುದ್ಧಿಯಿಲ್ಲ. ರೂಮಿನಲ್ಲಿ ಇವತ್ತು ಗಡಿಯಾರ ವಿಡದಿದ್ದರೆ ನಾವು ಹೇಗೆ ಯಾವುದನ್ನು ಯಾವಾಗ ಎಂದು ಪ್ಲಾನ್ ಮಾಡಿಕೊಳ್ಳಬೇಕು ?" ಎಂದು ಕೇಳಿದ.

ಅವಳು ನಗುವನ್ನು ತಡೆಯುತ್ತಾ, "ಬೆಳಗಿನ ಜಾವ ಮೂರುಗಂಟೆಗೆ ನೀರು ಬರಲು ಪ್ರಾರಂಭವಾಗುತ್ತದೆ. ಐದು ಗಂಟೆಯವರೆವಿಗೂ ನೀರಿನ ಶಬ್ದ ಕೇಳಿಸುತ್ತದೆ, ನೀರು ಮುಗಿದ ಗಂಟೆಗೆ ಆರು ಆಗಿರುತ್ತದೆ" ಎಂದಳು ಸೂಚನೆ ಕೊಡುವವಳಂತೆ,

"ನೋಡಿದೆಯಾ ಭುಜಗಳ ಮೇಲೆ ತಿಳುವಳಿಕೆಯಿರುವ ತಲೆಯಿರಬೇಕು ಎಂದು ಅದಕ್ಕೇ ಹೇಳುವುದು" ಎಂದು, "...ಇಲ್ಲದಿದ್ದರೆ ಕನಿಷ್ಟಪಕ್ಷ ಹೆಂಡತಿಯಾದರೂ ಬುದ್ಧಿವಂತಳಾಗಿರಬೇಕು... ಏತಕ್ಕೆಂದು ಕೇಳುವುದಿಲ್ಲವೇ ?"

"ಏತಕ್ಕೆ ?"

"ಈ ತಲೆ ನಮ್ಮ ಭುಜಗಳ ಮೇಲೆ ಇರುತ್ತದೆ ಆದ್ದರಿಂದ."

ಕಿರಣ್ಮಯಿ ಪೂರ್ತಿಯಾಗಿ ನಕ್ಕಳು. ಅವನು ಲೈಟಾರಿಸಿದ, ಬೆಡ್ ಲೈಟ್ ಬೆಳಕು ಆ ರೂಮಿನಲ್ಲೆಲ್ಲಾ ಹರಡಿಕೊಂಡಿತು ಮಂದವಾಗಿ. ನಿಶ್ಶಬ್ಧದ ಗಂಭೀರತೆ ಆ ಮಸಕಾದ ಬೆಳಕನ್ನು ಸ್ಪರ್ಶಿಸಿ ಹೊರಟುಹೋದ ಆ ಸಮಯದಲ್ಲಿ-

"ಭಾನುವಾರದ ದಿನ ನೀನು ಟೀವಿ ನೋಡ್ತೀಯಾ ?" ಅವಳ ಕೈಯನ್ನು ಚಿವುಟುತ್ತಾ ಕೇಳಿದ. ಸಂಬಂಧವಿಲ್ಲದ ಈ ವಿಷಯದ ಅರ್ಥವಾಗಿದೆ, "ಆಗಾಗ ನೋಡ್ತಿರ್ತೀನಿ ಯಾಕೆ ?" "ಇನ್ನು ದಿಸ್ ಪಾರ್ಟ್ ಆಫ್ ದಿ ಪ್ರೋಗ್ರಾಮ್ ಇಸ್ ಸ್ಪಾನ್ಸರ್ಡ್ ಬಯ್——"

"ಸಾಕು, ಸಾಕು ಇನ್ನೇನು ಹೇಳಬೇಡಿ, ನನಗೆಲ್ಲಾ ಗೊತ್ತು"

"ಏನು ಗೊತ್ತು ನಿನಗೆ ? ಏನೂ ಗೊತ್ತಿಲ್ಲ ಆಡಮ್ ಅಂಡ್ ಈವ್"-

''ಈಗ ಅವರ ಬಗ್ಗೆ ಏನೂ ಅಗತ್ಯವಿಲ್ಲ. ನನಗೆ ಗೊತ್ತು"

"ನೋಡಿದೆಯಾ ಮನಸ್ಸಿನಲ್ಲಿ ದುರುದ್ದೇಶಗಳಿದ್ದರೆ ಎಲ್ಲವೂ ಅಂಥ ಹುದೇ ಆಲೋಚನೆಗಳು ಬರುತ್ತದೆ. ನಿಜವಾಗಿಯೂ ನಾನು ಹೇಳಬೇಕೆಂದಿದ್ದುದು ಬುಕ್ ಕೀಪಿಂಗ್ ಬಗ್ಗೆ."

ಅವಳು ಅನುಮಾನದಿಂದ "ಬುಕ್ ಕೀಪಿಂಗ್‌ಗೂ ಆಡಮ್ ಅಂಡ್ ಈವ್‌ಗೂ ಸಂಬಂಧ ಏನು ?" ಕೇಳಿದಳು.

"ಲೂಜ್ ಲೀಫ್ ಸಿಸ್ಟಮ್ ಕಂಡು ಹಿಡಿದಿದ್ದವರು ಅವರೇ ಅಲ್ಲವಾ ....ಹೇಗೆ,"

ಅವಳು ಚಕ್ಕನೇ ಬ್ಲಾಂಕೆಟ್ ಹೊದ್ದುಕೊಳ್ಳುತ್ತಾ. "ಮೈಗಾಡ್ ಮಾತಿನೊಡನೆ ನೀವೇನು ಮಾಡುತ್ತಿದ್ದೀರಿ ?" ಎಂದು ಗದರಿಸಿದಳು,

"ಎಸ್ಕವೇಷನ್ ಕಪಿಲ್‌ದೇವ್‌ಗೆ ದ್ರೋಹ ಮಾಡುವುದಿಲ್ಲ. ಅವನೇನು ಹೇಳಿದ್ದಾನೆಂದು ನಿನಗೆ ಗೊತ್ತಾ ?"

"ಏನೆಂದು ಹೇಳಿದ್ದಾನೆ ?"

"ಎ ಗರ್ಲ್ಸ್ ಜ್ಯಾಗ್ರಫಿ ರಿವಿಲ್ಸ್ ಹರ್ ಇಸ್ಟರಿ ಎಂದಿದ್ದಾನೆ. ಚರಿತ್ರೆಯನ್ನು ಶೋಧಿಸುವವರನ್ನು ಅಡ್ಡಗಟ್ಟಿದರೆ ಅಂಥಹವರು ಎನ್, ಟಿ, ಆರ್, ಸರ್ಕಾರದಲ್ಲಿ ಅಧಿಕಾರಿಗಳಾಗಿ ಹುಟ್ಟಿ ನಾನಾ ವಿಧವಾದ ಅವಸ್ಥೆಗಳನ್ನು ಅನುಭವಿಸುತ್ತಾರಂತೆ."

"ಕಪಿಲ್‌ದೇವ್ ಎಂದಿಗೂ ಹಾಗೆ ಹೇಳಿರುವುದಿಲ್ಲ. ಇದು ಕೂಡಾ ಪ್ಲೇಬಾಯ್ ಜೋಕೆಂದು ಕಾಣುತ್ತದೆ."

''ಹೇಳಿದರೂ ಕೇಳದಿದ್ದರೆ ಅದು ನಿನ್ನ ಕರ್ಮ "

''ನೀವಿನ್ನೇನೂ ಹೇಳುವ ಅವಶ್ಯಕತೆಯಿಲ್ಲ."

"ಇದೆಲ್ಲಾ ಹೇಳಲು ನನಗೇನೂ ಇಷ್ಟವಿದೆಯೆಂದುಕೊಂಡಿದ್ದೀಯಾ? ಇದೆಲ್ಲಾ ನಮ್ಮ ಸದಾಶಿವಶ್ಶಾಸ ಸಲಹೆ."

''ಅವರ್‍ಯಾರು ?"

"ನನ್ನ ಸ್ನೇಹಿತ. ನಿನ್ನಂಥೆಯೇ ಸ್ವಲ್ಪ ಸೈಕಾಲಜಿ ಓದಿದ್ದಾನೆ. ಸಣ್ಣ ಮಕ್ಕಳಿಗೆ ಚಂದಮಾಮ ಕಥೆಗಳನ್ನು ಹೇಳುತ್ತಾ ಊಟಮಾಡಿಸುವಂತೆ ಹುಡುಗಿಯರಿಗೂ ಮಾತು ಹೇಳುತ್ತಾ ಬುಟ್ಟಿಗೆ ಹಾಕಿಕೊಳ್ಳಬೇಕಂತೆ."

"ನಾನು ಓದಿದ ಐದುವರ್ಷದ ಸೈಕಾಲಜಿಯಲ್ಲಿಯೂ ಇಂಥದೇನೂ ಇರಲಿಲ್ಲವಲ್ಲಾ ?"

"ಅದೇ ಮತ್ತೆ ನಮಗೂ ನಿಮಗೂ ವ್ಯತ್ಯಾಸ. ನೀವೇನೋ ಬಾಯಿ ಪಾಠ ಮಾಡುವಂತೆ ಓದುತ್ತೀರಾಗಲೀ ಅದರಲ್ಲಿಯ ಸಾರಾಂಶವನ್ನು ಡೀಪ್ ಆಗಿ ಸ್ಟಡಿ ಮಾಡುವುದಿಲ್ಲ."

"ಇಷ್ಟಕ್ಕೂ ನಿಮ್ಮ ಸದಾಶಿವಶಾಸ್ತ್ರಿ ಯಾವ ಯೂನಿವರ್ಸಿಟಿ ?"

ರಾಯಣ್ಣ ಗಂಭೀರವಾಗಿ "ಸರ್ವಜನೀಯ ಶಾಸ್ತ್ರವನ್ನು ಓದಲು ಯಾವ ಯೂನಿವರ್ಸಿಟಿಯ ಅವಶ್ಯಕತೆಯಿಲ್ಲ ಕಿರಣ್ಮಯಿ. ವಿಶ್ವವ್ಯಾಪ್ತಿಯಾದ ಪ್ರಕೃತಿಯೇ ಸಾಕು. ಕೋಗಿಲೆಗೆ ಹಾಡನ್ನು ಯಾರು ಕಲಿಸಿದರು ? ಹೊಡೆಯುವ ಬ್ಯಾಟಿಗೆ ತಿರುಗುತ್ತಾ ಬರುವುದು ಸ್ಪಿನ್ ಎಂದು ಯಾರು ತಿಳಿಸುತ್ತಾರೆ ? ದರ್ಬಾರಾಸಿಂಗ್ ಅವನಿಗೆ ಸಾಯೋ ಹಾಗೆ ಹೊಡೀದಿದ್ದದ್ದರೆ ನಮ್ಮ ಸದಾಶಿವಶಾಸ್ತ್ರಿ ಇನ್ನೂ ಇಂಥಹ ಜೀವನ ಸತ್ಯಗಳನ್ನು ತುಂಬಾ ಹೇಳುತ್ತಿದ್ದ."

"ದರ್ಬಾರಾಸಿಂಗ್ ? ಮತ್ತೆ ಯಾರವನ್ನು ?"

"ನನ್ನಂತೆಯೇ ಮದುವೆಗೆ ಮುಂಚೆ ಶಾಸ್ತ್ರಿಯ ಸಲಹೆ ಪಡೆದವ ಪಾಪ! ಆದರೆ ಆ ಸಲಹೆ ಸರಿಯಾಗಿ ಫಲಿಸಲಿಲ್ಲ."

ಕಿರಣ್ಮಯಿ ಆಸಕ್ತಿಯಿಂದ "ಏನು ಸಲಹೆಕೊಟ್ಟ ಆ ಮನುಷ್ಯ?" ಎಂದು ಕೇಳಿದಳು.

ರಾಯಣ್ಣ ಗಾಬರಿಯಿಂದ, "ಬೇಡ ಕಿರಣ್ಮಯಿ. ಅಂಥಹ ಸಲಹೆಗಳನ್ನು ಕನಸಿನಲ್ಲಿಯೂ ತಿಳಿದುಕೊಳ್ಳಬೇಕೆಂದು ಯೋಚಿಸಬೇಡ." ಅಂದ.

"ಇಷ್ಟಕ್ಕೂ ಅಂಥಹ ಘೋರವಾದದ್ದೇನು ?" ಹಠಹಿಡಿದವಳಂತೆ ಕೇಳಿದಳು ಅತ್ಯಂತ ಉತ್ಸುಕಳಾಗಿ.

"ಹೇಳದಿದ್ದರೆ ಆಗುವುದೇ ಇಲ್ಲವೇ ?"

"ಉಹ್ಞೂ."

"ಸರಿ ಹಾಗಾದರ ಹೇಳ್ತೀನಿ ಕೇಳು"ಹೇಳಲು ಪ್ರಾರಂಭಿಸಿದ"ಯಾವಾಗ ನಿನಗೆ ಚುಂಬಿಸಬೇಕೆನಿಸುತ್ತದೋ ಆಗ ನಿನ್ನ ಹೆಂಡತಿ ಕನಸಿನಲ್ಲಿಯೂ ಊಹಿಸಿರದಿದ್ದಾಗ, ಹಠಾತ್ತನೆ ಹಿಂದಿನಿಂದ ಪ್ರವೇಶಿಸಿ ಆಗವಳನ್ನು ಚುಂಬಿಸು. ಬೇಡವೆಂದರೂ ಬಿಡಬೇಡ, ತಳ್ಳಿದರೂ ಬಿಡಬೇಡ, ಮನಸ್ಸಿನಲ್ಲಿ ಇಷ್ಟ ವಿದ್ದರೂ ಹೆಂಗಸರು ಹೀಗೆ ಬಿಂಕ ತೋರಿಸುತ್ತಾರೆಂದು ತಿಳಿದುಕೋ. ಒಂದನ್ನು ಮಾತ್ರ ನೆನಪಿನಲ್ಲಿಟ್ಟುಕೊಂಡಿರು, ಇಂಥಹ ಥ್ರಿಲ್‌ನಿಂದಾಗೇ ಹೆಂಡತಿಯರು ಗಂಡಂದಿರಿಗೆ ಹತ್ತಿರವಾಗುವುದು" ಎಂದು ಸಲಹೆ ಕೊಟ್ಟ. ಮದುವೆ ಆದ ಮೊದಲನೇ ದಿನವೇ ನಮ್ಮ ದರ್ಬಾರ್‌ಸಿಂಗ್ ಈ ಸಲಹೆ ಯನ್ನು ಪಾಲಿಸಿವೆ."

"ಇದೇನೂ ಅಂಥಹ ಸಾಯುವಂತೆ ಹೊಡೆಸಿಕೊಳ್ಳುವ ಕೆಲಸವೇ ?"

"ಆಗದೇ ಇರಬಹುದು, ಆದರೆ ನಮ್ಮವನಿಗೆ 'ಆಗ' ಎಂಬುದರ ಬದಲು 'ಅಲ್ಲಿ' ಎಂದು ಕೇಳಿಸಿತ್ತು ಅವನ ಸಲಹೆಯಲ್ಲಿ."

"ಏನು ?"

"ಹೇಳಿದೆನಲ್ಲಾ"

ಕಿರಣ್ಮಯಿಗೆ ಒಂದು ಕ್ಷಣ ಅರ್ಥವಾಗಲಿಲ್ಲ, ಅವನು ಹೇಳಿದಂತೆ ಅನ್ವಯಿಸಿ ನೋಡಿಕೊಂಡಳು. ಅರ್ಥವಾಗುತ್ತಿದ್ದಂತೆಯೇ ಅವಳ ಮುಖ ನಗುವಿನಿಂದ ಕೆಂಪಗಾಯಿತು. ಆ ನಗುವನ್ನು ತಡೆದುಕೊಳ್ಳಲು ಅವಳು ಪಕ್ಕಕ್ಕೆ ತಿರುಗಿ ತಲೆದಿಂಬಿನಲ್ಲ ಮುಖ ಹುದುಗಿಸಿಕೊಂಡು ನಗಲು ಪ್ರಾರಂಭಿಸಿ ದಳು,

"ಪಾಪ... ಮದುವೆ ಆದ ಮೂರು ತಿಂಗಳಿಗೇ ಅವನ ಹೆಂಡತಿ ವಿಚ್ಛೇದನದ ಇಷ್ಟ ತೋರಿದಳು. ಆನಂತರ ಯಾವಾಗಲೋ ಶಾಸ್ತ್ರಿ ಅವನಿಗೆ ಸಿಕ್ಕಿದಾಗ ಒದೆ ತಿಂದ. ಅಂದಿನಿಂದ ಸಲಹೆಗಳನ್ನು ಕೊಡುವುದು ನಿಲ್ಲಿಸಿಬಿಟ್ಟ—ಅದ್ದರಿಂದ ನಾನೀಗ ಹೇಳಬೇಕೆಂದಿರುವುದೇನೆಂದರೆ ಮಾತಿನಲ್ಲೇ ನಮ್ಮ ಕೆಲಸಗಳನ್ನು ಪೂರ್ತಿ ಮಾಡಿಕೊಳ್ಳಬೇಕೆಂದು. ಬ್ಲಾಂಕೆಟ್ ಮೇಲೆ ಇಲ್ಲವೆನ್ನುವ ವಿಷಯವೂ ತಿಳಿಯದಂತೆ ನಗಿಸಬೇಕು... "

ಅವಳು ತನ್ನಡೆಗೇ ನೋಡಿಕೊಂಡು ಕಿಚಾರನೆ ಕಿರುಚಿದಳು.

## 23 : 50 : 10 Hrs

"ಈ ಒಂದೂವರೆ ಗಂಟೆಯಲ್ಲಿ ನಾವಿಬ್ಬರೂ ಏನಿಲ್ಲಂದರೂ ಆರು ಬಾರಿಯಾದರೂ ಕಿರಿಚಿರುತ್ತೇವೆ. ಹೊರಗೆ ಕೇಳುವವರಿಗೆ ಅದು ಅಷ್ಟೊಂದು ಶುಭಪ್ರದದಾಗಿ ಕಾಣಿಸುವುದಿಲ್ಲ" ಎಂದ.

"ಅದಕ್ಕೆ ಹುಚ್ಚುಚ್ಚಾಗಿ ಜೋಕುಗಳನ್ನು ಮಾಡದೇ ಮಾಮೂಲಾಗಿ ಮಾತನಾಡಿ"

"ಮಾಮೂಲಾಗಿ ಅಂದರೆ ?"

"ನೋಡಿ ನೀವಂದಂತೆ ನಾವಿಬ್ಬರೂ ಕಲೆತು ಪೂರ್ತಿಯಾಗಿ ಎರಡು ಗಂಟೆಗಳೂ ಆಗಿಲ್ಲ. ಇನ್ನೂ ಸಾಕಷ್ಟು ಜೀವನ ಮುಂದೆ ಇದೆ. ಆತುರ ವೇಕೆ ? ಏನಾದರೂ ಮಾಮಲಾದ ವಿಷಯ ಹೇಳಿ."

"ಅದೇ ಕೇಳುತ್ತಿದ್ದೇನೆ. ಯಾವುದರ ಬಗ್ಗೆ ?"

"ನಿಮ್ಮ ಬಗ್ಗೆ ಹೇಳಿ."

"ಸೈಕಾಲಜಿ ಸ್ಟೂಡೆಂಟ್ ನೀನು. ಇಷ್ಟೊತ್ತಿಗೆ ನನ್ನ ಸಾಕಷ್ಟು ತಿಳಿದುಕೊಂಡಿರುತ್ತಿ. ಪ್ರತಿಯೊಂದನ್ನು ಹಗುರವಾಗಿ ತೆಗೆದ ಕೊಳ್ಳುವ ವ್ಯಕ್ತಿ. ಅದಕ್ಕಿಂತಲೂ ಹೆಚ್ಚಿಗೆ ಏನೂ ಹೇಳಲಾರೆ."

ಆಗೋ. ಹಾಗೆ ಹತ್ತಿರ ಬರಬೇಡಿ--ಒಳ್ಳೆಯ ವಿಷಯಗಳೇನಾದರೂ ಇದ್ದರೆ ಹೇಳಿ ನಿಮ್ಮ ತಾಯಿ ಬಗ್ಗೆ. ತಂದೆ ಬಗ್ಗೆ---ನಾವೆಲ್ಲಿರೋಣ-ನಮ್ಮ ಭವಿಷ್ಯದ ಪ್ಲಾನ್ ಏನು? ಇಂಥಹವು ಎಷ್ಟೋ ಮಾತನಾಡಿಕೊಳ್ಳಲು ಇರುತ್ತದೆ. ಒಬ್ಬರನ್ನೊಬ್ಬರು ಅರ್ಥಮಾಡಿಕೊಳ್ಳಬಹುದು ಅಲ್ಲವೇ?"

"ಮೊದಲನೇ ರಾತ್ರಿಯೇ ಆದೆಲ್ಲಾ ಯಾಕೆ?"

"ಮೊದಲನೇ ರಾತ್ರಿಯೇ ಅವೆಲ್ಲವನ್ನೂ ಅರ್ಥಮಾಡಿಕೊಂಡರೆ-ನಂತರ ಚೆನ್ನಾಗಿರುತ್ತದೆ."

"--'ನಂತರ' ಅಂದರೆ ಈ ದಿನವೇ?" ಅನುಮಾನದಿಂದ ಕೇಳಿದ.

"ಈ ದಿನವೇ"

"ನಲ್ಲಿಯಲ್ಲಿ ನೀರು ಬರುವುದಕ್ಕೆ ಮುಂಚೆಯೇ?"

ಅವಳು ನಗುವನ್ನು ತಡೆದುಕೊಂಡು--"ಅದು ನಿಂತುಹೋಗುವಷ್ಟರೊಳಗಾಗಿ" ಎಂದಳು.

"ಸರಿ--ನಾನು ನಿನಗೆ ಹೇಗೆಬೇಕೋ ಹಾಗೆಯೇ ಮಾತನಾಡುತ್ತೇನೆ. ಆದರೆ ಒಂದು ಕಂಡೀಷನ್. ಇದೆಲ್ಲಾ ಮುಗಿದನಂತರ ನೀನು ನನ್ನ ಬಗ್ಗೆ ಏನೆಂದುಕೊಳ್ಳುದ್ದೀಯೋ, ಒಬ್ಬ ಸೈಕಾಲಜೀ ಸ್ಟೂಡೆಂಟಾಗಿ ನಿನ್ನ ಅಭಿಪ್ರಾಯವನ್ನು ತಿಳಿಸಬೇಕು. ಕೇವಲ ಮೆಚ್ಚಿಗೆಗಾಗಿ ಮಾತ್ರ ಅಲ್ಲ, ಸಿನ್ಸಿಯರ್ ಆಗಿ ಹೇಳಬೇಕು."

ಅವಳು ಮುಜುಗರದಿಂದ ನೋಡುತ್ತಾ "ಮೊದಲ ಎರಡು ಗಂಟೆಯಲ್ಲಿಯೇ ಏನು ತಿಳಿಯುತ್ತದೆ?" ಎಂದಳು.

"ಮೊದಲ ಇಂಪ್ರೆಷನ್ ಬೆಸ್ಟ್ ಎನ್ನುತ್ತಾರೆ."

"ಜೀವನಪರ್ಯಂತ ಕಲೆತು ಬಾಳುವ ಗಂಡ-ಹೆಂಡಿರ ವಿಷಯದಲ್ಲಲ್ಲ"

ಅದಕ್ಕೆ--ಒಬ್ಬ ಹೆಂಡತಿಯಾಗಿ ಅಲ್ಲದೇ ಒಬ್ಬ ಸೈಕಾಲಜೀ ಸ್ಟೂಡೆಂಟಾಗಿ ಹೇಳು. ಅಂದೆ. ನಿನ್ನ ತಿಳುವಳಿಕೆ. ಎಸ್ಟಿಮೇಟ್‌ಗಳು ಎಷ್ಟು ನಿಖರವಾಗಿರುತ್ತವೆಯೇ ನೋಡೋಣ." ನಗುತ್ತಾ ಹೇಳಿದ.

"ಸರಿ ಹೇಳುತ್ತೇನೆ ನನಗೆ ಸಾಧ್ಯವಾದಂತೆ."

ಅವಳು ಒಪ್ಪಿಕೊಂಡ ನಂತರ ಅವನು ತನ್ನ ಭವಿಷ್ಯದ ಬಗ್ಗೆ ವಿವರಿಸಿದ. ಭಾರತದ ಪರ ಕ್ರಿಕೆಟ್ಟಿನಲ್ಲಿ ಆಡಲು ತಾನು ಮಾಡುತ್ತಿರುವ ಕೃಷಿ. ಅಲ್ಲಿ ನಡೆಯುವ ರಾಜಕೀಯಗಳು. ಎಲ್ಲವನ್ನೂ ವಿವರವಾಗಿ ಹೇಳಿದ. ಆವಳು ಶ್ರದ್ಧೆಯಿಂದ ಕೇಳಿದಳು. ಇವನು ಬೇರೆ ರಾಯಣ್ಣ. ಡಿಫರೆಂಟ್... ಒಂದು ರಂಗದಲ್ಲಿ ಮೇಲೆ ಬರಬೇಕೆಂದರೆ ಮೇಲೆ ಎಷ್ಟೇ ಮಾಮೂಲಾ ಕಂಡರೂ, ತಪ್ಪದೇ ಕೃಷಿ ಮಾಡಬೇಕು. ಮಾಮೂಲು ಕೃಷಿ ಅಲ್ಲ. ಅದರಲ್ಲೂ ಅವನು ಸ್ಪಿನ್ನರ್. ಒಳ್ಳೆ ಬ್ಯಾಟ್ಸ್‌ಮನ್ನೇನೋ ಸರಿ. ಆದರೆ ಲೆಗ್‌ಸ್ಪಿನ್‌ಗೆ ತುಂಬಾ ಕಾಂಪಿಟೇಷನ್ ಇದೆ. ಸ್ಪಿನ್ನರ್ ಅಂದರೇ ಮೊದಲು ಸ್ಥಳ ಸಿಗುವುದು ಕಷ್ಟ. ರವಿಶಾಸ್ತ್ರಿ, ಮಣಿಂದರ್ ಸಿಂಗ್, ಸ್ವಲ್ಪ ಹಿಂದೆಬಿದ್ದರೂ, ಮತ್ತೆ ತಪ್ಪದೇ ಶಿವರಾಮಕೃಷ್ಣನ್, ಶಿವಲಾಲ್‌ಯಾದವ್ ಮೇಲೆ ಬರುತ್ತಾರೆ/ಇಷ್ಟು ಜನರನ್ನು ತಾಟಿ ಮೇಲೆ ಬರುವುದೆಂದರೆ ಅದರಲ್ಲಿಯೂ ಆಂಧ್ರದ ಕಡೆ ಯಿಂದ ಆಡುವವರಿಗೆ ಸಿಗುವುದು ಕಷ್ಟವೇ...

"ಏನೇ ಸಾಧಿಸಿದರೂ ಇನ್ನೊಂದೆರಡು ವರ್ಷಗಳಲ್ಲಿ ಸಾಧಿಸಬೇಕು. ವಯಸ್ಸು ಸ್ವಲ್ಪ ಹೆಚ್ಚಾದರೂ ಛಾನ್ಸ್ ಕಡಿಮೆಯೇ" ಎಂದ.

"ಪ್ರತಿದಿನವೂ ಪ್ರಾಕ್ಟೀಸ್ ಮಾಡುತ್ತೀರಾ ?"

"ಮೊದಲು ಮಾಡುತ್ತಿದ್ದೆ. ಬೆಳಗಿನ ಜಾವವೇ ಎದ್ದು ಒಂದೆರಡು ಗಂಟೆ ಓಡುತ್ತಿದ್ದೆ. ಬಿಸಿಲು ಮಳೆ ಎನ್ನದೆ ಪ್ರಾಕ್ಟೀಸ್ ಮಾಡಿದ್ದೀನಿ. ಆದರೆ ಈಗ ನಾನು ಕೆಲಸ ಮಾಡುತ್ತಿರುವುದು ಒಂದು ಸಣ್ಣ ಪ್ರೈವೇಟ್ ಕಂಪನಿ, ಆಂಧ್ರದಲ್ಲಿ ರಣಜೀ ಆಟಗಾರನಿಗೆ ಅಷ್ಟೊಂದು ಪ್ರಾಮುಖ್ಯತೆ ಇಲ್ಲ.. ನನ್ನ ಶಕ್ತಿಯನ್ನೆಲ್ಲಾ ಆ ಕಂಪನಿಯೇ ಹೀರಿಬಿಡುತ್ತದೆ."

"ಆದರೆ ನಿಮಗೆ ಮಧ್ಯಾಹ್ನದ ಮೇಲೆ ಪ್ರಾಕ್ಟೀಸ್ ಮಾಡಿಕೊಳ್ಳಲು ಅವಕಾಶ ಕೊಡುವುದಿಲ್ಲವೇ ?"

"ಅದು ಬ್ಯಾಂಕುಗಳಲ್ಲಿ... ಅಲ್ಲಾದರೆ ಲೀಗ್ ಮಟ್ಟದಲ್ಲಿ ಆಡುವ ಆಟ ಗಾರನೂ ಪ್ರಾಕ್ಟೀಸ್ ಹೆಸರನ್ನು ಹೇಳಿ ಮಧ್ಯಾಹ್ನವೇ ಹೊರಟು ಹೋಗುತ್ತಾನೆ."

"ನಿಮಗೆ ರಜಾ ಸಿಗುತ್ತದೆಯೂ ?"

"ಕೊಡುತ್ತಾರೆ, ಆದರೆ ಅಂದು ಸಂಬಳ ಇರುವುದಿಲ್ಲ...."

"ನೀವೊಂದೆರಡು ವರ್ಷ ರಜಾ ಹಾಕಿಬಿಡಿ."

"ಹಾಕಿ ?" ವಿಸ್ಮಯದಿಂದ ಕೇಳಿದೆ.

"ಪ್ರಾಕ್ಟೀಸ್ ಮಾಡಿ. ಪ್ರಾಕ್ಟೀಸ್-ಪ್ರಾಕ್ಟೀಸ್. ಅಷ್ಟೇ....ನೋಡೋಣ ನೀವು ಹೇಗೆ ಟೆಸ್ಟ್ ಪ್ಲೇಯರ್ ಆಗುವುದಿಲ್ಲವೋ ಅಂತ." ದೃಢವಾಗಿ ಹೇಳಿದಳು.

"ಆದರೆ ಸಂಬಳವಿಲ್ಲದೇ...."

"ನಿಮ್ಮ ಅಭ್ಯಂತರವಿಲ್ಲದಿದ್ದರೆ ನಾನು ಕೆಲಸಕ್ಕೆ ಸೇರಿಕೊಂಡು...

ಅವನು ಕಣ್ರೆಪ್ಪೆ ಹೊಡೆಯದೆ ಅವಳೆಡೆ ನೋಡತೊಡಗಿದ- ಅವಳೇ ಮುಂದುವರಿಸಿದಳು.

"ನಮಗಿರುವ ಅನುಕೂಲಗಳು — ಐಮೊನ್ ಜಾತಿ ಮತ್ತು ನನಗಿರುವ ವಿದ್ಯಾರ್ಹತೆಗೆ ಯಾವುದೋ ಒಂದು ಕೆಲಸ ಸಿಕ್ಕೇ ಸಿಗುತ್ತದೆ. ಒಂದು ವೇಳೆ ಕಡಿಮೆ ಸಂಬಳವಾದರೂ ಹೇಗೋ ಅಡ್ಜಸ್ಟ್ ಮಾಡಿ ಕೊಳ್ಳೋಣ." ಅವಳ ಕಂಠದಲ್ಲಿದ್ದ ವಿಶ್ವಾಸ. ಭವಿಷ್ಯತ್ತಿನ ಬಗ್ಗೆ ಆಶಾಧ್ವನಿ ಮೊಳಗಿದಂತಾಯಿತು.

"ಇದು ಮತ್ತೆ ಆಕಾಶಕ್ಕೆ ಏಣಿ ಹಾಕಿದಂತಾಗುತ್ತದೇನೋ--"

"ಅದು ಹಳೆಯ ಮಾತು. ಹೊಸದೆಂದರೆ 'ಕೂದಲನ್ನು ಕಟ್ಟಿ ಬೆಟ್ಟ ಎಳೆದಂತೆ' ಎಂದು. ಹೋದರೆ ಕೂದಲು ಹೋಗುತ್ತದೆ ಅಷ್ಟೇ ತಾನೇ...ಈಗಿನ ಕಾಲದಲ್ಲಿ ಪ್ರತಿಯೊಬ್ಬರೂ ಈ ಹೊಸ ಮಾತನ್ನು ಪಾಲಿಸ ಬೇಕು. ಏನೋ ಒಂದನ್ನು ಮಾಡದೇ ನಮ್ಮ ಸುತ್ತಲಿನ ಪರಿಸ್ಥಿತಿಯನ್ನು ಬೈಯ್ಯುತ್ತಾ ಕುಳಿತುಕೊಳ್ಳುವುದರಲ್ಲಿ ಅರ್ಥವಿಲ್ಲ. ನೀವಿನ್ನು ಉಳಿದ ಎಲ್ಲಾ ವಿಷಯಗಳನ್ನೂ ಮರೆತುಬಿಡಿ. ಕ್ರಿಕೆಟ್ ಮೇಲೆ ಮಾತ್ರ ಏಕಾಗ್ರತೆ ಇರಲಿ.

ಬಹಳ ದಿನಗಳ ಹಿಂದೆ ನಾನೊಂದು ಸಿನೆಮಾ ನೋಡಿದ್ದೆ. ಹತ್ತು ಮೈಲಿಯ ಓಡುವ ಸ್ಪರ್ಧೆಯಲ್ಲಿ ಪಾಲ್ಗೊಳ್ಳುವ ಮುಂಚೆ ಅವನು ಪಟ್ಟ

ಪಾಡು ...ಸಮುದ್ರದ ಮರಳಿನಲ್ಲಿ ಓಡುತ್ತಾ ಪ್ರಾಕ್ಟೀಸ್ ಮಾಡಿದ್ದ. ಸುಸ್ತಾದರೂ ಸಾಧನೆ ಬಿಡುವುದಿಲ್ಲ. ಪಾದಗಳೆಲ್ಲಾ ಒಡೆದು ರಕ್ತಬರುತ್ತದೆ. ಕೊನೆಗೆ ಕಾಲುಗಳು, ಯಂತ್ರಗಳಾಗುತ್ತವೆ. ನೀವೂ ಅಷ್ಟೇ ಕಷ್ಟ ಪಡಿ. ಕೊನೆಗೆ ಸೆಲೆಕ್ಟ್ ಆಗೆ ತೀರುತ್ತೀರಿ. ಮತ್ತೆ ಕೆಲಸಕ್ಕೆ ಸೇರಿಕೊಳ್ಳಿ. ನಾನು ನನ್ನ ಅಡಿಗೆ ಮನೆ ಪಾತ್ರೆಗಳೊಡನೆ ಅಡಿಗೆ ಮನೆ ಸೇರಿಕೊಳ್ಳುತ್ತೇನೆ ಆಗ—" ಹೇಳುತ್ತಾ ಅವಳು ಒಮ್ಮೆಗೆ ನಿಲ್ಲಿಸಿಬಿಟ್ಟಳು. ಆಗಲೇ ಅವನ ಕಣ್ಣುಗಳ ತುಂಬಾ ನೀರು ತುಂಬಿತ್ತು. ಅವಳ ಮುಖವನ್ನು ತನ್ನ ಎರಡೂ ಕೈಗಳಿಂದ ಹತ್ತಿರಕ್ಕೆ ಎಳೆದುಕೊಂಡು ಕಣ್ಣುಗಳನ್ನು ಅವಳ ಕೆನ್ನೆಗಳಿಗೆ ತಗುಲಿಸಿದ. ಅದೆಷ್ಟೋ ತೀವ್ರವಾಗಿತ್ತು ಅವನ ಭಾವನೆಗಳು. ಬೆಲೆ ಬಾಳುವ ನಿಧಿ ಸಿಕ್ಕಂತೆ ಕೂಡಲೇ ಅವಳ ಕೆನ್ನೆಗಳಿಗೆ ಮುತ್ತಿನ ಮಳೆಗರೆದ. ನಂತರ ಅವಳ ಕತ್ತಿನ ಬಳಿ ತನ್ನ ಮುಖವನ್ನು ಮುಚ್ಚಿಕೊಂಡು ಇದ್ದು ಬಿಡೋಣವೆಂದು ನಿರ್ಧರಿಸಿ ಹಾಗೆಯೇ ಮಾಡಿದ. ಅವಳು ಕೂಡಾ ಕದಲುವ ಪ್ರಯತ್ನವನ್ನೇ ಮಾಡಲಿಲ್ಲ.

ಮೊದಲನೇ ದಿನ ಗಂಡನಿಂದ ಅವಳು ಆಶಿಸಿದ್ದೂ ಅದನ್ನೇ ಕೋರಿಕೆ ಇಲ್ಲದ ಚುಂಬನ ! ಮಲ್ಲಿಗೆ ಹೂವು ಮುಚ್ಚಿದ ಬಾಗಿಲು, ಬಿಳಿಯ ಹಾಸಿಗೆ.

ಎತ್ತುಗಳೂ, ಕತ್ತೆಗಳೂ, ಪಕ್ಷಿಗಳೂ, ಹಾವುಗಳೂ—ಎಲ್ಲ ಜೀವಿಗಳೂ ಇಂಥಹ ಸಂದರ್ಭಗಳಲ್ಲಿ ಅಷ್ಟೇ ಸಂತೋಷಿಸುತ್ತವೆ. ಅಂಥಹ ಕೋರಿಕೆ ಇಷ್ಟೊಂದು ದೊಡ್ಡ ರಂಗಸ್ಥಳವೇ ಬೇಕಾಗಿಲ್ಲ, ಆದರೆ ಅವೆಲ್ಲಕ್ಕಿಂತಲೂ ದೊಡ್ಡ ಅರ್ಹತೆಗಳು ಕೆಲವು ಮನುಷ್ಯನಿಗಿದೆ.

ಕಮ್ಯೂನಿಕೇಷನ್.

ಫೀಲಿಂಗ್.

ಸ್ಪಂದನ.

ಇವೆಲ್ಲವನ್ನೂ ಬಿಟ್ಟು—ಬಾಗಿಲುಗಳನ್ನು ತಟ್ಟುತ್ತಿರುವ ಶಬ್ದ ಕೇಳಿಸುತ್ತಿದ್ದರೂ ಅದೇ ಒಂದು ದೊಡ್ಡ ಅಪಶಾಕುನದಂತೆ —ಬಾಗಿಲನ್ನು ತೆಗೆಯಲು ಇಷ್ಟಪಡಲಿಲ್ಲ. ಆ ಕೊನೆಯ ಚುಂಬನ ಅವರಿಬ್ಬರೂ ಎಷ್ಟೋ ಹತ್ತಿರವಾದ ಭಾವನೆಯನ್ನು ಉಂಟುಮಾಡಿತು.

ವಾಡ್ಡೂ ಯುಸೇ ಅಪ್ಪರ್ ಯುಸೇ ಹಲ್ಲೋ—ಕಿರಣ್ಮಯಿಾ ?

## 23 : 52 : 36 Hrs

ಹೊರಗಿನವರು ಏನು ಮಾತನಾಡಿಕೊಳ್ಳುತ್ತಿದ್ದರೋ ಹತ್ತು ನಿಮಿಷ ಕೇಳಿ—ನಾನೇನು ಮಾತಾಡಬೇಕೆಂದಿದ್ದೇನೋ ಒಂದು ನಿಮಿಷದಲ್ಲಿ ಹೇಳುತ್ತೇನೆ.

ಇಲ್ಲಿ ಈ ಸಂಭಾಷಣೆ ನಡೆಯುತ್ತಿರುವ ಸಮಯಕ್ಕೆ ಸರಿಯಾಗಿ, ಒಂದು ದಿನ ಮೊದಲು, ಸುಮಾರು ಸಾವಿರ ಕಿಲೋಮೀಟರ್‌ಗಳ ದೂರದಲ್ಲಿ ಕ್ರಿಕೆಟ್ ಮಂಡಲಿಯ ಆಯ್ಕೆ ಸಮಿತಿಯ ಮೀಟಿಂಗಿನಲ್ಲಿ ಭಾರತದ ಕಡೆಯ ತಂಡವನ್ನು ಆಯ್ಕೆ ಮಾಡುವ ವಿಷಯದಲ್ಲಿ ಚರ್ಚೆ ನಡೆಯುತ್ತಿತ್ತು. ಚಂದೂ ಬೋರ್ಡೆ ತನ್ನ ವಾದವನ್ನು ಮಂಡಿಸುತ್ತಿದ್ದಾರೆ,

"ಸುನಿಲ್ ಗವಾಸ್ಕರ್....ನಿಜವೇ ಕ್ರಿಕೆಟ್ ಪ್ರಪಂಚದ ಚರಿತ್ರೆಯಲ್ಲಿಯೇ ಆತನೊಬ್ಬ ಮೇಲುಗಲ್ಲಾಗಿ ನಿಲ್ಲುತ್ತಾನೆ. ಆದರೆ ಆತನ ವಯಸ್ಸು ನಲವತ್ತಕ್ಕೆ ಸಮೀಪಿಸುತ್ತಿದೆ. ನಾವು ಈಗಿನಿಂದಲೇ ಹೊಸ ತರುಣರಿಗೆ ಪ್ರೋತ್ಸಾಹಿಸದಿದ್ದರೆ, ಇನ್ನೊಂದು ನಾಲ್ಕೈದು ವರ್ಷಗಳ ನಂತರ ನಿಂತು ಆಡುವ ಅನುಭವವಿರುವವರು ನಮಗಾರೂ ಇರುವುದಿಲ್ಲ" ಚಂದೂ ನಿಲ್ಲಿಸಿ ಎಲ್ಲರೆಡೆಗೂ ಒಮ್ಮೆ ನೋಡಿ ಮತ್ತೆ ಮುಂದುವರೆಸಿದರು—

" ಕಪಿಲ್‌ಗೆ ಜೊತೆಯಾಗಿ ಒಳ್ಳೆಯ ಬೌಲರ್ ಇಲ್ಲವೆಂದೂ, ಅದೇ ರೀತಿ ಗವಾಸ್ಕರ್‌ಗೆ ಜೊತೆಯಾಗಿ ಒಳ್ಳೆಯ ಓಪನರ್ ಇಲ್ಲವೆಂದೂ ಎಲ್ಲರೂ ಅಂದುಕೊಳ್ಳುತ್ತಿದ್ದಾರೆ. ಆದಕ್ಕಾಗೇ ರಮಣ್ ಲಂಬಾ, ರಾಜ್‌ಕುಲಕರ್ಣಿಗಳನ್ನು ಏತಕ್ಕೆ ಪ್ರೋತ್ಸಾಹಿಸಬಾರದು ?"

ಕ್ರಿಕೆಟ್ ನಿಯಂತ್ರಣ ಮಂಡಲಿಯ ಅಧ್ಯಕ್ಷರಾದ ಶ್ರೀರಾಮನ್ ಕೋಪ ಮಿಶ್ರಿತ ವ್ಯಂಗ್ಯದೊಡನೆ, "ಸಧ್ಯದ ಗೆಲುವಿಗೆ ಸರಿಯಾದ ಟೀಮನ್ನು ಆಯ್ಕೆ ಮಾಡಿ ಎಂದಿದ್ದೇವಾಗಲೀ ಭವಿಷ್ಯತ್ತಿನ ಬಗ್ಗೆ ನಮ್ಮನ್ನು ಪ್ರಯೋಗ ಮಾಡಿ ಎಂದು ಹೇಳಲಿಲ್ಲ—" ಎಂದರು,

"ಆಯ್ಕೆ ಮಾಡುವಾಗ ಭವಿಷ್ಯತ್ತನ್ನೂ ಮನಸ್ಸಿನಲ್ಲಿಟ್ಟುಕೊಳ್ಳಬೇಕು"

"ಏತಕ್ಕಾಗಿ ? ಚೆನ್ನಾಗಿ ಆಡುವವರನ್ನೇ ತೆಗೆದುಹಾಕುತ್ತೀರಾ ? ಎಂಥಹ ಪರಿಸ್ಥಿತಿಯಲ್ಲಿಯೂ ಗವಾಸ್ಕರ್ ಇರಲೇಬೇಕು."

"ಐದು ದಿನಗಳ ಪಂದ್ಯದಲ್ಲಿ ಹೇಗೂ ಆತನಿದ್ದಾನೆ. ಒಂದು ದಿನ ಪಂದ್ಯದಲ್ಲಿ ಆತನ ರಿಕಾರ್ಡ್ ಚೆನ್ನಾಗಿಲ್ಲ. ಆದ್ದರಿಂದ ಅದರಲ್ಲಿ ತೆಗೆದರೆ ತಪ್ಪೇನು ?"

"ಅಷ್ಟು ಅನುಭವವಿರುವ ಪ್ಲೇಯರ್"

"ಅನುಭವ ಅನುಭವ ಅನುಭವ ! ನಿಜಕ್ಕೂ ನಿಮಗೆ ಅನುಭವವೇ ಬೇಕೆಂದರೆ ಗವಾಸ್ಕರ್ ಜೊತೆಗೆ ಅಮರನಾಥನನ್ನೂ ತೆಗೆದುಕೊಳ್ಳಿ ! ಆತನ ಬಗ್ಗೆ ಏಕೆ ಮಾತನಾಡುತ್ತಿಲ್ಲ !"

"ಅಮರನಾಥ್‌ಗೂ, ಗವಾಸ್ಕರ್‌ಗೂ ಎಲ್ಲಿಯ ಹೋಲಿಕೆ ?"

"ಒಂದು ದಿನ ಪಂದ್ಯಗಳಿಗೆ ಸಂಬಂಧಿಸಿದಂತೆ, ಸೂಕ್ಷ್ಮವಾಗಿ ಗಮನಿಸಿದರೆ ಇಬರೂ ಒಂದೇ. ಹಾಗೆ ನೋಡಿದರೆ ಅಮರ್‌ನಾಥ್‌ನೇ ಪರವಾಗಿಲ್ಲ."

ಶ್ರೀರಾಮನ್‌ರಿಗೆ ಕೂಡಲೇ ಸಮಾಧಾನವಾಗಲಿಲ್ಲ. ಗವಾಸ್ಕರ್‌ನನ್ನು ತೆಗೆದುಹಾಕುವುದು ಎಂಬ ವಿಷಯವನ್ನು ಏತಕ್ಕೋ ಜೀರ್ಣಿಸಿಕೊಳ್ಳಲು ಸಾಧ್ಯವಾಗುತ್ತಿಲ್ಲ, ಹಾಗೆಂದು ಚಂದೂ ಬೋರ್ಡೆಯ ಮಾತಿನಲ್ಲೂ ನಿಜ ಇಲ್ಲದೇ ಇಲ್ಲ. ವಯಸ್ಸಾಗುತ್ತಿರುವವರು ಕೊನೆಯ ಕ್ಷಣದವರೆಗೂ ಉಳಿಸುವುದು ಸರಿಯಲ್ಲ. ಅವರು ಮಿರ್ರಿ ಗಿಡಗಳಾಗುತ್ತಾರೆ ಅವರು ಹೊರಟುಹೋದ ಒಮ್ಮೆಗೆ ಶೂನ್ಯ ಆವರಿಸುತ್ತದೆ, ಎಷ್ಟೋ ಭರವಸೆ ಇಟ್ಟುಕೊಂಡಿರುವ ರವೀಶಾಸ್ತ್ರಿ, ಅಜಾರುದ್ದೀನ್, ಸಂದೀಪ್‌ಪಾಟೀಲ್ ನಿರೀಕ್ಷಿಸಿದ ಸ್ಥಾನಕ್ಕೆ ಹತ್ತದಿದ್ದುದರಿಂದಲೇ ಬಂದ ಅನುಮಾನ ಇದು.

[ಇಲ್ಲಿಯವರೆಗೂ ಉಪಯೋಗಿಸಿದ ಘಟನೆಗಳೂ, ಪಾತ್ರಗಳೂ ಸೌಲಭ್ಯಕ್ಕಾಗಿ ಮಾತ್ರ. ಇನ್ನು ಮುಂದೆ ಕಲ್ಪಿತ]

ಅದುವರೆವಿಗೂ ಈ ಸಂಭಾಷಣೆಗಳನ್ನು ಕೇಳುತ್ತಾ ನಿಶ್ಶಬ್ದವಾಗಿ ಕುಳಿತ್ತಿದ್ದ ರಾಘವರೆಡ್ಡಿ ಮುಂದಕ್ಕೆ ಬಗ್ಗಿದರು, "ನನ್ನ ದೃಷ್ಟಿಯಲ್ಲಿ ಇಬ್ಬರನ್ನೂ ಒಮ್ಮೆಗೆ ಡ್ರಾಪ್ ಮಾಡದೇ, ಒಬ್ಬರನ್ನು ಉಳಿಸಿಕೊಂಡು, ಮತ್ತೊಬ್ಬರ ಬದಲು ಹೊಸ ಪ್ರತಿಭೆಯನ್ನು ಸೇರಿಸಿಕೊಳ್ಳುವುದು ಉತ್ತಮ.

ಈಗ ಅಮರನಾಥ್ ಬದಲಾಗಿ ಬೇರೊಬ್ಬರನ್ನು ಇನ್‌ಕ್ಲೂಡ್ ಮಾಡಿಕೊಳ್ಳೋಣ--" ಎನ್ನುತ್ತಾ ಓರೆಗಣ್ಣಿನಿಂದ ರಾಮನ್ ಕಡೆ ನೋಡಿದರು. ರಾಮನ್ ಗವಾಸ್ಕರನನ್ನು ಉಳಿಸಿಕೊಳ್ಳಲು ಪ್ರಯತ್ನಿಸುತ್ತಿರುವುದನ್ನು ಗಮನಿಸಿ, ಮೊದಲು ಆತನನ್ನು ಕಡೆಗೆ ಎಳೆದುಕೊಂಡು, ನಂತರ ತನ್ನ ಮನಸ್ಸಿನಲ್ಲಿರುವುದನ್ನು ಹೇಳಿದರು.

"—ಅಮರ್‌ನಾಥ್ ಕೇವಲ ಬ್ಯಾಟ್ಸ್‌ಮನ್ನೇ ಆಗಿರದೆ ಆಪತ್ತಿನಲ್ಲಿ ಸಹಾಯವಾಗುತ್ತಿರುವ ಬೌಲರ್ ಕೂಡಾ ಆಗಿದ್ದ ! ಆದ್ದರಿಂದ ನಾವು ಆತನ ಬದಲು ಆರಿಸಿಕೊಳ್ಳುವ ಆಟಗಾರ ಕೂಡಾ ಅಂಥಹ 'ಆಲ್‌ರೌಂಡರ್' ಆಗಿದ್ದರೆ ಒಳ್ಳೆಯದೆಂದು ನನ್ನ ಅಭಿಪ್ರಾಯ ! ಪ್ರಸ್ತುತ ಯುವಕರಲ್ಲಿ ಅಮರನಾಥನಂತಹ ಲಕ್ಷಣಗಳುಳ್ಳ, ರಂಜೀಗಳಲ್ಲೂ ಉಳಿದ ಪಂದ್ಯಗಳಲ್ಲೂ ಚೆನ್ನಾಗಿ ಆಡುತ್ತಿರುವವನು ಒಬ್ಬನಿದ್ದಾನೆ. ಅವನು ಆಂಧ್ರ ಪ್ರದೇಶಕ್ಕೆ ಸೇರಿದ" ಎಂದು ನಿಲ್ಲಿಸಿದರು. ಆ ರೂಮಿನಲ್ಲಿ ಒಂದು ಕ್ಷಣ ನಿಶ್ಶಬ್ಧ ಆವರಿಸಿತು. ಅದು ಒಂದು ಕ್ಷಣ ಮೌನದ ನಂತರ, ಎಲ್ಲರ ಕಡೆಗೂ ಮತ್ತೊಮ್ಮೆ ನೋಡಿ, "ವೆಂಕಟರಾಜು" ಎಂದು ಪೂರ್ತಿ ಮಾಡಿದರು.

ಅದುವರೆವಿಗೂ ಆಸಕ್ತಿಯಿಂದ ಕೇಳುತ್ತಿದ್ದ ಸುನಿಲ್ ಚೌಧರಿ, ಆತನೆಡೆಗೆ ತೀಕ್ಷ್ಣವಾಗಿ ನೋಡಿದರು. ರಾಘವರೆಡ್ಡಿ "ಆಂಧ್ರಪ್ರದೇಶ್" ಎನ್ನುತ್ತಿದ್ದಂತೆಯೇ ಚೌಧರಿಯಲ್ಲಿ ಏನೋ ಆಶೆ ಮೊಳಗಿತ್ತು. ಆದರೆ ವೆಂಕಟರಾಜುವಿನ ಹೆಸರು ಹೇಳುತ್ತಿದ್ದಂತೆಯೇ ಅದು ಜರ್ರನೆ ಇಳಿದು ಹೋಯಿತು.

ಅಷ್ಟರಲ್ಲಿ ರಾಮನ್ ಚೌಧರಿಯವರ ಕಡೆ ತಿರುಗಿ "ನಿಮ್ಮ ಅಭಿಪ್ರಾಯ ವೇನು ?" ಎಂದು ಕೇಳಿದರು.

ಚೌಧರಿಯವರು ಕಂಠವನ್ನು ಸರಿಮಾಡಿಕೊಂಡು "ಗವಾಸ್ಕರ್‌ನನ್ನು ಟೀಮಿನಲ್ಲಿ ಉಳಿಸಿಕೊಳ್ಳಬೇಕೆಂದು ನಿರ್ಧರಿಸಿದ ಪಕ್ಷದಲ್ಲಿ, ಒಬ್ಬ ಒಳ್ಳೆಯ ಆಲ್‌ರೌಂಡರ್‌ನನ್ನು ಎರಡನೆಯವನನ್ನಾಗಿ ಆರಿಸುವುದು ಉತ್ತಮ. ಒಂದು ಕಾಲಕ್ಕೆ ನಮ್ಮ ದೇಶ ಸ್ಪಿನ್‌ದಾಳಿಗೆ ಹೆಸರಾಗಿತ್ತು. ಕ್ರಮೇಣ ಆ ಸ್ಥಾನವನ್ನು ನಾವು ತುಂಬಲೇ ಇಲ್ಲ.

ಇದುವರೆವಿಗೂ ನಮ್ಮ ದೇಶಕ್ಕೆ ಆಡಲು ಬಂದವರೆಲ್ಲಾ ಎಡಗೈ ಬೌಲರ್‌ಗಳನ್ನು ಎದುರಿಸುವಲ್ಲಿ ವಿಫಲರಾಗುತ್ತಿದ್ದಾರೆಂದು ನಮಗೆಲ್ಲಾ ಚೆನ್ನಾಗಿ ಗೊತ್ತಿದೆ. ವೆಂಕಟರಾಜು ಒಳ್ಳೆಯ ಬೌಲರ್ರೇ ಆದರೂ, ಅಷ್ಟರ ಮಟ್ಟಿಗೆ ಬ್ಯಾಟ್ ಮಾಡುವವರು ನಮ್ಮಲ್ಲಿನ್ನು ಕುಂಬಾ ಮಂದಿ ಇದ್ದಾರೆ. ಅವನಂಥೆಯೇ ಬ್ಯಾಟಿಂಗ್‌ನಲ್ಲಿ ಫಾರ್ಮ್‌ನಲ್ಲಿರುವ, ಮೇಲಾಗಿ ಎಡಗೈ ಲೆಗ್‌ಸ್ಪಿನ್ ಮಾಡುವ ಮತ್ತೊಬ್ಬನಿದ್ದಾನೆ. ಅವನ ಹೆಸರನ್ನು ಹೇಳಿದರೆ ನೀವು ಆಶ್ಚರ್ಯಪಡಬಹುದು, ಅವನು

....ರಾಯಣ್ಣ.

ಮತ್ತೆ ಆ ರೂಮಿನಲ್ಲಿ ನಿಶ್ಶಬ್ದ. ಸುನೀಲ್ ಚೌಧರಿ ಮುಂದುವರೆಸಿದರು:

"ರಾಯಣ್ಣ ಆಂಧ್ರದ ಪರ ರಣಜಿಗಳಲ್ಲಿ ಆಡುತ್ತಿದ್ದಾನೆ. ಕೇವಲ ಆ ಕಾರಣದಿಂದಾಗಿ ಅವನು ಮೇಲಕ್ಕೆ ಬರುತ್ತಿಲ್ಲ. ಒಟ್ಟು ಟೀಮನ್ನು ಬಿಟ್ಟು ಅವನೊಬ್ಬನ ಸಾಮರ್ಥ್ಯವನ್ನು ಗಮನಿಸಿದರೆ, ಉತ್ತಮ ಮಟ್ಟದಲ್ಲಿ ತನ್ನ ಆಟವನ್ನು ಅಭಿವೃದ್ಧಿ ಮಾಡಿಕೊಳ್ಳುತ್ತಿದ್ದಾನೆ. ನಮ್ಮ ದೇಶದವರೊಡನೆ ಆಡುವುದಕ್ಕಿಂಥ ಬೇರೆ ದೇಶದವರೊಡನೆ ಆತನ ರೆಕಾರ್ಡುಗಳು ಚೆನ್ನಾಗಿದೆ. ಸ್ವಲ್ಪ ಛಾನ್ಸ್ ಕೊಟ್ಟರೂ ಭಾರತದ ಪರ ಉತ್ತಮ ಆಟಗಾರನಾಗುತ್ತಾನೆಂದು ನನ್ನ ನಂಬಿಕೆ."

"ನಾನೊಪ್ಪುವುದಿಲ್ಲ. ವೆಂಕಟರಾಜುವಿನ ರೆಕಾರ್ಡಿಗೂ, ರಾಯಣ್ಣನ ರೆಕಾರ್ಡಿಗೂ ಎಲ್ಲಿಯ ಸಂಬಂಧ ?" ಆವೇಶದಿಂದ ನುಡಿದ ರೆಡ್ಡಿ.

ಚೌಧರಿ ನಕ್ಕರು. ಆ ನಗುವಿನಲ್ಲಿ 'ನೀನೇಕೆ ವೆಂಕಟರಾಜುನನ್ನೇ ಹಿಡಿದು ಕೊಂಡಿದ್ದಿ ಎಂದು ನನಗರ್ಥವಾಗುತ್ತಿದೆ' ಎಂಬ ಭಾವನೆಯಿತ್ತು. ಒಂದು ತಿಂಗಳ ಹಿಂದೆಯಷ್ಟೇ ರಾಘವರೆಡ್ಡಿ ಮಾರುತಿ ಕಾರ್ ಕೊಂಡಿದ್ದರು.

"ರೆಕಾರ್ಡುಗಳನ್ನು ತೆಗೆದುಕೊಂಡರೆ ವೆಂಕಟರಾಜುವಿನದೇ ಮೇಲು. ಆದರೆ ಆತ ಈಗ ಹತ್ತು ವರ್ಷಗಳಿಂದ ಆಡುತ್ತಿದ್ದಾನೆ ರಣಜಿಗಳಲ್ಲಿ. ಇಲ್ಲಿ ವಯಸ್ಸಿನ ಪ್ರಶ್ನೆಯೂ ಬರುತ್ತದೆ. ಆತನ ವಯಸ್ಸು ಹೆಚ್ಚಾಗಿದೆ" ಎನ್ನುತ್ತಾ ತನ್ನ ಬ್ರೀಫ್‌ಕೇಸಿನಿಂದ ಒಂದು ಫೈಲನ್ನು ತೆಗೆದರು.

"ಇಗೋ. ಇದು ರಾಯಣ್ಣನ ರೆಕಾರ್ಡು. ಯಾವ ಸಂದರ್ಭದಲ್ಲಿಯೂ ಆತ ಮೂವತ್ತು ರನ್ನುಗಳಿಗಿಂಥ ಕಡಿಮೆ ಮಾಡಿಲ್ಲ. ದುರದೃಷ್ಟಕರ ವಿಷಯವೇನೆಂದರೆ, ಯಾವುದೋ ಒಂದು ಮ್ಯಾಚಿನಲ್ಲಿ ಸೆಂಚುರಿ ಬಾರಿಸಿ ಬಿಟ್ಟರೆಂದರೆ ಅವರ ಮೇಲೆಯೇ ನಮ್ಮ ದೃಷ್ಟಿ ಬಿದ್ದಿರುತ್ತೆ. ರಾಯಣ್ಣ ಪ್ರತಿ ಮ್ಯಾಚಿನಲ್ಲಿಯೂ ಒಂದೆರಡು ವಿಕೆಟ್ಟುಗಳನ್ನೂ ಪಡೆದಿದ್ದಾನೆ. ಈ ಬಾರಿ ನಮ್ಮ ಪಾಲಿಸಿಯನ್ನು ಸ್ವಲ್ಪ ಬದಲಾಯಿಸೋಣ. ಇಲ್ಲದಿದ್ದರೆ 'ಲಾಂಗ್ ರನ್' ನಲ್ಲಿ ಲಾಭವಿರುವುದಿಲ್ಲವೆಂದು ನನ್ನ ಅಭಿಪ್ರಾಯ ..."

ಆತನ ಮಾತಿನಲ್ಲಿ ಸತ್ಯಾಂಶವಿದೆಯೆಂದು ಎಲ್ಲರಿಗೂ ಗೊತ್ತು. ಉಮ್ರಿಗರ್, ರಾಘವರೆಡ್ಡಿ, ರಾಯ್, ಮಂಜ್ರೇಕರ್–ಭಾರತೀಯ ಕ್ರಿಕೆಟ್‌ಗೆ ಮೂಲಸ್ಥಂಭಗಳು. ಅವರ ವಾದಗಳಲ್ಲಿ ತಪ್ಪನ್ನು ಕಂಡುಹಿಡಿಯುವುದು ಸಾಧ್ಯವಿಲ್ಲ.

ಆದರೆ ನ್ಯಾಷನಲ್ ಲೆವೆಲ್‌ನಲ್ಲಿ ರಾಯಣ್ಣ ಯಾರಿಗೂ ಅಷ್ಟೊಂದು ಪರಿಚಯವಿಲ್ಲ. ಕಾರಣ ಎಲ್ಲರಂತೆ ಅವನು ಕೆಲವು ಮ್ಯಾಚುಗಳಲ್ಲಿ ಸೆಂಚುರಿ ಮಾಡಿ, ಕೆಲವು ಮ್ಯಾಚುಗಳಲ್ಲಿ 'ಡಕ್' ಬಾರಿಸಲಿಲ್ಲ. ಹಾಗೆಯೇ ವಿಕೆಟ್ಟುಗಳ ವಿಷಯದಲ್ಲಿಯೂ ಪ್ರತಿಯೊಬ್ಬರೂ ಆಲೋಚಿಸತೊಡಗಿದರು.

ಎಲ್ಲವನ್ನೂ ಕೇಳುತ್ತಿದ್ದ ಕಪಿಲ್‌ದೇವ್ ಕೆನ್ನೆ ಕೆರೆದುಕೊಳ್ಳುತ್ತಿದ್ದರು. ಆದರೂ ಕೂಡಾ ರಾಯಣ್ಣನ ಬೌಲಿಂಗನ್ನು ಎದುರಿಸಿದ್ದರು. ವೆಸ್ಟಿಂಡೀಸ್ ಟೀಮಿನ ವಿರುದ್ಧ ರಾಯಣ್ಣ ಆಡಿದ್ದನ್ನು ಗಮನಿಸಿದ್ದರು. ರಾಘವರೆಡ್ಡಿ ಹೇಳಿದಂತೆ ರಾಯಣ್ಣನಲ್ಲಿ 'ಸ್ಟೆಬಿಲಿಟಿ' ಇದೆ. ಸ್ವಲ್ಪ ಪ್ರೋತ್ಸಾಹ ಸಿಕ್ಕರೂ ಮೇಲೆ ಬರಬಲ್ಲ !

ಆದರೆ–ದೇಶದಲ್ಲಿ ಅಷ್ಟೊಂದು ಚೆನ್ನಾಗಿ ಗೊತ್ತಿರದ ವ್ಯಕ್ತಿಗೆ ಒಮ್ಮೆಗೆ ಅಷ್ಟೊಂದು ಪ್ರಾಮುಖ್ಯತೆ ಕೊಟ್ಟರೆ ಅದುವಿಮರ್ಶೆಗೆ ವಸ್ತುವಾಗುತ್ತದೇನೋ ಅಕಸ್ಮಾತ್ ಅವನು ಮೊದಲ ಬಾರಿಗೇ ಏನಾದರೂ ಫೇಲ್ ಆದರೆ ತಮಗೆಲ್ಲಾ ಕೆಟ್ಟ ಹೆಸರು ಬರುತ್ತದೆ. ಅದೂ ಅಲ್ಲದೆ ಈಗ ಪ್ರಪೋಸಲ್‌ನಲ್ಲಿರುವ ಕಿರಣ್‌ಮೋರೆ. ಕುಲಕರ್ಣಿಗಳನ್ನು ಬಿಟ್ಟು ರಾಯಣ್ಣನನ್ನು ತೆಗೆದು

ಕೊಳ್ಳುವುದು--ಆಫ್‌ಕೋರ್ಸ್--ರಾಯಣ್ಣ, ವೆಂಕಟರಾಜುಗಳು ಆಲ್ ರೌಂಡರುಗಳು ಎಂಬ ಪ್ಲಸ್ ಪಾಯಿಂಟ್ ಇದೆಯಾದರೂ. ಅವರಿಬ್ಬರಲ್ಲಿ ಯಾರನ್ನು ತೆಗೆದುಕೊಳ್ಳುವುದು ?

"ನಾವೊಂದು ಕೆಲಸಮಾಡೋಣ" ಎಂದರು ಚೆಂದೂಬೋರ್ಡೆ ಒಂದು ಪರಿಹಾರ ಕಂಡುಕೊಂಡವರಂತೆ "...ವಿದೇಶಿ ಟೀಮು ಭಾರತದ ಮೇಲೆ ಆಡುವ ಮೊದಲು, ಪ್ರೆಸಿಡೆಂಟ್ ಇಲವೆನ್ ಮೇಲೆ ಆಡುತ್ತಾರಲ್ಲ, ಅದರಲ್ಲಿ ರಾಯಣ್ಣನನ್ನು ತೆಗೆದುಕೊಳ್ಳೋಣ. ನಂತರ ಜೋನಲ್ ಮ್ಯಾಚಿನಲ್ಲಿ ವೆಂಕಟರಾಜುವನ್ನು ತೆಗೆದುಕೊಳ್ಳೋಣ. ಅದರಿಂದ ಇಬ್ಬರನ್ನೂ ಪರೀಕ್ಷಿಸಬಹುದು. ನಂತರ ಯಾರನ್ನು ತೆಗೆದುಕೊಳ್ಳಬೇಕೆಂಬುದನ್ನು ನಿರ್ಧರಿಸೋಣ"

ಈ ವಾದ ಎಲ್ಲರಿಗೂ ಮೆಚ್ಚಿಕೆಯಾಯಿತು.

ರಾಘವರೆಡ್ಡಿ ಕೂಡಾ ಏನನ್ನೂ ಮಾತನಾಡಲಾರದೇ ಹೋದರು. ಈ ಏರ್ಪಾಡಿನಿಂದ 'ತನ್ನ ಮನುಷ್ಯ' ಸೆಲೆಕ್ಟ್ ಆಗುವ ಛಾನ್ಸ್ ಇದೆಯಾ ಎಂದು ಆಲೋಚಿಸಿದರು.

ವೆಂಕಟರಾಜು ಆಡಿದರೆ ಚೆನ್ನಾಗಿ ಆಡಿಬಿಡುತ್ತಾನೆ, ಇಲ್ಲದಿದ್ದರೆ ಇಲ್ಲವೇ ಇಲ್ಲ. ರಾಯಣ್ಣ ಹಾಗಲ್ಲ, ಒಂದೇ ಸ್ಟಡೀ ಬ್ಯಾಟ್ಸ್‌ಮನ್ ಮತ್ತು ಬೌಲರ್.

ಅದೃಷ್ಟ ಚೆನ್ನಾಗಿದ್ದರೆ. ಏನಾದರೂ ಅದ್ಭುತ ನಡೆದರೆ ಮಾತ್ರ ವೆಂಕಟರಾಜು ಭಾರತದ ಟೀಮಿನ ಒಬ್ಬ ಆಟಗಾರನಾಗುತ್ತಾನೆ....ರಾಯಣ್ಣನಿಗೇ ಹೆಚ್ಚು ಛಾನ್ಸ್. ಅವರಿಗನ್ನಿಸುತ್ತದೆ. ಸುನೀಲ್ ಚೌಧರಿ ಹೇಳಿದ್ದರಲ್ಲಿ ನಿಜಾಂಶವಿದೆಯೆಂದು. ಅವರು ಸೆಲೆಕ್ಷನ್ ಕಮಿಟಿಯಲ್ಲಿ ಎಲ್ಲರಿಗಿಂತಲೂ ಚೆನ್ನಾಗಿ ಜಡ್ಜ್ ಮಾಡಬಲ್ಲ ವ್ಯಕ್ತಿ. ಅದೂ ಅಲ್ಲದೆ ಅವರ ಮಾತಿಗೆ ಎಲ್ಲರೂ ಗೌರವ ಸೂಚಿಸುತ್ತಾರೆ,

ಅಂಥಹ ವ್ಯಕ್ತಿಯೊಡನೆ ವಾದ ಮಾಡಿದರೆ ತನ್ನ ಬಣ್ಣವೆಲ್ಲಾ ಬಯಲಾಗಬಹುದು. ಈಗಾಗಲೇ ಈ ಸೆಲೆಕ್ಷನ್ ಕಮಿಟಿಯವರ ನಡವಳಿಕೆಗಳ ಮೇಲೆ ಸಾಕಷ್ಟು ಅನುಮಾನವಿದೆ.

ಈ ಏರ್ಪಾಡಿಗೆ ತಾವೂ ಒಪ್ಪಿಕೊಂಡವರಂತೆ ಮೌನವಾಗಿದ್ದರು ರಾಘವರೆಡ್ಡಿ.

ಮತ್ತೊಂದು ಅರ್ಧಗಂಟೆಯಲ್ಲಿ ಸಮಾವೇಶ ಮುಗಿಯಿತು.

ರಾಘವರೆಡ್ಡಿ ಜೊತೆಗಾಗಿ ವೆಂಕಟರಾಜು ಅದೇ ಊರಿನಲ್ಲಿ ದುಬಾರಿ ಹೋಟೆಲೊಂದರ ಕೊಠಡಿಯಲ್ಲಿ ಕಾಯುತ್ತಿದ್ದಾನೆ.

"ನಾನು ಮಾಡಬೇಕಾದ್ದನ್ನೆಲ್ಲಾ ಮಾಡಿದ್ದೇನೆ. ಟೆಸ್ಟ್ ಮ್ಯಾಚಿಗೆ ಒಂದು ಮೆಟ್ಟಿಲು ಕೆಳಗಿನವರೆಗೂ ನಿನ್ನನ್ನು ಹತ್ತಿಸಿದ್ದೇನೆ. ಉಳಿದದ್ದೆಲ್ಲಾ ನಿನ್ನ ಮೇಲೆ ಆಧಾರವಾಗಿದೆ."

ಬೆಲೆಬಾಳುವ ವಿಸ್ಕಿ ಗ್ಲಾಸಿನಲ್ಲಿ ನೊರೆಯುತ್ತಿದೆ. ವೆಂಕಟರಾಜು, ರಾಘವರೆಡ್ಡಿ ಇಬ್ಬರೇ ಇದ್ದಾರೆ. ರಾಜು ಅಷ್ಟೊಂದು ಸಂತೃಪ್ತನಾದವನಂತೆ ಕಾಣುತ್ತಿಲ್ಲ. ಮೊದಲ ಮ್ಯಾಚಿನಲ್ಲಿ ರಾಯಣ್ಣ ಚೆನ್ನಾಗಿ ಆಡಿಬಿಟ್ಟರೆ ಮುಗಿಯಿತು ತನ್ನ ಕ್ರಿಕೆಟ್ ಜೀವನ. ಅದೂ ಅಲ್ಲದೇ ತಾನು ಸೀನಿಯರ್! ವಯಸ್ಸಿನಲ್ಲಿ ಹೋಲಿಸಿಕೊಂಡರೆ ರಾಯಣ್ಣ ತುಂಬಾ ಚಿಕ್ಕವನು. ಅವನೇನಾದರೂ ಟೆಸ್ಟಿನಲ್ಲಿ ಪ್ರವೇಶಿಸಿದನೆಂದರೆ, ಇನ್ನು ತನ್ನ ಜೀವನದಲ್ಲಿ ಆ ಆಶೆಯನ್ನು ಸಂಪೂರ್ಣವಾಗಿ ತೊರೆದುಬಿಡಬೇಕು, ವಯಸ್ಸು ಹೆಚ್ಚಾಗಿ ಬಿಡುತ್ತದೆ.

ಎಲ್ಲಾ ರಂಗಗಳಲ್ಲೂ ಇದೇ ಕಥೆ! ಕೆಲವು ಮಂದಿ ಸ್ಥಿರ ನಿವಾಸಗಳನ್ನು ಏರ್ಪಾಡಿಸಿಕೊಂಡು ಪ್ರಮುಖರಿಗೆ ಚೇಲಗಳಾಗಿ ಮೆರೆಯುತ್ತಿರುತ್ತಾರೆ. ಬೇರೆಯವರು ಮೇಲೆ ಬರುವುದನ್ನು ಅದರಲ್ಲಿಯೂ ಹೊಸಬರು,—ಅವರು ಸಹಿಸುವುದಿಲ್ಲ. ಅದೇ ಗುಂಪಿಗೆ ಸೇರಿದ ವೆಂಕಟರಾಜು ಹೇಳತೊಡಗಿದ—

"ತನ್ನ ಬಗ್ಗೆ ಕ್ರಿಕೆಟ್‌ಬೋರ್ಡಿನಲ್ಲಿ ಇಷ್ಟೊಂದು ಚರ್ಚೆ ನಡೆಯುತ್ತದೆಂದು ರಾಯಣ್ಣ ಕನಸಿನಲ್ಲಿಯೂ ನೆನೆಸಿರಲಿಕ್ಕಿಲ್ಲ. ಅವನಿಗೀಗಾಗಲೇ 'ಟೆಸ್ಟ್' ಏತಕ್ಕೆ ?" ಸಿಟ್ಟಿನಿಂದ ಹೇಳಿದ.

492699 R

 894.814 3 

RAJ 1991

ರಾಘವರೆಡ್ಡಿ ಮಾತನಾಡಲಿಲ್ಲ. ಏನು ಮಾತನಾಡಲೂ ಮಾರುತಿಕಾರ್ ಅಡ್ಡ ಬರುತ್ತದೆ.

ರಾಜಕೀಯದಲ್ಲಿ ಮೇಲೆ ಬರುವುದು ಸುಲಭ. ಅಲ್ಲಿ ಹಣ ಖರ್ಚು ಮಾಡಿಯಾದರೂ ಬರಬಹುದು. ಆದರೆ ಕ್ರಿಕೆಟ್‌ನಲ್ಲಿ ಹಾಗಾಗುವುದಿಲ್ಲ. ಒಟ್ಟು ದೇಶದ ಕಣ್ಣುಗಳೆಲ್ಲಾ ಆ ಹನ್ನೊಂದು ಜನರ ಮೇಲೆಯೇ ನೆಟ್ಟಿರುತ್ತದೆ. ಸ್ವಲ್ಪ ಲೋಪವಾದರೂ ಹೊಸಬರು ನಿಲ್ಲುವುದು ಕಷ್ಟ. ಮೊದಲನೇ ಛಾನ್ಸ್ ಸಿಗುವುದೇ ಅದೃಷ್ಟ. ಆ ಮಾತನ್ನೇ ರಾಘವರೆಡ್ಡಿ ಹೇಳಿದರು.

"ನೋಡೋಣ ಏನಾಗುತ್ತದೋ! ನನ್ನ ಶಕ್ತಿಯನ್ನೆಲ್ಲಾ ಉಪಯೋಗಿಸಿದ್ದೇನೆ. ಟೆಸ್ಟಿಗೆ ಮೊದಲು ಎರಡು ಮ್ಯಾಚುಗಳಿವೆಯಲ್ಲಾ ಏನೋ ನೀನೇ ಅದರಲ್ಲಿ ಚೆನ್ನಾಗಿ ಆಡಬಹುದು. ಈಗಲೇ ತೀರ್ಮಾನಿಸಿಲ್ಲ ಎಲ್ಲಾ ಅವರೇನೂ...."

"ಆದರೂ ನಾನು ಆಡುವುದು ಎರಡನೇ ಮ್ಯಾಚ್. ಮೊದಲನೆಯದರಲ್ಲಿ ರಾಮಣ್ಣ ಚೆನ್ನಾಗಿ ಆಡೇ ಆಡುತ್ತಾನೆ. ಈ ಸುದ್ದಿ ತಿಳಿದರೇ ಸಾಕು, ಅವನಿಗೆ ಆನೆಗಳ ಬಲವಿರುತ್ತದೆ. ಹೇಳಿದನಲ್ಲಾ, ಅವನು ಇದನ್ನು ಕನಸಿನಲ್ಲಿಯೂ ಊಹಿಸಿರುವುದಿಲ್ಲವೆಂದು—"

ರಾಘವರೆಡ್ಡಿ ಮೇಲೇಳುತ್ತಾ ಹೇಳಿದರು. ನೋಡು ರಾಜು! ನಾನು ಮಾಡಬೇಕಾದುದನ್ನೆಲ್ಲಾ ಮಾಡಿದ್ದೇನೆ. ನಾಳೆ ಟೆಸ್ಟ್ ಟೀಮಿನಲ್ಲಿಯೂ ಪ್ರಯತ್ನಿಸುತ್ತೇನೆ. ನೀನು ಚೆನ್ನಾಗಿ ಆಡುವುದೇ ಉಳಿದಿರುವುದು. ಹಾಗೆ ಮಾಡಿದರೆ ಮಾತ್ರ ನಾನು ನಿನ್ನ ಪರ ವಾದಿಸಲು ಸಾಧ್ಯವಾಗುತ್ತದೆ. ಆದ್ದರಿಂದ ಈ ಹತ್ತು ದಿನಗಳೂ ಡ್ರಿಂಕ್ಸನ್ನು ಬಿಟ್ಟು ಆಟದ ಮೇಲೆ ಮನಸ್ಸಿಟ್ಟು ಏಕಾಗ್ರತೆಯಿಂದ ಪ್ರಾಕ್ಟೀಸ್ ಮಾಡು. ಉಳಿದ ವಿಷಯಗಳನ್ನು ನಾನು ನೋಡಿಕೊಳ್ಳುತ್ತೇನೆ. ಇನ್ನು ನಾನು ಬರುತ್ತೇನೆ."

ವೆಂಕಟರಾಜು ತುಂಬಾ ಹೊತ್ತು ಹಾಗೆಯೇ ಕುಳಿತಿದ್ದ.

ಅವನಿಗೆ ಯಾರ ಮೇಲೂ ಹೇಳಲಾರದಂಥಹ ಸಿಟ್ಟು ಬೆಳೆಯುತ್ತಿದೆ. ಅವನೇನೂ ಸಾಮಾನ್ಯ ಆಟಗಾರನಲ್ಲ. ಸಂದೀಪ್ ಪಾಟೀಲ್, ಶ್ರೀಕಾಂತರ ಮಟ್ಟದಲ್ಲಿ ಆಡಬಲ್ಲ. ಅವರಂತೆಯೇ ಚೆಂಡನ್ನು ಬೌಂಡರಿಗೆ

ಗ್ರಂಥ ಸ್ವಾಮ್ಯ ವಿಭಾಗ,
ರಾಜ್ಯ ಕೇಂದ್ರ ಗ್ರಂಥಾಲಯ

ಬಾರಿಸಬಲ್ಲ. ಈ ಬಾರಿ ಅವಕಾಶ ತಪ್ಪಿದರೆ ಮತ್ತೆ ಬರುವುದಿಲ್ಲವೆಂದು ಅವನಿಗೆ ಗೊತ್ತು. (ಒಮ್ಮೆ ಆಡಿದರೆ ನನ್ನ ಸಾಮರ್ಥ್ಯ ಏನೆಂಬುದನ್ನು ತೋರಿಸಬಲ್ಲೇ—ಎಂದು ಎಲ್ಲರಂತೆ ತಾನೂ ಮನಸ್ಸಿನಲ್ಲಿಯೇ ಅಂದು ಕೊಳ್ಳುತ್ತಾನೆ) ಇಲ್ಲಿಯವರೆಗೂ ಬಂದಮೇಲೆ ಹಾಗೋ. ಹೀಗೋ ಆಗಲೇ ಬೇಕು.

ರಾಯಣ್ಣನ ಆಟದ ಬಗ್ಗೆ ತನಗೇ ಚೆನ್ನಾಗಿ ಗೊತ್ತು. ಇಬ್ಬರೂ ಆಂಧ್ರದ ಪರವೇ ಆಡುವವರು.

ರಾಯಣ್ಣನಿಗಿಂತಲೂ ತನಗೇ ಹೆಚ್ಚು ಅಭಿಮಾನಿಗಳು ಇದ್ದಾರೆ. ಮ್ಯಾಚ್ ಮುಗಿದು ಹೊರಗೆ ಬರುತ್ತಿದ್ದಂತೆಯೇ ತನ್ನ ಬಳಿಗೇ ಆಟೋ ಗ್ರಾಫ್‌ಗಾಗಿ ಹೆಚ್ಚು ಜನ ಬರುತ್ತಾರೆ. ಪೇಪರ್‌ನವರು ಕೂಡಾ ತನ್ನ ಬಗ್ಗೆಯೇ ಹೆಚ್ಚು ಬರೆಯುತ್ತಿರುತ್ತಾರೆ.

ಆದರೆ ಇದೆಲ್ಲಾ ತಾನು ಚೆನ್ನಾಗಿ ಆಡಿ ಸೆಂಚುರಿ ಬಾರಿಸಿದಾಗ, ಒಮ್ಮೆ ಹಾಗೆ ಆಡಿದರೆ ನಾಲ್ಕು ಬಾರಿ ವಿಫಲವಾಗುತ್ತಿರುತ್ತಾನೆ. ಅಭಿಮಾನಿಗಳಿಗೆ ಇವೆಲ್ಲಾ ಗೊತ್ತಿಲ್ಲ. ಒಂದು ಸೆಂಚುರಿ ಬಾರಿಸಿದರೆ ಹಿಂದಿನದನ್ನು ಮರೆತು ಬಿಟ್ಟಿರುತ್ತಾರೆ.

ರಾಮಣ್ಣನ ಆಟ ಆ ರೀತಿಯಲ್ಲ. ಶಿಲ್ಪಿಯೊಬ್ಬ ಬೊಂಬೆಯನ್ನು ಎಷ್ಟೋ ಏಕಾಗ್ರತೆಯಿಂದ ಕೆತ್ತಿದ ಹಾಗೆ, ಪ್ರತೀ ಇನ್ನಿಂಗ್ಸನ್ನೂ ಜಾಗ್ರತೆ ಯಿಂದ ಆಡುತ್ತಾನೆ. ಸುನೀಲ್ ಚೌಧರಿಯಂಥಹ ಪ್ರತಿಭಾವಂತರು ಅವನ ನೈಪುಣ್ಯವನ್ನು ಅದಕ್ಕೆ ಮೆಚ್ಚಿಕೊಂಡಿದ್ದಾರೆ. ತನಗೆ ಅವನು ಪ್ರತಿಸ್ಪರ್ಧಿ ಯಾದರೂ, ಈ ವಿಷಯದಲ್ಲಿ ತಾನೂ ಮೆಚ್ಚಿಕೊಳ್ಳಬೇಕು ಅವನ ರೀತಿಯನ್ನು !

ರಾಘವರೆಡ್ಡಿ ಹೇಳಿದಂತೆ ಏನಾದರೂ ಅದ್ಭುತ ನಡೆದರೆ ಮಾತ್ರ ಲಾಭವುಂಟು ತನಗೆ.

ಹೌದು. ಏನಾದರೂ ಅದ್ಭುತ ನಡೆಯಬೇಕು !

ಅದಕ್ಕೆ ದೇವರೇ ಸಹಾಯ ಮಾಡಬೇಕು.

ರಾಜು ಮೊಟ್ಟ ಮೊದಲನೇ ಬಾರಿಗೆ ದೇವರನ್ನು ಪ್ರಾರ್ಥಿಸಿದ.

## 23 : 52 : 37 Hrs

"ನಿಜವೇ ! ಮತ್ತಷ್ಟು ಕೃಷಿ ಮಾಡಬೇಕು. ಈಗ ಮಾಡುತ್ತಿರುವುದು ಸಾಲದು" ಎಂದ ರಾಯಣ್ಣ, ಉದ್ವೇಗವಿಳಿದು ಮಾಮೂಲು ಮನುಷ್ಯನಾದಾಗ.

## 23 : 52 : 37 Hrs

"ನಿಮ್ಮಷ್ಟಕ್ಕೆ ನೀವೇ ನಗುತ್ತಿದ್ದೀರಲ್ಲಾ ಏಕೆ ?" ಅವಳ ಕೆನ್ನೆಯ ಬಳಿಯಿಂದ ತುಟಿ ತೆಗೆದು ಸ್ವಲ್ಪ ದೂರ ಸರಿದ ನಂತರ ಕೇಳಿದಳು. ಅವರು ನಗುತ್ತಿರುವುದನ್ನು ಕಂಡು.

"ಏನೋ ನೆನಪಿಗೆ ಬಂತು

"ಏನು ?

"ಯುವಕನೊಬ್ಬ ತನ್ನ ಗರ್ಲ್‌ಫ್ರೆಂಡನ್ನು ಗಟ್ಟಿಯಾಗಿ ಚುಂಬಿಸಿದ ನಂತರ ಆತ್ಮದಾತ್ಮತೆಯಲ್ಲಿಯೇ ಸ್ವಲ್ಪ ಕಾಲ ಕಣ್ಣು ಮುಚ್ಚಿ ತೆರೆದು, ಅವಳೆಡೆಗೆ ಅಪ್ಯಾಯವಾಗಿ ನೋಡುತ್ತಾ, '...ನಿನ್ನನ್ನು ಚುಂಬಿಸಿದ ಮೊದಲ ಗಂಡಸು ನಾನೇನಾ ?' ಎಂದು ಕೇಳಿದನಂತೆ. ಅವಳು ಹೌದೆಂಬಂತೆ ತಲೆ ಆಡಿಸಿ, ಅವನನ್ನು ಪರೀಕ್ಷಿಸುವವಳಂತೆ ನೋಡುತ್ತಾ, 'ಹೋಲಿಕೆಗಳು ಹಾಗೆಯೇ ಕಾಣುತ್ತೀವೆ' ಎಂದಳಂತೆ. ಅದು ನೆನಪಿಗೆ ಬಂದು ನಗು ಬಂತು...."

ಕಿರಣ್ಮಯಿಗೆ ಸರ್ರನೆ ಕೋಪ ಬಂತು. "ಆ ಜೋಕ್ ಈ ಸಮಯದಲ್ಲಿ ಏಕೆ ನೆನಪಿಗೆ ಬರಬೇಕು ? ನನಗ್ಯಾರಾದರೂ ಬಾಯ್‌ಫ್ರೆಂಡ್ ಇದ್ದಾನೆಂದು ಕೊಂಡಿದ್ದೀರಾ ?" ಎಂದಳು.

ಬಿಳುಚಿದ ಮುಖದಿಂದ ರಾಯಣ್ಣ ಹೇಳಿದ. "ನನ್ನ ಉದ್ದೇಶ ಅದಲ್ಲ"

"ಏನಲ್ಲ ಈಗ ಆ ಜೋಕ್ ಏಕೆ ಜ್ಞಾಪಕಕ್ಕೆ ಬಂತು ಹಾಗಾದರೆ ?"

"ಪ್ರಸ್ತದ ರೂಮಿನಲ್ಲಿ ಪ್ಲೇಬಾಯ್ ಜೋಕ್ಸ್ ಜ್ಞಾಪಕಕ್ಕೆ ಬರದೆ, ಭಗವದ್ಗೀತೆ ನೆನಪಿಗೆ ಬರುತ್ತದೆಯೆ ?"

"ನೀವೇನೂ ಹೇಳಬೇಕಾಗಿಲ್ಲ ಸಾಕು. ಮಾತಾಡೋದಿಲ್ಲ."

ತುಂಬಾ ಹೊತ್ತು ಪ್ರಯತ್ನಿಸಿದ, ಅವಳು ಮಾತನಾಡಲಿಲ್ಲ. "ನಿನ್ನ ಬಗ್ಗೆಯಲ್ಲಾ ಇದು ಕಿರಣ್ಮಯಿ! ಇದು ನನ್ನ ಬದುಕಿನಲ್ಲಿ ನಡೆದ ಘಟನೆ! ನಾನು ಚುಂಬಿಸಿದಾಗ ಲಕ್ಷ್ಮಿ ಹಾಗೆಯೇ ಅಂದಿದ್ದಳು."

ಅವಳು ಕೂಡಲೇ ತನ್ನ ಮೌನವನ್ನು ಮುರಿದು, "ಲಕ್ಷ್ಮಿ ಯಾರು ?" ಎಂದಳು.

"ಸಧ್ಯ ಮಾತಾಡಿದೆಯಲ್ಲಾ."

"ಆ ಲಕ್ಷ್ಮೀ ಯಾರೂಂತ ಮೊದಲು ಹೇಳ್ರಿ."

ಅವನು ಮೇಲೆದ್ದು ಕುಳಿತು, "ಇಷ್ಟೆಲ್ಲಾ ಹೇಳಿದ ಮೇಲೆ ಅದನ್ನೂ ಹೇಳಿಬಿಡುತ್ತೇನೆ, ನನ್ನ ಬಾಳಿನಲ್ಲಿ ಅದು ಅತ್ಯಂತ ವಿಷಾದವಾದ ಘಟನೆ. ವಿಷ್ಟೇ ಮರೆಯಲು ಪ್ರಯತ್ನಿಸಿದರೂ ಸಾಧ್ಯವಾಗುತ್ತಿಲ್ಲ. ಲೇಡೀಸ್‌ಹಾಸ್ಟೆಲಿನ ಹದಿಮೂರನೇ ನಂಬರ್ ಕೊಠಡಿಯಲ್ಲಿ ಲಕ್ಷ್ಮಿ ಎಂಬುವ ಹುಡುಗಿಯೊಬ್ಬಳಿದ್ದಳು. ಆ ದಿನ ರಾತ್ರಿ.... ಉಹ್ಞೂ.... ಬೇಡ ಬಿಡು" ಎಂದು ಮೌನವಹಿಸಿದ.

"ಏನು ? ಏತಕ್ಕೆ ಬೇಡ ? ಹೇಳ್ರಿ ಏನು ನಡೀತು ?" ಆತಂಕದಿಂದ ಕೇಳಿದಳು. ಅವನು ಆ ದಿನವನ್ನು ಜ್ಞಾಪಿಸಿಕೊಳ್ಳುವವನಂತೆ ಸ್ವಲ್ಪ ಸಮಯ ಸುಮ್ಮನಿದ್ದ.

"ಆ ರಾತ್ರಿ ಕೂಡಾ ಹೀಗೆಯೇ ಹತ್ತೂವರೆ ಹನ್ನೊಂದು ಗಂಟೆ ಆಗಿತ್ತೇನೋ. ಆ ರಾತ್ರಿ ತುಂಬಾ ಮಳೆ ಬೀಳುತ್ತಿತ್ತು. ಲಕ್ಷ್ಮಿಯೊಡನೆ ಹದಿಮೂರನೇ ನಂಬರಿನ ಕೋಣೆಯಲ್ಲಿದ್ದೆ. ಇದ್ದಕ್ಕಿದ್ದಂತೆಯೇ ಬಾಗಿಲು ಕುಟ್ಟಿದ ಶಬ್ದ ಕೇಳಿಸಿತು. 'ಲಕ್ಷ್ಮಿ ಬಾಗಿಲು ತೆಗೆ' ಎಂದು ಹೊರಗಿನಿಂದ ವಾರ್ಡನ್ ಕೂಗುತ್ತಿದ್ದಾರೆ. ಗಾಬರಿಯೋ—ಗಾಬರಿ. ನನಗೇನು ಮಾಡಬೇಕೆಂದೇ ತೋಚಲಿಲ್ಲ. ಮೈಮೇಲೆ ಬಟ್ಟೆಗಳೇ ಇಲ್ಲ. ಬಚ್ಚಿಟ್ಟುಕೊಳ್ಳೋಣವೆಂದರೆ ಕೋಣೆಯಲ್ಲಿ ಒಂದಾದರೂ ಬೀರೂ ಕೂಡಾ ಇಲ್ಲ " ನಿಲ್ಲಿಸಿದ.

ಕ್ರಮೇಣ ಸಿಟ್ಟಿನಿಂದ ಕೆಂಪಗಾಗುತ್ತಿದ್ದ ಹೆಂಡತಿಯ ಮುಖ ನೋಡಿ ಹೇಳಲು ಪ್ರಾರಂಭಿಸಿದ.

"ಥಕ್ಕನೇ ಕಿಟಕಿಯಿಂದ ಹೊರಗೆ ಹಾರಿ ಗೋಡೆಯನ್ನು ಹಿಡಿದು

ಕೊಂಡು ತೂಗಾಡತೊಡಗಿದೆ ಗಾಳಿಯಲ್ಲಿ. ವಾರ್ಡನ್ ಹೊರಟುಹೋದ ನಂತರ ಮತ್ತೆ ರೂಮಿನೊಳಗೆ ಪ್ರವೇಶಿಸೋಣವೆಂದು ನನ್ನ ಉದ್ದೇಶ! ಆದರೆ ವಾರ್ಡನ್ ಲಕ್ಷ್ಮಿಯನ್ನು ತಮ್ಮೊಡನೆ ಕರೆದುಕೊಂಡು ಹೋದರು. ಮಳೆ ಬರುತ್ತದೆಯೆಂದು ಒಳಗಿನಿಂದ ಕಿಟಕಿ ಕೂಡಾ ಮುಚ್ಚಿಬಿಟ್ಟರು ಹೋಗುವಾಗ. ನಾನು ಮಾತ್ರ ಹೊರಗೇ ನೇತಾಡುತ್ತಿದ್ದೆ.... ಜೋರಾಗಿ ಮಳೆ ಬೇರೆ.... ಬಟ್ಟೆಗಳು ಒಳಗೆ ಉಳಿದುಬಿಟ್ಟವೆ."

"ಅಯ್ಯೋ ಪಾಪ! ತುಂಬಾ ಕಷ್ಟ ಅನುಭವಿಸಿರಬೇಕಲ್ಲಾ" ವ್ಯಂಗ್ಯವಾಗಿ ಕೇಳಿದಳು,

"ಅಬ್ಬಾ—ಕಷ್ಟ ನಾ! ಇದೂ ಸಾಲದೆಂತೆ ಮೇಲಿನ ಮಹಡಿಯ ಕಿಟಕಿಯೊಂದರಿಂದ ಹುಡುಗಿಯರು ಆಮ್ಲೆಟ್ ಮಾಡಿಯಾದ ಮೇಲೆ. ಕೊಳೆತ ಮೊಟ್ಟೆಯನ್ನು ಕೆಳಗೆ ಹಾಕಿದರು! ನನ್ನ ತಲೆಗೆ ಅದರ ಅಭಿಷೇಕ ಬೇರೆ. ಬೆಳಕಾಗಲು ಪ್ರಾರಂಭವಾಯಿತು. ಬೆಳಗಿನ ಜಾವದ ವಾಕಿಂಗ್ ಹುಚ್ಚಿರುವ ಇಬ್ಬರು ಹುಡುಗಿಯರು ಅಲ್ಲಿಗೆ ಬಂದವರೆ ಏನನ್ನೋ ಮಾತನಾಡಿಕೊಳ್ಳುತ್ತಿದ್ದಾರೆ ನನ್ನನ್ನು ಗಮನಿಸಿ. ಅವರ ಕಡೆ ನೋಡಲು ನಾಚಿಕೆಯೆನ್ನಿಸಿ ಕಣ್ಣುಗಳನ್ನು ಬಿಗಿಯಾಗಿ ಮುಚ್ಚಿಕೊಂಡೆ. ಅಷ್ಟರಲ್ಲಿ ಮತ್ತಷ್ಟು ಬೆಳಕಾಯಿತು. ಮತ್ತೆ ಹತ್ತು ಹುಡುಗಿಯರಾದರೂ ಕೆಳಗೆ ನಿಂತು ನನ್ನೆಡೆಗೇ ನೋಡುತ್ತಿದ್ದಾರೆಂದು ಅವರ ಮಾತು—ನಗುಗಳಿಂದ ಅರ್ಥ ಮಾಡಿಕೊಂಡೆ ಹಾಗೆಯೇ ಕೆಳಗೆ ಹಾರಿ ಆತ್ಮಹತ್ಯೆ ಮಾಡಿಕೊಳ್ಳೋಣವೆನಿಸಿತು. ಅಷ್ಟರಲ್ಲಿ ಯಾರೋ ಹೋಗಿ ವಾರ್ಡನ್‌ಗೆ ನನ್ನ ಸುದ್ದಿ ಹೇಳಿರಬೇಕೆನ್ನಿಸುತ್ತದೆ. ಆಕೆಯೂ ಬಂದು, ತೂಗಾಡುತ್ತಿರುವ ನನ್ನನ್ನು ಕಂಡು, ಹತ್ತಿರ ಬಂದು ಭುಜ ತಟ್ಟಿ, "ಪೋಲೀಸರು ಬರುತ್ತಿದ್ದಾರೆ ಮಿಸ್ಟರ್. ಇನ್ನು ಕೆಳಗೆ ಕಾಲಿಡು" ಎಂದರು. ಅದುವರೆವಿಗೂ ನನಗೆ ಹೊಳೆದೇ ಇರಲಿಲ್ಲ. ಲಕ್ಷ್ಮಿಯ ರೂಮು ಕೆಳಗಡೆಯ ಫ್ಲೋರಿನಲ್ಲಿಯೇ ಇದೆಯೆಂಬುದು. ರಾತ್ರಿಯೆಲ್ಲಾ ನನ್ನ ಕಾಲುಗಳು ಭೂಮಿಯಿಂದ ಕೇವಲ ಆರಿಂಚು ಎತ್ತರದಲ್ಲಿತ್ತು ಎಂದು."

ಅದುವರೆವಿಗೂ ಕೋಪದಿಂದ ಕೊತ ಕೊತ ಕುದಿಯುತ್ತಿದ್ದ ಕಿರಣ್ಮಯಿ ಕಿಸಕ್ಕನೇ ನಕ್ಕಳು. ಕೇವಲ ತನ್ನನ್ನು ಪ್ರಸನ್ನಗೊಳಿಸಲೇ ತನ್ನ ಗಂಡ

ಈಕಥೆಯನ್ನು ಊಹಿಸಿ ಹೇಳಿದ್ದಾನೆಂದು ಅರ್ಥವಾಗಿ, ಅದುವರೆವಿಗೂ ತಾನು ಫೂಲ್ ಆದದ್ದನ್ನೂ ಮರೆತು ನಕ್ಕಳು. ಅವಳ ಮುಖದಲ್ಲಿ ಅಷ್ಟು ನಗುವನ್ನು ಕಾಣುತ್ತಲೆ ಅವಳೆಡೆಗೆ ಧಾವಿಸಿದ. ಅವನಿಂದ ತಪ್ಪಿಸಿಕೊಳ್ಳುವ ಪ್ರಯತ್ನ ಮಾಡುತ್ತಾ 'ನೀವು ನಿಮ್ಮ ಬಗ್ಗೆ ಹೇಳು ಎಂದಿರಲ್ಲಾ' ಅಂದಳು ಅವನು ಅಲ್ಲಿಯೇ ನಿಂತು ಉಸಿರನ್ನು ಎಳೆದುಕೊಂಡ.

ಅವಳು ಊಹಿಸಿದಂತೆಯೇ ಅವನು ಆ ವಿಷಯದಲ್ಲಿ ಆಸಕ್ತಿ ವಹಿಸಿ 'ಹೇಳು' ಎಂದ. 'ಸಧ್ಯಕ್ಕೆ' ಎಂದುಕೊಂಡಳು ಮನಸ್ಸಿನಲ್ಲಿಯೇ ಹೆಂಗಸರಿಗೆ ವೆಯಿಟ್ ಲಿಫ್ಟಿಂಗ್ ಇಲ್ಲದಿರುವುದು ದುರದೃಷ್ಟಕರ.

ಅವಳಿಗೆ ಅವನು ಗಂಡನಾಗಿ ಎರಡೇ ದಿನವಾದರೂ, ಹತ್ತಿರವಾಗಿ ಎರಡೇ ಗಂಟೆ ಕಳೆದಿರುವುದು! ಮನುಷ್ಯನ ಮನಸ್ಸತ್ವವನ್ನು ಬೇರೆ ಬೇರೆ ಬಣ್ಣಗಳಿಗೆ ಅನ್ವಯಿಸುತ್ತಾ, ಮ್ಯಾಕ್ಸ್ ಲೂಚರ್ ತಯಾರು ಮಾಡಿದ್ದ ಶಾಸ್ತ್ರದ ಆಧಾರದ ಮೇಲೆ. ಆ ಎರಡು ಗಂಟೆಗಳ ಕಾಲ ಅವನ ಪರಿಚಯ ದಿಂದ, ತನ್ನ ಗಂಡನ ಬಗ್ಗೆ ಏನೆಂದುಕೊಂಡಿದ್ದಾಳೋ ಅದನ್ನು ಹೇಳಿದಳು. ಒಬ್ಬ ವ್ಯಕ್ತಿಯ ಮನಸ್ಸನ್ನು ಅರ್ಥಮಾಡಿಕೊಳ್ಳಲು ಎರಡು ಗಂಟೆಗಳ ಕಾಲ ತುಂಬಾ ಕಡಿಮೆಯೇ. ಆದರೂ ಅವಳು ತನಗೆ ಗೊತ್ತಿರುವಷ್ಟು ಆ ಸ್ವಲ್ಪ ಸಮಯದಲ್ಲಿ ನಡೆದದ್ದನ್ನು, ಅವರ ನಡುವಿನ ಸಂಭಾಷಣೆಯಿಂದ ಅವನ ಚೇಷ್ಟೆಯಿಂದ, ಅವನ ಪ್ರವರ್ತನೆಯನ್ನು ಆಧಾರವಾಗಿಟ್ಟುಕೊಂಡು ತನ್ನ ಅಭಿಪ್ರಾಯಗಳನ್ನು ಸ್ವಲ್ಪವೂ ಮುಚ್ಚಿಟ್ಟುಕೊಳ್ಳದೇ ಹೇಳಲು ಪ್ರಾರಂಭಿಸಿದಳು. ಐದು ನಿಮಿಷಗಳ ಕಾಲ ಒಂದೇ ಸಮನೆ, ಆ ಕತ್ತಲಲ್ಲಿ ಅವಳ ಮಂದಸ್ವರ ಕೇಳಿಸುತ್ತಿತ್ತು. ತನ್ನ ಗಂಡನ ಬಗ್ಗೆ ಯಾವ ಹೆಂಡತಿಯೂ ಅಷ್ಟು ಶೀಘ್ರದಲ್ಲಿ ಒಂದು ನಿರ್ಣಯಕ್ಕೆ ಬರುವುದಿಲ್ಲ.

ಆದರೆ ಅವಳಿಗೆ ತನ್ನ ಸಬ್ಜೆಕ್ಟಿನ ಮೇಲಿದ್ದ ಕಮಾಂಡು ಅಂಥಹದು (ಕನಿಷ್ಟ ಅವಳಿಗೆ ನಂಬಿಕೆಯಿತ್ತು.) ಅದರ ಆಧಾರದ ಮೇಲೆ ಹೇಳಿದಳು, ಕಾಗದದ ಅವಶ್ಯಕತೆ ಇದ್ದ ಕಡೆ, ನಗ್ನವಾಗಿದ್ದ ಅವನ ಎಡೆಯ ಮೇಲೆ ತನ್ನ ತೋರು ಬೆರಳಿನಿಂದ ಚಾರ್ಟನ್ನು ಎಳೆಯುತ್ತಿದ್ದಳು.... ವಿವರಿಸುವಾಗ ಅವಳ ಐದು ನಿಮಿಷದ ಮಾತುಗಳಲ್ಲಿದ್ದ ಮುಖ್ಯಾಂಶಗಳು ಅವನಿಗೂ

ಆಶ್ಚರ್ಯ ತಂದಿತ್ತು. ಆದರೆ ಅವಳು ಒಬ್ಬ ಹೆಂಡತಿಯಾಗಿಲ್ಲದೆ, ಅಡ್ವಾನ್ಸಡ್ ಸೈಕಾಲಜೀ ಸ್ಟೂಡೆಂಟಾಗಿ ಅದೆಲ್ಲಾ ವಿವರಿಸಿದಳು.

ಎಲೆ ಹಸಿರು ಆತ್ಮಗೌರವಕ್ಕೆ, ಹಳದಿ ಆತ್ಮ ಚೈತನ್ಯಕ್ಕೆ ಕೆಂಪು ಆತ್ಮ ವಿಶ್ವಾಸಕ್ಕೆ, ನೀಲಿ ಆತ್ಮಾವಲೋಕನಕ್ಕ ನಿದರ್ಶನವಾದರೆ, ಅವನ ವಿಷಯ ದಲ್ಲಿ ಎಲೆ ಹಸಿರು, ನೀಲಿ ಸಂತೃಪ್ತಿಕರವಾಗಿದ್ದರೂ, ಕೆಂಪು ಲೈಟಾಗಿದೆ. ಇನ್ನೂ ಆತ್ಮವಿಶ್ವಾಸ ಬೆಳೆಯಬೇಕು. ಲೈಟ್‌ರೆಡ್ ಸೆಲ್ಫ್‌ಪಿಟೀಗೆ ನಿದರ್ಶನ ಹಳದಿ ಗಾಢವಾಗಿದೆ, ಅಂದರೆ, ಅಗತ್ಯಕ್ಕಿಂತಲೂ ಹೆಚ್ಚು ಚೈತನ್ಯ ಇದೆ ಯೆಂದಾಯಿತು. ಒಬ್ಬ ಸ್ಪೋರ್ಟ್ಸ್‌ಮನ್‌ಗೆ ಅಷ್ಟು ಅಗತ್ಯವಿಲ್ಲ (ಸೆಲ್ಫ್-ಎಸ್ಕೇಪ್)

ಹೆಂಗಸರ ಬಗ್ಗೆ ಹೆಚ್ಚು ಮಾತನಾಡುವವರು. ಸಾಧಾರಣವಾಗಿ ಅವರೊಡನೆ ಕಡಿಮೆ ಸಂಬಂಧ ಹೊಂದಿರುತ್ತಾರೆ. ಆ ಲೆಕ್ಕದಲ್ಲಿ, ಅವರ ಬಗ್ಗೆಯೇ ಹೆಚ್ಚು ಸಂಭಾಷಣೆ ನಡೆದಿದ್ದರಿಂದ, ಅವನಿಗೆ ಬೇರೆ ಯಾವ ಹೆಣ್ಣಿನೊಡನೆಯೂ ಸಂಬಂಧವಿಲ್ಲವೆಂದು ತಿಳಿಯಬಹುದು. ನಿರ್ಮಲವಾಗಿಲ್ಲ ದಿರುವವರು ಹೆಣ್ಣಿನ ಬಗ್ಗೆ ಅಷ್ಟೊಂದು ಜೋಕುಗಳನ್ನು ಹೇಳಲಾರರು. ಆದರೂ ಈ ವಿಷಯದ ಬಗ್ಗೆ ಮತ್ತಷ್ಟು ಪರಿಶೋಧನೆ ಅಗತ್ಯ (ಈ ಕೊನೆಯ ವಾಕ್ಯದ ಬಳಿಗೆ ಬಂದಾಗ ನಕ್ಕಳು.)

## 23 : 58 : 00 Hrs

"ಇನ್ನು ಸಾಕು. ಈಗಾಗಲೇ ತುಂಬಾ ಸಮಯದಿಂದ ಮಾತನಾಡು ತ್ತಿದ್ದೇವೆ. ಮೊದಲ ರಾತ್ರಿ ಹೆಚ್ಚು ಆಯುಕ್ಷೀಣ, ಈ ಪ್ರಸಾರ ಇಲ್ಲಿಗೇ ಮುಗಿಯಿತು." ಎಂದು ಲೈಟಾರಿಸುತ್ತಾ "...ಅಂದಹಾಗೆ ಕೊನೆಯಲ್ಲಿ ಒಂದು ಆಫರ್... ನನ್ನ ಬಗ್ಗೆ, ನನ್ನ ಮನಸ್ಸತ್ವದ ಬಗ್ಗೆ ಇಷ್ಟು ಚೆನ್ನಾಗಿ ವಿವರಿಸಿದ್ದಕ್ಕೆ ನಿನಗೇನು ಕೊಡಲಿ ?" ಕೇಳಿದ,

ಅವಳು ನಕ್ಕು "ಏನು ಕೊಡುತ್ತೀರಿ ?" ಎಂದಳು.

"ಏನು ಕೊಟ್ಟರೂ ತೆಗೆದುಕೊಳ್ಳುತ್ತೀಯಾ ?"

"ಊ...." ಎಂದಳು ಮುಗ್ಧವಾಗಿ.

ಅವನು ಲೈಟಾರಿಸಿ ಬೆಡ್‌ಲೈಟಿನ ಬೆಳಕಿನಲ್ಲಿ ಅವಳನ್ನು ಹತ್ತಿರಕ್ಕೆಳೆದು ಕೊಂಡು ಅವಳ ಕೆನ್ನೆಯನ್ನು ಹಲ್ಲುಗಳಿಂದ ಕಚ್ಚಿಬಿಟ್ಟ. ಅವಳು ಎಷ್ಟೇ ಪ್ರಯತ್ನಪಟ್ಟರೂ ಒಂದು ನಿಮಿಷ ಅವನು ಬಿಡಲೇ ಇಲ್ಲ. ನಂತರ, 'ಸಾಕಾ' ಎಂದು ಕೇಳಿದ. ಅವಳು ತನ್ನ ಕೈಗಳಿಂದ ಕೆನ್ನೆಯನ್ನು ಸವರಿ ಕೊಂಡಳು.

ನೋವಿನಿಂದ ಕಣ್ಣಗಳಲ್ಲಿ ನೀರು ಹರಿಯಿತು.

ಜಾರಿದ ಕಣ್ಣೀರು ತುಟಿಗಳ ಬಳಿಗೆ ಬರುವ ಮುಂಚೆ, ಕೆನ್ನೆಗಳ ಮೇಲಿನ ಹಲ್ಲಿನ ಗುರುತಿನ ಮೇಲೆ ನಿಂತು. ಲೈಟಿನ ಬೆಳಕಿನಲ್ಲಿ ಇಂದ್ರಧನಸ್ಸಿನಂತೆ ಹೊಳೆಯಿತು.

## 23 : 59 : 00 Hrs.

ಆ ಇಂದ್ರಧನಸ್ಸಿನ ಮೇಲೆ ಹರಿಯುತ್ತಿದ್ದ ಕಣ್ಣೀರಿನ ಸಾಲು ಬಿಲ್ಲು ಹಿಡಿದ ಬಾಣದಂತಿದೆ, ಅದು ಕೆಳಗಿಳಿದು ಮಂಗಳ ಸೂತ್ರದವರೆಗೂ ಸಾಗಿ ಮನ್ಮಥನ ಹೂಬಾಣದಂತೆ ಕಂಗೊಳಿಸುತ್ತಿದೆ. ಕತ್ತಿನವರೆಗೂ ಹೋದರೂ ಮನ್ಮಥ—ಪಾರ್ವತಿಗಾಗಿ ಹಿಮಾಲಯದಲ್ಲೆಲ್ಲಾ ಹುಡುಕಾಡಿದ. ಅವನಿಗೆ ಹೆದರಿದ ಪಾರ್ವತಿ. ಸವತಿ ಎಂಬ ಮತ್ಸರವನ್ನೂ ಮರೆತು ಗಂಗೆಯನ್ನು ಪಡೆದುಕೊಳ್ಳೆಂದಳು ,ಗಂಡನಿಗಾಗಿ ! ಮನ್ಮಥ ಭಗೀರಥನಾದ. ಹೊಟ್ಟೆ ಗಂಗಾ ಸೈಕತಸ್ಥಲಿ, ನಾಭಿ ಗಂಗೋತ್ರಿ...

## 23 ; 59 ; 30 Hrs.

....ಇಪ್ಪತ್ನಾಲ್ಕು ವರ್ಷಗಳ ಕಾಲ ಪರ್ವತಶ್ರೇಣಿಗಳ ಮಧ್ಯೆ ಘನೀ ಭವಿಸಿದ್ದ ನೀರಹನಿ ಕೋರಿಕೆಯ ಸ್ಪರ್ಶಕ್ಕೆ ಕರಗಿ ಆವಿಯಾಗುತ್ತಿರುವ ಸಂದರ್ಭದಲ್ಲಿ ...

## 23 ; 59 : 35 Hrs

....ಹದಿನಾರು ವರ್ಷಗಳ ಪ್ರಾಯದಿಂದ ಯೌವನವನ್ನು ತುಂಬಿ ಕೊಂಡು ಬರುತ್ತಿರುವ ಪೌರುಷ---ಪುರುಷತ್ವದ ಮುಂದೆ ಸೋತು, ಗೆದ್ದ ..ಗೆಲುವಿನ ನಾಚಿಕೆಯಿಂದ ತಲೆಬಗ್ಗಿಸಿಕೊಳ್ಳುತ್ತಿರುವ ಸಂದರ್ಭದಲ್ಲಿ....

## 23 : 59 : 45 Hrs

ಎಂಟು ವರ್ಷಗಳಿಂದಲೂ ಮೋಡವೊಂದು ದಾಹದಿಂದ, ದಟ್ಟವಾದ ಅಡವಿಯ ಮೇಲೆ ಪಯಣಿಸಿ, ಒಮ್ಮೆಗೇ ನಿಂತು, ಕೆಳಗೆ ಸುರಿಯಲು ಸಿದ್ಧ ವಾಗುತ್ತಿರುವ ವೇಳೆ....

## 23 : 59 : 53 Hrs

ತೀವವಾದ ಸಮುದ್ರ
ಆ ಮೋಡಕ್ಕೆ ಆಹ್ವಾನವಿತ್ತು—
ಮತ್ತಷ್ಟು ತೀವಾಗಲು ಸಿದ್ಧವಾಗಿರುವ ಸಮಯದಲ್ಲಿ

## 23 : 59 ; 56 Hrs

ಶರೀರಾದ್ಯಂತ ಹರಿಯುತ್ತಿರುವ ರಕ್ತ—ಮತ್ತಷ್ಟು ಹೊಸದಾರಿಗಳಲ್ಲಿ ಹರಿಯಲು ಸಿದ್ಧವಾಗುತ್ತಿದ್ದಂತೆಯೇ, ನರಗಳೆಲ್ಲಾ ಕದನ ಕುತೂಹಲರಾ ಗವನ್ನು ಆಲಾಪಿಸಲು ಪ್ರಾರಂಭಿಸುತ್ತಿದ್ದಂತೆಯೆ, ಅತ್ಯಂತ ಹೆಚ್ಚು ಒತ್ತಡದ

ಗಾಳಿ ಶರೀರದಲ್ಲಿ ಅತ್ತಿಂದಿತ್ತ ನುಗ್ಗುತ್ತಿದ್ದಂತೆಯೇ, ನೀರಿನ ಮಧ್ಯೆ ಇದ್ದರೂ ದಾಹದಿಂದ ವಿಕಸಿಸುತ್ತಿರುವ ಅರಳಿದ ಹೂವು—ಆಯಾಸ ಕೂಡಾ ನಿಶ್ಚಲತ್ವ ಹೊಂದುವ ಅನುಭವ––

23 : 59 : 57 Hrs

ತಂಪಾದ ಆಕಾಶದಲ್ಲಿ ಚಂದ್ರ ನಿಧಾನವಾಗಿ ಚಲಿಸುತ್ತಿರುವ ತೆಯ್ದ ಗಂಧದ ಬೆಳದಿಂಗಳಾದರೆ. ಕೆಳಗೆ ಉದುರಿರುವ ಮಲ್ಲಿಗೆ ಮೊಗ್ಗುಗಳು ಆಕಾಶ. ದಿಂದ ಉದುರಿದ ನಕ್ಷತ್ರಗಳಂತೆ. ಹೆಯರ್‌ಪಿನ್ನು—ಮನ್ಮಥನ ಅಚ್ಚಾಗಿ, ಮೂಗಿನ ಬೊಟ್ಟು––ಕುದುರೆಯ ಕಡಿವಾಣವಾಗಿ, ನೀಳಜಡೆ—ಚಾವಟಿ ಯಾಗಿ ಎಲ್ಲಾ ಹಿಡಿತಗಳನ್ನೂ ಸಡಿಲಿಸುತ್ತಿದ್ದಂತೆಯೇ ದಿಕ್ಕಾಪಾಲಾಗಿ ಓಡುವ ಕುದುರೆಯ ಲಾಳಕ್ಕೆ ಕಂಪಿಸುವ ಅದರಡಿಯ ಭೂಮಿಯಂತೆ–

23 ; 59 : 59 Hrs

ಮಳೆ ಹನಿಗಳ ನಡುವೆ ಪ್ರೇಮದ ಪರಿಪೂರ್ಣತ್ವವನ್ನು ಹೊಂದುತ್ತಿರುವ ಸಮಯದಲ್ಲಿ—

0 : 0 : 0 Hrs

ಬಾಗಿಲಿನ ಮೇಲೆ ಟಕ–ಟಕಾ ಲಾಠಿಯಿಂದ ಕುಟ್ಟುತ್ತಿರುವ ಶಬ್ಧ.

ಅವಳು ಬೆಚ್ಚಿಬಿದ್ದಳು.

ಅವನು ಅವಾಕ್ಕಾಗಿ ಆ ಕಡೆಯೇ ನೋಡತೊಡಗಿದ.

ಮತ್ತೆ ಶಬ್ಧ ಕೇಳಿಸುತ್ತಿದೆ.

ಎರಡು ನಿಮಿಷಗಳ ನಂತರ ಅವನು ಬಾಗಿಲು ತೆರೆದ.

ಎದುರಿನಲ್ಲಿ ಪೋಲೀಸ್ ಇನ್ಸ್‌ಪೆಕ್ಟರನ ಭಾವನಾರಹಿತ ಮುಖ!

"ಮಿಸ್ಟರ್ ರಾಯಣ್ಣ! ಲೇಡೀಸ್ ಹಾಸ್ಟೆಲಿನ ಹದಿಮೂರನೇ ರೂಮಿನಲ್ಲಿ ಲಕ್ಷ್ಮಿ ಎಂಬ ಯುವತಿಯನ್ನು ಕೊಲೆ ಮಾಡಿದ ಕಾರಣಕ್ಕಾಗಿ ನಿಮ್ಮನ್ನು ಅರೆಸ್ಟ್ ಮಾಡುತ್ತಿದ್ದೇವೆ. ಷಾಕ್‌ಗೆ ಷಾಕ್ ತಗುಲಿದಂತೆ ಬಿಟ್ಟ ಬಾಯಿಂದ ವಿಭ್ರಾಂತನಾಗಿ ನೋಡಿದ ರಾಯಣ್ಣ.

ಕಿರಣ್ಮಯಿ ಕಂಗಾಲಾದಳು.

## ಅಧ್ಯಾಯ : ಎರಡು

ಅರ್ಧರಾತ್ರಿಯ ಸಮಯದಲ್ಲಿ ಏತಕ್ಕೋ ಎಚ್ಚರವಾಗಿ ಕಣ್ಣು ಬಿಡುತ್ತಿದ್ದಂತೆಯೇ, ಮಲಗಿರುವ ಮಂಚದ ಆರಂಗುಲದ ಕೆಳಗಿನವರೆಗೂ, ರೂಮೆಲ್ಲಾ ನೀರು ನಿಂತು, ವಸ್ತುಗಳೆಲ್ಲಾ ತೇಲುತ್ತಿರುವಂತೆ ಕಂಡರೆ, ಅದು ಕನಸೋ, ನಿಜವೋ ಅರ್ಥವಾದ ಮನುಷ್ಯ ಹೇಗೆ ಗಲಿಬಿಲಿಗೊಳ್ಳುತ್ತಾನೋ....ಅದು ಕನಸಲ್ಲ, ನಿಜವೇ ಎಂದು ತಿಳಿದುಕೊಳ್ಳಲು ಹೇಗೆ ಸ್ವಲ ಸಮಯ ಹಿಡಿಯುತ್ತದೆಯೋ–ಹಾಗೆಯೇ ಆಯಿತು ಅವಳ ಪರಿಸ್ಥಿತಿ.

ಒಂದು ಮಧುರ ಸ್ವಪ್ನದಿಂದ ಎಚ್ಚರಗೊಂಡಂತೆ ಅನ್ನಿಸಿತವಳಿಗೆ.

ಅವನಿಗಿಂತಲೂ ಮೊದಲು ಅವಳಿಗೇ ಪರಿಸ್ಥಿತಿ ಅರ್ಥವಾಯಿತು.

"ಅ....ಲ....ಲಕ್ಷ್ಮಿ ಸತ್ತುಹೋದಳೇ?" ತನ್ನಲ್ಲಿ ತಾನೇ ಗೊಣಗಿಕೊಳ್ಳುವಂತೆ ಅಂದುಕೊಂಡ. ಅದು ನಿಜಕ್ಕೂ ಅವನ ಅಲ್ಲೋಲ ಕಲ್ಲೋಲ ಮನಸ್ಸಿನ ಸ್ಥಿತಿಯೋ. ಅಥವಾ ಮೋಸಮಾಡಲು ಮುಗ್ಧತೆಯ ನಟನೆಯೋ ಅರ್ಥವಾಗಲಿಲ್ಲವಾಗಲೀ, ಒಂದು ಮಾತ್ರ ನಿಜ!

ಲಕ್ಷ್ಮಿ ಎನ್ನುವ ಒಬ್ಬಾಕೆಯಂತೂ ನಿಜವಾಗಿ ಇದ್ದಳು.

ಅದುವರೆವಿಗೂ ವಾಸ್ತವ.

ಅವಳಾರೆಂದು ತನ್ನ ಗಂಡನಿಗ ಗೊತ್ತು. ಅದು ಕೂಡಾ ನಿಜವೇ.

ಅವನು ಕೇವಲ ಜೋಕಿಗಾಗಿ ಹೇಳುತ್ತಿದ್ದಾನೆ ಎಂದುಕೊಂಡಿದ್ದಳು. ಆದರೆ ಅದು ಸ್ವಲ್ಪ ಮಾತ್ರ ನಿಜ. ಹಾಸ್ಟೆಲಿನ ಕಿಟಕಿಯಿಂದ ತೂಗಾಡಿದ್ದು ಸುಳ್ಳಿರಬಹುದೇನೋ. ಹದಿಮೂರನೇ ನಂಬರ್ ರೂಮಿನ ವಿಷಯ ಮಾತ್ರ ನಿಜ. ಸಾಧಾರಣವಾಗಿ ಯಾವುದಾದರೂ ಕಥೆಯನ್ನೋ, ಜೋಕನ್ನೋ ಹೇಳಬೇಕೆನ್ನಿಸಿದರೆ ನಮ್ಮ ಅನುಭವಗಳಿಗೆ ಸ್ವಲ್ಪ ಮೆರುಗನ್ನು ಬೆರೆಸಿ ಹೇಳುತ್ತೇವೆ. ಕಿಟಕಿಯಿಂದ ತೂಗಾಡುವ ಮಾತು ಅಂಥಹದ್ದೇ ಇರಬಹುದು.

ಎಂಥಹ ಅವಮಾನದ ಸ್ಥಿತಿ ! ಮಲ್ಲಿಗೆ ಹೂಗಳ ಮಂಚದ ಮೇಲಿದ್ದ ಮದುಮಗ ಅರೆಸ್ಟ್ ಆಗುವುದು. ತುಸು ನಾಚಿಕೆಯಿಂದ ತಡಬಡಿಸುತ್ತಾ ತಪ್ಪು ಹೆಜ್ಜೆಗಳನ್ನಿಡುತ್ತಾ ಬೆಳಗಿನ ಜಾವ ಹೊರಗೆ ಬರಬೇಕಾಗಿದ್ದ ಮದುಮಗಳು ಅಸ್ತವ್ಯಸ್ಥವಾಗಿ ಧರಿಸಿದ ಬಟ್ಟೆಗಳಿಗೆ ಆ ರೂಮಿನಲ್ಲಿಯೇ ಇರಬೇಕೋ ಹೊರಗೆ ಹೋಗಬೇಕೋ ತಿಳಿಯದ ಸ್ಥಿತಿಯಲ್ಲಿ. ಏನನ್ನು ನಿಶ್ಚಯಿಸಿಕೊಳ್ಳಲಾರದ ಸ್ಥಿತಿಯಲ್ಲಿ ಶಿಲಾಪ್ರತಿಮೆಯಂತೆ ನಿಲ್ಲಬೇಕಾದ ಪರಿಸ್ಥಿತಿ !

"ರಾತ್ರಿಯ ಇಂಥಹ ಅವೇಳೆಯಲ್ಲಿ, ಆದರಲ್ಲೂ ಮೊದಲ ರಾತ್ರಿ ಅವನೆಲ್ಲಿಯೂ ಓಡಿಹೋಗುವುದಿಲ್ಲ. ಬೇಕಾದರೆ ನಾವು ಜವಾಬ್ದಾರಿ ತೆಗೆದುಕೊಳ್ಳುತ್ತೇವೆ. ಒಮ್ಮೆ ಮಾತ್ರ ಬರುವ ಈ ರಾತ್ರಿಯನ್ನು ಭಂಗ ಪಡಿಸಬೇಡಿ" ಎಂದು ಅವರಲ್ಲಿ ಯಾರೂ ಇನ್ಸ್‌ಪೆಕ್ಟರ್‌ಗೆ ಹೇಳಲೇ ಇಲ್ಲವಲ್ಲಾ !

ಊದಿನ ಕಡ್ಡಿಯ ಹೊಗೆ ಆ ರೂಮಿನಿಂದ ಇನ್ನೂ ಹೋಗಿಲ್ಲ. ಹಾಸಿಗೆಯ ಮೇಲಿನ ಬಟ್ಟೆಗಳು ಇನ್ನೂ ಪೂರ್ತಿ ನಲುಗಿಯೇ ಇಲ್ಲ.

ಇನ್ಸ್‌ಪೆಕ್ಟರ್ ಹಾಗೆಯೇ ನಿಂತಿದ್ದ ರಾಯಣ್ಣನ ಕೈಯನ್ನು ಸ್ಪರ್ಶಿಸುತ್ತಾ "ಬನ್ನಿ" ಎಂದರು ಮತ್ತೊಮ್ಮೆ. ಅದುವರೆವಿಗೆ ರಾಯಣ್ಣ ಕೂಡಾ ಪರಿಸ್ಥಿತಿಯನ್ನು ಅರ್ಥಮಾಡಿಕೊಂಡಿದ್ದವನಂತೆ ಕಂಡ. ನಿಧಾನವಾಗಿ ನಡೆದ, ನಡೆದು

ಬಾಗಿಲಿನ ತಡೆ ಹೋಗಲಿಲ್ಲ, ಕಿರಣ್ಮಯಿಯ ಬಳಿಗೆ ಬಂದ. ಅವಳುಸಪ್ಪಗೆ ಅವನ ಕಡೆ ನೋಡಿದಳು, ಎಷ್ಟಾದರೂ ಹೆಣ್ಣಲ್ಲವೇ ? ಭಯದಿಂದಲೋ, ಅಥವಾ ಸಿಕ್ಕಿಹಾಕಿಕೊಂಡಿರುವ ಅವನು ತಲೆತಗ್ಗಿಸಿಕೊಂಡು, ನಿಧಾನವಾಗಿ, ಅವಳಿಗೆ ಮಾತ್ರ ಕೇಳಿಸುವಂತೆ ಹೇಳಿದ.

"ಯಾವಾಗಲಾದರೂ ನಮ್ಮಲ್ಲೊಬ್ಬರು ಏನಾದರೂ ಆಲೋಚನೆ ಮಾಡುತ್ತಿರುವಾಗ, ಎರಡನೆಯವರು ಆಲೋಚಿಸುತ್ತಿರುವುದು ಏನೆಂದು ಕೇಳಿದರೆ ಅವನು ಏನು ಆಲೋಚಿಸುತ್ತಿರುವುದು ಎಂದು ಹೇಳಬೇಕೆಂದು ಅಂದು ಕೊಂಡಿದ್ದೆವಲ್ಲಾ ನೆನಪಿದೆಯಾ ಕಿರಣ್ಮಯಿ ! ಪ್ರತಿ ಬಾರಿಯೂ ನಾನೇ ಕೇಳುತ್ತಾ ಬಂದಿದ್ದೆ. ಈ ರಾತ್ರಿ ಒಮ್ಮೆಯಾದರೂ ನೀನು ಕೇಳಲಿಲ್ಲ, ಕೇಳದಿದ್ದರೂ ನಾನೇ ಹೇಳುತ್ತಿದ್ದೇನೆ. ಈಗ ನಾನೇನು ಅಂದುಕೊಳ್ಳು ತ್ತಿದ್ದೇನೋ ಗೊತ್ತಾ ಕಿರಣ್ಮಯಿ ? ಕನಿಷ್ಟ ನನ್ನ ಹೆಂಡತಿಯಾದರೂ ನನ್ನನ್ನು ನಂಬಿದರೆ ಸಾಕು ಎಂದುಕೊಳ್ಳುತ್ತಿದ್ದೇನೆ. ಒಂದು ರಾತ್ರಿಯ ಪರಿಚಯ ದಿಂದಾಗಿ ಎಂಥಹ ಸೈಕಾಲಿಜಿಸ್ಟ್ ಆದುರಿಗಿರುವ ಮನುಷ್ಯನನ್ನು ತಿಳಿದು ಕೊಳ್ಳುವುದಕ್ಕಾಗುವುದಿಲ್ಲ--ಎಂದು ನೀನು ಹೇಳಿದ್ದೆ. ಮನಸ್ಸಿನಲ್ಲಿರುವ ಮಾತನ್ನು—ಅದೆಷ್ಟೇ ನೋವು ಕೊಡುವುದುಂಟು, ಹೇಳಲು ಮುಜುಗರ ವಾದರೂ--ಒಬ್ಬರಿಗೊಬ್ಬರು ಹೇಳಿಕೊಳ್ಳಬೇಕೆಂದು ಅಂದುಕೊಂಡಿದ್ದೆವು. ಲಕ್ಷ್ಮಿ ನನಗೆ ಗೊತ್ತು. ಅಷ್ಟೇ ಅದಕ್ಕಿಂತಲೂ ಹೆಚ್ಚಿಗೆ ಬೇರೇನೂ ಇರಲಿಲ್ಲ. ಮಾನಸಸಾಕ್ಷಿಯಾಗಿ ಹೇಳುತ್ತಿದ್ದೇನೆ. ನನ್ನನ್ನು ನಂಬು" ಎಂದು ಅಲ್ಲಿಂದ ನಡೆದುಬಿಟ್ಟ. ಅವನ ಹಿಂದೆಯೇ ಇನ್ಸ್‌ಪೆಕ್ಟರ್ ಕೂಡಾ ಹೊರಟರು.

ಅವರಿಬ್ಬರೂ ಆ ರೂಮಿನಿಂದ ಹೊರ ನಡೆಯುತ್ತಿದ್ದಂತೆಯೇ, ಒಟ್ಟಿಗೆ ಎಲ್ಲಾ ಆತ್ಮೀಯರೂ ಒಳಗೆ ನುಗ್ಗಿದರು.

"ಹೀಗೆ ನಡೆಯಿತಲ್ಲೇ ತಾಯಿ, ನಿನ್ನ ಜೀವನವೆಲ್ಲಾ ಹಾಳಾಗಿ ಹೋಯಿತಲ್ಲಾ...." ಎಂದು ಅಳಲು ಪ್ರಾರಂಭಿಸಿದಳು ತಾಯಿ.

ಈ ನೆರೆದಿದ್ದ ಗುಂಪಿನ ನಡುವೆ ತಾನು ಹೇಗೆ ಇನ್ಸ್‌ಪೆಕ್ಟರನನ್ನು ಎದುರಿಸಿದ ಎಂದು ಒಂದಕ್ಕೆ ನಾಲ್ಕು ಸೇರಿಸಿ ಹೇಳುತ್ತಿದ್ದಾರೆ ತಂದೆ.

ಗಂಡಿನ ತಾಯಿ ಮತ್ತೊಂದು ಮೂಲೆಯಲ್ಲಿ ತನ್ನ ಬಳಗದವರ ಗುಂಪಿನ ನಡುವೆ ಶ್ಲೋಕಗಳನ್ನು ಹಾಡುತ್ತಿದ್ದಾಳೆ. "ಆ ಕ್ರಿಕೆಟ್ ಬೇಡವೋ ದೇವರೇ ಅಂತಿದ್ರೆ ಅದೇ ಹುಚ್ಚು ಹಿಡಿಸಿಕೊಂಡಿದ್ದ. ಪಟ್ಟಣದ ಓದು ನಮಗೇತಕ್ಕೆ ಎಂದು ಹೇಳಿದರೂ ಕೇಳಲಿಲ್ಲ. ಅದ್ಯಾವಳನ್ನೋ ತಗುಲಿಸಿಕೊಂಡು--ಅವಳೀಗ ಸತ್ತಿದ್ದಾಳೆ. ನನ್ನ ಮಾತನ್ನು ಯಾರಾದರೂ, ಯಾವಾಗಲಾದರೂ ಕೇಳಿದ್ದಾರಾ ?"

ಅಷ್ಟೇರಲೇ ಈ ಕಡೆಯಿಂದ ಈ ತಾಯಿ ಪ್ರಾರಂಭಿಸಿದಳು, "ಕೆಂಡವಿಲ್ಲದೆ, ಹೊಗೆ ಹೇಗೆ ಬರುತ್ತೆ ? ಇಷ್ಟೊಂದು ಓದಿಕೊಂಡಿದ್ದ ನನ್ನ ಮಗಳಿಗೆ ಇಂಥಹ ಸಂಬಂಧ ಏತಕ್ಕೆಂದು ಹೊಡೆದುಕೊಳ್ಳುತ್ತಲೇ ಇದ್ದ. ನನ್ನ ಮಾತನ್ನು ಯಾರೂ ಕೇಳಲಿಲ್ಲ. ಈಗ ಅನುಭವಿಸಿ."

ತಂದೆ ಯಾರೊಡನೆಯೋ ಹೇಳುತ್ತಿದ್ದಾರೆ. "ಸ್ವಲ್ಪ ಹೆಸರು ಬಂದರೆ ಹೀಗೇ ನೋಡಿ. ಪಾಪ ಹೆಣ್ಣು ಮಗಳ ಕತ್ತನ್ನು ಕೊಯ್ದುಬಿಟ್ಟ. ಮೊದಲು ನಮಗೆ ಅನುಮಾನವೇ ಬಂದಿರಲಿಲ್ಲ."

ಕಿರಣ್ಮಯಿ ತನ್ನ ತಾಯಿ ತಂದೆಯರ ಕಡೆ, ಅತ್ತೆಯ ಕಡೆ ವಿಸ್ಮಯದಿಂದ ನೋಡಿದಳು. ಈಗೊಂದು ಗಂಟೆಯವರೆವಿಗೂ ಅವನು ಲವ್ವಬಲ್ ಬಾಯ್ ! ಕಿರಣ್ಮಯಿ ಅದೃಷ್ಟವಂತಳು. ಕ್ಷಣದಲ್ಲಿಯೇ ಇದೆಲ್ಲಾ ದುರಾದೃಷ್ಟ, ಪ್ರಾರಬ್ಧ.

ಮನುಷ್ಯರ ನಡೆತೆಯಲ್ಲಿ ಯಾವ ವ್ಯತ್ಯಾಸವೂ ಇಲ್ಲ. ತನ್ನ ತಂದೆ ತಾಯಿಯರ ವಿಷಯ ಹಾಗಾದರೆ. ಅವನ ಸ್ವಂತ ತಾಯಿಕೂಡಾ ಮಗನ ಬಗ್ಗೆ ಹಾಗೆ ಮಾತಾಡುವುದು ಅವಳಿಗೆ ತುಂಬಾ ಘೋರವಾಗಿ ಕಾಣಿಸಿತು. ತಾಯಿಯ ಪ್ರೇಮದ ಬಗ್ಗೆ ಅದೆಷ್ಟೋ ಜನ ಎಷ್ಟೋ ರೀತಿಯ ಕಥೆಗಳನ್ನು ಬರೆದಿದ್ದಾರೆ, ಕಾವ್ಯಗಳನ್ನು ರಚಿಸಿದ್ದಾರೆ. ಇವರೆಲ್ಲರಿಗೂ ಎಂಥೆಂಥಹ ತಾಯಿಯರಿರುತ್ತಾರೆಂದು ತಿಳಿದಿಲ್ಲವೇ ? ಅಥವಾ 'ತಾಯಿ' ಯೆಂದರೆ ಊಹಾ ಲೋಕದಲ್ಲಿ ಕಲ್ಪಿಸಿಕೊಂಡ ಒಂದು ಶುಭ್ರವಾದ ಹೆಸನೇನಾ ? ರಾಯಣ್ಣ ಎಂಥಹವನು ? ಏನು ಮಾಡಿದ ಎಂಬುದಲ್ಲಿ ಇಲ್ಲಿಯ ಪ್ರಶ್ನೆ !

ತನ್ನ ತಾಯಿ ಅವನ ತಾಯಿ ಎಲ್ಲರೂ ಇಷ್ಟೇನಾ ಎಂಬುದು ಅವಳಿಗೆ ಅರ್ಥವಾಗಲಿಲ್ಲ.

ಅಷ್ಟರಲ್ಲಿ ತನ್ನ ತಂದೆ—ತಾಯಿಯಾದ ಮಾತನ್ನು ಅವನ ತಾಯಿ ಕೇಳಿಸಿಕೊಂಡಿರಬೇಕು ಇದ್ದಕ್ಕಿದ್ದಂತೆಯೇ ಪ್ರಾರಂಭಿಸಿದಳು.

"ಕೆಲವರು ಕಾಲಿಟ್ಟ ವೇಳೆಯ ವಿಶೇಷವಿದು ಜಾತಕವಿಲ್ಲವೆಂದು ಹೇಳಿದಾಗಲೇ ಅಂದುಕೊಂಡೆ, ಇಂಥಹದ್ದೇನೋ ಆಗಿರುತ್ತದೆಂದು. ಹೊಸ ಸೊಸೆ ಬರುತ್ತಿದ್ದಂತೆಯೇ ಅನಿಷ್ಟ ಪ್ರಾರಂಭವಾಯಿತು. ಇನ್ನೂ ಅದೆಷ್ಟು ಕಷ್ಟಗಳನ್ನು ಅನುಭವಿಸಬೇಕೋ ಏನೋ—-ಇದೆಲ್ಲಾ ನಮ್ಮ ಪ್ರಾರಬ್ಧ ಕರ್ಮವೋ ಅಪ್ಪಾ—ಈಗೇನು ಮಾಡಬೇಕೋ ದೇವರೆ—"

ಅವಳು ಹೀಗೆ ಪ್ಲೇಟನ್ನು ತಿರುಗಿಸಿ ಹಾಕುತ್ತಿದ್ದಂತೆಯೇ ಆಕಡೆಯಿಂದ ತಾಯಿ ಅಂದಳು.

"ಅವನು ಮಾಡಿದ ತಪ್ಪೆಲ್ಲಾ ಹೆಣ್ಣಿನ ಮೇಲೆ ಹಾಕ್ತಿದೀರಲ್ಲಾ.... ಇನ್ನೆಷ್ಟು ಇಂಥಹ ಕೆಲಸಗಳನ್ನು ಮಾಡ್ತಿದ್ದನೋ ? ಮುಂದೆ ನಿಮಗೇ ಗೊತ್ತಾಗುತ್ತೆ."

ಕಿರಣ್ಮಯಿಗೆ ಅಸಹ್ಯವಾಯಿತು. ಮಗನ ಬಗ್ಗೆಯಾಗಲೀ, ಮಗಳ ಬಗ್ಗೆಯಾಗಲೀ ಒಬ್ಬರೂ ಆಲೋಚಿಸಬಲ್ಲ. ತಮ್ಮ ತಮ್ಮ ವಾದಗಳಿಗೆ ಬಲ ಹೆಚ್ಚಿಸಿಕೊಳ್ಳಲ ಇಬ್ಬರೂ ಪ್ರಯತ್ನಿಸುತ್ತಿದ್ದಾರೆ ಅಷ್ಟೆ.

ಅಷ್ಟರಲ್ಲಿ ಮೂರನೇ ಅಣ್ಣ ಎರಡನೇ ಅಣ್ಣನೊಡನೆ, "ನನಗೆ ತಿಳಿದಿರುವ ಎಸ್ಸೈ ಒಬ್ಬ ಪಕ್ಕದ ಸ್ಟೇಷನ್ನಿನಲ್ಲಿದ್ದಾನೆ, ನಾಳೆ ಬೆಳಿಗ್ಗೆ ಹೋಗಿ ಅವರೊಡನೆ ಮಾತನಾಡಿ ಭಾವನನ್ನು ಬಿಡಿಸಬಹುದು" ಎಂದು ಹೇಳಿದ. ಕಿರಣ್ಮಯಿ ಅವನ ಕಡೆ ಒಂದು ರೀತಿ ನೋಡಿದಳು. ಇಂಥಹ ಮನುಷ್ಯರ ಮನಸ್ಸತ್ವ ತುಂಬಾ ಕರುಣಾಮಯವಾಗಿರುತ್ತದೆ. ಏನಾದರೂ ಸಮಸ್ಯೆ ಬಂದಾಗ ತಮಗೆ ತಿಳಿದ ಯಾವುದೋ ಒಂದು ಸಣ್ಣ ಪರಿಷ್ಕಾರ ಸೂಚಿಸಿ. ಇನ್ನು ಆ ಸಮಸ್ಯೆ ತಮ್ಮದಲ್ಲವೆಂದುಕೊಳ್ಳುವುದು. ಅವರು ಕೂಡಾ ಅದನ್ನು ಪೂರ್ತಿಯಾಗಿ ಮರೆಯುವುದು. ತುಂಬಾ ಸುಲಭವಾಗಿ ತಮ್ಮ ಸಲಹೆಗಳನ್ನು (ಕೇವಲ ಸಲಹೆಗಳನ್ನು) ನೀಡಿ ಸಮಸ್ಯೆಗಳನ್ನು ಪರಿಹರಿಸುವಂತೆ ನಟಿಸುತ್ತಾರೆ

ಕಿರಣ್ಮಯಿ ಕ್ರಮೇಣ ಎಚ್ಚರಗೊಂಡಳು. ಸುತ್ತಲೂ ನೋಡಿದಳು.

ಅಷ್ಟರಲ್ಲಿ ತನ್ನ ಮಾವ--ರಾಯಣ್ಣನ ತಂದೆ ಅವಳ ಬಳಿಗೆ ಬಂದರು "ತಾಯಿ" ಅಂದರು ಕಿರಣ್ಮಯಿ ತಲೆ ಎತ್ತಿ ನೋಡಿ ತಗ್ಗಿಸಿದಳು. ಆತನೊಬ್ಬನೇ ಈ ವಾದ ಪ್ರತಿವಾದದಲ್ಲಿ ಅಸಂದರ್ಭಿಕ ಪ್ರಲಾಪದಲ್ಲಿ ಪಾಲ್ಗೊಳ್ಳದೇ ಇದ್ದುದು.

"ತಾಯಿ ! ಹೀಗೆ ಆಗುವುದೆಂದು ನಾನಂದುಕೊಂಡಿರಲಿಲ್ಲ. ಯಾರಿಗೂ ನಡೆಯದಂಥಹದ್ದು ನಡೆದುಹೋಯಿತು. ನನ್ನ ಮಗ ಏನು ಮಾಡಿದ್ದಾನೋ ನನಗೆ ಗೊತ್ತಿಲ್ಲ. ನಾವೇನೋ ದೂರದ ಆ ಹಳ್ಳಿಯಲ್ಲಿ.... ಅವನು ಕೆಲಸ ಮಾಡುತ್ತಾ ಇಲ್ಲಿ. ಯಾವಾಗ ಆ ಹುಡುಗಿಯ ಸ್ನೇಹ ಮಾಡಿದನೊ ಅದೂ ಗೊತ್ತಿಲ್ಲಮ್ಮ. ನಮಗೆ ನಿಜವಾಗಿಯೂ ಆ ಹುಡುಗಿಯ ಸಾವಿಗೆ ಇವನೇ ಕಾರಣನಾಗಿದ್ದರೆ, ಅದಕ್ಕಾಗಿ ಅವನಿಗೆ ಶಿಕ್ಷೆ ವಿಧಿಸಿದರೆ ನನಗೂ ಸಂತೋಷ. ನನ್ನ ನೋವು ಅದಲ್ಲ ತಾಯಿ ! ನನ್ನ ಬಗ್ಗೆ. ಯಾವ ಪಾಪವನ್ನೂ ಮಾಡದ ನಿನ್ನ ಬದುಕನ್ನು ಹಾಳು ಮಾಡಿದವಲ್ಲಾ. ನಮ್ಮನ್ನು ಕ್ಷಮಿಸು ತಾಯಿ...."

ಕಿರಣ್ಮಯಿ ತುಟಿಗಳನ್ನು ಕಚ್ಚಿಕೊಂಡಳು. ಇದನ್ನು ಸಹಿಸಲು ಅವಳಿಂದಾಗಲಿಲ್ಲ. ತನ್ನ ಮನೆಯಲ್ಲಿ ಎಂದೂ ಸಿಗದ 'ನಿಧಿ' ಇದು ತನ್ನ ಕಣ್ಣನ್ನು ಪಕ್ಕಕ್ಕೆ ತಿರುಗಿಸಿಕೊಂಡು ಅವಳಲ್ಲಿಂದ ಹೊರಟುಹೋದಳು.

ಇನ್ನೂ ಬಂಧುಗಳೆಲ್ಲಾ ನೆರೆದು ಸಣ್ಣ ಸ್ವರಗಳಲ್ಲಿ ಮಾತಾಡಿಕೊಳ್ಳುತ್ತಿದಾರೆ, ಇನ್ಸ್‌ಪೆಕ್ಟರ್ ಬರುತ್ತಿದ್ದಂತೆಯೇ ಕಂಡಿದ್ದ ಭಯ ಉದ್ರಿಕ್ತತೆ. ಅವರಲ್ಲಿ ಈಗ ಒಂದು ರೀತಿಯ ಆನಂದದಿಂದ ಕೂಡಿದ ಉದ್ವೇಗವಾಗಿತ್ತು. ಆನಂದ ಎನ್ನುವುದು ಇಲ್ಲ--ಸಂಪೂರ್ಣವಾಗಿ ಸರಿಹೊಂದುವ ಪದ ! ಒಂದು ವಿಚಿತ್ರವಾದ ಘಟನೆಗೆ ಅವರೆಲ್ಲಾ ಪ್ರತ್ಯಕ್ಷ ಸಾಕ್ಷಿಗಳು. ಅಲ್ಲಿಂದ ಹೋದ ನಂತರ ಎಲ್ಲರಿಗೂ ವಿವರಿಸಲು ಒಂದು ಅವಕಾಶ ಸಿಕ್ಕಂತಾಗಿತ್ತು.

ಇನ್ನು ಇವರ ಬಗ್ಗೆ ತಲೆ ಕೆಡಿಸಿಕೊಳ್ಳುವುದರಲ್ಲಿ ಅರ್ಥವಿಲ್ಲ ಎನ್ನಿಸಿತು ಅವಳಿಗೆ. ಕಿರಿಯ ಅಣ್ಣನ ಬಳಿ ಬಂದು, "ಪೋಲೀಸ್ ಸ್ಟೇಷನ್‌ಗೆ ಹೋಗ್ತೀಯಾ ಅಣ್ಣಾ" ಕೇಳಿದಳು. ಬೇಕೂ ಬೇಡದವನಂತೆ ಅವಳ ಕಡೆ

ನೋಡಿದ ಅವಳಿಗೆ ಒಂದು ಕ್ಷಣ ಅವಳೇನು ಕೇಳುತ್ತಿದ್ದಾಳೆಂದೇ ಅರ್ಥ ವಾಗಲಿಲ್ಲ.

"ಪೋಲೀಸ್ ಸ್ಟೇಷನ್ನಿಗಾಗಿ ?...ಎಂಥಹ ಅವೇಳೆಯಲ್ಲಿ !" ಗಾಬರಿ ಯಿಂದ ಕೇಳಿದ. "ಹೌದಣ್ಣಾ ! ಅವರೊಬ್ಬರೇ ಇರತ್ತಾರೆ. ಎಲ್ಲಾ ಹಠಾತ್ತಾಗಿ ನಡೆಯಿತು. ನೀನೊಂದು ಬಾರಿ ಅವರನ್ನು, ಕಂಡರೆ ಧೈರ್ಯ."

ಅವನಿಗೇನು ಹೇಳಬೇಕೋ ತೋಚಲಿಲ್ಲ. ಬಹುಶಃ ಎಲ್ಲಿ ಹುಡುಕುವುದು ಎಂದು ಆಲೋಚಿಸುತ್ತಿದ್ದನೇನೋ ? ಸ್ವಲ್ಪ ಸಮಯದ ನಂತರ, "ಇಷ್ಟೊತ್ತಿನ ರಾತ್ರಿಯಲ್ಲಿ ಪೋಲೀಸ್ ಸ್ಟೇಷನ್ನಿನೊಳಗೆ ಬಿಡುತ್ತಾರೋ" ಅಂದ ಅವನಿಗೆ ಹೋಗಲು ಇಷ್ಟವಿಲ್ಲವೆಂದು ಅವನ ಮಾತಿನ ರೀತಿಯಿಂದಲೇ ಗಮನಿಸಿದಳು.

ಅಷ್ಟರಲ್ಲೇ ಅವನ ಹೆಂಡತಿ—ತನ್ನ ಅತ್ತಿಗೆ ಯಾರೊಡನೆಯೋ ಸಣ್ಣ ದಾಗಿ, ತನಗೆ ಕೇಳಿಸುವಂತೆ ಹೇಳುತ್ತಿದ್ದಳು.

"ಎಲ್ಲಾ ಹೊಸ...ಹೊಸದಾಗಿ ನಡೆಯುತ್ತಿದೆ ಈ ಮನೆಯಲ್ಲಿ ! ಈ ಪೋಲೀಸರು, ಅರೆಸ್ಟು ನಾವಿದುವರೆವಿಗೂ ಎಲ್ಲಿಯೂ ಕೇಳಿರಲಿಲ್ಲ. ಅಂದಹಾಗೆ ಅತ್ತಿಗೆ—ಲಾಕಪ್ಪಿನಲ್ಲಿ ಮಲಗಿಕೊಳ್ಳಲು ಚಾಪೆ, ತಲೆದಿಂಬು ಕೊಡುತ್ತಾರಾ ?"

"ಚಾಪೆ, ತಲೆದಿಂಬೂ ? ಚೆನ್ನಾಗಿದೆ, ಕೊಡ್ತಾರೆ, ಕೊಡ್ತಾರೆ, ಎಂದು ಒದ್ದು ಮೂಲೆಗೆ ತಳ್ತಾರೆ.."

ಇವೆಲ್ಲವನ್ನೂ ಯಾವುದೋ ಕಥೆಯಲ್ಲಿಯೂ ಪುಸ್ತಕದಲ್ಲಿಯೋ ಓದಿದರೆ 'ಛೇ, ಹೀಗೆ ನಡೆಯುತ್ತಾ ?' ಅಂದುಕೊಳ್ಳುತ್ತಿದ್ದಳು. ಆದರೆ ಕಣ್ಣ ಮುಂದೆ ನಡೆಯುತ್ತಿರುವ ಘಟನೆ ಇದು.

ಅಷ್ಟರಲ್ಲಿ ಅವಳ ಮಾವ ಹತ್ತಿರಕ್ಕೆ ಬಂದು, "ನಾವಿನ್ನು ಹೊರಡೋಣವಾ ತಾಯಿ ?" ಎಂದು ಕೇಳಿದರು. ಅವಳು ಆಶ್ಚರ್ಯದಿಂದ ಆತನ ಕಡೆ ನೋಡಿ, ಅಷ್ಟರಲ್ಲೇ ಒಂದು ನಿರ್ಣಯಕ್ಕೆ ಬಂದವಳಂತೆ ಸಂತೋಷದಿಂದ, "ಹಾಗೇ ಆಗಲೀ" ಅಂದಳು ಅಷ್ಟು ಮಾತ್ರ ಆಸರೆ ಸಿಕ್ಕಿದರೆ ಸಾಕು. ಅವಳಿಗೆಷ್ಟೋ ನೆಮ್ಮದಿ.

ಮಾವನೊಡನೆ ಮೊದಲ ರಾತ್ರಿ ಪೋಲೀಸ್ ಸ್ಟೇಷನ್ನಿಗೆ ಹೋಗು ತ್ತಿದ್ದ ಮದುಮಗಳನ್ನು ಕಂಡು ಅಲ್ಲಿದ್ದವರೆಲ್ಲಾ ತಲೆ ಚಚ್ಚಿಕೊಂಡರು.

"ನಾನು ಬರ್ತೀನಿ ಬಿಡು" ಎಂದ ಅವಳ ಅಣ್ಣ.

"ಬೇಡ ಅಣ್ಣ, ಇಷ್ಟು ರಾತ್ರಿ ಹೊತ್ತಿನಲ್ಲಿ ಒಳಗೆ ಬಿಡುತ್ತಾರೋ. ಇಲ್ಲವೋ ?" ಎಂದು ಚುಚ್ಚಿ ನುಡಿದು. ಮಾವನೊಡನೆ ಹೊರಟಳು.

ಅದುವರೆವಿಗೆ ಇನ್ಸ್‌ಪೆಕ್ಟರ್ ಉಳಿದ ಫಾರ್ಮಾಲಿಟಿಗಳನ್ನೆಲ್ಲಾ ಮುಗಿಸಿದವರಂತಿದ್ದಾರೆ, ಬಂದ ಇಬ್ಬರನ್ನೂ ಕಂಡು ಆಶ್ಚರ್ಯಪಟ್ಟರು ಮುಖ್ಯವಾಗಿ ಮದುಮಗಳನ್ನು ಕಂಡು.

"ಒಂದು ಸಾರಿ ನಾವು ಅವರನ್ನು ನೋಡಬಹುದಾ ಇನ್ಸ್‌ಪೆಕ್ಟರ್ ?"

"ಷ್ಯೂರ್--ಷ್ಯೂರ್ ಅಂದರು ಅವರು--"ಲಾಕಪ್ಪಿನಲ್ಲಿ ಹಾಕಲಿಲ್ಲ. ಒಳಗಡೆ ರೂಮಿನಲ್ಲಿ ಮಲಗಲು ತಿಳಿಸಿದ್ದೇನೆ" ಎಂದು ಒಳಗೆ ಕರೆದೊಯ್ಯುತ್ತಾ "ಸಾರಿ ನನಗೆ ನಿಮ್ಮ ಫಸ್ಟ್‌ನೈಟ್....ಆದರೂ ರೂಲ್ಸನ್ನು ನಾನು ತಾನೇ ಏನು ಮಾಡಬಲ್ಲ ?" ಎಂದರು

ಅಪರಾಧಿ ಇದ್ದ ಸ್ಥಳದವರೆಗೂ ಹೋಗಿ 'ಕರುಣೆ'ಯಿಂದಲೋ ಮತ್ಯಾವುದೇ ಕಾರಣದಿಂದಲೂ ಅವನನ್ನು ಅರೆಸ್ಟ್ ಮಾಡಲಿಲ್ಲವೆಂದು ತಿಳಿದರೆ ಕಾರಣಗಳೇನಿದ್ದರೂ ಮೊದಲು ತನ್ನನ್ನು ಸಸ್ಪೆಂಡ್ ಮಾಡುತ್ತಾರೆ ಇನ್ಸ್‌ಪೆಕ್ಟರ್‌ಗೆ ಕ್ರಿಕೆಟೆಂದರೆ ಸ್ವಲ್ಪ ಇಂಟ್ರೆಸ್ ಕೂಡಾ. ರಾಯಣ್ಣನ ಹೆಸರನ್ನು ಕೇಳಿದ್ದರು. ಹಾಗಾಗಿ ತಾನು ಅರೆಸ್ಟ್ ಮಾಡಿವಾಗಿನಿಂದ ಮನಸ್ಸಿನ ಒಂದು ಮೂಲೆಯಲ್ಲಿ ಗಿಲ್ಟಿ ಫೀಲಿಂಗ್ ಇದ್ದೇ ಇದೆ.

ಕಿರಣ್ಮಯಿಯ ಮಾವನವರಿಗೆ ಮಾತ್ರ ಇದು ವಿಚಿತ್ರವಾಗಿದೆ. ಅವರು ತಿಳಿದ ಮಟ್ಟಿಗೆ ಪೋಲೀಸ್ ಸ್ಟೇಷನ್ ಅಂದರೆ, ಅಲ್ಲಿ ಎಲ್ಲರೂ ಯಮ ಭಟ ರಂತೆ, ಬಂದವರನ್ನೆಲ್ಲಾ ಲಾಠಿಯಿಂದ ಬಡಿದು ಒಳಗೆ ತಳ್ಳುತ್ತಾರೆಂದೇ ಅವರು ಭಾವಿಸಿದ್ದರು. ಅದಕ್ಕೆ ಸಂಪೂರ್ಣ ಭಿನ್ನವಾಗಿ ಇಲ್ಲಿಯ ಪರಿಸ್ಥಿತಿ. ಅವರು ಪೋಲೀಸ್ ಸ್ಟೇಷನ್ನಿಗೆ ಬಂದದ್ದು ಒಂದು ರೀತಿಯಲ್ಲಿ ಒಳ್ಳೆಯದೇ ಆಯಿತು. ಇಲ್ಲದಿದ್ದರೆ ರಾತ್ರಿಯಲ್ಲಾ ತನ್ನ ಮಗನಿಗೆ ಚಿತ್ರಹಿಂಸೆ ನೀಡುತ್ತಿದ್ದಾರೆಂದು ಊಹಿಸಿಕೊಂಡು ನೋವನ್ನು ಅನುಭವಿಸಬೇಕಾಗಿತ್ತು.

ಈ ಘಟನೆಯಿಂದ ತುಂಬಾ ನೊಂದುಕೊಂಡವನು ರಾಯಣ್ಣ. ಆಟಗಾರರು, ಕಲಾವಿದರು ಮೇಲೆ ಹೇಗೆ ಕಂಡರೂ ಒಳಗೆ ಬಹಳ ಸೂಕ್ಷ್ಮ ಮನಸ್ಸಿನವರಾಗಿರುತ್ತಾರೆ. ಅರ್ಧರಾತ್ರಿಯ ವೇಳೆ ನಡೆದ ಈ ಘಟನೆಯಿಂದ ಅವನಿಗೆ ಏನೂ ಅರ್ಥವಾಗದಷ್ಟು ಅವನ ಮೆದುಳು ನಿಷ್ಕ್ರಿಯವಾಗಿತ್ತು. ಯಾವುದೋ 'ಟ್ರಾನ್ಸ್' ನಲ್ಲಿ ಇದ್ದವನಂತೆ ಹೆಂಡತಿಯೊಡನೆ ಕೊನೆಯಬಾರಿ ಮಾತನಾಡಿ ಇನ್ಸ್‌ಪೆಕ್ಟರ್ ಜೊತೆ ನಡೆದಿದ್ದ. ಪೋಲೀಸ್ ಸ್ಟೇಷನ್ನಿನಲ್ಲಿ ಒಂಟಿಯಾಗಿ ಕುಳಿತ ನಂತರ. ಕತ್ತಲು ಕಳೆಯುತ್ತಿದ್ದಂತೆ, ಒಂದೊಂದೇ ಪೊರೆ ಕಳಚಿ, ವಾಸ್ತವ ಎದುರಿಗೆ ನಿಂತು ನಗಲು ಪ್ರಾರಂಭಿಸಿತು.

ಭವಿಷ್ಯ ಸಂಪೂರ್ಣ ನಾಶವಾಗಿ ಹೋಯಿತೆಂದು ಅನ್ನಿಸಿತು. ಇನ್ನೂ ಸಭ್ಯ ಸಮಾಜದಲ್ಲಿ ಮಾಮೂಲು ವ್ಯಕ್ತಿಯಾಗಿ ಬದುಕಲು ಸಾಧ್ಯವಿಲ್ಲ. ನಾಳೆ ಕೋರ್ಟಿನಲ್ಲಿ ಅಪವಾದ ನಿಜವಾದರೆ ಮರಣದಂಡನೆಯೇ. ಜೀವಾವಧಿ ಶಿಕ್ಷೆಯೇ ತಪ್ಪದು. ಕ್ರಿಕೆಟ್ಟಿದಲ್ಲಿ ಎತ್ತರವಾದ ಶಿಖರವನ್ನು ಹತ್ತಬೇಕೆಂಬ ತನ್ನ ಕನಸು ಕುಸಿದುಹೋಯಿತು. ಇನ್ನು ಅದು ಅಸಂಭವ.

ಕ್ರಮೇಣ ಅವನ ಮನಸ್ಸು ಸಂಪೂರ್ಣವಾಗಿ ನೋವಿನಿಂದ ತುಂಬಿತು. ಪೋಲೀಸ್ ಸ್ಟೇಷನ್ನಿನಲ್ಲಿ ಕುಳಿತ ನಂತರ 'ಅಯ್ಯೋ-ಅಯ್ಯೋ' ಎಂದು ಬಹಳ ಸಾರಿ ಅಂದುಕೊಂಡ. ಸರಿಯಾಗಿ ಅದೇ ಸಮಯಕ್ಕೆ ಕಿರಣ್ಮಯಿ, ತನ್ನ ತಂದೆಯೊಡನೆ ಅವನಿಗೆ ಕಂಡಳು. ಆಶ್ಚರ್ಯದಿಂದ ತನ್ನ ಕಣ್ಣನ್ನು ತಾನೇ ನಂಬದವನಂತೆ ನೋಡಿದ.

ಆ ಕ್ಷಣ ಅವನು ಮಾನಸಿಕವಾಗಿ ಎಷ್ಟು ಕುಗ್ಗಿಹೋಗಿದ್ದನೆಂದರೆ, ಅಂಥಹ ರಾತ್ರಿಯಲ್ಲಿ ತನಗಾಗಿ, 'ತನ್ನವರು' ಬಂದದ್ದು ಎಷ್ಟೋ ರಿಲೀಫ್ ಎನ್ನಿಸಿ, ಆ ಉದ್ವೇಗದಲ್ಲಿ ಬಾಯಿ ಮಾತೇ ಹೊರಡಲಿಲ್ಲ.

ಕಿರಣ್ಮಯಿ ಅವನ ಸ್ಥಿತಿಯನ್ನು ಸರಿಯಾಗಿ ಊಹಿಸಿದಳು. ಅದಕ್ಕೆ ಅವಳ ಅಣ್ಣ ಬೆಳಗ್ಗೆ ಹೋಗೋಣವೆಂದರೆ ಅವಳು ಒಪ್ಪದಿದ್ದುದು. ಅಂಥಹ ಸಮಯದಲ್ಲಿ ಅವನು 'ರೇಕ್' ಆಗದಂತೆ, 'ನಿನ್ನ ಜೊತೆ ನಾವಿದ್ದೇವೆ' ಎಂಬ ಧೈರ್ಯ ಅವರ ಬರುವಿಕೆಯಿಂದ ಅವನಿಗಾಯಿತು.

ಗಂಡ-ಹೆಂಡತಿ ಇಬ್ಬರೂ ಏನೂ ಮಾತನಾಡಲಿಲ್ಲ. ಮಾತನಾಡಿಕೊಳ್ಳಲು

ಸಹಾ ಅಂಥಹ ಅವಸರದ ಮಾತುಗಳೇನೂ ಇರಲಿಲ್ಲ. ಒಬ್ಬರನ್ನೊಬ್ಬರು ನೋಡಿಕೊಂಡರು. ಅವಳು ಕಣ್ಣುಗಳಲ್ಲೇ ಧೈರ್ಯ ಹೇಳಿದರು. ತಂದೆ ಮಾತ್ರ ಮಗನೊಡನೆ ಎರಡೇ ಮಾತನ್ನು ಆಡಿದರು. ಮಗನಿಗಿಂತಲೂ ಅವರೇ ಹೆಚ್ಚು ಅಧೈರ್ಯದಿಂದ ಇದ್ದರು.

ಅವರು ಮಾತನಾಡಿದ ನಂತರ ಕಿರಣ್ಮಯಿ ಅವನ ಬಳಿಗೆ ಬಂದು, "ನಾಳೆ ಬೆಳಗ್ಗೆ ಲಾಯರ್ ಬಳಿಗೆ ಹೋಗುತ್ತೇನೆ. ಬೆಯಿಲ್‌ಗಾಗಿ ಪ್ರಯತ್ನಿಸುತ್ತೇನೆ" ನಗುತ್ತಾ ಹೇಳಿದಳು. ಆ ಸಮಯದಲ್ಲಿ ಅವಳ ಆ ನಗು ಅವನಿಗೆ ವಿಚಿತ್ರವಾಗಿ–ಉಹ್ಞೂ. ವಿಚಿತ್ರವಲ್ಲ. ಅದಕ್ಕೂ ಮಿಗಿಲಾದ. ಅತೀತವಾದ ಭಾವನೆಯನ್ನು ಉಂಟುಮಾಡಿತು. ನೀನು ತಪ್ಪು ಮಾಡಿಲ್ಲ ನಿನ್ನೊಡನೆ ನಾನಿರುತ್ತೇನೆ––ಎಂಬ ಭಾವನೆ.

ಅನಂತರ ತನ್ನ ಕೈಯಲ್ಲಿದ್ದ ಪಾಕೆಟ್ಟನ್ನು ಅವನಿಗೆ ಕೊಟ್ಟಳು.

"ಏನದು ?"

"ಬಾಳೆಹಣ್ಣು. ಸ್ವೀಟ್ಸ್. ನೀವು ರಾತ್ರಿ ಏನೂ ತಿಂದಿರಲಿಲ್ಲ."

ಎನ್ನುತ್ತಾ ಅವಳು ಅಲ್ಲಿಂದ ಕೂಡಲೇ ಹೊರಟುಬಂದಳು. ಅವನ ಒದ್ದೆಯಾದ ಕಣ್ಣುಗಳನು ತಾನು ನೋಡಲು ಇಷ್ಟಪಡದವಳಂತೆ.

o o o

ಅವರಿಬ್ಬರೂ ಮನೆಗೆ ಮರಳಿ ಬರುವ ಹೊತ್ತಿಗೆ ಬೆಳಗಿನ ಜಾವ ಮೂರಾಗಿತ್ತು.

ಕಿರಣ್ಮಯಿಗೆ ಆಶ್ಚರ್ಯ ಉಂಟುಮಾಡಿದ ವಿಷಯವೇನೆಂದರೆ, ಮದುವೆ ಮನೆಯಲ್ಲಿ ಎಲ್ಲರೂ ನಿ-ದ್ರೆ-ಮಾ-ಡು-ತ್ತಿ-ದ್ದಾ-ರೆ! ಅಲ್ಲಿಗೆ ಯಾರಾದರೂ ಆಗ ಹೊಸಬರು ಪ್ರವೇಶಿಸಿದರೆ, ಈಗ್ಗೆ ಮೂರು ಗಂಟೆಗಳ ಹಿಂದೆ ಅಲ್ಲೊಂದು ಘಟನೆ ನಡೆದುಹೋಯಿತೆಂದು ಕನಸಿನಲ್ಲಿ ಕೂಡಾ ಅಂದುಕೊಳ್ಳಲಾಗುವುದಿಲ್ಲ. ಅಷ್ಟು ಪ್ರಶಾಂತವಾಗಿದೆ ಮನೆ. ಅವರ ಮನಸ್ಸಿನ ಒಂದು ಮೂಲೆಯಲ್ಲಿ ಮುಳ್ಳೊಂದು ಚುಚ್ಚಿಕೊಂಡಂತಾಯಿತು.

ಪಾಪ, ಆ ಮುದುಕರು ಒಂದೇ ಬಾರಿಗೆ ನೂರು ವರ್ಷ ಆದವರಂತೆ ಕಾಣುತ್ತಿದ್ದಾರೆ. ಕೆಲವರು––ಮೇಲೆ ತೋರಿಸರು, ಒಳಗೊಳಗೇ ಎಷ್ಟೋ

ಆತ್ಮೀಯತೆ ಬೆಳೆಸಿಕೊಳ್ಳುತ್ತಾರೆ. ಗಂಡಸರಲ್ಲಿ ಇಂಥಹವರು ತುಂಬಾ ಜನ ಇರುತ್ತಾರೆ.

ಆದರೆ ಸ್ತ್ರೀಯರ ವಿಷಯದಲ್ಲಿ ಇದು ವಿರುದ್ಧ. ಹೆಚ್ಚಿನ 'ಆತ್ಮೀಯತೆ' ಪ್ರದರ್ಶಿಸುತ್ತಾರೆ. ಒಳಗೇನೂ ಇರುವುದಿಲ್ಲ. ಈ ವಿಷಯ ಪ್ರೇಮಿಗಳ ವಿಷಯದಲ್ಲಿ ಮಾತ್ರವಲ್ಲ, ವಯಸ್ಸಾದ ಮಾವನಿಂದ ಸೊಸೆಯ ಬಗ್ಗೆ, ತಮ್ಮಂದಿರು–ಮದುವೆ ಆದ ಅಕ್ಕಂದಿರ ಬಗ್ಗೆ, ಇದು ಹೆಚ್ಚು ಕಾಣುತ್ತದೆ.

ಆ ರಾತ್ರಿ ಸಂಪೂರ್ಣವಾಗಿ ಅವಳು ನಿದ್ರಿಸಲಿಲ್ಲ.

ಆ ರೂಮಿನಲ್ಲಿ ಕೂಡಾ ಪ್ರವೇಶಿಸಲಿಲ್ಲ. ವರಾಂಡದಲ್ಲೇ ಇದ್ದಳು. ಅವಳು ಎಲ್ಲಿ ಮಲಗುತ್ತಾಳೋ ಎಂದು ಉಸಿರು ಬಿಗಿ ಹಿಡಿದು ನೋಡುತ್ತಿದ್ದ ಮುತ್ತೈದೆಯೊಬ್ಬಳು ಆಗಲೇ ಕಣ್ಣು ಬಿಟ್ಟು "ಅದೇನೇ ಹುಡುಗಿ, ಒಳಗಡೆ ಮಲಗಬಾರದೇ ?" ಎಂದಳು ಅಪ್ಯಾಯತೆ ತುಂಬಿದ ಕಂಠದಿಂದ.

ಅದೇ––ಕಿರಣ್ಮಯಿ ಒಂದು ವೇಳೆ ರೂಮಿನಲ್ಲಿ ಹೋಗಿ ಮಲಗಿದ್ದಿದ್ದರೆ ಹಣೆ ಒಡೆದುಕೊಳ್ಳುತ್ತಾ "ನೋಡಿದ್ರಾ, ಗಂಡ ಜೈಲಿನಲ್ಲಿದ್ದರೆ ಇವಳು ಹೂವಿನ ಹಾಸಿಗೆ ಮೇಲೆ ಮಲಗಿಕೊಳ್ತಿದ್ದಾಳೆ" ಎನ್ನುತ್ತಿದ್ದಳು ಅದೇ ಮುತ್ತೈದೆ.

ಕಿರಣ್ಮಯಿ ಇದೆಲ್ಲವನ್ನೂ ಹಚ್ಚಿಕೊಳ್ಳಲಿಲ್ಲ ಮನಸ್ಸಿಗೆ. ವಿಮರ್ಶೆ, ಮೆಚ್ಚುಗೆ––ಇವೆಲ್ಲಾ ಹೊರಗಿನ ಪ್ರವರ್ತನೆಗಳು. ಮಾನಸಿಕ ಸ್ಥಾಯಿಗೆ ಬೇಕಾಗಿಲ್ಲ, ಅದಕ್ಕೆ ಇಂಟ್ರೆನ್ಸಿಕ್‌ನ ಅಗತ್ಯವಿಲ್ಲ. ಮಾನಸಿಕ ಸ್ಥಾಯಿಯನ್ನು ಅವಲಂಭಿಸಿ, ನಮಗೆ ಆನಂದ ಉಂಟಾಗುವುದು. ದುಃಖವಾಗುವುದು––ಅದಕ್ಕಾಗಿಯೇ ಕೆಲಸಮಾಡುತ್ತವೆ ಅವು.

ಮೇಲೆದ್ದು ಬಂದು ಪುಸ್ತಕದ ರ್‍ಯಾಕಿನಿಂದ ಒಂದು ಪುಸ್ತಕವನ್ನು ಆರಿಸಿಕೊಂಡು ಮತ್ತೆ ವರಾಂಡದಲ್ಲಿ ಬಂದು ಕುಳಿತಳು. ಯಾವಾಗಲೂ ಅಲ್ಲಿಯೇ ಅವಳು ಓದಿಕೊಳ್ಳುತ್ತಿದ್ದುದು. ಹೊರಗಡೆ ಹಲಸಿನ ಮರಕ್ಕೆ ಕಟ್ಟಿದ್ದ ಲೈಟಿನ ಬೆಳಕು ಕತ್ತಲನ್ನು ಹೋಗಿಸಲು ಅಸಮರ್ಥವಾಗಿದೆ. ಸಮಯ ಮೂರೂವರೆ ಆಗುತ್ತಾ ಇದೆ. ಅವಳು ಕೂಡಲೇ ಓದಲು ಪ್ರಾರಂಭಿಸಲಿಲ್ಲ. ಆ ಮರದ ಆಸರೆಯಲ್ಲಿ ನಿಂತು ತುಂಬಾ ಹೊತ್ತು ಕಣ್ಣು ಮುಚ್ಚಿಕೊಂಡು ಇದ್ದುಬಿಟ್ಟಳು.

ಗಂಡನ ಮಾತೇ ನೆನಪಿಗೆ ಬರುತ್ತದೆ.

"ಯಾವಾಗಲಾದರೂ ನಮ್ಮಲ್ಲೊಬ್ಬರು ಏನಾದರೂ ಆಲೋಚನೆಯಲ್ಲಿರುವಾಗ, ಎರಡನೆಯವರು ಆಲೋಚಿಸುತ್ತಿರುವುದು ಏನೆಂದು ಕೇಳಿದರೆ ಅವರು ಏನು ಆಲೋಚಿಸುತ್ತಿರುವುದು ಎಂಬುದನ್ನು ಹೇಳಬೇಕೆಂದು ಅಂದು ಕೊಂಡಿದ್ದೆವಲ್ಲಾ ನೆನಪಿದೆಯಾ ಕಿರಣ್ಮಯಿ! ಪ್ರತಿ ಬಾರಿಯೂ ನಾನೇ ಕೇಳುತ್ತಾ ಬಂದಿದ್ದೆ. ಈ ರಾತ್ರಿ ಒಮ್ಮೆಯಾದರೂ ನೀನು ಕೇಳಲಿಲ್ಲ. ಕೇಳದಿದ್ದರೂ ನಾನೇ ಹೇಳುತ್ತಿದ್ದೇನೆ. ಈಗ ನಾನೇನು ಅಂದು ಕೊಳ್ಳುತ್ತಿದ್ದೇನೋ ಗೊತ್ತಾ ಕಿರಣ್ಮಯಿ? ಕನಿಷ್ಟ ನನ್ನ ಹೆಂಡತಿಯಾದರೂ ನನ್ನನ್ನು ನಂಬಿದರೆ ಸಾಕು....ಎಂದುಕೊಳ್ಳುತ್ತಿದ್ದೇನೆ"

ಈ ಮಾತುಗಳು ನಿಜವಾಗಿರಬಹುದು. ಇಲ್ಲಾ ಅವರು ಸುಳ್ಳನ್ನು ಕೂಡಾ ನಿಜವಾಗಿ ಹೇಳುವ ವರಸೆ ಇರಬಹುದು. "ತನ್ನ ಗಂಡ" ಎಂದು ಆಲೋಚಿಸದೇ. ಒಬ್ಬ ವ್ಯಕ್ತಿಯಾಗಿ ನೋಡಿದರೆ–ಒಂದು ದಿನದ ಪರಿಚಯದಿಂದ ಏನನ್ನೂ ಹೇಳಲಾಗುವುದಿಲ್ಲ.

"ಲಕ್ಷ್ಮೀ ನನಗೆ ಗೊತ್ತು ಅಷ್ಟೆ!"

ಎಷ್ಟರವರೆಗೂ ಗೊತ್ತು ? ಇದೊಂದು ಮುಳ್ಳಿನಂತೆ ಚುಚ್ಚಿಕೊಂಡಿತು. ಮದುವೆಯಾದ ಮೊದಲ ರಾತ್ರಿಯೇ ಗಂಡನ ಗರ್ಲ್‌ಫ್ರೆಂಡ್ ಬಗ್ಗೆ ತಿಳಿಯುವುದು. ಅದೂ ಪೋಲೀಸರ ಮುಖಾಂತರ....

ಅವರೊಂದು ವೇಳೆ ಈ ಕೊಲೆಯನ್ನು ಮಾಡಿಲ್ಲದಿದ್ದರೆ, ಮತ್ತೆ ಮಾಡಿದವರಾರು ? ದೂರದಲ್ಲಿ ಗಡಿಯಾರ ನಾಲ್ಕು ಬಾರಿಸಿತು. ಆಕಾಶ ನಿರ್ಮಲವಾಗಿದೆ. ತಣ್ಣನೆ ಗಾಳಿ ನಿಂತು, ನಿಂತು ಬೀಸುತ್ತಿದೆ. ಇನ್ನು ಸ್ವಲ್ಪ ಸಮಯದಲ್ಲೇ ಪ್ರಪಂಚ ನಿದ್ರೆಯಿಂದ ಏಳುತ್ತದೆ. ಬಾಣ. ಬಿಲ್ಲು, ಸೂಜಿಗಳನ್ನು ಹಿಡಿದುಕೊಂಡು ರೆಡಿಯಾಗುತ್ತದೆ. ಬಂದಿರುವ ಈ ಕಷ್ಟಕ್ಕಿಂತಲೂ. ಬರಲಿರುವ ಕಷ್ಟವನ್ನು ಎದುರಿಸಲು ಸಿದ್ಧಳಾಗಬೇಕು.

ಅವಳು ಪುಸ್ತಕವನ್ನು ತೆರೆದು ಏಕಾಗ್ರತೆಯಿಂದ ಪ್ರಾರಂಭಿಸಿದಳು. ಅವಳಲ್ಲಿಯ ಒಂದು ಒಳ್ಳೆಯ ಲಕ್ಷಣವೆಂದರೆ, ಒಮ್ಮೆ ಆ ಲೋಕದಲ್ಲಿ ಸೇರಿಕೊಂಡಳೆಂದರೆ ಉಳಿದ ಪ್ರಪಂಚವೇ ನೆನಪಿರುವುದಿಲ್ಲ. ಅವಳು ಓದು

ತ್ತಿರುವ ಪುಸ್ತಕ ಡಾಕ್ಟರ್ ವೆಯಿನ್ ಡಬ್ಲ್ಯು ಡಂಯ್ಯರ್ ಬರೆದ—

ಪುಲ್ಲಿಂಗ್ ಯುವರ್ ಓನ್ ಸ್ಟ್ರಿಂಗ್ಸ್.

ಬೆಳಗ್ಗೆ ಏಳು ಗಂಟೆಗೇ ಇನ್ಸ್‌ಪೆಕ್ಟರ್ ರಾಯಣ್ಣನನ್ನು ಇಂಟರಾಗೇಟ್ ಮಾಡಲು ಪ್ರಾರಂಭಿಸಿದರು.

"ನಿಮ್ಮ ಹೆಸರು ?"

"ರಾಯಣ್ಣ !"

"ಎಲ್ಲಿ ಕೆಲಸ ಮಾಡುತ್ತಿದ್ದೀರಿ ?"

ರಾಯಣ್ಣ ಹೇಳಿದ. ರಾತ್ರಿಯೆಲ್ಲಾ ನಿದ್ರೆ ಇಲ್ಲದೆ ಹೋದುದರಿಂದ ಮುಖವೆಲ್ಲಾ ಬಾಡಿದೆ. ತಲೆ ತಗ್ಗಿಸಿಕೊಂಡು ಉತ್ತರಿಸುತ್ತಿದ್ದಾನೆ.

"ನೋಡಿ ಮಿಸ್ಟರ್ ರಾಯಣ್ಣ ! ನಾನು ಕೇಳುವ ಪ್ರಶ್ನೆಗಳಿಗೆ ನೀವು ಸಮಾಧಾನಕರವಾಗಿ ಉತ್ತರಿಸಬೇಕು. ಅದಕ್ಕಾಗಿ ನಿಮ್ಮ ಲಾಯರ್ ನಿಮ್ಮ ಬಳಿ ಇರಬೇಕೆಂದು ನೀವು ಕೋರಬಹುದು. ಆ ಅಧಿಕಾರ ನಿಮಗಿದೆ–ನೀವೇ ಹೇಳುತ್ತೀರಾ ? ನಿಮ್ಮ ಲಾಯರನ್ನು ಕರೆಸುತ್ತೀರಾ ?"

"ನಾನೇ ಹೇಳುತ್ತೀನಿ."

"ಲಕ್ಷ್ಮಿ ನಿಮಗೆ ಎಷ್ಟು ದಿನಗಳಿಂದ ಪರಿಚಯ ?"

"ಒಂದು ವರ್ಷಕ್ಕೂ ಮುಂಚಿನಿಂದ."

"ನಿಮಗೆ ಆ ಲೇಡೀಸ್ ಹಾಸ್ಟೆಲಿನಲ್ಲಿ ಇನ್ಯಾರಾದರೂ ಹುಡುಗಿಯರು ಗೊತ್ತಾ ?"

"ಇನ್ನು ನಾಲ್ಕೈದು ಜನ ಗೊತ್ತು."

"ಹೆಸರುಗಳು ?"

ರಾಯಣ್ಣ ಮುಜುಗರದಿಂದ ನೋಡಿ. "ಅವರ ಹೆಸರುಗಳ ಅಗತ್ಯವೇ ಸಾರ್ !" ಎಂದು ಕೇಳಿದ.

"ಅವರ ಹೆಸರುಗಳು ಹೊರಗೆ ಬರದಂತೆ ಪ್ರಯತ್ನಿಸುತ್ತಾನೆ, ನಾಳೆ ಕೋರ್ಟಿನಲ್ಲಿ ಹೇಗೂ ಹೇಳಬೇಕಲ್ಲಾ. ಅಷ್ಟು ಹೊತ್ತಿಗೆ ಕೇಸು ಹಳೆಯ

ದಾಗಿರುತ್ತದೆ. ಆದ್ದರಿಂದ ಪ್ರೆಸ್ಸಿನವರಿಗೆ ಅವರ ಬಗ್ಗೆ ಅಷ್ಟೊಂದು ಉತ್ಸಾಹವಿರುವುದಿಲ್ಲ, ಹೇಳಿ...."

"ಪದ್ಮ....ವಿಜಯ....ರಮಣಿ....ಅನೂರಾಧ...." ಇನ್ಸ್‌ಪೆಕ್ಟರ್ ಅವನ ಕಡೆ ಅದೊಂದು ರೀತಿಯಾಗಿ ನೋಡಿದರು.

"ಮೊದಲ ಬಾರಿಗೆ ನಿಮಗೆ ಲಕ್ಷ್ಮಿ ಹೇಗೆ ಪರಿಚಯವಾದಳು ?"

"ಆಟೋಗ್ರಾಫ್‌ಗಾಗಿ ಬಂದಿದ್ದಳು."

"ಐದು ಜನ ಹುಡುಗಿಯರೂನಾ ?"

"ಇಲ್ಲ. ಮೂರು ಜನ."

"ಯಾರ್ಯಾರು ?"

"ನೆನಪಿಲ್ಲ"

"ಈ ಐದು ಜನರಲ್ಲಿ ನಿಮಗೆಷ್ಟು ಮಂದಿಯ ಪರಿಚಯವಿದೆ ?"

ರಾಯಣ್ಣನಿಗೆ ಪ್ರಶ್ನೆ ಅರ್ಥವಾಗಲಿಲ್ಲ. "ಐದು ಮಂದಿಯಲ್ಲಿ" ಅಂದ.

ಆ ಪರಿಚಯ ಅಲ್ಲ. 'ಅಂಥಹ' ಪರಿಚಯದ ಬಗ್ಗೆ ಕೇಳುತ್ತಿದ್ದೇನೆ! ರಾಯಣ್ಣನ ಮುಖ ವಿವರ್ಣವಾಯಿತು.

"ಯಾರೊಡನೆಯೂ ಇಲ್ಲ...." ಹೇಳಿದ.

ಇನ್ಸ್‌ಪೆಕ್ಟರನ ಮುಖ ಕಠಿಣವಾಗಿ ಮಾರ್ಪಟ್ಟಿತು.

"....ಲಕ್ಷ್ಮಿ ಕೂಡಾ ಇಲ್ಲವೇ ?" ಎಂದರು ಸಿಟ್ಟಿನಿಂದ.

"ಇಲ್ಲ. ಪ್ರಮಾಣ ಮಾಡಿ ಹೇಳುತ್ತಿದ್ದೇನೆ."

"ಕೋರ್ಟಿನಲ್ಲಿ ಕೂಡಾ ಅಪರಾಧಿಗಳು ಪ್ರಮಾಣ ಹೇಳುತ್ತಾರೆ. ಆ ಪ್ರಮಾಣಕ್ಕೆ ಬೆಲೆಯಿಲ್ಲ."

ರಾಯಣ್ಣ ಮಾತನಾಡಲಿಲ್ಲ. ಇನ್ಸ್‌ಪೆಕ್ಟರ್ ಅವನ ಕಡೆಯೇ ತೀಕ್ಷ್ಣವಾಗಿ ನೋಡುತ್ತಿದ್ದರು.

ರಾಯಣ್ಣ ತಲೆ ತಗ್ಗಿಸಿಕೊಂಡ.

"ಲಕ್ಷ್ಮಿಗೆ ಇನ್ಯಾರದಾದರೂ ಸ್ನೇಹವಿದೆಯೆ ?"

"ಇಲ್ಲ, ತುಂಬಾ ಒಳ್ಳೆಯ ಹುಡುಗಿ."

"ಒಳ್ಳೆಯ ಹುಡುಗಿಯೇ ?....ನೀವಿದ್ದೀರಲ್ಲಾ ಬಾಯ್ ಫ್ರೆಂಡ್ ?"

ರಾಯಣ್ಣನಿಗೆ ಏನೆಂದು ಉತ್ತರಿಸಬೇಕೆಂದೇ ತೋಚಲಿಲ್ಲ. ಮನಸ್ಸಿನಲ್ಲಿದ್ದ ಭಾವನೆಗಳನ್ನು ಹೇಗೆ ವ್ಯಕ್ತಪಡಿಸಬೇಕೆಂದೇ ಅವನಿಗೆ ಹೊಳೆಯಲಿಲ್ಲ. ಬಾಯ್ ಫ್ರೆಂಡ್ ಇದ್ದ ಮಾತ್ರಕ್ಕೆ 'ಒಳ್ಳೆಯತನ' ಹೇಗೆ ಕೆಡುತ್ತದೋ ಅವನಿಗೆ ಅರ್ಥವಾಗಲಿಲ್ಲ. 'ಒಳ್ಳೆಯದು' ಎನ್ನುವುದು ಒಂದು ಹೂವಿನಂತೆ ಅದು ತನ್ನ ಪರಿಮಳನ್ನು ನಾಲ್ಕು ದಿಕ್ಕುಗಳಿಗೂ ಹಂಚುತ್ತಿರುತ್ತದೆ. ಎಷ್ಟೋ ಅಂಶಗಳಲ್ಲಿ ಈ ಒಳ್ಳೆಯತನ ಗೋಚರವಾಗ ಬಹುದು.

"ಲಕ್ಷ್ಮಿ ಯಾರೊಡನೆಯೂ ಮಾತನಾಡುವುದಿಲ್ಲ. ಚೆನ್ನಾಗಿ ಓದುತ್ತಾಳೆ. ಚಿತ್ರ ಲೇಖನಗಳಲ್ಲಿ ಹೆಚ್ಚು ಆಸಕ್ತಿ ಅವಳಿಗೆ. ತನ್ನ ಕೆಲಸ ವೇನೋ ಅದನ್ನು ನೋಡಿಕೊಂಡಿರುತ್ತಾಳೆ ಅಷ್ಟೆ. ಉಳಿದವರ ವಿಷಯಗಳಿಗೆ ತಲೆ ಕೆಡಿಸಿಕೊಳ್ಳುವುದಿಲ್ಲ. ದೈವಭಕ್ತಿ ಕೂಡಾ ಹೆಚ್ಚೇ...."

ತಾನು ಅವಳನ್ನು ಒಳ್ಳೆಯ ಹುಡುಗಿ ಎಂದುದ್ದಕ್ಕೆ ಕಾರಣಗಳನ್ನು ನೀಡಿದ.

"ಲಕ್ಷ್ಮಿಯನ್ನು ನೀವು ಕೊನೆಯ ಬಾರಿ ಯಾವಾಗ ಕಂಡಿದ್ದಿರಿ ?"

"ನೆನ್ನೆ ಮಧ್ಯಾನ್ಹ--"

ಇನ್ಸ್‌ಪೆಕ್ಟರ್ ಮುಖದಲ್ಲಿ ಆಶ್ಚರ್ಯ ಕಾಣಿಸಿತು. "....ಆದರೆ ಮೊನ್ನೆ ಸಾಯಂಕಾಲ ನಿಮಗೆ ವಿವಾಹ ನಡೆಯಿತು....!"

"ಹೌದು. ಒಂದು ಕಾಗದ ಕಳುಹಿಸಿದ್ದಳು ಅದಕ್ಕಾಗಿ ಹಾಸ್ಟೆಲ್ಲಿಗೇ ಹೋಗಿದ್ದೆ."

"ಹಾಸ್ಟೆಲ್ ಒಳಗೆ ಹೋಗುತ್ತೀರಾ ?"

"—ಒಳಗೇನೆ."

"ಆದರೆ ಗಂಡಸರನ್ನು ಒಳಗೆ ಅಲೊ ಮಾಡುವುದಿಲ್ಲವಲ್ಲಾ...."

"ಅದು ರೂಲಿರಬಹುದು. ಆದರೆ ನಾನು ಯಾವಾಗಲೂ ಅವಳನ್ನು ಒಳಗೇ ಭೇಟಿಯಾಗುವುದು."

ಇನ್ಸ್‌ಪೆಕ್ಟರ್ ಕಾಗದದ ಮೇಲೆ ಈ ವಿಷಯುವನ್ನು ಬರೆದುಕೊಂಡರು.

"ಏನು ಮಾತಾಡಿಕೊಂಡಿರಿ ನೀವಾಗ ?"

"ಏನೂ ಮಾತನಾಡಲಿಲ್ಲ."

"ಅಂದರೆ—ಸಮ್ಮನೆ ಕಾಗದ ಬರೆದು ಕಳುಹಿಸಿ, ನಿಮ್ಮನ್ನು ನೋಡಿದ ನಂತರ ಅಷ್ಟೇ ಸಾಕು—ಎಂಬ ಅಭಿಪ್ರಾಯದೊಡನೆ ಹೋಗಿ ಬನ್ನಿ ಅಂದಳು...."

"ಮಿಸ್ಟರ್ ರಾಯಣ್ಣ, ನೀವು ಸುಳ್ಳು ಹೇಳುತ್ತಿದ್ದೀರಿ. ಅದು ಒಳ್ಳೆಯದಲ್ಲ."

"ನಾನು ನಿಜವನ್ನೇ ಹೇಳುತ್ತಿದ್ದೇನೆ. ನಾನು ಅಲ್ಲಿಗೆ ಹೋದ ನಂತರ ಐದು ನಿಮಿಷಕ್ಕೆ ಅವಳನ್ನು ಭೇಟಿಯಾದೆ. ಕಣ್ಣುಗಳು ಊದಿಕೊಂಡಿದ್ದವು. ರಾತ್ರಿಯೆಲ್ಲಾ ಅತ್ತವಳಂತೆ ಕಂಡಿತು. ಕಾರಣ ಕೇಳಿದೆ. ಉತ್ತರಿಸಲಿಲ್ಲ. ಕಾಗದ ಏಕೆ ಬರೆದೆ ? ಏನು ಮಾತನಾಡಬೇಕಾಗಿತ್ತು ? ಎಂದೆಲ್ಲಾ ಕೇಳಿದೆ. ಮದುವೆಗೆ ಏಕೆ ಬರಲಿಲ್ಲ ? ಎಂದು ಕೇಳಿದೊಡನೆಯೇ ಅಳಲು ಪ್ರಾರಂಭಿಸಿದಳು. ಸ್ವಲ್ಪ ಹೊತ್ತು ಸಮಾಧಾನಗೊಳಿಸಿ ಬಂದುಬಿಟ್ಟೆ."

"ಬಹುಶಃ ನೀವು ಮದುವೆ ಆದದ್ದರಿಂದ ಅವಳು ಅತ್ತಿರಬೇಕು..

"ಅವಳಿಗೆ ಇನ್ಯಾರಾದರೂ ಗಂಡಸರ ಸ್ನೇಹವಿತ್ತೇ ?"

"ಇಲ್ಲಾ.... ಇಲ್ಲಾ...."

"ಈ ವಿಷಯವನ್ನು ಪರ್‌ಫೆಕ್ಟಾಗಿ ಹೇಳಬಲ್ಲಿರಾ ?"

"ಹೇಳಬಲ್ಲೆ !"

"ಉಳಿದವರಿಗೆ ?"

"ರಮಣಿಗೆ ಇದ್ದರು.... ತುಂಬಾ ಜನ."

"ಅದರಲ್ಲಿ ನಿಮಗೆ ತಿಳಿದವರು ಯಾರಾದರೂ ಇದ್ದಾರಾ ?"

"ಇಂಡಸ್ಟ್ರಿಯಲ್ ಡವಲಪ್‌ಮೆಂಟಿನ ಆಫೀಸಿನಲ್ಲಿ ನನ್ನ ಸ್ನೇಹಿತನೊಬ್ಬನಿದ್ದಾನೆ. ರಾಜಾರಾವ್ ಎಂದು. ಅವನಲ್ಲದೆ ವೆಂಕಟರಾಜು ಎಂದು ಕ್ರಿಕೆಟ್ ಪ್ಲೇಯರ್ ಒಬ್ಬನಿದ್ದಾನೆ. ಸುಬ್ರಮಣ್ಯಂ ಎಂಬ ಇಂಜಿನೀಯರಿಂಗ್ ಕಾಲೇಜಿನ ಹುಡುಗನೊಬ್ಬ ಕಾಲೇಜು ಹಾಸ್ಟೆಲ್‌ನಲ್ಲಿದ್ದಾನೆ."

"ಎಲ್ಲಿ ಭೇಟಿಯಾಗುತ್ತಾರೆ?"

"ಹಾಸ್ಟೆಲ್‌ನಲ್ಲಿಯೇ—"

"ಅಂದರೆ—"

"ಹುಡುಗರ ಹಾಸ್ಟೆಲ್ಲಿಗೇ ಹೋಗುತ್ತಿರುತ್ತಾಳೆ ಅವಳು."

"ಹಾಸ್ಟೆಲ್ಲಿಗೆ ಹುಡುಗಿಯರನ್ನು ಅಲೋ ಮಾಡುತ್ತಾರಾ?"

"ನನಗೆ ಗೊತ್ತಿಲ್ಲ. ಅವರಿಬ್ಬರೂ ಮದುವೆ ಆಗೋಣವೆಂದು ಕೇಳುತ್ತಿದ್ದಾರೆ. ಅನೂರಾಧ ಹೇಳುವುದೇನೆಂದರೆ—ಎಲ್ಲರೂ ಹಾಗೆಯೇ ಅಂದುಕೊಳ್ಳುತ್ತಾರಂತೆ. ಈ ಹುಡುಗಿ ಬರುತ್ತಿದ್ದಂತೆಯೇ, ಅವನ ರೂಮಿನಲ್ಲಿರುವವರೆಲ್ಲಾ ಹೊರಗೆ ಹೋಗಿಬಿಡುತ್ತಾರಂತೆ—"

"ಅಂದರೆ ಇನ್ನು ಮೇಲೆ ನಾವು ಹೋಟೆಲ್, ಲಾಡ್ಜಿಂಗ್‌ಗಳೇ ಅಲ್ಲದೇ ಹಾಸ್ಟೆಲ್‌ಗಳನ್ನು ಕೂಡಾ ರೆಯಿಡ್ ಮಾಡಬೇಕು ಅನ್ನಿಸುತ್ತದೆ...." ಇನ್ಸ್‌ಪೆಕ್ಟರ್ ನಕ್ಕರು. ರಾಯಣ್ಣನಿಗೆ ಕ್ರಮೇಣ ಧೈರ್ಯ ಬಂತು. ಇನ್ಸ್‌ಪೆಕ್ಟರ್ ಅಷ್ಟೊಂದು ಫ್ರೀಯಾಗಿರುತ್ತಾರೆಂದು ಅವನು ಊಹಿಸಿರಲಿಲ್ಲ. ಪೋಲೀಸರು ಮೊದಮೊದಲು ಹಾಗೆಯೇ ಇರುತ್ತಾರೆಂದು ಅವನಿಗೆ ಗೊತ್ತಿಲ್ಲ."

"ಬಹುಶಃ ಅಂಥಹದ್ದೇನಿಲ್ಲ. ಮಾಮೂಲು ವಿಷಯಗಳನ್ನೇ ಮಾತನಾಡುತ್ತಾರಂತೆ—ಗಂಟೆಗಳ ಕಾಲ."

"ಬಹುಶಃ ಪಾರ್ಕುಗಳಲ್ಲಿ ಏಕಾಂತವಿಲ್ಲವೇನೋ ಈ ಷಡುವೆ, ಏನಾದರೂ ಹುಡುಗಿಯರ ಧೈರ್ಯ ಮೆಚ್ಚಬೇಕು."

"ಮತ್ತೆ ನೀವೂ ಲಕ್ಷ್ಮಿಯೂ ಎಲ್ಲಿ ಭೇಟಿಯಾಗುತ್ತಿದ್ದಿರಿ?"

"ನಾವು ಹೆಚ್ಚು ಬಾರಿ ಭೇಟಿಯಾಗಲಿಲ್ಲ ಹೊರಗೆ—"

"ಭೇಟಿಯಾಗಬೇಕೆಂದಿದ್ದಾಗ?"

"ಹೋಟೆಲ್‌ನಲ್ಲಿ—"

"ಯಾವ ಹೋಟೆಲ್?"

"ಬ್ಲೂ ಟೈಗರ್."

"ಅದೂ ತುಂಬಾ ಕಾಸ್ಟ್ಲೀ ಹೋಟೆಲ್ ಅಲ್ಲವೇ ?"

ಅವರ ಪ್ರಶ್ನೆ ಅರ್ಥವಾಗಿ, "ಯಾವಾಗಲೂ ರಾಜಾರಾವ್ ಬಿಲ್ಲು ಕೊಡುತ್ತಾನೆ" ಎಂದ.

"ಅವರಿಗ್ಯಾಕೆ ನಿಮ್ಮ ಮೇಲೆ ಅಷ್ಟೊಂದು ಇಂಟ್ರೆಸ್ಟ್ ?"

"ರಮಣಿಕೂಡಾ ಬರುತ್ತಿದ್ದಳು."

"ಓಹೊ.... ಎರಡು ಜೋಡಿಗಳೂ ಒಂದೇ ಕಡೆ...."

ರಾಯಣ್ಣನಿಗೆ ಈ ಮಾತುಗಳು ಬೇಸರತರಿಸಿದವು.

"ನಾವು ಎಷ್ಟೋ ಬಾರಿ ಭೇಟಿಯಾಗಲಿಲ್ಲ. ಕೇವಲ ಐದು ಬಾರಿ ಮಾತ್ರ."

"ನೀವು ಸುಳ್ಳು ಹೇಳುತ್ತಿದ್ದೀರಿ."

"ಇಲ್ಲ. ನಿಜವನ್ನೇ ಹೇಳುತ್ತಿದ್ದೇನೆ."

"ಮಿಸ್ಟರ್ ರಾಯಣ್ಣಾ ! ನನ್ನ ಸರ್ವೀಸಿನಲ್ಲಿ ನಿಮ್ಮಂಥಹ ಎಷ್ಟೋ ಜನರನ್ನು ಕಂಡಿದ್ದೇನೆ. ಕೊನೆಯಬಾರಿ ಹೇಳುತ್ತಿದ್ದೇನೆ. ನೀಜ ಹೇಳುವುದರಿಂದ ನಿಮಗೇ ಒಳಿತು."

ರಾಯಣ್ಣ ಮಾತನಾಡಲಿಲ್ಲ.

ಇನ್ಸ್‌ಪೆಕ್ಟರ್ ಒಂದು ಕಾಗದವನ್ನು ಅವನು ಮುಂದೆ ತಳ್ಳಿ, "ನಾನು ಹೇಳಿದಂತೆ ಬರೆಯಿರಿ" ಎಂದರು.

ರಾಯಣ್ಣ ಅರ್ಥವಾಗದವನಂತೆ ನೋಡಿ "ಏನನ್ನು ?" ಎಂದು ಕೇಳಿದ.

"ಹೇಳ್ತೀನಿ ಬರೀರಿ" ಲಾಠಿಯನ್ನು ಕೈಗೆ ತೆಗೆದುಕೊಳ್ಳುತ್ತಾ ಹೇಳಿದರು ಇನ್ಸ್‌ಪೆಕ್ಟರ್ ರಾಯಣ್ಣ ಬರೆಯಲು ಪ್ರಾರಂಭಿಸಿದ.

"ಟು ಹುಮ್ ಸೊ ಎವರ್ ಇಟ್ ಮೆ ಕನ್ಸರ್ನ್...." ರಾಯಣ್ಣ ಬರೆದ.

"ನಾನು ನನ್ನ ಸ್ವ ಇಚ್ಛೆಯಿಂದ ಆತ್ಮಹತ್ಯೆ ಮಾಡಿಕೊಳ್ಳುತ್ತಿದ್ದೇನೆ.

ನನ್ನ ಸಾವಿಗೆ ಯಾರೂ, ಯಾವ ಕಾರಣಕ್ಕೂ, ಕಾರಣರಲ್ಲ—"

ರಾಯಣ್ಣ ಹಾಗೆಯೇ ಬರೆದು ತಲೆ ಎತ್ತಿದ.

ಕಿರಣ್ಮಯಿ ಬೆಳಗಾಗುವವರೆಗೂ ಆ ಪುಸ್ತಕವನ್ನು ಓದುತ್ತಿದ್ದಳು. ಪೂರ್ವದಿಂದ ಸೂರ್ಯಕಿರಣಗಳು ಬೀಳುತ್ತಿದ್ದಂತೆಯೇ ಅಲ್ಲಿಗೆ ಬಂದ ಅವಳ ತಾಯಿ, "ಇಲ್ಲಿ ಕುಳಿತೇನು ಮಾಡುತ್ತಿದ್ದಿ ?" ಎಂದು ಕೇಳುವವರೆಗೂ ಓದುತ್ತಲೇ ಇದ್ದಳು.

ಆ ಪುಸ್ತಕವನ್ನು ಓದುತ್ತಿದ್ದಂತೆ ಅವಳಲ್ಲಿ ಅದೊಂದು ರೀತಿಯಾದ ಆಂತರಿಕ ಶಕ್ತಿ ಬೆಳೆಯುತ್ತಾ ಬಂತು. ಭಯ, ಆಂದೋಲನ, ಉದ್ವೇಗ, ಕಂಗಾಲಾಗುವುದು—ಇವೆಲ್ಲಾ ಮಾನಸಿಕ ಸ್ಥಾಯಿ ಭಾವನೆಗಳು. ಇವೇ ನೋವುಗಳನ್ನುಂಟುಮಾಡುತ್ತವಾಗಲೀ ಪರಿಸ್ಥಿತಿಗಳಲ್ಲ.

ಅವಳು ಒಳಗೆ ಬಂದಳು. ನೆಂಟರೆಲ್ಲಾ ಒಬ್ಬೊಬ್ಬರೇ ನಿದ್ರೆಯಿಂದ ಏಳುತ್ತಿದ್ದರು. ರಾತ್ರಿಯ ಘಟನೆಯಿಂದ ಅವರಲ್ಲಿ ಉಂಟಾಗಿದ್ದ ಕಂಗಾಲು ಸ್ವಲ್ಪ ಸ್ವಲ್ಪ ಕಡಿಮೆಯಾದಿ ಆ ಜಾಗದಲ್ಲಿ ಕುತೂಹಲ ತುಂಬಿಕೊಂಡಿತ್ತು. ಹೊಸ ಮದುಮಗಳನ್ನು ವಿವಿಧ ಕೋನಗಳಿಂದ ಪರೀಕ್ಷಿಸುತ್ತಿದ್ದವು ಅವರ ಕಣ್ಣುಗಳು. ಯಾವ ಶಸ್ತ್ರಾಸ್ತ್ರಗಳಿಗೂ ಇರದ ಹರಿತ ಆ ನೋಟಗಳಲ್ಲಿತ್ತು.

ಅವಳು ಅದರ ಬಗ್ಗೆ ತಲೆ ಕೆಡಿಸಿಕೊಳ್ಳಲಿಲ್ಲ. ಅಣ್ಣಂದಿರೊಡನೆಯೂ ಮಾತಾನಾಡಬೇಕೆಂದುಕೊಳ್ಳಲಿಲ್ಲ. ತಾನೇ ಕಾಫಿಯನ್ನು ಫ್ಲಾಸ್ಕಿಗೆ ತುಂಬಿಸಿ ಕೊಂಡು, ಬೇಗ ಬೇಗನೆ ಮುಖ ತೊಳೆದುಕೊಂಡು ಸ್ಟೇಷನ್‌ಗೆ ಹೊರಟಳು.

ಅವಳು ಬಾಗಿಲಿನಿಂದ ಹೊರಬರುತ್ತಿದ್ದಂತೆಯೇ ರಾಯಣ್ಣನ ಸ್ನೇಹಿತ ಕೈಯಲ್ಲೊಂದು ಟೆಲಿಗ್ರಾಂ ಹಿಡಿದು ಬಂದ.

ಅದನ್ನು ತೆಗೆದುಕೊಂಡು ಬಿಡಿಸಿ ಗಬಗಬನೆ ಓದಿದಳು.

ಸೆಲೆಕ್ಟೆಡ್ ಫಾರ್ ಪ್ರೆಸಿಡೆಂಟ್ಸ್ ಎಲೆವೆನ್ ಟೀಮ್ ಟು ಪ್ಲೇ ಎಗೆನೆಸ್ಟ್ ಆಸ್ಟ್ರೇಲಿಯಾ. ಸ್ಟಾರ್ಟ್ ಇಮಿಡಿಯೇಟ್ಲಿ ಕ್ರಿಕೇಟ್ ಬೋರ್ಡ್—ಎಂದಿತ್ತು ಅದರಲ್ಲಿ. ಅವಳು ಟೆಲಿಗ್ರಾಮವನ್ನು ಓದುತ್ತಿದ್ದಂತೆಯೇ ಹಿಂದಿನಿಂದ ತಾಯಿ

ಬಂದು ಕೇಳಿದಳು. "ಏನೇ ಅದು ?" ಏನೂ ಇಲ್ಲವೆಂದು ಹೇಳಿದಳು ಕಿರಣ್ಮಯಿ ಈ ವಿಷಯ ಮನೆಯಲ್ಲಿ ಎಲ್ಲರಿಗೂ ತಿಳಿದು ಮತ್ತೆ ಅದೊಂದು ಟಾಪಿಕ್ ಆಗುವುದು, ಎಲ್ಲರ ಸಹಾನುಭೂತಿಗೆ ಪಾತ್ರಳಾಗುವುದು ಅವಳಿಗಿಷ್ಟ ವಿರಲಿಲ್ಲ.

"ನೀವು ಯಾರು ?" ಟೆಲಿಗ್ರಾಂ ತಂದ ಯುವಕನನ್ನು ಕೇಳಿದಳು.

"ರಾಯಣ್ಣನ ಫ್ರೆಂಡ್. ಬೆಳಗಿನ ಜಾವವೇ ಟೆಲಿಗ್ರಾಂ ಬಂದಾಗ ಗಾಬರಿಯಾದೆ. ಬಿಚ್ಚಿ ನೋಡಿದರೆ ಇದು. ಸರಿ ಈ ಸಿಹಿಸುದ್ದಿಯನ್ನು ಸ್ವತಃ ಬಂದೇ ಹೇಳೋಣವೆಂದು ಬಂದೆ. ಎಲ್ಲಿ ನಮ್ಮ ಹೀರೋ ? ಇನ್ನೂ ನಿದ್ರೆಯಲ್ಲೇ ಇದಾನಾ ?" ನಗುತ್ತಾ ಕೇಳಿದ.

ಅವಳಿಗೇನು ಹೇಳಬೇಕೋ ತೋಚಲಿಲ್ಲ. ಇಂದಿನಿಂದ ಪ್ರಾರಂಭ ವಾಗುವ ಪ್ರಶ್ನೆಗಳಿಗೆ ಅದು ಪ್ರಾರಂಭ ಮಾತ್ರ.

"ಒಳಗೆ ಬನ್ನಿ ಕಾಫಿ ಕುಡಿದು ಹೋಗುವಿರಂತೆ."

"ಬೇಡಾರೀ..." ಎನ್ನುತ್ತಾ, ಅವನೇನೋ ಹೇಳುತ್ತಿದ್ದಂತೆಯೇ ಪೇಪರ್ ಹುಡುಗ ಪೇಪರ್ ಹಾಕಿ ಓಡಿದ. ಅವಳು ಅದನ್ನು ತೆಗೆದು ಕೊಳ್ಳುತ್ತಾ, "ನಿಮಗೆ ವೃಥಾ ಶ್ರಮ. ಬೆಳಗ್ಗೆಯೇ ಇಷ್ಟು ದೂರ ಬಂದಿರಿ" ಅಂದಳು.

"ಅದಕ್ಕೇನು ಬಿಡಿ. ಇದಕ್ಕಾಗಿ ನಿಮ್ಮ ಗಂಡ ಹಗಲು ರಾತ್ರಿ ತಪಸ್ಸು ಮಾಡಿದ್ದ. ಇವತ್ತಾಗದೆ ಬೇರೆ ದಿನ ಆಗದ್ದಿದ್ರೆ ನೀರು ಹೋಯ್ತು ಅವ ನನ್ನ ಎಬ್ಬಿಸಿ, ಈ ಸುದ್ದಿಯನ್ನು ನಾನೇ ಸ್ವತಃ ಹೇಳುತ್ತಿದ್ದೆ. ನಿಮಗೆ ಗೊತ್ತಿಲ್ಲ, ಕ್ರಿಕೆಟ್ ಅಂದರೆ ಅವನಿಗೆ ಪ್ರಾಣ. ಈ ಸುದ್ದಿ ತಿಳಿದರೆ ಅವನು ಭೂಮಿಯ ಮೇಲಿರುವುದಿಲ್ಲ."

ಕಣ್ಣೀರು ಕಾಣದಂತೆ ಪ್ರಯತ್ನಿಸಲು ಅವಳು ತುಂಬಾ ಕಷ್ಟ ಪಡ ಬೇಕಾಯಿತು.

ಆ ಯುವಕನಿಗೆ ಇದೇನೂ ಅರ್ಥವಾಗುತ್ತಿರಲಿಲ್ಲ. ರಾಯಣ್ಣನಿಗೆ ಬೇಗ ಈ ಸುದ್ದಿ ತಿಳಿಸಿ ಅವನೊಡನೆ ಸಂತೋಷ ಕ್ಷಣಗಳನ್ನು ಕಳೆಯ ಬೇಕೆಂಬ ಆತುರವಿತ್ತು ಅವನಲ್ಲಿ. ಅವನಿಗೆ ಹೇಗೆ ಹೇಳಬೇಕೆಂದೇ ಅವಳಿಗೆ

ತಿಳಿಯಲಿಲ್ಲ, ಅವಳ ಮತ್ತೊಂದು ಭಯ—ಮನೆಯವರೆಲ್ಲ ಹೊರಗೆ ಬಂದು ಅವನಿಗೆ ರಾತ್ರಿ ನಡೆದದ್ದಕ್ಕೆ ಉಪ್ಪುಕಾರ ಹಚ್ಚಿ ವೈಭವೀಕರಿಸಿ ಹೇಳುತ್ತಾರೋ ಎಂಬ ಆತಂಕ.

"ರಾಯಣ್ಣನ ಸೆಲೆಕ್ಷನ್ ಬಗ್ಗೆ ಪೇಪರ್‌ನಲ್ಲೂ ಬಂದಿರಬಹುದು. ಎಲ್ಲಿ ಸ್ವಲ್ಪ ಪೇಪರ್ ಹೀಗೆ ಕೊಡಿ." ಎನ್ನುತ್ತಾ ಅವನು ಪೇಪರ್ ತೆಗೆದು ಕೊಂಡ. ಅವನ ಉತ್ಸಾಹ ನೋಡುತ್ತಿದ್ದರೆ ಅವನೇ ಟೀಮಿಗೆ ಸೆಲೆಕ್ಟ್ ಆದವನಂತೆ ಕಾಣುತ್ತಿದ್ದ. ಅವಳು ನಿರಾಸಕ್ತಿಯಿಂದಲೇ ಇದ್ದಳು. ಅವನು ಪೇಪರಿನ ಕೊನೆಯ ಪುಟ ತೆಗೆಯುವುದಕ್ಕೆ ಮುಂಚೆಯೇ ಅವನ ಕಣ್ಣಿಗೆ ಮುಖಪುಟ ಕಂಡಿತು. "ಅರೇ ಫೋಟೋ ಕೂಡಾ ಬಂದಿದೆಯಲ್ಲಾ" ಎನ್ನುತ್ತಾ ಹಾಗೆಯೇ ನಿಂತುಬಿಟ್ಟ. ಆ ಸುದ್ದಿಯನ್ನು ಓದುತ್ತಿದ್ದಂತೆ ಅವನ ಮುಖದ ಭಾವನೆಗಳು ಕ್ರಮೇಣ ಬದಲಾಗತೊಡಗಿತು. ನಂಬದವ ನಂತೆ ಮತ್ತೆ ಮತ್ತೆ ಅದನ್ನೇ ನೋಡತೊಡಗಿದ. ಮಧ್ಯೆ ಮಧ್ಯೆ ಅವಳ ಕಡೆಗೆ ನೋಡುತ್ತಿದ್ದ, ಅವಳಿಗೇನೋ ಅನುಮಾನ ಬಂದು, ಅವನು ಓದುತ್ತಿರುವ ಪೇಪರ್ ಕಡೆಗೆ ನೋಡಿದಳು. ಅವಳ ಅನುಮಾನ ನಿಜವಾಗಿತ್ತು. ರಾಯಣ್ಣನ ಫೋಟೋ ಮುಖಪುಟದಲ್ಲೇ ಬಂದಿತ್ತು.

## ಲೇಡೀಸ್ ಹಾಸ್ಟೆಲಿನಲ್ಲಿ ವಿದ್ಯಾರ್ಥಿನಿಯೊಬ್ಬಳ ಸಾವು

ಎಂಬ ಹೆಡ್ಡಿಂಗ್ ಇತ್ತು. ಉಳಿದದ್ದು ಅವಳಿಗೆ ಅರ್ಥವಾಗಿ ಅವಳ ಮುಖ ಬಿಳಿಚಿಕೊಂಡಿತು. ರಾಯಣ್ಣನ ಸ್ನೇಹಿತ ಕೈ ನಡುಗುತ್ತಿತ್ತು. "ಇದು... ಇದು ನಿಜವೇನಾ ಮೇಡಂ ?" ಎಂದು ಕೇಳಿದ.

ಅವಳು ತಲೆ ತಗ್ಗಿಸಿಕೊಂಡು "ನಿಜವೇ...." ಅಂದಳು.

ಏನೂ ತೋಚದವನಂತೆ ಅವನು ತುಂಬಾ ಹೊತ್ತು ಹಾಗೆಯೇ ಇದ್ದು ಬಿಟ್ಟ. ತಾಯಿ, ತಂದೆ, ಉಳಿದ ಬಂಧುಗಳು, ಅತ್ತೆ ಎಲ್ಲರೂ ಆ ಸುದ್ದಿ ತಿಳಿದು ಭಯಪಟ್ಟರು. ಅವನ ನೊಂದುಕೊಳ್ಳುತ್ತಿದ್ದ.

"ರಾಯಣ್ಣ ಎಲ್ಲಿದ್ದಾನೆ ಮೇಡಂ ?"

"ಪೋಲೀಸ್ ಸ್ಟೇಷನ್‌ನಲ್ಲಿ—"

ಅವನು ವಿವರಗಳನ್ನೆಲ್ಲಾ ಕೇಳಿದ ನಂತರ "ಐಯಾಮ್ ಸಾರಿ ಮೇಡಂ" ಎಂದ ಅಳಧ್ವನಿಯಲ್ಲಿ. ಆ ಸ್ವರದಲ್ಲಿದ್ದ ಪ್ರಾಮಾಣಿಕತೆ ಅವಳನ್ನು ಅಲುಗಾಡಿಸಿಬಿಟ್ಟಿತು.

ಅವನು ಹೊರಟು ಹೋದ.

ಅವಳು ಪೇಪರನ್ನು ತೆಗೆದುಕೊಂಡು ನೋಡಿದಳು. ಲಕ್ಷ್ಮಿಯ ಸಾವಿನ ವಿಷಯವನ್ನು ರಾಯಣ್ಣನ ಅರೆಸ್ಟ್ ವಿಷಯದೊಡನೆ ಹಾಕಿದ್ದರು. ಅರ್ಧ ರಾತ್ರಿಯಲ್ಲಿ ನಡೆದ ಅರೆಸ್ಟ್ ವಿಷಯ ಬೆಳಗಿನ ಪೇಪರ್‌ನಲ್ಲಿಯೇ ಹೇಗೆ ಬಂತೆಂದು ಅವಳು ಆಶ್ಚರ್ಯಪಟ್ಟಳು. ವಾರೆಂಟ್ ವಿಷಯ ತಿಳಿದು ಬಹುಶಃ ಹಾಕಿರುತ್ತಾರೆಂದುಕೊಂಡಳು.

ಅವಳು ಪೇಪರನ್ನು ಮಡಿಸುವ ಮೊದಲು—ಕೊನೆಯ ವಾಕ್ಯವನ್ನು ಕಂಡು ಸ್ತಬ್ಧಳಾದಳು.

**"ಲಕ್ಷ್ಮಿ ತನ್ನ ಆತ್ಮಹತ್ಯೆಗೆ ಯಾರೂ ಕಾರಣವಲ್ಲವೆಂದೂ, ಬದುಕಿನಲ್ಲಿಯ ಜಿಗುಪ್ಸೆಯಿಂದ ತಾನು ಈ ಕೆಲಸ ಮಾಡಿಕೊಂಡಿರುವುದಾಗಿ ಬರೆದು ತಿಳಿಸಿದ್ದಾರೆ—"** ಎಂಬ ವಾಕ್ಯ ಅದು.

"ಯಾಕೆ ? ಹೀಗೇಕೆ ನಾನು ಬರೆಯಬೇಕು ?" ಸಂದಿಗ್ಧನಾಗಿ ಕೇಳುತ್ತಿದ್ದ ರಾಯಣ್ಣ "ಬರೀರಿ" ಕಟುವಾಗಿ ಹೇಳಿದ ಇನ್ಸ್‌ಪೆಕ್ಟರ್. ಸ್ವ-ಇಚ್ಛೆಯಿಂದ ರಾಯಣ್ಣ ತಲೆತಗ್ಗಿಸಿಕೊಂಡು ಬರೆದ. ನಾನು ನನ್ನ ಆತ್ಮಹತ್ಯೆ ಮಾಡಿಕೊಳ್ಳುತ್ತಿದ್ದೇನೆ. ನನ್ನ ಸಾವಿಗೆ ಯಾರೂ, ಯಾವ ಕಾರಣಕ್ಕೂ ಕಾರಣರಲ್ಲ—"

ಇನ್ಸ್‌ಪೆಕ್ಟರ್ ಆ ಕಾಗದವನ್ನು ತೆಗೆದುಕೊಂಡು ಒಳಗಿನ ಮತ್ತೊಂದು ಕೋಣೆಗೆ ಹೋದ. ರಾಯಣ್ಣ ಒಬ್ಬನೇ ಟೇಬಲ್ ಮುಂದೆ ಕುಳಿತಿದ್ದ. ಅಂದಿನ ಪೇಪರ್ ಟೇಬಲ್ ಮೇಲಿತ್ತು. ಮೊದಲ ಪುಟದಲ್ಲೇ ತನ್ನ ಫೋಟೋ ನೋಡಿ ಆತುರದಿಂದ ತೆಗೆದುಕೊಂಡು ಓದತೊಡಗಿದ.

ಹೆಡ್ಡಿಂಗ್ ಓದುತ್ತಿದ್ದಂತೆಯೇ ಅವನ ಮುಖ ಬಾಡಿಹೋಯಿತು. ಆದರೆ ಕೊನೆಯ ವಾಕ್ಯ ಓದಿದಾಗ ನಿಟ್ಟುಸಿರುಬಿಟ್ಟ. ಅಷ್ಟರಲ್ಲಿ ಇನ್ಸ್‌ಪೆಕ್ಟರ್ ಬರುತ್ತಿರುವುದನ್ನು ಕಂಡು, ಅರಳಿದ ಮುಖದೊಡನೆ, "ನೋಡಿ ಇನ್ಸ್‌ಪೆಕ್ಟರ್! ಸಾಯುವ ಮೊದಲು ಈ ಕಾಗದ ಬರೆದು ಸತ್ತಿದ್ದಾಳೆ" ಅಂದ.

ಇನ್ಸ್‌ಪೆಕ್ಟರ್ ತಲೆ ಆಡಿಸುತ್ತಾ, "ಹೌದು, ಅದಕ್ಕೇ ನಿಮ್ಮನ್ನು ಹಾಗೆ ಬರೆಯುವಂತೆ ನಾನು ಹೇಳಿದ್ದು" ಎಂದು ಒಂದು ನೋಟ್ ಪುಸ್ತಕ, ಎರಡು ಕಾಗದಗಳನ್ನು ಅವನ ಮುಂದಿಟ್ಟ, ಆ ಎರಡು ಕಾಗದಗಳಲ್ಲಿ ಒಂದು ಅವನು ಈ ಮುಂಚೆ ಬರೆದದ್ದೇ.

ಎರಡನೆ ಕಾಗದವನ್ನು ಮುಂದಕ್ಕೆ ತಳ್ಳುತ್ತಾ, "ಲಕ್ಷ್ಮಿಯ ಶವದ ಬಳಿ ಸಿಕ್ಕಿದ ಕಾಗದ ಇದು, ನೀವು ಪೇಪರ್‌ನಲ್ಲಿ ಓದಿದ್ದು ಇದರ ಬಗ್ಗೆಯೇ ಇನ್ಸ್‌ಪೆಕ್ಟರ್ ಹೇಳಿ ನಂತರ ನೋಟ್‌ಪುಸ್ತಕವನ್ನು ತೆರೆದು, "ಇದು ಲಕ್ಷ್ಮಿಯ ಸ್ವತಃ ಕೈ ಬರಹ" ಅಂದ.

ರಾಯಣ್ಣ ಅರ್ಥವಾಗದವನಂತೆ ನೋಡಿದ. ಇನ್ಸ್‌ಪೆಕ್ಟರ್ ತೋರು ಬೆರಳಿನಿಂದ ನೋಟ್ ಪುಸ್ತಕದ ಕಡೆಗೆ, ಕಾಗದದ ಕಡೆಗೆ ತೋರಿಸುತ್ತಾ, "ಈ ಕೈ ಬರಹಕ್ಕೂ, ಈ ಕೈ ಬರಹಕ್ಕೂ ಎಷ್ಟು ವ್ಯತ್ಯಾಸವಿದೆಯೆಂದು ಹೇಳುತ್ತೀರಾ? ಈ ಕಾಗದವನ್ನು ಲಕ್ಷ್ಮಿ ಬರೆದಿಲ್ಲ."

"ಮತ್ತಾರು ಬರೆದಿದ್ದಾರೆ?"

"ನೀವು!"

ಆಕಾಶ ಕಳಚಿ ಮೇಲೆ ಬಿದ್ದಂತಾಯಿತು ರಾಯಣ್ಣನಿಗೆ. ಇನ್ಸ್‌ಪೆಕ್ಟರ್ ನಗುತ್ತಿದ್ದ ಕೂಡಲೇ ಅವನ ಮುಖ ಕಠಿಣವಾಗಿ ಬದಲಾಯಿತು.

"ತುಂಬಾ ಸಾಮಾನ್ಯ ಟ್ರಿಕ್ ಇದು, ಲಕ್ಷ್ಮಿಯ ಕೈ ಬರಹವನ್ನು ಅನುಸರಿಸಿ ಇಂತಹ ಕಾಗದ ಬರೆದಿಟ್ಟರೆ ಎಲ್ಲರೂ ಇದನ್ನು ಆತ್ಮಹತ್ಯೆ ಎಂದು ಕೊಳ್ಳುತ್ತಾರೆ.... ಎಂದು! ಪೋಲೀಸರು ಕೂಡಾ ಮುಂದೆ ಶೋಧನೆ ನಡೆಸುವುದಿಲ್ಲ. ಹಾಸ್ಟೆಲ್‌ನಲ್ಲಾದ ಸಾವು ಮೇಲಾಗಿ ಸ್ವತಃ ನೇಣು ಹಾಕಿಕೊಂಡಿದ್ದಾಳೆ, ಪಕ್ಕದಲ್ಲೇ ಕಾಗದ ಇದೆ, ಫೈಲನ್ನು ಆತ್ಮಹತ್ಯೆಯೆಂದು

ಕ್ಲೋಸ್ ಮಾಡುತ್ತಾರೆ—ತುಂಬಾ ತಿಳುವಳಿಕೆಯಿಂದ ಪ್ಲಾನ್ ಮಾಡಿದ್ದೀರಿ. ಆದರೆ ನೀವು ತಪ್ಪು ಹೆಜ್ಜೆ ಹಾಕಿದ್ದು ಸಹಿಯ ಬಳಿ. ಲಕ್ಷ್ಮಿಗೆ ತನ್ನ ನೋಟ್ ಪುಸ್ತಕದ ತುಂಬಾ ಸಹಿ ಹಾಕುವ ರೂಢಿ. ಸಹಿ ಮಾಡಿ ಕೆಳಗೆ ಗೆರೆ ಎಳೆಯುವ ರೂಢಿ ಅವಳಿಗಿಲ್ಲ. ಹಾಗೆ ಸಹಿ ಮಾಡಿ ಕೆಳಗೆ ಗೆರೆ ಎಳೆದು, ಎರಡು ಚುಕ್ಕಿ ಹಾಕುವುದು ನಿಮ್ಮ ಅಭ್ಯಾಸ. ಅಜಾಗರೂಕತೆಯಿಂದ ಲಕ್ಷ್ಮಿ ಎಂದು ಸಹಿ ಮಾಡಿ ಕೆಳಗೆ ಗೆರೆ ಎಳೆದು ಎರಡು ಚುಕ್ಕಿ ಇಟ್ಟಿದ್ದೀರಿ. ಅದು ನಿಮ್ಮ ಕಾಗದದಲ್ಲೂ, ಲಕ್ಷ್ಮಿಯ ಶವದ ಬಳಿಯಿದ್ದ ಕಾಗದದಲ್ಲೂ ಕಾಮನ್ನಾಗಿದೆ.

ರಾಯಣ್ಣ ಗಲಿಬಿಲಿಯಿಂದ ನೋಡಿದ ಇನ್ಸ್‌ಪೆಕ್ಟರ್ ಕಡೆಗೆ.

"ಒಬ್ಬೊಬ್ಬರಿಗೆ ಒಂದೊಂದು ಅಕ್ಷರವನ್ನು ಒಂದೊಂದು ರೀತಿ ಬರೆಯುವ ಅಭ್ಯಾಸವಿರುತ್ತದೆ. ಅದರಿಂದ ಎರಡು ಕೈ ಬರಹಗಳು ಒಬ್ಬರೇ ಬರೆದಿದ್ದಾ, ಅಥವಾ ಇಬ್ಬರು ಬರೆದಿರುವುದಾ ಎಂದು ಕಂಡು ಹಿಡಿಯ ಬಹುದು" ಎನ್ನುತ್ತಾ ಲಕ್ಷ್ಮಿಯ ನೋಟ್ ಪುಸ್ತಕವನ್ನು ಅವನ ಮುಂದಕ್ಕೆ ತಳ್ಳುತ್ತಾ, "ಈ ಆತ್ಮ ಹತ್ಯೆಯ ಕಾಗದ ಆ ನೋಟ್ ಪುಸ್ತಕದಲ್ಲಿಯ ಕೈ ಬರಹ ಒಬ್ಬರೇ ಬರೆದಿದ್ದಾ, ಬೇರೆ ಬೇರೆಯವರು ಬರೆದಿದ್ದಾ ಎಂದು ತಿಳಿಯಲು ಯಾವ ನಿಪುಣರ ಅಗತ್ಯವೂ ಇಲ್ಲ. ನಾವೇ ಸಾಕು. ಹೇಳಿ ನಿಮಗೇನನ್ನಿಸುತ್ತದೆ. ಈ ಆತ್ಮಹತ್ಯೆಯ ಕಾಗದ ಬರೆದಿದ್ದು ಲಕ್ಷ್ಮಿಯೇನು?"

"....ಅಲ್ಲ." ಆ ಪ್ರತ್ಯುತ್ತರವಾಗಿ ರಾಯಣ್ಣನ ಬಾಯಿಂದ ಈ ಮಾತು ಬಂತು. ಆ ವ್ಯತ್ಯಾಸ ನೋಡುತ್ತಿದ್ದಂತೆಯೇ ತಿಳಿದುಬಿಟ್ಟಿತು.

"ಆ ಆತ್ಮಹತ್ಯೆಯ ಕಾಗದವನ್ನೂ, ನೀವು ಬರೆದಿರುವ ಕಾಗದವನ್ನೂ ನೋಡಿ. ಎರಡೂ ಒಬ್ಬರೇ ಬರೆದಿದ್ದಾ ?"

"ನೋ....ನೋ....ನೋ" ಎಂದು ಕಿರುಚಿದ ರಾಯಣ್ಣ.

"ತುಂಬಾ ಅದ್ಭುತ ನಟರು ನೀವು! ಗಲಿಬಿಲಿಯನ್ನು, ಆವೇಶವನ್ನು ಒಮ್ಮೆಗೇ ಬದಲಾಯಿಸಿ ನಟಿಸುತ್ತೀರಿ....ಹೊರಗಿನವರೇನಾದರೂ ನಿಮ್ಮನ್ನು ಈ ರೀತಿ ಕಂಡರೆ—ನೀವು ಮುಗ್ಧರೆಂದೇ ತಿಳಿಯುತ್ತಾರೆ. ಆದರೆ ನಮ್ಮ ವಿಷಯ ಹಾಗಲ್ಲ. ಬೆಳಗ್ಗೆ ಎದ್ದರೆ ನಿಮಗಿಂತಲೂ ಚೆನ್ನಾಗಿ ನಟಿಸುವ ಕಳ್ಳರಿಂದ ನಿಜ ಹೊರಡಿಸುತ್ತೇವೆ."

ರಾಯಣ್ಣ ಮಾತನಾಡಲಿಲ್ಲ.

"ಈ ಎರಡು ಕಾಗದಗಳನ್ನು ನೋಡಿ. ಸ್ವ, ತ್ಮ, ತ್ಯೆ, ಕ್ಕೊ, ಲ್ಲ— ಈ ಅಕ್ಷರಗಳೆಲ್ಲಾ ಒಬ್ಬರೇ ಬರೆದಿದ್ದರೆ ಕೂಡಲೇ ತಿಳಿಯುತ್ತದೆ. ಈಗಲಾದರೂ ನಿಜ ಒಪ್ಪಿಕೊಳ್ಳಿ."

ರಾಯಣ್ಣನ ಹಣೆಯ ಮೇಲೆ ಬೆವರು ಮೂಡಿತು.

"ನಿಮ್ಮ ಬಗ್ಗೆ ನನಗೆ ಸಹಾನುಭೂತಿಯಿದೆ. ನೀವು ಭವಿಷ್ಯದಲ್ಲಿ ಭಾರತದ ಒಬ್ಬ ಅತ್ಯುತ್ತಮ ಕ್ರಿಕೆಟರ್ ಆಗುತ್ತೀರೆಂದು ನನಗೆ ಗೊತ್ತು. ಆ ಗೌರವವನ್ನು ನೀವು ಉಳಿಸಿಕೊಂಡು, ನಿಮ್ಮ ತಪ್ಪನ್ನು ಒಪ್ಪಿಕೊಂಡರೆ ಒಳ್ಳೆಯದು."

ರಾಯಣ್ಣ ತಲೆ ತಗ್ಗಿಸಿಕೊಂಡು ಕುಳಿತಿದ್ದ. ಅವನ ಮುಖದಲ್ಲಿ ಭಾವನೆಗಳು ಕಾಣುತ್ತಿರಲಿಲ್ಲ. ಏನು ಯೋಚಿಸುತ್ತಿದ್ದಾನೆಂದು ಹೇಳುವುದು ಕಷ್ಟ. ಏನು ಮಾತನಾಡಬೇಕೆಂದರೂ ಅವನಿಗೆ ಬಾಯಿಮಾತೇ ಹೊರಡುತ್ತಿಲ್ಲ.

ಇನ್ಸ್‌ಪೆಕ್ಟರ್ ಎದ್ದು ಶಥಪಥ ಹಾಕುತ್ತಾ ಹೇಳಿದ.

"--ಪೋಲೀಸ್ ಸ್ಟೇಷನ್ನಿನಲ್ಲಿ ಎಲ್ಲರೂ ರಾಕ್ಷಸರೇ ಆಗಿರುತ್ತಾರೆಂದೂ ಲಾಕಪ್ಪಿನಲ್ಲಿಟ್ಟು ಚಿತ್ರಹಿಂಸೆ ಕೊಡುತ್ತಿರುತ್ತಾರೆಂದೂ ಅಂದುಕೊಳ್ಳುತ್ತಿರುತ್ತಾರೆ. ಇದೇ ಸ್ಟೇಷನ್ನಿನಲ್ಲಿ ಒಬ್ಬ ಸಬ್....ಇನ್ಸ್‌ಪೆಕ್ಟರ್ ಇದ್ದಾನೆ. ಅವನ ಹೆಸರು ಸತ್ಯನಾರಾಯಣ ಎಂದು. ಅವನು ಅದನ್ನು ಚೆನ್ನಾಗಿ ನಂಬುತ್ತಾನೆ." ಲಾಠಿ ತಿರುಗಿಸುತ್ತಾ ತನ್ನ ಮಾತನ್ನು ಮುಂದುವರೆಸಿದ. "....ಒಂದು ಕೋನದಿಂದ ಯೋಚಿಸಿದರೆ ಅದರಲ್ಲೂ ತಪ್ಪಿಲ್ಲ. ಕಾರ್ಕೋಟಕರು, ಕಿರಾತಕರು, ನಿಕ್ಷರುಣಗಳು--ಎಷ್ಟೋ ಜನ ಈ ಲಾಕಪ್‌ನಲ್ಲಿ ಬರುತ್ತಾರೆ. ಪ್ರತಿಯೊಬ್ಬರೊಡನೆಯೂ ಸಮಾಧಾನದಿಂದ ಮಾತನಾಡುತ್ತಾ ಅವರಿಂದ ನಿಜ ಹೊರಡಿಸುವುದು ಅಸಾಧ್ಯ. ಉದಾಹರಣೆಗೆ ನಿಮ್ಮ ತಂಗಿ ಕಾಲೇಜಿನಿಂದ ಬರುತ್ತಿರುವಾಗ ಒಬ್ಬ ಸೈಕಲ್ ಮೇಲೆ ಬಂದು ಅವಳ ಕತ್ತಿನಲ್ಲಿರುವ ಚೈನನ್ನು ಕಸಿದುಕೊಂಡು ಹೋಗುತ್ತಾನೆಂದುಕೊಳ್ಳಿ. ಭಯದಿಂದ ಎರಡು ದಿನ ನಿಮ್ಮ ತಂಗಿ ಹಾಸಿಗೆಯಿಂದ ಮೇಲೇಳಲಿಲ್ಲ. ಆಗ ಅವನನ್ನು ಏನು ಮಾಡಬೇಕೆ

ನ್ನಿಸುತ್ತದೆ ನಿಮಗೆ ? ಗಂಡ-ಹೆಂಡತಿ, ಮಕ್ಕಳೊಡನೆ ಅರ್ಧ ರಾತ್ರಿಯ ವೇಳೆ ನಿದ್ರಿಸುತ್ತಿರುವಾಗ, ದರೋಡೆಕೋರರು ಆಯುಧಗಳೊಂದಿಗೆ ಒಳಗೆ ನುಗ್ಗಿ ಹೆಂಡತಿ ಮಕ್ಕಳನ್ನು ಚೆನ್ನಾಗಿ ಬಡಿದು ಮನೆಯಲ್ಲಿರುವುದನ್ನೆಲ್ಲಾ ಹೊತ್ತುಕೊಂಡು ಹೋಗುತ್ತಾರೆ. ಆ ಮೇಲೆ ಅವರು ಸಿಗುತ್ತಾರೆ. ಅವರನ್ನು ಏನು ಮಾಡಬೇಕೆನ್ನಿಸುತ್ತದೆ ? ನೇಣುಗಂಬಕ್ಕೆ ಏರಿಸಬೇಕೆನ್ನಿಸುವುದಿಲ್ಲವಾ ? ಆದರೆ ಸಾಕ್ಷಿಗಳು ಸಿಗುವುದಿಲ್ಲ. ಅವರು ಸ್ವೇಚ್ಛೆಯಿಂದ ಹೊರಬರುತ್ತಾರೆಂದುಕೊಳ್ಳಿ. ಅವರನ್ನು ಆಗ ಏನು ಮಾಡಬೇಕೆನ್ನಿಸುತ್ತದೆ ? ಇಷ್ಟು ದ್ರೋಹ ಮಾಡಿದವರನ್ನು ಕೊಲ್ಲಬೇಕೆನ್ನಿಸುವುದಿಲ್ಲವಾ ?" ಎಂದು ನಿಲ್ಲಿಸಿದ.

"....ನಾವು ಮಾಡುವುದೂ ಅದನ್ನೇ ! ಇಲ್ಲಿ ಬಂದವರಾರೂ ಸುಲಭವಾಗಿ ತಮ್ಮ ತಪ್ಪನ್ನು ಒಪ್ಪಿಕೊಳ್ಳುವುದಿಲ್ಲ. ಇಂತಹ ಎಷ್ಟೋ ಇಂಟರಾಗೇಷನ್‌ಗಳನ್ನು ಅವರು ಕಂಡಿರುತ್ತಾರೆ. ಅವರಿಂದ ನಿಜ ಹೊರಡಿಸುವುದು ನಮ್ಮ ಆದ್ಯ ಕರ್ತವ್ಯ. ಕಾನೂನಿನಿಂದ ತಪ್ಪಿಸಿಕೊಳ್ಳುವುದು, ಸಾಕ್ಷಿಗಳಿಲ್ಲದಂತೆ ಮಾಡುವುದು ಅವನಿಗೆ ಹೇಗೋ, ಹಾಗೇ ಮತ್ತೆ ಕಾನೂನಿನ ಪರಧಿಯಲ್ಲಿ ಅವರನ್ನು ಬಂಧಿಸಲು ನಾವು ಸಾಕಷ್ಟು ಪ್ರಯತ್ನಿಸುತ್ತೇವೆ. ಅಪರಾಧವನ್ನು ಹೇಗೆ ಮಾಡಿದರೆಂಬುದನ್ನು ಅವರ ಬಾಯಿಂದಲೇ ಹೇಳಿಸುವುದಕ್ಕೆ ನಮ್ಮಲ್ಲಿ ಸಾಕಷ್ಟು ವಿಧಾನಗಳಿವೆ."

ರಾಯಣ್ಣ ಕೈ ಬೆರಳುಗಳನ್ನು ಹಿಸುಕಿಕೊಳ್ಳುತ್ತಿದ್ದಾನೆ. ಅವನಿಗೆ ಗಲಿಬಿಲಿಯಾದಂತಿದೆ. ಇನ್ಸ್‌ಪೆಕ್ಟರ್ ತನ್ನ ಮಾತನ್ನು ಮುಂದುವರೆಸಿದ.

"ಲಕ್ಷ್ಮಿ ಒಳ್ಳೆಯವಳೆಂದು ನೀವೇ ಹೇಳಿದಿರಿ. ತನ್ನವರನ್ನೆಲ್ಲಾ ಬಿಟ್ಟು, ಪಟ್ಟಣಕ್ಕೆ ವಿದ್ಯಾಭ್ಯಾಸಕ್ಕಾಗಿ ಬಂದ ಹದಿನೆಂಟರ ಹುಡುಗಿ-ಎಷ್ಟೋ ಒಳ್ಳೆಯ ಭವಿಷ್ಯತ್ತಿನ ಕನಸು ಕಂಡವಳು-ಹೀಗೆ ಒಮ್ಮೆಗೆ ಸತ್ತಿದ್ದಾಳೆಂದು ಅವಳ ತಂದೆ ತಾಯಿಯರಿಗೆ ತಿಳಿದರೆ ಅವರ ಸ್ಥಿತಿ ಹೇಗಿರುತ್ತದೆ ? ಒಬ್ಬ ಗಂಡಿನ ಮೋಸದ ಬಲೆಯಲ್ಲಿ ಸಿಲುಕಿ ಆ ಹುಡುಗಿ ತನ್ನ ಬದುಕನ್ನು ಮುಗಿಸಿಕೊಂಡಿದ್ದಾಳೆಂದು ತಿಳಿದರೆ ಅವರಿಗೆ ಅವನನ್ನು ಏನು ಮಾಡಬೇಕೆನ್ನಿಸುತ್ತದೆ ? ಉದ್ದುದ್ದಕ್ಕೂ ಸೀಳಿಬಿಡಬೇಕೆನ್ನಿಸುವುದಿಲ್ಲವೆ ? ಸುಮ್ಮನೆ ಎಷ್ಟು ಹೇಳಿದರೂ, ಎಷ್ಟು ಸಾಕ್ಷಿಗಳನ್ನು ತೋರಿಸಿದರೂ ಆ ಅಪರಾಧಿ ತನ್ನ

ತಪ್ಪನ್ನು ಒಪ್ಪಿಕೊಳ್ಳದಿದ್ದರೆ, ಅತೀ ಬುದ್ಧಿವಂತಿಕೆ ತೋರಿಸಿದರೆ, ಅತೀ ಮುಗ್ಧತೆ ನಟಿಸಿದರೆ—ನಿಮಗೆ ಹೇಗೆನ್ನಿಸುತ್ತದೆ ? ಆ ಹುಡುಗಿಯ ಶವದ ಬಳಿಯೇ ಅವನನ್ನು ಕೊಲ್ಲಬೇಕೆನ್ನಿಸುವುದಿಲ್ಲವಾ ?"

ರಾಯಣ್ಣನ ಹೃದಯವನ್ನು ಒಳಗಿನಿಂದ ಸಮುದ್ರದ ಅಲೆಗಳು ಬಲವಾಗಿ ಬಡಿಯುತ್ತಿರುವಂತೆ ಅನ್ನಿಸಿತು.

"ನಾನು ಎಂಎಸ್ಸಿ ಪಾಸಾದ ಹೊಸದರಲ್ಲಿ ಈ ಪೋಲೀಸ್ ಕೆಲಸ ಸಿಕ್ಕಿದಾಗ ನಮ್ಮಮ್ಮ ಬೇಡವೆಂದು ಗೋಳಾಡಿದಳು. ಅಂತಹ ಕೆಲಸ ನಿಮಗೇಕೋ ಎಂದು ಅಡ್ಡಿಮಾಡಿದಳು. ಸಾಮಾನ್ಯ ಜನರಿಗೆ ಈ ಪೋಲೀಸ್ ವ್ಯಕ್ತಿಯ ಬಗ್ಗೆ ಅಂತಹ ಕೀಳು ಅಭಿಪ್ರಾಯ. ದ್ವೇಷ, ಅಸಹ್ಯ ! ಅಂದರೆ ನಮ್ಮ ಕಡೆಯಿಂದ ಯೋಚಿಸಿದರೆ—ಅಪರಾಧಿಗಳ ಬಾಯಿಂದ ನಿಜ ಹೊರಡಿಸಲು ಬೇರೇನು ಮಾರ್ಗವಿದೆ ? ಮೊನ್ನೆ ಪೇಪರ್‌ನಲ್ಲಿ ನೀವೂ ಒಂದು ಸುದ್ದಿ ಓದಿರಬಹುದು. ಎಂಟನೇ ತರಗತಿಯಲ್ಲಿ ಓದುವ ಹುಡುಗಿಯೊಬ್ಬಳು ಸ್ಕೂಲಿನಿಂದ ಮನೆಗೆ ಬರುತ್ತಿರುವ ದಾರಿಯಲ್ಲಿ, ಅವಳ ಬಾಯಿ ಮುಚ್ಚಿ ಪಕ್ಕದ ಪಾರ್ಕಿಗೆ ಎಳೆದೊಯ್ದು ದುಷ್ಟರಿಬ್ಬರು ಅವಳನ್ನು ರೇಪ್‌ಮಾಡಿದರು. ನಮಗೆ ಯಾವ ಸಾಕ್ಷಿಗಳೂ ಸಿಗಲಿಲ್ಲ. ಕೋರ್ಟಿನಲ್ಲಿ ಕೇಸ್ ನಿಲ್ಲುವುದಿಲ್ಲ. ನನಗೇನು ಮಾಡಬೇಕೆಂದೇ ತೋಚಲಿಲ್ಲ. ಹುಡುಗಿಗೆ ಸಿಫಿಲಿಸ್ ಬಂತು. ಅವಳ ಬದುಕು ಹಾಳಾಯಿತು. ಆ ತಾಯಿ ತಂದೆಯ ಅಳುವನ್ನು ನೀವು ಕಣ್ಣಾರ ನೋಡಬೇಕಾಗಿತ್ತು. ಇನ್ನೊಂದು ಕಡೆ ಅಪರಾಧಿಗಳು ಆರಾಮವಾಗಿ ಕುಡಿಯುತ್ತಾ, ತಿನ್ನುತ್ತಾ ಕಾಲ ಕಳೆಯುತ್ತಿದ್ದಾರೆ ಆ ಸಮಯದಲ್ಲಿ ಈ ಕೇಸನ್ನು ನಮ್ಮ ಸತ್ಯನಾರಾಯಣ ತನ್ನ ಕೈಗೆ ತೆಗೆದುಕೊಂಡು ನಾಲ್ಕುಕಡೆಯ ಅವರ ಎಲುಬುಗಳನ್ನು ಮುರಿದ. ಆಗ ಹೇಳಿದರು ಅವರು ಈ ಕೆಲಸವನ್ನು ಹೇಗೆ ಮಾಡಿದರೆಂದು ! ಅವರಿಗೆ ಸಹಾಯ ಮಾಡಿದ ಟ್ಯಾಕ್ಸಿ ಡ್ರೈವರ್, ತೋಟದ ಕೆಲಸದವನು ಎಲ್ಲಾ ಸಿಕ್ಕಿಬಿದ್ದರು. ಕೋರ್ಟಿನಲ್ಲಿ ಕೇಸು ಸರಿಯಾಗಿ ನಡೆಯುತ್ತಿದೆ. ಈಗ ಹೇಳಿ–ಫೋರ್ಸ್ ಉಪಯೋಗಿಸುವುದರಲ್ಲಿ ತಪ್ಪೇನಿದೆ ? ನಿಮ್ಮ ಪ್ರಜೆಗಳೆಲ್ಲಾ ನಮ್ಮನ್ನು ಏಕೆ ಬೈಯ್ಯುತ್ತಾರೆ ? ಈ ಪ್ರಶ್ನೆ ಎಂದಿನಿಂದಲೋ ನನ್ನಲ್ಲಿದೆ. ನಿಮಗೆ ಉತ್ತರ ತಿಳಿದಿದ್ದರೆ ಇದಕ್ಕೆ ಹೇಳಿ ಮಿ. ರಾಯಣ್ಣ—"

ಸ್ಟೇಷನ್ನಿನ ಗಡಿಯಾರ ಎಂಟು ಗಂಟೆ ಬಡಿಯಿತು.

"ಕೊನೆಯ ಸಲ ಹೇಳುತ್ತಿದ್ದೀನಿ ರಾಯಣ್ಣ ! ನಿಮ್ಮ ಬಗ್ಗೆ ಕೇಳಿದ್ದೇನಾದ್ದರಿಂದ, ನಿಮ್ಮ ಬಗ್ಗೆ ಗೌರವವಿದೆಯಾದ್ದರಿಂದ ಇಷ್ಟೊಂದು ಮರ್ಯಾದೆಯಿಂದ ಮಾತನಾಡುತ್ತಿದ್ದೇನೆ, ನಾನು ಒಂದೊಂದೇ ವಿಷಯವನ್ನು ವಿವರಿಸುತ್ತಾ ನಿಮ್ಮಿಂದ ನಿಜ ಹೇಳಿಸಬಲ್ಲೆ. ಆದರೆ ಅಷ್ಟು ಸಮಯ ಹಾಳಾಗದಂತೆ ನೀವೇ ನಿಜ ಹೇಳಿದರೆ ಉತ್ತಮ ಅವನ ಸ್ವರ ಕಠಿಣವಾಗಿ ಬದಲಾಯಿತು. "....ನೀವು ನನ್ನೊಡನೆ ಸಹಕರಿಸದಿದ್ದರೆ ಈ ಕೇಸನ್ನು ನಮ್ಮ ಸತ್ಯನಾರಾಯಣನಿಗೆ ವಹಿಸಬೇಕಾಗುತ್ತದೆ. ಒಂದು ಸಲ ಇದು ಅವನ ಕೈ ಸೇರಿದರೆ ಆಮೇಲೆ ನೀವು ಈ ಪೇಟಿನಲ್ಲಿ ಹೋಬರರುವುದಿಲ್ಲ. ನಾನು ನಿಮ್ಮ ಒಳ್ಳೆಯದಕ್ಕಾಗಿಯೇ ನಿಮ್ಮನ್ನು ಮೊದಲೇ ಎಚ್ಚರಿಸುತ್ತಿದ್ದೀನಿ.... ಹೇಳಿ. ಈ ಕೊಲೆಯನ್ನು ಹೇಗೆ ಮಾಡಿದಿರಿ ?

"ನಾನು—ನಾನು—"

"ಊ್ಞ. . . ಹೇಳಿ."

ಅವಳು ಆಟೋ ಇಳಿಯುವ ವೇಳೆಗೆ ಎಂಟೂ ಹತ್ತಾಗಿತ್ತು. ಫ್ಲಾಸ್ಕನ್ನು ಹಿಡಿದುಕೊಂಡು ಅವಳು ಬೇಗ ಬೇಗನೆ ಮೆಟ್ಟಿಲು ಹತ್ತಿದಳು. ಬಾಗಿಲ ಬಳಿಯಿದ್ದ ಸೆಂಟ್ರಿ ಕೈ ಅಡ್ಡ ಹಿಡಿದ.

"ಒಳಗೆ ಹೋಗಲು ಸಾಧ್ಯವಿಲ್ಲ."

ಮೆಟ್ಟಿಲುಗಳ ಮೇಲೆ ಕುಳಿತು ಬೀಡಿ ಕುಡಿಯುತ್ತಿದ್ದ ಮತ್ತೊಬ್ಬ ಪೋಲೀಸ್ ಒಂದು ಪಕ್ಕಕ್ಕೆ ಕಾಣುತ್ತಿದ್ದ ಅವಳ ಕಣ್ರೆಪ್ಪೆ ಬಡಿಯದಂತೆ ನೋಡುತ್ತಿದ್ದ ಹಾಗೆಯೇ ತುಟಿಗಳ ಮೇಲೆ ನಾಲಿಗೆ ಆಡಿಸುತ್ತಿದ್ದ.

"ಅವರಿಗೆ ಕಾಫಿ ಕೊಡಬೇಕು."

"ಅವರು ? ಅವರ್‍ಯಾರು ?" ವ್ಯಂಗ್ಯವಾಗಿ ಕೇಳಿದ. ಅವಳ ಮುಖ ಕೆಂಪಗಾಯಿತು.

"ರಾಯಣ್ಣ ನೆನ್ನೆ ರಾತ್ರಿ ಅರೆಸ್ಟ್ ಮಾಡಿದ್ದರು. ಈಗಾಗಲೇ ಒಂದು ಸಲ ಬಂದಿದ್ದೆ ಬೆಳಗಿನ ಜಾವ."

"ಒಳಗೆ ಇನ್ಸ್‌ಪೆಕ್ಟರ್ ಇಂಟರಾಗೇಟ್ ಮಾಡುತ್ತಿದ್ದಾರೆ. ಕಾಫಿ ತಿಂಡಿ ತಂದುಕೊಡೋಕೆ ಇದೇನೂ ಹೋಟೆಲ್ಲಲ್ಲ. ಹೋಗಿ.... ಹೋಗಿ."

ಅವಳು ಕೋಪ ತಡೆದುಕೊಳ್ಳುತ್ತಾ, "ನಾನೊಂದು ಸಲ ಇನ್ಸ್‌ಪೆಕ್ಟರನ್ನು ಭೇಟಿ ಮಾಡಬಹುದಾ ?" ಎಂದು ಕೇಳಿದಳು.

"ಯಾಕೆ ಆಗಲ್ಲ ? ರಾತ್ರಿ ಸ್ವಲ್ಪ ತಡವಾಗಿ ಬನ್ನಿ." ಕಣ್ಣು ಹೊಡೆಯುತ್ತಾ ಹೋದ. "ಐವಿಲ್ ರಿಪೋರ್ಟ್ ದಿಸ್ ಟು ಯುವರ್ ಅಥಾರಿಟಿ. ಏನಂದುಕೊಂಡಿದ್ದೀರಿ ನೀವು ? ಡೊಂಟ್‌ಯು ಹ್ಯಾವ್ ಎನಿ ಮ್ಯಾನರ್ಸ್." ಅವಳ ಕೂಗಾಟ ಆ ವರಾಂಡದಲ್ಲಿ ಪ್ರತಿಧ್ವನಿಸಿತು.

ಪೋಲೀಸ್ ಹೆದರಿದ. "ಹಾಗೆಯೇ ನಿಂತಿರಿ. ಒಳಗೆ ಹೋಗಿ ಕೇಳಿಕೊಂಡು ಬರ್ತೀನಿ" ಎಂದು ಒಳಗೆ ಹೋದ. ನಿಮಿಷದ ನಂತರ ಹಿಂತಿರುಗಿ ಬಂದ ಅವನ ಮುಖದಲ್ಲಿ ವಿಜಯದ ಗರ್ವ ಮೆರೆದಾಡುತ್ತಿತ್ತು.

"ಇನ್ಸ್‌ಪೆಕ್ಟರ್ ಈಗ ಯಾರನ್ನೂ ನೋಡುವುದಿಲ್ಲವಂತೆ, ರಾಯಣ್ಣನನ್ನು ಕೂಡಾ ಈ ಯಾರೂ ಭೇಟಿಮಾಡಲು ಸಾಧ್ಯವಿಲ್ಲವಂತೆ. ನೀವು ಹೋಗಿ" ಅಂದ. ಕಿರಣ್ಮಯಿಯ ಮುಖ ಬಾಡಿಹೋಯಿತು. ಅವಳಿಗೇನು ಮಾಡಬೇಕೆಂದೇ ತೋಚಲಿಲ್ಲ. ನೀರಿಸದಿಂದ ಫ್ಲಾಸ್ಕನ್ನು ಹಿಡಿದುಕೊಂಡು ಮೆಟ್ಟಿಲನ್ನು ಇಳಿದಳು.

"ಸೀಟು ಚೆನ್ನಾಗಿದೆ...." ಹಿಂದಿನಿಂದ ಪೋಲೀಸ್ ಹೇಳುತ್ತಿದ್ದ ಮಾತುಗಳು ಗಾಳಿಯಲ್ಲಿ ತೇಲಿಬಂದು ಅವಳ ಕಿವಿಗೆ ಬಡಿಯಿತು. ತುಟಿಗಳನ್ನು ಬಿಗಿಯಾಗಿ ಕಚ್ಚಿಕೊಂಡು ಅವಳು ಅಲ್ಲಿಂದ ಬಿರಬಿರನೆ ನಡೆದಳು.

ತುಂಬಿದ ಫ್ಲಾಸ್ಕ್ ಅವಳ ಕೈಯಲ್ಲಿ ಹಾಗೆಯೇ ಇತ್ತು.

ನೀವು ನನ್ನ ಸಹನೆಯನ್ನು ಪರೀಕ್ಷಿಸುತ್ತಿದ್ದೀರಿ." ಬೆಲ್ ಹೊಡೆಯುತ್ತಾ ಹೇಳಿದ ಇನ್ಸ್‌ಪೆಕ್ಟರ್. ಸೆಂಟ್ರಿ ಒಳಗೆ ಬಂದ. "ಎರಡು ಕಾಫಿ

ತಗೊಂಡು ಬಾ" ಎಂದು "ನಿಮಗೆ ಸಿಗರೇಟ್ ಬೇಕಾ ?" ಎಂದು ರಾಯಣ್ಣ ನನ್ನು ಕೇಳಿದ.

"ಬೇಡ. ನಾನು ಸ್ಮೋಕ್ ಮಾಡುವುದಿಲ್ಲ."

"ಊ.... ಹೇಳಿ."

ರಾಯಣ್ಣ ಏನನ್ನೂ ಹೇಳಲಿಲ್ಲ.

"ನಾನು ತುಂಬಾ ಮೆದುವಾದ ವ್ಯಕ್ತಿಯೆಂದು ನಮ್ಮ ಡಿಪಾರ್ಟ್‌ಮೆಂಟ್‌ನವರೆಲ್ಲಾ ಹೇಳುತ್ತಿರುತ್ತಾರೆ. ಆ ಮಾತು ನಿಜವೇ...." ಎನ್ನುತ್ತಾ ಡ್ರಾಯರ್‌ನಿಂದ ಫೈಲೊಂದನ್ನು ತೆಗೆದು ಟೇಬಲ್ ಮೇಲಿಡುತ್ತಾ, ಮುಂದುವರೆಸಿದ".... ಅವರ ಮಾತನ್ನು ಸುಳ್ಳು ಮಾಡಲು ನಾನು ಈ ಕೇಸಿನ ಮೂಲಕ ನಿರೂಪಿಸುತ್ತೇನೆ. ನಿಮ್ಮ ಮೇಲೆ ಕೈಮಾಡದೆ ನಿಮ್ಮ ಬಾಯಿಂದ ನಿಜ ಹೊರಡಿಸದಿದ್ದರೆ ನಾನು ಸೋತಂತೆಯೇ ಲೆಕ್ಕ. ಇದು ನನಗೊಂದು ಸವಾಲ್, ಆದಕ್ಕೆ ಯಂತ್ರಕ್ಕಿಂತ ವೇಗವಾಗಿ ಇನ್‌ವೆಸ್ಟಿಗೇಷನ್ ಮಾಡುತ್ತಿದ್ದೇನೆ. ನಾನು ಸೋತರೆ ಆ ಮೇಲೆ ಇದನ್ನು ಸತ್ಯನಾರಾಯಣನಿಗೆ ಒಪ್ಪಿಸುತ್ತೇನೆ."

ಅವನ ಮಾತಿನಲ್ಲಿ ನಿಸ್ಸಹಾಯಕತೆಯೊಂದಿಗೆ ಸಿನ್ಸಿಯಾರಿಟಿ ಕಂಡಿತು

"....ಮಿಸ್ಟರ್ ರಾಯಣ್ಣ ! ನೀವು ಕೊಲೆ ಮಾಡಿದ್ದೀರೆಂದು ನನಗೆ ಗೊತ್ತು. ನಿಮ್ಮ ಮನಃಸಾಕ್ಷಿಗೆ ಗೊತ್ತು. ಕೊಲೆಗಾರರೆಲ್ಲಾ ಯಾರೂ ತಮ್ಮ ಕೆಲಸವನ್ನು ನೋಡಿಲ್ಲ, ಯಾವ ಸಾಕ್ಷಿಗಳೂ ಇಲ್ಲವೆಂದೇ ಅಂದುಕೊಂಡಿರುತ್ತಾರೆ. ಆದರೆ ಮಾಡಿರುವ ಪಾಪವನ್ನು ಯಾರೋ ಒಬ್ಬರು ಅಥವಾ ಏನೋ ಒಂದು ಹೇಗಾದರೂ ಹಿಡಿದುಕೊಡುತ್ತದೆ. ನಿಮ್ಮಷ್ಟಕ್ಕೆ ನೀವೇ ಏನು ನಡೆಯಿತೆಂದು ಹೇಳಿದರೆ ನನ್ನ ಕೆಲಸ ಸುಲಭವಾಗುತ್ತೆ—"

"ನೀವೂ, ಲಕ್ಷ್ಮಿ ಒಟ್ಟಿಗೆ ನಾಲ್ಕೈದು ಸಲ ಮಾತ್ರವೇ. ಹೊಟೆಲ್‌ಗೆ ಅದೂ ಡಿನ್ನರ್‌ಗೆ ಹೋಗಿದ್ದೇವೆಂದು ಹೇಳಿದಿರಿ ತಾನೆ ?"

"ಹೌದು."

"ಡಿನ್ನರ್ ಮುಗಿದಾಗ ಎಷ್ಟು ಸಮಯವಾಗಿತ್ತು ?"

"ಹತ್ತು—ಹತ್ತೂವರೆ."

ಇನ್ಸ್ಪೆಕ್ಟರ್ ಕಾಗದವೊಂದನ್ನು ತೆಗೆದು ಅವನ ಮುಂದಿಡುತ್ತಾ "ಇದು ಲೇಲೀಸ್ ಹಾಸ್ಟೆಲ್‌ನ ರೂಲ್ಸು ರಾತ್ರಿ ಹತ್ತು ಗಂಟೆಯ ನಂತರ ಒಳಗೆ ಬರಲು ಅವಕಾಶ ಕೊಡಕೂಡದೆಂದು ರೂಲ್ ನಂ. 10 ಹೇಳುತ್ತದೆ. ಹಾಗಾದರೆ ನೀವು ಹೇಗೆ ಮ್ಯಾನೇಜ್ ಮಾಡುತ್ತಿದ್ದಿರಿ ?"

"ನನಗೆ ಗೊತ್ತಿಲ್ಲ. ಅವರನ್ನು ಗೇಟಿನ ಬಳಿ ಬಿಟ್ಟರೆ ಅವರೇ ಒಳಗೆ ಹೋಗುತ್ತಿದ್ದರು."

"ಟಾ ಟಾ ಹೇಳಿ ?" ವ್ಯಂಗ್ಯವಾಗಿ ಕೇಳಿದ.

"ಇಳಿಸುತ್ತಿದ್ದಂತೆಯೇ ಗೇಟಿನ ಬಳಿ ಅವರು ಸ್ವಲ್ಪ ಹೊತ್ತು ಮಾತನಾಡುತ್ತಾರೆ, ತಕ್ಷಣ ಒಳಗೆ ಹೋಗುವುದಿಲ್ಲ ಸಾಮಾನ್ಯವಾಗಿ. ಒಂದರ್ಧ ಗಂಟೆಯಾದರೂ ಮಾತನಾಡದೆ...." ಒಂದು ಕ್ಷಣ ತಡೆದು ಹೇಳಿದ "ನಾನು ವಾಚ್‌ಮನ್‌ಗಳನ್ನು ವಿಚಾರಿಸಿದೆ. ಮೊದಲು ಹತ್ತೂವರೆ ಇತ್ತಂತೆ. ಹೊಸ ವಾರ್ಡನ್ ಬಂದು ಅದನ್ನು ಹತ್ತು ಗಂಟೆಗೆ ಇಳಿಸಿದಾಗ–ಯು ಬಿಲೀವ್ ಇಟ್ ಆರ್ ನಾಟ್–ಹುಡುಗಿಯರು ಸ್ಟ್ರೈಕ್ ಮಾಡುವವರೆಗೂ ಹೋದರಂತೆ. (ಈ ಘಟನೆ ಹೈದರಾಬಾದಿನ ಹಾಸ್ಟೆಲೊಂದರಲ್ಲಿ 1986ರ ಫೆಬ್ರವರಿಯಲ್ಲಿ ನಡೆದಿತ್ತು) ಆಶ್ಚರ್ಯವಾಗಿಲ್ಲವಾ ?"

"ಹೌದು. ಆ ವಿಷಯವನ್ನು ಆಕೆ ನನಗೆ ಹೇಳಿದ್ದರು ?"

"ನನಗೆ ಆಶ್ಚರ್ಯವಾಗುತ್ತಿದೆ. ಹತ್ತು ಗಂಟೆಗೆ, ಹತ್ತೂವರೆಗೆ ಅಂತಹ ವ್ಯತ್ಯಾಸವೇನೂ ಹೆಚ್ಚಿಗೆ ಕಾಣುವುದಿಲ್ಲ. ನನಗೀಗ ಅರ್ಥವಾಗುತ್ತಿದೆ, ಎಂಟು ಗಂಟೆಗೆ ಡಿನ್ನರ್ ಪ್ರಾರಂಭವಾದರೆ. ಪೂರ್ತಿಯಾಗುವ ವೇಳೆಗೆ ಹೇಗೂ ಹತ್ತಾಗುತ್ತದೆ। ಅಲ್ಲಿಂದ ಮಾತನಾಡುತ್ತಾ ಹಾಸ್ಟೆಲ್ ಸೇರಿಕೊಳ್ಳುವಷರೆಗೆ ಹತ್ತೂವರೆ ಆಗುತ್ತದೆ. ಹುಡುಗಿಯರನ್ನು ಎದುರಿಸುವ ಧೈರ್ಯ ತಮಗಿಲ್ಲವೆಂದು ವಾಚ್‌ಮೆನ್‌ಗಳು ಹೇಳುತ್ತಾರ. ಮಿಸ್ಟರ್ ರಾಯಣ್ಣಾ ! ಒಂದು ರಾತ್ರಿಯೆಲಕ್ಲ ಹುಡುಗಿಯೊಬ್ಬಳು ಹಾಸ್ಟೆಲ್‌ಗೆ ಬರದಿದ್ದರೆ ಯಾವ ಕ್ರಮ ತೆಗೆದುಕೊಳ್ಳುತ್ತಾರೆ ನಿಮಗೆ ಗೊತ್ತಾ ?" ಅವನ ಮುಖದಲ್ಲಿದ್ದ

ಶಾಂತ ಭಾವನೆ ಕ್ರಮೇಣ ಕಠಿಣವಾಯಿತು. "ಯಾವ ಕ್ರಮವನ್ನೂ ತೆಗೆದುಕೊಳ್ಳುವುದಿಲ್ಲ. ಹಾಗೆ ನೋಡಿದರೆ ಹುಡುಗಿಯೊಬ್ಬಳು ರಾತ್ರಿಯೆಲ್ಲಾ ಹಾಸ್ಟೆಲ್‌ಗೆ ಬಂದಿಲ್ಲವೆಂದರೂ ಯಾರೂ ತಲೆ ಕೆಡಿಸಿಕೊಳ್ಳುವುದಿಲ್ಲ."

"ನನಗೆ ಗೊತ್ತಿಲ್ಲ...."

"ನಿಮಗೆ ಗೊತ್ತು...."

"ಗೊತ್ತಿಲ್ಲ"

"ಗೊತ್ತು—" ಲಾಠಿಯಿಂದ ಟೇಬಲ್ ಮೇಲೆ ಜೋರಾಗಿ ಬಡಿದು ಹೇಳಿದ ಇನ್ಸ್‌ಪೆಕ್ಟರ್. ಅವನ ಆ ಮಾತು ನಿಜವೇ ಎಂಬಂತೆ ಕುಳಿತಿದ್ದಾನೆ ರಾಯಣ್ಣ "ನಿಮಗೆ ನಾಚಿಕೆಯಿಲ್ಲವಾ ? ಹಿಂದು ಮುಂದು ಗೊತ್ತಿಲ್ಲದ ಹುಡುಗಿಯರು ತಮ್ಮ ತಂದೆ ತಾಯಿಯರನ್ನು, ಊರುಗಳನ್ನು ಬಿಟ್ಟು ಓದಿಕೊಳ್ಳುವುದಕ್ಕಾಗಿ ಪಟ್ಟಣಗಳಿಗೆ ಬಂದರೆ, ಅವರ ಮುಗ್ಧತೆಯ ಪ್ರಯೋಜನ ಪಡೆದು, ಅವರಿಗೆ ಬಣ್ಣ ಬಣ್ಣದ ಪ್ರಪಂಚ ತೋರಿಸಿ, ವಿವಿಧ ರೀತಿಯ ಲೈಟುಗಳ ನಡುವೆ ಡಿನ್ನರ್ ಕೊಡಿಸಿ, ರಾತ್ರಿ ತಡವಾಗಿ ಹಾಸ್ಟೆಲ್ ಬಳಿ ಅವರನ್ನು ಇಳಿಸಿ ಕೊನೆಗೆ ಒಬ್ಬ ವಾರ್ಡನ್ ಆ ರೂಲನ್ನು ಬದಲಾಯಿಸಿ ಬೇಕೆಂದಾಗ, ಅವರ ವಿರುದ್ಧ ಸ್ಟ್ರೈಕ್ ಮಾಡುವಂತೆ ಪ್ರಚೋದಿಸುವುದಕ್ಕೆ ನಿಮಗೆ ನಾಚಿಕೆಯಾಗುತ್ತಿಲ್ಲವಾ ?"

"ನಾನು ಎಷ್ಟೋ ಸಲ ಹೋಗಿರಲಿಲ್ಲ, ಒಂದೆರಡು ಸಲ ಮಾತ್ರ ಹಾಗೆ ಹೋಗಿದ್ದೆ."

"ಹೇಗೆ ?"

"ಹತ್ತೂವರೆ ನಂತರ ಅಲ್ಲಿಗೆ ಬಿಡಲು"

"ಅಂದರೆ—ರಾತ್ರಿ ಹನ್ನೆರಡಾದ ಮೇಲೆ. .?"

"ಅಲ್ಲ.... ಅಲ್ಲ" ಕಂಡಾಲಾಗಿ ಹೇಳಿದ, "ಒಂದು ಹತ್ತು ನಿಮಿಷ ಆತ್ತಿತ್ತು."

"ಅಷ್ಟೇ ಆಗಲೀ ರಾತ್ರಿಯೆಲ್ಲಾ ಆ ಹುಡುಗಿಯರು ನಿಮ್ಮೊಡನೆ ಕಳೆಯುತ್ತಿರಲಿಲ್ಲವೆಂದು ಹೇಳುತ್ತೀರಾ ?"

ರಾಯಣ್ಣ ತಲೆ ಮೇಲೆತ್ತಿ, "ಇಲ್ಲ" ಎಂದ ಅರ್ಥವಾಗದವನಂತೆ.

ಇನ್ಸ್ಪೆಕ್ಟರ್ ಅವನ ಕಣ್ಣಗಳಲ್ಲೇ ನೇರವಾಗಿ ನೋಡಿ, "ನಿಜವಾಗಿಯೂ ಯಾವ ರಾತ್ರಿಯೂ ಇಲ್ಲವಾ ? ಎಂದು ಗಡುಸಾಗಿ ಕೇಳಿದ.

"ಇಲ್ಲ"

ಫೈಲಿನಿಂದ ಒಂದು ಫೋಟೋ ತೆಗೆದು, "ಇವರಿಬ್ಬರೂ ಯಾರೆಂದು ನಿಮಗೆ ಗೊತ್ತು ತಾನೆ ?" ಎಂದು ಕೇಳಿದ.

"ಒಬ್ಬಳು ರಮಣಿ ಫೋಟೋ ನೋಡುತ್ತಾ ಹೇಳಿದ ರಾಯಣ್ಣ..." ಎರಡನೆಯವಳು– ಲಕ್ಷ್ಮಿ."

"ಇದನ್ನು ನೋಡಿ. ಈ ಸಹಿ ನಿಮ್ಮದೇನಾ ?"

ಫೋಟೋಸ್ಟಾಟ್ ಕಾಪಿ ತೋರಿಸುತ್ತಾ ಕೇಳಿದ.

"ನನ್ನದೇ."

ಆಗ ಕಾಗದವನ್ನು ಪೂರ್ತಿ ತೋರಿಸಿದ. ಹೋಟೆಲ್‌ನ ರಿಜಿಸ್ಟರ್ ಕಾಗದ ಅದು. ಇನ್ಸ್ಪೆಕ್ಟರ್ ಕಂಠ ಕಂಚು ಕಂಠವಾಯಿತು.

"ಮೊನ್ನೆ ಡಿಸೆಂಬರ್ ಹನ್ನೆರಡನೆ ತಾರೀಖು ನೀವೂ ಇನ್ನೊಬ್ಬ ಯುವಕ, ಈ ಇಬ್ಬರು ಹುಡುಗಿಯರೊಡನೆ ರಾತ್ರಿಯೆಲ್ಲಾ ತಮ್ಮ ಹೋಟೆಲ್ಲಿ ನಲ್ಲಿದ್ದಿರೆಂದು ಹೋಟೆಲ್ ರಿಸೆಪ್ಷನಿಸ್ಟ್ ಸಾಕ್ಷಿ ಹೇಳಿದ್ದಾನೆ. ಮೇಲಾಗಿ ನೀವು ತುಂಬಾ ಧೈರ್ಯವಾಗಿ ನಿಮ್ಮ ಹೆಸರಿನಲ್ಲೇ ರೂಮ್ ತೆಗೆದುಕೊಂಡಿದ್ದೀರಿ. ಇಲ್ಲಾ–ಅಂತೀರಾ ? ಈ ಸಹಿ ನಿಮ್ಮದಲ್ಲವೆನ್ನುತ್ತೀರಾ ? ಈ ಹುಡುಗಿಯರು ಹಾಸ್ಟೆಲ್‌ಬಿಟ್ಟು ನಿಮ್ಮೊಡನೆ ಬರಲಿಲ್ಲವೆನ್ನುತ್ತೀರಾ ?"

ರಾಯಣ್ಣನ ಮುಖದಲ್ಲಿ ರಕ್ತ ಇಂಡಿಹೋಯಿತು–ತಡಬಡಿಸಿದ. ಇನ್ಸ್ಪೆಕ್ಟರ್ ಆವೇಶದಿಂದ ಅವನ ಭುಜವನ್ನು ಒತ್ತಿಹಿಡಿದು, ಗಲ್ಲ ಮೇಲೆಬರುವಂತೆ ಎತ್ತಿ ಅವನ ಮುಖದ ಕಡೆಗೆ ಕ್ರೌರ್ಯದಿಂದ ನೋಡುತ್ತಾ.

"ಅದಕ್ಕೆ ನಮ್ಮ ಪೋಲೀಸರು ರಾಕ್ಷಸರಾಗುತ್ತಾರೆ. ನನ್ನನ್ನು ಹಾಗೆ ಆಗಲು ಬಿಡಬೇಡಿ. ದನಗೆ ನಿಜ ಬೇಕು, ಐವಾಂಟ್ ಟ್ರೂತ್—" ಎಂದು ಪ್ರತಿಧ್ವನಿ ಬರುವಂತೆ ಕಿರುಚಿದ ಹಿಸ್ಟೀರಿಯಾ ಬಂದವನಂತೆ ತೂರಾಡಿದ.

"ನನ್ನ ತಂಗಿಯರಿಬ್ಬರು ಹಾಸ್ಟೆಲ್‌ನಲ್ಲಿ ಓದುತ್ತಿದ್ದಾರೆ. ನಾಳೆ ನನ್ನ ಮಗಳೂ ಹಾಸ್ಟೆಲ್‌ನಲ್ಲೇ ಇರಬೇಕಾಗಬಹುದು. ನಿಮ್ಮನ್ನು ನಾನು ಬಿಡುವುದಿಲ್ಲ. ನರಗಳನ್ನು ಕತ್ತರಿಸಿ, ರಕ್ತವನ್ನು ತೋಡಿಯಾದರೂ ನಿನ್ನಿಂದ ನಿಜ ಹೊರಡಿಸುತ್ತೇನೆ.... ಹೇಳು ಈ ಹೋಟೇಲ್ ರೂಮನ್ನು ಬುಕ್ ಮಾಡಿದ್ದು ನೀನೇನಾ ?"

"....ನಾನೇ"

ಕಿರಣ್ಮಯಿಗೆ ಏನು ಮಾಡಬೇಕೆಂದೇ ತೋಚಲಿಲ್ಲ. ಪೋಲೀಸ್ ಸ್ಟೇಷನ್‌ಗೆ ಸ್ವಲ್ಪ ದೂರದಲ್ಲಿ ನಿಂತಿದ್ದಾಳೆ. ಪೋಲೀಸರು ತನ್ನ ಹಿಂದೆ ಆಡಿದ ಮಾತು ಅವಳ ಕಿವಿಯಲ್ಲಿ ಇನ್ನೂ ಪ್ರತಿಧ್ವನಿಸುತ್ತಿದೆ.

ಅಲ್ಲಿ ಇನ್ಸ್‌ಪೆಕ್ಟರ್ ಸ್ವಲ್ಪ ಒಳ್ಳೆಯವನಂತೆ ಕಂಡ ಕನಿಷ್ಟ ಅವನಾದರೂ ಹೊರಗೆ ವರಾಂಡದ ಕಡೆ ಬರುತ್ತಾನೇನೊ ಎಂದು ಕಾದಳು. ಅಷ್ಟರಲ್ಲಿ ಟೆಲಿಗ್ರಾಂ ತಂದುಕೊಟ್ಟ ರಾಯಣ್ಣನ ಸ್ನೇಹಿತ ದೂರದಲ್ಲಿ ಬರುತ್ತಿರುವುದು ಕಂಡಿತು.

"ಹೋಟೆಲ್‌ನಲ್ಲಿ ರೂಮ್ ಮಾಡಲು ಕಾರಣ ?" ಇನ್ಸ್‌ಪೆಕ್ಟರ್ ರಾಯಣ್ಣನ ಕಣ್ಣಲ್ಲಿ ಕಣ್ಣಿಟ್ಟು ಕೇಳಿದ.

ಮೌನವೇ ರಾಯಣ್ಣನ ಉತ್ತರವಾಯಿತು.

"ಲಕ್ಷ್ಮಿಗೆ ನೀವಲ್ಲದೆ ಬೇರೆ ಯಾರಾದರೂ ಬಾಯ್ ಫ್ರೆಂಡ್ಸ್ ಇದ್ದಾರಾ ?"

"ಇಲ್ಲ"

"ಹೇಗೆ ಹೇಳುತ್ತೀ ?"

"ಒಂದು ವೇಳೆ ಹಾಗಿದ್ದರೆ ನನಗೆ ತಿಳಿದುಬಿಟ್ಟಿರುತ್ತಿತ್ತು. ನಾನೊಬ್ಬನೇ" ತುಟಿ ಕಚ್ಚಿಕೊಂಡ.

"ಹ್ಞೂ.... ಮುಂದಕ್ಕೆ ಹೇಳು ..." ಅಬ್ಬರಿಸಿದ ಇನ್ಸ್‌ಪೆಕ್ಟರ್.

"ನಾನೊಬ್ಬನೇ ಅವಳೊಡನೆ ಓಡಾಡುತ್ತಿದ್ದುದು. ಆದರೆ ನೀವು ತಿಳಿದಂತೆ ನಮ್ಮಿಬ್ಬರ ನಡುವೆ ಯಾವ ಅನೈತಿಕ ಸಂಬಂಧವೂ ಇರಲಿಲ್ಲ."

ಇನ್ಸ್‌ಪೆಕ್ಟರ್ ನಗತೊಡಗಿದ,

"ಹೋಟೆಲಿನಲ್ಲಿ ರೂಮ್ ಮಾಡಿ ಏಕಾಂತದಲ್ಲಿ ಕಳೆದಿದ್ದೀರಿ. ಈಗ ನೋಡಿದರೆ ನೈತಿಕತೆಯ ಬಗ್ಗೆ ಭಾಷಣ."

"ನೀವು ಈ ವಿಷಯವನ್ನು ನಂಬಲೇಬೇಕು ಇನ್ಸ್‌ಪೆಕ್ಟರ್. ಲಕ್ಷ್ಮಿ ತುಂಬಾ ಒಳ್ಳೆಯ ಹುಡುಗಿ. ನನಗೆ ತಿಳಿದ ಮಟ್ಟಿಗೆ ಅವಳು ಬೇರೆ ಯಾರೊಡನೆಯೂ ಸೇರುತ್ತಿರಲಿಲ್ಲ—ನನ್ನನ್ನು ಬಿಟ್ಟು. ಅವಳ ನಡತೆಯ ಬಗ್ಗೆ ಹಾಸ್ಟೆಲ್‌ನಲ್ಲಿ ಕೂಡಾ ಒಳ್ಳೆಯ ಅಭಿಪ್ರಾಯವಿತ್ತು."

"ನೀನೇನೂ ಕ್ಯಾರೆಕ್ಟರ್ ಸರ್ಟಿಫಿಕೇಟ್ ಕೊಡಬೇಕಾಗಿಲ್ಲ ಮಿ ರಾಯಣ್ಣ ಮೆಡಿಕಲ್ ರಿಪೋರ್ಟ್ — ಪೋಸ್ಟ್‌ಮಾರ್ಟಮ್ ರಿಪೋರ್ಟ್ — ಎಲ್ಲಾ ಹೇಳ್ತಿದೆ."

ಕಣ್ಣನ್ನು ಕಿರಿದುಗೊಳಿಸಿ ತನ್ನ ನೋಟದಲ್ಲೇ ಪ್ರಶ್ನಿಸಿದ ರಾಯಣ್ಣ ಏನೆಂದು. ಆ ನೋಟದಲ್ಲಿ ಕುತೂಹಲವಿತ್ತು. ಆತುರವಿತ್ತು.

"ನಿನ್ನ ಹೀರೋಯಿನ್ ಲಕ್ಷ್ಮಿ ಸಾಯುವ ವೇಳೆಯವರೆಗೂ ಕನ್ಯೆಯಾಗಿ ಉಳಿದಿರಲಿಲ್ಲ ರಾಯಣ್ಣ !"

ತಾನು ಕುಳಿತಿದ್ದ ಕೋಣೆಯ ಛಾವಣಿಯೇ ತಲೆಯ ಮೇಲೆ ಕುಸಿದು ಬಿದ್ದಂತಾಯಿತು ರಾಯಣ್ಣನಿಗೆ.

ಕಿರಣ್ಮಯಿ ಅತ್ತಿಂದಿತ್ತ ಚಡಪಡಿಸುತ್ತಿದ್ದುದನ್ನು ಕಂಡೇ ರಾಯಣ್ಣನ ಸ್ನೇಹಿತ ಊಹಿಸಿದ್ದ—ರಾಯಣ್ಣನನ್ನು ನೋಡಲು ಒಳಗೆ ಬಿಡುತ್ತಿಲ್ಲ ವೆಂಬುದನ್ನು.

"ಈಗಿರೋದು ಒಂದೇ ದಾರಿ ನಮಗೆ. ಲಾಯರ್‌ನ ಸಹಾಯ ತಗೊಳ್ಳೋದು." ಅವನು ಹೇಳಿದ ನೇರವಾಗಿ.

"ನನಗೆ ಯಾವ ಲಾಯರ್‌ನ ಪರಿಚಯವೂ ಇಲ್ಲ." ಅವಳ ಮುಖ ಕಂಡು ಅವನ ಕರಳು ಕಿವಿಚಿದಂತಾಯಿತು.

"ನಿಮ್ಮ ಮನೆಯವರ ಸಹಾಯ ತೆಗೆದುಕೊಳ್ಳಿ" ಸಲಹೆ ನೀಡಿದ.

ಕಿರಣ್ಮಯಿಗೆ ತನ್ನ ಗಂಡನ ಮನೆಯಲ್ಲಿ ಇದುವರೆವಿಗೂ ನಡೆದದ್ದನ್ನೆಲ್ಲಾ ಅವನೊಡನೆ ಹೇಳಬೇಕೆನ್ನಿಸಿತು. ಅದನ್ನು ಕೇಳಿದ ಅವನು ಒಂದು ನಿರ್ಧಾರಕ್ಕೆ ಬಂದವನಂತೆ, "ಹಾಗಾದರೆ ನನ್ನೊಡನೆ ಬನ್ನಿ ನನಗೆ ಒಬ್ಬ ಲಾಯರ್ ಗೊತ್ತು. ಅವರೇನಾದರೂ ಸಹಾಯ ಮಾಡುತ್ತಾರೇನೋ ನೋಡೋಣ—"

ಆಗಲೆಂಬಂತೆ ತಲೆ ಆಡಿಸಿದ ಕಿರಣ್ಮಯಿ ಅವನನ್ನು ಹಿಂಬಾಲಿಸಿದಳು. ಮೊದಲು ಅವನು ಲಾಯರ್ ಚಿರಂಜೀವಿಗೆ ಫೋನ್ ಮಾಡಿದ.

ಇಬ್ಬರೂ ಒಳಗೆ ಹೋದರು. ಬಲಗಡೆಯ ಕೋಣೆ ಲಾಯರ್ ಆಫೀಸಿನಂತಿತ್ತು. ವಿಜಿಟರ್ಸ್‌ಗಾಗಿ ಒಂದು ಕೋಣೆ ಅದರಲ್ಲಿ ಒಂದು ಟೀಪಾಯಿ ಮೇಲೆ ವಾರಪತ್ರಿಕೆಗಳು. ದಿನ ಪತ್ರಿಕೆಗಳು ಇದ್ದವು. ತಲೆ ಎತ್ತಿ ನೋಡಿದರೆ 'ಚಿರಂಜೀವಿ' ಎಂಬ ಬೋರ್ಡ್ ಕಾಣುತ್ತಿತ್ತು.

ವಾರಪತ್ರಿಕೆಗಳ ಮೇಲೆ ಇದ್ದ ಧೂಳನ್ನು ನೋಡಿದರೆ ತುಂಬಾ ದಿನಗಳಿಂದ ಯಾರೂ ವಿಜಿಟರ್ಸ್ ಬಂದಿರಲಿಲ್ಲವೇನೋ ಎನ್ನಿಸುತ್ತಿತ್ತು. ಕಿರಣ್ಮಯಿ ಅವನ ಕಡೆಗೆ ನೋಡಿದಳು. ಆ ನೋಟದಲ್ಲಿ. "ಇಂತಹ ಲಾಯರ್ ಬಳಿಗೆ ನನ್ನನ್ನು ಕರೆತಂದಿದ್ದೀಯಲ್ಲಾ ?" ಎಂಬ ಪ್ರಶ್ನೆಯಿತ್ತು.

ಅವನು ತಡಬಡಿಸುತ್ತಾ, "ಇವರ ಬಳಿಗೆ ಸಾಮಾನ್ಯವಾಗಿ ಎಲ್ಲರೂ ಬರುವುದಿಲ್ಲ, ಕೇವಲ ಮರ್ಡರ್ ಕೇಸುಗಳು ಮಾತ್ರ .." ಎಂದು ಸಮರ್ಥಿಸಿಕೊಂಡ.

ಇಬ್ಬರೂ ಒಳಗೆ ಪ್ರವೇಶಿದರು.

ಲಾಯರ್ ಚಿರಂಜೀವಿ ಕುರ್ಚಿಯಲ್ಲಿ ಕುಳಿತ್ತಿದ್ದ. ವಯಸ್ಸು ಮೂವತ್ತು ನಲವತ್ತರ ನಡುವೆಯಿತ್ತು. ಕಿವಿಗಳ ಬಳಿ ಕೂದಲು ಬೆಳ್ಳಗಾಗಿತ್ತು.

ಹೊರಗಿನ ವಾತಾವರಣವನ್ನು ಕಂಡ ಕಿರಣ್ಮಯಿ 'ಇದೇನು ಇಂತಹ ಲಾಯರ್ ಬಳಿಗೆ ಕರೆದು ತಂದಿದ್ದಾನಲ್ಲಾ' ಎಂದುಕೊಂಡಳಾಗಲೀ, ಈ

ವ್ಯಕ್ತಿಯನ್ನು ಕಂಡಮೇಲೆ ಏಕೋ ಏನೋ ಅವಳಲ್ಲಿ ಒಂದು ರೀತಿಯ ಧೈರ್ಯ ಬಂದಿತು.

"ಕುಳಿತುಕೊಳ್ಳಿ. ನೀವೇನಾ ಮಿಸೆಸ್ ರಾಯಣ್ಣ ?"

ಅವಳು ತಲೆ ಆಡಿಸಿದಳು.

"ಇವತ್ತಿನ ಪೇಪರ್‌ನಲ್ಲಿ ಓದಿದೆ. ಕ್ರಿಕೆಟ್ ಪ್ಲೇಯರ್ ತಾನೆ, ಬ್ಯಾಡ್‌ಲಕ್ ಅಂದುಕೊಂಡೆ. ಅಷ್ಟರಲ್ಲಿ ಇವರು ಫೋನ್ ಮಾಡಿದ್ದರು. ಆದರೆ ಮೊದಲೆ ಹೇಳುತ್ತಿದ್ದೇನೆ. ನಿಮ್ಮ ಗಂಡ ನಿಜವಾಗಿಯೂ ಕೊಲೆ ಮಾಡಿದ್ದರೆ, ಆತನನ್ನು ಬರೀ ಗುಲ್ಲು ಶಿಕ್ಷೆಯಿಂದ ತಪ್ಪಿಸಲು ಪ್ರಯತ್ನಿಸುತ್ತೀನಿ. ಮಾಡಿರದಿದ್ದರೆ ವಾದ ಮಾಡಿ ಗೆಲ್ಲಿಸುತ್ತೀನಿ."

ಈಗರ್ಥವಾಯಿತು ಕಿರಣ್ಮಯಿಗೆ, ಈ ಲಾಯರ್ ಬಳಿಗೇಕೆ ಕ್ಲೈಯಿಂಟ್‌ಗಳು ಬರುವುದಿಲ್ಲವೆಂದು....

ಕಿರಣ್ಮಯಿಯನ್ನು ಅಲ್ಲಿಗೆ ಕರೆತಂದ ಹಿತೈಷಿ ಅವಳ ಕಡೆಗೆ ಭಯವಾಗಿಯೇ ನೋಡಿದ ಆದರೆ ಕಿರಣ್ಮಯಿ ಅವನ ಅಂದಾಜಿಗೆ ವಿರುದ್ಧವಾಗಿ 'ಸರಿ' ಎಂಬಂತೆ ತಲೆ ಅಡಿಸಿದಳು.

"ಅವರು ಈ ಕೊಲೆ ಮಾಡಿದ್ದರೆ ತಪ್ಪು ಸಾಕ್ಷಿಗಳನ್ನು ಸೃಷ್ಟಿಸಿ ಅವರನ್ನು ಖುಲಸೆ ಮಾಡಿಸಿರೆಂದು ನಾನು ಕೇಳುತ್ತಿಲ್ಲ ಸಾರ್ ! ಯಾವ ಕಾರಣದಿಂದ ಅವರು ಈ ಕೆಲಸ ಮಾಡಿದ್ದಾರೆಂದು ತಿಳಿದುಕೊಂಡು ಅದರಂತೆ ಶಿಕ್ಷೆಯನ್ನು ಕಡಿಟುಗೊಳಿಸಲು ಪ್ರಯತ್ನಿಸಿ. ಆದರೆ ನನಗೇಕೋ ಇವರು ಈ ಕೊಲೆ ಮಾಡಿಲ್ಲವೆಂದೇ ಅನ್ನಿಸುತ್ತಿದೆ. ಅದಕ್ಕೆ ಕಾರಣಗಳನ್ನು ಕೇಳಿದರೆ ನಾನೇನೂ ಹೇಳಲಾರೆ." ಕಿರಣ್ಮಯಿ ಹೇಳಿದಳು.

ಚಿರಂಜೀವಿ ಅವಳ ಕಡೆಗೆ ನೋಡಿ ನಕ್ಕ. ಆ ನಗುವಿನಲ್ಲಿ, "ನಮಗೆ ಹತ್ತಿರದವರು ಯಾವ ತಪ್ಪೂ ಮಾಡುವುದಿಲ್ಲವೆಂದು ನಮಗೆ ಅನ್ನಿಸುತ್ತಿರುತ್ತದೆ." ಎಂಬ ಅರ್ಥ ಇತ್ತು. ಆ ನಗುವನ್ನು ಅರ್ಥ ಮಾಡಿಕೊಂಡಂತೆ —ಕಿರಣ್ಮಯಿ ಮಾತನ್ನು ಮುಂದುವರೆಸಿದಳು.

"ನಮ್ಮ ಮದುವೆಯಾಗಿ ಇನ್ನೂ ಸರ್ಟಿಫೈ ಮಾಡುತ್ತಿಲ್ಲ. ಆದರೆ ಈ ಸುದ್ದಿ ತಿಳಿಯುತ್ತಿದಂತೆ ಅವರ ವರ್ತನೆಯನ್ನು ಗಮನಿಸಿದಾಗ ನನಗೆ

ಅನ್ನಿಸಿತು ನಾನು ಸೈಕಾಲಜ ಸ್ಟೂಡೆಂಟ್. ನೀವು ತರ್ಕಕ್ಕೆ ಇಳಿದರೆ ನನ್ನಿಂದ ಉತ್ತರಿಸಲು ಆಗುವುದಿಲ್ಲವಾಗಲೀ, ನನ್ನ ಅಭಿಪ್ರಾಯ ತಪ್ಪಾದರೆ ಇಷ್ಟು ದಿನ ನಾನು ಓಡಿದ ಓದು, ಅರ್ಥ ಮಾಡಿಕೊಂಡ ಸೈಕಾಲಜಿ ವ್ಯರ್ಥವೆಂದು ಮಾತ್ರ ಹೇಳಲ್ಲ. ಆ ದೃಷ್ಟಿಯಿಂದಲೇ ನಿಮ್ಮಲ್ಲಿ ಒಂದು ಕೋರಿಕೆ ಏನೋ ಲಾಯರ್ ಆದದಕ್ಕೆ ಮಾತ್ರ, ಇರುವ ಆಧಾರಗಳೊಂದಿಗೆ ಅವರ ಶಿಕ್ಷೆ ಕಡಿಮೆಗೊಳಿಸುವಂತೆ ಮಾಡುವುದು ಮಾತ್ರವಲ್ಲದೆ, ಕೇಸನ್ನು ಮತ್ತಷ್ಟು ಆಳವಾಗಿ ಪರಿಶೀಲಿಸಿ...."

ಆಗ ಚಿರಂಜೀವಿ ನೋಡಿದ ಅವಳ ಕಡೆ ಪರಿಶೀಲನಾತ್ಮಕವಾಗಿ- ಅವಳು ತಲೆತಗ್ಗಿಸಿಕೊಂಡು ಕುಳಿತ್ತಿದ್ದಾಳೆ. ಒಬ್ಬ ನವ ವಧುವಿಗೆ ಮದುವೆಯಾದ ಮೂರು ದಿನಗಳೊಳಗಾಗಿ ನಡೆದ ಈ ಘಟನೆ ಬೇರೆ ಯಾರಿಗಾದರೂ ಸಂಭವಿಸಿದ್ದರೆ, ಕುಸಿದು ಬಿದ್ದಿರುತ್ತಿದ್ದರು. ಅವಳ ಮುಖದಲ್ಲಿ ನೋವಿತ್ತು. ಆದರೆ ಆ ನೋವಿನ ಹಿಂದೆ ಅಂತರ್ಲೀನವಾದ ಒಂದು ಹಠಮಾರಿತನ ಕೂಡ ಇತ್ತು. ಇದುವರೆವಿಗೂ ಆತನ ಬಳಿಗೆ ಸಾಕಷ್ಟು ಕ್ಲೈಯಂಟ್ಸ್ ಬಂದಿದ್ದರು, ತುಂಬಾ ಜನ ಮೊದಲ ಸಂಭಾಷಣೆಯಲ್ಲೇ ಹಿಂತಿರುಗಿ ಹೋಗಿದ್ದರು, ಮತ್ತೆ ಕೆಲವರು ಮಧ್ಯದಲ್ಲೇ ಎದ್ದು ಹೋಗಿದ್ದರು. ಆತನ ಮಾತನ್ನು ಅರ್ಥ ಮಾಡಿಕೊಳ್ಳುವ ತಾಳ್ಮೆಯಾಗಲೀ, ನಿಯತ್ತಾಗಲೀ ಯಾರಿಗೂ ಇರಲಿಲ್ಲ. ಇವಳು ಹಾಗಲ್ಲವೆನ್ನಿಸಿತು.

ಅವನು ತಲೆ ಆಡಿಸುತ್ತಾ, "ಕೇಸಿನ ವಿವರಗಳನ್ನು ಹೇಳಿ" ಅಂದ.

ಅವಳು ಪೇಲವವಾಗಿ ನಗುತ್ತಾ, "ವಿವರಗಳು ನಮಗೂ ತಿಳಿದಿಲ್ಲ ಸಾರ್ ಅರ್ಧರಾತ್ರಿ ಹನ್ನೆರಡು ಗಂಟೆಯ ವೇಳೆಯಲ್ಲಿ ಹಠಾತ್ತನೆ ಬಂದ ಪೋಲೀಸರು ಅವರನ್ನು ಕರೆದೊಯ್ದರು, ಯಾರೋ ಒಬ್ಬ ಹಾಸ್ಟೆಲ್ ಹುಡುಗಿಯನ್ನು ಕೊಲೆ ಮಾಡಿದ್ದಾರೆಂದು ಅಪಾದಿಸಿದರು. ಅಷ್ಟೇ ನಮಗೆ ತಿಳಿದಿರುವುದು." ಅಂಡಳು, ಚಿರಂಜೀವಿ, ರಾಯಣ್ಣನ ಸ್ನೇಹಿತರ ಕಡೆಗೆ ತಿರುಗಿ, "ನಿಮಗೇನಾದರೂ ವಿವರಗಳು ಗೊತ್ತಾ ?" ಎಂದು ಕೇಳಿದರು,

"ನಾನೂ, ರಾಯಣ್ಣ ಒಂದೇ ಕಡೆ ಕೆಲಸ ಮಾಡುತ್ತಿದ್ದೇವೆ. ನನಗೆ ಕೂಡಾ ಕ್ರಿಕೆಟ್ ಎಂದರೆ ತುಂಬಾ ಉತ್ಸಾಹ."

"ಈ ಲಕ್ಷ್ಮಿ ಎಂಬ ಹುಡುಗಿಯ ಬಗ್ಗೆ ನಿಮಗೇನಾದರೂ ತಿಳಿದಿದೆಯಾ ?"

"ತುಂಬಾ ಜನ ಆಟೋಗ್ರಾಫ್‌ಗಾಗಿ ಬರುತ್ತಿದ್ದರು. ಅದಕ್ಕಿಂತ ಹೆಚ್ಚಾಗಿ ಏನೂ ಗೊತ್ತಿಲ್ಲ."

ಚಿರಂಜೀವಿ ನಿರಾಳವಾಗಿ ಉಸಿರೆಳೆದುಕೊಂಡು, "ನಾನು ಇವತ್ತೇ ರಾಯಣ್ಣನನ್ನು ಭೇಟಿ ಮಾಡುತ್ತೀನಿ" ಅಂದರು.

ಅವಳು ತನ್ನ ಬಳಿಯಿದ್ದ ಟೆಲಿಗ್ರಾಮನ್ನು ಆತನಿಗೆ ಕೊಡುತ್ತಾ, "ಅವರಿಗೆ ಬಂದಿರುವ ಟೆಲಿಗ್ರಾಂ ಇದು. ಈ ಕೂಡಲೇ ಹೋಗದಿದ್ದರೆ ಟೀಮಿನಲ್ಲಿ ಅವರ ಸ್ಥಾನ ಹೋಗುತ್ತದೆ" ಅಂದಳು. ಕ್ರಿಕೆಟ್ ಬೋರ್ಡ್‌ನಿಂದ ಬಂದಿದ್ದ ಟೆಲಿಗ್ರಾಂ ಅದು.

ಚಿರಂಜೀವಿ ಅವಳ ಕಡೆಗೆ ಆಶ್ಚರ್ಯದಿಂದ ನೋಡಿದ. ದೂರದ ಭವಿಷ್ಯತ್ತಿನ ಗಂಡನ ಕೇಸಿನ ಬಗ್ಗೆ ಯೋಚಿಸದೆ, ಹತ್ತಿರದ ಸಮಸ್ಯೆಯ ಬಗ್ಗೆ ಚಿಂತಿಸುತ್ತಿದ್ದಾಳೆ ! ಅವಳನ್ನು ನೋಡಿದ ಕೂಡಲೇ ಉಂಟಾದ ಅಭಿಪ್ರಾಯಕ್ಕೆ ಅವಳ ವರ್ತನೆ ಸೇರಿಸಿದ ಬಲವನ್ನು ಕಂಡು ಅವನು ಸಂತೋಷಗೊಂಡ.

"ಯಾವಾಗ ಹೋಗಬೇಕು ?"

"ನಾಳೆ ಸಂಜೆಯ ವೇಳೆಗೆ ಎಷ್ಟೇ ಕಷ್ಟವಾದರೂ ಅಲ್ಲಿರಬೇಕು." ರಾಯಣ್ಣನ ಸ್ನೇಹಿತ ಹೇಳಿದ.

"ಈ ದಿನವೇ ಬೆಯಿಲ್‌ಗಾಗಿ ಪ್ರಯತ್ನಿಸೋಣ" ಚಿರಂಜೀವಿ ಹೇಳಿದರು.

"ಎಂತಹ ಪರಿಸ್ಥಿತಿಯಲ್ಲೂ ರಾಯಣ್ಣನಿಗೆ ಬೆಯಿಲ್ ಸಿಗಕೂಡದು." ವೆಂಕಟ್ರಾಜು ಹೇಳುತ್ತಿದ್ದ.

ರಾಘವರೆಡ್ಡಿ ಶಥಪಥ ಹಾಕುತ್ತಿದ್ದ.

"ಒಂದು ವೇಳೆ ಬೆಯಿಲ್ ಸಿಕ್ಕಿದರೂ ಅವನು ಪ್ರೆಸಿಡೆಂಟ್‌ನಲ್ಲಿ ಹೇಗೆ ಆಡುತ್ತಾನೆ ? ಕೊಲೆಯ ಆಪಾದನೆಯ ಮೇರೆಗೆ ಅರೆಸ್ಟ್ ಆದವನು

ದೇಶವನ್ನು ಹೇಗೆ ರೆಪ್ರೆಸೆಂಟ್ ಮಾಡುತ್ತಾನೆ?" ಆವೇಶದಿಂದ ಹೇಳಿದ ವೆಂಕಟ್ರಾಜು.

ಅವನು ಈ ಸುದ್ದಿಯನ್ನು ಬೆಳಗ್ಗೆ ಪೇಪರ್ ಓದುವಾಗ ನೋಡಿದ್ದ. ಲಕ್ಷ್ಮಿ ಮರಣ ಹೊಂದಿದ್ದಳು ಎಂಬ ವಿಷಯ ತಿಳಿಯುತ್ತಿದ್ದಂತೆಯೇ ಮೊದಲು ಅವನಿಗೆ ಷಾಕ್ ಆಯಿತು. ಅನಂತರ ರಾಯಣ್ಣ ಅರೆಸ್ಟ್ ಆದನೆಂಬ ಸುದ್ದಿ ತಿಳಿಯಿತು. ಸಂಭ್ರಮಾಶ್ಚರ್ಯದಿಂದ ತೇಲಾಡಿಬಿಟ್ಟ. ತುಟಿಗಳ ಮೇಲೆ ಕಿರುನಗೆ ಮೂಡಿತು. ಆ ಸುದ್ದಿಯನ್ನೇ ಹತ್ತು ಸಲ ಓದಿದ.

ಒಂದೇ ರಂದಲ್ಲಿ. ತನ್ನ ಪ್ರತಿಸ್ಪರ್ಧಿ ಎಂದುಕೊಂಡವನು ಅಪಾಯದಲ್ಲಿ ಸಿಕ್ಕಿಕೊಂಡು ಪ್ರೊಫೆಷನಲ್ಲಾಗಿ ತನಗೆ ಸ್ಪರ್ಧೆ ಕಡಿಮೆಯಾಗುತ್ತದೆಂದರೆ. ಅದಕ್ಕೆ ಮನಸ್ಸಿನಲ್ಲಿ ಒಂದು ಚೂರಾದರೂ ಸಂತೋಷಪಡದೆ ಮನಸ್ಫೂರ್ತಿಯಾಗಿ ನೋವುಪಡುವಂತಾದರೆ, ಅಂತವನಿಗೆ ಶ್ರೇಷ್ಠ ಮಟ್ಟದ ಸ್ಪೋರ್ಟ್ಸ್‌ಮನ್‌ಷಿಪ್ ಬೇಕು. ಕೂಡಲೇ ರಾಘವರೆಡ್ಡಿಗೆ ಫೋನ್ ಮಾಡಿ ಕರೆಸಿದ. ಆತ ಕೂಡಾ ಆ ಸುದ್ದಿಯನ್ನು ಆಗಲೇ ನೋಡಿದ್ದ.

"ಯಾರೀ ಲಕ್ಷ್ಮಿ?" ರಾಘವರೆಡ್ಡಿ ಕೇಳಿದ. "ನಿನಗೆ ಗೊತ್ತಾ?"

"ಒಂದು ಹುಚ್ಚು ಹುಡುಗಿ. ಆಟೋಗ್ರಾಫ್ ಎಂದು ನಮ್ಮ ಹಿಂದೆ ಬೀಳುತ್ತಿದ್ದಳು. ನಮ್ಮ ಗುರು ಸ್ವಲ್ಪ ಕಾಳು ಹಾಕಕ್ಕೆ ನೋಡಿದ ಅನ್ನಿಸುತ್ತೆ. ಇವನ ಮದುವೆ ಫಿಕ್ಸ್ ಆಯಿತೆಂದು ತಿಳಿಯುತಿದ್ದಂತೆಯೇ ಬಹುಶಃ ಜಗಳ ಆಡಿರುತ್ತಾಳೆ. ನಮ್ಮ ಹೀರೋ ನಿರಾಕರಿಸಿದ್ದಾನೆ—" ಹೇಳುತ್ತಿದ್ದ ವೆಂಕಟ್ರಾಜು ಒಂದು ವಾಸ್ತವಕ್ಕೆ ತನ್ನ ಊಹೆಯನ್ನು ಸೇರಿಸುತ್ತಾ, ಮುಂದೆ ನಡೆಯಲಿರುವ ಒಂದು ಕಥೆಗೆ ಪಾಯ ಹಾಕುವಂತೆ.

"ಒಟ್ಟಿನಲ್ಲಿ ನಿನಗಿದು ಲಾಭವೇ ಆಯಿತು."

"ಹೌದು ಬೆಳಗ್ಗೆ ಪೇಪರ್ ನೋಡುವವರೆಗೂ ತುಂಬಾ ಟೆನ್ಷನ್ ಇತ್ತು—ಇಬ್ಬರಲ್ಲಿ ಯಾರು ಸೆಲೆಕ್ಟ್ ಆಗುತ್ತೇವೋ ಎಂದು. ಸರಿಯಾದ ಟೈಂಗೆ ಅವನಿಗೆ ಗ್ರಾಚಾರ ವಕ್ರಿಸಿದೆ."

"ಸರಿಬಿಡು—ನೀನಿನ್ನು ಎಗ್ಸೈಟ್ ಆಗಬೇಡ. ಯಾರಾದರೂ ಪೇಪರ್

ನವರು ನೋಡಿದರೆಂದರೆ, "ರಾಯಣ್ಣನ ಅರೆಸ್ಟಿನಿಂದ ವೆಂಕಟ್ರಾಜು ಸಂತೋಷ" ಎಂದು ಹೆಡ್ಡಿಂಗ್ ಹಾಕಿ ಬರೆಯುತ್ತಾರಷ್ಟೆ." ನಗುತ್ತಾ ರಾಘವರೆಡ್ಡಿ ಹೇಳಿದ.

"ಆ ವಿಷಯ ಆಮೇಲೆ ಚರ್ಚಿಸೋಣ. ಮೊದಲು ಹೋಗಿ ಆ ಸೆಲೆಕ್ಷನ್ ಬೋರ್ಡಿನಲ್ಲಿ ಮಾತಾಡಿ. ಒಬ್ಬ ಕೊಲೆಗಾರನಿಗೆ ಟೀಮ್‌ನಲ್ಲಿ ಹೇಗೆ ಸ್ಥಾನ ಕೊಡುತ್ತಾರೆ ? ನಾಳೆ ಬೆಳಗ್ಗೆ ಈ ಸುದ್ದಿ ನ್ಯಾಷನಲ್ ನ್ಯೂಸ್ ನಲ್ಲಿ ಬರುವುದಕ್ಕೆ ಮುಂಚೆಯೇ ನೀವು ಸರಿಯಾದ ಕ್ರಮ ತೆಗೆದುಕೊಳ್ಳದಿದ್ದರೆ ಆಮೇಲೆ ಎಲ್ಲರೂ ನಿಮ್ಮನ್ನೇ ಆಡಿಕೊಳ್ಳುತ್ತಾರೆ—'ಕಣ್ಣು ಮುಚ್ಚಿಕೊಂಡು ಹೇಗೆ ಸೆಲೆಕ್ಟ್ ಮಾಡಿದರು' ಅಂತ."

ರಾಘವರೆಡ್ಡಿ ನಗುತ್ತಲೇ, "ನಾನೇನು ಮಾತನಾಡಬೇಕೆಂದು ನನಗೇ ಹೇಳಿ ಕೊಡುತ್ತಿದ್ದೀಯಲ್ಲಾ. ಇವತ್ತೇ ಬಾಂಬೆಗೆ ಹೋಗುತ್ತೇನೆ" ಎಂದು ಮೇಲೆದ್ದ. ವೆಂಕಟ್ರಾಜು ಒಳಗಿನಿಂದ ಹಣ ತಂದುಕೊಟ್ಟ. ಅದನ್ನು ತೆಗೆದುಕೊಂಡು ರೆಡ್ಡಿ ಹೊರಟುಹೋದ.

ಆ ಕ್ಷಣ ಅವರನ್ನು ಯಾರು ನೋಡಿದರೂ ರೆಡ್ಡಿ ಸೆಲೆಕ್ಷನ್ ಕಮಿಟಿ ಮೆಂಬರೆಂದೂ, ವೆಂಕಟ್ರಾಜು ಆಟಗಾರನೆಂದೂ ಅಂದುಕೊಳ್ಳುವುದಿಲ್ಲ. ಪರಿಸ್ಥಿತಿ ಹೀಗಿದೆಯಾದ್ದರಿಂದಲೇ ನಮ್ಮ ದೇಶದ ವಿಸ್ತೀರ್ಣದಲ್ಲಿ ಹತ್ತನೆ ಒಂದು ಭಾಗವೂ ಇಲ್ಲದ ಕೊರಿಯಾಗೆ ಎಲ್ಲಾ ಪದಕಗಳೂ ಬಂದರೆ ನಮಗೆ ನಾಲ್ಕೈದಕ್ಕಿಂತ ಹೆಚ್ಚಿಗೆ ಬರುವುದಿಲ್ಲ. ನಮ್ಮ ದೇಶದ ಕಾಲು ಭಾಗವೂ ಇಲ್ಲದ ಅನೇಕ ದೇಶಗಳು ಅಂತರಾಷ್ಟ್ರೀಯ ಫುಟ್‌ಬಾಲ್‌ನಲ್ಲಿ ಪಾಲ್ಗೊಂಡರೆ ನಮಗೆ ಅದರಲ್ಲಿ ಆಡುವ ಅರ್ಹತೆ ಕೂಡಾ ಸಿಗದೆ, ಕಲ್ಕತ್ತಾ ಮೈದಾನ ದಲ್ಲಷ್ಟೇ ನಮ್ಮ ಪ್ರತಾಪ ತೋರಿಸುತ್ತಿದ್ದೇವೆ. ಆಟಗಳಲ್ಲಿ ರಾಜಕೀಯ ಹೋಗುವವರೆಗೂ ನಮ್ಮ ದೇಶದ ಸ್ಥಿತಿ ಇಷ್ಟೆ !

ರಾಘವರೆಡ್ಡಿ ಹೊರಟ ಮೇಲೆ ವೆಂಕಟ್ರಾಜುಗೆ ಏನು ಮಾಡಬೇಕೆಂದೇ ತೋಚಲಿಲ್ಲ. ಬರಹಗಾರಲ್ಲಾಗಲೀ, ಲೇಖಕಿಯರಲ್ಲಾಗಲೀ, ರಾಜಕೀಯ ವ್ಯಕ್ತಿಗಳಲ್ಲಾಗಲೀ ಒಂದು ಗುಣವಿದೆ. ತಮಗೆ ತಿಳಿದ ವಿಷಯವನ್ನು ಹತ್ತು ಜನಕ್ಕೆ ತಿಳಿಸದಿದ್ದರೆ ಅವರ ಮನಸ್ಸಿಗೆ ನೆಮ್ಮದಿಯೇ ಇರುವುದಿಲ್ಲ.

ಗ್ರಂಥ ಸ್ವಾಮ್ಯ ವಿಭಾಗ,
ರಾಜ್ಯ ಕೇಂದ್ರ ಗ್ರಂಥಾಲಯ,
ಬೆಂಗಳೂರು.

ಈಗ ಅವನ ಪರಿಸ್ಥಿತಿ ಕೂಡಾ ಹಾಗೆಯೇ ಇತ್ತು.

ರಾಜಾರಾವ್‌ಗೆ ಫೋನ್ ಮಾಡಿದ.

"ರಾಯಣ್ಣ ಅರೆಸ್ಟ್ ಆದ ವಿಷಯ ಗೊತ್ತಾ ?" ಎಂದು ಕೇಳಿದ.

"ಹೋ ! ನೆನ್ನೆಯೇ ತಿಳಿಯಿತು."

"ನೆನ್ನೇನಾ ? ಹೇಗೆ ?"

"ಸಂಜೆ ರಮಣಿ ಫೋನ್ ಮಾಡಿದ್ದಳು ಲಕ್ಷ್ಮಿಯ ಸಾವಿನ ಬಗ್ಗೆ ! ಹಾಸ್ಟೆಲಿನಲ್ಲೆಲ್ಲಾ ಬಿರುಗಾಳಿ ಎದ್ದಂತಾಗಿದೆಯಂತೆ ಫ್ಯಾನಿಗೆ. ನೇಣುಹಾಕಿ ಕೊಂಡಿದ್ದಾಳಾದ್ದರಿಂದ ಆತ್ಮಹತ್ಯೆ ಅಂದುಕೊಳ್ಳುತ್ತಿದ್ದಾರಂತೆ ಎಲ್ಲರೂ. ಆದರೆ ಅಷ್ಟರಲ್ಲಿ ಇನ್ಸ್‌ಪೆಕ್ಟರ್ ಬಂದು, ಒಳಗಡೆಯಿಂದ ಬಾಗಿಲಿನ ಚಿಲಕ ಹಾಕಿಕೊಳ್ಳದೆ ಏಕೆ ನೇಣು ಹಾಕಿಕೊಂಡಳು ? ಎಂದು ಕೇಳಿದಾಗ ಹುಡುಗಿ ಯೊಬ್ಬಳು—"ಹೌದು ನಿಜವೇ. ನಾನೇ ನೋಡಿದೆ ಅಂದಳಂತೆ."

"ಏನನ್ನು ನೋಡಿದವಳಂತೆ ಅವಳು ?" ವೆಂಕಟ್ರಾಜು ಕುತೂಹಲ ದಿಂದ ಕೇಳಿದ.

'ನೀವು ಆ ಕೋಣೆಯಿಂದ ಹೊರಬರುತ್ತಿದ್ದುದನ್ನು ಸ್ವತಃ ತನ್ನ ಕಣ್ಣಿಂದ ನೋಡಿರುವುದಾಗಿ ಹುಡುಗಿಯೊಬ್ಬಳು. ಆ ವಿಷಯವನ್ನು ನಾಳೆ ಕೋರ್ಟಿನಲ್ಲಿ ಸಾಕ್ಷ್ಯ ಹೇಳಲಿದ್ದಾಳೆ. ಇದಕ್ಕೆ ನೀವೇನು ಹೇಳುತ್ತೀರಿ ?" ಇನ್ಸ್‌ಪೆಕ್ಟರ್ ಕೇಳಿದ.

"ನಾನು ಹಾಸ್ಟೆಲ್‌ಗೆ ಹೋದ ವಿಷಯ ನಿಜವೇ." ರಾಯಣ್ಣ ಹೇಳಿದ. "ಆದರೆ ಆಗ ಲಕ್ಷ್ಮಿ ಬದುಕಿಯೇ ಇದ್ದಳು."

"ಹಾಗಾದರೆ ಆಗಲೇ ಹೇಳಿದಿರಿ—ಅವಳನ್ನು ಅವತ್ತು ಭೇಟಿಯಾಗಲೇ ಇಲ್ಲವೆಂದು ?"

"ನಾನು ನಿಜವನ್ನೇ ಹೇಳುತ್ತಿದ್ದೀನಿ."

"ಏನು ನೀವು ಹೇಳುವ ನಿಜ ? ಲಕ್ಷ್ಮಿ ಸತ್ತುಹೋದ ದಿನ ಅವಳನ್ನು ನೋಡಿಯೇ ಇರಲಿಲ್ಲ ಎಂದು ಹೇಳಿದಿ ಈ ಮೊದಲು. ಈಗ ಭೇಟಿಯಾಗಿದ್ದೇ

ನೆಂದು ಹೇಳುತ್ತಿದ್ದಿ. ಆಕೆಯೊಡನೆ ರಾತ್ರಿಯ ಸಮಯ ಕಳೆಯಲಿಲ್ಲ ಅಂದಿರಿ ಆಗ, ಈಗ ಹೋಟೆಲ್ಲಿನಲ್ಲಿ ರೂಮು ತೆಗೆದುಕೊಂಡಿದ್ದೆನೆಂದು ಹೇಳುತ್ತಿದ್ದೀರಿ."

"ಲಕ್ಷ್ಮಿ ಸತ್ತು ಹೋದ ದಿನ ಯಾವುದೆಂದು ಸರಿಯಾಗಿ ನನಗೆ ತಿಳಿದಿಲ್ಲ. ಈಗ ನೀವು ಹೇಳುತ್ತಿರುವುದನ್ನು ಕೇಳಿ ಯಾವತ್ತೆಂದು ತಿಳಿಯಿತು."

"ಅಮೋಘ! ಅದ್ಭುತ!" ಇನ್ಸ್‌ಪೆಕ್ಟರ್ ಹೇಳಿದ. "ಇಂತಹ ನಟನೆ ನಾನೆಂದೂ ನೋಡಲಿಲ್ಲ."

ಇವರು ಹೀಗೆ ಮಾತನಾಡಿಕೊಳ್ಳುತ್ತಿರುವ ಸಮಯದಲ್ಲಿ ಎಸ್ಸೈ ಸತ್ಯನಾರಾಯಣ ಹೊರಗೆ ವರಾಂಡದಲ್ಲಿ ಬಂದು ನಿಂತ. ಎಷ್ಟು ಬೇಗ ರಾಯಣ್ಣನ ಬಾಯಲ್ಲಿ ನಿಜ ಹೇಳಿಸುತ್ತೇನೋ ಎಂದು ಆತುರಪಡುತ್ತಿದ್ದ. ಅದೇ ಸಮಯಕ್ಕೆ ಸರಿಯಾಗಿ ಸ್ಕೂಟರೊಂದು ಬಂದು ಪೋಲೀಸ್ ಸ್ಟೇಷನ್ ಮುಂದೆ ನಿಂತಿತು. ಒಬ್ಬ ವ್ಯಕ್ತಿ ಇಳಿದು, ಸ್ಟೇಷನ್ ಮೆಟ್ಟಿಲುಗಳನ್ನು ಹತ್ತಿ ಎಸ್ಸೈ ಮುಂದೆ ಕೈಚಾಚುತ್ತಾ, "ನನ್ನ ಹೆಸರು ಚಿರಂಜೀವಿ ಲಾಯರ್" ಅಂದ.

'ಆದರೇನು?' ಎಂಬಂತೆ ನೋಡಿದ ಇನ್ಸ್‌ಪೆಕ್ಟರ್.'

"ನಾನು ಅರ್ಜೆಂಟಾಗಿ ರಾಯಣ್ಣನನ್ನು ನೋಡಬೇಕು."

ಸತ್ಯನಾರಾಯಣ ಅವನೆಡೆಗೆ ಸಿಟ್ಟಿನಿಂದ ನೋಡಿದ. ಲಾಯರುಗಳೆಂದರೆ ಅವನಿಗೆ ಮೈಯೆಲ್ಲಾ ಉರಿಯುತ್ತದೆ. "ಇವರಿಗೆ ನೈತಿಕ ಮೌಲ್ಯಗಳು ಇರುವುದಿಲ್ಲ. ಸಮಾಜದ ದುಷ್ಟ ಶಕ್ತಿಗಳನ್ನು, ಕೊಲೆಗಡುಕರನ್ನು ರಕ್ಷಿಸುತ್ತಾ ಸುಳ್ಳು ಬದುಕುಗಳನ್ನು ಬದುಕುತ್ತಿರುತ್ತಾರೆ" ಎಂದು ಕೊಂಡ.

ಸತ್ಯನಾರಾಯಣ ಮಾತನಾಡದಿದ್ದುದನ್ನು ಕಂಡು ಚಿರಂಜೀವಿ ಅನುಮಾನದಿಂದ ಒಳಗೆ ಇಣುಕಿ ನೋಡಿದ. ಪೋಲೀಸ್ ಕಸ್ಟಡಿಯಲ್ಲಿ ನಡೆಯುವ ಹಿಂಸೆಗಳು ಚೆನ್ನಾಗಿ ಗೋಚರಿಸಿದವು ಅವನ ಕಣ್ಣಿಗೆ.

"ಸ್ವಲ್ಪ ಕುಳಿತುಕೊಳ್ಳಿ ಸಾಹೇಬರು ಒಳಗಿದ್ದಾರೆ ಕರೀತೀನಿ" ಎಂದ ಅಸಮಾಧಾನದಿಂದಲೇ ಒಳಗೆ ಹೋದ.

ಒಳಗೆ ಇನ್ಸ್‌ಪೆಕ್ಟರ್ ಹೇಳುತ್ತಿದ್ದ—"ನೀನೆಷ್ಟು ಹಠ ಮಾಡಿದರೂ ಪ್ರಯೋಜನವಿಲ್ಲ ರಾಯಣ್ಣ. ಎಲ್ಲಾ ರೀತಿಯಿಂದಲೂ ನೀನೇ ಕೊಲೆಗಾರ ನೆಂದು ನಿರೂಪಿಸಲು ನನ್ನ ಬಳಿ ಸಾಕ್ಷ್ಯಗಳಿವೆ. ಅವೆಲ್ಲಾ ನಿಜವೆಂದೇ ನಿನ್ನ ಬಾಯಲ್ಲಿ ಹೇಳಿಸುತ್ತಿದ್ದೇನೆ ಕೂಡಾ. ಈಗಲೂ ಕಾಲ ಮಿಂಚಿಲ್ಲ. ನಿಜವನ್ನು ಒಪ್ಪಿಕೊ, ನಡೆದದ್ದನ್ನು ಹೇಳು. ಶಿಕ್ಷೆಯಾದರೂ ಕಡಿಮೆ ಯಾಗುತ್ತೆ" ಇನ್ಸ್‌ಪೆಕ್ಟರ್ ಹೇಳುತ್ತಿದ್ದ.

"ನಾನು ಕೊಲೆ ಮಾಡಿಲ್ಲ ಮಾಡಿಲ್ಲ. ನಿಮಗೆ ಸಿಕ್ಕಿರುವ ಆ ಸಾಕ್ಷಿಗಳು ರುಜುವಾತುಗಳೂ ನನಗೆ ಅರ್ಥವಾಗುತ್ತಿಲ್ಲ. ಇನ್ನು ನೀವೇನಾದರೂ ಮಾಡಿಕೊಳ್ಳಿ ನಾನು ಹೇಳುವುದು ಇಷ್ಟೆ." ಎಂದು ಕಿರುಚಿದ ರಾಯಣ್ಣ ಅವನಲ್ಲಿ ತಾಳ್ಮೆ ನಶಿಸಿತ್ತು.

ಇನ್ಸ್‌ಪೆಕ್ಟರ್‌ಗೆ ಬೇಕಾಗಿದ್ದಿದ್ದೂ ಅಷ್ಟೆ — ರಾಯಣ್ಣ ಹಾಗೆ ಡಿಸ್ಪರೇಟ್ ಆಗಿಬಿಡುವುದು. ಆಗ ಸ್ವಲ್ಪ ರೊಚ್ಚಿಗೆಬ್ಬಿಸಿದರೆ ಸಾಕು, ನಿಜ ಹೊರಬರುತ್ತದೆ. 'ಹೌದು ಕೊಲೆ ಮಾಡಿದ್ದೀನಿ. ಈಗೇನು ಮಾಡಬೇಕು?' ಎಂಬ ಸ್ಥಿತಿಗೆ ಬರುತ್ತಾನೆ.

"ನೋಡು ರಾಯಣ್ಣ, ನಿನಗೆ ಮದುವೆಯಾಗಿ ಮೂರು ದಿನಗಳೂ ಆಗಿಲ್ಲ. ಏನೂ ಅರಿಯದ ಮತ್ತೊಂದು ಹೆಣ್ಣಿನ ಮನಸ್ಸಿಗೂ ನೋವನ್ನುಂಟು ಮಾಡುತ್ತಿದ್ದಿ. ಹುಡುಗಿಯೊಬ್ಬಳನ್ನು ನಂಬಿಸಿ ಕತ್ತಿಗೆ ನೇಣು ಹಾಕಿ ಕೊಂದಿದ್ದಿ. ಈಗ ಮದುವೆ ಮಾಡಿಕೊಂಡು ಮತ್ತೊಂದು ಹೆಣ್ಣಿಗೆ ನಂಬಿಕೆ ದ್ರೋಹ ಮಾಡಿ ಆಕೆಯನ್ನು ಮಾನಸಿಕವಾಗಿ ಕೊಲ್ಲುತ್ತಿದ್ದಿ. ನಿನಗೆಂತಹ ಶಿಕ್ಷೆ ವಿಧಿಸಬೇಕೋ ನನಗೆ ಅರ್ಥವಾಗುತ್ತಿಲ್ಲ." ಇನ್ಸ್‌ಪೆಕ್ಟರ್ ಹೇಳುವುದನ್ನು ನಿಲ್ಲಿಸಿದ. ಸತ್ಯನಾರಾಯಣನನ್ನು ನೋಡಿದ ಕೂಡಲೇ ಆತನ ಮುಖದಲ್ಲಿ ತಾನು ಸೋತು ಹೋದೆನೆಂಬ ಭಾವನೆ ಕಂಡಿತು. "ಬಾ, ಸತ್ಯನಾರಾಯಣ ನಾನು ಸೋತು ಹೋದೆ. ಸತ್ಯ ಹೊರೆಡಿಸಲು ನನ್ನ ಸಭ್ಯತೆ ಸಹಾಯ ಮಾಡುತ್ತಿಲ್ಲ. ನೀನೇ ನೋಡು" ಬೇಸರದಿಂದ ಹೇಳಿದ.

"ನೀವೊಂದು ಸಲ ಹೊರಗೆ ಬನ್ನಿ ಸಾರ್" ಸತ್ಯನಾರಾಯಣ ಹೇಳಿದ.

ಹೆಚ್ಚು ಕಡಿಮೆ ಮದುವೆ ಡ್ರೆಸ್ಸಿನಲ್ಲೇ ನಮ್ಮವನು ಹಾಸ್ಟೆಲಿಗೆ ಬಂದ್ದಿದ್‌ನಂತೆ ಲಕ್ಷ್ಮಿಯೊಡನೆ ಅವನು ತುಂಬಾ ಆವೇಶದಿಂದ ಮಾತನಾಡು ವುದನ್ನು ಹುಡುಗಿಯೊಬ್ಬಳು ನೋಡಿದಳಂತೆ, ಅರ್ಧ ಗಂಟೆಯ ನಂತರ ಅವನು ಹಾಸ್ಟೆಲಿನಿಂದ ಹೆದರುತ್ತಲೇ ಹೋಗುವುದನ್ನು ಕೂಡಾ ಆ ಹುಡುಗಿಯೇ ನೋಡಿದಳಂತೆ, ಆಗಲೇ ಅನುಮಾನದಿಂದ ಲಕ್ಷ್ಮಿಯ ಕೋಣೆಗೆ ಹೋಗಿ ನೋಡಿದ್ದರೆ ಅವಳನ್ನು ಶಿಕ್ಷಿಸಬಹುದಾಗಿತ್ತೇನೋ ? ಆದರೆ ಅಷ್ಟು ಗಮನಿಸಲಿಲ್ಲ. ಆಮೇಲೆ ಯಾವಾಗಲೋ ಎರಡು ಮೂರು ಗಂಟೆಗಳ ನಂತರ ಏಕೋ ಹೋಗಿ ನೋಡಿದರೆ, ಅಷ್ಟು ಹೊತ್ತಿಗೆ ಎಲ್ಲಾ ಆಗಿ ಹೋಯಿತಂತೆ. ಎಲ್ಲರೂ ಆತ್ಮಹತ್ಯೆ ಅಂದುಕೊಳ್ಳುವಂತೆ ಅಚ್ಚು ಕಟ್ಟಾಗಿ ಮಾಡಿದ್ದಾನಂತೆ. ಆದರೂ ಸಿಕ್ಕಿಬಿದ್ದ !" "ಪಾಪ ಲಕ್ಷ್ಮಿ ಎಷ್ಟು ಮುಗ್ಧ ಹೆಣ್ಣು ! ಅಂತಹ ಹುಡುಗಿಯನ್ನು ಕೊಲೆ ಮಾಡಲು ಇವನಿಗೆ ಅದ್ಹೇಗೆ ಮನಸ್ಸು ಬಂತೋ ?" ವೆಂಕಟ್ರಾಜು ನೋವನ್ನು ನಟಿಸುತ್ತಾ ಕೇಳಿದ. "ಅವನು ಮನುಷ್ಯನಾಗಿದ್ದರೆ ತಾನೆ ?" ಅವನೊಂದು ಪಶು, ರಾಜಾರಾವ್ ಕೋಪದಿಂದ ಹೇಳಿದ. ವೆಂಕಟ್ರಾಜುಗೆ ಬೇಕಾಗಿದ್ದುದು ಅಷ್ಟೆ.

"ನಂಬಿಸಿ ವಶಮಾಡಿಕೊಂಡು, ಜೋರಾಗಿ ಕೇಳಿದ್ದಕ್ಕೆ ಕೊಲೆಯನ್ನೂ ಮಾಡಿದ್ದಾನೆ. ಅಂತಹ ನೀಚನಿಗೆ ಗಲ್ಲು ಶಿಕ್ಷೆ ಆಗಬೇಕು. ನೆನೆಸಿಕೊಂಡ ರೇನೇ ನನ್ನ ಎದೆ ಉರಿಯುತ್ತೆ, ಅವನನ್ನು ಛೇಲಿನಿಂದ ಹೊರಬರದಂತೆ ನೋಡಬೇಕು" ಆವೇಶದಿಂದ ಹೇಳಿದ.

"ಬೆಯಿಲ್ ಕೂಡಾ ಸಿಗುವುದಿಲ್ಲ ಅವನಿಗೆ. ಪೋಲೀಸರ ಬಳಿ ಎಲ್ಲಾ ಕ್ಲಿಯರ್‌ಕಟ್ ಎವಿಡೆನ್ಸ್ ಇದೆಯಂತೆ." ರಾಜಾರಾವ್ ಹೇಳಿದ,

"ಹಾಗೆಂದು ಸುಮ್ಮನಿರಕೂಡದು. ನಾವು ಮತ್ತೊಂದು ರೀತಿಯಲ್ಲಿ ಒತ್ತಡ ತರಬೇಕು. ಅವನಿಗೆ ಬೆಯಿಲ್ ಸಿಕ್ಕಿದರೆ ಹಾಸ್ಟೆಲ್ ಹುಡುಗಿಯ ರೆಲ್ಲಾ ಮುಷ್ಕರ ಮಾಡುವಂತೆ ಏರ್ಪಾಟು ಮಾಡಬೇಕು. ನೀನು ಮನಸ್ಸು ಮಾಡಿದರೆ ಅದು ಕಷ್ಟವಲ್ಲ. ರಮಣಿಯೊಡನೆ ಮಾತನಾಡು, ಅನವಶ್ಯಕ

ವಾಗಿ ನಾವು ಸಿಕ್ಕಿಹಾಕಿಕೊಳ್ಳದಂತೆ, ನಮ್ಮ ಹೆಸರು ಹೊರಬರದಂತೆ ಮಾತ್ರ ನೋಡು. ಹಣಕ್ಕಾಗಿ ಯೋಚನೆ ಮಾಡಬೇಡ."

"ಒಳ್ಳೆ ಐಡಿಯಾ! ಅಂದಹಾಗೆ ನಮ್ಮ ಅಂಕಲ್ ಡಿ.ಸಿ.ಪಿ. ಅಲ್ಲವಾ, ಅವರಿಗೆ ಫೋನ್‌ಮಾಡಿ ತಿಳಿಸುತ್ತೇನೆ. ಕಾಲೇಜು ಹುಡುಗಿಯರ ಸ್ಟ್ರೈಕ್ ಎಂದರೆ ಎಲ್ಲರಿಗೂ ಹೆದರಿಕೆಯೇ." ಜಾಣತನದಿಂದ ಹೇಳಿದ ರಾಜಾರಾವ್.

"ಸರಿ ಆಮೇಲೆ ಏನಾಗುತ್ತದೆಂದು ನನಗೆ ಕೂಡಾ ಫೋನ್‌ಮಾಡು." ಫೋನ್ ಡಿಸ್‌ಕನೆಕ್ಟ್ ಮಾಡಿದ ಮೇಲೆ ಮತ್ತೆ ಯೋಚಿಸಲಾರಂಭಿಸಿದ ವೆಂಕಟ್ರಾಜು. ಈ ರಾಜಾರಾವ್ ಎಂತಹ ಮೋಸಗಾರನೆಂದು ಅವರ ಅಂಕಲ್‌ಗೂ ಗೊತ್ತು ಹಾಗೆಯೇ ರಮಣಿ ಮಾತಿಗೆ ಹಾಸ್ಟೆಲಿನ ಹುಡುಗಿಯರು ಎಷ್ಟು ಬೆಲೆ ಕೊಡುತ್ತಾರೆಂದು ಕೂಡಾ ಅವನಿಗೆ ಗೊತ್ತು. ವೆಂಕಟ್ರಾಜು ತಡಮಾಡದೆ ಫೋನೆತ್ತಿ ಮತ್ತೊಂದು ನಂಬರಿಗೆ ಡಯಲ್‌ಮಾಡಿದ, ಮಂತ್ರಿಯೊಬ್ಬನ ಬಲಭುಜವಾದ ಗೂಂಡಾ ನಾಯಕನದು ಆ ನಂಬರ್ ಅವನೊಂದಿಗೆ ಒಪ್ಪಂದಕ್ಕೆ ಬಂದ ನಂತರ ವೆಂಕಟ್ರಾಜುವಿನ ಮನಸ್ಸು ಶಾಂತಗೊಂಡಿತು.

ಅದೇ ಸಮಯಕ್ಕೆ ಲಾಯರ್ ಚಿರಂಜೀವಿ ರಾಯಣ್ಣನೊಡನೆ ಮಾತನಾಡುತ್ತಿದ್ದ.

"ನೋಡಿ ರಾಯಣ್ಣ, ನಿಮ್ಮೊಡನೆ ಮಾತನಾಡಲು ಕೇವಲ ಹದಿನೈದು ನಿಮಿಷದ ಸಮಯವನ್ನು ಮಾತ್ರ ಕೊಟ್ಟಿದ್ದಾರೆ ಇನ್ಸ್‌ಪೆಕ್ಟರ್. ನಿಮ್ಮ ಹೆಂಡತಿ ಬಂದು ಈ ಕೇಸಿನ ಬಗ್ಗೆ ಹೇಳಿದಾಗ ನೀವು 'ನಿರಪರಾಧಿ' ಎಂದು ನಂಬಿಯೇ ಈ ಕೇಸನ್ನು ಕೈಗೆತ್ತಿಕೊಳ್ಳುತ್ತಿದ್ದೇನೆ. ನನಗೆ ನಡೆದುದ್ದನ್ನೆಲ್ಲಾ ಹಾಗೆಯೇ ಹೇಳಿ."

"ನಿಜ ನಂಬುವಂತಿರುವುದಿಲ್ಲ ಲಾಯರ್‌ರವರೇ ಬೆಳಗ್ಗಿನಿಂದ ಇನ್ಸ್‌ಪೆಕ್ಟರ್ ನನ್ನನ್ನು ವಿವಿಧ ರೀತಿಯಿಂದ ಪ್ರಶ್ನಿಸುತ್ತಿದ್ದಾರೆ. ಒಂದೇ ಸಮನೆ ಸಾಕ್ಷಿಗಳನ್ನು, ರುಜುವಾತುಗಳನ್ನು ತೋರಿಸುತ್ತಿದ್ದಾರೆ. ಅದನ್ನೆಲ್ಲಾ ಕೇಳುತ್ತಿದ್ದರೆ ನಿಜವೇನೆಂದು ನನಗೇ ಅನುಮಾನ ಬಂದು ಗಲಿಬಿಲಿಗೊಂಡಿದ್ದೇನೆ. ನನಗೆ ತಿಳಿಯದಂತೆ ಹೋಗಿ ಆ ಕೊಲೆಯನ್ನು ಮಾಡಿ

ಬಂದಿದ್ದೀನೇನೋ ಎಂದು ಅನುಮಾನ ಬರುತ್ತಿದೆ. ಇನ್ನು ನಿಮಗೆ ನಾನು ಏನು ಹೇಳಲಿ ? ಏನು ಹೇಳಿದರೂ ಅದನ್ನು ನಿರೂಪಿಸಲಾರೆ."

ಚಿರಂಜೀವಿ ರಾಯಣ್ಣನ ಮುಖದಲ್ಲಿ ತನ್ನ ದೃಷ್ಟಿಯನ್ನು ಕೇಂದ್ರೀಕರಿಸಿ ನೋಡಿದ. ಅವನ ಲಕ್ಷ್ಯವನ್ನು ಅರ್ಥಮಾಡಿಕೊಂಡವನಂತೆ ರಾಯಣ್ಣ ತಲೆ ಎತ್ತಿ ಅವನ ಕಣ್ಣಳಲ್ಲಿ ನೋಡಿದ. ಆ ನೋಟದಲ್ಲಿ ಭಯವಿರಲಿಲ್ಲ, ನೋವಿತ್ತು, ನಟನೆ ಇರಲಿಲ್ಲ, ನಿಯತ್ತು ಇತ್ತು. ರಕ್ಷಿಸು ಎಂಬ ಅರ್ಧ್ರತೆ ಇರಲಿಲ್ಲ, ಅರ್ಥ ಮಾಡಿಕೋ ಎಂಬ ಪ್ರಾರ್ಥನೆಯಿತ್ತು. ಆ ಒಂದು ನೋಟ ಸಾಕು ಅವನಿಗೆ ರಾಯಣ್ಣ ನಿರಪರಾಧಿಯೆಂದು ನಿರೂಪಿಸಲು 'ಪೋಲಿಸರ ಬಳಿ ಬಲವಾದ ಸಾಕ್ಷಿಗಳಿವೆ. ಅವನ್ನೆಲ್ಲಾ ನಂಬಿ ನಾನು ಅನುಮಾನದಿಂದ ಕೇಳುತ್ತಿಲ್ಲ. ನನಗೆ ಎಲ್ಲಾ ವಿವರಗಳೂ ಬೇಕು. ಲಕ್ಷ್ಮಿಯೊಡನೆ ನಿಮ್ಮ ಪರಿಚಯ ಆರಂಭವಾದಾಗಿನಿಂದ ಅವಳು ಸತ್ತು ಹೋದಳೆಂದು ನಿಮಗೆ ತಿಳಿದವರೆಗೂ ಎಲ್ಲಾ ಹೇಳಿ."

ತಾನು ನಿರಪರಾಧಿಯೆಂದು ಲಾಯರ್ ನಂಬಿದ್ದಾರೆಂದು ತಿಳಿದ ಕೂಡಲೇ ರಾಯಣ್ಣನ ಮುಖದಲ್ಲಿ ಕಾಂತಿ ಮರಳಿ ಬಂತು.

"ಹೇಳಲೇನೂ ಇಲ್ಲ ಲಾಯರ್‌ರವರೇ, ಲಕ್ಷ್ಮಿ ನನಗೆ ತಿಳಿದ ಹುಡುಗಿ. ಅವಳೆಂದರೆ ನನಗೆ ಅಭಿಮಾನವಿದೆ. ಅದಕ್ಕೂ ಮಿಗಿಲಾದ ಭಾವನೆ ನನಗೆಂದೂ ಬರಲಿಲ್ಲ. ತನ್ನವರನ್ನು ಬಿಟ್ಟು ಆವಳೂ ನನ್ನಂತೆ ಈ ಸಿಟಿಯಲ್ಲಿ ಒಂಟಿಯಾಗಿದ್ದುದರಿಂದ ಆಗಾಗ ಒಬ್ಬರನ್ನೊಬ್ಬರು ಭೇಟಿಯಾಗುತ್ತಿದ್ದೆವು. ನನ್ನ ಮದುವೆಗೆ ಅವಳನ್ನು ಆಹ್ವಾನಿಸಿದೆ. ಬಂದೇ ಬರುತ್ತೇನೆಂದು ಹೇಳಿದ್ದಳು. ನಮ್ಮ ನಡುವೆ ಮತ್ತೊಂದು ರೀತಿಯ ಸಂಬಂಧವಿದ್ದಿದ್ದರೆ ಅವತ್ತೇ ಅವಳು ಗಲಾಟೆ ಮಾಡುತ್ತಿದ್ದಳು, ಅಲ್ಲವಾ ? ಮಾತು ಕೊಟ್ಟಿಳಾದರೂ ಮದುವೆಗೆ ಬರಲಿಲ್ಲ. ಏಕೋ ಗೊತ್ತಿಲ್ಲ ನಾನೂ ಅಷ್ಟು ಸೀರಿಯಸ್ಸಾಗಿ ತೆಗೆದುಕೊಳ್ಳಲಿಲ್ಲ. ಮಾರನೆ ದಿನ ಒಂದು ಸಲ ಬಂದು ಭೇಟಿಯಾಗೆಂದು ನೋಟ್ ಬರೆದು ಕಳುಹಿಸಿದ್ದಳು. ಹೋದೆ, ತುಂಬಾ ಅಪ್‌ಸೆಟ್ ಆಗಿದ್ದಳು. ಕಾರಣವೇನೆಂದು ಎಷ್ಟು ಕೇಳಿದರೂ ಉತ್ತರಿಸಲಿಲ್ಲ. ಅವಳ ಮನೆಯವರ ನೆನಪು ಬಂದಾಗಲೆಲ್ಲಾ ಹಾಗೆಯೇ

ಅಳುತ್ತಿರುತ್ತಾಳೆಂದು ತಿಳಿದಿದ್ದರಿಂದ ಅಷ್ಟು ಸೀರಿಯಸ್ಸಾಗಿ ತೆಗೆದುಕೊಳ್ಳದೆ ಸ್ವಲ್ಪ ಧೈರ್ಯ ಹೇಳಿ ಬಂದುಬಿಟ್ಟೆ. ಮಾರನೆ ದಿನ ಅರ್ಧ ರಾತ್ರಿಯ ಸಮಯದಲ್ಲಿ ಪೋಲೀಸರು ಬಂದು ಹೇಳುವವರೆಗೂ ಅವಳು ಸತ್ತು ಹೋಗಿರುವ ವಿಷಯ ನನಗೆ ತಿಳಿಯಲೇ ಇಲ್ಲ."

ಚಿರಂಜೀವಿ ಅವನ ಕಣ್ಣುಗಳಲ್ಲಿ ಸೂಕ್ಷ್ಮವಾಗಿ ನೋಡಿದ. "ಮಿಸ್ಟರ್ ರಾಯಣ್ಣಾ ಲಕ್ಷ್ಮಿಯೊಡನೆ ನಿಮಗಿದ್ದುದು ಸ್ವಲ್ಪ ಕಾಲದ ಸ್ನೇಹ ಮಾತ್ರ ಎಂದು ಹೇಳುತ್ತಿದ್ದೀರಿ. ಆದರೆ ನೀವು ಅವಳನ್ನು ದಿನವೂ ಹೋಟೆಲ್ಲಿಗೆ ಕರೆದೊಯ್ದು, ಅರ್ಧರಾತ್ರಿಯ ಸಮಯದಲ್ಲಿ ಹಾಸ್ಟೆಲ್ಲಿಗೆ ಕರೆತರುತ್ತಿದ್ದುದನ್ನು ಪೋಲೀಸರು ದೃಢಪಡಿಸಿದ್ದಾರೆ. ಅಷ್ಟು ನಿಯತ್ತಾಗಿರುವವರು ಇಂತಹ ಕೆಲಸಗಳನ್ನು ಹೇಗೆ ಮಾಡುತ್ತಿದ್ದಿರಿ ?" ಕೇಳಿದ.

ರಾಯಣ್ಣ ಚಿರಂಜೀವಿಯ ಕಣ್ಣುಗಳಲ್ಲಿ ನೇರವಾಗಿ ನೋಡುತ್ತಾ ಹೇಳಿದ. "ಇಷ್ಟಕ್ಕೆ ಮುಂಚೆ ಇನ್ಸ್‌ಪೆಕ್ಟರ್ ಕೂಡಾ ಇದೇ ಪ್ರಶ್ನೆಯನ್ನು ಕೇಳಿದರು ಲಾಯರ್‌ರವರೇ. ಆಗಿನಿಂದಲೂ ನನ್ನಲ್ಲಿ ನಾನೇ ಈ ಪ್ರಶ್ನೆಯನ್ನು ಹಾಕಿಕೊಳ್ಳುತ್ತಿದ್ದೇನೆ. ಹುಡುಗಿಯರೊಡನೆ ಸೇರಿ ಹೋಟೆಲ್ಲುಗಳಿಗೆ ಹೋಗಿ, ಅರ್ಧ ರಾತ್ರಿಯವರೆಗೂ ಮಾತನಾಡಿ, ಅವರನ್ನು ಹಿಂತಿರುಗಿ ಕರೆತಂದು ಎಲ್ಲರೂ ನೋಡುತ್ತಿದ್ದಂತೆ ಹಾಸ್ಟೆಲಿನಲ್ಲಿ ಬಿಟ್ಟು ಹೋಗುವ ಧೈರ್ಯ ನನ್ನಲ್ಲಿ ಎಂದಿನಿಂದ ಬಂತೋ ಎಂದು ! ನಿಜ ಹೇಳಬೇಕೆಂದರೆ ಇಂಟರ್ ಕಾಲೇಜ್ ಕ್ರಿಕೆಟ್ ಪಂದ್ಯಗಳಲ್ಲಿ ಹೆಸರು ಮಾಡಿದ್ದಾಗಲೂ ನನಗೆ ಹುಡುಗಿಯರ ಹುಚ್ಚಿರಲಿಲ್ಲ. ಪರಿಚಯವಿರಲಿಲ್ಲ. ನನ್ನನ್ನೂ, ನನ್ನ ಪ್ರತಿಭೆಯನ್ನೂ ಗುರುತಿಸಿ ಹಿಂದೆ ಬಿದ್ದ ಹುಡುಗಿಯರಿರಲಿಲ್ಲ. ರಣಜಿ ಟ್ರೋಫಿಯಲ್ಲಿ ಆಡುವವರೆಗೂ ನನಗೆ ಹೆಸರೇ ಇರಲಿಲ್ಲ. ನಾನು ಕೂಡಾ ನನ್ನ ಆಟವನ್ನು ಗವಾಸ್ಕರ್ ಕಪಿಲ್‌ದೇವ್‌ಗಳಿಗೆ ಹೋಲಿಸಿಕೊಂಡು, ನನ್ನ ಮಟ್ಟ ಕಡಿಮೆ ಯೆಂದು ಒದ್ದಾಡುತ್ತಿದ್ದೆ. ನನ್ನ ಆಟವನ್ನು ಅಭಿವೃದ್ಧಿಪಡಿಸಿಕೊಳ್ಳ ಬೇಕೆಂದು ಅದಕ್ಕೆ ತಪತಪಿಸುತ್ತಿದ್ದೆ. ಆಗಿನ ನನ್ನ ಮನೆಯ ಪರಿಸ್ಥಿತಿ, ಬ್ಯಾಕ್‌ಗ್ರೌಂಡ್ ಕೂಡಾ ನನ್ನಲ್ಲಿ ಇನ್‌ಫೀರಿಯಾರಿಟಿಯನ್ನು ತುಂಬಾ ಬೆಳೆಸಿತ್ತು ಅಂದುಕೊಳ್ಳುತ್ತೇನೆ. ರಣಜಿ ಸೆಮಿಫೈನಲ್‌ನಲ್ಲಿ ಬಾಂಬೆ ವಿರುದ್ಧ

ಆಡಿದಾಗ ಮೊದಲನೆ ಸಲ ನಾನೇ ಚೆನ್ನಾಗಿ ಆಡಿದ್ದೇನೆಂದು ಸಂತೃಪ್ತಿ ನನಗಾಯಿತು. ಆಗಿನಿಂದಲೇ ಅಭಿಮಾನಿಗಳು ನನ್ನ ಸುತ್ತಲೂ ಸೇರುವುದು. ಆಟೋಗ್ರಾಫ್‌ಗಳನ್ನು ಪಡೆಯುವುದು ಪ್ರಾರಂಭವಾಯಿತು. ಮೊದ ಮೊದಲು ತುಂಬಾ ನಾಚಿಕೊಳ್ಳುತ್ತಿದೆ. ನಾನು ನಿಜಕ್ಕೂ ಹೆಸರುವಾಸಿ ಯಾಗಿದ್ದೇನಾ ಎಂಬ ಅನುಮಾನ ಕ್ರಮೇಣ ಅದು ಥ್ರಿಲ್ ಆಗಿ ಬದ ಲಾಯಿತು. ಚೆನ್ನಾಗಿ ಆಡಿ ವಿಜಯ ಸಾಧಿಸಿದ ಥ್ರಿಲ್‌ಗಿಂತಲೂ ಹತ್ತು ಜನರೆದುರು ಅದೂ ಹುಡುಗಿಯರ ದೃಷ್ಟಿಯಲ್ಲಿ 'ಐಡಿಯಲ್ ಹಿ' ಆಗಿ ಗುರುತಿಸಲ್ಪಡುತ್ತಿದ್ದುದು ನನಗಿನ್ನೂ ಹೆಚ್ಚು ರೋಮಾಂಚನ ಗೊಳಿಸುತ್ತಿತ್ತು. ನನ್ನಲ್ಲಿಯ ಕೀಳರಿಮೆಯನ್ನು ಆತ್ಮನ್ಯೂನತಾ ಭಾವನೆಗಳನ್ನು ಹೋಗಿಸಲು ಎಂಬಂತೆ ನನ್ನ ಸ್ನೇಹಿತ ರಾಜಾರಾವ್ ನನ್ನನ್ನು ಬಲವಂತವಾಗಿ ಕ್ಲಬ್ಬುಗಳಿಗೆ ಹೋಟೆಲುಗಳಿಗೆ ಕರೆದೊಯ್ಯುತ್ತಿದ್ದ. ಈ ನಾಗರೀಕತೆಯ ಅತಿ ವೇಗ, ಫ್ಯಾಷನ್‌ಗಳನ್ನು ತಿಳಿಯದ ಒಬ್ಬ ಅತಿ ಸಾಮಾನ್ಯನಿಗೆ.... ಎಲ್ಲರೂ ಬಂದು ಮಾತನಾಡುವುದು, ಎಲ್ಲರ ದೃಷ್ಟಿಯೂ ತನ್ನ ಮೇಲೆಯೇ ಬೀಳುವುದು, ಹೈ ಸೊಸೈಟಿ ಜನ ಕೂಡಾ ಆರಾಧನಾ ದೃಷ್ಟಿಯಿಂದ ನೋಡುವುದು, ಅವರು ಆಟೋ ಗ್ರಾಫ್‌ಗಳನ್ನು ಕೇಳುವುದು ಎಲ್ಲಾ ಒಂದು ಹೊಸ ಪ್ರಪಂಚ! ಆ ಪ್ರಪಂಚದಲ್ಲಿ ನಾನು ಸಂಪೂರ್ಣವಾಗಿ ನನ್ನನ್ನೇ ಮರೆತು ಹೋದೆ. ಆ ಮತ್ತಿನಲ್ಲಿರುವಾಗಲೇ ನನಗೆ ಲಕ್ಷ್ಮಿಯ ಪರಿಚಯವಾಯಿತು. ಇನ್ನೂ ತುಂಬಾ ಹುಡುಗಿಯರ ಪರಿಚಯವಾದರೂ ಲಕ್ಷ್ಮಿ ಒಬ್ಬಳೇ ನನಗೆ ತೀರಾ ಹತ್ತಿರ ವಾದಳು. ಪಾರ್ಕ್ ಹೋಟೆಲ್ಲುಗಳಲ್ಲಿ ಹುಡುಗಿಯರೊಡನೆ ಬೆರೆತು ಪಾರ್ಟಿಗಳು ಅರ್ಧ ರಾತ್ರಿಯವರೆಗೂ ಮಾತುಕತೆ, ಡ್ರಿಂಕ್ಸ್ ತೆಗೆದುಕೊಳ್ಳುವುದು ದೊಡ್ಡ ಥ್ರಿಲ್ಲಿಂಗ್ ಎನ್ನಿಸಿತು. ಕನಸಿನಲ್ಲೂ ಎಣಿಸಿರದ ಅನುಭವವನ್ನು ಸ್ವಂತ ಮಾಡಿಕೊಳ್ಳುವ ಅವಕಾಶ ನನಗೀಗ ಬಂದಿದೆಯೋ' ಎನ್ನುತ್ತಿದ್ದ ರಾಜಾ ರಾವ್. ಅನುಭವಿಸುವವರೆಗೂ ನಿಜವಾಗಿಯೂ ಅದ್ಭುತವಾಗಿಯೇ ಇರುತ್ತಿತ್ತಾದರೂ, ಅಂತರಾತ್ಮ ಮಾತ್ರ ಆಗಾಗ ತಪ್ಪು ಮಾಡುತ್ತಿದ್ದೀ ಯೆಂದು ಗೊಣಗುತ್ತಿದ್ದರೂ, 'ಆದರೆ ಮಾಡಲು ಬೇರೇನೂ ಕೆಲಸವಿಲ್ಲವಲ್ಲಾ ಈ ರೀತಿಯ ಪ್ರಖ್ಯಾತಿ ಸಿಕ್ಕಿರುವಾಗ ಇದೆಲ್ಲಾ ಸಾಮಾನ್ಯವೇ' ಎಂದು ಸಮರ್ಥಿಸಿಕೊಳ್ಳುತ್ತಿದ್ದೆ. ಆದರೆ ಒಂದು ಮಾತು ಮಾತ್ರ ಸತ್ಯ ಚಿರಂಜೀವಿ

ಯವರೇ—ಈ ಎರಡು ವರ್ಷಗಳಲ್ಲಿ ಬದುಕನ್ನು ಎಷ್ಟು ಜಾಲಿಯಾಗಿ ಕಳೆದರೂ, ಎಷ್ಟು ಹುಡುಗಿಯರೊಡನೆ ಸಂಬಂಧವಿದ್ದರೂ, ಲಕ್ಷ್ಮಿಯೊಡನೆ ಮಾತ್ರ ನನಗೆ ಶಾರೀರಿಕ ಸಂಬಂಧವಿಲ್ಲ. ಅಂತಹ ಆಲೋಚನೆಗಳೇ ಎಂದೂ ಬರಲಿಲ್ಲ."

ಚಿರಂಜೀವಿ ಅವನ ಕಡೆ ಅನುಕಂಪದಿಂದ ನೋಡಿದ. ಹೇಳಬೇಕಾಗಿರುವುದು ಬೇರೇನೂ ಇಲ್ಲವೆಂಬಂತೆ ಸುಮ್ಮನಾದ. "ರಾಜಾರಾವ್‌ಗೆ ನಿಮ್ಮ ಮೇಲೆ ಏನಾದರೂ ದ್ವೇಶ ಇದೆಯಾ ?" ಚಿರಂಜೀವಿ ಕೇಳಿದ.

"ಉಹ್ಞೂ, ಅವನು ನನಗೆ ತುಂಬಾ ಒಳ್ಳೆಯ ಸ್ನೇಹಿತ. ಸೊಸೈಟಿಯಲ್ಲಿ ಹೇಗೆ ಬಿಹೇವ್ ಮಾಡಬೇಕೆಂದು ನನಗೆ ತಿಳಿಸುತ್ತಿದ್ದ. ಭವಿಷ್ಯತ್ತಿನಲ್ಲಿ ನಾನು ಉತ್ತಮ ಪ್ಲೇಯರ್ ಆಗುತ್ತೇನೆಂದು ಅವನ ದೃಢ ನಂಬಿಕೆ."

"ನಿಮ್ಮ ಮೇಲೆ ಪೋಲೀಸರಿಗೆ ಅಷ್ಟು ದೃಢವಾದ ಅನುಮಾನ ಏಕೆ ಬಂತು ?"

"ಮೊನ್ನೆ ನಾನು ಹಾಸ್ಟೆಲ್‌ಗೆ ಹೋಗುತ್ತಿದ್ದುದನ್ನು ಹುಡುಗಿಯರು ಹೇಳಿದರಂತೆ. ಅದೂ ಅಲ್ಲದೆ ಸೂಯಿಸೈಡ್ ನೋಟ್‌ನಲ್ಲಿ ಹ್ಯಾಂಡ್‌ರೈಟಿಂಗ್ ನನ್ನದೇ ಎಂದು ಪೋಲೀಸರು ಅಭಿಪ್ರಾಯ ಪಟ್ಟಿದ್ದಾರೆ."

"ಸೂಯಿಸೈಡ್ ನೋಟ್ ನಿಮ್ಮ ಹ್ಯಾಂಡ್‌ರೈಟಿಂಗ್‌ನಲ್ಲಿದೆಯಾ ? ಅದ್ಹೇಗೆ ಬಂತು ?"

"ಗೊತ್ತಿಲ್ಲ. ಮೊದಲು ನನ್ನ ಕೈಯಲ್ಲೇ ಅಂತಹ ನೋಟ್ ಬರೆಸಿ ಚೆಕ್‌ಮಾಡಿದ ಇನ್ಸ್‌ಪೆಕ್ಟರ್."

ಚಿರಂಜೀವಿ ಜೇಬಿನಿಂದ ಒಂದು ಸಣ್ಣ ಡೈರಿ, ಪೆನ್ನು ತೆಗೆದ.

"ನಿಮ್ಮಿಂದ ಇನ್ಸ್‌ಪೆಕ್ಟರ್ ಏನೆಂದು ಬರೆಸಿದರೋ ಹಾಗೆಯೇ ಬರೆಯಿರಿ ಇದರಲ್ಲಿ" ಎಂದ.

ರಾಯಣ್ಣ ನಿಸ್ಸಂಕೋಚವಾಗಿ ಡೈರಿ ತೆಗೆದುಕೊಂಡು ಬರೆದ.

"ನಾನು ಈ ಕೇಸನ್ನು ಟೇಕಪ್ ಮಾಡುತ್ತಿದ್ದೇನೆ ರಾಯಣ್ಣ. ಇವತ್ತೇ ನಿಮ್ಮ ಬೆಯಿಲ್‌ಗಾಗಿ ಪ್ರಯತ್ನಿಸುತ್ತೇನೆ. ವಿಷಯು ಗುಡ್‌ಲಕ್." ಕೈ ಚಾಚಿದ ಚಿರಂಜೀವಿ. ರಾಯಣ್ಣ ಟೀಮಿನಲ್ಲಿ ಸೆಲೆಕ್ಟ್ ಆದ ವಿಷಯವನ್ನು

ಆಗಲೇ ತಿಳಿಸಲು ಇಷ್ಟಪಡಲಿಲ್ಲ ಚಿರಂಜೀವಿ. ಅದು ತಿಳಿಯ ಬೇಕಾದ ಸಮಯದಲ್ಲಿ, ತಿಳಿಸಬೇಕಾದವರು ತಿಳಿಸಿದರೇ ಚೆನ್ನ ಎಂದು ಚಿರಂಜೀವಿಯ ಅಭಿಪ್ರಾಯ.

ಚಿರಂಜೀವಿ ಹೊರಡುತ್ತಿದ್ದಂತೆಯೇ ಹೊರಗಡೆ ರೂಮಿನಲ್ಲಿ ಟೆಲಿಫೋನ್ ರಿಂಗಾಗುತ್ತಿತ್ತು, ಇನ್ಸ್‌ಪೆಕ್ಟರ್ ರಿಸೀವ್ ಮಾಡಿದ. ಅತ್ತ ಕಡೆಯ ಸ್ವರ ಕೇಳುತ್ತಿದ್ದಂತೆಯೇ ಅಟೆನ್ಷನ್‌ಗೆ ಬಂದ.

"ಒಪ್ಪಿಕೊಂಡನಾ ?" ಡಿ.ಸಿ.ಪಿ. ಕೇಳಿದರು ಆಕಡೆಯಿಂದ.

"ಇಲ್ಲ ಸಾರ್.... ಮಾಡಿಲ್ಲ ಅನ್ನುತ್ತಿದ್ದಾನೆ.

"ಕೊಲೆ ಮಾಡಿದವನು ಅಷ್ಟು ಸುಲಭವಾಗಿ ಒಪ್ಪಿಕೊಳ್ಳುತ್ತಾನಾ ? ನಾಲ್ಕು ಒದೆ ಬಿದ್ದರೆ ಬಾಯಿಬಿಡ್ತಾನೆ. ಸತ್ಯನಾರಾಯಣನಿಗ ಒಪ್ಪಿಸ ಬೇಕಾಗಿತ್ತು. ಮಾಜಿಸ್ಟ್ರೇಟ್ ಬಳಿಗೆ ಯಾವಾಗ ಹೋಗುತ್ತಿದ್ದೀರಿ ?"

"ಈಗ ಹೋಗುತ್ತಿದ್ದೇವೆ ಸಾರ್."

"ಸರಿ. ಬಂದ ಕೂಡಲೇ ಅವನನ್ನು ಸತ್ಯನಾರಾಯಣನಿಗೆ ಒಪ್ಪಿಸಿ." ಎಂದು ಫೋನಿಟ್ಟು ಬಿಟ್ಟ.

ಇನ್ಸ್‌ಪೆಕ್ಟರ್ ಮುಖ ಮ್ಲಾನವಾಯಿತು. ತನ್ನ ಅಸಹಾಯಕತೆಯನ್ನು ಎತ್ತಿ ತೋರಿಸಿದ್ದಕ್ಕೆ ಅಲ್ಲ. ಇದೇ ಡಿ.ಸಿ.ಪಿ. ಬೆಳಗ್ಗೆ ಫೋನ್ ಮಾಡಿದಾಗ 'ಅವನು ಮೊದಲೇ ಪಬ್ಲಿಕ್ ಫಿಗರ್ ಎಚ್ಚರದಿಂದ ವ್ಯವಹರಿಸಿ ಅನವಶ್ಯಕವಾಗಿ ಕೈ ತೊರಿಸಿದರೆ ಅವನ ಅಭಿಮಾನಿಗಳಿಂದ ತೊಂದರೆ' ಎಂದಿದ್ದರು. ಈಗ ಹೀಗೆ ಮಾತನಾಡುತ್ತಿದ್ದಾರೆ. ಇನ್ಸ್‌ಪೆಕ್ಟರ್‌ಗೆ ಆ ವಿಷಯದಲ್ಲಿ ನೋವಿಲ್ಲ–ಅವನು ತುಂಬಾ ಜನ ಅಪರಾಧಿಗಳನ್ನು ನೋಡಿದ್ದಾನೆ. ರಾಯಣ್ಣನಂತಹ ವಿದ್ಯಾವಂತ, ಸಂಸ್ಕಾರವಿರುವ ವ್ಯಕ್ತಿ ಅಪರಾಧ ಮಾಡಿದ್ದರೆ ಅದನ್ನು ಅವನ ಬಾಯಿಂದ ಹೊರಡಿಸುವುದು ತುಂಬಾ ಸುಲಭವಾದ ಕೆಲಸ. ಎಷ್ಟು ರೀತಿಯಿಂದ ಪ್ರಶ್ನಿಸಿದರೂ, ಹಿಂಸಿಸಿದರೂ ತಪ್ಪನ್ನು ಒಪ್ಪಿಕೊಳ್ಳದವನು ರೌಡಿಯಾದರೂ ಆಗಿರಬೇಕು ಇಲ್ಲವೆ ನಿರ್ದೋಷಿ

ಯಾದರೂ ಆದಿರಬೇಕು. ರಾಯಣ್ಣ ಎರಡನೆ ಗುಂಪಿಗೆ ಸೇರಿದವನಿರಬೇಕೆಂದು ಅವನಿಗೆ ಇಂಟರಾಗೇಷನ್ ಸಮಯದಲ್ಲಿ ಅನುಮಾನ ಬಂದಿತ್ತು. ಆದರೆ ತನ್ನ ಕರ್ತವ್ಯ ಕೊನೆಯವರೆಗೂ ಸರಿಯಾಗಿ ನಿರ್ವಹಿಸುತ್ತಾ ರಾಯಣ್ಣನನ್ನು ಎಲ್ಲಾ ರೀತಿಯಿಂದಲೂ ಪ್ರಶ್ನಿಸಿದ್ದ.

ರಾಯಣ್ಣ ಮತ್ತೆ ಬ್ಯಾಟ್ ಹಿಡಿಯದಂತೆ ಅವನ ನಡುವ ಮುರಿಯಬೇಕೆಂದು ಮೇಲಿಂದ ಆದೇಶ! ನಿಯತ್ತಾದ ಇನ್ಸ್‌ಪೆಕ್ಟರ್‌ಗೆ ಇದರಲ್ಲಿ ರಾಜಕೀಯವಿದೆಯೆಂದು ಸ್ಪಷ್ಟವಾಗಿ ತಿಳಿದುಬಿಟ್ಟಿತು.

ಇನ್ಸ್‌ಪೆಕ್ಟರ್ ಯೋಚಿಸುತ್ತ ಚಿರಂಜೀವಿ ಹೊರಗೆ ಹೋದದ್ದನ್ನು. ಸತ್ಯನಾರಾಯಣ ಒಳಗೆ ಸೇರಿದ್ದನ್ನು ಗಮನಿಸಲೇ ಇಲ್ಲ. ಸತ್ಯನಾರಾಯಣ ಕ್ರೂರವಾಗಿ ನಗುತ್ತಾ ರಾಯಣ್ಣನ ಭುಜದ ಮೇಲೆ ಕೈಹಾಕಿದ.

"ಈಗ ಹೇಳು ಲಕ್ಷ್ಮಿಯನ್ನು ಏಕೆ ಕೊಲೆಮಾಡಿದೆ ?" ಘರ್ಜಿಸಿದ.

"ನಿಮ್ಮ ನಿರ್ಧಾರ ಬದಲಾಯಿಸಿಕೊಳ್ಳದಿದ್ದರೆ ದೇಶವೆಲ್ಲಾ ಪ್ರತಿಭಟಿಸುತ್ತದೆ. ಮುಖ್ಯವಾಗಿ ನಮ್ಮ ದೇಶದ ಪ್ರತಿಷ್ಠೆಗೇ ಭಂಗ ಬರುತ್ತದೆ. ರಾಯಣ್ಣನನ್ನು ಟೀಮಿನಿಂದ ತೆಗೆದು ಹಾಕಿರುವಂತೆ ಈ ಕೂಡಲೇ ನೋಟಿಸ್ ಕೊಡಿ" ರಾಘವರೆಡ್ಡಿ ಹೇಳಿದ.

ಚೆಂದೂಬೋರ್ಡೆ ಅವನೆಡೆಗೆ ಅಸಹನೆಯಿಂದ ನೋಡಿದ. "ಒಂದು ನಿರ್ಧಾರ ತೆಗೆದುಕೊಳ್ಳುವುದಕ್ಕೆ ಮುಂಚೆ ನಾವು ಅದರ ಪೂರ್ವಾಪರವನ್ನು ಯೋಚಿಸಬೇಕು ರಾಘವರೆಡ್ಡಿಯವರೇ. ಸುಮಾರು ಎರಡು ವರ್ಷಗಳ ಹಿಂದೆ ಇದೇ ಪರಿಸ್ಥಿತಿಯನ್ನು ಸಿದ್ದೂ ವಿಷಯದಲ್ಲೂ ಎದುರಿಸಿದ್ದೇವೆ. ಆಗಲೂ ನೀವು ಬೋರ್ಡಿನಲ್ಲಿದ್ದಿರಿ.... ಎಂತಹ ನಿರ್ಧಾರ ತೆಗೆದುಕೊಂಡಿದ್ದೆವು? ಆಗಲೂ ದೇಶದ ಪ್ರಜೆಗಳು ಕೂಗಾಡಿದರು, ಪತ್ರಿಕೆಗಳು ನಿಂದಿಸಿದವು ಆದರೂ ಆತನಿಗೆ ಸ್ಪೆಷಲ್ ಬೆಯಿಲ್ ತರಿಸಿ, ವಿದೇಶಕ್ಕೆ ಹೋಗಲು ಸ್ಪೆಷಲ್ ಪರ್ಮಿಷನ್ ಕೂಡಾ ನಾವೇ ತರಿಸಿದ್ದೆವು. ಏತಕ್ಕಾಗಿ? ಆತ ನಮ್ಮ ದೇಶದ ಪ್ರತಿಷ್ಠೆಯನ್ನು ಉಳಿಸುವ ಆಟಗಾರನಾದ್ದರಿಂದ. ನಾವು ತೆಗೆದುಕೊಳ್ಳುವ

ಯಾವ ನಿರ್ಧಾರವಾದರೂ ಬೇರೆಯಾರೂ ಕೈ ಎತ್ತಿ ತೋರಿಸದಂತಿರಬೇಕು. ಯಾವ ಲಾಯರ್‍ರಾದರೂ, ಜರ್ನಲಿಸ್ಟ್ ಆದರೂ ಈ ಪ್ರಶ್ನೆ ಕೇಳಿದರೆ ಏನೆಂದು ಉತ್ತರಿಸಬೇಕು ?"

"ಅದು ಬೇರೆ. ಇದು ಬೇರೆ. ಇವನು ಒಬ್ಬ ಮುಗ್ಧ ಹುಡುಗಿಯನ್ನು ರೇಪ್‌ಮಾಡಿ ನಂತರ ಕೊಲೆ ಮಾಡಿದ್ದಾನೆ. ಹೈದರಾಬಾದಿನಲ್ಲಿಯ ಪರಿಸ್ಥಿತಿ ನಿಮಗೆ ತಿಳಿಯದು. ಕಾಲೇಜ್ ವಿದ್ಯಾರ್ಥಿಗಳೆಲ್ಲಾ ಗಲಾಟೆ ಮಾಡುತ್ತಿದ್ದಾರೆ. ಅವನಿಗೆ ಬೆಯಿಲ್ ಕೂಡಾ ಕೊಡಕೂಡದೆಂದು ಪೋಲೀಸ್ ಸ್ಟೇಷನ್ ಮುಂದೆ ಧರಣಿ ಮಾಡಲು ಯೋಚಿಸಿದ್ದಾರೆ. ಇನ್ನಷ್ಟು ಗಲಭೆಗಳಾಗುವ ಸೂಚನೆ ಗಳಿವೆ." ರಾಘವರೆಡ್ಡಿ ಆದೇಶದಿಂದ ಹೇಳಿದ. ಬಾಂಬೆ ಸೇರಿದ ಕೂಡಲೇ ಅವನ ವೆಂಕಟ್ರಾಜುವಿನ ಫೋನ್ ರಿಸೀವ್‌ಮಾಡಿದ್ದ. ಅದಕ್ಕೆ ಅಷ್ಟು ಜೋರಾಗಿ ಮಾತನಾಡಿದ. ಅದುವರೆವಿಗೂ ಕೇಸಿನಲ್ಲಿಲ್ಲದೆ 'ರೇಪ್'ಗೆ ಬುನಾದಿ ಅಲ್ಲಿಯೇ ಬಿದ್ದಿತು.

"ಹಾಗೆ ಆದರೆ ಸಮಸ್ಯೆಯಿಲ್ಲ. ಬೆಯಿಲ್ ಸಿಗದೆ ಅವನಿನ್ನು ಇಲ್ಲಿಗೆ ಅವನಿನ್ನು ಇಲ್ಲಿಗೆ ಬರಲಾರ, ಆಡಲಾರ. ಆಗ ನಮ್ಮ ಮೇಲೆ ಯಾವ ದೂಷಣೆಯೂ ಬರುವುದಿಲ್ಲ." ಚೌಧರಿ ಹೇಳಿದ ರಾಘವರೆಡ್ಡಿ ಪೆಚ್ಚಾದ. ವಿಷಯ ಹೀಗೆ ತಿರುವು ಪಡೆಯುತ್ತದೆಂದು ಕೊಂಡಿರಲಿಲ್ಲ.

"ರಾಯಣ್ಣ ರೇಪ್‌ಮಾಡಿ, ಕೊಲೆಮಾಡಿರುವುದನ್ನು ನೋಡಿರುವ ಪ್ರತ್ಯಕ್ಷ ಸಾಕ್ಷಿಗಳು ಯಾರಾದರೂ ಇದ್ದಾರಾ ?" ಚೆಂದೂಬೋರ್ಡೆ ಕೇಳಿದ.

"ಇಲ್ಲವಾಗಲೀ ಬಲವಾದ ಸಾಕ್ಷಿಗಳಿವೆಯಂತೆ" ರೆಡ್ಡಿ ಸುಸ್ತಾಗಿ ಹೇಳಿದ.

"ಕೇವಲ ಅಂತಹ ಸಾಕ್ಷ್ಯಗಳಿಂದ ಅಪರಾಧಗಳು ರುಜುವಾತಾದಾರೆ ನಮಗಿಷ್ಟು ಕೋರ್ಟುಗಳ ಅವಶ್ಯಕತೆಗಳಿಲ್ಲ. ಕೋರ್ಟುಗಳಲ್ಲಿಯ ಕೇಸುಗಳು ವರ್ಷಾನುಗಟ್ಟಲೆ ನಡೆಯುವುದಿಲ್ಲ. ತೀರ್ಪು ನೀಡುವ ಜಡ್ಜ್ ಎಲ್ಲಾ ಸಾಕ್ಷ್ಯ ಗಳನ್ನೂ ಸೂಕ್ಷ್ಮವಾಗಿ ಪರೀಶೀಲಿಸುತ್ತಾನೆ. ನಾವು ಆ ಜಡ್ಜ್‌ಗಿಂತಲೂ ಶ್ರೇಷ್ಠರಲ್ಲ. ಅವರ ತೀರ್ಪಿಗೇ ನಾವು ಬದ್ಧರಾಗಿದ್ದೇವೆ. ಅದರಲ್ಲೂ ರಾಯಣ್ಣ ಆಡಲಿರುವುದು ಟೆಸ್ಟ್‌ಮ್ಯಾಚಿಲ್ಲ. ಈ ಆಟದಲ್ಲಿ ಆತ ತನ್ನ ನೈಪುಣ್ಯವನ್ನು ತೋರಿಸಿದರೆ ತಾನೇ ಛಾನ್ಸ್‌ಸಿಗುವುದು ಟೆಸ್ಟ್‌ನಲ್ಲಿ. ನಮ್ಮನ್ನು

ಆಗ ಪ್ರಶ್ನಿಸುವವರೂ ಇರುವುದಿಲ್ಲ." ಮೀಟಿಂಗ್ ಇನ್ನು ಮುಗಿಯಿತೆಂಬಂತೆ ಮಾತು ಮುಗಿಸಿದ.

ರಾಘವರೆಡ್ಡಿ ಮುಂದಕ್ಕೆ ಮಾತನಾಡಲು ಅವಕಾಶ ಸಿಗಲೇ ಇಲ್ಲ.

ಕಿರಣ್ಮಯಿ ಎರಡು ಗಂಟೆಗಳಿಂದಲೂ ಅದೇ ಮರದ ಕೆಳಗೆ ನಿಂತಿದ್ದಳು ಕೋರ್ಟಿನ ಒಳಗೆ ಏನು ನಡೆಯುತ್ತಿದೆಯೆಂದು ತಿಳಿಯುತ್ತಿಲ್ಲ. ಅವಳೊಡನೆ ಹೆಚ್ಚು ಮಾತನಾಡದಿದ್ದರೂ. ಅವಳ ನೋವನ್ನು ಹಂಚಿಕೊಳ್ಳುತ್ತಿರುವಂತೆ ರಾಯಣ್ಣನ ಸ್ನೇಹಿತ ಹತ್ತಿರದಲ್ಲೇ ನಿಂತಿದ್ದ.

ಕಿರಣ್ಮಯಿಯನ್ನು ನೋಡುತ್ತಿದ್ದರೆ ಅವನಿಗೆ ಸಂಕಟವಾಗುತ್ತಿತ್ತು. ಬೆಳಗ್ಗಿನಿಂದಲೂ ಅವಳು ಏನೂ ತಿಂದಿರಲಿಲ್ಲ, ಕುಳಿತುಕೊಳ್ಳಲೂ ಇಲ್ಲ,

"ಎಷ್ಟು ಹೊತ್ತು ಹಾಗೆಯೇ ನಿಂತಿರುತ್ತೀರಿ ? ಹಾಗೆಯೇ ಈ ಮರದ ಕೆಳಗೆ ಕುಳಿತುಕೊಳ್ಳಿ." ನಿಧಾನವಾಗಿ ಹೇಳಿದ.

"ಪರವಾಗಿಲ್ಲ ಬಿಡಿ. ಇನ್ನೂ ಎಷ್ಟು ಹೊತ್ತು ಆಗುತ್ತದೆ ?" ಕಿರಣ್ಮಯಿ ಕೇಳಿದಳು.

"ಮುಗೀತಾ ಬಂತಂಂತೆ, ಹೊರಗೆ ಕೋರ್ಟಿನ ಜವಾನ ಹೇಳಿದ."

"ಬೆಯಿಲ್‌ಕೊಡಲು ನಿರಾಕರಿಸಿದರೆ ನಾವೇನೂ ಮಾಡಲಾರೆವು ಅಲ್ಲವಾ ?

"ಹೌದು ಏನೂ ಮಾಡಲಾಗುವುದಿಲ್ಲ" ಒಪ್ಪಿಕೊಂಡ,

"ಅದು ಅವರ ಮೇಲೆ ಎಂತಹ ಪ್ರಭಾವ ಬೀರುತ್ತದೋ ಏನೋ ? ಮೊದಲೇ ಈ ಪರಿಸ್ಥಿತಿಗೆ ಮಾನಸಿಕವಾಗಿ, ಕುಗ್ಗಿಹೋಗಿದ್ದಾರೆ, ಇನ್ನೆಂದಿಗೂ ಕ್ರಿಕೇಟ್ ಬ್ಯಾಟ್ ಹಿಡಿಯುವುದಿಲ್ಲವೇನೋ. ಕೋರ್ಟ್ ವಿಧಿಸುವ ಶಿಕ್ಷೆಗಿಂತಲೂ ಆ ಶಿಕ್ಷೆ ಮತ್ತಷ್ಟು ಭಯಂಕರವಾದದ್ದು ಹೌದಲ್ಲವೆ ?

ಅವನು ಅವಳೆಡೆಗೆ ಆಶ್ಚರ್ಯದಿಂದ ನೋಡಿದ. ತನಗೆ ತಿಳಿದಂತೆ ಇವಳಿಗೆ ರಾಯಣ್ಣನೊಂದಿಗೆ ಅಷ್ಟು ಹೆಚ್ಚು ಪರಿಚಯವಾಗಲೀ, ರಾಯಣ್ಣನಿಗೆ ಕ್ರಿಕೆಟ್ ಬಗ್ಗೆ ಇರುವ ಹುಚ್ಚಿನ ಬಗ್ಗೆಯಾಗಲೀ ಸಂಪೂರ್ಣವಾಗಿ ತಿಳಿಯದು. ಕ್ರಿಕೆಟ್ ಎಂದರೇನೆಂದೇ ತಿಳಿಯದ ಹುಡುಗಿಯನ್ನು ರಾಯಣ್ಣ ಮದುವೆ

ಯಾದದ್ದು ಅವನ ಎಲ್ಲಾ ಸ್ನೇಹಿತರಿಗೂ ಆಶ್ಚರ್ಯ ತಂದಿತ್ತು. ಆದರೆ ಇವಳಲ್ಲಿ ತಾನು ಊಹಿಸಲಾರದಷ್ಟು ಅಂಡರ್‌ಸ್ಟ್ಯಾಂಡಿಂಗ್, ಉನ್ನತವಾದ ವ್ಯಕ್ತಿತ್ವ, ತಿಳುವಳಿಕೆ ಇದೆ, ರಾಯಣ್ಣ ತುಂಬಾ ಅದೃಷ್ಟವಂತ ಅಂದು ಕೊಂಡ.

"ನೀವಂದುಕೊಂಡಿರುವುದು ಸರಿ. ರಾಯಣ್ಣ ತುಂಬಾ ಸೆನ್ಸಿಟೀವ್. ಆದರೆ ನಿಮ್ಮಂತಹವರ ಸಹವಾಸದಿಂದ ಅವನು ಸಾಮಾನ್ಯ ಮನುಷ್ಯನಾಗಿಯೇ ಆಗುತ್ತಾನೆ, ಆ ನಂಬಿಕೆ ನನಗಿದೆ. ಅಷ್ಟೇ ಅಲ್ಲ ಒಳ್ಳೆಯ ಪ್ಲೇಯರ್ ಕೂಡಾ ಆಗುತ್ತಾನೆ." ದೃಢವಾಗಿ ಹೇಳಿದ.

ಕಿರಣ್ಮಯಿ ಅವನ ಮಾತನ್ನು ಕೇಳಿಸಿಕೊಂಡಂತೆಯೇ ಕಾಣಲಿಲ್ಲ. "ಅಂದಹಾಗೆ ರಾಯಣ್ಣ ನಾಳೆ ಡೆಲ್ಲಿಗೆ ಹೋಗೋಕೆ ಟಿಕೆಟ್‌ಗಳನ್ನು ಕ್ರಿಕೆಟ್ ಬೋರ್ಡ್‌ನವರು ಅರೇಂಜ್ ಮಾಡ್ತಾರಾ ಇಲ್ಲವೆ ನಾವೇ ಕೊಂಡುಕೊಳ್ಳ ಬೇಕಾ ?" ಕೇಳಿದಳು.

"ಏನೋ ಸರಿಯಾಗಿ ಗೊತ್ತಿಲ್ಲ. ನಾವೇ ಕೊಂಡುಕೊಂಡು ಹೋದರೆ ನಂತರ ಅವರು ಹಣಾನ ವಾಪಸ್ಸು ಮಾಡ್ತಾರೆ ಅಂದ್ಕೊಂಡಿದೀನಿ, ಅಲ್ಲವಾ ?"

"ಅದೇ ನಾವೇ ಟಿಕೆಟ್ ಕೊಂಡುಕೊಳ್ಳಬೇಕಾದರೆ ಒಂದೇ ದಿನದಲ್ಲಿ ರಿಸರ್ವೇಶನ್ ಸಿಗುತ್ತಾ ? ಅಷ್ಟು ದೂರ ರಿಸರ್ವೇಶನ್ ಇಲ್ಲದೆ ಪ್ರಯಾಣ ಮಾಡುವುದು ಕಷ್ಟವಲ್ಲವೇ ? ರಾತ್ರಿಯೆಲ್ಲಾ ನಿದ್ರೆಯಿಲ್ಲದೆ ಹೋಗಿ ಪ್ರಾಕ್ಟೀಸ್‌ನಲ್ಲಿ ಹೇಗೆ ಪಾಲ್ಗೊಳ್ಳುತ್ತಾನೆ ?"

"ನಿಜವೇ, ಮೊದಲು ರಾಯಣ್ಣ ಹೊರಬರಲಿ. ನಾನೇ ಹೋಗಿ ಟಿಕೆಟ್ ವಿಷಯ ನೋಡ್ತಿನಿ. ಆ ವಿಷಯದಲ್ಲಿ ನೀವೇನೂ ಚಿಂತೆ ಮಾಡ ಬೇಡಿ. ನಾನು ಅರೇಂಜ್ ಮಾಡ್ತೀನಿ."

"ಥ್ಯಾಂಕ್ಸ್" ಕಿರಣ್ಮಯಿ ಕೃತಜ್ಞತೆಯಿಂದ ನೋಡಿದಳು ಅವನೆಡೆಗೆ.

"ನನ್ನ ಆಲೋಚನೆಗಳನ್ನು ಕಂಡು ನಿಮಗೆ ಆಶ್ಚರ್ಯವಾಗಿರಬಹುದು, ಅಲ್ಲವಾ ? ನನ್ನ ಚಿಕ್ಕಂದಿನಿಂದಲೂ ನಮ್ಮ ಮನೆಯಲ್ಲಿ ತುಂಬಾ ವಿಷಯ ಗಳನ್ನು ಗಮನಿಸುತ್ತಲೇ ಬಂದಿದ್ದೇನೆ. ಮನೆ ತುಂಬಾ ಜನರಿದ್ದರು

ಆದರೆ ಯಾವುದನ್ನೂ ಮುಂಚೆಯೇ ಪ್ಲಾನ್ ಹಾಕಿಕೊಂಡು ಆಚರಣೆಗೆ ತರುತ್ತಿರಲಿಲ್ಲ. ಅನವಶ್ಯಕ ವಿಷಯಗಳಿಗೆ ಪ್ರಾಧಾನ್ಯತೆ ಕೊಟ್ಟು, ಬೇಕಾದ್ದನ್ನು ಮರೆತು ಬಿಡುತ್ತಿದ್ದರು. ಒಂದು ಸಣ್ಣ ದುರ್ಘಟನೆ ನಡೆದರೂ ಚಿಂತಿಸುತ್ತಾ ಕುಳಿತುಕೊಳ್ಳುವುದನ್ನು ಬಿಟ್ಟು ಮುಂದಿನ ಕಾರ್ಯಕ್ರಮಗಳ ಬಗ್ಗೆ ಯೋಚಿಸದೆ ಇರುತ್ತಿದ್ದುದು ನಮ್ಮಲ್ಲಿಯ ದೊಡ್ಡ ಅವಲಕ್ಷಣ." ಅವಳ ಮಾತಿನಲ್ಲಿ ಸತ್ಯ ಅಡಗಿರುವುದು ಅವನಿಗೆ ತಿಳಿಯಿತು. ಇದುವರೆವಿಗೂ ಅವನು ರಾಯಣ್ಣನಲ್ಲಿಯ ಕ್ರೀಡಾಕಾರನಿಗೆ ಫ್ಯಾನ್, ಆದರೆ ಒಂದೇ ದಿನದಲ್ಲಿ ಇಂಚಿಂಚಾಗಿ ಬಹಿರ್ಗತವಾಗುತ್ತಿದ್ದ ಕಿರಣ್ಮಯಿ ವ್ಯಕ್ತಿತ್ವಕ್ಕೆ ಅವನು ಅಭಿಮಾನಿಯಾಗಿ ಬಿಟ್ಟ.

"ನಾನಿದ್ದೇನಲ್ಲಾ. ಈ ವಿಷಯಗಳನ್ನೆಲ್ಲಾ ನನಗೆ ಬಿಟ್ಟು ಬಿಡಿ. ಅಗೋ ಲಾಯರ್ ಬರುತ್ತಿದ್ದಾರೆ." ಆತುರದಿಂದ ನಡೆದ ಅತ್ತಕಡೆಗೆ.

ಆತ್ಮೀಯತೆ, ಅಭಿಮಾನ, ಅನುಬಂಧ ಉಂಟಾಗಲು ವರ್ಷಗಳಷ್ಟು ಅನುಭವದ ಅವಶ್ಯಕತೆಯಿಲ್ಲ. ಕಪಟವಿಲ್ಲದ ಆ ಸಂಭಾಷಣೆ ಸಾಕು. ಕಿರಣ್ಮಯಿ ತೇವವಾದ ಕಣ್ಣುಗಳನ್ನು ಒರೆಸಿಕೊಳ್ಳುವ ಪ್ರಯತ್ನವನ್ನು ಮಾಡದೆ ಅವರೆಡೆಗೆ ನಡೆದಳು.

ವೆಂಕಟ್ರಾಜು ತುಂಬಾ ಉತ್ಸಾಹದಿಂದ ಮನೆಗೆ ಹಿಂತಿರುಗಿದ. ಅಂದು ತನ್ನ ಕ್ಲಬ್‌ಪರವಾಗಿ ಸಿಕಿಂದರಾಬಾದಿನ ಮತ್ತೊಂದು ತಂಡದೊಂದಿಗೆ ಒನ್‌ಡೇ ಮ್ಯಾಚೊಂದನ್ನು ಆಡಿ ಬಂದಿದ್ದ. ಎದುರಾಳಿ ಟೀಮಿನಲ್ಲಿ ನ್ಯಾಷನಲ್ ಪ್ಲೇಯರ್‌ಗಳಾದ ಶಿವಲಾಲ್‌ಯಾದವ್, ಅರ್ಷದ್ ಅಯೂಬ್ ಇದ್ದರು. ತಮ್ಮ ಟೀಮ್ ಗೆಲ್ಲುವ ಆಸೆ ಕಳೆದುಕೊಂಡ ಸಮಯದಲ್ಲಿ ಅವನು ಭರ್ಜರಿಯಾಗಿ ಆಡಿದ. ಔಟ್ ಆಗದೆ ತೊಂಭತ್ತೆರಡು ರನ್ ಮಾಡಿದ. ಕೆಟ್ಟದಾಗಿ ಸೋತು ಹೋಗುತ್ತದೆಂದು ಎಲ್ಲರೂ ತಿಳಿದಿದ್ದಾಗ ಅದೇ ಟೀಮ್‌ಗೆದ್ದದ್ದರಿಂದ ಎಲ್ಲರೂ ಅವನನ್ನು ಸುತ್ತುವರೆದು ಅಭಿನಂದನೆಯ ಮಳೆಗರೆದರು. "ಒಳ್ಳೆಯ ಫಾರ್ಮ್‌ನಲ್ಲಿದ್ದೀಯಪ್ಪಾ. ನಿನ್ನ ಸೆಲೆಕ್ಷನ್ ಗ್ಯಾರಂಟಿ." ಯಾದವ್ ಹೇಳಿದ.

ಆಡುತ್ತಿದ್ದಾಗಿಂತಲೂ ಈಗ ಇವರ ಪ್ರೋತ್ಸಾಹ ಅವನಿಗೆ ಹೆಚ್ಚು ಉತ್ಸಾಹ ನೀಡುತ್ತಿತ್ತು. ಬೆಳಗ್ಗಿನಿಂದಲೂ ಎಲ್ಲಾ ಶುಭ ಸಮಾಚಾರಗಳೇ ಏಳುತ್ತಿದ್ದಂತೆಯೇ ಪೇಪರಿನಲ್ಲಿ ರಾಯಣ್ಣನ ಅರೆಸ್ಟ್ ಅರೆಸ್ಟ್ ಸುದ್ದಿ, ರಾಘವರೆಡ್ಡಿಯನ್ನು ಕೂಡಲೇ ಬಾಂಬೆಗೆ ಕಳುಹಿಸಿದ್ದು, ರಾಜಾರಾವ್ ಸಹಕಾರ, ಈಗಿನ ವಿಜಯೋತ್ಸಾಹ.... ಎಲ್ಲವೂ ಅಂದುಕೊಂಡಂತೆ ನಡೆಯುತ್ತಿತ್ತು.

"ನನಗೇನಾದರೂ ಫೋನ್ ಕಾಲ್‌ಗಳು ಬಂದಿವೆಯಾ?" ಮನೆಗೆ ಬರುತ್ತಿದ್ದಂತೆಯೇ ಕೇಳಿದ, ಬಾಂಬೆನಿಂದ ರಾಘವರೆಡ್ಡಿ, ಊರಿನಿಂದ ರಾಜಾರಾವ್ ಮಾಡಿದ್ದಾರೆಂದು ಹೇಳಿದ ಕೆಲಸವನ್ನು ವೆಂಕಟ್ರಾಜು ಉತ್ಸಾಹ ದಿಂದ ಬಾಂಬೇಗೆ ಫೋನ್ ಮಾಡಿದ.

"ಏನಾಯಿತು, ರಾಯಣ್ಣನಿಗೆ ಬೆಯಿಲ್ ಸಿಗದಂತೆ ನೋಡಿದ್ದೀಯಾ?" ಆತುರದಿಂದ ಕೇಳಿದ ರೆಡ್ಡಿ ಅತ್ತಕಡೆಯಿಂದ.

"ಏನೋ ಗೊತ್ತಿಲ್ಲ ಇನ್ನೂ ಅಲ್ಲೇನಾಯಿತು?" ವೆಂಕಟ್ರಾಜು ಪ್ರಶ್ನಿಸಿದ,

"ಸಾರಿ, ಕೆಲಸ ನಡೆಯಲಿಲ್ಲ, ಬೋರ್ಡಿನಲ್ಲಿ ಯಾರೂ ಒಪ್ಪಿಕೊಳ್ಳ ಲಿಲ್ಲ." ನಿರಾಸೆಯಿಂದ ಹೇಳಿದ ರೆಡ್ಡಿ.

"ಅಂದರೆ ನಿನ್ನಿಂದ ಸಾಧ್ಯವಿಲ್ಲ ಎಂಬಂತಾಯಿತು" ಸಿಟ್ಟಿನಿಂದ ಫೋನ್ ಇಟ್ಟು ಬಿಟ್ಟ. ಅವನ ಉತ್ಸಾಹವೆಲ್ಲಾ ಸತ್ತು ಹೋಯಿತು. ಇಷ್ಟು ಖರ್ಚು ಮಾಡಿದರೂ ಫಲಿಸಲಿಲ್ಲ. ಇನ್ನೊಂದೇ ಆಸೆ ಉಳಿದಿರುವುದು. ರಾಜಾರಾವ್‌ಗೆ ಫೋನ್‌ಮಾಡಿ ಬೆಯಿಲ್ ವಿಷಯ ಕೇಳಿದ.

"ರಾಯಣ್ಣನಿಗೆ ಬೆಯಿಲ್ ಸಿಕ್ಕಿದೆಯಂತೆ." ರಾಜಾರಾವ್ ಹೇಳಿದ.

ವೆಂಕಟ್ರಾಜುವಿನ ಮುಖದ ಮೇಲೆ ಒಮ್ಮೆಗೆ ಸುಡುತ್ತಿರುವ ಬಿಸಿನೀರು ಸುರಿದಂತಾಯಿತ, "ಹಾಗಾ? ಹೋಗಲಿ ಬಿಡು" ಮೇಲೆ ಏನನ್ನು ತೋರಿಸಿ ಕೊಳ್ಳದೆ ಹೇಳಿದ, ಒಳಗೊಳಗೇ ಆವೇಶವನ್ನು ನುಂಗಿಕೊಳ್ಳುತ್ತಾ— "ಆ ಹಾಸ್ಟೆಲ್ ಹುಡುಗಿಯರ ಗಲಾಟೆ ಏನಾಯಿತು?" ಎಂದು ಕೇಳಿದ,

"ಈ ಹುಡುಗಿಯರು ಅಷ್ಟು ಸ್ಟುಪಿಡ್, ಫೂಲ್ಸ್ ಅಂದು ಕೊಂಡಿರಲಿಲ್ಲ. ರಮಣಿ ಕಷ್ಟಪಟ್ಟು ಎಲ್ಲರನ್ನೂ ಒಂದೆಡೆ ಸೇರಿಸಿದ್ದಳಂತೆ, ಇನ್ನೇನು ಹೊರಡ ಬೇಕೆನ್ನುವಷ್ಟರಲ್ಲಿ ಲಕ್ಷ್ಮಿಯ ಅಮ್ಮ ಅಪ್ಪ ಮನೆಯವರೆಲ್ಲಾ ಬಂದರಂತೆ, ಅವರು ಹಾಲಿನಲ್ಲಿ ಅಳುತ್ತಾ ಕುಳಿತಿದ್ದರೆ ಈ ಹುಡುಗಿಯರೆಲ್ಲಾ ದೃಷ್ಟಿ ಬೊಂಬೆಗಳಂತೆ ಮತ್ತೆ ಅಂತಹ ಅವಕಾಶ ಸಿಗುವುದಿಲ್ಲವೇನೋ ಎಂಬಂತೆ ನೋಡುತ್ತಾ ಸಂತೋಷಪಡುತ್ತಿದ್ದರಂತೆ. ಅಷ್ಟರಲ್ಲಿ ರಾಯಣ್ಣನಿಗೆ ಬೆಯಿಲ್ ಸಿಕ್ಕಿ ಮನೆಗೆ ಹೊರಟು ಹೋಗಿದ್ದನಂತೆ." ರಾಜಾರಾವ್ ಹೇಳಿದ.

## ಅಧ್ಯಾಯ ಮೂರು

ಹದಿನಾರು ಗಂಟೆಗಳು ಎಷ್ಟು ನಿಧಾನವಾಗಿ ನಡೆಯಿತೋ, ಅನಂತರದ ಎರಡು ಗಂಟೆಗಳು ಅಷ್ಟೇ ವೇಗವಾಗಿ ಕಳೆಯಿತು. ಲಾಯರ್ ಚಿರಂಜೀವಿ ಹೊರಗೆ ಬರುವುದೇ ತಡ–ಬೆಯಿಲ್‌ಗಾಗಿ ಪರ್ಸನಲ್ ಬಾಂಡ್ ಕೊಡ ಬೇಕೆಂದು ತಿಳಿಸಿದ ಕೂಡಲೆ ರಾಯಣ್ಣನ ತಂದೆ ಬಂದು ಆ ಕೆಲಸ ಮಾಡಿದರು. ನಂತರದ ಕೆಲಸಗಳೆಲ್ಲಾ ವೇಗವಾಗಿ ನಡೆದುಬಿಟ್ಟವು.

ಸಂಜೆ ಐದೂವರೆಯ ವೇಳೆಗೆ ರಾಯಣ್ಣ ಕಸ್ಟಡಿಯಿಂದ ಹೊರಬಂದ. ಮನುಷ್ಯ ತುಂಬಾ ಸುಸ್ತಾದವನಂತೆ ಅವನ ಮುಖವೇ ಸೂಚಿಸುತ್ತಿತ್ತು. ರಾಯಣ್ಣನ ತಂದೆ ಕಣ್ಣೀರು ಹಾಕುವುದನ್ನು ಬಿಟ್ಟು ಒಂದು ಮಾತನ್ನೂ ಆಡಲಿಲ್ಲ. ಮಾಡಬೇಕಾಗಿರುವುದೆಲ್ಲಾ ತನ್ನ ಕೈಯಲ್ಲೇ ಇದೆಯೆಂದು ಕಿರಣ್ಮಯಿಗೆ ಅರ್ಥವಾಯಿತು.

"ಪೋಲೀಸರ ಛಾರ್ಜ್‌ಷೀಟ್ ಫೈಲ್ ಮಾಡಲು ಇನ್ನೂ ಸ್ವಲ್ಪ ಕಾಲ ಬೇಕಾಗುತ್ತೆ. ನೀವು ಎರಡು ಮೂರು ದಿನಗಳ ನಂತರ ಬಂದು ನನ್ನನ್ನು ಕಾಣಿರಿ." ಎಂದು ಚಿರಂಜೀವಿ ರಾಯಣ್ಣನ ಕಡೆಗೆ ತಿರುಗಿ—"ನೀವು ಚಿಂತಿಸ ಬೇಕಾದ್ದು, ನೋವು ಪಡಬೇಕಾದ್ದು ಏನೂ ಇಲ್ಲ, ಆಟದ ಮೇಲೆ ನಿಮ್ಮ

ಮನಸ್ಸನ್ನು ಕೇಂದ್ರೀಕರಿಸಿ, ವಿಷ್‌ಯು ಗುಡ್‌ಲಕ್," ಎನ್ನುತ್ತಾ ಕೈಕುಲುಕಿ ಹೊರಟು ಹೋದ.

ಕಿರಣ್ಮಯಿ ತನ್ನ ಮಾವನ ಬಳಿಗೆ ಬಂದಳು. "ಮಾವ, ನೀವು ನಮ್ಮ ಮನೆಗೆ ಹೋಗಿ ನನ್ನ ಬಗ್ಗೆ ಚಿಂತೆಮಾಡ ಕೂಡದೆಂದು ಹೇಳಿ, ಬಹುಶಃ ನಾಳೆ ರಾತ್ರಿ ನಮ್ಮ ಪ್ರಯಾಣ ಡೆಲ್ಲಿಗೆ ಅನ್ನಿಸುತ್ತೆ, ನಾನು ಬಂದು ಬಟ್ಟೆಗಳನ್ನೆಲ್ಲಾ ತಂದುಕೊಳ್ಳುತ್ತೇನೆ."

"ಹಾಗಾದರೆ ಈಗ ಎಲ್ಲಿಗೆ ಹೋಗೋಣ ?" ಆತ ಕೇಳಿದರು.

"ಇವರು ಬಾಡಿಗೆಗೆ ಒಂದು ಮನೆ ಮಾಡಿದ್ದಾರಲ್ಲಾ. ಅಲ್ಲಿಗೆ ಹೋಗೋಣ. ನಮ್ಮ ಮನೆಗೆ ಬಂದರೆ ಇವರಿಗೆ ಮನಶ್ಶಾಂತಿಗಿಂತಲೂ ನೋವೇ ಹೆಚ್ಚಾಗುತ್ತದೆ. ಅದಕ್ಕೇ ಹೇಳುತ್ತಿದ್ದೇನೆ ಮಾವ, ನಮ್ಮ ಕಡೆಯವರಾರನ್ನೂ ಕಳುಹಿಸಬೇಡಿ. ಏನೋ ಕಾರಣ ಹೇಳಿಬಿಡಿ." ಬೇಡಿಕೊಳ್ಳುವಂತೆ ಹೇಳಿದಳು.

"ಹಾಗೇ ಆಗಲಮ್ಮಾ – ನಿಂಗೆ ಹೇಗೆ ಸರಿ ಅನ್ನಿಸಿದರೆ ಹಾಗೆ ಮಾಡು. ತಗೋ ಇದನ್ನು ಇಟ್ಟುಕೊಂಡರು." ಜೇಬಿನಿಂದ ಸ್ವಲ್ಪ ಹಣ ತೆಗೆದು ಕೊಟ್ಟರು. "ಪ್ರಯಾಣಕ್ಕೆ ಎಷ್ಟು ಬೇಕಾಗುತ್ತೋ ಏನೋ, ನಾಳೆ ತಂದು ಕೊಡ್ತೀನಿ. ಯಾವುದಕ್ಕೂ ಮುಜುಗರ ಪಟ್ಕೊಬೇಡಿ."

ಕಿರಣ್ಮಯಿ ಕೃತಜ್ಞತೆಯಿಂದ ಮಾವನಿಗೆ ನಮಸ್ಕಾರ ಮಾಡಿದಳು. ಆತ ಚಲಿಸಿಬಿಟ್ಟ. ನಿಜವಾಗಿಯೂ ಇದನ್ನೇಲ್ಲಾ ತಾನು ಮಾಡಬೇಕು. ಓದಿರುವ ಹುಡುಗಿ ತನ್ನ ಸೊಸೆಯಾಗಬೇಕೆಂಬ ತನ್ನ ಕೋರಿಕೆ ಎಷ್ಟು ಸಹಜವಾದದ್ದು — ಈಗ ಅರ್ಥವಾಯಿತು. ಕಿರಣ್ಮಯಿ ತನ್ನ ನಂಬಿಕೆಗೆ ಮೋಸ ಮಾಡುವುದಿಲ್ಲ. ಅದೇ ಆತನಿಗೆ ನೆಮ್ಮದಿ ನೀಡಿತು. "ಬರ್ತೀನಮ್ಮ ಹುಷಾರು." ಹೇಳಿ ಹೊರಟು ಹೋದ. ಗಂಡ ಹೆಂಡತಿಯರಿಬ್ಬರು ಮಾತ್ರ ಉಳಿದರು.

ಹಗಲೆಲ್ಲಾ ತಲೆಯೆತ್ತಿ ಸೂರ್ಯನ ಗಮನವನ್ನು ಅನುಸರಿಸಿ ನೋಡುತ್ತಾ, ಅವನು ಕಣ್ಮರೆಯಾಗುತ್ತಿದ್ದಂತೆ ನಿರಾಸೆಯಿಂದ ತಲೆಬಾಗಿ ನಿಲ್ಲುವ ಸೂರ್ಯಕಾಂತಿ ಹೂವಿನಂತೆ ಬಾಡಿಹೋಗಿದ್ದರೂ ಅವರಿಬ್ಬರೂ

ರಾಯಣ್ಣ ಮತ್ತಷ್ಟು ಹೆಚ್ಚಾಗಿ ಕಿರಣ್ಮಯಿ ಕಿರುನಗೆಯ ಉತ್ಸಾಹವನ್ನು ಮುಖದಲ್ಲಿ ಮೂಡಿಸಿಕೊಂಡು ಅವನ ಬಳಿ ನಡೆದಳು. "ನಾವು ಮನೆಗೆ ಹೋಗೋಣವೆ ?" ಮೆಲ್ಲನೆ ಕೇಳಿದಳು.

ರಾಯಣ್ಣ ಮಾತನಾಡಲಿಲ್ಲ. ಮನಸ್ಸಿನಲ್ಲಿಯ ನೋವು ಮುಖದಲ್ಲಿ ಪ್ರತಿಬಿಂಬಿಸುತ್ತಿದ್ದರೆ ಬೊಂಬೆಯಂತೆ ನಿಂತುಬಿಟ್ಟಿದ್ದ. ಕಿರಣ್ಮಯಿ ಆಟೋ ತಂದಳು. ಅಂತಹ ಪರಿಸ್ಥಿತಿಯಲ್ಲೂ ರಾಯಣ್ಣ ಅವಳ ದೂರಾಲೋಚನೆಯನ್ನು ಅಭಿನಂದಿಸದೆ ಇರಲಾಗಲಿಲ್ಲ. ಪರಿಸ್ಥಿತಿ ಈ ರೀತಿ ಒದಗಿ ಬರಬಹುದೆಂದು ಅಡ್ರೆಸ್ಸನ್ನು ತನ್ನ ಹತ್ತಿರವಿರಿಸಿಕೊಂಡಿದ್ದಳು. ಇವಳು ತನ್ನ ಹೆಂಡತಿ ಎಂದುಕೊಳ್ಳುತ್ತಿದ್ದಂತೆ ಏನೋ ರಿಲೀಫ್. ಜೊತೆಗೆ ಇಂತಹ ಹುಡುಗಿಗೂ ಕಷ್ಟಬರುವಂತೆ ಮಾಡಿದೆನಲ್ಲಾ ಎಂಬ ನೋವು.

ಎರಡು ರೂಮುಗಳ ಸಣ್ಣ ಮನೆ ಅದು. ಸಣ್ಣ ಅಡಿಗೆ ಮನೆ, ಮತ್ತೊಂದು ರೂಮು ದೊಡ್ಡದು ಪಕ್ಕದಲ್ಲೇ ಬಾತ್ ರೂಮು.

ಕಿರಣ್ಮಯಿ ಎಲ್ಲಾ ನೋಡಿ ಬಂದು ಒಂದು ಕುರ್ಚಿಯಲ್ಲಿ ಕುಳಿತುಕೊಳ್ಳುತ್ತಾ, "ಚೆನ್ನಾಗಿದೆ" ಅಂದಳು. ರಾಯಣ್ಣ ಬಾಗಿಲ ಬಳಿಯಿಂದ ಕದಲಲಿಲ್ಲ. ಅವನ ನೋಟ ನಿಸ್ತೇಜವಾಗಿ ಶೂನ್ಯದಲ್ಲಿ ಸಿಲುಕಿತ್ತು.

ಘನೀಭವಿಸಿದ ದುಃಖ ಚಿರುಸ್ಪರ್ಶಕ್ಕೂ ಸಿಡಿದು ಚೂರಾಗುತ್ತೆ. ಕಿರಣ್ಮಯಿ ಕೂಡಾ ಚಲಿಸಲಿಲ್ಲ. ಅವಳು ಅವನಿಗೆ ನೀಡಬೇಕೆಂದಿದ್ದುದು ಕರುಣೆ, ಸಹಾನುಭೂತಿಯಲ್ಲ, ಧೈರ್ಯ. ಆತ್ಮವಿಶ್ವಾಸ.

"ಹಾಗೆಯೇ ನಿಂತುಬಿಟ್ಟರೇಕೆ ? ಬನ್ನಿ ಕೂತ್ಕೊಳ್ಳಿ, ನಮ್ಮ ಮನೆಯಲ್ಲೇ ನಮಗೆ ಮರ್ಯಾದೆ ಬೇಕಾ ?" ನಗುತ್ತಾ ಕೇಳಿದಳು. ರಾಯಣ್ಣ ಮೆಲ್ಲನೆ ಚಲಿಸಿ ಬಂದ. ನಿಧಾನವಾಗಿ ಅವಳ ಕಾಲ್ಗಳ ಬಳಿ ಬಂದು ಕುಳಿತು ಅವಳ ಎದೆಯ ಮೇಲೆ ತಲೆಯಿರಿಸಿದ.

ಕಿರಣ್ಮಯಿ ಉದ್ವೇಗಕ್ಕೊಳಗಾದಳು.

ಬೇಡವೆಂದರೂ ಬರುವ ಕಣ್ಣೀರಿಗೂ, ಹೋದರೆ ಹೋಗಲಿ ಎಂಬ ವೈರಾಗ್ಯಕ್ಕೂ, ಆದರೆ ಆಗಲಿ ಎಂಬ ಅಸಂದರ್ಭ. ನಿರ್ಲಿಪ್ತತೆಗೂ–ಗೋಡೆಯ ಮೇಲೆ ಕಳೆದು ಹೋಗುತ್ತಿದ್ದ ಕಾಲ ಏನನ್ನೂ ಹೇಳದು.

ಗಡಿಯಾರಕ್ಕೆ ಹೃದಯವಿಲ್ಲ. ಕಥೆಯಾದರೆ — ಬೇಕಾದ ಕಡೆ ಸಂತೋಷವನ್ನು ಸೇರಿಸಬಹುದು. ಬೇಡವೆಂದ ಕಡೆ ನೋವನ್ನು ತೆಗೆದುಹಾಕಿ ಬಿಡಬಹುದು. ಬದುಕು ಹಾಗಲ್ಲವಲ್ಲಾ. ಅದು ಬರಹಗಾರನ ಜ್ಯೂರಿಸ್ ಡಿಕ್ಷನ್‌ನಿಂದ ಜಾರಿಹೋದ ಕಹಿಸತ್ಯ. ವಸಂತಗಳಿಲ್ಲದೆ ಕಾಲ ಕಳೆದು ಹೋಗಿದೆ. ಹೊಸ ಚಿಗುರು ಬರಲು ಕಾಲವಿನ್ನೂ ಬರಲಿಲ್ಲವೆಂದು ಕೊಂಡ ಕೋಗಿಲೆಗಳು ಹಿಂತಿರುಗಿವೆ. ಒಂದು ಕ್ಷಣ ಕಳೆದುಕೊಂಡರೆ ಅದನ್ನು ಮತ್ತೆ ಪಡೆಯಲು ಬದುಕೆಲ್ಲಾ ಹುಡುಕಬೇಕಾದೀತು. ಒಂದು ನೆನಪನ್ನು ಮನದಲ್ಲಿ ಇರಿಸಿಕೊಂಡರೆ ಅದರಿಂದ ಬಿಡುಗಡೆ ಪಡೆಯಲು ಬದಕೆಲ್ಲಾ ಬೇಕಾಗುತ್ತೆ.

ನಾಲ್ಕು ದಿನಗಳಲ್ಲಿ ಅದೆಷ್ಟು ಬದಲಾವಣೆ ?

ಸಂತೋಷ ಗಂಧದ ಕಡ್ಡಿಯಂತೆ ಬೆಳಗಿತು. ವಿಷಾದ ಬೂದಿಯಂತೆ ಉಳಿಯಿತು.

ಹೃದಯವನ್ನು ಸ್ಪರ್ಶಿಸಿದರೆ ಕರುಳು ಕಿತ್ತುಬರುವಂತಹ ನೋವು....

ಬಾಗಿಲು ಸದ್ದಾಗುತ್ತಿದ್ದಂತೆಯೇ ಎದ್ದು ಹೋಗಿ ತೆಗೆದು ಬಂದಳು. ರಾಯಣ್ಣನ ಸ್ನೇಹಿತ ಬಂದಿದ್ದ 'ರಿಸರ್ವೇಶನ್ ಸಿಗಲಿಲ್ಲ', ವೆಯಿಟಿಂಗ್ ಲಿಸ್ಟ್‌ನಲ್ಲಿ ಕೊಟ್ಟಿದ್ದಾರೆ. ಬರ್ತ್ ಸಿಗುವುದು ಕಷ್ಟವಿಲ್ಲವೆಂದಿದ್ದಾರೆ."

"ಯಾವ ಟಿಕೆಟ್ ?" ಇಷ್ಟು ಹೊತ್ತಿಗೆ ಮೊದಲನೆ ಸಲ ಬಾಯಿಬಿಟ್ಟ ರಾಯಣ್ಣ.

"ಅದನ್ನೆಲ್ಲಾ ಸಿಸ್ಟರ್ ಹೇಳುತ್ತಾರೆ" ಎಂದು ಹೊರಡುತ್ತಿದ್ದವನು ನಿಂತು, "ಹಿಂದಕ್ಕೆ ತಿರುಗಿಬಂದ, ನೀನು ತುಂಬಾ ಅದೃಷ್ಟವಂತ ರಾಯಣ್ಣ. ಅದೃಷ್ಟವನ್ನು ಪಡೆಯುವುದು ಸುಲಭ. ಉಳಿಸಿಕೊಳ್ಳುವುದು ನಿನ್ನ ಕೈಯ್ಯಲ್ಲಿದೆ. ಸಿಸ್ಟರ್‌ಗೆ ನೋವುಂಟುಮಾಡಬೇಡ." ಎಂದು ಹೊರಟು ಹೋದ.

ರಾಯಣ್ಣ ಕಿರಣ್ಮಯಿ ಕಡೆಗೆ ಅರ್ಥವಾಗದವನಂತೆ ನೋಡಿದ.

"ನಾವು ಡೆಲ್ಲಿಗೆ ಹೋಗುತ್ತಿದ್ದೇವೆ. ಟೆಲಿಗ್ರಾಂ ಬಂದಿದೆ." ಎನ್ನುತ್ತಾ ಟೆಲಿಗ್ರಾಮನ್ನು ಕೊಟ್ಟಳು.

ಓದಿ, ನಿಧಾನವಾಗಿ ತಲೆ ಎತ್ತಿದ. ಅವನ ಕೈ ಬೆರಳುಗಳ ಕಂಪನ ಸ್ಪಷ್ಟವಾಗಿ ಕಾಣುತ್ತಿತ್ತು. ಅವನ ಕಣ್ಣಗಳಲ್ಲಿ ತೇವ ಚೆನ್ನಾಗಿ ಕಾಣುತ್ತಿತ್ತು. ಕರೆಯದೆಯೇ ಎಷ್ಟು ಸ್ವಪ್ನಗಳೋ ಈ ಕಣ್ಣಗಳಿಗೆ!

ಆ ಪ್ರಸ್ಥದ ಅರ್ಧ ರಾತ್ರಿ ಪೋಲೀಸರಲ್ಲದೆ ಪೋಸ್ಟ್‌ಮನ್ ಬಂದು ಈ ಟೆಲಿಗ್ರಾಂ ಕೊಟ್ಟದ್ದಿದ್ದರೆ — ಎಷ್ಟು ಚೆನ್ನಾಗಿರುತ್ತಿತ್ತು!

ಮಲ್ಲಿಗೆ ಹೂದಳಗಳ ಮೇಲೆ ಸಂತೋಷದ ಅಕ್ಷರಗಳು ಮಿನುಗುತ್ತಿದ್ದವು. ಪ್ರತಿ ಮನುಷ್ಯನಿಗೂ ಬದುಕಿನಲ್ಲಿ ಕೆಲವು ಮಧುರ ಕ್ಷಣಗಳಿರುತ್ತವೆ. ಉಳಿದ ಬದುಕೆಲ್ಲಾ ಆ ಮಧುರಗಳಿಗೆಗಳ ನೆನಪುಗಳು, ಸ್ಮೃತಿ ಮಾತ್ರವೇನಂತೆ! ಎಷ್ಟು ನಿಜ!

"ಏನು ಯೋಚಿಸುತ್ತಿದ್ದೀರಿ?" ಕಿರಣ್ಮಯಿ ಕೇಳಿದಳು.

"ಏನೂ ಇಲ್ಲ" ನಿರ್ಲಿಪ್ತನಂತೆ ಹೇಳಿದ.

"ನಮ್ಮ ಒಪ್ಪಂದದ ವಿಷಯ ಮರೆತುಬಿಟ್ಟತಾ? ಕೇಳಿದ ಕೂಡಲೆ ಹೇಳಿ ಬಿಡಬೇಕೆಂದು ಷರತ್ತು ಹಾಕಿದ್ದವರು ನೀವೇ ತಾನೆ?" ನಗುತ್ತಾ ಕೇಳಿದಳು.

"ನಾನು ಈಗ ಹೇಳಲಾರ ಕಿರಣ್. ನಿನ್ನನ್ನು ಬಲವಂತ ಮಾಡಬೇಡ. ಕಿರಣ್ಮಯಿಯ ಮುಖದ ಮೇಲೆ ಕಿರುನಗೆ ಮಾಸಲಿಲ್ಲ. "ಏಕೆ ಹಾಗಂದು ಕೊಳ್ಳುತ್ತಿದ್ದೀರಿ? ನೀವು ಆಡಬೇಕು. ಆಡೇ ಆಡುತ್ತೀರಿ." ಅವಳ ಸ್ವರ ದೃಢವಾಗಿ ಬದಲಾಯಿತು.

"ನಾನೀ ಕೊಲೆ ಮಾಡಲಿಲ್ಲ ನೀನಾದರೂ ನನ್ನನ್ನು ನಂಬು" ಎಂದಿದ್ದಿರಿ ನೀವು. ನಾನು ನಂಬಿದೆ. ಯಾವ ತಪ್ಪನ್ನು ಮಾಡಿಲ್ಲವೆಂದು ನಿಮ್ಮ ಅಂತರಾತ್ಮಕ್ಕೆ ಗೊತ್ತು ಅಂತಹದರಲ್ಲಿ ಯಾರೋ ನಿಮ್ಮ ಮೇಲೆ ಮಾಡದ ಅಪರಾಧ ಹೊರಿಸಲು ಪ್ರಯತ್ನಿಸಿದರೆ ಅದಕ್ಕೆ ನಿಮ್ಮ ಭವಿಷ್ಯ ಹಾಳು ಮಾಡಿಕೊಳ್ಳುವುದು ಸರೀನಾ? ಈ ಬದುಕು ನಮ್ಮದು, ನಮ್ಮ ಸುಖ, ಸಂತೋಷ, ವಿಜಯ ನಾವು ಅನುಭವಿಸಿದಂತೆ ಮತ್ತೊಬ್ಬರು ಅನುಭವಿಸಲಾರರೆಂಬುದನ್ನು ತಿಳಿದುಕೊಳ್ಳಬೇಕು. ನಮಗೋಸ್ಕರ ನಾವು ಬದುಕಬೇಕು. ಈ ಪರಿಸ್ಥಿತಿಯಲ್ಲಿ ನಿಮ್ಮ ಗುರಿ ಕ್ರಿಕೆಟ್. ನಿಮ್ಮ ದೃಷ್ಟಿಯನ್ನು ಆ ಗುರಿಯಮೇಲೆ ಕೇಂದ್ರೀಕರಿಸಬೇಕು."

"ನೀನು ಹೇಳುತ್ತಿರುವುದು ನಿಜವೇ ಕಿರಣ್, ಆದರೆ ಈ ಪರಿಸ್ಥಿತಿಯಲ್ಲಿ ಹತ್ತು ಜನರ ನಡುವೆ ಹೋಗಿ ಆಡುವುದು ನನ್ನಿಂದ ಸಾಧ್ಯವಿಲ್ಲ ಅನ್ನಿಸುತ್ತಿದೆ."

"ನೀವು ಹೀಗೆ ಭಯಪಡುವುದರಿಂದ ಈ ಜನರೆಲ್ಲಾ 'ನಿಜವಾಗಿಯೂ ತಪ್ಪು ಮಾಡಿದ್ದಾನೇನೋ' ಅಂದುಕೊಳ್ಳುತ್ತಾರೆ. ನಿಮ್ಮ ವಿರುದ್ಧವಾಗಿ ಮತ್ತಷ್ಟು ಪ್ರಚಾರ ಮಾಡುತ್ತಾರೆ. ಈ ಜನ ಫಾಸ್ಟ್ ಬೌಲರ್ ಕೈಯ್ಯಲ್ಲಿಯ ಚೆಂಡಿನಂತೆ ನಾವು ಬೀಸಿ ಹೊಡೆದರೆ ಎಲ್ಲೋ ಹೊರಟು ಹೋಗುತ್ತಾರೆ. ಸ್ವಲ್ಪ ಹೆದರಿದರೆ ನಮ್ಮ ಮೇಲೆ ಹಾರುತ್ತಾರೆ."

ರಾಯಣ್ಣ ಮೌನವಾಗಿದ್ದ.

"ಬೆಳಗ್ಗಿನಿಂದಲೂ ನಾವು ಏನೂ ತಿಂದಿಲ್ಲ. ಮೊದಲು ಟೀ ತರುತ್ತೇನೆ, ಅಷ್ಟರಲ್ಲಿ ನಿಮ್ಮ ಆಲೋಚನೆಯನ್ನು ಮುಗಿಸಿ." ನಗುತ್ತಾ ಹೇಳಿ ಒಳಗೆ ಹೊರಟು ಹೋದಳು.

ರಾಯಣ್ಣ ಪುಕ್ಕಲಲ್ಲ. ಆತ್ಮನ್ಯೂನತಾ ಭಾವನೆಯಿಂದ ಕುಗ್ಗಿ ಹೋಗುವವನೂ ಅಲ್ಲ. ಅನಿರೀಕ್ಷಿತವಾಗಿ ಬಿದ್ದ ಈ ಪೆಟ್ಟಿನಿಂದ ಚೇತರಿಸಿಕೊಳ್ಳಲಾರದೆ ಹೋಗುತ್ತಿದ್ದಾನೆ.

ಅವಳು ಮಾತ್ರ ತನ್ನ ಮುಖದಲ್ಲಿ ಕಿರುನಗೆ, ಧೈರ್ಯ ಪ್ರತಿಕ್ಷಣವೂ ಕಾಣುವಂತೆ ಪ್ರಯತ್ನಿಸುತ್ತಿದ್ದಳು.

ಕಾಲು ಗಂಟೆಯ ನಂತರ ಕಿರಣ್ಮಯಿ ಟ್ರೇಯೊಡನೆ ಮುಂದಿನ ರೂಮಿಗೆ ಹೋದಳು. ರಾಯಣ್ಣ ಕುಳಿತಿದ್ದ ಸ್ಥಿತಿಯಲ್ಲಿ ಯಾವ ಬದಲಾವಣೆಯೂ ಇರಲಿಲ್ಲ.

"ನಾನು ಸೋತು ಹೋದೆನಾ ?" ಅಂದುಕೊಂಡಳು. ಮನಸ್ಸೆಲ್ಲಾ ನೋವು. ಏನು ಮಾಡಬೇಕು ? ಏನು ಮಾಡಿ ತನ್ನ ಗಂಡನನ್ನು ಮತ್ತೆ ಈ ಕ್ಷೇತ್ರದಲ್ಲಿ ನಿರತನಾಗುವಂತೆ ಮಾಡಬೇಕು ? ಗಡ್ಡ ಬೆಳೆದು, ಕಣ್ಣು ಕಾಂತಿ ಕಳೆದುಕೊಂಡಿರುವ ಅವನನ್ನು ಈ ನಿರಾಶೆಯ ಆಳದಿಂದ ಹೇಗೆ ಮೇಲೆತ್ತಬೇಕು ?

ಅವಳು ಅವನ ಕಡೆಗೇ ನೋಡುತ್ತಿದ್ದಳು, ಅವನು ನಿಧಾನವಾಗಿ

ತಲೆ ತಿರುಗಿಸಿದ. ಅವಳೆಡೆಗೆ ನೋಡಿ ನಕ್ಕ. ಆ ನಗು ಹೂದಳಗಳು ಅರಳುತ್ತಿರುವಂತಿತ್ತವು. ಬಾಕ್ಸಿಂಗ್ ಪಂದ್ಯದಲ್ಲಿ ಎದುರಾಳಿ ಹೊಡೆದ ಪೆಟ್ಟಿಗೆ ಕುಸಿದು ಬಿದ್ದವನು ಸರ್ವಶಕ್ತಿಯನ್ನೂ ಕ್ರೋಢೀಕರಿಸಿಕೊಂಡು ಏಳುತ್ತಿರುವಾಗ ಪ್ರೇಕ್ಷಕರು ನೀಡುವ ಸ್ಫೂರ್ತಿಯಂತಿದೆ. ಅವಳು ಕೂಡಾ ನಕ್ಕಳು.

ತನ್ನಲ್ಲೇ ತಾನು ತುಂಬಾ ಹೊತ್ತು ಏನನ್ನೋ ಯೋಚಿಸುತ್ತಿರುವಂತೆ ಅವನು ಮೌನವಾಗಿದ್ದು, ಒಂದು ನಿರ್ಧಾರಕ್ಕೆ ಬಂದವನಂತೆ ಒಮ್ಮೆಗೆ ತಲೆಯೆತ್ತಿ, "ಲಕ್ಷ್ಮಿಯ ಬಗ್ಗೆ ನಿನಗೆ ಹೇಳಬೇಕು" ಅಂದ. ಅಷ್ಟು ಹೊತ್ತು ಅವನು ಯಾವುದರ ಬಗ್ಗೆ ಯೋಚಿಸುತ್ತಾ ಸಂದಿಗ್ಧಾವಸ್ಥೆಯಲ್ಲಿದ್ದನೆಂದು ಅವಳಿಗೆ ಆಗ ತಿಳಿಯಿತು. ಉತ್ಸಾಹದಿಂದ ಮುಂದಕ್ಕೆ ಬಾಗಿ, "ಗುಡ್ ಐಡಿಯಾ! ನನಗೂ ಅವಳ ಬಗ್ಗೆ ತಿಳಿದುಕೊಳ್ಳಬೇಕೆಂಬ ಕುತೂಹಲ, ಹೇಳಿ ಅಂದಳು.

ತುಂಬಾ ನೋವಿನಲ್ಲಿರುವವರನ್ನು ಹೀಗೆ 'ಹೆಚ್ಚಾಗಿ ಮಾತನಾಡಿಸಿ' ಮನಸ್ಸಿನಲ್ಲಿರುವುದನ್ನೆಲ್ಲಾ ಹೊರಗೆಡಹುವಂತೆ ಮಾಡುವುದು ಯಾವಾಗಲೂ ಒಳ್ಳೆಯದೇ. ಮುಖ್ಯವಾಗಿ ಇಂಟ್ರಾವರ್ಟ್‌ಗಳಿಗೆ.

ರಾಯಣ್ಣ ಹೇಳುವುದನ್ನು ಪ್ರಾರಂಭಿಸಿದ.

"ಲಕ್ಷ್ಮಿಯೊಡನೆ ನನ್ನ ಸ್ನೇಹ ಒಂದು ವರ್ಷದ ಹಿಂದೆ ಪ್ರಾರಂಭವಾಯಿತು." ಕಲಾವಿದರಿಗೆ, ಕ್ರೀಡಾಪಟುಗಳೂ ಸಾಮಾನ್ಯವಾಗಿ ಮಧ್ಯಮ ತರಗತಿಯಿಂದಲೇ ಹೆಚ್ಚಾಗಿ ಬರುತ್ತಿರುತ್ತಾರೆ. ಕೃಷಿ, ಹಠ, ಏನೋ ಸಾಧಿಸಬೇಕೆಂಬ ತಪನ ಸುಡುವ ಹೊಟ್ಟೆಗೆ ಹೆಚ್ಚಾಗಿರುತ್ತದೆ. ತಮ್ಮ ರಂಗದಲ್ಲಿ ಸ್ವಲ್ಪ ಸ್ವಲ್ಪ ಮೇಲೆ ಬರುವ ಸಮಯದಲ್ಲಿ ಅದರ ಪರಧಿಯೂ ವಿಸ್ತಾರಗೊಳ್ಳುತ್ತಿರುತ್ತದೆ. ಹೊಸ ಪರೀಕ್ಷೆಯುಗಳೂ, ಸಮಾಜದಲ್ಲಿ ಹೆಸರು, ಬೆಳೆಯುತ್ತಿರುವ ಕೀರ್ತಿ—ಎಲ್ಲಕ್ಕಿಂತ ಮುಖ್ಯವಾಗಿ ಆಪೋಸಿಟ್ ಸೆಕ್ಸ್ ವ್ಯಕ್ತಿಗಳ ಕಣ್ಣುಗಳಲ್ಲಿ ಮೆಚ್ಚುಗೆ ಪಡೆಯುವ ತವಕ ... ಇವೆಲ್ಲಾ ಕೇವಲ ಅನುಭವಿಸಿದವರಿಗೆ ಮಾತ್ರ ತಿಳಿಯುತ್ತದೆ. ಈ ಸಂತೋಷ ದೊಡ್ಡ

ಉದ್ದಿಮೆದಾರರಿಗೆ, ರಾಜಕೀಯ ನಾಯಕರಿಗೆ ಸಿಗುವುದಿಲ್ಲ. ಅದೊಂದು ಛಾನ್ಸ್, ಅದೇ ಕಲಾವಿದನಿಗೆ, ಕ್ರೀಡಾ ಪಟುವಿಗೆ ಹೊಸ ಉತ್ಸಾಹವನ್ನು ನೀಡುತ್ತದೆ, ಮತ್ತಷ್ಟು ಸಾಧಿಸಲು ಉತ್ತೇಜನ ನೀಡುತ್ತದೆ. ಆ ಸಮಯದಲ್ಲಿ ತಾನು ಎವರೆಸ್ಟ್ ಶಿಖರದ ಮೇಲಿರುವಂತೆ ಹೆಮ್ಮೆಪಡುತ್ತಿರುತ್ತಾರೆ.

ಕಿರಣ್ಮಯಿಗೆ ಇದೆಲ್ಲಾ ಗೊತ್ತು. ಇದಕ್ಕೆ ಸೈಕಾಲಜಿ ಓದಬೇಕಾಗಿಲ್ಲ. ಅವನು ಹೇಳುತ್ತಿರುವುದನು ಕೇಳುತ್ತಾ ಅವಳು ಅದನ್ನೇ ಆಲೋಚಿಸುತ್ತಿದ್ದಳು.

"ಅವತ್ತು ಮೊದಲ ಸೆಂಚುರಿ ಬಾರಿಸಿದೆ." ರಾಯಣ್ಣ ಹೇಳಿದ. "....ನಾವು ಡ್ರೆಸ್ಸಿಂಗ್ ರೂಮಿಗೆ ಹೋಗುತ್ತಿದ್ದಂತೆ ಕೆಲವು ಹುಡುಗಿಯರು ಬಂದು ಆಟೋಗ್ರಾಫ್‌ಗಳನ್ನು ಕೇಳಿದರು. ಅದು ತುಂಬಾ ಹೊಸ ಅನುಭವ, ಒಂದೆಡೆ ಸಂತೋಷ, ಮತ್ತೊಂದೆಡೆ ಏನೋ ತಿಳಿಯದ ಉದ್ವೇಗ! ಎಲ್ಲರಿಗೂ ಗಬಗಬ ಸಹಿಮಾಡಿಕೊಟ್ಟೆ. ಎಲ್ಲರೂ ಹೊರಟು ಹೋದರೂ ಒಬ್ಬ ಹುಡುಗಿ ಮಾತ್ರ ಅಲ್ಲೇ ನಿಂತಿದ್ದಳು. ನನಗೇನು ಮಾತನಾಡಬೇಕೋ ತೋಚಲಿಲ್ಲ.

"ನೀವ್ಯಾರು ?" ಕೇಳಿದೆ,

"ಲಕ್ಷ್ಮಿ"

"ಏನು ಓದುತ್ತಿದ್ದೀರಿ ?" ಹೇಳಿದಳು. ಆನಂತರ ಏನು ಮಾತನಾಡಬೇಕೆಂದೇ ತಿಳಿಯಲಿಲ್ಲ, ಸುತ್ತಲೂ ಎಲ್ಲರೂ ನನ್ನೆಡೆಗೇ ನೋಡುತ್ತಿದ್ದಾರೇನೋ ಎಂಬ ಭಯ.

"ಒಳಗೆ ಹೋಗಬೇಕು" ಅಂದೆ,

"ನನ್ನ ಪೆನ್ನು" ಅಂದಳು,

ನಾಲಿಗೆ ಕಚ್ಚಿಕೊಂಡೆ. ಮರೆತು ಸಹಿ ಮಾಡಿದ ನಂತರ ಜೇಬಿನಲ್ಲಿಟ್ಟುಕೊಂಡು ಬಿಟ್ಟಿದ್ದೆ. ತೆಗೆದು ಕೊಟ್ಟೆ. ಕೊಡುತ್ತಾ ಆ ಪೆನ್ ಕಡೆ ನೋಡಿದೆ. ತುಂಬಾ ಸಾಧಾರಣವಾದ ಪೆನ್ನು. ನನ್ನ ನೋಟವನ್ನು ಮತ್ತೊಂದು ರೀತಿ ಅರ್ಥ ಮಾಡಿಕೊಂಡವಳಂತೆ—

"ಅದು ನಮ್ಮ ತಾತ ಪ್ರಸೆಂಟ್ ಮಾಡಿದ ಪೆನ್, ಅವರು ಇತ್ತೀಚೆಗೆ ಹೋಗಿಬಿಟ್ಟರು" ಅಂದಳು.

ನಾನು ನೊಂದುಕೊಳ್ಳುವವನಂತೆ "ಐಯಾಮ್ ಸಾರಿ" ಅಂದೆ. ಆಗಲೇ ಆ ಹುಡುಗಿಯ ಮುಖದಲ್ಲಿ ಕಣ್ಣಿಟ್ಟು ನೋಡಿದೆ. ಹದಿನೆಂಟು ವರ್ಷಗಳಿರಬೇಕು. ಮುಗ್ಧ ಕಣ್ಣುಗಳು, ಗುಂಡನೆಯ ಮುಖ, ಆ ಹುಡುಗಿಯಲ್ಲಿ ಯಾವುದೋ ತಿಳಿಯದ ಆಕರ್ಷಣೆ ಇದೆ. ಉಹ್ಞೂ ಅಲ್ಲ. ಅದು ಆಕರ್ಷಣೆ ಅಲ್ಲ. ಯಾವುದೋ ತೇಜಸ್ಸಿನಿಂದ ಕೂಡಿದ ಅಂದ." ರಾಯಣ್ಣ ಸ್ವಲ್ಪ ತಡೆದ ಹೇಳುವುದನ್ನು. ಕಿರಣ್ಮಯಿ ತಲೆತಗ್ಗಿಸಿಕೊಂಡು ಕೇಳುತ್ತಿದ್ದಳು. ಮನಸ್ಸಿನ ಒಂದು ಮೂಲೆಯಲ್ಲಿ ಸ್ವಲ್ಪ ವಿಷಾದ. ಮುಖದಲ್ಲಿ ಕಾಣುತ್ತಿರಲಿಲ್ಲ. ಗಂಡನ ಸ್ನೇಹಿತೆಯ ಬಗ್ಗೆ ಹೆಂಡತಿ ಕೇಳಬಂದಾಗ ಹೇಗೆ ವರ್ತಿಸಬೇಕೆಂದು ಯಾವ ಸೈಕಾಲಜಿ ಪುಸ್ತಕದಲ್ಲೂ ಬರೆದಿರಲಿಲ್ಲ. ಅವನು ಮತ್ತೆ ಹೇಳಲು ಪ್ರಾರಂಭಿಸಿದ.

"ಅವಳು ಪೆನ್ ತೆಗೆದುಕೊಂಡು 'ಥ್ಯಾಂಕ್ಸ್' ಹೇಳಿ ಹೊರಟು ಹೋದಳು. ತಲೆ ತಗ್ಗಿಸಿಕೊಂಡು ಅವಳು ಹಾಗೆ ನಡೆದು ಹೋದದ್ದು ಏಕೋ ಚೆನ್ನಾಗಿ ನೆನಪಿನಲ್ಲುಳಿಯಿತು. ಚಿಕ್ಕಂದಿನಿಂದಲೂ ನಾನು ಕೂಡಾ ಇಂತಹ ಆತ್ಮೀಯತೆಗೆ ದೂರವಾಗಿ ಬೆಳೆದಿದ್ದುದೇ ಅದಕ್ಕೆ ಕಾರಣವಿರಬೇಕು. ಐದೂ ರೂಪಾಯಿಗಳ ಪೆನ್ನನ್ನು ಕೂಡಾ ಅಷ್ಟೊಂದು ಅಭಿಮಾನಿಸುವ ಲಕ್ಷ್ಮಿಯ ಸೆಂಟಿಮೆಂಟ್ ನನ್ನನ್ನು ತುಂಬಾ ಕಾಲ ಭೇಟಿಯಾಡಿತು. ಕೆಲವು ಭಾವನೆಗಳಿಗೆ ತರ್ಕಗಳಿರುವುದಿಲ್ಲ.

ವಾರದ ನಂತರ ರಾಜಾರಾವ್ ಒಂದು ಪಾರ್ಟಿಕೊಟ್ಟ. ಅವನ ಸ್ನೇಹಿತೆ ರಮಣಿಯೊಂದಿಗೆ ಮತ್ತೆ ನಾಲ್ವರು ಸ್ನೇಹಿತೆಯರು ಬಂದರು. ಅದರಲ್ಲಿ ಲಕ್ಷ್ಮಿ ಕೂಡಾ ಇದ್ದಳು. ಅದೇ ಎರಡನೆ ಸಲ ಅವಳನ್ನು ನೋಡಿದ್ದು. ಮಾತನಾಡುತ್ತಿದ್ದಂತೆ ಅವಳ ಮತ್ತಷ್ಟು ವಿವರಗಳು ಸಿಕ್ಕಿದವು. ಅವಳ ತಂದೆ ರಾಯಲಸೀಮೆಯಲ್ಲಿ ಬಿ.ಡಿ.ಓ. ಆಗಿ ಕೆಲಸ ಮಾಡುತ್ತಿದ್ದರಂತೆ. ಲಕ್ಷ್ಮಿಗೆ ಒಬ್ಬ ಅಣ್ಣ, ಒಬ್ಬ ತಮ್ಮ ತಂಗಿ ಇದ್ದರಂತೆ. ಅವರ ಮನೆಯಲ್ಲಿ ಕುಟುಂಬ ಸದಸ್ಯರ ನಡುವೆ ತುಂಬಾ ಸೂಕ್ಷ್ಮವಾದ ಸಂಬಂಧಗಳಿದ್ದವಂತೆ.

ಕೆಲವು ಮನೆಗಳಲ್ಲಿ ಹಾಗೇ. ಮನೆಯಲ್ಲಿ ಊಟ ಮಾಡುವಾಗ ಒಟ್ಟಿಗೇ ಕುಳಿತು ಸ್ನೇಹಿತರಂತೆ, ಆಪ್ತರಂತೆ ಮಾತುಕತೆ ನಡೆಸುತ್ತಾ ಇರುತ್ತಾರೆ.

ಅಂತಹ ಸುಂದರವಾದ ಸಂಸಾರದಿಂದ ಬಂದ ಲಕ್ಷ್ಮಿ ಒಮ್ಮೆಗೆ ತನ್ನವರನ್ನೆಲ್ಲಾ ಬಿಟ್ಟು ಹೊರ ಪ್ರಪಂಚದಲ್ಲಿರ ಬೇಕಾಗಿ ಬಂದಾಗ, ನೀರಿನಿಂದ ಹೊರಬಿದ್ದ ಮೀನಿನಂತೆ ವಿಲವಿಲನೆ ಒದ್ದಾಡಿಬಿಟ್ಟರು. ಒಂಟಿತನದಿಂದ ತುಂಬಾ ರಾತ್ರಿಗಳು ನಿದ್ರೆಗಳಿಲ್ಲದೆ ಕಳೆದಳಂತೆ.

ಆಗಲೇ ಪರಿಚಯವಾಯಿತು ಅವಳಿಗೆ ರಮಣಿಯೊಡನೆ.

ಸಾಮಾನ್ಯವಾಗಿ ನಾವು ಒಂದು ತರಗತಿಗಾಗಲೀ, ಹಾಸ್ಟೆಲ್‌ಗಾಗಲೀ ಸೇರಿದಾಗ ಮೊದಲು ಒಂದಿಬ್ಬರ ಪರಿಚಯವಾಗುತ್ತಾರೆ. ಮೊದಲನೆ ದಿನವೇ 'ತುಂಬಾ ಸ್ನೇಹ'ವಾಗಿ ಬಿಡುತ್ತದೆ. ನಂತರ ನಿಧಾನವಾಗಿ ಅವರು ಕಳಚಿಕೊಂಡು, ತಮ್ಮ ಅಭಿರುಚಿಗೆ ಸರಿ ಹೊಂದುವಂತಹವರೊಡನೆ ಮಾತ್ರ ನಿಜವಾದ ಸ್ನೇಹ ಉಳಿಯುತ್ತದೆ.

ಲಕ್ಷ್ಮಿ ತನ್ನ ಏಕಾಂಗಿತನವನ್ನು ಕಳೆಯಲು ರಮಣಿಯ ಜೊತೆ ತಿರುಗಾಡಲಾರಂಭಿಸಿದಳು,

ಈ ರಮಣಿ ಎಂಬ ಹುಡುಗಿ ಡೇರ್ ಅಂಡ್ ಡೆವಿಲ್. ತೆಳುವಳಿಕೆಯುಳ್ಳವಳೇ ಆದರೂ ಅವಳದು ನಾಯಕಿಯ ಪ್ರವೃತ್ತಿ—ಪರ್‌ವರ್ಟೆಡ್ ಪಾಪ್‌ಕಾರ್ನ್ ತಿನ್ನುತ್ತಾ ಹತ್ತಾರು ಹುಡುಗಿಯರನ್ನು ಹಿಂದೆ ಹಾಕಿಕೊಂಡು ಮಾರ್ನಿಂಗ್ ಷೋಗೆ ಹೋಗುವುದು – ಬಾಯ್ ಫ್ರೆಂಡ್ಸ್ ವಿವಿಧ ರೀತಿಯ ಅನುಭವಗಳೆಂಬ ಮರಳಿನ ಮೇಲೆ ಕಟ್ಟಿದ ಕಟ್ಟಡದಂತಹ ಬದುಕು.

'ಆಗ' ರಮಣಿ ನನಗೆ ಜಾಣೆಯಂತೆ ಕಂಡಳು. ಆದರೆ ಬಹಳ ಬೇಗನೆ ಅವಳೆಂದರೆ ಸಿಟ್ಟು, ಅಸಹ್ಯ ಉಂಟಾಗತೊಡಗಿತು. ಮತ್ತೊಂದಡೆ ಲಕ್ಷ್ಮಿಯೆಂದರೆ ಅನುಕಂಪ. . ಯಾವುದೋ ತಿಳಿಯದ ಅಭಿಮಾನ ! ನಮ್ಮ ಸ್ವಂತ ಜನ ಕೆಡುತ್ತಿದ್ದರೆ ಉಂಟಾಗುವ ಫೀಲಿಂಗ್. ಬಹುಶಃ ರಮಣಿಯಿಂದ ಲಕ್ಷ್ಮಿಯನ್ನು ದೂರಮಾಡಲೇ ಲಕ್ಷ್ಮಿಯೊಡನೆ ಪರಿಚಯ ಬೆಳೆಸಿಕೊಂಡೆ."

ಅದು ಆತ್ಮವಂಚನೆಯೆಂದು ಕಿರಣ್ಮಯಿಗೆ ಗೊತ್ತು. ಆದರೆ ಗಂಡಿನಲ್ಲಿ ಅಷ್ಟು ಮಾತ್ರ ಈಗೋ, ಹೆಣ್ಣನ್ನು ಆಕರ್ಷಿಸುವ ಪ್ರಯತ್ನ ಕ್ಷಮಾರ್ಹ !

ರಾಯಣ್ಣ ಮುಂದುವರೆಸಿದ. "ಲಕ್ಷ್ಮಿ ನನಗೆ ಹತ್ತಿರವಾದಳು. ನಿಧಾನ ವಾಗಿ ತನ್ನ ತಂದೆ-ತಾಯಿಯರ ಬಗ್ಗೆ ಇದ್ದ ಭಾವನೆ ಕಡಿಮೆಯಾಗುತ್ತಿದೆ ಯೆನ್ನಿಸಿತು. ಆದರೆ ನನಗೆ ದಿನ ದಿನಕ್ಕೂ 'ಸಮಯ'ದ ಬೆಲೆ ಅರಿವಾಗ ತೊಡಗಿತು. ಮುಂಚಿನಂತೆ ಸಾಧ್ಯವಾಗುತ್ತಿರಲಿಲ್ಲ. ಕ್ರಿಕೆಟ್‌ಗಾಗಿ ಹೆಚ್ಚು ಸಮಯ ಕಳೆಯ ಬೇಕಾಗಿ ಬರುತ್ತಿತ್ತು, ಅಷ್ಟರಲ್ಲಿ ನಮ್ಮ ಮದುವೆ ಸೆಟಲ್ ಆಯಿತು. ಹಾಸ್ಟೆಲ್ ಹೋಗಿ ಸ್ವೀಟ್ಸ್ ಕೊಟ್ಟು ಬಂದೆ. ಇನ್ವಿಟೇಷನ್ ಕೊಡಲು ಹೋದಾಗ ಕೂಡಾ ಸಂತೋಷವಾಗಿಯೇ ಇದ್ದಳು. ಮದುವೆಗೆ ತಪ್ಪದೆ ಬರುತ್ತೇನೆಂದಿದ್ದಳು. ಆದರೆ ಬರಲಿಲ್ಲ. ನಾನೂ ಅಷ್ಟಾಗಿ ತಲೆ ಕೆಡಿಸಿಕೊಳ್ಳಲಿಲ್ಲ. ನಮ್ಮ ಮದುವೆಯಾದ ನಂತರ ಒಂದು ಸಲ ಭೇಟಿಯಾಗೆಂದು ಚೀಟಿಯಲ್ಲಿ ಬರೆದು ಕಳುಹಿಸಿದಳು. ಆಗ ತಡೆಯ ಲಾರದೆ ನಾನೇ ಹೋದೆ. ಒಂದು ವಾರದಲ್ಲೇ ಅವಳು ತುಂಬಾ ಕುಗ್ಗಿ ಹೋಗಿದ್ದಳು. ನಿರಾಸೆಯಿಂದಿದ್ದಳು, ತುಂಬಾ ಅತ್ತಿರುವಂತೆ ಕಣ್ಣುಗಳು ಊದಿಕೊಂಡಿದ್ದವು. ಕಾರಣ ಕೇಳಿದಾಗ ಹೇಳಲಿಲ್ಲ. ಮನೆಯಿಂದ ಏನಾದರೂ ಕೆಟ್ಟ ಸುದ್ದಿ ಬಂದಿದೆಯಾ ಎಂದು ಕೇಳಿದಾಗ ಅಂತಹುದೇನೂ ಇಲ್ಲವೆಂದಳು. ತುಂಬಾ ವಿರಕ್ತಿಯಿಂದ ಇದ್ದಳು ಕಾರಣ ಮಾತ್ರ ಹೇಳಲಿಲ್ಲ. ನಾನು ಸ್ವಲ್ಪ ಸಮಾಧಾನ ಹೇಳಿದ ಮೇಲೆ ನಗುನಗುತ್ತಾ ಮಾತನಾಡಿದಳು, ಹತ್ತು ನಿಮಿಷ ಮಾತ್ರ ಅಲ್ಲಿದ್ದು ಬಂದು ಬಿಟ್ಟೆ ಅಷ್ಟೆ. ಅದೇ ನಾನವಳನ್ನು ಕೊನೆಯಸಲ ನೋಡಿದ್ದು, ಆ ರಾತ್ರಿ ಪೋಲೀಸರು ಬರುವವರೆಗೂ ಲಕ್ಷ್ಮಿ ಯನ್ನು ಇನ್ನು ನಾನು ನೋಡುವುದಿಲ್ಲವೆಂಬ ಕಹಿ ಸತ್ಯ ನನಗೆ ಗೊತ್ತಿರಲಿಲ್ಲ. ಇಂತಹ ಘೋರ ನಡೆಯುತ್ತದೆಂದು ಕನಸಿನಲ್ಲೂ ಎಣಿಸಿರಲಿಲ್ಲ." ರಾಯಣ್ಣನ ಸ್ವರ ನಡುಗಿತು. ಲಕ್ಷ್ಮಿಯ ಸಾವಿನಿಂದ ತನ್ನ ಮೇಲೆ ಬಿದ್ದ ಅಪವಾದದ ನೋವು ಮಾತ್ರವಲ್ಲ ಅದು. ಕಿರಣ್ಮಯಿ ಸುಮ್ಮನಿದ್ದಳು. ಅವನನ್ನು ಸಮಾಧಾನಪಡಿಸುವ ಪ್ರಯತ್ನವನ್ನೂ ಮಾಡಲಿಲ್ಲ. ಕೆಲವು ನೋವುಗಳನ್ನು ಕಾಲವೇ ಉಪಶಮನಗೊಳಿಸಬೇಕು."

"ಲಕ್ಷ್ಮಿ ನಿಮ್ಮನ್ನು ಪ್ರೀತಿಸಿದ್ದಳಾ? ನೀವು ಅವಳನ್ನು ಪ್ರೀತಿಸ ದಿದ್ದುದಕ್ಕಾಗಿ ನೊಂದುಕೊಂಡಿದ್ದಳಾ? ಅಂದರೆ ನಮ್ಮ ಮದುವೆ ಅವಳಿಗೆ

ಮನಃಕ್ಲೇಶವನ್ನು ಉಂಟು ಮಾಡಿತು? ಅವನು ಸ್ವಲ್ಪ ಚೇತರಿಸಿಕೊಂಡ ನಂತರ ಕೇಳಿದಳು, "ಛೇ .. ಅಂತಹುದೇನೂ ಇರಲಾರದು. ನನ್ನನ್ನು ಮದುವೆಯಾಗಲು ಬರುತ್ತಿದ್ದ ಹೆಣ್ಣುಗಳ ಬಗ್ಗೆ ತಿಳಿಸುತ್ತಿದ್ದೆ. ಅವಳಲ್ಲಿ ಅಂತಹ ಉದ್ದೇಶವಿದ್ದಿದ್ದರೆ ಆಗಲೇ ತಿಳಿದು ಬಿಡುತ್ತಿತ್ತು,

"ಅಂದರೆ ನಮ್ಮ ಮದುವೆಯ ಹಿಂದಿನವಾರ, ಹತ್ತು ದಿನಗಳಲ್ಲೇ ಏನೋ ನಡೆದಿರಬೇಕು" ಯೋಚಿಸುತ್ತಾ ಕೇಳಿದಳು ಕಿರಣ್ಮಯಿ.

"ನಿಜವೇ, ಅವತ್ತು ಸ್ವಲ್ಪ ಬಲವಂತಪಡಿಸಿ ಕೇಳಿದ್ದರೆ, ಹೇಳಿಬಿಡುತ್ತಿದ್ದಳೇನೋ. ನನ್ನ ಬಳಿ ಏನನ್ನೂ ಮುಚ್ಚಿಡುತ್ತಿರಲಿಲ್ಲ." ಅಂದ,

ಕಿರಣ್ಮಯಿ ಮಾತನಾಡಲಿಲ್ಲ, ಅವಳಿಗೆ ತುಂಬಾ ನೋವಾಗುತ್ತಿತ್ತು. ಆತ್ಮಹತ್ಯೆ ಎಂಬುದು ಒಂದು ರೀತಿಯ ತಾತ್ಕಾಲಿಕ ಉನ್ಮಾದಾವಸ್ಥೆಯಲ್ಲಿ ಮನುಷ್ಯರು ಮಾಡಿಕೊಳ್ಳುವ ಅನಾಹುತ. ಆ 'ಫಿಟ್' ಮೂಡ್ ಕಳೆದರೆ ಮತ್ತೆ ಅಂತಹ ಆವೇಶ ಇರುವುದಿಲ್ಲ. ತನ್ನ ಆತ್ಮಹತ್ಯೆ ರಾಯಣ್ಣನ ಮೇಲೆ ಇಂತಹ ಪರಿಣಾಮ ಬೀರುತ್ತದೆಂದು ತಿಳಿದಿದ್ದರೆ ಬಹುಶಃ ಅವಳು ಈ ಚರ್ಯೆ ತೆಗೆದುಕೊಳ್ಳುತ್ತಿರಲಿಲ್ಲವೇನೋ!

ಕಿರಣ್ಮಯಿಗೆ ಅವನ ಮೇಲೆ ವಿಪರೀತ ಅನುಕಂಪ ಮೂಡಿತು. ಅಪ್ರಯತ್ನವಾಗಿಯೇ ಕೈಗಳನ್ನು ಚಾಚಿದಳು. ಅವನು ಚಿಕ್ಕ ಹುಡುಗನಂತೆ ಆಡಿದ. ಅವಳಿಗೆದೆಲ್ಲಾ ತಮ್ಮ ಒಳ್ಳೆಯದಕ್ಕೆ ಬಂದಿದೆಯೋ. ಕೆಟ್ಟದಕ್ಕೆ ಬಂದಿದೆಯೋ ತಿಳಿಯಲಿಲ್ಲ.

ಒಂದು ಸಂಜೆಯಿಂದ ಮತ್ತೊಂದು ಸಂಜೆಯವರೆಗೆ ಸೇರಬೇಕೆಂದರೆ, ಕತ್ತಲು ಬೆಳಕಿನ ಬಾಗಿಲು ತೆಗೆದು ಒಂದು ಉದಯವನ್ನು, ಒಂದು ಮಧ್ಯಾಹ್ನವನ್ನು ದಾಟಬೇಕಂತೆ. ಕೋಗಿಲೆಯ ಸ್ವರ ಕೇಳಲು ಐದು ಋತುಗಳನ್ನು ದಾಟಬೇಕಂತೆ.

ನಿಜವಾದ ಒಂದು ಪ್ರೀತಿಯನ್ನು ಗೆಲ್ಲಲು ಅದೆಷ್ಟು ಪರೀಕ್ಷೆಗಳನ್ನು ಎದುರಿಸಬೇಕೋ! ಇದು ನಿಜಕ್ಕೂ ಅದೃಷ್ಟವೇನೋ! ಎಷ್ಟೋ ದಂಪತಿಗಳನ್ನು ವರ್ಷಾನುಗಟ್ಟಲೆ ಸೇರಿಸದ ಸಹಚರ್ಯೆ, ಒಂದು 'ಕಷ್ಟ'ದ ರೂಪದಲ್ಲಿ ಬಂದು ಎರಡೇ ದಿನಗಳಲ್ಲಿ ಹತ್ತಿರ ಮಾಡಿದವು.

when you sleep, with your head upon my breast, with smile on your lips....

a melting aching tenderness encirles me
for then, you are my child,
you clasp my unworthy feet.
And emotion over-powered,

with tears in my eyes, its god that you become father, son, lover or god,

my beloved, what are you ?

## ಅಧ್ಯಾಯ - ನಾಲ್ಕು

ಸಿಕಿಂದ್ರಾಬಾದ್ ಸ್ಟೇಷನ್‌ನಲ್ಲಿ ರೈಲು ಚಲಿಸಲು ಸಿದ್ಧವಾಗಿತ್ತು. ಕಿರಣ್ಮಯಿ ಪ್ಲಾಟ್‌ಫಾರಂ ಮೇಲೆ ನಿಂತಿದ್ದಾಳೆ. ರಾಯಣ್ಣ ರೈಲಿನೊಳಗೆ ಕಿಟಕಿ ಬಳಿ ಕುಳಿತಿದ್ದಾನೆ. ಇಬ್ಬರೂ ಏನು ಮಾತನಾಡಬೇಕೆಂದು ತೋಚದೆ ಒಬ್ಬರನ್ನೊಬ್ಬರು ನೋಡಿಕೊಳ್ಳುತ್ತಿದ್ದರು. ಕಿರಣ್ಮಯಿಗೆ ರಿಸರ್ವೇಶನ್ ಸಿಗಲಿಲ್ಲ. ಆ ವಿಷಯ ಅವಳಿಗೇನೂ ನೋವುಂಟು ಮಾಡಲಿಲ್ಲ ಕಾರಣ ರಾಯಣ್ಣನಲ್ಲಿ ಬೆಳಗಿನಿಂದ ಕಾಣುತ್ತಿದ್ದ ಸ್ಪಷ್ಟವಾದ ಬದಲಾವಣೆ ! ಅವಳು ಏಳುವ ವೇಳೆಗಾಗಲೇ ಅವಳು ಅವನ ಪ್ರಾಕ್ಟೀಸಿಗೆ ಹೊರಟು ಹೋಗಿದ್ದ. ಮತ್ತೆ ಬರುವ ವೇಳೆಗೆ ಹಿಂದಿನ ದಿನ ಅವನ ಮುಖದಲ್ಲಿದ್ದ ವಿಷಾದದ ಛಾಯೆ ಇರಲಿಲ್ಲ. ಪ್ರಯಾಣಕ್ಕೆ ಎಲ್ಲಾ ಏರ್ಪಾಡುಗಳನ್ನೂ ಮಾಡಿಕೊಂಡಿದ್ದರೂ, ಜೊತೆಗೆ ಹೋಗಬೇಕೆಂಬ ತನ್ನ ಯೋಚನೆಯನ್ನು ಬದಲಾಯಿಸಿಕೊಂಡಿದ್ದಳು ಕಿರಣ್ಮಯಿ.

"ಒಂಟಿಯಾಗಿ ಹೋಗುತ್ತಿದ್ದೇನೆಂಬ ನೋವಿಲ್ಲ ಕಿರಣ್ಮಯಿ. ನಮ್ಮ ಕುಟುಂಬ ಕಾಗೆಗಳ ನಡುವೆ ನಿನ್ನನ್ನು ಒಂಟಿಯಾಗಿ ಬಿಟ್ಟು ಹೋಗಲು ನನಗೆ ಮನಸ್ಸಿಲ್ಲ." ರಾಯಣ್ಣ ಹೇಳಿದ.

"ಈ ಕಾಗೆಗಳ ಕಾಟದಿಂದ ತಪ್ಪಿಸಿಕೊಳ್ಳುವುದು ನನಗೇನೂ ಕಷ್ಟವಿಲ್ಲ ಬಿಡಿ. ನೀವು ಸಂತೋಷದಿಂದ ಹೋಗಿ ಲಾಭವಾಗಿ ಹಿಂತಿರುಗಿ ಸಾಕು," ಮನಸ್ಪೂರ್ತಿಯಾಗಿ ಹೇಳಿದಳು ಕಿರಣ್ಮಯಿ.

ಆವನಲ್ಲಿ ಸ್ಥಿರವಾಗಿದ್ದ ಆತ್ಮಸ್ಥೈರ್ಯ ಆವಳಿಗೆ ಬೆಟ್ಟದಷ್ಟು ಬಲ ನೀಡಿತ್ತು,

ಗಾರ್ಡ್ ಹಸಿರು ಬಾವುಟ ತೋರಿಸುತ್ತಿದ್ದಾನೆ. ಹೊರಡುತ್ತಿದ್ದೇನೆಂದು ರೈಲು ಕೂಗು ಹಾಕಿತು. ರಾಯಣ್ಣನ ಕೈಗಳು ಕಿರಣ್ಮಯಿಯ ಕೈಗಳನ್ನು ಮತ್ತಷ್ಟು ಬಿಗಿಯಾಗಿ ಹಿಡಿದವು. "ಹೇಳಬಾರದೆಂದು ಗೊತ್ತು ಕಿರಣ್ಮಯಿ. ಆದರೂ ಏನೂ ಹೇಳದೆ ಹೋಗುವುದಕ್ಕಿಂತಲೂ ತಿಳಿದಿರುವ ಆ ಪದವನ್ನು ಉಚ್ಚರಿಸದೆ ಹೋಗಲು ಮನಸ್ಸು ಬರುತ್ತಿಲ್ಲ. "ಥ್ಯಾಂಕ್ಸ್ ಕಿರಣ್ಮಯಿ" ಅಂದ. ಶ್ರಾವಣ ಮೋಡಗಳು ಶರೀರವನ್ನು ಪುಲಕಿತಗೊಳಿಸಿದರೆ, ಮನಸ್ಸು ಕಾರ್ತೀಕ ಹುಣಿಮೆ ಬೆಳದಿಂಗಳಂತೆ ಮೂಡಿ, ಅದುವರೆವಿಗೂ ಕಿರಣ್ಮಯಿ ಪಟ್ಟ ನೋವೆಲ್ಲಾ ಮಾಯವಾಗಿ ಮುಖ ಸಂತೋಷದಿಂದ ಅರಳಿತು, ಉದ್ವೇಗ ಮಾತುಗಳನ್ನು ನುಂಗಿ ಹಾಕಿದವು.

"ಏನನ್ನಾದರೂ ಹೇಳು ಕಿರಣ್ಮಯಿ" ರಾಯಣ್ಣ ಕೇಳಿದ.

"ಲೈಫ್ ಈಸ್ ಎ ಛಾಲೆಂಜ್ ಫೇಸ್ ಇಟ್."

ರೈಲು ಹೊರಟಿತು.

ಕಿರಣ್ಮಯಿ ಸೂಟ್‌ಕೇಸಿನಲ್ಲಿ ಬಟ್ಟೆಗಳನ್ನು ಹೊಂದಿಸಿಡಲು ಪ್ರಾರಂಭಿಸಿದಳು. ಅವಳ ಮನಸ್ಸು ಮಾತ್ರ ಹಿಂದಿನ ದಿನ ಲಾಯರ್ ಚಿರಂಜೀವಿಯೊಡನೆ ನಡೆದ ಸಂಭಾಷಣೆಯನ್ನೇ ಮೆಲುಕು ಹಾಕುತ್ತಿತ್ತು. ರಾಯಣ್ಣ ಡೆಲ್ಲಿಗೆ ಹೋದ ಕೂಡಲೆ ಅವಳು ಚಿರಂಜೀವಿಯನ್ನು ಭೇಟಿ ಮಾಡಿದ್ದಳು.

"ಪೋಲೀಸರು ಛಾರ್ಜ್‌ಶೀಟ್ ಫೈಲ್ ಮಾಡಲು ಟೈಮಿದೆಯೆಂದು ಹೇಳಿದ್ದರು. ಈಗ ನಾನು ಏನಾದರೂ ಮಾಡಲು ಇದ್ದರೆ ತಿಳಿಸಿ" ಕೇಳಿದಳು.

"ನೀವೇನು ಮಾಡಬೇಕು, ಮಾಡಬಲ್ಲಿರಿ ಎಂದು ಹೇಳುವುದಕ್ಕೆ ಮುಂಚೆ, ಈ ಕೇಸಿನಲ್ಲಿ ನಮಗೇನು ಬೇಕು ಎಂದು ಯೋಚಿಸೋಣ. ರಾಯಣ್ಣ ಕೊಲೆ ಮಾಡಿಲ್ಲವೆಂದು ನಾವು ನಂಬುತ್ತಿದ್ದೇವಿ. ಹಾಗಾದರೆ ಈ ಕೊಲೆಯನ್ನು ಯಾರು ಮಾಡಿದರು? ಏಕೆ ಮಾಡಿದರು? ನಿಜಕ್ಕೂ ಇದು ಕೊಲೆಯಾ? ಆತ್ಮಹತ್ಯೆಯಾ ಎಂಬ ಪ್ರಶ್ನೆಗಳಿಗೆ ನಮಗೀಗ ಉತ್ತರಗಳು ಬೇಕಾಗಿವೆ." ಕಿರಣ್ಮಯಿ ಹೌದೆಂಬಂತೆ ತಲೆ ಆಡಿಸಿದಳು.

"ಮೊದಲು ಆ ಹಾಸ್ಟೆಲ್ ವಿಷಯವೇ ತುಂಬಾ ಅಸ್ತವ್ಯಸ್ತವಾಗಿದೆ. ವಾರ್ಡನ್, ಕೇರ್‌ಟೇಕರ್ಸ್ ಯಾರೂ ಇಲ್ಲದಿರುವುದು. ಹೊರಗಿನವರು ಮುಖ್ಯವಾಗಿ ಗಂಡಸರು, ಯಾವಾಗೆಂದರೆ ಆವಾಗ ಒಳಗಿನ ಕೋಣೆಗಳಲ್ಲಿರುವುದು, ಯಾವ ಲೇಡೀಸ್ ಹಾಸ್ಟೆಲ್‌ಗಳಲ್ಲೂ ನಡೆಯಬಾರದ ವಿಷಯಗಳು! ಹುಡುಗಿಯರಿಗೆ ಅನಾರೋಗ್ಯಕರವಾದ ವಾತಾವರಣವಿದು. ಇನ್ನು ರಾಯಣ್ಣ ಹೇಳಿದ ಪ್ರಕಾರ ಲಕ್ಷ್ಮಿ ತುಂಬಾ ಒಳ್ಳೆಯವಳು, ಮುಗ್ಧಳು. ರಾಯಣ್ಣ ನನ್ನು ಬಿಟ್ಟು ಬೇರೆ ಯಾರೊಡನೆಯೂ ಸಲಿಗೆ, ಸ್ನೇಹ ಮಾಡಲಿಲ್ಲ. ಅಂತಹುದರಲ್ಲಿ ಕನ್ಯೆಯಲ್ಲವೆಂದು ಪೋಸ್ಟ್‌ಮಾರ್ಟಂ ರಿಪೋರ್ಟ್‌ನಲ್ಲಿದೆಯೆಂದರೆ ನಮಗೆ, ರಾಯಣ್ಣನಿಗೆ ತಿಳಿಯದ ಕಥೆ ಏನೋ ನಡೆದಿರಬೇಕು. ಅಂತಹ ಹಾಸ್ಟೆಲ್‌ಗಳಲ್ಲಿ ಇಂತಹ ರಹಸ್ಯಗಳು ಹಾಗೆಯೇ ನಿಂತು ಹೋಗುವುದಿಲ್ಲ. ಯಾರಿಗಾದರೂ ಸ್ವಲ್ಪವಾದರೂ ತಿಳಿದೇ ಇರುತ್ತದೆ. ಅದನ್ನು ಅವರಿಂದ ನಾವು ತಿಳಿದುಕೊಳ್ಳಬೇಕು."

"ನಿಜ ಲಾಯರ್‌ರವರೇ ನಾವು ಹೋಗಿ ಎನಕ್ವಯರಿ ಮಾಡಿದರೆ ಕೆಲವು ವಿಷಯಗಳು ಹೊರಬರುವುದು. ಕೆಲವು ಹುಡುಗಿಯರು ತಮಗೆ ತಿಳಿದಿರುವುದನ್ನು ನಾಲ್ಕು ಜನಕ್ಕೆ ಹೇಳಿಕೊಳ್ಳಬೇಕೆಂದಿರುತ್ತಾರೆ. ಆದರೆ ಅವರಷ್ಟಕ್ಕೆ ಅವರೇ ಬಂದು ಹೇಳುವುದಿಲ್ಲ. ಒಮ್ಮೆ ಹೋಗಿ ಕೇಳಿದರೆ

ಯಾವುದೋ ಒಂದು ರೀತಿಯ ಅನುಮಾನವನ್ನು ವ್ಯಕ್ತಪಡಿಸುತ್ತಾರೆ. ನಾವು ಹೋಗೋಣವಾ ?" ಉತ್ಸಾಹದಿಂದ ಕೇಳಿದಳು ಕಿರಣ್ಮಯಿ.

ಚಿರಂಜೀವಿ ನಕ್ಕುಬಿಟ್ಟ. "ನೋಡಮ್ಮ, ನಾನು ಲಾಯರ್. ಪೆರ್ರಿಮೇಸನ್‌ನಂತೆ ಅಪರಾಧ ಪರಿಶೋಧಕನಲ್ಲ. ನಮ್ಮ ಪ್ರಜೆಗಳು ಅಮೇರಿಕನ್ನರಂತಲ್ಲ. ಕೊಲೆ ನಡೆದರೆ ಎದುರಿಗಿದ್ದು ಪ್ರತ್ಯಕ್ಷವಾಗಿ ನೋಡಿದ್ದರೂ ಈ ಕಾನೂನಿನ ಪದ್ಧತಿಗೆ ಹೆದರಿ ಆ ವಿಷಯವನ್ನು ಮಹಾ ರಹಸ್ಯವಾಗಿ ಬಚ್ಚಿಟ್ಟುಕೊಂಡಿರುತ್ತಾರೆ. ನನ್ನ ಕೆಲಸ ರಾಯಣ್ಣ ಕೊಲೆ ಮಾಡಿಲ್ಲ ಎಂದು ನಿರೂಪಿಸುವವರೆಗೆ ಮಾತ್ರ. ಕೊಲೆಗಾರ ಯಾರೆಂದು ಕಂಡು ಹಿಡಿಯುವುದಲ್ಲ. ನಾನು ನೇರವಾಗಿ ಹೇಳುತ್ತಿರುವುದಕ್ಕೆ ಬೇಸರ ಪಡಬೇಡಿ."

"ನೀವು ಹೇಳೋದು ನಿಜ, ಐಯಾಮ್ ಸಾರಿ, ಆದರೆ ನಾನು ಈ ವಿಷಯದಲ್ಲಿ ಮಾಡುವುದೇನೆಂದು ಹೇಳಬಹುದಲ್ಲ."

"ಹೇಳ್ತೀನಿ. ಲಾ ಓದಿರುವವನು, 'ಲಾ'ನಲ್ಲಿಯ ಲೂಪ್ ಹೋಲ್‌ಗಳನ್ನು ಚೆನ್ನಾಗಿ ತಿಳಿದುಕೊಂಡಿರುವವನು, ಕಾನೂನಿನ ಪರಿಧಿಯಲ್ಲಿ, ಕಾನೂನಿಗೆ ಅನುಗುಣವಾಗಿ ಹೇಗೆ ನಡೆದುಕೊಳ್ಳಬೇಕೆಂದು ನಾನು ತಿಳಿಸುತ್ತೇನೆ. ನೀವು ಹಾಗೆ ಮಾಡಿ, ನಿಮ್ಮ ಬಗ್ಗೆ.... ಅಂದರೆ ರಾಯಣ್ಣನ ಹೆಂಡತಿಯ ಬಗ್ಗೆ ತಿಳಿದವರಾರಾದರೂ ಇದ್ದರಾ ಹಾಸ್ಟೆಲ್‌ನಲ್ಲಿ ?"

"ಇಲ್ಲ. ಮದುವೆಗೆ ಹಾಸ್ಟೆಲಿನ ಹುಡುಗಿಯರು ಯಾರೂ ಬಂದಿರಲಿಲ್ಲವೆಂದು ಅವರೇ ಹೇಳುತ್ತಿದ್ದರು. ಅವರ ಸ್ನೇಹಿತ ರಾಜಾರಾವ್ ಕೂಡಾ ಆ ಸಮಯದಲ್ಲಿ ಊರಿನಲ್ಲಿರಲಿಲ್ಲವಂತೆ."

"ಗುಡ್. ಹಾಗಾದರೆ ನಾಳೆಯಿಂದಲೇ ನೀವು ಆ ಹಾಸ್ಟೆಲಿನಲ್ಲಿ ಕೆಲವು ದಿನಗಳಿರುವಂತೆ ಏರ್ಪಾಟುಮಾಡುತ್ತೇನೆ. ನಿಮಗೆ ಮದುವೆಯಾಗಿರುವ ವಿಷಯವಾಗಲೀ, ನೀವು ರಾಯಣ್ಣನ ಹೆಂಡತಿಯೆಂಬ ವಿಷಯವಾಗಲೀ ನಿವಾಗೇ ಅಲ್ಲಿ ಹೇಳಬೇಡಿ. ರಾಯಣ್ಣ ಡೆಲ್ಲಿಯಿಂದ ಹಿಂತಿರುಗಲು ಇನ್ನೂ ಎಷ್ಟು ದಿನ ಬೇಕಾಗುತ್ತದೆ ?"

"ಒಂದು ವಾರ, ಹತ್ತು ದಿನಗಳು ಆಗಬಹುದು."

"ಹಾಗಾದರೆ ಹತ್ತು ದಿನಗಳ ಕಾಲ ಹಾಸ್ಟೆಲಿನಲ್ಲಿ ಯಾರಿಗಾದರೂ ಗೆಸ್ಟಾಗಿ ಇರಿ. ಕಾಲೇಜು ಅಡ್ಮೀಷನ್‌ಗಾಗಿ ಬಂದಿರುವಂತೆ ಹೇಳಬಹುದು. ನಮ್ಮ ಕೇಸಿಗೆ ಕೆಲಸಕ್ಕೆ ಬರುವಂತಹ ವಿಷಯಗಳಷ್ಟೇ ಅಲ್ಲ, ಆ ಹಾಸ್ಟೆಲಿನಲ್ಲಿ ನಡೆಯುವ ಪ್ರತಿ ವಿಷಯವೂ ನನಗೆ ಬೇಕು. ಲಕ್ಷ್ಮಿಯಂತಹ ಮುಗ್ಧ ಹುಡುಗಿಯರು ತಮ್ಮವರನ್ನೆಲ್ಲಾ ಬಿಟ್ಟು ಓದಿಗಾಗಿ ಬಂದರೆ ರಕ್ಷಣೆ ಕಲ್ಪಿಸಲು ಇರುವ ಹಾಸ್ಟೆಲ್‌ಗಳಲ್ಲಿ ಇಂತಹ ಅಪಚಾರಗಳು ನಡೆಯಲು ಏನು ಕಾರಣ ಗಳೆಂದು ತಿಳಿದುಕೊಳ್ಳಬೇಕು. ಒಬ್ಬ ಸೈಕಾಲಜಿಸ್ಟ್ ಆಗಿ ಇಂದಿನ ಹುಡುಗಿ ಯರಲ್ಲಿ ಬದಲಾವಣೆ ತರುತ್ತಿರುವುದರ ಮೂಲ ಕಾರಣಗಳೇನೆಂದು ತಿಳಿದು ಕೊಳ್ಳಿ. ಏನಾದರೂ ಸಮಸ್ಯೆ ಎದುರಾದರೆ ನನ್ನನ್ನು ಸಂಪರ್ಕಿಸಿ. ಈ ಹಾಸ್ಟೆಲ್ ವಿಷಯದಲ್ಲಿ ನೇರವಾಗಿ ರಂಗಕ್ಕಿಳಿಯಲೂ ನಾನು ಸಿದ್ಧ." ಚಿರಂಜೀವಿ ಹೇಳಿದ. ಅವನ ಮಾತಿನಲ್ಲಿ ಆವೇಶ ಕಾಣುತ್ತಿತ್ತು ಅವನ ಮಗಳು ಗುಂಟೂರು ಮೆಡಿಕಲ್ ಹಾಸ್ಟೆಲ್‌ನಲ್ಲಿದ್ದಳು.

ಕಿರಣ್ಮಯಿ ಊಹಿಸಿದಂತೆಯೇ ಮನೆಯಲ್ಲಿಯ ಪರಿಸ್ಥಿತಿ ಅಸಹ್ಯ ವಾಗಿಯೇ ಇತ್ತು. ಅತ್ತೆ, ಮಾವ ನಾದಿನಿಯರು ಮನೆಯಲ್ಲೇ ಇದ್ದರು. ತನ್ನ ಕಡೆಯವರಿಗೆ ಅವರಿಗೆ ಇನ್ನೂ ಘರ್ಷಣೆಗಳು ನಡೆಯುತ್ತಲೇ ಇದ್ದವು. ಕಿರಣ್ಮಯಿ ಮನೆಯೊಳಗೆ ಹೆಜ್ಜೆ ಇರಿಸುತ್ತಿದ್ದಂತೆ ಎರಡೂ ಕಡೆಯಿಂದ ಪ್ರಶ್ನೆ ಗಳ ಮಳೆಯೇ ಸುರಿಯಲಾರಂಭಿಸಿದವು. ರಾಯಣ್ಣ ಏನಾದ? ಎಲ್ಲಿದ್ದಾನೆ? ಪೋಲೀಸರೇನೆಂದರು ಮನೆಗೆ ಬರದೆ ಬೇರೇಲ್ಲಿಗೋ ಹೋಗಲು ಕಾರಣವೇನು? ಇತ್ಯಾದಿ.... ಇತ್ಯಾದಿ. ಅವಳ ಮಾನಸಿಕ ಆಂದೋಲನ ವಾಗಲೀ, ಘರ್ಷಣೆಯಾಗಲೀ ಅವರ ದೃಷ್ಟಿಗೆ ಬರಲಿಲ್ಲ.

ಕಿರಣ್ಮಯಿ ಇವೆಲ್ಲಕ್ಕೂ ಅತೀತಳಾದಂತೆ ತನ್ನ ರೂಮಿನಲ್ಲಿ ಮಲಗಿ ಹಾಯಾಗಿ ನಿದ್ರಿಸಿದಳು. ಬೆಳಗ್ಗೆ ಏಳುತ್ತಿದ್ದಂತೆ ಮತ್ತೆ ಆಕ್ರಮಣ ಪ್ರಾರಂಭವಾಯಿತು. ಅದಾವುದಕ್ಕೂ ತಲೆಕೆಡಿಸಿಕೊಳ್ಳದವಳಂತೆ ತನ್ನ

ಸೂಟ್‌ಕೇಸ್‌ನ್ನು ತುಂಬಿಸಿಕೊಳ್ಳಲಾರಂಭಿಸಿದಳು. ಕಿರಣ್ಮಯಿ ಬಾಯಿ ಬಿಚ್ಚದೆ, ತನ್ನ ರೂಮಿನಿಂದ ಹೊರಬರದೇ ಕುಳಿತುಕೊಂಡಿದ್ದು ಅವರ ಅಹಂಗೆ ಪೆಟ್ಟು ಬಿದ್ದಂತಾಯಿತು. ಮತ್ತೆ ಪ್ರಶ್ನೆಗಳು.... ಎಲ್ಲಿಗೆ ? ಏತಕ್ಕೆ ? ಯಾರೊಡನೆ ? ಕಿರಣ್ಮಯಿ ಯಾವುದಕ್ಕೂ ಉತ್ತರಿಸಲಿಲ್ಲ.

"ಏನಮ್ಮಾ ತಾಯಿ ರೆಡೀ ಆಗ್ತಿದ್ದಿ ? ಇದು ನಿನ್ನ ಬಟ್ಟೆಗಳೇನಾ ?" ಅತ್ತೆ ಕೇಳಿದಳು.

ಕಿರಣ್ಮಯಿ ತನ್ನ ಸೀರೆಗಳೊಡನೆ ಪಂಜಾಬಿ ಡ್ರೆಸ್ಸನ್ನೂ ಮಡಿಸಿಟ್ಟು ಕೊಳ್ಳುತ್ತಿರುವುದನ್ನು ಕಂಡು,

"ಹೌದು" ನೇರವಾಗಿ ಉತ್ತರಿಸಿದಳು ಕಿರಣ್ಮಯಿ.

"ಮದುವೆಗೆ ಮುಂಚಿನ ವಿಷಯಗಳೇನೇ ಇದ್ದರೂ ಈಗ ಇವೆಲ್ಲಾ ನಮ್ಮನೇಲಿ ಸರಿಬರೋಲ್ಲ."

"ಈಗ ನಾನು ನಿಮ್ಮ ಮನೆಗೆ ಬರುತ್ತಿಲ್ಲ ಬಿಡಿ" ಎಂದು ಹೇಳಲಿದ್ದವಳು ಸುಮ್ಮನಾದಳು.

ತಾನೆಲ್ಲಿಗೆ ಹೋಗುತ್ತಿರುವುದು, ಏಕೆ ಹೋಗುತ್ತಿರುವುದು ಎಂಬು ದನ್ನು ಹೇಳದಿರುವಾಗ ವಾದ ಅನವಶ್ಯಕ. ಕಿರಣ್ಮಯಿ ಮಾತನಾಡಲಿಲ್ಲ.

"ನೋಡಮ್ಮ ಬೀಗಿತ್ತಿ ! ನಿಮ್ಮಗಳು ಯಾವ ಪ್ರಶ್ನೆಗೂ ಉತ್ತರ ಕೊಡ್ತಿಲ್ಲ. ಮೌನಗೌರಿ ಆಗಿದ್ದಾಳೆ" ಕೋಪದಿಂದ ಕಿರುಚಿದಳು ಆಕೆ.

"ಎಲ್ಲಿಗೇ ಪ್ರಯಾಣ ? ಈಗಾಗಲೇ ನಿನ್ನಿಂದಾಗಿ ಕೇಳಬಾರದಂತಹ ಮಾತುಗಳನ್ನು ಅನ್ನಿಸಿಕೊಳ್ಳುತ್ತಿದ್ದೇವೆ. ಇನ್ನು ಏನು ಕಾದಿದೆಯೋ ?" ಕಟುವಾಗಿ ಹೇಳಿದಳು ತಾಯಿ.

ತಾಯಿಯೆಂದರೆ ದೇವತಾ ಸ್ವರೂಪವೆಂದೂ, ಅಪ್ಯಾಯತೆಗೆ, ಅನುರಾಗಕ್ಕೆ ಮತ್ತೊಂದು ರೂಪವೆಂದೂ, ಸ್ತ್ರೀ ಎಂದರೇನೇ ಸೌಜನ್ಯಕ್ಕೆ, ಮೃದುತ್ವಕ್ಕೆ ಪ್ರತೀಕವೆಂದು ಭಾವಿಸುವ ಸಮಾಜದಲ್ಲಿ ಇಬ್ಬರು ತಾಯಿ ಯರು !! ಇವರು ತಾಯಿಯರಾಗಬಲ್ಲರೇ ವಿನಃ ಮಾತೃ ಮೂರ್ತಿಗಳಾಗುವು ದಿಲ್ಲ. ಲೋಪವೆಲ್ಲಿದೆ ? ವಿದ್ಯೆ, ಸಂಸ್ಕಾರವಿಲ್ಲದ ಜಾತಿಯಲ್ಲಿ ಹುಟ್ಟಿದವ ರಾದ್ದರಿಂದಲೋ—ಇರಲಾರದು. ಉನ್ನತ ವರ್ಗಕ್ಕೆ, ಉನ್ನತ ಕುಟುಂಬಕ್ಕೆ

ಸೇರಿದ ವಿದ್ಯಾವಂತ ಸ್ತ್ರೀಯರೂ ಕೂಡಾ ಇದೇ ರೀತಿ ವರ್ತಿಸುವುದನ್ನು ಕಿರಣ್ಮಯಿ ಕಂಡಿದ್ದಾಳೆ. ಎಂತಹ ನಾಗರೀಕ ಕುಟುಂಬದಲ್ಲಾದರೂ ಒಬ್ಬ ಹೆಣ್ಣಿನ ನೋವಿಗೆ ಮತ್ತೊಬ್ಬ ಹೆಣ್ಣೇ ಆಗಿರುತ್ತಾಳೆ. ಇಲ್ಲದಿದ್ದರೆ ಅವರ ಭಾಷೆ ಸ್ವಲ್ಪ ನಾಗರೀಕವಾಗಿರಬಹುದು ಅಷ್ಟೆ !

"ಇಷ್ಟೆಲ್ಲಾ ಬಡುಕೊಳ್ತಿದ್ದರೂ ಬಾಯೇ ಬಿಚ್ಚುತ್ತಿಲ್ಲವಲ್ಲೇ....?"

ಕಿರಣ್ಮಯಿ ಉತ್ತರಿಸಲಿಲ್ಲ. ಮನಸ್ಸಿನಲ್ಲೇ ಅಂದುಕೊಂಡಳು. "ಏನು ಹೇಳಲಮ್ಮಾ ! ಹತ್ತು ಜನಕ್ಕೆ ಕೇಳಿಸುವಂತೆ ಗಂಟಲು ಹರಿದು ಹೋಗುವಷ್ಟು ಜೋರಾಗಿ ಕಿರುಚುವ ನಿನಗೆ ನನ್ನ ಮೂಕ ವೇದನೆ ಕೇಳಿಸುವಂತೆ ಮಾಡಲು ಯಾವ ಭಾಷೆ ಉಪಯೋಗಿಸಲಿ ?" ಮೇಲಕ್ಕೆ ಮಾತ್ರ, "....ಎರಡು ದಿನ ಕೆಲಸದ ಮೇಲೆ ಹೋಗುತ್ತಿದ್ದೇನೆ. ಒಂದು ವಾರದ ನಂತರ ಬರುತ್ತೇನೆ" ಅಂದಳು.

"ಎಲ್ಲಿಗೆ ?"

ಲೇಡೀಸ್ ಹಾಸ್ಟೆಲ್ಲಿಗೆ ಎಂದು ಹೇಳಲಿಲ್ಲ. ಅದೂ ಅನವಶ್ಯಕ.

"ಎಲ್ಲಿಗೂ ಹೋಗಬೇಕಾಗಿಲ್ಲ. ಮನೆಯಲ್ಲೇ ಇರು. ಆ ಕೋರ್ಟ್ ವ್ಯವಹಾರವೇನೆಂದು ತಿಳಿಯಲು ಹೇಗೂ ಎರಡು, ಮೂರು ವರ್ಷಗಳಾಗುತ್ತವೆ. ಏನಾದರೂ ಕೆಲಸ ನೋಡಿಕೊ—" ತಂದೆ ಹೇಳಿದರು.

ಅವರ ಮುಖದಲ್ಲಿ ಸಂತೋಷ ನುಗ್ಗಿ ಬರುತ್ತಿರುವುದು ಸ್ಪಷ್ಟವಾಗಿ ಕಂಡಿತು.

'ಮಗಳಿಗೆ ಮದುವೆ ಮಾಡಲಿಲ್ಲವೆಂಬ ಅಪವಾದ ಬರದೆ—ಮದುವೆಗೆ ಮದುವೆಯೂ ಆಯಿತು, ಮಗಳು ಮನೆಯಲ್ಲೇ ಇದ್ದು ಸಂಪಾದಿಸುತ್ತಾಳೆ' ಎಂಬ ಸಂತೋಷ !!!

ಇಂತಹ ಮನುಷ್ಯರಿರುತ್ತಾರಾ ಅಂದು ಕೊಳ್ಳಲಿಲ್ಲ ಅವಳು ! ಇದಕ್ಕಿಂತಲೂ ನಿಕೃಷ್ಟವಾದ ಮನಸ್ಸಿನವರ ಬಗ್ಗೆ ಸೈಕಾಲಜಿಯಲ್ಲಿ ಓದಿದ್ದಾಳೆ ಅವಳು ! ಎರಡು ದಿನಗಳು ಕಳೆದವು.

ಅಂದಿನ ಪೇಪರನ್ನು ಕಂಡು ಅವಳು ಬೆಚ್ಚಿಬಿದ್ದಳು. ಬೆಳಗ್ಗೆ ಕೊನೆಯ ಪುಟದ ಕ್ರೀಡಾವಾರ್ತೆ ಓದುತ್ತಿದ್ದಂತೆ ಅವಳ ಕೈಗಳು ಕಂಪಿಸಿದವು. ಇದನ್ನ

ವಳು ಊಹಿಸಿರಲಿಲ್ಲ, ಪೇಪರನ್ನು ಪಕ್ಕಕ್ಕೆ ಹಾಕಿ ಮೇಲೆದ್ದಳು, ಬೇಗ ಬೇಗನೆ ರೆಡಿಯಾಗಿ ರಾಯಣ್ಣನ ಸ್ನೇಹಿತನನ್ನು ಕಾಣಲು ಹೊರಟಳು,

ಪ್ರೆಸಿಡೆಂಟ್ ಇಲೆವೆನ್‌ಗೂ ಪಾಕಿಸ್ಥಾನ ಇಲೆವೆನ್ ತಂಡಕ್ಕೂ ಆ ದಿನವೇ ಡೆಲ್ಲಿಯಲ್ಲಿ ಮೂರು ದಿನಗಳ ಪಂದ್ಯ ಪ್ರಾರಂಭವಾಗಲಿತ್ತು.

ಎರಡು ವರ್ಷಗಳಿಂದಲೂ ಭಾರತದ ತಂಡ ತುಂಬಾ ಕಳಪೆಯಿಂದ ಆಡುತ್ತಿತ್ತು. ಒಂದೆರಡು ಒನ್‌ಡೇ ಮ್ಯಾಚುಗಳನ್ನು ಬಿಟ್ಟು ಎಲ್ಲಾ ಪಂದ್ಯಗಳಲ್ಲೂ ಹೀನಾಯವಾಗಿ ಸೋತು ಹೋಗಿತ್ತು. ಕ್ರಿಕೆಟ್ಟನ್ನು ಅತಿಯಾಗಿ ಪ್ರೀತಿಸುವ ಭಾರತದ ಪ್ರಜೆಗಳನ್ನು ತುಂಬಾ ನೋಯಿಸುವ ವಿಷಯವಾಗಿತ್ತು ಅದು, ಪಾಕೀಸ್ಥಾನ್ ಟೀಮ್ ಬರುತ್ತಿದೆ ಎಂದರೇನೇ ನಮ್ಮವರ ಸೋಲಿನ ಬಗ್ಗೆ ಹಗುರವಾಗಿ ಮಾತನಾಡಿಕೊಳ್ಳುತ್ತಿದ್ದರು ಕ್ರಿಕೆಟ್ ಪ್ರೇಮಿಗಳು.

ಮೂರು ದಿನಗಳ ಪಂದ್ಯವಾದದ್ದರಿಂದ ಎರಡೂ ಟೀಮುಗಳಲ್ಲೂ ಹೊಸಬರಿಗೆ ಅವಕಾಶ ಕೊಟ್ಟಿದ್ದರು. ಸಾಮಾನ್ಯವಾಗಿ ಇಂತಹ ಮ್ಯಾಚ್‌ಗಳಿಗೆ ಅಷ್ಟೊಂದು ರಷ್ ಇರುವುದಿಲ್ಲ. ಆದರೆ ಪಾಕಿಸ್ಥಾನಿಗಳ ಆಟ ನೋಡಲು ಸ್ಟೇಡಿಯಂ ಹೆಚ್ಚು ಕಡಿಮೆ ತುಂಬಿತ್ತು. ಪಾಕಿಸ್ಥಾನ್ ಕ್ಯಾಪ್ಟನ್ ಟಾಸ್‌ಗೆದ್ದು ಫೀಲ್ಡಿಂಗ್ ತೆಗೆದುಕೊಂಡ ಭಾರತದ ಕಡೆ ಶ್ರೀಕಾಂತ್, ರಾಮನ್ ಓಪನ್ ಮಾಡಿದರು. ನಲವತ್ತು ರನ್‌ಗಳ ನಂತರ ಇಬ್ಬರೂ ಔಟಾದರು, ಅಜುರುದ್ದೀನ್ ಮೊದಲು, ನಂತರ ತೆಂಡೂಲ್ಕರ್ ಬಂದರು. ಹತ್ತು ನಿಮಿಷಗಳಲ್ಲೇ ತೆಂಡೂಲ್ಕರ್ ಔಟಾದ, ಹಾಗಾಗಿ ಭಾರತದ ಕಡೆ ಸ್ವಲ್ಪ ಟೆನ್ಷನ್ ಪ್ರಾರಂಭವಾಯಿತು. ನಂತರ ಬಂದ ಆಟಗಾರ ಒಂದು ರನ್ನೂ ಮಾಡದೆ ಔಟಾದದ್ದರಿಂದ ಭಾರತ ಅರವತ್ತೆರಡು ರನ್ನುಗಳಿಗೆ ಅತಿ ಮುಖ್ಯವಾದ ನಾಲ್ವರು ಬ್ಯಾಟ್ಸ್‌ಮನ್‌ಗಳನ್ನು ಕಳೆದುಕೊಂಡಿತು. ಅಜುರುದ್ದೀನ್‌ಗೆ ಜೊತೆಯಾಗಿ ನಿಂತು ಆಡುವ ಬ್ಯಾಟ್ಸ್‌ಮನ್ ಈಗ ಬೇಕಾಗಿತ್ತು, ಅಜುರುದ್ಧೀನ್ ಸನ್ನೆಯನ್ನು ಅನುಸರಿಸಿ ರಾಯಣ್ಣ ಬ್ಯಾಟ್ ಹಿಡಿದು

ಮೈದಾನದೊಳಗೆ ಪ್ರವೇಶಿಸಿದ. ಇಂಟರ್‌ನ್ಯಾಷನಲ್ ಲೆವಲ್‌ನಲ್ಲಲ್ಲದಿದ್ದರೂ ನ್ಯಾಷನಲ್ ಲೆವೇಲ್‌ನಲ್ಲಿ ಅವನು ಸಾಕಷ್ಟು ಪಂದ್ಯಗಳನ್ನು ಆಡಿದ್ದ. ಹಾಗಾಗಿ ತನ್ನ ಮೇಲೆ ತಾನೇ ನಂಬಿಕೆ ಹೊಂದಿ ಸ್ವಲ್ಪವೂ ಹೆದರದೆ ವಿಕೆಟ್‌ಗಳ ಬಳಿಗೆ ನಡೆದ.

ಸಾಮಾನ್ಯವಾಗಿ ಒಬ್ಬ ಹೊಸ ಆಟಗಾರ ಫೀಲ್ಡಿನಲ್ಲಿ ಬರುತ್ತಿದ್ದರೆ, ಅದರಲ್ಲೂ ಸ್ವಲ್ಪ ಭರವಸೆ ಮೂಡಿಸುವ ಆಟಗಾರನ ಆಗಮನವಾಗುತ್ತಿದಂತೆಯೇ ಪ್ರೇಕ್ಷಕರು ಸಂತೋಷದಿಂದ ಚಪ್ಪಾಳೆ ತಟ್ಟುತ್ತಾ ಆಹ್ವಾನಿಸುತ್ತಾರೆ. ರಣಜಿ ಟ್ರೋಫಿಯಲ್ಲಿ ರಾಯಣ್ಣನ ಬಗ್ಗೆ ತಿಳಿದವರು ಅವನನ್ನು ಚಪ್ಪಾಳೆ ತಟ್ಟಿ ಆಹ್ವಾನಿಸಿದರು. ಅಷ್ಟರಲ್ಲೇ ಮತ್ತೊಂದು ಮೂಲೆಯಿಂದ ಬೆಕ್ಕಿನ ಕೂಗುಗಳು, ವಿಷಲ್ಸ್ ಪ್ರಾರಂಭವಾದವು. ಎಂದೂ ಕಾಣದ ಆಹ್ವಾನ ಅದು! ರಾಯಣ್ಣ ಹಿಮ್ಮೆಟ್ಟಿದ. ಬೆಳೆಸಿಕೊಳ್ಳುತ್ತಿದ್ದ ಧೈರ್ಯ ಆತ್ಮವಿಶ್ವಾಸ ಸಡಿಲಗೊಂಡಂತೆ ಆಗುತ್ತಿತ್ತು. ತನ್ನಷ್ಟಕ್ಕೆ ತಾನೇ ಧೈರ್ಯ ತಂದುಕೊಂಡು ಪಿಚ್‌ಬಳಿಗೆ ಹೋದ.

ಮೊದಲೆರಡು ಬಾಲ್‌ಗಳನ್ನು ಅವನು ಡಿಫೆನ್ಸೀವ್ ಆಗಿ ಆಡಿದ. ಸ್ವಲ್ಪ ನಿಲ್ಲುವ ಧೈರ್ಯ ಬಂತು. ಓವರ್ ಮುಗಿದ ನಂತರ ಅಕ್ರಮ್ ಬೌಲಿಂಗ್ ತೆಗೆದುಕೊಂಡ. ಮೊದಲನೆ ಬಾಲಿಗೆ ಅಜರ್ ಒಂದು ರನ್‌ಪಡೆದ. ಈಗ ರಾಯಣ್ಣ ಅಕ್ರಮ್ ಬೌಲಿಂಗ್ ಎದುರಿಸಲು ಬಂದ. ತುಂಬಾ ಎಚ್ಚರಿಕೆಯಿಂದ ಗಮನಿಸುತ್ತಾ ಆಡುತ್ತಿದ್ದಾನೆ. ಒಂದು ರನ್ನನ್ನೂ ಮಾಡಲಾರದೆ ಹೋದ. ಸ್ಟೇಡಿಯಂನ ಒಂದು ಮೂಲೆಯಿಂದ ಕೂಗಾಟ. "ಅವನನು ಒದ್ದು ಹೊರಹಾಕಿ. ಅವನಿಗೆ ಆಡುವ ಅರ್ಹತೆಯಿಲ್ಲ." ಯಾರದೋ ಸ್ತ್ರೀ ಸ್ವರ. ಆ ಕೂಡಲೇ ಕಿರುಚಾಟ, ಕೂಗಾಟ. ಆ ಗಲಭೆಯೆಲ್ಲಾ ತನ್ನ ಮೇಲೆ ಎಂದು ತಿಳಿದಾಗ ರಾಯಣ್ಣ ವಿಷಣ್ಣನಾದ. ಅವತ್ತಿನ ಕೆಲವು ಡೆಲ್ಲಿ ಪೇಪರ್‌ಗಳಲ್ಲಿ ರಾಯಣ್ಣ ಬೆಯಿಲ್ ಮೇಲೆ ಬಂದು ಆಡುತ್ತಿರುವುದರ ಬಗ್ಗೆ ಬರೆಯಲಾಗಿತ್ತು. ಅದು ಮತ್ತಷ್ಟು ಪರಿಣಾಮ ಬೀರಿತ್ತು. "....ಹುಡುಗಿಯರನ್ನು ಕೊಲೆ ಮಾಡುವುದರಲ್ಲಿ ಅಲ್ಲವೋ ನಿನ್ನ ಗಂಡಸುತನ. ಆಟದಲ್ಲಿ ತೋರಿಸು." ಯಾರೋ ಹಿಂದಿಯಲ್ಲಿ ಜೋರಾಗಿ ಕಿರುಚಿದರು. ರಾಯಣ್ಣನ ಮುಖ ಬಾಡಿ ಹೋಯಿತು. ಆ ವಿಷಯವನ್ನು ಗ್ರಹಿಸಿದವ

ನಂತೆ ಆ ಓವರ್ ಪೂರ್ತಿಯಾದ ಕೂಡಲೆ ಅಜುರುದ್ದೀನ್ ಅವನ ಬಳಿಗೆ ಬಂದು ಅವನ ಭುಜ ತಟ್ಟಿದ. ರಾಯಣ್ಣ ಬಲವಂತದ ನಗೆ ನಕ್ಕ. ಅವನ ಬ್ಯಾಟಿಂಗ್ ಬರುತ್ತಿದ್ದಂತೆ ಮತ್ತೆ ಕಿರುಚಾಟ. ಹುಡುಗಿಯರೇ ಹೆಚ್ಚಾಗಿ ಕಿರುಚುತ್ತಿದ್ದರು.

ಚೆಂಡು ವೇಗವಾಗಿ ಬರುತ್ತಿತ್ತು. ರಾಯಣ್ಣ ತನ್ನ ದೃಷ್ಟಿಯನ್ನು ಅದರ ಮೇಲೆ ಕೇಂದ್ರೀಕರಿಸಿ ಹೊಡೆಯಲು ಸಿದ್ಧನಾಗುತ್ತಿದ್ದಂತೆಯೇ ಅವನಿಗೆ ಜೋರಾಗಿ ಕೇಳಿಸಿತು, "ರೇಪಿಸ್ಟ್.... ಹೇಯ್ ರೇಪಿಸ್ಟ್" ಎಂದು ! ಅಲೆಗಳಂತೆ ಮತ್ತೆ ಮತ್ತೆ ಅದೇ ಕೂಗು. ಬಾಣದ ನಂತರ ಬಾಣ ಬಂದಂತೆ, ನಿಷ್ಪ್ರಾಣನಾಗಿ ನಿಂತುಬಿಟ್ಟ. ಬಾಲ್ ನೇರವಾಗಿ ನುಗ್ಗಿ ಸ್ಟಂಪ್ಸ್‌ಗೆ ತಗುಲಿತು. ಸುತ್ತಲೂ ಇದ್ದ ಪಾಕಿಸ್ಥಾನದವರೆಲ್ಲಾ ದಾಳಿಯಲ್ಲಿ ಹಾರಿದರು. ಸ್ಟೇಡಿಯಂ ಎಲ್ಲಾ ಕಿರುಚಾಟ, ಕೂಗಾಟ.... ಮುಗಿದು ಹೋಯಿತು ! ರಾಯಣ್ಣ ಬ್ಯಾಟ್ ಹಿಡಿದುಕೊಂಡು ಪೆವಿಲಿಯನ್ ಕಡೆಗೆ ನಡೆದ. ಸ್ಟೇಡಿಯಂನಲ್ಲಿ ಕುಳಿತಿದ್ದ ಹನ್ನೆರಡು ಸಾವಿರ ಜನರ ಕಣ್ಣುಗಳೂ ತನ್ನ ಮೇಲೇ ಕೇಂದ್ರೀಕರಿಸಿದಂತೆ, ಅವರೆಲ್ಲಾ ತನ್ನನ್ನು ಒಬ್ಬ ಅಪ್ರಯೋಜಕನಂತೆ ಕಾಣುತ್ತಾ ವ್ಯಂಗ್ಯವಾಗಿ ನಗುತ್ತಿರುವಂತೆ ಅವನಿಗನ್ನಿಸಿತು. ಕಾಲುಗಳು ನಡೆಯಲು ನಿರಾಕರಿಸುತ್ತಿವೆ, ಮನಸ್ಸು ಓಡಿಹೋಗೆಂದು ಎಚ್ಚರಿಸುತ್ತಿತ್ತು. ಪ್ರೇಕ್ಷಕರ ನಡುವಿನಿಂದ ನಡೆಯುತ್ತಿದ್ದರೆ ವಿವಿಧ ರೀತಿಯ ಕಾಮೆಂಟ್ಸ್.

"ನಿನ್ನಂತಹವರು ಜೈಲಿನಲ್ಲಿದ್ದರೇನೇ ಸರಿಯೇ. ಕ್ರಿಕೆಟ್ ಆಡಲು ಬಂದು ನಮ್ಮ ಹಣ, ಸಮಯ ಎರಡನ್ನು ವೇಸ್ಟ್ ಮಾಡ್ತಿದ್ದೀಯಾ...."

ಡ್ರೆಸ್ಸಿಂಗ್ ರೂಮಿಗೆ ಹೇಗೆ ತಲುಪಿದನೋ ಅವನಿಗೇ ತಿಳಿಯಲಿಲ್ಲ. ಬ್ಯಾಟನ್ನು ಕೆಳಗೆ ಹಾಕಿ ಕುರ್ಚಿಯೊಂದರಲ್ಲಿ ಕುಸಿದು ಕುಳಿತು ಎರಡು ಕೈಗಳಿಂದ ತಲೆಯನ್ನು ಬಿಗಿಯಾಗಿ ಹಿಡಿದುಕೊಂಡ. ಜೊತೆಯ ಯಾವ ಆಟಗಾರರೂ ಸಹಾನುಭೂತಿಯ ಒಂದು ಮಾತನ್ನು ಆಡಲಿಲ್ಲ, ಅವನೊಬ್ಬನೇ ಕುಳಿತು ಯೋಚಿಸುತ್ತಿದ್ದ. ಸೋತುಹೋದ. ಕೂಡಿಸಿಕೊಂಡು ಬಂದಿದ್ದ ಧೈರ್ಯವೆಲ್ಲಾ ಸಡಿಲಹೋಗಿ ಘೋರವಾಗಿ ಸೋತಿದ್ದ, ಎಲ್ಲಕ್ಕೂ

ಮಿಗಿಲಾಗಿ ಕಿರಣ್ಮಯಿ ತನ್ನ ಮೇಲಿಟ್ಟುಕೊಂಡಿದ್ದ ಆಸೆಗಳನ್ನು, ನಂಬಿಕೆಗಳನ್ನು ಕೂಡಾ ಸೋಲಿಸಿದ್ದ.

ಆನಂದಕ್ಕೆ ಪರಾಕಾಷ್ಠೆ ; ದುಃಖಕ್ಕೆ ಉಪಶಮನ ಕಣ್ಣೀರು! ಅದೀ ಕೂಡಾ ಅವನನ್ನು ಅಪಹಾಸ್ಯ ಮಾಡುತ್ತಿರುವಂತೆ ಕಣ್ಣಾಳಲ್ಲೇ ಹೆಪ್ಪುಗಟ್ಟಿ ನೋವು ನೀಡುತ್ತಿತ್ತು. ತಾನು ಮಾಡಿದ ತಪ್ಪೇನು ? ಯೋಚಿಸುತ್ತಿದ್ದಂತೆ ದುರದೃಷ್ಟ ತನ್ನ ಮೇಲೆ ಎಂತಹ ವಿಜಯವನ್ನು ಸಾಧಿಸಿಯೆಂದು ಅರ್ಥ ವಾಗುತ್ತಿದೆ. ಇಲ್ಲದಿದ್ದರೆ ಮದುವೆ ಮನೆಯಿಂದ ಅಂತಹ ಪರಿಸ್ಥಿತಿಯಲ್ಲಿ ತಾನು ಲಕ್ಷ್ಮಿಯನ್ನು ನೋಡಲು ಹೋಗಬೇಕಾದ ಅವಶ್ಯಕತೆಯೇನಿತ್ತು ?

ಬಲಹೀನತೆ ಆವರಿಸಕೂಡದು. ಆವರಿಸಿದರೆ ಅದು ಶರೀರವನ್ನು, ಮನಸ್ಸನ್ನೂ ನಿಸ್ತೇಜಗೊಳಿಸುತ್ತದೆ. ರಾಯಣ್ಣ ಕಲ್ಲಿನಂತೆ ಕುರ್ಚಿಯಲ್ಲೇ ಇದ್ದು ಬಿಟ್ಟ. ಆಟ ಮುಂದುವರೆಯುತ್ತಿತ್ತು. ಆನಂತರ ಭಾರತದ ತಂಡ ಹೆಚ್ಚು ಹೊತ್ತು ಉಳಿಯಲಾರದೆ ಹೋಯಿತು. ರಾಯಣ್ಣನ ನಂತರ ಬಂದ ಆ ನಾಯಕ ಅಜುರುದ್ದೀನ್‌ನೊಡನೆ ಮುವ್ವತ್ತು ರನ್‌ಗಳಿಸಿದ್ದರಿಂದ ಸ್ವಲ್ಪವಾದರೂ ಮಾನ ಉಳಿಯಿತು. ಟೀ ಸಮಯಕ್ಕೆ ನೂರ ಇಪ್ಪತ್ತೆಂಟು ರನ್‌ಗಳಿಗೆ ಎಲ್ಲರೂ ಔಟಾದರು. ಆನಂತರ ಭಾರತದ ಟೀಮ್ ಫೀಲ್ಡಿಂಗ್‌ಗೆ ಇಳಿಯಿತು.

ರಾಯಣ್ಣ ಕೂಡಾ ಫೀಲ್ಡಿಂಗ್ ಬರದೆ ವಿಧಿಯಿರಲಿಲ್ಲ. ಆ ಪ್ರದೇಶ ವನ್ನು ಬಿಟ್ಟು ಓಡಿಬಿಡಬೇಕೆನ್ನಿಸುತ್ತಿತ್ತು, ಆದರೆ ಏನೂ ಮಾಡಲಾರದ ನಿಸ್ಸಹಾಯಕತೆ.

ಪಾಕಿಸ್ಥಾನ್ ಮೊದಲಿನಿಂದಲೂ ಚೆನ್ನಾಗಿ ಆಡಲಾರಂಭಿಸಿತು. ಮೊದಲ ಐದು ಓವರ್‌ಗಳಲ್ಲಿ ಹದಿನೆಂಟು ರನ್‌ಗಳನ್ನು ಮಾಡಿದವು.

ರಾಯಣ್ಣನನ್ನು ಉತ್ಸಾಹಗೊಳಿಸಲೆಂಬಂತೆ ಅವನಿಗೆ ಬೌಲಿಂಗ್ ಕೊಟ್ಟ ಅಜುರುದ್ದೀನ್.

ಹೆದರುತ್ತಲೇ ಬೌಲ್ ಮಾಡಿದ ರಾಯಣ್ಣನ ಮೊದಲ ಬಾಲನ್ನು ಬ್ಯಾಟ್ಸ್‌ಮನ್ ಬೌಂಡರಿಗೆ ಅಟ್ಟಿದ.

ಮತ್ತೆ ಸ್ಟೇಡಿಯಂನಲ್ಲಿ ಕಿರುಚಾಟ, ಕೂಗಾಟ. ಆ ಒಂದು ಓವರ್‌ನಲ್ಲಿಯೇ ರಾಯಣ್ಣ ಹತ್ತು ರನ್‌ಕೊಟ್ಟ ಅವನಲ್ಲಿ ಸ್ವಲ್ಪ ಧೈರ್ಯವಿದ್ದರೂ ಅದು ಸಡಿಲಿಹೋಯಿತು.

'ಲಾಂಗಾನ್'ನಲ್ಲಿ ನಿಂತಿದ್ದ ಅವನ ಮೇಲೆ ಬಾಳೆ ಹಣ್ಣಿನ ಸಿಪ್ಪೆ, ಕೊಳೆತ ಟೊಮ್ಯಾಟೋಗಳನ್ನು ಬೀಸುತ್ತಿದ್ದರು.

ಮನುಷ್ಯನನ್ನು ಮಾತಿನಿಂದ ಸಾಯುವಂತೆ ಹಿಂಸಿಸಿ, ಸಂತೋಷಪಡುವ ಸ್ಯಾಡಿಸ್ ಪಕ್ಕದ ಮನುಷ್ಯಲ್ಲೇ ಇರುವುದು ಮಾನವ ಜಾತಿಗೆ ದೇವರು ಕೊಟ್ಟ ಶಾಪ.

ಆ ದಿನದ ಆಟ ಮುಗಿಯುವವೇಳೆಗೆ ರಾಯಣ್ಣನ ಮುಖದಲ್ಲಿ ಜೀವ ಕಳೆ ಸಂಪೂರ್ಣ ಬತ್ತಿತ್ತು. ಆದರೆ ಅದಕ್ಕೂ ಮಿಗಿಲಾದ ಅವಮಾನಕ್ಕೆ ಏರ್ಪಾಟುಗಳು ಜೋರಾಗಿ ನಡೆಯುತ್ತಿದೆಯೆಂದೂ, ಮಾರನೆ ದಿನ ಆಟ ಪ್ರಾರಂಭವಾಗುವ ಸಮಯಕ್ಕೆ ಅದು ಪ್ರಾರಂಭವಾಗುತ್ತದೆಂದೂ ಅವನಿಗೆ ತಿಳಿದಿದ್ದರೆ ಅವನು ಆ ರಾತ್ರಿಯೇ ಆತ್ಮಹತ್ಯೆ ಮಾಡಿಕೊಳ್ಳುತ್ತಿದ್ದ.

ವೆಂಕಟ್ರಾಜುವಿಗೆ ತುಂಬಾ ಸಂತೋಷವಾಗಿತ್ತು ಎಲ್ಲಾ ತಾನಂದು ಕೊಂಡಂತೆಯೇ ನಡೆಯುತ್ತಿದೆ. ಮೊದಲನೆ ದಿನದ ಆಟದಿಂದಲೇ ರಾಯಣ್ಣನ ಅವಕಾಶಗಳು ಕಡಿಮೆಯಾಗತೊಡಗಿದೆ.

ಮಾರನೆ ದಿನ ಅವನ ಪರಿಸ್ಥಿತಿ ಮತ್ತಷ್ಟು ಹೀನಾಯವಾಗುವುದರಲ್ಲಿ ಅನುಮಾನವೇ ಇಲ್ಲ. ನಂತರ ಟೀಮಿಗೆ ತನ್ನ ಸೇರ್ಪಡೆ ಶತಃಸಿದ್ಧ.

ಡೆಲ್ಲಿಯಲ್ಲಿ ಒಂದು ದೊಡ್ಡ ಹೋಟೆಲಿನಲ್ಲಿ ಅವನು ರಾಘವರೆಡ್ಡಿಯೊಂದಿಗೆ ಸೇರಿ ಪಾರ್ಟಿ ಸೆಲಿಬ್ರೆಟ್ ಮಾಡುತ್ತಿದ್ದ.

"ಒಟ್ಟನಲ್ಲಿ ನೀನು ಅಸಾಧ್ಯನಪ್ಪಾ. ಒಳ್ಳೇ ರಾಜಕೀಯ ತಲೆಯಿದೆ ನಿನಗೆ." ಎಂದು ಹೊಗಳಿದ ರಾಘವರೆಡ್ಡಿ.

"ಅಷ್ಟೇ ಮತ್ತೆ! ಶತಕೋಟಿ ದರಿದ್ರಗಳಿಗೆ ಅನಂತಕೋಟಿ ಉಪಾಯ

ಗಳಿವೆ. ರಾಯಣ್ಣ ಎಷ್ಟು ಸೆನ್ಸಿಟೀವ್ ಎಂದು ನನಗೆ ಗೊತ್ತು. ಅಂತಹವನು ಈ ಪೆಟ್ಟನ್ನು ತಡೆದುಕೊಳ್ಳಲಾರ."

"ಹೈದರಾಬಾದಿನಿಂದ ಹಾಸ್ಟೆಲ್ ಹುಡುಗಿಯರು ಬಂದಿದ್ದಾರೆಂದು ಪೇಪರ್‌ಗಳಲ್ಲಿ ಓದಿದ್ದೇನೆ. ನಿಜವೇನಾ ? ಅದನ್ನು ಹೇಗೆ ಮ್ಯಾನೇಜ್ ಮಾಡಿದೆ ?"

"ಆ ರಮಣಿ ತನ್ನ ಗ್ಯಾಂಗನ್ನೆಲ್ಲಾ ಹಿಂದಿಟ್ಟುಕೊಂಡು ಬಂದಂತಿದೆ. ಇದು ನನ್ನ ಕೆಲಸವಲ್ಲ ರಾಜಾರಾವ್ ಕೆಲಸ. ಅಲ್ಲಿ ಮಾಡದ ಕೆಲಸವನ್ನು ಇಲ್ಲಾದರೂ ಮಾಡಿ ತೋರಿಸಬೇಕೆಂದು ಒದ್ದಾಡುತ್ತಿದ್ದಾನೆ."

"ಅವನಿಗೇನು ಲಾಭ ?"

"ಲಾಭವೇನೂ ಇಲ್ಲ. ಈ ಕೇಸಿನಲ್ಲಿ ತನ್ನ ಹೆಸರೆಲ್ಲಿ ಹೊರಬೀಳುತ್ತದೋ ಎಂಬ ಭಯ ? ರಾಯಣ್ಣನಿಗೂ ಆ ಹುಡುಗಿಗೂ ಸ್ನೇಹ ಬೆಸೆದವನು ಈ ರಾಜಾರಾವ್. ರಮಣಿಯರೇ ತಮ್ಮ ಮೇಲೆ ಅನುಮಾನ ಬರಕೂಡದೆಂದು ಏನೇನೋ ಮಾಡುತ್ತಿದ್ದಾರ. ಈ ಕಾರಣದಿಂದಲಾದರೂ ಡೆಲ್ಲಿಯನ್ನು ನೋಡಿ ನಾಲ್ಕು ಜನ ಎಂಜಾಯ್ ಮಾಡಬಹುದೆಂದು ರಮಣಿ ಸ್ನೇಹಿತೆಯರು ಬಂದಿರುತ್ತಾರೆ. ಫೈನಾನ್ಸ್ ಎಲ್ಲಾ ರಾಜಾರಾವ್‌ದೇ. ಇಂತಹವೆಲ್ಲಾ ಅವನಿಗೆ ಖುಷಿಕೊಡುತ್ತಿರುತ್ತದೆ.

"ಏನೇ ಆಗಲಿ ಇದರಿಂದ ನಮಗೇ ಲಾಭ. ನಿನ್ನ ಹೆಸರು ಮಾತ್ರ ಎಂತಹ ಪರಿಸ್ಥಿತಿಯಲ್ಲೂ ಹೊರಬರದಂತೆ ನೋಡಿಕೋ ಅದೇ ನಮಗೆ ಬೇಕಾದ್ದು." ಎಚ್ಚರಿಸಿದ ರೆಡ್ಡಿ.

"ಆ ವಿಷಯದಲ್ಲಿ ಯಾವ ಭಯವೂ ಇಲ್ಲ. ಹಿಂದುಗಡೆಯಿದ್ದು ಎಲ್ಲವನ್ನು ನಾನು ಮಾಡಿಸುತ್ತಿದ್ದೇನೆ." ಹೆಮ್ಮೆಯಿಂದ ಹೇಳಿದ ವೆಂಕಟ್ರಾಜು.

'ನೀನು ಮಾಡಲಾರದ್ದನ್ನು ನಾನು ಮತ್ತೊಂದು ರೀತಿ ಸಾಧಿಸಿದ್ದೇನೆ ನೋಡು' ಎಂಬ ಅಹಂ ಇತ್ತು ಅವನ ಮಾತಿನಲ್ಲಿ. ಇವಕ್ಕಾಗಿ ಅವನು ಐವತ್ತು ಸಾವಿರದವರೆಗೂ ಖರ್ಚು ಮಾಡಿದ್ದ. ಅದಕ್ಕೆ ಸರಿಯಾದ ಪ್ರತಿಫಲ ಸಿಗುತ್ತದೆಂಬ ನಂಬಿಕೆ ಅವನಿಗೆ ಬಂದಿತ್ತು. ಬರಲಿರುವ ದಿನಗಳನ್ನು—

ಭಾರತದ ಟೀಮ್‌ನಲ್ಲಿ ತನ್ನ ಸ್ಥಾನವನ್ನು ಕಳ್ಳಿಸಿಕೊಂಡು ಹಿಗ್ಗುತ್ತಿದ್ದ ವೆಂಕಟ್ರಾಜು.

ಅದೇ ಸಮಯಕ್ಕೆ ಸರಿಯಾಗಿ — ತನಗೆ ತಿಳಿಯದ ಶತ್ರುವನ್ನು ಎದುರಿಸುವ ಧೈರ್ಯವನ್ನು ರಾಯಣ್ಣನಿಗೆ ಕೊಡಲು ಕಿರಣ್ಮಯಿ ಡೆಲ್ಲಿ ಸೇರುವ ದಾರಿಯಲ್ಲಿದ್ದಳು.

ಎರಡನೆ ದಿನದ ಆಟ ಪ್ರಾರಂಭವಾಗುತ್ತಿತ್ತು. ಫೀಲ್ಡಿನಲ್ಲಿ ಹೋಗುವ ಸಮಯ ಹತ್ತಿರವಾಯಿತು. ಆಟಗಾರರೆಲ್ಲಾ ಗಡಿಬಿಡಿಯಿಂದಿದ್ದರು. ಕ್ಯಾಪ್ಟನ್ ಅಜ್ಜರುದ್ದೀನ್ ಅಂದಿನ ಆಟದ ವ್ಯೂಹದ ಬಗ್ಗೆ ವಿವರಿಸುತ್ತಿದ್ದ. ಇದು ಟೆಸ್ಟ್ ಮ್ಯಾಚ್ ಅಲ್ಲದಿದ್ದರೂ ಪ್ರಾರಂಭದಲ್ಲಿಯೇ ಸೋತು ಹೋದರೆ ತುಂಬಾ ಆಸಕ್ತಿಯಿಂದ ಎದುರು ನೋಡುತ್ತಿರುವ ಜನ ರೊಚ್ಚಿಗೇಳುತ್ತಾರೆ. ಹಾಗಾಗಿ ಕೊನೆಯ ಪಕ್ಷ ಡ್ರಾ ಮಾಡಿಕೊಳ್ಳುವ ಪ್ರಯತ್ನವಾದರೂ ಮಾಡಿ ಕೊಳ್ಳಬೇಕೆಂದು ನಿರ್ಧರಿಸಿದ್ದರು.

ರಾಯಣ್ಣನ ಕಿವಿಗೆ ಇದೇನೂ ಕೇಳಿಸುತ್ತಿರಲಿಲ್ಲ. ಅಂದು ಬೆಳಗ್ಗೆ ಸ್ಟೇಡಿಯಂಗೆ ಬರುವುದಕ್ಕೆ ಮುಂಚೆಯೇ ಅವನಿಗೆ ಈ ವಿಷಯ ತಿಳಿಯಿತು. ಸುಮಾರು ಐದು ನೂರು ಡೆಲ್ಲಿ ಕಾಲೇಜಿನ ಹುಡುಗಿಯರು ತನ್ನನ್ನು ಟೀಮಿನಿಂದ ಹೊರ ಹಾಕುವಂತೆ ಪ್ರತಿಭಟನೆ ಸೂಚಿಸಲಿದ್ದರು !

"ಮುಗ್ಧಳಾದ ಒಬ್ಬ ಹುಡುಗಿಯನ್ನು ರೇಪ್ ಮಾಡಿ, ಅಷ್ಟರಿಂದಲೇ ತೃಪ್ತನಾಗದೆ, ಅಮಾನುಷದಿಂದ ಕೊಲೆ ಮಾಡಿದ ಕೊಲೆಗಾರನಿಗೆ ದೇಶವನ್ನು ಪ್ರತಿನಿಧಿಸುವ ಅರ್ಹತೆಯಿಲ್ಲ' ಎಂಬ ಕೂಗು ಕೇಳಿಸುತ್ತಿತ್ತು. ಪ್ರೇಕ್ಷಕರಿಗೆ ಒಳಗಿನ ಆಟಕ್ಕಿಂತಲೂ ಹೊರಗಿನ ವ್ಯವಹಾರವೇ ಉತ್ಸಾಹವಾಗಿತ್ತು.

ರಾಯಣ್ಣನಿಗೆ ಸಿಂಕಿಂಗ್ ಫೀಲಿಂಗ್ ಉಂಟಾಗುತ್ತಿತ್ತು. ಇಷ್ಟು ಸಾವಿರ ಜನರ ದೃಷ್ಟಿ ತನ್ನ ಮೇಲೆ !!!

ಆಟಗಾರರೆಲ್ಲಾ ಒಬ್ಬೊಬ್ಬರೇ ಹೊರಗೆ ನಡೆಯುತ್ತಿದ್ದರು. ರಾಯಣ್ಣ ಮಾತ್ರ ಕದಲಲಿಲ್ಲ. ಕ್ಯಾಪ್ಟನ್ ಅವನ ಕಡೆ ದೃಷ್ಟಿ ಬೀರಿ ಏನೂ ಅನ್ನಲಾರದೆ

ಹೊರಗೆ ಹೊರಟು ಹೋದ. ತುಂಬಾ ಹೊತ್ತು ಅವನು ಹಾಗೆಯೇ ಇದ್ದ—ಒಂಟಿಯಾಗಿ! ಅಷ್ಟರಲ್ಲಿ ಅವನ ಭುಜದ ಮೇಲೆ ಯಾರದೋ ಕೈ ಬಿತ್ತು.

"ನಾನು ಬರುವುದಿಲ್ಲ ಪ್ಲೀಸ್. ನನ್ನನ್ನು ಬಿಟ್ಟು ಬಿಡಿ." ತಲೆ ಎತ್ತದೆ ಹೇಳಿದ.

"ನೀನು ಹೋಗದಿದ್ದರೆ ನಾನು ಹೇಗೆ ಸುಮ್ಮನಿರಲಿ ರಾಯಣ್ಣ. ನೀನು ಆಡಲೇಬೇಕು. ನನ್ನ ಸಿಸ್ಟರ್ ನೋವನ್ನು ಪಡದಿರಲು ನೀನು ಆಡಲೇಬೇಕು." ಎಂಬ ಮಾತುಗಳು! ಸ್ನೇಹಿತನ ಸ್ವರ ಕೇಳುತ್ತಿದ್ದಂತೆಯೇ ರಾಯಣ್ಣ ಚಕ್ಕನೆ ತಲೆ ಎತ್ತಿದ. ಸ್ನೇಹಿತನ ಹಿಂದೆಯೇ ನಿಂತಿದ್ದಾಳೆ ಕಿರಣ್ಮಯಿ. ಊಹಿಸದ ಆ ಅದ್ಭುತಕ್ಕೆ ಒಂದು ಕ್ಷಣ ರಾಯಣ್ಣನ ಕಣ್ಗಳು ಸಂತೋಷದಿಂದ ಮಿಂಚಿದವು. ಕೂಡಲೇ ಚೇತರಿಸಿಕೊಂಡು, "ಸೋತು ಹೋದೆ ಕಿರಣ್ಮಯಿ. ನೀನು ಮಾಡಿದ ಪರೀಕ್ಷೆಯಲ್ಲಿ ಕೂಡಾ ಕೆಟ್ಟದಾಗಿ ಸೋತು ಹೋದೆ. ಹೀಗೆ ಸೋತು ಹೋಗುತ್ತೇನೆಂದು ತಿಳಿದು ಕೂಡಾ, ನಿನ್ನ ಮಾತನ್ನು ಅಲ್ಲಗಳೆಯಲಾರದೆ ಮುಂದೆ ಬಂದೆ. ಅದಕ್ಕೆ ತಕ್ಕ ಶಿಕ್ಷೆ ಯನ್ನು ಈಗ ಅನುಭವಿಸುತ್ತಿದ್ದೇನೆ." ಗದ್ಗದ ಸ್ವರದಲ್ಲಿ ಹೇಳಿದ ತಲೆತಗ್ಗಿಸಿ ಕೊಂಡು.

ಸೋತು ಹೋಗುತ್ತೇನೆಂದು ಹೇಳುವುದೇ ಪುಕ್ಕಲುತನದ ಲಕ್ಷಣ! ಅಸಲು ಸೋಲೆಂದರೆ ಏನು? ಹೊರಗಿನ ಶಕ್ತಿಗೆ, ಧೋರಣೆಗೆ ತಡೆದುಕೊಳ್ಳ ಲಾರದೆ ಕೆಳಗುರುಳುವುದೇ ಸೋಲು! ಪರೀಕ್ಷೆಗೆ ಕರೆಬಂದಾಗ ಇಲ್ಲಿಂದ ಕದಲದೆ ಸೋತು ಹೋದೆನೆಂದುಕೊಳ್ಳುವುದು ಹಾಸ್ಯಾಸ್ಪದ. ಇದು ಸೋಲಲ್ಲ ಪಲಾಯನ."

"ಅದಕ್ಕೇನು ಹೆಸರನ್ನಾದರೂ ಇಡು. ಅಲ್ಲಿ ಹೊರಗೆ ನಿಂತು ನನ್ನ ಮೇಲೆ ಅಪವಾದಗಳ ಸುರಿಮಳೆ ಮಾಡುತ್ತಿರುವ ಅಷ್ಟು ಜನರ ಸ್ವರಗಳ ಮುಂದೆ 'ನಾನು ನಿರಪರಾಧಿ' ಎಂದು ಕಿರುಚಿದರೂ ನನ್ನೊಬ್ಬನ ಸ್ವರ ಎಷ್ಟು ಬಲಹೀನವಾಗುತ್ತದೆಂದು ಊಹಿಸು."

'ಅಲ್ಲಿ ಹೊರಗೆ ನೀತಿರುವ ನೂರಾರು ಹುಡುಗಿಯರಲ್ಲಿ ಯಾರೊಬ್ಬರಿಗಾದರೂ ನಿಮ್ಮ ಹತ್ತಿರ ಪರಿಚಯವಿದೆಯಾ ? ನೀವೆಂತಹವರೆಂದು ಅವರಾರಿಗಾದರೂ ಗೊತ್ತಾ ? ನೀವು ಮಾಡಿರುವ ಅಪರಾಧವನ್ನು ಅವರಲ್ಲಿ ಯಾರಾದರೂ ಒಬ್ಬರಾದರೂ ಬಂದು ನಿರೂಪಿಸಬಲ್ಲಿರಾ ? ಒಂದು ಆವೇಶಕ್ಕೆ ಒಳಗಾಗಿ ಸತ್ಯಾಸತ್ಯತೆಗಳನ್ನು ತಿಳಿಯದೆ ಮಾಡುತ್ತಿರುವ ಆರೋಪಗಳು ನಾಲ್ಕು ದಿಕ್ಕುಗಳಿಗೆ ಪ್ರತಿಧ್ವನಿಸಿದರೂ ಅದರಲ್ಲಿ ಸ್ವರದ ತೀವ್ರತೆಯೇ ವಿನಃ ಆತ್ಮ ಶುದ್ಧಿ ಕಾಣುತ್ತದಾ ?" ಕೇಳಿದಳು ಕಿರಣ್ಮಯಿ.

"ಪ್ರಜೆಗಳಿಗೆ ಕೇಳಿಸುವುದು ಆ ಸ್ವರಗಳೇ ಕಿರಣ್ಮಯಿ."

"ನಿಜವೇ, ಅದಕ್ಕೆ ಧೈರ್ಯವಾಗಿ ಹೋಗಿ ಆ ಪರೀಕ್ಷೆಯನ್ನು ಎದುರಿಸಿರೆಂದು ನಾನು ಹೇಳುತ್ತಿರುವುದು. ಈ ಪ್ರಜೆಗಳ ವಿಷಯವನ್ನು ಒಮ್ಮೆ ಆಲೋಚಿಸಿ ಬಿಡಿ ಬಿಡಿಯಾಗಿ ಬಂದು ಒಬ್ಬೊಬ್ಬರನ್ನೇ ಮಾತನಾಡಲು ಕೇಳಿ. ಒಂದಿಬ್ಬರನ್ನು ಬಿಟ್ಟರೆ ಬೇರೆ ಯಾರೂ ಬಾಯಿಬಿಚ್ಚುವುದಿಲ್ಲ, ಹತ್ತು ಜನರ ಮಧ್ಯೆ ಸೇರಿಕೊಂಡು ಯಾರ ಸ್ವರವೆಂದು ಸ್ಪಷ್ಟವಾಗಿ ತಿಳಿಯದೆ ಕಿರುಚುವುದೇ ಅವರಿಗೆ ಗೊತ್ತು. ಇವರ ಆವೇಶ, ಆಲೋಚನೆಗಳು ಹೃದಯದಾಳದಿಂದ ಬರುವುದಿಲ್ಲ. ಹಾಗಾಗಿ ನೀವು ಬಾಯಿಂದ ಅವರಿಗೆ ಉತ್ತರಿಸಬೇಕಾದ ಅವಶ್ಯಕತೆಯಿಲ್ಲ ನಿಮ್ಮ ಆಟದ ಮೂಲಕ ಕೊಡಿ. ಅಪವಾದಗಳನ್ನು ಹೊರಿಸಿರುವ ಈ ಬಾಯಿಗಳೇ ನೀವು ವಿಜಯ ಸಾಧಿಸಿದಾಗ ಜಯಕಾರ ಮಾಡುತ್ತದೆ."

"ನಿನಗಿರುವಷ್ಟು ಆತ್ಮ ವಿಶ್ವಾಸ, ಧೈರ್ಯ ನನಗಿಲ್ಲವಲ್ಲ ಕಿರಣ್ಮಯಿ."

"ಇಲ್ಲವಲ್ಲ' ಎನ್ನುವುದರ ಬದಲು 'ಇಲ್ಲ' ವೆಂದು ಜೋರಾಗಿ ಹೇಳಲಾಗದಿರುವುದರಲ್ಲೇ ನಿಮ್ಮ ಅಂತರಂಗ ತಿಳಿಯುತ್ತದೆ. ಅವರನ್ನು ಗೆಲ್ಲಬೇಕೆಂದು ಅವರ ಬಾಯಿ ಮುಚ್ಚಿಸಬೇಕೆಂದು ಹಠ ನಿಮ್ಮಲ್ಲಿದೆ. ಆದರೆ ಸಂಕೋಚ ನಿಮ್ಮನ್ನು 'ಬಲಹೀನರನ್ನಾಗಿ ಮಾಡುತ್ತಿದೆ. ಒಂದು ಮಾತು ಹೇಳುತ್ತೇನೆ. ನೀವು ನಿಜವಾಗಿಯೂ ಅಪರಾಧ ಮಾಡಿದ್ದಿದ್ದರೆ ಈ ಕೋಣೆಯಿಂದ ಕದಲಬೇಡಿ, ಆಗ ನನ್ನ ಸ್ವರ ಕೂಡಾ ಹೊರಗಿನವರ ಕೂಗುಗಳೊಡನೆ ಬೆರೆಯುತ್ತದೆ. ಅಪರಾಧ ಮಾಡಿಲ್ಲವೆಂದರೆ ಹಾಗೆ ಕೇಳುವ

ಅಪವಾದಗಳನ್ನು ಒಂದು ಛಾಲೆಂಜಾಗಿ ತೆಗೆದುಕೊಂಡು ಅದೇ ಒಂದು ಯುದ್ಧವೆಂದುಕೊಂಡು ನಿಮ್ಮ ನಿಯತ್ತನ್ನು ನಿರೂಪಿಸುವಂತೆ ಧೈರ್ಯವಾಗಿ ಹೋಗಿ ಆಡಿ. ಆಟದಲ್ಲಿ ನಿಮ್ಮ ವಿಜಯದ ಮೂಲಕ ನಿಮ್ಮ ನಿರ್ದೋಷಿತ್ವ ನಿರೂಪಿಸಬೇಕು. ಇದಕ್ಕಿಂತಲೂ ಹೆಚ್ಚಿಗೆ ನಾನೇನೂ ಹೇಳಲಾರೆ." ಕಿರಣ್ಮಯಿ ಕೋಣೆಯಿಂದ ಹೊರಗೆ ಹೊರಟು ಹೋದಳು.

ಹೊರಗಿನಿಂದ ಕೂಗುಗಳು ಜೋರಾಗಿ ಕೇಳಿಸುತ್ತಿದ್ದವು. ಟಿ.ವಿ. ಟೀವೋ, ಪ್ರೆಸ್ನೋ, ಇಲ್ಲವೆ ಯಾರೋ ವಿ.ಐ.ಪಿ.ಯೇ ಬಂದಿರಬಹುದು. ಪ್ರತಿ ಕುಟುಂಬದಲ್ಲಿಯೂ, ಇಲ್ಲವೇ ಅವರಿಗೆ ತಿಳಿದ ಪರಿಧಿಯಲ್ಲಿ ಹೆಣ್ಣಿನ ಮೇಲೆ ಅತ್ಯಾಚಾರ ನಡೆಯುತ್ತಿರುವುದು ಎಲ್ಲರಿಗೂ ಸಾಮಾನ್ಯವೇ. ಈ ಯುವತಿಯರು ನಿಜವಾಗಿಯೂ ಅಂತಹ ಅನ್ಯಾಯಗಳನ್ನು ಎದುರಿಸುವವರಾದರೆ, ಅವರಲ್ಲಿ ಐಕ್ಯಮತ್ಯ ಈ ಎಲ್ಲಾ ವಿಷಯಗಳಲ್ಲೂ ಇದ್ದರೆ ಇಷ್ಟು ಜನ ಸೊಸೆಯರು ಅಗ್ನಿಗೆ ಆಹುತಿಯಾಗುತ್ತಿರಲಿಲ್ಲ. ವರದಕ್ಷಿಣೆಯ ಹಿಂಸೆಗಳಿರುತ್ತಿರಲಿಲ್ಲ, ಯಾವ ಗಂಡಸಿನ ಕೈಯೂ ಹೆಣ್ಣಿನ ಮೇಲೆ ಬೀಳುತ್ತಿರಲಿಲ್ಲ. ತನ್ನ ಅಕ್ಕನನ್ನು ಅವಳ ಅತ್ತೆ ಏನಾದರೂ ಅಂದಳೆಂದರೆ ಆವೇಶಗೊಳ್ಳುವ ಹುಡುಗಿ ತನ್ನ ಅತ್ತಿಗೆಯನ್ನು ತನ್ನ ತಾಯಿ ಕಾಡಿಸುತ್ತಿದ್ದರೆ ಮತ್ತೊಂದು ಕಡ್ಡಿಗೀರಿ ಸಂಭ್ರಮ ಪಡುತ್ತಾಳೆ. ತನ್ನ ಗಂಡ ಮತ್ತೊಬ್ಬ ಹೆಣ್ಣಿನ ಬಲೆಗೆ ಬಿದ್ದರೆ ಆ ಹೆಣ್ಣು ಕುಲಟೆ. ತನ್ನ ಅಣ್ಣ ಆ ಕೆಲಸ ಮಾಡಿದರೆ ಅತ್ತಿಗೆ ಅವನಿಗೆ ಸುಖ ನೀಡಿದಿದ್ದುದಕ್ಕೆ ಹಾಗೆ ಮಾಡಿದ ಎಂಬ ಕಾರಣ. ತನ್ನವರಲ್ಲೇ ಇರುವ ತಪ್ಪನ್ನು ತಪ್ಪಾಗಿ ಗ್ರಹಿಸಿ ಎದುರಿಸುವ ಧೈರ್ಯ ಮನುಷ್ಯರಲ್ಲಿ ಬಂದರೆ, ಹೀಗೆ ಸಾರ್ವಜನಿಕವಾಗಿ ಬಂದು ಕೂಗಾಡುವ ಅಗತ್ಯವೇ ಇರುವುದಿಲ್ಲ.

ಕಿರಣ್ಮಯಿಯ ಮನಸ್ಸು ನಿರ್ಲಿಪ್ತತೆಗೆ ಒಳಗಾಯಿತು. ಅವಳೀಗ ಬೇರೇನೋ ವಿಷಯದ ಬಗ್ಗೆ ತಲೆಕೆಡಿಸಿಕೊಳ್ಳತೊಡಗಿದಳು. ರಾಯಣ್ಣ ಯಾವ ನಿರ್ಧಾರ ತೆಗೆದುಕೊಂಡರೂ ಅವಳಿಗೀಗ ಒಂದೇ ಉಳಿದಿರುವುದು, ಎಲ್ಲದಕ್ಕೂ ಮನಸ್ಸನ್ನು ಸಿದ್ಧಪಡಿಸಿಕೊಳ್ಳುವುದು. ಸೋಲಿಗಾದರೂ, ವಿಜಯಕ್ಕಾದರೂ ಅದೇ ಕೊನೆಯ ಮೆಟ್ಟಲು !!

ಆಟ ಪ್ರಾರಂಭವಾಗಲಿತ್ತು. ಪಾಕೀಸ್ಥಾನ್ ಬ್ಯಾಟ್ಸ್‌ಮನ್‌ಗಳಿಬ್ಬರೂ ಕ್ರೀಡಾಂಗಣದೊಳಗೆ ಪ್ರವೇಶಿಸುತ್ತಿದ್ದರು. ಸ್ಟೇಡಿಯಮೆಲ್ಲಾ ಚಪ್ಪಾಳೆಗಳಿಂದ ತುಂಬಿತು. ಅವಳ ಕಣ್ಣುಗಳು ಚುರುಕುಗೊಂಡವು.

ತಲೆತಗ್ಗಿಸಿಕೊಂಡು ರಾಯಣ್ಣ ಫೀಲ್ಡಿನೊಳಗೆ ಬರುತ್ತಿದ್ದಾನೆ !! ಅವಳು ಸಂತೋಷವನ್ನು ತುಂಬಾ ಕಷ್ಟದಿಂದ ತಡೆದುಕೊಂಡಳು.

ಆಟ ಪ್ರಾರಂಭವಾಯಿತು. ಹದಿನೈದು ಓವರ್‌ಗಳಾದವು. ಪಾಕೀಸ್ಥಾನ ನೂರು ರನ್ನುಗಳನ್ನು ಮಾಡಿತು. ಅದು ಒಂದು ವಿಕೆಟ್ಟನ್ನೂ ಕಳೆದುಕೊಳ್ಳಲಿಲ್ಲ. ಪ್ರೇಕ್ಷಕರು ನಿರಾಶಕ್ತಿಯಿಂದ ನೋಡುತ್ತಿದ್ದರು. ರಾಯಣ್ಣನಿಗೆ ಅದುವರೆವಿಗೂ ಬೌಲಿಂಗ್ ಛಾನ್ಸ್ ಸಿಕ್ಕಿರಲಿಲ್ಲ. ಪ್ರೇಕ್ಷಕರ ಕಡೆಯಿಂದ ಬರುತ್ತಿದ್ದ ಮಾತುಗಳು ಅವನ ಮನಸ್ಸನ್ನು ಮತ್ತಷ್ಟು ಗಾಯಗೊಳಿಸುತ್ತಿತ್ತು.

ಕ್ಯಾಪ್ಟನ್ ಬೌಲಿಂಗ್ ಮಾಡಲು ರಾಯಣ್ಣನನ್ನು ಕರೆಯುತ್ತಿದ್ದಂತೆ ಅವನು ಬೆಚ್ಚಿಬಿದ್ದ. ಬಾಲು ಕೈಯ್ಯಲ್ಲಿ ಬರುತ್ತಿದ್ದಂತೆಯೇ ಕೈ ನಡುಗಿತು. ಧೈರ್ಯ ಸಂಪೂರ್ಣ ಕಳೆದುಹೋಗಿ ಕಾಲುಗಳು ಕುಸಿಯುವಂತಾಯಿತು. ಬಾಲ್ ತೆಗೆದುಕೊಂಡು ಓಡಬೇಕೆಂದರೆ ಮನಸ್ಸು, ಶರೀರ ಕೂಡಾ ಸಹಕರಿಸುವುದಿಲ್ಲವೆಂದಿತು. ರಾಯಣ್ಣ ಸ್ಪಿನ್ ಬೌಲರ್. ಅಂಪೈರ್ ಹಿಂದೆ ಹೋಗಿ ನಿಂತ. ಎದೆಯಲ್ಲಿ ತಳಮಳ. ಅದನ್ನು ಗೆಲ್ಲಬೇಕೆಂಬ ತವಕ. ಅಂತರಂಗದಲ್ಲಿ ಈ ಯುದ್ಧವನ್ನು ಗೆದ್ದೇತೀರಬೇಕೆಂಬ ಛಲ ! ಅಂಪೈರ್ ಸಿಗ್ನಲ್ ಕಂಡು ಕೈಯಲ್ಲಿದ್ದ ಬಾಲಿನ ಮೇಲೆ ಒಂದು ಕ್ಷಣ ದೃಷ್ಟಿಯನ್ನು ಕೇಂದ್ರೀಕರಿಸಿ ಮುಂದೆ ಬಂದ. ಇದ್ದಕ್ಕಿದ್ದಂತೆಯೇ ಸ್ಟೇಡಿಯಂನಲ್ಲಿ ನಾಲ್ಕು ಕಡೆಯಿಂದ ಕಿರುಚಾಟ "ರಾಯಣ್ಣ ಡೌನ್ ಡೌನ್." ಒಮ್ಮೆಗೆ ಅವನು ನಿಂತುಬಿಟ್ಟ.

'ಅದನ್ನು ಕೇಳಬೇಡ, ಇಲ್ಲಿಂದ ಓಡಿಹೋಗು' ಪುಕ್ಕಲುತನ ಎಚ್ಚರಿಸಿತು. ಅಗೋ ಅದೇ ನಿನ್ನ ಶತ್ರು. ಅದನ್ನು ಜಯಿಸಿ ನಿನ್ನ ನಿರಪರಾಧಿತ್ವ

ವನ್ನು ನಿರೂಪಿಸಿಕೊ. ಇದೇ ಅವಕಾಶ' ಎನ್ನುತ್ತಿದೆ, ಕಿರಣ್ಮಯಿ ರೂಪದ ಅಂತರಾತ್ಮ 'ನಿನ್ನ ದೃಷ್ಟಿಯನ್ನು ಗುರಿಯ ಮೇಲೆ ಕೇಂದ್ರೀಕರಿಸಿ ಸುತ್ತ ಮುತ್ತಲಿನ ಗಲಾಟೆ, ಕೂಗಾಟ ನಿನ್ನ ಕಣ್ಣಿಗೆ ಬೀಳಕೂಡದು. ಕಿವಿಗೆ ಕೇಳಿಸಕೂಡದು. ವಿಜಯ ಸಾಧಿಸಬೇಕೆಂದರೆ ನೋಟ, ಆತ್ಮ ಕೂಡಾ ಗುರಿಯ ಮೇಲೆಯೇ ಕೇಂದ್ರಿಕೃತವಾಗಿರಬೇಕು. ಯಾವ 'ಕಲೆ'ಯಾದರೂ ಅದೇ ಬುನಾದಿ.

ರಾಯಣ್ಣ ಮತ್ತೆ ಮುಂದಕ್ಕೆ ಬಂದ. ನಿಗ್ರಹವನ್ನು ಕೂಡಿಸಿಕೊಂಡು ಬೌಲ್ ಮಾಡಿದ. ಚೆನ್ನಾಗಿ ಸೆಟಲ್ ಆಗಿದ್ದ ಬ್ಯಾಟ್ಸ್‌ಮನ್ ಅದನ್ನು ಸುಲಭವಾಗಿ ಗಾಳಿಯಲ್ಲಿ ಹಾರಿಸಿದ. "ಫೋರ್ !" ಪ್ರೇಕ್ಷಕರಿಂದ ಬ್ಯಾಟ್ಸ್ ಮನ್‌ಗಾಗಿ ಚಪ್ಪಾಳೆಗಳು........ ರಾಯಣ್ಣನ ಬಗ್ಗೆ ಅದೇ ಕೂಗಾಟ........ ಎರಡನೇ ಚೆಂಡೂ ಅದೇ ಸ್ಥಳದಲ್ಲಿ ಬಿತ್ತು.... ಮತ್ತೆ ಫೋರ್...." ಆಗಿ ಹೋಯಿತು ರಾಯಣ್ಣ ನಿನ್ನ ಕ್ರಿಕೆಟ್ ಬದುಕು ಇಂದಿಗೆ ಮುಗಿದು ಹೋಯಿತು. ಮತ್ತೆರಡು ಬಾಲ್-ರನ್ನಿಲ್ಲ.

ಧೈರ್ಯವನ್ನು ಕೂಡಿಸಿಕೊಂಡು ಐದನೆ ಬಾಲ್ ಎಸೆದ. ಅದು ಸ್ವಲ್ಪ ಸ್ಪಿನ್ ಆಗಿದ್ದು, ಬ್ಯಾಟ್ಸ್‌ಮನ್ ಅದನ್ನು ಗಾಳಿಯಲ್ಲಿ ಹೊಡೆದದ್ದು ಆಯಿತು, ನಾಚಿಕೆಯಿಂದ, ಅವಮಾನದಿಂದ ಅವನು ತಲೆತಗ್ಗಿಸಿಕೊಂಡ. ಕ್ರಿಕೆಟ್ ಬದುಕಿನಲ್ಲಿ ಮೊದಲನೆ ಸಲ ಅವನ ಕಣ್ಣಲ್ಲಿ ನೀರು ಬಂತು. ತಾನು ಕ್ರಿಕೆಟರ್ ಆಗಿ ಸತ್ತುಹೋದ.

ಇದ್ದಕ್ಕಿದ್ದಂತೆ ಸ್ಟೇಡಿಯಂ ತುಂಬಾ ಚಪ್ಪಾಳೆಗಳ ಸುರಿಮಳೆ, ಫೋರಾ ಸಿಕ್ಸಾ ಎಂದು ತಲೆ ಎತ್ತಿ ನೋಡಲೂ ಅವನಿಗೆ ಧೈರ್ಯವಿರಲಿಲ್ಲ. ಯಾರೋ ಓಡಿಬಂದು ಅವನನ್ನು ತಬ್ಬಿಕೊಂಡಾಗ, ತಲೆ ಎತ್ತಿನೋಡಿದ. ಫೀಲ್ಡರ್ ಗಳೆಲ್ಲಾ ಓಡಿ ಬರುತ್ತಿದ್ದಾರೆ ತನ್ನೆಡೆಗೆ. ಬ್ಯಾಟಿಗೆ ತಗುಲಿದ ಬಾಲ್ ಮೇಲೆದ್ದು ಕವರ್‌ನಲ್ಲಿದ್ದ ಅಜ್ಜರುದ್ದೀನ್ ಕೈ ತಲುಪಿತ್ತು. ರಾಯಣ್ಣನ ಮುಖದಲ್ಲಿ ನಿಧಾನವಾಗಿ ಶಾಂತಿ ಮೂಡಿತು. ಮೊದಲನೆ ವಿಕೆಟ್ ತಾನೇ ಪಡೆದ. ದುಃಖದಿಂದ ಹುಟ್ಟಿದ ಕಣ್ಣೀರ ಹನಿ ಆನಂದಬಾಷ್ಪವಾಗಿ ಬದಲಾಗಿ ನೆಲವನ್ನು ಚುಂಬಿಸಿತು.

ಹೊಸ ಬ್ಯಾಟ್ಸ್‌ಮನ್ ಬಂದ. ಓವರಿನ ಕೊನೆಯ ಬಾಲ್ ಅದು. ಅದೊಂದನ್ನು ಮುಗಿಸಿದರೆ ಸ್ವಲ್ಪ ಹೊತ್ತು ತನಗೆ ಶಾಂತಿ ಸಿಗುತ್ತದೆ. ರಾಯಣ್ಣ ಚೆಂಡಿನೊಂದಿಗೆ ಮುಂದಕ್ಕೆ ಓಂದ, ಬ್ಯಾಟ್ಸ್‌ಮನ್ ರೈಟ್ ಹ್ಯಾಂಡರ್. ರಾಯಣ್ಣ ಎಡಗೈನಿಂದ ಬೌಲಿಂಗ್ ಮಾಡುತ್ತಾ ಅನಿರೀಕ್ಷಿತ ನಾಗಿ ಗೂಗ್ಲಿ ಹಾಕಿದ. ಬ್ಯಾಟ್ಸ್‌ಮನ್ ಎದುರಿಸುತ್ತಿದ್ದ ಮೊದಲ ಬಾಲ್ ಅದು, ಡಿಫೆನ್ಸೀವ್ ಆಗೀ ಆಡಬೇಕೆಂದಿದ್ದ ಅವನು ಬಾಲನ್ನು ಟಚ್‌ಮಾಡು ವಷ್ಟರಲ್ಲಿ ಅದು ಎಡಗಡೆಗೆ ಸ್ಪಿನ್ ಆಯಿತು. ಅವನು ಗಾಭರಿಯಿಂದ ಒಂದು ಹೆಜ್ಜೆ ಹಿಂದಕ್ಕೆ ಹಾಕಿ ಚೆಂಡನ್ನು ಹೊಡೆಯಲು ಹೋದ. ಚೆಂಡು ಹಾರಿ ಬ್ಯಾಟಿಗೆ ತಗುಲಿ ವಿಕೆಟ್‌ಕೀಪರ್ ಕೈಗೆ ಬಿದ್ದಿತು. ವಿಕೆಟ್‌ಕೀಪರ್ ಕಿರುಚಿದ್ದು, ಅಂಪೈರ್ ಔಟ್ ಕೊಟ್ಟಿದ್ದೂ ಒಮ್ಮೆಗೆ ನಡೆಯಿತು. ಎಲ್ಲಾ ನಡೆಯಿತು. ಎಲ್ಲಾ ಆಟಗಾರರೂ ಬಂದು ರಾಯಣ್ಣನನ್ನು ಮೇಲೆತ್ತಿದ್ದರು. ಸ್ಟೇಡಿಯಂ ಎಲ್ಲಾ ಕೂಗಾಟ, ಚಪ್ಪಾಳೆ, ಶಿಳ್ಳೆ. ಪಾಕೀಸ್ಥಾನ ಎರಡು ವಿಕೆಟ್ ನಷ್ಟಕ್ಕೆ ನೂರ ಮೂರು ರನ್ನುಗಳು. ಆ ಓವರ್ ನಂತರ ಲಂಚ,

ಡೆಲ್ಲಿ ಸೇರಿದ ನಂತರ ಮೊದಲನೆ ಸಲ ಜೊತೆಯ ಆಟಗಾರರೊಂದಿಗೆ ರೊಂದಿಗೆ ನಗುತ್ತಾ ಮಾತನಾಡಲಾರಂಭಿಸಿದ ರಾಯಣ್ಣ. ಒಂದು ಸಣ್ಣ ವಿಜಯ ಎಷ್ಟು ಸಂತೋಷ ನೀಡುತ್ತದೆಂದು ಅನುಭವಕ್ಕೆ ಬಂತು.

ಲಂಚ್ ನಂತರ ಎರಡನೆ ಓವರ್ ಮತ್ತೆ ರಾಯಣ್ಣನದು. ಅವನಲ್ಲಿ ಆತ್ಮವಿಶ್ವಾಸ ಮತ್ತೆ ಮೂಡಿ ಬಂತು. ಲಕ್ಷ್ಮಿಯ ಸಾವು, ತನ್ನ ಅರೆಸ್ಟ್ ಬೆಯಿಲ್—ಏನೂ ಅವನ ಮನಸ್ಸಿನಲ್ಲಿ ಬರಲಿಲ್ಲ–ಈಗ. ತನ್ನ ಗುರಿ ಎದುರಿನಲ್ಲಿರುವ ಬ್ಯಾಟ್ಸ್‌ಮನ್‌ನನ್ನು ಔಟ್‌ಮಾಡುವುದು. ಬ್ಯಾಟ್ ಮಾಡುತ್ತಿದ್ದ ಮಿಯಾಂದಾದ್ ಅತ್ಯಂತ ಶ್ರೇಷ್ಠ ಬ್ಯಾಟ್ಸ್‌ಮನ್. ರಾಯಣ್ಣನ ಬೌಲಿಂಗನ್ನು ನೋಡಿದವನಾದ್ದರಿಂದ ಎಚ್ಚರಿಕೆಯಿಂದ ಗಮನಿ ಸುತ್ತಿದ್ದ. ಅಷ್ಟರಲ್ಲಿ ರಾಯಣ್ಣ ಆಫ್‌ಸ್ಪಿನ್ ಬೌಲ್ ಮಾಡಿದ. ಅದು ಬ್ಯಾಟ್ ಪಕ್ಕದಿಂದ ಬಲಗಡೆಗೆ ತಿರುಗಿತು. ಮಿಯಾಂದಾದ್ ಕಾಲನ್ನು ಹಿಂದಕ್ಕೆ ತೆಗೆದುಕೊಳ್ಳುವುದರೊಳಗಾಗಿ ಅದು ಮಿಂಚಿನ ವೇಗದಲ್ಲಿ ಅವನ

ಕಾಲಿಗೆ ಬಡಿಯಿತು. ಅಂಪೈರ್ ಕೈ ಮೇಲೆತ್ತಿದ್ದ. ಎಲ್.ಬಿ.ಡಬ್ಲ್ಯೂ. ಕ್ಲೈಮ್ ಮಾಡಿದ್ದ ಫೀಲ್ಡರ್‌ಗಳು ಕುಣಿದಾಡಿದರು.

ನಿಶ್ಶಬ್ದದಿಂದ ಹುಟ್ಟಿದ ಚೀರಾಟದಿಂದ ಸ್ಟೇಡಿಯಂ ನಡುಗಿತು. ಕಿವಿಗಳು ತೂತು ಬೀಳುವಷ್ಟು ಶಬ್ದ. ಎಲ್ಲರೂ ಸಂತೋಷದಿಂದ ಕುಣಿದಾಡುತ್ತಿದ್ದರು.

ಪಾಕೀಸ್ಥಾನ್ ಟೀಮಿನ ಅತಿ ಮುಖ್ಯವಾದ ಆಟಗಾರ ಕೇವಲ ಎರಡೇ ರನ್ನಿಗೆ ಔಟಾದದ್ದು ಎಲ್ಲರಿಗೂ ಉತ್ತೇಜನ ನೀಡಿತ್ತು. ಕಾಲೇಜ್ ವಿದ್ಯಾರ್ಥಿನಿಯರು ತಾವು ಬಂದ ಕೆಲಸವನ್ನು ಮರೆತು ಜಯಕಾರ ಮಾಡತೊಡಗಿದರು.

ಅಜ್ಜರುದ್ದೀನ್–ಜೊತೆಗೆ ಇತರ ಆಟಗಾರರೊಂದಿಗೆ–ಬಂದು ರಾಯಣ್ಣನನ್ನು ಅಭಿನಂದಿಸಿದ.

ಸದಾ ಗಂಭೀರವಾಗಿರುವ ಕಿರಣ್ಮಯಿಯ ಕಣ್ಣಗಳಲ್ಲಿ ನೀರು ಬಂತು. ಸಂತೋಷದಿಂದ ಕಣ್ಣೀರೊರಸಿಕೊಂಡಳು. ಇನ್ನು ಏನಾದರೂ ಪರವಾಗಿಲ್ಲ. ಸೋಲೆಂಬ ಕೆಸರಿನಲ್ಲಿ ಹುದುಗಿ ಹೋಗುತ್ತಿದ್ದವನಿಗೆ ಒಂದು ರೆಂಬೆಯ ಆಧಾರ ಸಿಕ್ಕಿತು. ಹೇಗಾದರೂ ಬಚಾವಾಗಬಲ್ಲ. ರಾಯಣ್ಣ ಇನ್ನು ಹೇಗೆ ಆಡಿದರೂ ಪರವಾಗಿಲ್ಲ. ಈ ಹ್ಯಾಟ್ರಿಕ್ಕನ್ನು ಮಾತ್ರ ಪ್ರೇಕ್ಷಕರು ಮರೆಯುವುದಿಲ್ಲ.

ಅವಳು ನಿರೀಕ್ಷಿಸಿದಂತೆಯೇ ರಾಯಣ್ಣ ಮತ್ತಷ್ಟು ವಿಜೃಂಭಿಸಿದ. ಅನಂತರ ಅವನು ಮಾಡಿದ ಹತ್ತು ಓವರ್‌ಗಳಲ್ಲಿ ಕೇವಲ ಇಪ್ಪತ್ತು ರನ್‌ಗಳನ್ನು ಕೊಟ್ಟು ಮತ್ತೊಂದು ವಿಕೆಟ್ ಪಡೆದ.

ಅಂದಿನ ಆಟ ಮುಗಿಯಲು ಅರ್ಧ ಗಂಟೆಯಿದ್ದಾಗ ಪಾಕೀಸ್ಥಾನ್ ತಂಡ ಇನ್ನೂರ ಇಪ್ಪತ್ತು ರನ್‌ಗಳಿಗೆ ಎಲ್ಲಾ ಔಟಾದರು.

ನೈಟ್‌ವಾಚ್‌ಮನ್ನಾಗಿ ಬಂದ ಭಾರತದ ಆಟಗಾರರು ಎಂಟು ರನ್ನುಗಳನ್ನು ಮಾಡಿದರು.

ರಾಯಣ್ಣ ಪೆವಿಲಿಯನ್‌ಗೆ ಹಿಂತಿರುಗುತ್ತಿದ್ದಾಗ ಅಭಿಮಾನಿಗಳು

ಸುತ್ತುವರಿದರು. ಆಟೋಗ್ರಾಫ್ ಕೊಡುತ್ತಲೇ ಅವನ ಕಣ್ಣು ಕಿರಣ್ಮಯಿ ಗಾಗಿ ಹುಡುಕತೊಡಗಿತು. ಅವರೆಲ್ಲೂ ಕಾಣಲಿಲ್ಲ.

o o o

ಈ ಸಮಯದಲ್ಲಿ ನಾನು ಅವರ ಹೆಂಡತಿಯಾಗಿ ನಾಲ್ಕಾರು ಜನಕ್ಕೆ ಪರಿಚಯ ಆಗುವುದು ಸರಿಯಲ್ಲ. ಆಟದಲ್ಲಿ ಅವರು ವಿಜಯ ಸಾಧಿಸಬೇಕು. ನಾನು ನನ್ನ ಕೆಲಸದಲ್ಲಿ ಯಶಸ್ವಿಯಾಗಬೇಕು. ಆಗಲೇ ಇಬ್ಬರೂ ಸೇರಿ ಎಲ್ಲರಿಗೂ ಪರಿಚಯ ಆಗಬೇಕು. ಕಿರಣ್ಮಯಿ ಹೇಳಿದಳು ರಾಯಣ್ಣನ ಸ್ನೇಹಿತನಿಗೆ.

ಅವಳು ಅದೇ ಸಂಜೆ ಹೈದರಾಬಾದ್ ಟ್ರೈನ್ ಹತ್ತಿದಳು.

ಮಾರನೆ ದಿನ ಆಟ ಪ್ರಾರಂಭವಾಗುತ್ತಿದ್ದಂತೆಯೇ ಭಾರತ ತಂಡ ಇಕ್ಕಟ್ಟಿಗೆ ಸಿಲುಕಿತು. ಸಾಮಾನ್ಯವಾಗಿ ಕೊನೆಯ ದಿನ ಬ್ಯಾಟಿಂಗ್ ಮಾಡು ವುದು ಕಷ್ಟವೇ. ಅರವತ್ತು ರನ್ನುಗಳಿಗೆ ನಾಲ್ಕು ವಿಕೆಟ್‌ಗಳು ಹೋಗಿದ್ದವು. ಈಗಾಗಲೇ ಪಾಕೀಸ್ಥಾನ್ ಮೊದಲ ಇನ್ನಿಂಗ್ಸ್ ಲೀಡ್‌ನಲ್ಲಿತ್ತು. ಇನ್ನು ಅರವತ್ತು ರನ್‌ಗಳೊಳಗಾಗಿ ಭಾರತವನ್ನು ಔಟ್‌ಮಾಡಿದರೆ ಭಾರತ ಇನ್ನಿಂಗ್ಸ್ ಡಿಫೀಟ್ ಎದುರಿಸಬೇಕಾಗುತ್ತದೆ. ಅದಕ್ಕಿಂತಲೂ ಬೇರೆ ಅವಮಾನವಿಲ್ಲ.

ರಾಯಣ್ಣ ಬ್ಯಾಟನೊಂದಿಗೆ ಫೀಲ್ಡಿಗೆ ಬಂದಾಗ ಪ್ರೇಕ್ಷಕರೆಲ್ಲಾ ಟೆನ್ಷನ್ ನಿಂದಿದ್ದರು. ಇನ್ನೂ ಆರು ಗಂಟೆಗಳ ಕಾಲ ನಿಂತು ಆಡಬೇಕು. ಮುಖ್ಯ ವಾದ ನಾಲ್ವರು ಔಟಾಗಿದ್ದಾರೆ. ರಾಯಣ್ಣ ಶ್ರೇಷ್ಠವಾಗಿ ಬೌಲ್‌ಮಾಡಿರ ಬಹುದು. ಆದರೆ ಅವನು ಮೊದಲ ಇನ್ನಿಂಗ್ಸ್‌ನಲ್ಲಿ ರನ್‌ಗಳಿಸದೆ ಔಟಾಗಿದ್ದ ಹಾಗಾಗಿ ಅವನನ್ನು ಒಳ್ಳೆಯ ಬ್ಯಾಟ್ಸ್‌ಮನ್ ಎಂದು ಯಾರೂ ಗಣನೆಗೆ ತೆಗೆದುಕೊಳ್ಳುವುದಿಲ್ಲ.

ಪಾಕಿಸ್ಥಾನ್ ಕಡೆ ವಾಸೀಮ್ ಅಕ್ರಂ ಬೌಲಿಂಗ್ ತೆಗೆದುಕೊಂಡ. ರಾಯಣ್ಣ ಯಶಸ್ವಿ ಬೌಲರ್ ಎನ್ನಿಸಿಕೊಂಡಿದ್ದರಿಂದಲೋ ಏನೋ ಅಕ್ರಂ ಸೇಡಿನಿಂದ ಎಂಬಂತೆ ಮೊದಲನೇ ಬಾಲನ್ನೇ ಬೌನ್ಸರ್ ಹಾಕಿದ. ಪಿಚ್ ಮೇಲೆ ಚೆಂಡು ಬಿದ್ದ ಜಾಗದಲ್ಲಿ ಒಂದು ಸಣ್ಣ ಕಲ್ಲಿದ್ದರಿಂದ, ಚೆಂಡು ನಿರೀಕ್ಷಿಸಿದ್ದಕ್ಕಿಂತಲೂ ಮೇಲೇರಿ, ರಾಯಣ್ಣನ ಮುಖದ ಪಕ್ಕದಿಂದ ನುಗ್ಗಿ ಅವನ ಕಣ್ಣಿನ ಕೆಳಗೆ ಬಡಿಯಿತು.

ನರಗಳು ಕತ್ತರಿಸಿದಂತಾಗಿ ಅವನು ಕುಸಿದು ಕುಳಿತ. ಅಲ್ಲಿಂದ ಹಾಗೆಯೇ ಅವನನ್ನು ಎಕ್ಸ್‌ರೇಗೆ ಎತ್ತಿಕೊಂಡು ಹೋದರು. ಕೂದಲೆಳೆಯಷ್ಟು ಫ್ರಾಕ್ಚರ್ ಆಗಿತ್ತು. ಅದಕ್ಕಿಂತಲೂ ಹೆಚ್ಚಾಗಿ ಸಹಿಸಲಾರದಂತಹ ನೋವು. ಕೆಲವೇ ಕ್ಷಣಗಳಲ್ಲಿ ಮುಖದ ಎಡಭಾಗ ಊದಿಕೊಂಡು ವಿಕೃತವಾಗಿ ಕಾಣ ತೊಡಗಿದ.

ಡಾಕ್ಟರೊಡನೆ ಅವನು ಮತ್ತೆ ಗ್ರೌಂಡಿಗೆ ಬರುವ ವೇಳೆಗೆ ಭಾರತ ಎಂಭತ್ತುರನ್ನುಗಳಿಗೆ ಎಂಟು ವಿಕೆಟ್‌ಗಳನ್ನು ಕಳೆದುಕೊಂಡು ಸೋಲುವ ಸೋಲುವ ಹಂತ ತುಲಪಿತ್ತು. ಪ್ರೇಕ್ಷಕರಲ್ಲಿ ನಿಶ್ಶಬ್ದ.

ತಗುಲಿದಾಗ ಅಷ್ಟೇನೂ ನೋಯದಿದ್ದರೂ ನಂತರ ತಡೆಯಲಾರದ ನೋವು ಕಂಡಿತು.

"ಒಂದು ವಾರ ರೆಸ್ಟ್ ತೆಗೆದುಕೊಂಡರೆ ಕಡಿಮೆಯಾಗುತ್ತದೆ." ಡಾಕ್ಟರ್ ಹೇಳಿದರು. ರಾಯಣ್ಣ ಏನೋ ಹೇಳಲು ಹೋದಾಗ ಭಾರತದ ಮತ್ತೊಬ್ಬ ಬ್ಯಾಟ್ಸ್‌ಮನ್ ಔಟಾದ.

ಪಾಕೀಸ್ಥಾನ್ ಆಟಗಾರರು ನೆಗೆದಾಡುತ್ತಾ ಸಂತೋಷಪಡುತ್ತಿದ್ದರು.

ಅವನು ಒಂಭತ್ತನೆಯವನು.

ಅಷ್ಟೆ.

ಭಾರತಕ್ಕೆ ಇನ್ನಿಂಗ್ಸ್ ಡಿಫೀಟ್ ತಪ್ಪಿದ್ದಲ್ಲ. ಅಜ್ಜರುದ್ದೀನ್ ಒಬ್ಬನೇ ಆಡುತ್ತಿರುವವನು.

ಅವನು ಆಟಗಾರರ ಗ್ಯಾಲರಿ ಕಡೆಗೆ ನೋಡುತ್ತಿದ್ದಾನೆ. ಪಾಕೀಸ್ಥಾನದ ಆಟಗಾರರಿನ್ನೂ ಫೀಲ್ಡ್ ಬಿಟ್ಟು ಬರಲಿಲ್ಲ. ಅದರ ಅರ್ಥ.... ಇನ್ನೂ ಆಟ

ಪೂರ್ತಿಯಾದಂತೆ ಅಂಪೈರ್‌ಗಳು ಹೇಳಲಿಲ್ಲ. ಅದುವರೆವಿಗೆ ಲಂಚ್‌ಟೈಮ್ ಆಯಿತು.

ರಾಯಣ್ಣ ಆಡುತ್ತಾನೋ ಇಲ್ಲವೋ ತಿಳಿಯದೆ ಅವರು ಪೆವಿಲಿಯನ್ ಕಡೆಗೆ ನೋಡಿದರು. ಅವನ ಕಣ್ಣಿನ ಎಲುಬು ಮುರಿದಿರುವ ವಿಷಯ ಅವರಿಗಿನ್ನೂ ತಿಳಿದಿಲ್ಲ. ಆಗತಾನೆ ಔಟಾದ ಭಾರತದ ಆಟಗಾರ ನಿಧಾನವಾಗಿ ಹಿಂತಿರುಗುತ್ತಿದ್ದ. ರಾಯಣ್ಣ ಎದ್ದು ನಿಂತವನೇ, "ನಾನು ಆಡುತ್ತೇನೆ" ಅಂದ. ಡ್ರೆಸ್ಸಿಂಗ್ ರೂಮಿನಲ್ಲಿದ್ದವರು, ಉಳಿದ ಆಟಗಾರರು ತಲೆ ತಿರುಗಿಸಿ ನೋಡಿದರು. ಅದುವರೆವಿಗೂ ಇದ್ದ ಗುಸು ಗುಸು ಮಾತುಗಳು ಕೂಡಾ ನಿಂತವು.

ರಾಯಣ್ಣ ಹೇಳುತ್ತಿರುವುದು ನಿಜವೋ ಅಥವಾ ಅವನಿಗೇನಾದರೂ ತಲೆ ಕೆಟ್ಟಿದಿಯೋ ಎಂದು ಅರ್ಥವಾಗದ ಡಾಕ್ಟರ್ ಅವನೆಡೆಗೆ ಒಂದು ಕ್ಷಣ ದಿಗ್ಭ್ರಮೆಯಿಂದ ನೋಡಿ." ಏನು ಹೇಳ್ತಿದೀರಾ? ಫ್ರಾಕ್ಚರ್ ಆಗಿದೆ ಅಂದ್ರೆ ಆಡ್ತೀನಿ ಅಂತಿದೀರಲ್ಲಾ...." ಎಂದರು. ರಾಯಣ್ಣ ಅವರೆಡೆಗೆ ನೋಡಿದ. 'ಮುರಿದಿರುವುದು ಕೈ ಎಲುಬು ಅಲ್ಲವಲ್ಲಾ ಡಾಕ್ಟರ್–ಹೇಳಿ ಹೆಚ್ಚು ಸಮಯ ವಿಲ್ಲ. ನಾನು ಆಡುವುದು ಪ್ರಾಣಕ್ಕೇನಾದರೂ ತೊಂದರೆಯಾಗುತ್ತದಾ? ಇಲ್ಲೂ ಐದು ನಿಮಿಷದಲ್ಲೇ ಎಚ್ಚರ ತಪ್ಪಿ ಬೀಳುತ್ತೇನೊ?"

"ಆದೆಲ್ಲಾ ಆಗದಿರಬಹುದು. ಆದರೆ ಒಂದು ಕಣ್ಣಿನಿಂದ ಆಡುವುದು ಕಷ್ಟ.... ಅದೂ ಮುಖದಲ್ಲಿಯ ಎಲುಬು—"

"ಆ ವಿಷಯ ನನಗೆ ಬಿಡಿ—"

"ಎಷ್ಟು ಹೊತ್ತು ಆಡ ಬಲ್ಲರಿ.... ಕಾಲುಗಂಟೆ.... ಅರ್ಧಗಂಟೆ?"

"ನಮ್ಮ ಸೋಲನ್ನು ಅರ್ಧ ಗಂಟೆ ಮುಂದಕ್ಕೆ ಹಾಕಿದರೂ, ಅಷ್ಟೇ ಸಾಕು ಡಾಕ್ಟರ್."

ಡಾಕ್ಟರ್ ಸುಮ್ಮನಾದರು.

ರಾಯಣ್ಣ ಆಡುವನೆಂದು ಪ್ರಕಟಿಸಿದರು. ಅಂಪೈರ್‌ಗಳು 'ಲಂಚ್' ಹೇಳುತ್ತಿದ್ದಂತೆಯೇ ಆಟಗಾರರೆಲ್ಲಾ ಪೆವಿಲಿಯನ್‌ಗೆ ಹಿಂತಿರುಗಿದರು. ಅದುವರೆವಿಗೂ ಫೀಲ್ಡಿನಲ್ಲಿದ್ದ ಅಜ್ಜರುದ್ದೀನ್‌ಗೆ ಹೊರಗೆ ನಡೆಯುತ್ತಿದ್ದ

ವಿಷಯಗಳೇನೂ ತಿಳಿಯುತ್ತಿರಲಿಲ್ಲ. ರಾಯಣ್ಣನ ಮುಖದಲ್ಲಿ ಎಲುಬು ಮುರಿದಿದೆಯೆಂದೂ, ಆದರೂ ಅವನು ಆಡುತ್ತಾನೆಂದು ತಿಳಿದಾಗ 'ಏಕಂತೆ ?' ಅಂದ,

"ಕನಿಷ್ಟ ಇನ್ನಿಂಗ್ಸ್ ಡಿಫೀಟ್‌ನಿಂದ ತಪ್ಪಿಸಿಕೊಳ್ಳಲಾದರೂ ನಿಮಗೆ ಯಾರಾದ ೂ ಜೊತೆಗೆ ಸ್ಟಾಂಡ್ ಕೊಡಬೇಕಲ್ಲಾ ?"

"ಸೋಲು ಹೇಗೂ ತಪ್ಪುವುದಿಲ್ಲ ಆದರೆ ನೀವೀಗೆ ಆಡಿದರೆ ಗಾಯ ಮತ್ತಷ್ಟು ಹೆಚ್ಚಾಗಬಹುದು. ಈಗಲೇ ನಿಮಗೆ ಭಾರತದ ಟೀಮಿನಲ್ಲಿ ಛಾನ್ಸ್ ಸಿಗುವ ಅವಕಾಶವಿದೆ. ಅನವಶ್ಯಕವಾಗಿ ಗಾಯವನ್ನು ಹೆಚ್ಚು ಮಾಡಿ ಕೊಂಡರೆ ಆ ಅವಕಾಶವೂ ಹೋಗಬಹುದು ಯೋಚಿಸಿ...."

"ಒಬ್ಬ ಕ್ಯಾಪ್ಟನ್ ಆಗಿ ನೀವು ನನ್ನನ್ನು ಬ್ಯಾಟಿಂಗ್ ಮಾಡಬೇಡ ವೆಂದರೆ ಬಿಡುತ್ತೇನೆ. ಆದರೆ 'ನನ್ನ ಭವಿಷ್ಯ ರಿಸ್ಕ' ಎಂಬ ಸ್ವಾರ್ಥದಿಂದ ಬಿಡಲು ಮಾತ್ರ ಸಿದ್ಧನಿಲ್ಲ. ನಮ್ಮ ಪ್ರೆಸ್ಟೀಜ್ ಮುಂದೆ ನಮ್ಮ ಭವಿಷ್ಯತ್ತು ಮುಖ್ಯವಲ್ಲ. ಸಾಧ್ಯವಾದಷ್ಟು ಹೊತ್ತು ನಿಮಗೆ ಸಪೋರ್ಟ್ ಕೊಡುತ್ತೇನೆ. ಒಪ್ಪಿಕೊಳ್ಳಿ."

"ಸರಿ ನಿಮ್ಮಿಷ್ಟ." ಕ್ಯಾಪ್ಟನ್ ಹೇಳಿದ. ಅವನ ಕಣ್ಣಲ್ಲಿ ಮೆಚ್ಚಿಗೆ ವ್ಯಕ್ತವಾಗುತ್ತಿತ್ತು.

ಎದುರು ಟೀಂ ಇದನ್ನು ತುಂಬಾ ಹಗುರವಾಗಿ ತೆಗೆದುಕೊಂಡಿತು.

ಎಷ್ಟು ಹೊತ್ತು ? ಹತ್ತು ನಿಮಿಷಗಳಲ್ಲಿ ಆಟ ಮುಗಿದು ಹೋಗುತ್ತ ದೆಂದುಕೊಂಡರು.

ಲಂಚ್ ಮುಗಿದ ನಂತರ ಬೌಲಿಂಗ್ ಪ್ರಾರಂಭಿಸಿದರು. ಐದು... ಹತ್ತು ನಿಮಿಷ.... ಕಾಲು ಗಂಟೆ....

ಭಾರತದ ಸ್ಕೋರು ಮತ್ತೆ ಹತ್ತು ರನ್ನುಗಳು ಹೆಚ್ಚಾದವು.

ಇನ್ನು ಐದು ರನ್ನುಗಳನ್ನು ಮಾಡಿದರೆ, ಸೋಲು ತಪ್ಪದಿದ್ದರೂ, ಅವಮಾನಕರವಾದ ಇನ್ನಿಂಗ್ಸ್ ಡಿಫೀಟ್ ತಪ್ಪುತ್ತದೆ. ಇನ್ನು ಹತ್ತು ರನ್ ಮಾಡಬೇಕೆಂಬ ಟೆನ್ಷನ್‌ನಿಂದ ಇದ್ದಾರೆ ಅಜುರುದ್ದೀನ್ ಮತ್ತು ರಾಯಣ್ಣ.

ಮೊದಲು ಇದನ್ನು ಹಗುರವಾಗಿ ತೆಗೆದುಕೊಂಡ ಪಾಕೀಸ್ಥಾಗಳು

ಎಂತಹ ಪರಿಸ್ಥಿತಿಯಲ್ಲೂ ಇದು ಸಾಧ್ಯವಾಗ ಕೂಡದೆಂಬ ಛಲ ಹೊತ್ತರು, ಹಾಗಾಗಿ ಫಾಸ್ಟ್ ಬೌಲರ್‌ಗಳನ್ನು ಆಕ್ರಮಣಕ್ಕೆ ಬಿಟ್ಟರು. ರಾಯಣ್ಣನ ಗಾಯದ ವಿಷಯ ಅವರಿಗೆ ಅನವಶ್ಯಕ. ಅವರಿಗೆ ಅವನು ಔಟ್ ಆಗ ಬೇಕಾದ್ದು ಅಷ್ಟೆ ಮುಖ್ಯ!

ವೇಗವಾಗಿ ಬೌನ್ಸರ್‌ಗಳನ್ನು ಹಾಕಲಾರಂಭಿಸಿದರು.

ಮುಖದ ಪಕ್ಕದಿಂದ ಬಾಣಗಳಂತೆ ನುಗ್ಗಲಾರಂಭಿಸಿದವು ಚೆಂಡುಗಳು. ಅತಿ ಕಷ್ಟಪಟ್ಟು ನಾಲ್ಕು ಬಾಲ್‌ಗಳನ್ನು ಆಡಿದ. ಮುಖದಲ್ಲಿ ಸಹಿಸಲಾರ ದಂತಹ ನೋವು. ಹಲ್ಲುಗಳನ್ನು ಕಚ್ಚಿಹಿಡಿದು ನೋವನ್ನು ಸಹಿಸಿದ. ಓವರ್ ಮುಗಿಯುತ್ತಿದ್ದಂತೆಯೇ ಅಜ್ಜರುದ್ದೀನ್ ಬ್ಯಾಟಿಂಗ್‌ಗೆ ಬಂದ. ಎರಡು ರನ್ ಮಾಡಿದ.

ಎರಡು ಬಾಲ್‌ಗಳ ನಂತರ ಮತ್ತೆರಡು ರನ್‌ಗಳು....

ಓಡುತ್ತಿದ್ದಂತೆ ಮುಖ ಕದಲಿ ಮತ್ತಷ್ಟು ನೋವು—ಓವರ್ ಪೂರ್ತಿ ಯಾಯಿತು.

ರಾಯಣ್ಣ ಬ್ಯಾಟಿಂಗ್ ಸ್ಕೋರ್ ಬೋರ್ಡಿನ ಮೇಲೆ ಅಂಕಿಗಳು ಮಿರುಗುತ್ತಿದ್ದವು.

ಭಾರತ : ಮೊದಲನೆ ಇನ್ನಿಂಗ್ಸ್–128 ಎರಡನೆ ಇನ್ನಿಂಗ್ಸ್–91ಕ್ಕೆ 9
ಪಾಕೀಸ್ಥಾನ ಮೊದಲನೆ ಇನ್ನಿಂಗ್ಸ್–220.

ಬೌಲರ್ ಹಾಕಿದ ಬಾಲನ್ನು ಬೀಸಿ ಹೊಡೆದ. ಗ್ರೌಂಡೆಲ್ಲಾ ಚಪ್ಪಾಳೆ ಗಳ ಸುರಿಮಳೆ, ನಾಲ್ಕು ರನ್‌ಗಳು. ಜನರೆಲ್ಲಾ ಮೇಲೆದ್ದು ಹರ್ಷೋ ದ್ಗಾರ ಮಾಡುತ್ತಿದ್ದರು.

ಭಾರತ ಇನ್ನಿಂಗ್ಸ್ ಡಿಫೀಟನ್ನು ತಪ್ಪಿಸಿಕೊಂಡಿತು. ಟೀ ವಿರಾಮದ ಸಮಯದಲ್ಲಿ ನೋವಿನ ಉಪಶಮನಕ್ಕಾಗಿ ಇಂಜೆಕ್ಷನ್ ಹಾಕಿಸಿಕೊಂಡ ರಾಯಣ್ಣ. ಮತ್ತೆ ಆಟ ಪ್ರಾರಂಭವಾಯಿತು.

ಪಾಕೀಸ್ಥಾನ್ ಆಟಗಾರರಲ್ಲಿ ಈಗ 'ಸೇಡು ಮತ್ತೆ ಹೆಚ್ಚಾಯಿತು. ಪ್ರೇಕ್ಷಕರೆಲ್ಲಾ ಭಾರತವೇ ಗೆದ್ದಂತೆ ಚಪ್ಪಾಳೆ ತಟ್ಟುತ್ತಿದ್ದರು. ಇನ್ನೂ ಒಂದೂವರೆ ಗಂಟೆಗಳ ಕಾಲವಿತ್ತು ಆಟ ಪೂರ್ತಿಯಾಗಲು. ಭಾರತ

ಸೋಲುವುದು ಗ್ಯಾರಂಟಿ, ಕೇವಲ ಇನ್ನಿಂಗ್ಸ್ ಡಿಫೀಟ್ ತಪ್ಪಿತಲ್ಲ ಎಂದು ಎಂದು ಪ್ರೇಕ್ಷಕರ ಸಂತೋಷ.

ಇಮ್ರಾಂಖಾನ್ ವೇಗವಾಗಿ ಓಡಿ ಬರುತ್ತಿದ್ದ. ಆ ಬಾಲೇನಾದರೂ ವಿಕೆಟ್ಟಿಗೆ ಬಿದ್ದಿದ್ದರೆ ವಿಕೆಟ್ ಎರಡು ತುಂಡಾಗುತ್ತಿತ್ತು. ಅಷ್ಟು ವೇಗವಾಗಿ ಬರುತ್ತಿತ್ತು. ರಾಯಣ್ಣ ಕಾಲನ್ನು ಮುಂದೆ ಇಟ್ಟು ಚಾಣಾಕ್ಷತೆಯಿಂದ 'ಲೇಟ್‌ಕಟ್' ಮಾಡಿದ. ಚೆಂಡು ಬೌಂಡರಿ ದಾಟಿತು.

ಜನ ತಮ್ಮ ಸ್ಥಾನದಲ್ಲಿ ಕುಳಿತುಕೊಳ್ಳಲಾರದೆ ಹೋದರು.

ರಾಯಣ್ಣನಿಗೆ ಒಂದು ವಿಷಯ ಅರ್ಥವಾಯಿತು. ಇನ್ನು ತಾವು ಎಷ್ಟು ರನ್ನುಗಳನ್ನು ಮಾಡಿದರೆ – ಪಾಕೀಸ್ಥಾನ ಗೆಲ್ಲಲು ಅಷ್ಟು ರನ್ನುಗಳನ್ನು ಮಾಡಿದರೆ – ಪಾಕೀಸ್ಥಾನ ಗೆಲ್ಲಲು ಅಷ್ಟು ರನ್ನುಗಳನ್ನು ಮಾಡಬೇಕು. ಒಂದೂವರೆ ಗಂಟೆಗಳ ಕಾಲ ತಾವು ಆಡಲಾರೆವು. ಹಾಗಾಗಿ ಸೋಲುವ ಮುಂಚೆ ರಿಸ್ಕ್ ತೆಗೆದುಕೊಂಡರೂ ಪಳವಾಗಿಲ್ಲ.

ಈ ಆಲೋಚನೆ ಬರುತ್ತಿದ್ದಂತೆಯೇ ಅವನು ಎಚ್ಚರಗೊಂಡ. ಕೈಗಳ ನಡುವೆ ಇದ್ದ ಬ್ಯಾಟ್ ಬಿಗಿದುಕೊಂಡಿತು. ಎದುರಿಗೆ ಸ್ಪಿನ್ ಬೌಲರ್ ಡ್ಯಾನ್ಸ್ ಮಾಡುತ್ತಿರುವವನಂತೆ ಬಂದು ಗಾಳಿಯಲ್ಲಿ ಚೆಂಡನ್ನೆಸೆದು 'ಹೊಡಿ' ಎಂಬ ರೊಚ್ಚಿಗೆಬ್ಬಿಸಿದ. ಹೀಗೆ ಮಾಡುವುದು ಸಾಮಾನ್ಯವೇ. ಆದರೆ ಅವನು ರಾಯಣ್ಣನನ್ನು ಕಡಿಮೆ ಅಂದಾಜು ಮಾಡಿದ್ದ.

ಅವನ ಕವರ್ ಡ್ರೈವ್‌ನಲ್ಲಿ ವೆಂಗಸರ್ಕಾರ್ ಛಾಯೆಯೂ, ಕಳೆಯೂ ಇತ್ತು. ರಾಯಣ್ಣ ಎಡಗಾಲನ್ನು ಮುಂದಿಟ್ಟು ಚೆಂಡನ್ನು ಗಾಳಿಯಲ್ಲಿ ಚಚ್ಚಿದ. ಮೋಡದೆಡೆಗೆ ನುಗ್ಗಿ ಹೋದ ಚೆಂಡು ಗ್ರೌಂಡಿನ ಆಚೆ ಕಾರುಗಳ ನಡುವೆ ಬಿತ್ತು.

ಸಮುದ್ರದ ಮಧ್ಯೆ ಸುಂಟರ್‌ಗಾಳಿ ಎದ್ದರೆ ಅಲೆಗಳು ಹೇಗೆ ಶಬ್ದ ಮಾಡಿಕೊಂಡು ಅಬ್ಬರದಿಂದ ನುಗ್ಗುತ್ತದೋ ಹಾಗೆಯೇ ಸ್ಟೇಡಿಯಂನಲ್ಲಿಯ ಹರ್ಷೋದ್ಗಾರ ಕೇಳಿಸಿತು.

ರಾಯಣ್ಣ ಸುತ್ತಲೂ ನೋಡಿದ. ಎಲ್ಲರೂ ಎದ್ದುನಿಂತು ಚಪ್ಪಾಳೆ ತಟ್ಟುತ್ತಿದ್ದಾರೆ.

ಜನ ! ನೆನ್ನೆಯೆಲ್ಲಾ ತನ್ನನ್ನು ಗೇಲಿಮಾಡಿ ಅವಹೇಳನ ಮಾಡಿದ ಜನ!

ರಾಯಣ್ಣನಿಗೆ ಒಂದು ವಿಷಯ ಮನದಟ್ಟಾಯಿತು. ತಾನು ನೆಲಕ್ಕೆ ಬಿದ್ದು ಒದ್ದಾಡುತ್ತಿದ್ದಾಗ ಇರುವೆಯನ್ನು ಹೊಸಕಿ ಹಾಕುವಂತೆ ಹೊಸಕಿ ಹಾಕಿದ ಈ ಜನ ಈಗ ಆಕಾಶಕ್ಕೇರಿಸುತ್ತಿದ್ದಾರೆ.

ಆಕಸ್ಮಿಕವಾಗಿ ತಾನೊಂದು ಯುದ್ಧಭೂಮಿಯಲ್ಲಿರುವಂತೆ ಅನ್ನಿಸಿತು. ಸಾವಿರಾರು ಕಣ್ಣುಗಳು ತನ್ನ ಪಿನ್ಯಾಸವನ್ನು ನೋಡುವ ಕುತುಹಲದಿಂದಿರುವಂತೆ ಅವನಿಗನ್ನಿಸಿತು. ತನ್ನನ್ನು ತಾನು ನಿರೂಪಿಸಿಕೊಳ್ಳಬೇಕು. ಪ್ರಾಣ ಹೋಗುವ ಮುಂಚೆ ಸೈನಿಕನಲ್ಲಿ ಉಂಟಾಗುವ ವಿಜೃಂಭಣಾ ಭಾವನೆ ಅದು. ಪ್ರಪಂಚದ ಮೇಲೆ ಮನುಷ್ಯರ ಮೇಲೆ ಅವನಿಗಿದ್ದ ಸೇಡಿನ ಪರಾಕಾಷ್ಠೆ ಅದು.

ಅವನ ದೃಷ್ಟಿ ರಮಣಿಯ ಮೇಲೆ ಬಿತ್ತು. ಪಾಪ್‌ಕಾರನ್ ತಿನ್ನುತ್ತಾ ಏನನ್ನೋ ಮಾತನಾಡುತ್ತಿದ್ದಳು. ಬೌಲ್ ಮಾಡಲು ಬೌಲರ್ ಬರುತ್ತಿದ್ದಾನೆ. ರಾಯಣ್ಣನಿಗೀಗ ಮತ್ತೇನೂ ಕಾಣಲಿಲ್ಲ. ಏನೂ ಕೇಳಿಸಲಿಲ್ಲ. ತನ್ನ ಮೇಲಿನ ಗಲಾಟೆ, ಜನರ ಅಪಹಾಸ್ಯ ಎಲ್ಲವನ್ನೂ ಮರೆತ.

ಕೇವಲ ಚೆಂಡು ಮಾತ್ರ ಕಾಣಿಸುತ್ತಿತ್ತು. ರಾಯಣ್ಣನಲ್ಲಿ ಕೇವಲ ಆಟಗಾರ ಮಾತ್ರ ಉಳಿದ. ಯುದ್ಧದಲ್ಲಿ ಮೊದಲನೆ ಅಸ್ತ್ರವನ್ನು ಶತ್ರುವಿನ ಕಾಲಿನ ಬಳಿ ಹಾಕಿ ಪ್ರಾರಂಭದ ನಮಸ್ಕಾರ ಮಾಡುತ್ತಿದ್ದರಂತೆ ಅವನೂ ಜನಗಳಿಗೆ ನಮಸ್ಕಾರ ಮಾಡಬೇಕೆಂದುಕೊಂಡ.

ಕ್ರಿಕೆಟ್ ಚರಿತ್ರೆಯಲ್ಲಿ ಸ್ಟೇಡಿಯಂ ಹೊರಗಿರುವ ಗಡಿಯಾರ ಸ್ಥಂಭದ ವರೆಗೂ ಸಿಕ್ಸರ್ ಹೊಡೆದು, ಗಾಜನ್ನು ಒಡೆದ ವೀರರಿದ್ದಾರೆ. ಹೆಂಡತಿಗೆ ಅವಳ ಹುಟ್ಟು ಹಬ್ಬದ ಕಾಣಿಕೆಯಾಗಿ ನೂರು ರನ್ನು ಕೊಡುವ ಛಾಲೆಂಜ್ ಮಾಡಿ ಸೆಂಚುರಿ ಮಾಡಿದವರಿದ್ದಾರೆ. ಅಂತಹವರಿಂದ ಸ್ಫೂರ್ತಿ ಪಡೆದು ಕೊಂಡ.

ಬರುತ್ತಿರುವ ಚೆಂಡು 'ಗೂಗ್ಲಿ' ಎಂಬ ಅನುಮಾನ. ಅದನ್ನು ಹೊಡೆಯುವುದು ಒಂದು ಛಾಲೆಂಜ್ !

ಅರ್ಜುನ ಮತ್ಸ್ಯ ಯಂತ್ರವನ್ನು ಹೊಡೆದಷ್ಟು ಕಷ್ಟ. ಕ್ರಿಕೆಟ್ ತಿಳಿದವರಿಗೆ ಮಾತ್ರ ಆ ಕಷ್ಟ ತಿಳಿಯುತ್ತದೆ. ಭಾರತದ ಕ್ರಿಕೆಟ್ ಚರಿತ್ರೆಯಲ್ಲಿ ಸ್ಕ್ವೇರ್ ಕಟ್ಟನ್ನು ಕಲಾತ್ಮಕವಾಗಿ ಭಾರಿಸುವುದರಲ್ಲಿ ವಿಶ್ವನಾಥ್ ಸುಪ್ರಸಿದ್ಧರು. ಅಷ್ಟೇ ನೈಪುಣ್ಯದಿಂದ ಹೊಡೆದ ರಾಯಣ್ಣ. ಮೊಣಕಾಲು ಬಾಗಿಸಿ, ಬ್ಯಾಟನ್ನು ಮಿಂಚಿನ ವೇಗದಲ್ಲಿ ಬೀಸಿ ಹೊಡೆದ ಆ ಷಾಟ್‌ಗೆ, ಟಿ. ವಿ. ಕ್ಯಾಮೆರಾಗಳು ಕೂಡಾ ಸೆರೆ ಹಿಡಿಯಲಾರದಷ್ಟು ವೇಗವಾಗಿ ಚೆಂಡು ನುಗ್ಗಿ ಹೋಗಿ ರಮಣಿಯ ಕಾಲಿನ ಬಳಿ ಬಿತ್ತು.

ಸ್ಕ್ವೇರ್ ಕಟ್‌ನಲ್ಲಿ ಸಿಕ್ಸರ್ !

ಆ ಅಪರೂಪವಾದ ಆಟಕ್ಕೆ ವಿರೋಧಿ ಬ್ಯಾಟ್ಸ್‌ಮನ್ ಕೂಡಾ ಚಪ್ಪಾಳೆ ತಟ್ಟಿದ. ರಾಯಣ್ಣ ರಮಣಿಯ ಕಡೆಗೆ ನೋಡಿದ, ನೆನ್ನೆ ಟೊಮ್ಯಾಟೋ, ಕೋಳಿಮೊಟ್ಟೆ ಎಸೆದವಳು ಈಗ ಸಂತೋಷದಿಂದ ಚಪ್ಪಾಳೆ ತಟ್ಟುತ್ತಿದ್ದಾಳೆ.

ಒಂದು ಶ್ರೇಷ್ಠ ಸೈಕಲಾಜಿಕಲ್ ತೃಪ್ತಿ ! ಅದು ಸ್ಯಾಡಿಜಂ ಅಲ್ಲ. ಅನುಭವಿಸಿದವರಿಗೆ ಮಾತ್ರ ತಿಳಿಯುತ್ತದೆ ಆ ಸಂತೃಪ್ತಿ !!

ಆ ದಿನ ಆಟ ಪೂರ್ತಿಯಾಗುವವರೆಗೂ ಅವರಿಬ್ಬರೂ ಔಟ್ ಆಗಲಿಲ್ಲ. ಒಂದೂವರೆ ಗಂಟೆಯಲ್ಲಿ ತೊಂಭತ್ತು ರನ್ ಮಾಡಿದ್ದರು,

ಪಂದ್ಯ ಡ್ರಾ ಆಯಿತು.

ಅಜ್ಜರುದ್ದೀನ್‌ನೊಂದಿಗೆ ಅವನು ಪೆವಿಲಿಯನ್‌ಗೆ ಹಿಂತಿರುಗುತ್ತಿದ್ದಾಗ ಗೌರವಾನಂದ ಮಿಳಿತವಾದ ಅಭಿಮಾನದಿಂದ ಪ್ರೇಕ್ಷಕರು ಎದ್ದು ನಿಂತರು. 'ಸ್ಟಾಂಡಿಂಗ್ ಒವೇಷನ್' ಎಂದರೇನೆಂದು ಅವನು ಪ್ರತ್ಯಕ್ಷವಾಗಿ ನೋಡುತ್ತಿದ್ದಾನೆ. ಅವನ ಕಣ್ಣುಗಳಲ್ಲಿ ಅಪ್ರಯತ್ನವಾಗಿ ನೀರು ಬಂತು, ಕಣ್ಣಿನ ಕೆಳ ಭಾಗದಲ್ಲಿ ಎಲುಬು ಮುರಿದಿದ್ದರ ನೋವಲ್ಲ ಅದು. ಮನದ ನೋವಿಗೆ ಕಣ್ಣಿಂದ ಹರಿದ ನೀರದು.

"ಪ್ರೇಕ್ಷಕ ಮಹಾಶಯರೆ! ನನಗಿದು ಕೊನೆಯ ಆಟವೇ ಆಗಬಹುದು! ನನಗೆ ಶಿಕ್ಷೆಯಾದರೆ ನೀವು ಹೇಳುತ್ತಿರುವ ಈ ವಿದಾಯವೇ ನನ್ನ ಕ್ರಿಕೆಟ್ ಬದುಕಿಗೆ ಕೊನೆಯ ವಿದಾಯವಾಗಬಹುದು!! ಸ್ಟೇಡಿಯಂನಿಂದ ನನ್ನ ಈ ನಿಷ್ಕ್ರಮಣ ಕ್ರಿಕೆಟ್ ಆಟದಿಂದ ಶಾಶ್ವತ ನಿಷ್ಕ್ರಮಣೆಯೇ ಆಗಬಹುದು!!! ಆದರೆ ಈ ನನ್ನ ಸಣ್ಣ ವಿಜಯವನ್ನು ನಿಮ್ಮ ಹೃದಯಗಳಲ್ಲಿ ಭದ್ರವಾಗಿರಿಸಿ ಕೊಳ್ಳಿ. ನಾನೆಂತಹ ದುಷ್ಟನೆಂದಾದರೂ ಕ್ರಿಕೆಟರ್ ಆಗಿ ನಿಮ್ಮ ಮನಸ್ಸಿನಲ್ಲಿ ಸ್ವಲ್ಪ ಸ್ಥಾನ ಕೊಡಿ ಸಾಕು." ಕಣ್ಣೀರ ಹನಿಯ ನಡುವೆ ಮಸಕು ಮಸಕಾಗಿ ಕಾಣುತ್ತಿರುವ ತನಗೆ ತಿಳಿಯದ ತನ್ನ ಅಭಿಮಾನಿಗಳಿಗೆ ನಿಶ್ಶಬ್ದ ನಿವೇದನೆ ಯನ್ನು ನೀಡುತ್ತಾ ಅವನು ಒಳಗೆ ಹೊರಟು ಹೋದ.

'ಮ್ಯಾನ್ ಆಫ್ ದಿ ಮ್ಯಾಚ್' ಆಗಿ ಭಾರತದ ರಾಷ್ಟ್ರಪತಿಗಳಿಂದ ಕಪ್ ಸ್ವೀಕರಿಸುತ್ತಿದ್ದಾಗ ರಾಯಣ್ಣನ ಕೈಗಳು ನಡುಗಿದವು. ಉದ್ವೇಗದಿಂದ ಹೃದಯ ನಡುಗಿತು. "ಈ ವಿಜಯ ನನ್ನದಲ್ಲ ಕಿರಣ್ಮಯಿ, ನಿನ್ನದು." ಮನಸ್ಸಿನಲ್ಲೇ ಅಂದುಕೊಂಡ.

ವರದಿಗಾರರು ಅವನನ್ನು ಸುತ್ತುವರೆದರು.

"ಈ ಪಂದ್ಯದಿಂದ ಭಾರತದ ಟೀಮಿನಲ್ಲಿ ನಿಮ್ಮ ಸ್ಥಾನ ನಿಲ್ಲುತ್ತದೆಂದು ಭಾವಿಸುತ್ತೀರಾ?"

"ಟೀಮಿನಲ್ಲಿ ಸ್ಥಾನ ನನಗೇ ಸಿಗಬೇಕೆಂದು ನಾನು ಆಡಲಿಲ್ಲ. ನನಗಿಂತಲೂ ಚೆನ್ನಾಗಿ ಆಡಿ ಆ ಸ್ಥಾನವನ್ನು ಬೇರೆಯವರು ಪಡೆಯಬಹುದಲ್ಲ. ನನಗೆ ತುಂಬಾ ತೃಪ್ತಿ ನೀಡಿದ ಆಟ ಇದು. ನಿಜ ಹೇಳಬೇಕೆಂದರೆ ಈ ಹಿಂದೆ ರಣಜಿ ಪಂದ್ಯಗಳಲ್ಲಿ ಇದಕ್ಕಿಂತಲೂ ಚೆನ್ನಾಗಿ ನಾನು ಆಡಿದ್ದೆ. ಒಂದು ಹಂತದಲ್ಲಿ ನಾನು ಔಟಾಗದೆ ಉಳಿದಿದ್ದಕ್ಕೆ, ವಿಕೆಟ್ಸ್ ತೆಗೆದು ಕೊಂಡಿದ್ದಕ್ಕೆ ಈಗ ನನಗೆ ಈ ಕಪ್ ಸಿಕ್ಕಿದೆ."

"ಭಾರತ ತಂಡದಲ್ಲಿ ನಿಮಗೆ ಸ್ಥಾನ ಸಿಕ್ಕಿದರೆ ಇಷ್ಟೇ ಚೆನ್ನಾಗಿ ಆಡ ಬಲ್ಲಿರೆಂಬ ಭರವಸೆ ನಿಮಗಿದೆಯಾ?"

"ನೋಡಿ ಯಾವ ಆಟಗಾರನಾದರೂ ಸೀನಿಯರಾಗಿ ಅತಿ ಹೆಸರು ಸಂಪಾದಿಸಿಕೊಳ್ಳಬೇಕೆಂದೇ ಆಡುತ್ತಾನೆ. ಆದರೆ ಅದೃಷ್ಟವೋ, ದುರ

ದೃಷ್ಟವೋ ಒಂದು ವೊದಲು ಅವನನ್ನು ವರಿಸುತ್ತದೆ. ಈ ಪಂದ್ಯದ ವೊದಲನೆ ಇನ್ನಿಂಗ್ಸ್‌ನಲ್ಲಿ ನನ್ನ ಆಟ ಕೆಟ್ಟದಾಗಿತ್ತು. ಅದು ಸಿನ್ಸಿಯಾರಿಟಿ ಇಲ್ಲದೆ ಅಲ್ಲ. ಒಮ್ಮೊಮ್ಮೆ ಹಾಗಾಗುತ್ತದೆ ಅಷ್ಟೆ."

"ನಿಮ್ಮ ಮೇಲೆ ಬಂದಿರುವ ಕೊಲೆಯ ಅಪವಾದ ?"

"ಕ್ಷಮಿಸಿ, ನನ್ನ ಆಟಕ್ಕೂ ಅದಕ್ಕೂ ಸಂಬಂಧವಿಲ್ಲ. ಅದು ಕೋರ್ಟಿನಲ್ಲಿದೆ. ಕೋರ್ಟಿಗೇ ಬಿಡುವುದು ಸರಿ." ರಾಯಣ್ಣ ಹೊರಟು ಹೋದ.

## ಅಧ್ಯಾಯ ಐದು

ಅದೊಂದು ಸಣ್ಣ ಕೋಣೆ !

ಟೆನ್ ಬೈ ಟೆನ್ ಇರಬಹುದು. ಎರಡು ಕಡೆಗೂ ಒಂದೊಂದು ಮಂಚ ಪಕ್ಕದಲ್ಲೇ ಒಂದು ಟೇಬಲ್ ಕುರ್ಚಿ ಇದೆ. ಗೋಡೆಗಳಿಗೆ ಅಲ್ಮೆರಾಗಳನ್ನು ಹೊಂದಿಸಿದ್ದಾರೆ. ಹಿಂದೆ ಒಂದು ಸಣ್ಣ ಬಾಲ್ಕನಿಯಂತದು ಕಾಣಿಸುತ್ತದೆ. ಕಿರಣ್ಮಯಿ ಸೂಟ್‌ಕೇಸ್ ತೆಗೆದುಕೊಂಡು ಆ ಕೋಣೆಯಲ್ಲಿ ಪ್ರವೇಶಿಸಿದಳು.

"ಇವಳು ನನ್ನ ರೂಂಮೇಟ್ ವಿನೀಲ. ನೀಲೂ ಎಂದು ಕರೆಯುತ್ತೇವೆ. ಫೈನಲ್ ಬಿ.ಎಸ್ಸಿ. ಓದುತ್ತಿದ್ದಾಳೆ. ಇವರು ಕಿರಣ್ಮಯಿ – ನಮ ಭಾಸ್ಕರ್ ಅಣ್ಣನ ಸ್ನೇಹಿತನ ತಂಗಿ." ಇಂದುಮತಿ ಪರಿಚಯ ಮಾಡಿದಳು. ಭಾಸ್ಕರ್ ಇಂದುಮತಿಯ ಅಣ್ಣ. ಲಾಯರ್ ಚಿರಂಜೀವಿಯ ವಿಷಯ ತಿಳಿಸಿದೆ ತನ್ನ ಸ್ನೇಹಿತನ ತಂಗಿಯೆಂದು ಪರಿಚಯ ಮಾಡಿ ಹೋಗಿದ್ದ ಭಾಸ್ಕರ್. ಇಂದುಮತಿ ಸೆಕೆಂಡ್ ಬಿ.ಕಾಂ. ಓದುತ್ತಿದ್ದಳು.

"ವೆಲ್‌ಕಂ. ನೀವೇನು ಓದ್ತಿದೀರಾ ?" ವಿನೀಲ ಕೇಳಿದಳು.

"ಕಿರಣ್ಮಯಿಯವರು ಎಂ.ಎ. ಸೈಕಾಲಜಿ ಮಾಡಿದ್ದಾರಂತೆ. ಎಂ.ಫಿಲ್.ಗೆ ಸೇರಲು ಬಂದಿದ್ದಾರೆ. ನಮಗೆ ಕೆಲವು ದಿನಗಳ ಕಾಲ ಗೆಸ್ಟಾಗಿ ಇರುತ್ತಾರೆ." ಇಂದುಮತಿಯೇ ಉತ್ತರಿಸಿದಳು.

"ನೀವು ಸೈಕಾಲಜೀನಾ ? ಹಾಗಾದರೆ ನಿಮಗೆ ನಮ್ಮ ಹಾಸ್ಟೆಲ್‌ನಲ್ಲಿ ಒಳ್ಳೆ ಸಬ್ಜೆಕ್ಟ್ ಸಿಗುತ್ತೆ" ನಕ್ಕಳು ವಿನೀಲ.

"ಅದಕ್ಕಿಂತಲೂ ನನಗೆ ಬೇರೇನು ಬೇಕು ? ನಿಜ ಹೇಳಬೇಕೆಂದರೆ ಇದು ವರೆವಿಗೂ ನನ್ನ ತೀರದ ಆಸೆಯೊಂದೇ ಅಂದರೆ ಲೇಡೀಸ್ ಹಾಸ್ಟೆಲ್‌ನಲ್ಲಿ ಸ್ವಲ್ಪ ಕಾಲ ಕಳೆಯುವುದು. ಈ ಅವಕಾಶ ಸಿಕ್ಕಿದ್ದು ನನಗೆ ಸಂತೋಷ ವಾಗಿದೆ. ನಿಮ್ಮ ವಿದ್ಯಾಭ್ಯಾಸಕ್ಕೆ, ನಿಮ್ಮ ಪ್ರೈವೇಸಿಗೆ ಅಡ್ಡಬರದಂತೆ ಇರಲು ಪ್ರಯತ್ನಿಸುತ್ತೇನೆ. ನನ್ನಿಂದಾಗಿ ನಿಮಗೆ ಯಾವ ಮುಜುಗರ, ಆ ಸೌಕರ್ಯ ಉಂಟಾಗದಂತೆ ಇರುತ್ತೇನೆ" ಅಂದಳು ಕಿರಣ್ಮಯಿ.

"ನಮಗೆ ಅಸೌಕರ್ಯವಾ ?" ನಕ್ಕಳು ವಿನೀಲ. "ಈ ಹಾಸ್ಟೆಲಿನಲ್ಲಿ ಎಲ್ಲರೂ ಯಾವುದೋ ಒಂದು ರೀತಿಯ ಅತಿಥಿಗಳನ್ನು ಕರೆತರುತ್ತಿರುತ್ತಾರೆ. ಗೆಸ್ಟ್‌ಗಳೇ ಇಲ್ಲದೆ ಡಲ್ ಆಗುವವರೂ ಇದ್ದಾರೆ. ಅಂತಹುದರಲ್ಲಿ ನಮ್ಮಿಬ್ಬರಿಗೇ ಇದುವರೆವಿಗೂ ಯಾವ ಗೆಸ್ಟೂ ಬಂದಿರಲಿಲ್ಲ. ನಮಗೂ ಸಂತೋಷವೇ ಈಗ."

ಕಿರಣ್ಮಯಿ ತನ್ನ ಬ್ಯಾಗನ್ನು ಮಂಚದ ಮೇಲಿರಿಸುತ್ತಾ, "ನಿಮ್ಮ ಮಾತುಗಳನ್ನು ಕಂಡರೆ ಈ ಹಾಸ್ಟೆಲಿನಲ್ಲಿ ತುಂಬಾ ವಿಚಿತ್ರವಾದ ಕ್ಯಾರೆಕ್ಟರ್ ಗಳಿವೆ ಎನ್ನಿಸುತ್ತಿದೆ. ಎಂಫಿಲ್‌ಗೆ ಒಳ್ಳೆ ಸಬ್ಜೆಕ್ಟ್ ಮ್ಯಾಟರನ್ನು ಸಂಪಾದಿಸಿ ಕೊಳ್ಳಬಹುದೆಂದು ಕೊಂಡಿದ್ದೇನೆ. ಬರುವಾಗಲೇ ನಾನೊಂದು ವಿಷಯ ವನ್ನು ಗಮನಿಸಿದೆ. ನಿಮ್ಮ ವಾರ್ಡನ್ ನನ್ನನ್ನು ನೋಡಲೇ ಇಲ್ಲ. ನಿಮ್ಮ ವಾಚ್‌ಮನ್ ಕೂಡಾ ಗೇಟಿನ ಬಳಿ ನನ್ನ ಬಗ್ಗೆ ಕೇಳಲಿಲ್ಲ. ಇದು ನನಗೆ ತುಂಬಾ ಆಶ್ಚರ್ಯ ತಂದಿದೆ. ಉಸ್ಮಾನಿಯಾದಲ್ಲಿ ಪಿ.ಜಿ. ಮಾಡುವಾಗ ಅಲ್ಲಿನ ಹಾಸ್ಟೆಲ್ ಸ್ಟೂಡೆಂಟ್ಸ್, ಹಾಸ್ಟೆಲ್ ಡಿಸಿಪ್ಲೀನ್ ಬಗ್ಗೆ ಹೇಳಿ ಹೆದರಿಸಿದರು."

"ಅಯ್ಯೊ ಇಷ್ಟು ಸಣ್ಣದಕ್ಕೆ ನೀವು ಆಶ್ಚರ್ಯ ಪಡುತ್ತಿದ್ದೀರಾ ? ಹಾಗಾದರೆ ಇನ್ನು ಕೆಲವು ವಿಷಯಗಳನ್ನು ತಿಳಿದರೆ ನೀವು ಕಣ್ಣರಳಿಸಿಕೊಂಡ ಕುಸಿದು ಬೀಳುತ್ತೀರಷ್ಟೆ." ಇಂದುಮತಿ ಹೇಳಿದಳು.

"ಹಾಗಾ ? ನಾನಿದುವರೆವಿಗೂ ಯಾವ ಲೇಡೀಸ್ ಹಾಸ್ಟೆಲ್‌ಗಳಿಗೂ ಹೋಗಿಲ್ಲ. ತುಂಬಾ ಸ್ಟ್ರಿಕ್ಟ್ ಆಗಿರುತ್ತಾರೆಂದೂ, ಊಟ ಚೆನ್ನಾಗಿರುವುದಿಲ್ಲವೆಂದು ಹೇಳಿದರೆ ಕೂಡಲೆ ಕ್ರಮ ತೆಗೆದುಕೊಳ್ಳುತ್ತಾರೆಂದೂ ಕೇಳಿದ್ದೆ. ಹಾಗಾಗಿ ನನ್ನನ್ನು ಇಲ್ಲಿ ಗೆಸ್ಟಾಗಿ ಇರಿಸಿಕೊಳ್ಳಲು ಒಪ್ಪುತ್ತಾರೋ ಇಲ್ಲವೋ ಎಂದು ಹೆದರಿದ್ದೆ."

"ಅಂತಹ ಭಯಗಳು ಬೇಡ. ಈ ಹಾಸ್ಟೆಲಿನಲ್ಲಿ ಅಂತಹ ಸ್ಟ್ರಿಕ್ಟ್‌ನೆಸ್ಸಾಗಲೀ, ಡಿಸಿಪ್ಲೀನ್ ಆಗಲೀ ಇಲ್ಲ. ಇದ್ದರೂ ಪಾಲಿಸುವವರಿಲ್ಲ. ಹಾಗೆ ನೋಡಿದರೆ ವಾರ್ಡನ್ ಕೂಡಾ ದಿನಾ ಬರುವುದಿಲ್ಲ. ವಾಚ್‌ಮನ್ ಕೂಡಾ ಅಷ್ಟೇ–ಯಾರು, ಯಾವಾಗ, ಏಕೆ ಬರುತ್ತಾರೆಂದೂ ವಿಚಾರಿಸುವುದಿಲ್ಲ." ನೀಲೂ ಹೇಳಿದಳು.

"ತುಂಬಾ ಹಾಸ್ಟೆಲ್‌ಗಳಲ್ಲಿ ನಡೆಯದಿರುವುದೆಲ್ಲಾ ಈ ಹಾಸ್ಟೆಲ್‌ನಲ್ಲಿ ನಡೆಯುತ್ತಿರುತ್ತದೆ. ಈ ಹಾಸ್ಟೆಲ್‌ನಲ್ಲಿ ಒಂದು ಕೊಲೆ ಕೂಡಾ ನಡೆಯಿತು" ಇಂದುಮತಿ ಹೇಳಿದಳು.

"ಹೌದಂತೆ. ಪೇಪರ್‌ಗಳಲ್ಲಿ ಓದಿದ್ದೆ. ಹೇಗೆ ನಡೆಯಿತು ?" ಕಿರಣ್ಮಯಿ ಕೇಳಿದಳು. ಒಳಗೆ ಬರುತ್ತಿದ್ದಂತೆಯೇ ಆ ವಿಷಯ ಪ್ರಸ್ತಾಪಿಸಲ್ಪಟ್ಟದ್ದು ತನ್ನ ಅದೃಷ್ಟವೋ, ದುರಾದೃಷ್ಟವೋ ಅರ್ಥವಾಗಲಿಲ್ಲ.

"ಲಕ್ಷ್ಮಿ ಎಂಬ ಹುಡುಗಿಯನ್ನು ಹಗಲೇ ಅವಳ ರೂಮಿನಲ್ಲಿ ಕೊಲೆ ಮಾಡಿದ್ದಾರೆ. ಕೊಲೆಗಾರ ರಾಯಣ್ಣನೆಂದು ಕ್ರಿಕೆಟ್ ಪ್ಲೇಯರಂತೆ. ಆ ನಾಲ್ಕು ದಿನ ಪೋಲೀಸರು, ಅಧಿಕಾರಿಗಳು ಎಲ್ಲಾ ಗಡಿಬಿಡಿ. ವಾರ್ಡನ್ ಸರಿಯಾಗಿಲ್ಲವೆಂದು ಆಗಲೇ ತಿಳಿಯಿತು ಅಧಿಕಾರಿಗಳಿಗೆ. ಆ ಕೂಡಲೇ ಲೆಕ್ಚರರ್ ಒಬ್ಬರನ್ನು ಹೊಸ ವಾರ್ಡನ್ನಾಗಿ ನೇಮಿಸಿದರು. ಅವಳು ಮೊದಲೇ ಮಹಾಪತಿವ್ರತೆ. ಗಂಡ ಇಬ್ಬರು ಮಕ್ಕಳನ್ನು ಬಿಟ್ಟು ಬಂದಿದ್ದಾಳಂತೆ. ಕಷ್ಟಪಟ್ಟು ನಾಲ್ಕು ದಿನ ಇದ್ದಳು. ಮತ್ತೆ ಅದೇ ಗೋಳು."

"ಇಂದು, ಅವರಿಗೆ ಬರುತ್ತಿದ್ದಂತೆಯೇ ಈ ಕೊಲೆ, ರೇಪ್‌ಗಳ ವಿಷಯ ತಿಳಿಸಿ ಹೆದರಿಸಬೇಡ. ಕಿರಣ್ಮಯಿಯವರೇ, ಕೆಲವು ದಿನಗಳು ಮಾತ್ರ ನೀವು ನಮ್ಮೊಡನೆ ಇದ್ದು ಹೋಗುತ್ತಿದ್ದೀರಾದ್ದರಿಂದ, ನಮ್ಮ ಇಂದೂಗೆ ಸಿಸ್ಟರಾಗಿ

ಪರಿಚಯ ಮಾಡುತ್ತಿದ್ದೇವಾದ್ದರಿಂದ ನಿಮ್ಮನ್ನು 'ಅಕ್ಕಾ' ಎಂದು ಕರೆಯುತ್ತೇವೆ. ಕನ್ವೀನಿಯೆಂಟಾಗಿ ಇರುತ್ತದೆ. ಓ....ಕೆ ?" ನೀಲೂ ಹೇಳಿದಳು.

"ಓ... ಕೆ" ಕಿರಣ್ಮಯಿ ನಕ್ಕಳು.

ರಾತ್ರಿ ಏಳೂವರೆಗೆ ಗಂಟೆ ಹೊಡೆಯಿತು.

"ಊಟಕ್ಕೆ ಕರೆ ಬಂದಿದೆ. ನಿಮಗೆ ಹಸಿವಾಗಿದ್ದರೆ ಬನ್ನಿ. ಹೋಗಿ ಹೋಗಿ ಆ ಕಾರ್ಯಕ್ರಮ ಮುಗಿಸಿ ಬರೋಣ." ಇಂದುಮತಿ ತಿಳಿಸಿದಳು.

"ನಂಗೇನೂ ಆತುರವಿಲ್ಲ. ನೀವೆಲ್ಲಾ ಸಾಮಾನ್ಯವಾಗಿ ಯಾವ ಟೈಂಗೆ ಊಟಕ್ಕೆ ಹೋಗ್ತೀರೋ ಆಗಲೇ ನಾನೂ ಬರುತ್ತೇನೆ." ಕಿರಣ್ಮಯಿ ಅಂದಳು.

"ನಮಗೆ ಇಂಥದೇ ಟೈಂ ಅಂತಿಲ್ಲ. ಒಂಭತ್ತೂವರೆಗೂ ಊಟಸಿಗುತ್ತೆ. ಚೆನ್ನಾಗಿ ಹಸಿವಾದಾಗ ಹೋದ್ರೆ ಒಳ್ಳೆದು. ಮುದ್ದೆ ಮುದ್ದೆ ಅನ್ನಾನೂ ಆಗ ರುಚಿ ಅನ್ನಿಸುತ್ತೆ.

"ಊಟ ನಿಜಕ್ಕೂ ಅಷ್ಟು ಕೆಟ್ಟದಾಗಿರುತ್ತಾ ?"

"ಕೆಟ್ಟದಕ್ಕಿಂತಲೂ ಕೆಟ್ಟ ಪದವಿದ್ದರೆ ಹೇಳಿ. ಅದನ್ನೇ ನಾಮಕರಣ ಮಾಡೋಣ ನಮ್ಮ ಹಾಸ್ಟೆಲ್ ಊಟಕ್ಕೆ."

"ಇಷ್ಟು ದೊಡ್ಡ ಹಾಸ್ಟೆಲಿನಲ್ಲಿ, ಅದೂ ಸ್ಟೂಡೆಂಟ್ ಹಾಸ್ಟೆಲಿನಲ್ಲಿ ಸರಿಯಾಗಿ ಊಟ ಹಾಕದಿದ್ದರೆ ನೀವೆಲ್ಲಾ ಸುಮ್ಮನಿದ್ದೀರಾ? ಅದೂ ಸ್ಟೂಡೆಂಟ್‌ಗಳೆಂದರೆ ಎಲ್ಲರೂ ಹೆದರುತ್ತಾರೆ ?"

"ನಿಜ. ಎಲ್ಲರೂ ಸ್ಟೂಡೆಂಟ್‌ಗಳಿಗೆ ಹೆದರುತ್ತಾರೆ. ಇಲ್ಲಿ ತುಂಬಾ ಸ್ಟೂಡೆಂಟ್‌ಗಳು, ಸ್ಟೂಡೆಂಟ್ ಲೀಡರ್‌ಗಳಿಗೆ ಹೆದರುತ್ತಾರೆ — ಎಲ್ಲಾ ರಾಜಕೀಯ ಬಿಡಿ. ರಾಜಕೀಯ ನಾಯಕರಿಗೆ ಅವಶ್ಯಕತೆ ಬಿದ್ದಾಗಲೆಲ್ಲಾ ನಮ್ಮ ಲೀಡರ್‌ಗಳನ್ನು ಕರೆಯುತ್ತಾರೆ. ಅವರ ಹಿಂದೆ ಅವರ ಗುಂಪೆಲ್ಲಾ ತೆರಳುತ್ತದೆ. ಲಾಭ ಆಗೋದು ಯಾರಿಗೆ ? ಈ ಸ್ಟೂಡೆಂಟ್ ನಾಯಕರಿಗೆ. ಆ ರಾಜಕೀಯ ವಿನಾಯಕರಿಗೆ ! ಹಾಗೆಯೇ ಇಲ್ಲಿ ಗಲಭೆಗಳೂ ನಡೆಯುತ್ತಿರುತ್ತವೆ. ಆದರೆ ಸ್ಟೂಡೆಂಟ್ ಲೀಡರ್‌ಗಳಿಗೆ, ಅವರ ಗೆಸ್ಟ್‌ಗಳಿಗೆ ಸ್ಪೆಷಲ್ಲಾಗಿ ಅರ್ಧ ರಾತ್ರಿಯವರೆಗೂ ಊಟಗಳು, ನಾನ್‌ವೆಜ್‌ಗಳು ಎಲ್ಲಾ

ಸರಬರಾಜಾಗುತ್ತಿರುತ್ತದೆ. ಮೆಸ್‌ನವರೂ ಅವರನ್ನು ಸಮರ್ಥಿಸುತ್ತಾರೆ. ಅವರನ್ನು ಎದುರಿಸಿ ಈ ಹಾಸ್ಟೆಲ್‌ನಲ್ಲಿ ನಾವು ಸುಖವಾಗಿ ಬದುಕಲಾರೆವು. ಅವರೊಡನೆ ನೇರವಾಗಿ ಹೊಡೆದಾಡುವ ಧೈರ್ಯ ನಮಗಿಲ್ಲ. ಹೀಗೆ ಹೊಂದಿ ಕೊಳ್ಳುವುದನ್ನು ನಾವು ಅಭ್ಯಾಸ ಮಾಡಿಕೊಂಡಿದ್ದೇವೆ. ಯಾರಾದರೂ ಮನೆಗೆ ಕರೆದು ಊಟ ಹಾಕುತ್ತೇವೆಂದರೆ ಕೂಡಲೆ ಓಡುತ್ತೇವೆ. ಸಂಕೋಚ ವಿಲ್ಲದೆ ತಿಂಡಿಯನ್ನೇ ಕಂಡಿರದವರಂತೆ ನುಂಗಿಬಿಡುತ್ತೇವೆ ಗಬಗಬನೆ. ಏನಂದುಕೊಳ್ಳುತ್ತಾರೋ ಎಂಬ ಭಾವನೆಯೂ ಇರುವುದಿಲ್ಲ. ಹೊರಗಡೆ ಹೋಗಲು ನಮಗೆ ಸ್ವಲ್ಪ ಕಂಪನಿ ಸಿಕ್ಕಿದರೆ ಸಾಕು ಅವತ್ತೇ ನಮಗೆ ಹಬ್ಬ."

"ಈ ಅವಕಾಶವನ್ನು ಬಾಯ್‌ಫ್ರೆಂಡ್ಸ್ ಚೆನ್ನಾಗಿ ಉಪಯೋಗಿಸಿ ಕೊಳ್ಳುತ್ತಿರುತ್ತಾರೆ." ಕಿರಣ್ಮಯಿ ಅಂದುಕೊಂಡಳು.

"ನಿಮ್ಮ ರೂಮುಗಳಲ್ಲಿ ಅಡಿಗೆ ಮಾಡಿಕೊಳ್ಳಲು ಅವಕಾಶ ಕೊಡುವು ದಿಲ್ಲವಾ ?" ಎಂದು ಕೇಳಿದಳು.

"ಅದಕ್ಕೇನೂ ಅಬ್ಜೆಕ್ಷನ್ ಇಲ್ಲ ಅಂದ್ಕೊಳ್ಳಿ. ಆದರೆ ಪ್ರತಿಸಲವೂ ಮಾಡಿಕೊಳ್ಳುವುದು ಟೈಂವೇಸ್ಟ್. ಅದೂ ಅಲ್ಲದೆ ಈ ಇಕ್ಕಟ್ಟಾದ ರೂಮು ಗಳಲ್ಲಿ ಎಷ್ಟೆಂದು ಮಾಡಿಕೊಳ್ಳುವುದು ? ಅಲ್ಲಿಗೂ ಒಂದು ಸ್ಟವ್ ತಂದಿ ಇಟ್ಟಿಕೊಂಡಿದ್ದೀವಿ. ಯಾವಾಗದರೂ ಟೀ ಮಾಡ್ಕೊಳ್ಳೋಕೆ. ಸ್ವಲ್ಪ ಮೂಡ್ ಬಂದರೆ ಆಮ್ಲೆಟ್ಟು, ಸಣ್ಣ ಸಣ್ಣ ತಿಂಡಿ ಮಾಡ್ಕೋತೀವಿ."

ಕಿರಣ್ಮಯಿಗೆ ಅವರನ್ನು ನೋಡುತ್ತಿದ್ದರೆ ಅನುಕಂಪ ಮೂಡಿತು. ಎಲ್ಲಾ ಇರುವವರು – ಮನೆಗಳಲ್ಲಿ ತಾಯಂದಿರ ಬಳಿ ಬೇಕಾದ ತಿಂಡಿಗಳನ್ನು ಮಾಡಿಸಿಕೊಂಡು ತಿಂದು ಸಂತೋಷ ಪಡಬೇಕಾದವರು — ಹೀಗೆ ಹಾಸ್ಟೆಲ್ಲಿಗೆ ಬಂದು ತಿಂಡಿಗಾಗಿ ಬೇಡಿಕೊಳ್ಳುವುದು ಎಂತಹ ನೋವಿನ ವಿಷಯ.

ನಿಜವಾಗಿಯೂ ಊಟ ಕೆಟ್ಟದಾಗಿತ್ತು. ಬದನೆಕಾಯಿ ಸಾರು ಉಪ್ಪು ಕಾರ ಹಾಕಿ ಕುದಿಸಿದಹಾಗಿತ್ತು ಅಷ್ಟೆ. ರಸದಲ್ಲಿ ಯಾವ ರಸವೂ ಇರಲಿಲ್ಲ. ತುಂಬಾ ಹಸಿವಾದ್ದರಿಂದ ಜೊತೆಗೆ ಪೊಸರು ಸ್ವಲ್ಪ ಚೆನ್ನಾಗಿದ್ದುದರಿಂದ ಊಟ ಮಾಡಿದಳು.

"ಮಲ್ಲೇಶ್, ನಾವು ಬಂದೆವೂ...." ಎಂದು ಕಿರುಚುತ್ತಾ ಬಂದರು

ಕುಳಿತು ಕೊಂಡಿತು ಒಂದು ಗುಂಪು. ಅಷ್ಟೇ.... ಅದುವರೆವಿಗೂ ನಿಶ್ಶಬ್ಧವಾಗಿದ್ದ ಡೈನಿಂಗ್ ಹಾಲ್ ಒಮ್ಮೆಗೆ ಗಲಾಟೆಯಿಂದ ಕೂಡಿತು. ಬಡಿಸುವ ನಾಲ್ವರೂ ಗಡಿಬಿಡಿಯಿಂದ ಓಡಾಡತೊಡಗಿದರು. ಆ ಹುಡುಗಿಯರು ಅವರ ಮೇಲೆ ಹುಚ್ಚುಚ್ಚಾದ ಜೋಕ್‌ಗಳನ್ನು ಹಾಕುತ್ತಾ ನಗುತ್ತಿದ್ದರು; ಬಿಸಿಬಿಸಿಯಾದ ಆಮ್ಲೆಟ್ಟುಗಳು ಬಂದವು. ಬದನೆಕಾಯಿ ಸಾರಾದರೂ ಅದರ ರೂಪವೇ ಬೇರೆಯಿತ್ತು. ರಸದ ವಾಸನೆ ಹಿತವಾಗಿತ್ತು.

"ಯಾರು ಅವರು ?" ಕಿರಣ್ಮಯಿ ಕೇಳಿದಳು.

"ಫೈನಲ್ ಇಯರ್ ಸ್ಟೂಡೆಂಟ್ಸ್. ಸೀನಿಯರ್ಸ್"

"ಯಾರಿಗಾದರೂ ಮೆಸ್ ಛಾರ್ಜ್ ಒಂದೇ ತಾನೆ ? ಹಾಗಾದರೆ ಈ ರೀತಿಯ ಟ್ರೀಟ್‌ಮೆಂಟ್ ಯಾಕೆ ?

"ಜೋರಾಗಿ ಕೇಳಬೇಡ ರೌಡಿಗಳು. ಮೆಸ್‌ಛಾರ್ಜ್ ಕಟ್ಟದೇನೇ ಪಂಚಭಕ್ಷ ಪರಮಾನಗಳನ್ನು ತರಿಸಿಕೊಳ್ಳುತ್ತಾರೆ. ಅವರೆಂದರೆ ಎಲ್ಲರಿಗೂ ಭಯ."

"ಈ ಗೋಳ್ ನೋಡೋಕೆ ಆಗೋಲ್ಲ. ತಲೆ ನೋವು ಬರ್ತಿದೆ. ನಡೀರಿ ಹೋಗೋಣ." ನಿಂತಳು ನೀಲು.

ರೂಮಿಗೆ ಬಂದನಂತರ ಹೇಳಿದಳು ನೀಲು. "ಸ್ಟೂಡೆಂಟ್ಸ್ ಪರವಾಗಿ ಕೋ-ಆರ್ಡಿನೇಟರ್‌ಗಳು ಅವರೇ. ಯಾವ ಯಾವ ಹೊತ್ತಿಗೆ ಏನೇನು ಮಾಡಬೇಕೆಂದು ನಿರ್ಧರಿಸುವವರು ಅವರೇ. ಊಟ ಚೆನ್ನಾಗಿಲ್ಲದಿದ್ದರೆ ವಾರ್ಡನ್‌ಗೆ, ಹಾಸ್ಟೆಲ್ ಇನ್‌ಛಾರ್ಜ್‌ಗೆ ಅವರೇ ಹೋಗಿ ಕಂಪ್ಲೆಂಟ್ ಕೊಡಬೇಕು. ಆದರೆ ಅವರಿಗೆ ಒಳ್ಳೆಯ ಊಟ ಸಿಗುತ್ತದಾದ್ದರಿಂದ ನಮಗೆ ಕಸ ಹಾಕಿದರೂ ಅವರೇನೂ ಮಾತನಾಡುವುದಿಲ್ಲ."

"ನೀವೆಲ್ಲಾ ಹೋಗಿ ಕಂಪ್ಲೆಂಟ್ ಕೊಡಬಹುದಲ್ಲಾ ?"

"ಅವರು ಸೀನಿಯರ್ಸ್. ಅವರನ್ನು ಎದುರು ಹಾಕಿಕೊಂಡು ಬದುಕುವುದು ಕಷ್ಟ. ಹಾಸ್ಟೆಲಿನಲ್ಲಿ ವಿವಿಧ ರೀತಿಯ ತೊಂದರೆಗಳನ್ನು ಕೊಡುತ್ತಾರೆ. ಬೀಗಗಳನ್ನು ಒಡೆದು ಸಾಮಾನುಗಳನ್ನೆಲ್ಲಾ ಹಾಳುಮಾಡುತ್ತಾರೆ. ಬಾತ್ ರೂಮುಗಳಿಗೆ ಸಮಯಕ್ಕೆ ಸರಿಯಾಗಿ ಹೋಗದೆ ಬೇಕೆಂದೇ ಅಡ್ಡಿಮಾಡು

ತ್ತಾರೆ. ಒಂದು ಸಲ ಇದನ್ನು ಯಾರೊ ಒಬ್ಬಳು ಪ್ರತಿಭಟಿಸಿದ್ದಕ್ಕೆ ಮಾರನೆ ದಿನ ಅವಳ ಬಟ್ಟೆಗಳೆಲ್ಲಾ ಚಿಂದಿ ಚಿಂದಿಯಾಗಿತ್ತು. ಅದಕ್ಕೆ ಎಲ್ಲರೂ ಭಯ ಪಡುತ್ತಾರೆ."

"ಅಂದರೆ ಇವರೇ ಲೀಡರ್‌ಗಳೆಂದಂತಾಯಿತು...." ಕಿರಣ್ಮಯಿ ಕೇಳಿದಳು.

"ಉಹ್ಹು... ಅಲ್ಲ. ಇವರು ಕೇವಲ ಲೀಡರ್‌ಗಳಿಗೆ ಹಿಂಬಾಲಕರು ಮಾತ್ರ. ನಿಜವಾದ ಲೀಡರ್‌ಗಳು ಬೇರೆ ಇಬ್ಬರು. ಇಬ್ಬರಿಗೂ ಗ್ಯಾಂಗ್ ಗಳಿವೆ. ರಮಣಿ ಎಂದು ಫೈನಲ್ ಈಯರ್ ಸ್ಟೂಡೆಂಟ್ ಇದ್ದಾಳೆ. ಅವಳ ಹಿಂದೆ ಒಂದೈವತ್ತು ಜನದವರೆಗೂ ಇದ್ದಾರೆ. ವನಜಾಕ್ಷಿ ಎಂದು ಮತ್ತೊಬ್ಬ ಲೀಡರ್. ಈಗ ನಾವು ನೋಡಿದ್ದು ಅವಳ ಹಿಂಬಾಲಕರನ್ನೇ. ನಂತರದ ಛಾನ್ಸ್ ರಮಣಿ ಗುಂಪಿನದ್ದು. ಒಬ್ಬರ ನಂತರ ಒಬ್ಬರು ಅಧಿಕಾರಿಗಳನ್ನು ಹಂಚಿಕೊಂಡು ರಾಜಭೋಗ ಅನುಭವಿಸುತ್ತಿರುತ್ತಾರೆ. ಅವರ ಮೊಣಕೈ ನೀರು ಕುಡಿಯುವ ಇಂತಹವರಿಗೆ ಯಾವ ತೊಂದರೆಯೂ ಇರುವುದಿಲ್ಲ."

ಕಿರಣ್ಮಯಿ ಯೋಚಿಸಲಾರಂಭಿಸಿದಳು. ಒಂದು ಲೇಡೀಸ್ ಹಾಸ್ಟೆಲಿನಲ್ಲಿ ಇಷ್ಟೊಂದು ರಾಜಕೀಯವಾ ? ವಾರ್ಡನ್ ಜವಾಬ್ದಾರಿಯಿಲ್ಲದೆ ವರ್ತಿಸುವ ಇಂತಹ ಹಾಸ್ಟೆಲ್‌ಗಳಲ್ಲಿ ಹುಡುಗಿಯರಿಗೆ ರಕ್ಷಣೆ ಹೇಗೆ ಸಿಗುತ್ತದೆ ?

ಇಂದುಮತಿ, ವೀನಿಲ ಸೇರಿ ಎರಡು ಮಂಚಗಳನ್ನು ಒಂದೆಡೆ ಸೇರಿಸಿದರು.

"ಯಾಕೆ, ಗೆಸ್ಟ್‌ಗೆ ಎಕ್ಸ್‌ಟ್ರಾ ಮಂಚ ಕೊಡೋದಿಲ್ವಾ ?" ಕಿರಣ್ಮಯಿ ಕೇಳಿದಳು.

"ಮಂಚವಲ್ಲದಿದ್ದರೂ ಹಾಸಿಗೆಯನ್ನಾದರೂ ಕೊಡಬೇಕು. ಆದರೆ ಅದು ಇದ್ದರೆ ಅಲ್ವಾ ಕೊಡೋಕೆ ? ಎಲ್ಲಾ ಸದಾ ಈ ಗ್ರೂಪ್ ಲೀಡರ್‌ಗಳ ಅಧೀನದಲ್ಲಿರುತ್ತದೆ. ಅವರಿಗೆ ಯಾವಾಗಲೂ ಗೆಸ್ಟ್‌ಗಳಿರುತ್ತಾರೆ."

"ಅತಿಥಿಗಳು, ಬಂಧುಗಳು ಬಂದರೆ ಉಳಿದವರೆಲ್ಲಾ ಏನು ಮಾಡ್ತಾರೆ ?"

ಸಾಮಾನ್ಯವಾಗಿ ತಮ್ಮ ತಮ್ಮಲ್ಲೇ ಹೊಂದುಕೊಳ್ಳುತ್ತಾರೆ. ಆದರೆ

ನಮಗಿಬ್ಬರಿಗೂ ಬೇರೆಯವರ ಕೋಣೆಗಳಲ್ಲಿ ಮಲಗಲು ಇಷ್ಟವಿಲ್ಲ. ಹಾಸಿಗೆ ಬೇಕೆಂದು ಕೇಳುವುದಕ್ಕೂ ನಮಗಿಷ್ಟವಿಲ್ಲ, ಹುಚ್ಚುಚ್ಚಾಗಿ ಮಾತ್ತಾಡ್ತಾರೆ." ಎನ್ನುತ್ತಾ ಮಂಚಗಳನ್ನು ಸರಿಪಡಿಸಿ,

"ಈಗ ಮೂವರೂ ಇದರಲ್ಲೇ ಮಲಗಬಹುದು" ಅಂದಳು ನೀಲು,

ಅವರಿಬ್ಬರೂ ಓದಲು ಆರಂಭಿಸುತ್ತಿದ್ದಂತೆಯೇ ಕಿರಣ್ಮಯಿ ಪುಸ್ತಕ ಹಿಡಿದು ಮಂಚದ ಮೇಲೆ ಒರಗಿದಳು. ಮನಸ್ಸು ಮಾತ್ರ ಬೇರೆಲ್ಲೋ ಇತ್ತು.

ಹಾಸ್ಟೆಲ್ ಬದುಕಿನಲ್ಲಿ ಒಂದು ದಿನ ಕಳೆಯಿತು. ಸ್ವಲ್ಪ ಸುದ್ದಿ ಸಿಕ್ಕಿತು. ಇನ್ನು ಕಷ್ಟಪಟ್ಟರೆ ತುಂಬಾ ವಿಷಯಗಳು ತಿಳಿಯುವಂತಿದೆ. ಬೇಗಬೇಗನೆ ಕೆಲಸ ಮುಗಿಸಿಕೊಂಡು ಹೊರಟು ಬಿಡಬೇಕೆಂದುಕೊಂಡಳು. ಆದರೆ ಅವಳಿಗೆ ಚಿರಂಜೀವಿಯ ಮಾತುಗಳು ನೆನಪಾದವು. "ಆತುರ ಪಟ್ಟರೆ ಇಕ್ಕಟ್ಟಿನಲ್ಲಿ ಸಿಕ್ಕಿಹಾಕಿಕೊಳ್ಳುತ್ತೀರಿ. ಹೆಚ್ಚು ಉತ್ಸಾಹ ತೋರಿಸಿದರೆ ನಿಮ್ಮ ಮೇಲೆ ಅನುಮಾನ ಬರುತ್ತೆ. ನಿಧಾನವಾಗಿ ಮುಂದುವರೆಯಿರಿ. ನೀವಾರು, ಏಕೆ ಬಂದಿರೆಂದು ಎಲ್ಲರಲ್ಲೂ ಆಸಕ್ತಿ ಕಡಿಮೆಯಾದ ನಂತರವೇ ವಿಷಯ ಸಂಗ್ರಹಕ್ಕೆ ಪ್ರಾರಂಭಿಸಿ" ಅಂದಿದ್ದ. ನಿಜ ತಾನು ಆತುರಪಟ್ಟು ಲಕ್ಷ್ಮಿಯ ಕೊಲೆಯ ಸಂಬಂಧ ಹಾಸ್ಟೆಲಿಗೆ ಬಂದಿದ್ದೇನೆಂದು ತಿಳಿದರೆ ಈ ಹುಡುಗಿಯರು ಕೂಡಾ ನನ್ನೊಂದಿಗೆ ಸಹಕರಿಸುವುದಿಲ್ಲ.

ರಾಯಣ್ಣ ಬಾಂಬೆಯಲ್ಲೇ ಇದ್ದಾನೆ. ಟೀಮ್ ಸೆಲಕ್ಷನ್ ಆಗುವ ವರೆಗೂ ಅಲ್ಲೇ ಇರುತ್ತಾನೆ. ಸಂಪೂರ್ಣವಾಗಿ ಪ್ರಾಕ್ಟೀಸ್‌ನಲ್ಲಿ ಮುಳುಗಿ ಹೋಗಿದ್ದಾನೆಂದು ತಿಳಿಸಿದ್ದಾನೆ. ಅವನ ಸ್ನೇಹಿತ ಅದೇ ತನಗೆ ಬೇಕಾದದ್ದು ಆಲೋಚನೆಗಳಿಂದ, ನಿದ್ರೆಯೊಳಗೆ ಜಾರಿದಳು ಕಿರಣ್ಮಯಿ. ತುಂಬಾ ದಿನಗಳ ನಂತರ ಚೆನ್ನಾಗಿ ನಿದ್ರೆ ಬಂತು ಅವಳಿಗೆ.

ವೆಂಕಟ್ರಾಜು ಚೆನ್ನಾಗಿಯೇ ಆಡಿದ. ಆದರೆ ಅವನ ಆಟಕ್ಕೆ ಮನ್ನಣೆ ದೊರೆಯಲಿಲ್ಲ, ರಾಯಣ್ಣನ ವಿಷಯ ಅವನ ಮೇಲೆ ಪ್ರಭಾವ ಬೀರಿತ್ತು,

ಕ್ರಿಕೆಟ್ ಕಂಟ್ರೋಲ್ ಬೋರ್ಡ್ ಸಮಾವೇಶದಲ್ಲಿ ರಾಘವರೆಡ್ಡಿ ಕೊನೆಯ ಸಲ ವೆಂಕಟ್ರಾಜುವಿನ ಸೆಲೆಕ್ಷನ್‌ಗೆ ತೀವ್ರವಾಗಿ ಪ್ರತ್ಯಕ್ಷಿಸಿದ. ತನ್ನ ಪ್ರಯತ್ನ ಫಲಿಸುತ್ತದೆಂಬ ನಂಬಿಕೆ ಅವನಿಗಿರಲಿಲ್ಲ. ಆದರೆ ಮುಂದೆ ರಾಯಣ್ಣ ಕೊಲೆಗಾರನಾಗಿ ನಿರೂಪಿಸಲ್ಪಟ್ಟರೆ ತನ್ನ ಈ ಪ್ರಯತ್ನವನ್ನು ಆ ಸಮಯದಲ್ಲಿ ಪ್ಲಸ್ ಪಾಯಿಂಟಾಗಿ ಉಪಯೋಗಿಸಿಕೊಳ್ಳಬಹುದೆಂದು ಅವನ ಆಲೋಚನೆ! ತನ್ನ ಅಭಿಪ್ರಾಯವನ್ನು ಮೊದಲೇ ಪೇಪರ್‌ನವರಿಗೆ ತಿಳಿಸಿದರೆ ತನ್ನ ಬಗ್ಗೆ ಒಳ್ಳೆಯ ರಿಪೋರ್ಟ್ ಬರೆಸಿಕೊಳ್ಳಬಹುದು. ರಾಘವರೆಡ್ಡಿಯಂತಹವರು ವರ್ತಮಾನದೊಡನೆ ಭವಿಷ್ಯತ್ತಿನ ಬಗ್ಗೆಯೂ ಯೋಚಿಸುತ್ತಿರುತ್ತಾರೆ........

ಕಿರಣ್ಮಯಿಗೆ ಬೇಗ ಎಚ್ಚರವಾಯಿತು. ವಿನೀಲ, ಇಂದುಮತಿ ಇನ್ನೂ ಎದ್ದಿರಲಿಲ್ಲ. ಆರುಗಂಟೆಯಾಗಿದ್ದರೂ ಚಳಿಗಾಲವಾದ್ದರಿಂದ ಪೂರ್ತಿಯಾಗಿ ಬೆಳಕಾಗಿರಲಿಲ್ಲ.

ಕಿರಣ್ಮಯಿ ಶಬ್ದವಾಗದಂತೆ ಮೆಲ್ಲನೆದ್ದು ಬಾಗಿಲನ್ನು ತೆಗೆದು ಹೊರ ನಡೆದಳು.

ಕೆಲವು ರೂಮುಗಳ ಮುಂದೆ ತರಕಾರಿ ಸಿಪ್ಪೆ, ಈರುಳ್ಳಿ ಸಿಪ್ಪೆ ಕಾಣುತ್ತಿತ್ತು. ಯಾರೂ ಇನ್ನೂ ಎದ್ದಿರುವಂತೆ ಕಾಣಲಿಲ್ಲ. ಅವಳು ಬಾತ್ ರೂಮಿಗೆ ಹೋಗಿ ಮುಖ ತೊಳೆದುಕೊಂಡು ಬಂದು ರೂಮಿನಿಂದ ಟ್ರಾನ್ಸಿಸ್ಟರ್ ತೆಗೆದುಕೊಂಡು ಹಿಂಭಾಗದ ತೋಟದೊಳಗೆ ನಡೆದಳು.

ಸರಿಯಾಗಿ ನೋಡಿಕೊಂಡಿರದಿದ್ದುದರಿಂದ ತೋಟವೆಲ್ಲಾ ಅಸ್ತವ್ಯಸ್ತವಾಗಿತ್ತು. ಗಿಡಗಳಿಗೆ ಸರಿಯಾದ ಸಂರಕ್ಷಣೆಯಿಲ್ಲದೆ ಬಾಡಿ ಹೋಗಿದ್ದವು. ಆಗಾಗ ಆಕಾಶದಿಂದ ಒಂದೊಂದೇ ಮಳೆಹನಿ ಉದುರುತ್ತಿತ್ತು. ಹೇಗಿದ್ದರೂ ಆ ಹಸಿರು ವಾತಾವರಣ ಮನುಷ್ಯರ ಮನಸ್ಸನ್ನು ಆಹ್ಲಾದಗೊಳಿಸುವ ವಸ್ತುಗಳೇ. ಶನಿವಾರವಾದ್ದರಿಂದ ಗೀತಾರಾಧನ ಕಾರ್ಯಕ್ರಮದಲ್ಲಿ ಎಂ. ಎಸ್. ಸುಬ್ಬಲಕ್ಷ್ಮಿಯ ಸುಪ್ರಭಾತ ಸುಶ್ರಾವ್ಯವಾಗಿ ಕೇಳಿಸುತ್ತಿತ್ತು.

ಕಿರಣ್ಮಯಿ ಪ್ರಕೃತಿಯಲ್ಲಿ, ಸಂಗೀತದಲ್ಲಿ ಮೈಮರೆತು ಹೋಗಿದ್ದಳು. ಏಳು ಗಂಟೆಗೆ ಹಾಸ್ಟೇಲಿನಲ್ಲಿ ಸ್ವಲ್ಪ ಕಲರವ ಆರಂಭವಾಯಿತು. ಅಷ್ಟರಲ್ಲಿ ವಾರ್ತೆಗಳು ಆರಂಭವಾಯಿತು.

ವಾರ್ತೆಗಳಲ್ಲಿ ಮುಖ್ಯಾಂಶಗಳು.... ಅಸ್ಸಾಂನಲ್ಲಿ ಬೋಡೋ ಸಮಸ್ಯೆ, ಏಳು ಜನರ ಸಾವು. ಒರಿಸ್ಸಾದಲ್ಲಿ ಬಸ್ಸಿನ ಅಪಘಾತ ನಾಲ್ವರ ಮರಣ, ಕಾಶ್ಮೀರದ ಟೆರ್ರರಿಸ್ಟ್ ಕೈಯ್ಯಲ್ಲಿ ಹತ್ತು ಜನರ ಸಾವು. ಬೆಳಗಾಗುತ್ತಲೇ ಎಲ್ಲವೂ ದುರ್ವಾರ್ತೆಗಳೇ. ಕಿರಣ್ಮಯಿ ಬೇಸರದಿಂದ ಟ್ರಾನ್ಸಿಸ್ಟರ್ ಆಫ್ ಮಾಡಲು ಹೋದಳು. 'ಇಷ್ಟರಲ್ಲೇ ಪಾಕೀಸ್ಥಾನದ ವಿರುದ್ಧ ಆಡಲಿರುವ ಭಾರತದ ತಂಡವನ್ನು ಆಯ್ಕೆ ಮಾಡಲಾಗಿದೆ ಎಂಬ ಸುದ್ದಿ ಕೇಳಿ ವಾಲ್ಯೂಂ ಹೆಚ್ಚಿಸಿದಳು. ಮುಖ್ಯಾಂಶಗಳ ನಂತರ ಮಾಮೂಲು ಸುದ್ಧಿ ಪ್ರಸಾರ ವಾಯಿತು. ಅವಳ ಟೆನ್ಷನ್‌ಗೆ ಪರೀಕ್ಷೆ ಮಾಡಿದಂತೆ ಎಂಟು ನಿಮಿಷಗಳ ಕಾಲ ವಿದೇಶ ಸುದ್ಧಿ. ನಂತರ....

" 'ಭಾರತ' ಪಾಕೀಸ್ಥಾನ್ ವಿರುದ್ಧ ಆಡಲಿರುವ ಭಾರತ ತಂಡವನ್ನು ಆಯ್ಕೆ ಮಾಡಲಾಗಿದೆ, ಆಟಗಾರರ ಹೆಸರು ..."

ಕಿರಣ್ಮಯಿ ಉಸಿರುಬಿಗಿಹಿಡಿದು ಕೇಳಿದಳು.

"ಕ್ಯಾಪ್ಟನ್ ಅಜ್ಜರುದ್ದೀನ್, ವೈಸ್ ಕ್ಯಾಪ್ಟನ್ ರವಿಶಾಸ್ತ್ರಿ, ವೆಂಗ ಸರ್ಕಾರ್, ತಂಡೂಲ್ಕರ್, ಮಂಜ್ರೇಕರ್, ರಾಯಣ್ಣ, ವಿಕೆಟ್ ಕೀಪರ್...." ಅವಳು ಒಂದೇ ನೆಗೆತಕ್ಕೆ ಎದ್ದು ಒಳಗೆ ಓಡಿದಳು. ಕಣ್ರೆಪ್ಪೆಗಳ ನಡುವಿನಿಂದ ಜಾರಿದ ಕಣ್ಣೀರ ಹನಿ ಕೆನ್ನೆಗಳ ಮೇಲೆ ನಿಂತವು. ಅದು ರಾಯಣ್ಣನೇ ಚುಂಬಿಸಿದಂತೆ ಅನ್ನಿಸಿತು.

ಕಿರಣ್ಮಯಿಗೆ ತನ್ನ ಸಂತೋಷವನ್ನು ಯಾರೊಡನಾದರೂ ಹಂಚಿಕೊಳ್ಳ ಬೇಕೆನ್ನಿಸಿತು. ಆದರೆ ಅಷ್ಟರಲ್ಲೇ ತನ್ನನ್ನು ತಾನೇ ನಿಗ್ರಹಿಸಿಕೊಂಡಳು. ದುಃಖವಾದರೂ, ಸಂತೋಷವಾದರೂ, ಕಂಟ್ರೋಲ್ ಮಾಡಿಕೊಳ್ಳಲಾರದೆ ಹೋಗುವುದು ಇಮ್ಮೆಚ್ಯೂರಿಟಿಯ ಚಿನ್ಹೆಯಲ್ಲವಾ ? ಅವಳು ರೂಮಿನೊಳಗೆ

ಬರುತ್ತಿದ್ದಂತೆ ನೀಲು, ಇಂದು ಕಾಲೇಜಿಗೆ ಹೋಗಲು ಸಿದ್ಧರಾಗುತ್ತಿದ್ದರು. ಒಂದೇ ಗಡಿಬಿಡಿ ತಡಮಾಡಿದರೆ ಬಾತ್‌ರೂಂ ಸಿಗುವುದಿಲ್ಲ.

"ಇವತ್ತು ಎಲ್ಲಿಗಾದರೂ ಹೋಗುತ್ತೀರಾ ?" ಇಂದು ಕೇಳಿದಳು.

"ಇಲ್ಲ. ಹಾಸ್ಟೆಲ್‌ನಲ್ಲಿಯೇ ಇರುತ್ತೇನೆ. ನೀವು ಯಾವಾಗ ಬರುತ್ತೀರಿ ?" ಕಿರಣ್ಮಯಿ ಕೇಳಿದಳು.

"ಕ್ಲಾಸ್ ಮುಗಿದ್ಮೇಲೇನೇ. ನೀವು ಹತ್ತು ಗಂಟೆ ನಂತರವೇ ಸ್ನಾನಕ್ಕೆ ಹೋಗಿ. ಜಾಗ ಸಿಗುತ್ತೆ. ಈಗಾದರೆ ಕ್ಯೂನಲ್ಲಿ ನಿಲ್ಲಬೇಕಾಗುತ್ತೆ."

"ಆಯಿತು."

"ಸಂಜೆಗೆ ಹೊರಗೆ ಹೋಗಿಬರೋಣ. ಅಂದ ಹಾಗೆ ನೀವು ಕ್ಲಬ್ ರೂಂಗೆ ಹೋಗಿರಬಹುದು. ಅಲ್ಲಿ ಬುಕ್ಸ್, ಟಿ. ವಿ. ಇದೆ. ಸ್ವಲ್ಪ ಟೈಂ ಪಾಸ್...." ನೀಲು ಹೇಳಿದಳು.

ಕಿರಣ್ಮಯಿಗೂ ಅದು ಒಳ್ಳೆಯ ಐಡಿಯಾ ಅನ್ನಿಸಿತು. ಅಲ್ಲಾದರೆ ಯಾರೊಡನೆಯಾದರೂ ಪರಿಚಯ ಮಾಡಿಕೊಳ್ಳುವ ಅವಕಾಶವಿದೆ. ಕ್ಲಬ್ ರೂಮಿರೂಮಿನಲ್ಲಿ ಒಬ್ಬಳೇ ಹುಡುಗಿ ಕುಳಿತಿದ್ದಳು. ತುಂಬಾ ಸೀರಿಯಸ್ಸಾಗಿ ಟಿ. ವಿ. ನೋಡುತ್ತಿದ್ದಳು, 'ಮನಿ ಮ್ಯಾಟರ್ಸ್' ಷೇರ್‌ಗಳ ಬಗ್ಗೆ ವಿವರಣೆ ನೀಡುತ್ತಿದ್ದ ಶಶಿಕುಮಾರ್.

ಆ ಹುಡುಗಿ ತನ್ನ ಕಡೆಗೆ ಅನುಮಾನದಿಂದ ನೋಡುವುದನ್ನು ಗಮನಿಸಿದಳು ಕಿರಣ್ಮಯಿ.

'ಮನೀ ಮ್ಯಾಟರ್ಸ್.... ಸೇಮ್ ಟೈಮ್.... ಸೇಮ್ ಡೇ.... ನೆಕ್ಸ್ಟ ವೀಕ್' ತನ್ನದೇ ಶೈಲಿಯಲ್ಲಿ ಹೇಳಿ ಮುಗಿಸಿದ ಶಶಿಕುಮಾರ್,

"ನನ್ನ ಹೆಸರು ಕಿರಣ್ಮಯಿ, ಹದಿನೆಂಟನೆ ರೂಮಿನಲ್ಲಿರುವ ಇಂದುಮತಿ ನನ್ನ ಕಸಿನ್,

"ನಿಮ್ಮ ಹೆಸರು ?" ಕೇಳಿದಳು,

"ರೇಖ" ಅಂದಳು ಅವಳು,

ಟಿ.ವಿ. ಯಲ್ಲಿ ದೀಪಕ್ ವ್ಹೋರಾ ತನ್ನ ಎಂದಿನ ಮುಂಗಳ್ಗಣೆಯ ಮಾತುಗಳನ್ನು ಮುಂದುವರೆಸುತ್ತಾ...." ಲೆಟ್‌ಅಸ್ ಹ್ಯಾವ್ ಎ ಲುಕ್ ಆಟ್....

ವ್ಹಾಟ್ ಈಸ್ ಹಾಪ್‌ನಿಂಗ್ ಅರೌಂಡ್ ದ ವರ್ಲ್ಡ್.... ಬ್ರಾಟ್ ಟು ಯು ಬೈ.... ಸುಕನ್ಯಾ...." ಎಂದು ತನ್ನ ಕೆಲಸ ಮುಗಿಸಿದವನಂತೆ ಮರೆಯಾದ.

ಏಳೂ ಐವತ್ತರ ನ್ಯೂಸ್ ಪ್ರಾರಂಭವಾಯಿತು. ರೇಖಳ ಸೀರಿಯಸ್‌ನೆಸ್‌ನೋಡಿ ಕಿರಣ್ಮಯಿ ಮುಂದಕ್ಕೆ ಮಾತನಾಡಲಿಲ್ಲ. ನ್ಯೂಸ್ ಕೇಳುತ್ತಲೇ ಅವಳನ್ನು ಸೂಕ್ಷ್ಮವಾಗಿ ಗಮನಿಸಿದಳು. ರೇಖಳ ಕಣ್ಣುಗಳು ಟಿ. ವಿ. ಯ ಮೇಲೆ ಕೇಂದ್ರೀಕರಿಸಿತು. ಆದರೆ ಮನಸ್ಸು ಮಾತ್ರ ಎಲ್ಲೋ ಇತ್ತು, ಯಾವುದೋ ನೋವನ್ನು ಅನುಭವಿಸುತ್ತಿರುವಂತೆ ಅವಳ ಮುಖವಿತ್ತು, ಏಕಾಂತವನ್ನರಸಿ ಇಲ್ಲಿಗೆ ಬಂದು ಕುಳಿತಂತಿತ್ತು.

ಇಪ್ಪತ್ತು ವರ್ಷವೂ ತುಂಬದ ಈ ಹುಡುಗಿಯಲ್ಲಿ ಏಕಿಷ್ಟು ನಿರಾಸಕ್ತಿ ? ಮನಸ್ಸನ್ನು ಓದಿನ ಮೇಲೆ ಕೇಂದ್ರೀಕರಿಸಿ, ಜೊತೆಗೆ ಆಟಗಳಲ್ಲಿ ಭಾಗವಹಿಸಿ ನಲಿಯುತ್ತಾ ಇರಬೇಕಾದವಳು ಏನನ್ನೋ, ಕಳೆದುಕೊಂಡವಳಂತೆ, ಬದುಕಿನ ಬಗ್ಗೆ ವಿರಕ್ತಿ ಹುಟ್ಟಿದಂತೆ ಏಕೀ ಉದಾಸೀನತೆ ? ಮನೆಯ ಪರಿಸ್ಥಿತಿ ಇಲ್ಲವೇ ಅವರನ್ನು ಬಿಟ್ಟು ದೂರವಿರುವುದರಿಂದ ಹೀಗಿದ್ದಾಳಾ ? ಸ್ವಲ್ಪವೂ ಹಿಡಿತವಿಲ್ಲದ ಈ ಹಾಸ್ಟೆಲ್‌ನಲ್ಲಿದ್ದೂ ಹೀಗೆ ವಿಷಣ್ಣಳಾಗಿದ್ದಾಳೆಂದರೆ ಇವಳಿಗೆ ತನ್ನ ಮನೆಯವರ ನೆನಪು ಸದಾ ಕಾಡುತ್ತಿರಬಹುದೇ ! ಲಕ್ಷ್ಮಿಯಂತೆ.... ಇವಳೂ ಲಕ್ಷ್ಮಿಯ ಸ್ನೇಹಿತೆಯಾಗಿರಲಿಕ್ಕಿಲ್ಲ ತಾನೆ.

ಕಿರಣ್ಮಯಿ ಏನೋ ಹೇಳಲು ಬಾಯಿ ತೆರೆಯುವಷ್ಟರಲ್ಲೇ ನ್ಯೂಸ್ ರೀಡರ್ ಸುಕನ್ಯಾ ಕ್ರಿಕೆಟ್ ಟೀಮಿನ ಬಗ್ಗೆ ಹೇಳಲು ಆರಂಭಿಸಿದ್ದಳು.

ರಾಯಣ್ಣನ ಹೆಸರು ಹೇಳುತ್ತಾ ಅವನ ಫೋಟೋ ತೋರಿಸುತ್ತಿರುವಾಗ ಉತ್ಸಾಹದಿಂದ ರೇಖಳ ಕಡೆಗೆ ನೋಡಿದಳು ಕಿರಣ್ಮಯಿ. ರೇಖಳ ಮುಷ್ಠಿ ಬಿಗಿಯಾಗಿತ್ತು, ಕೋಪದಿಂದ ಮುಖ ಕೆಂಪಗಾಯಿತು. 'ಮರ್ಡರರ್, ರಾಸ್ಕಲ್' ಎಂದು ಗೊಣಗುತ್ತಿದ್ದಳು. ಕಿರಣ್ಮಯಿಯ ಉತ್ಸಾಹವೆಲ್ಲಾ ಸರ್ರನೆ ಇಳಿದು ಹೋಯಿತು.

ಈ ಹಾಸ್ಟೆಲಿನಲ್ಲಿ ಎಲ್ಲರ ಅಭಿಪ್ರಾಯವೂ ಅದೇ ಆದರೆ ತನ್ನ ಪರಿಶೋಧನ ವಿಜಯವಾಗುವುದೆ ?

ಆ ಸಂಜೆ ನೀಲೂ ಕಾಲೇಜಿನಿಂದ ಬಂದ ನಂತರ, ಕಿರಣ್ಮಯಿ ರೇಖಳ ವಿಷಯ ಪ್ರಸ್ತಾಪಮಾಡಿದಳು.

"ಆ ಹುಡುಗಿ ಲಕ್ಷ್ಮಿಗೆ ಒಳ್ಳೆ ಫ್ರೆಂಡಾಗಿದ್ದಳಾ ?"

"ಅಂತಹ ಗಾಢವಾದ ಸ್ನೇಹವೇನಲ್ಲಾ, ಲಕ್ಷ್ಮಿ ಕೊಲೆಯಾದ ದಿನ ಕೊಲೆಗಾರನನ್ನು ನೋಡಿದ್ದು ರೇಖಳೇ. ಪೋಲೀಸರೂ, ಹಾಸ್ಟೆಲ್ ಅಧಿಕಾರಿಗಳೂ ಪದೇ ಪದೇ ಅದನ್ನೆ ಪ್ರಶ್ನಿಸುತ್ತಿರುವುದರಿಂದ ಗಲಿಬಿಲಿಗೊಂಡಿದ್ದಾಳೆ. ಆ ಮರುದಿನವೇ ಅವರಪ್ಪ ಬಂದು ಪೋಲೀಸ್ ಕೇಸಿನಲ್ಲಿ ಅವಳು ಸಿಕ್ಕಿ ಹಾಕಿಕೊಂಡಿದ್ದಕ್ಕೆ ಚೆನ್ನಾಗಿ ಬೈದರು."

"ಹಾಗಾದರೆ ಲಕ್ಷ್ಮಿಯ ಕ್ಲೋಸ್ ಫ್ರೆಂಡ್ಸ್ ಯಾರು ?"

"ಸದಾ ಒಬ್ಬಳೊಡನೆ ತಿರುಗುತ್ತಿದ್ದಳು." ಕಿರಣ್ಮಯಿಯ ಹೃದಯ ಬಡಿತ ಹೆಚ್ಚಾಯಿತು.

"ಯಾರು ಆ ಹುಡುಗಿ ?"

"ಅನೂರಾಧ ಅಂತ."

"ಎಲ್ಲಿರುತ್ತಾಳೆ ? ಯಾವ ರೂಮಿನಲ್ಲಿ ?" ಚಕ್ಕನೆ ನಿಲ್ಲಿಸಿದಳು,

"ಈಗ ಅವಳಿಲ್ಲಿಲ್ಲ. ಲಕ್ಷ್ಮಿಯ ಸಾವಿನಿಂದ ಅವಳು ತುಂಬಾ ಅಪ್ ಸೆಟ್ ಆಗಿದ್ದಾಳೆ. ಅವರ ಊರಿಗೆ ಹೊರಟು ಹೋಗಿದ್ದಾಳೆ. ಯಾವಾಗ ಬರುತ್ತಾಳೋ ಗೊತ್ತಿಲ್ಲ...."

ಒಮ್ಮೆಗೇ ಕಿರಣ್ಮಯಿಗೆ ನಿಶ್ಶಕ್ತಿ ಆವರಿಸಿತು.

ಅಷ್ಟರಲ್ಲಿ ಹೊರಗಿನಿಂದ ಜೋರಾಗಿ ಯಾರೋ ಕೂಗಿದಂತಾಗಿ ಮೂವರೂ ಹೊರಬಂದರು.

ವಾರ್ಡನ್ ಗೋಡೆಯ ಮೇಲೆ, ಗೇಟಿನ ಪಕ್ಕದಲ್ಲಿದ್ದ ಅಕ್ಷರಗಳನ್ನು ತೋರಿಸುತ್ತಾ ಜೋರಾಗಿ ಕಿರುಚಾಡುತ್ತಿದ್ದರು, ಆಕೆಯ ಮಾತಿಗೆ ಯಾರೂ ತಲೆಕೆಡಿಸಿಕೊಳ್ಳುತ್ತಿರಲಿಲ್ಲ. ಕೆಲವರು ತಮ್ಮ ಮುಖಗಳನ್ನು ಪಕ್ಕಕ್ಕೆ ತಿರುಗಿಸಿಕೊಂಡು ಮುಸಿ ಮುಸಿ ನಗುತ್ತಿದ್ದರು, ಕಿರಣ್ಮಯಿ ಗೇಟಿನ ಪಕ್ಕದಲ್ಲಿ ಏನು ಬರೆದಿದೆಯೋ ಎಂದು ನೋಡಿದಳು. ಯಾರೋ ತುಂಟಿ ಕೆಮ್ಮಣ್ಣಿನಿಂದ ಸುಂದರವಾಗಿ ಬರೆದಿದ್ದಳು,

'no public farewell kissing here please.'

ಕಿರಣ್ಮಯಿ ಇಂದುಮತಿ ಕಡೆಗೆ ತಿರುಗಿ,

" ವಾರ್ಡನ್ ತುಂಬಾ ಸ್ಟ್ರಿಕ್ಟಾಗಿರುವಂತಿದೆಯಲ್ಲಾ" ಅಂದಳು.

"ಉಹ್ಞೂ.... ಇದೆಲ್ಲಾ ಇನ್ನೊಂದು ಗಂಟೆಯ ಕಾಲ, ಮೇಲಿನವರು ಚೆನ್ನಾಗಿ ಬೈದಿರುತ್ತಾರೆ. ಬಂದು ಗಲಾಟೆ ಮಾಡುತ್ತಿದ್ದಾಳೆ. ಇವರಾರೂ ಅವಳಿಗೆ ಕೇರ್ ಮಾಡುವುದಿಲ್ಲ. ಕಿರುಚಿ, ಕಿರುಚಿ ಮೇಲಿನ ಅಧಿಕಾರಿಗಳಿಗೆ ಕಂಪ್ಲೆಂಟ್ ಮಾಡುತ್ತಾಳೆ, ಯಾವಾಗಲಾದರೂ ಒಮ್ಮೆ ಛೀಫ್ ವಾರ್ಡನ್ ಬಂದು ಮೀಟಿಂಗ್ ಕರೆಯುತ್ತಾರೆ. ಡಿಸಿಪ್ಲೀನ್ ಬಗ್ಗೆ ಮಾತನಾಡಿ ಎರಡು ದಿನ ಸ್ಟ್ರಿಕ್ಟ್ ಆಗಿರುತ್ತಾರೆ. ಮತ್ತೆ ಅದೇ ಕತೆ...."

"ಅಂದರೆ ವಾರ್ಡನ್ ಇಲ್ಲೇ ಇರಬೇಕಾದ ಅವಶ್ಯಕತೆಯಿಲ್ಲವಾ ?"

"ಇರಬೇಕು. ಆದರೆ ಅವಳಿರುವುದಿಲ್ಲ. ಗಂಡ–ಮಕ್ಕಳನ್ನು ಬಿಟ್ಟು ಇಲ್ಲೇಕೆ ಇರುತ್ತಾಳೆ ? ಅದರ ಅವಕಾಶ ಪಡೆದು ನಮ್ಮವರೆಲ್ಲಾ ಹೋಗಿ ಛೀಫ್ ಬಳಿ ಕಂಪ್ಲೇಂಟ್ ಮಾಡುತ್ತಾರೆ. ಅವರು ಮತ್ತೆ ಅವಳ ಮೇಲೆ ಕೂಗಾಡುತ್ತಾರೆ ಇದೊಂದು ತಮಾಷೆ ಅಷ್ಟೆ "

"ಗೇಟಿನ ಬಳಿ ಹೊರಗೆ ಪೊದೆಗಳನ್ನು ತೆಗೆಸಿಬಿಟ್ಟದ್ದರೆ ಚೆನ್ನಾಗಿತ್ತು. ಆಗಲಾದರೂ ಅರ್ಧರಾತ್ರಿಯವರೆಗೂ ಹೀಗೆ ಕುಳಿತು ಹರಟುವುದು ತಪ್ಪುತ್ತದೆ." ಕಿರಣ್ಮಯಿ ಹೇಳಿದಳು,

"ನಾನು ಹಾಸ್ಟೆಲ್ಲಿಗೆ ಬಂದ ಹೊಸದರಲ್ಲಿ ಹಾಗೇ ನಡೆಯಿತು, ಆಗ ಇದ್ದ ವಾರ್ಡನ್ ತುಂಬಾ ಸ್ಟ್ರಿಕ್ಟ್. ಪೊದೆಗಳ ಹಿಂದೆ ನಡೆಯುತ್ತಿದ್ದ ಆಟಗಳನ್ನು ನೋಡಲಾರದೆ ಎಲ್ಲಾ ಕ್ಲೀನ್ ಮಾಡಿಸಿದ್ದರು. ಆಗೇನಾಯಿತು ಗೊತ್ತಾ ? ಹುಡುಗರು ಸ್ಕೂಟರ್‌ಗಳಲ್ಲಿ ಬರುತ್ತಿದ್ದರು, ಹುಡುಗಿಯರು ಸ್ಕೂಟರ್‌ಗಳ ಮೇಲೆ, ಅವನ್ನು ಅಡ್ಡವಿರಿಸಿಕೊಂಡು ಕುಳಿತು ಹರಟುತ್ತಿದ್ದರು ಯಾರಾದರೂ ನೋಡಿದರೆ ಏನೆಂದುಕೊಳ್ಳುತ್ತಾರೆಂಬ ಯೋಚನೆಯಾಗಲೀ, ಅಸಭ್ಯವಾಗಿರುತ್ತದೆಂಬ ಚಿಂತೆಯಯಗಲೀ ಅವರಿಗಿಲ್ಲ. ಆದರಿಂದ ರಸ್ತೆಯಲ್ಲಿ ಹೋಗುವ ಪೋಲಿಗಳು, ಮೆನ್ಸ್ ಹಾಸ್ಟೆಲ್ ಹುಡುಗರು ಬಂದು ಕಾಮೆಂಟ್ ಮಾಡುವುದು, ಶಿಳ್ಳೆ ಹಾಕುವುದು ಪ್ರಾರಂಭವಾಯಿತು. ಬಸ್ ಕಂಡಕ್ಟರ್

ಗಳು ಕೂಡಾ ಈ ಹಾಸ್ಟೆಲ್ ಟಿಕೆಟ್ ಕೇಳಿದರೆ ಅದೊಂದು ರೀತಿಯಿಂದ ರೀತಿಯಿಂದ ನಗುತ್ತಾ ಟಿಕೆಟ್ ಕೊಡುತ್ತಿದ್ದರು. ತಂದೆ ತಾಯಿಯರು ತಮ್ಮ ಮಕ್ಕಳನ್ನು ನೋಡಲು ಇಲ್ಲಿಗೆ ಬಂದು ಈ ವಾತಾವರಣಕ್ಕೆ ಗಾಬರಿ ಯಾಗಿ ಹೋಗುತ್ತಿದ್ದರು. ಒಮ್ಮೆ ನಮ್ಮ ತಂದೆ ಬಂದು ನನ್ನನ್ನು ಮನೆಗೆ ಕರೆದೊಯ್ಯುತ್ತೇನೆಂದು ಹಠ ಹಿಡಿದರು."

ಕಿರಣ್ಮಯಿಗೆ ಬೇಜಾರಾಯಿತು. ಈ ಇಂಟರ್ ಹುಡುಗಿಯರು.... ಇವರ ವಯಸ್ಸೇನು ? ಹದಿನಾರೋ.... ಹದಿನೇಳೋ.... ಸರಿಯಾದ ಪದ್ಧತಿಯಲ್ಲಿ ನಡೆದರೆ ಓದಿನಲ್ಲಿ, ಆಟದಲ್ಲಿ ಏನನ್ನಾದರೂ ಸಾಧಿಸುವ ವಯಸ್ಸು. ವಾರ್ಡನ್ ಕಾಳಜಿವಹಿಸದ ಈ ಕೇರ್‌ಫ್ರೀ ವಾತಾವರಣದಲ್ಲಿ ಇವರು ಹೀಗೆ ಬದಲಾಗುತ್ತಿದ್ದಾರೆಂದರೆ ಅವರ ತಪ್ಪೇನಿದೆ ?

"ಈ ಹುಡುಗಿಯರ ವರ್ತನೆ ಹೇಗಿರುತ್ತದೆ ?" ಕಿರಣ್ಮಯಿ ಕೇಳಿದಳು.

"ಇವರ ಮಾತುಗಳನ್ನು ಕೇಳುತ್ತಿದ್ದರೆ ತುಂಬಾ ಮಜ ಅನ್ನಿಸುತ್ತೆ ಅಕ್ಕಾ ! ನನ್ನನ್ನು ಪ್ರಾಣಕ್ಕಿಂತಲೂ ಹೆಚ್ಚಾಗಿ ಪ್ರೀತಿಸುತ್ತೇನೆ ಎಂದು ಹೇಳುತ್ತಾನೆ" ಎಂದು ಜಂಭ ಕೊಚ್ಚಿಕೊಳ್ಳುವ ಹುಡುಗಿಯರು, ಹುಡುಗಿ ಯೊಬ್ಬಳಿಗೆ ಒಬ್ಬ ಬಾಯ್ ಫ್ರೆಂಡ್ ಇರುವುದು ಒಂದು ದೊಡ್ಡ ಕ್ವಾಲಿಫಿ ಕೇಷನ್ ಅಂತೆ. ತಾವು ತುಂಬಾ ಸಂತೋಷವಾಗಿರುವಂತೆ ವರ್ತಿಸುತ್ತಿರು ತ್ತಾರೆ. ಆಗತಾನೆ ಹೊಸದಾಗಿ ಸೇರಿದ ಹುಡುಗಿಯರು ಮತ್ತಷ್ಟು ಅಸೂಯೆ ಪಡುವಂತೆ ಪೋಸುಕೊಡುತ್ತಿರುತ್ತಾರೆ. ಸ್ವಲ್ಪ ದಿನಕ್ಕೆ ಹುಡುಗರಿಗೆ ಈ ಹುಡುಗಿಯರ ಬಗ್ಗೆ ಬೇಸರ ಬರುತ್ತದೆ. ಬಂದು ಹೋಗುವುದನ್ನು ಕಡಿಮೆ ಮಾಡುತ್ತಾರೆ. ಹುಡುಗಿಯರು ಸ್ವಲ್ಪ ದಿನ ಬೇಸರ ಮಾಡಿಕೊಂಡು, ಆನಂತರ ಓದು ಮುಗಿಸಿ ಹೊರಟುಹೋಗುತ್ತಾರೆ. ಮತ್ತೆ ಕೆಲವರು ತಲೆ ಕೆಡಿಸಿಕೊಳ್ಳುತ್ತಾರೆ."

ಕಿರಣ್ಮಯಿ ಅವಳೆಡೆಗೆ ಆಶ್ಚರ್ಯದಿಂದ ನೋಡಿದಳು. ಮೇಲೆ ತುಂಬಾ ಮುಗ್ಧಳಂತೆ ಕಾಣುವ ಈ ಹುಡುಗಿ ಎಷ್ಟೊಂದು ತಿಳಿದಿದ್ದಾಳೆ ಎಂದು ಕಣ್ಣರಳಿಸಿದಳು.

ಅಷ್ಟರಲ್ಲಿ ಇಂದುಮತಿ ಕೇಳಿದಳು—"ಇವೆಲ್ಲದರ ಮೇಲೆ ನಿಮ್ಮ ಅಭಿಪ್ರಾಯವೇನಕ್ಕಾ ?" ಎಂದು.

ಕಿರಣ್ಮಯಿ ಹೇಳಿದಳು—

"ಮದುವೆಗಾಗಿ, ಮುಗ್ಧತೆಯಿಂದ ಹುಡುಗಿಯರು ಪ್ರೀತಿಸುತ್ತಾರೆ. ಸ್ನೇಹಕ್ಕಾಗಿ ವೆರೈಟಿಗಾಗಿ ಹುಡುಗರು ಪ್ರೀತಿಸುತ್ತಾರೆ. ಮೊದಲನೆ ಸಲ ಸ್ನೇಹ ಮಾಡುವಾಗ ಯಾವ ಹುಡುಗಿಯಾದರೂ ತುಂಬಾ ನಿಯತ್ತಿನಿಂದ, ಗಾಢವಾಗಿ, ಹೃದಯಾಂತರಾಳದಿಂದ ಪ್ರೀತಿಸುತ್ತಾಳೆ. ಎಂತಹ ತ್ಯಾಗಕ್ಕಾದರೂ ಸಿದ್ಧಳಾಗುತ್ತಾಳೆ. ಸ್ವಲ್ಪ ಕೆಟ್ಟಬುದ್ಧಿಯ ಗಂಡಸಾದರೆ ಪ್ರೇಮದ ಹೆಸರಿನಲ್ಲಿ ಇದನ್ನು ಕ್ಯಾಷ್‌ಮಾಡಿಕೊಳ್ಳುತ್ತಾನೆ. ಎಲ್ಲರೂ ಹೀಗೆಯೇ ನಾನು ಹೇಳುತ್ತಿಲ್ಲ." ಎಂದು ನಿಲ್ಲಿಸಿ,

ಮತ್ತೆ ಹೇಳಲಾರಂಭಿಸಿದಳು, "ಇವೆಲ್ಲಾ ಅಡಾಲಸೆಂಟ್ ಇಮ್ಮೆಚ್ಯೂರಿಟಿ, ಯಾವುದರ ಬಗ್ಗೆಯೂ ಗಮನವಿಲ್ಲದಿರುವುದು, ಪ್ರೀತಿಸಲ್ಪಡುವುದು, ಒಂದು ಶ್ರೇಷ್ಠ ಕೆಲಸವೆಂದು ಭಾವಿಸುವುದು ! ಯಾರಿಗಾಗಿಯೋ ಎದುರು ನೋಡುವುದು, ಅವರು ಬರುತ್ತಿದ್ದಂತೆಯೇ ಸ್ವರ್ಗ ಲೋಕ ಸಿಕ್ಕಷ್ಟು ಸಂತೋಷ, ಬಂದಿದ್ದರೆ ಸರ್ವಸ್ವವೂ ಕಳೆದುಹೋದಂತ ಚಿಂತೆ—ಇವೆಲ್ಲಾ ಸೀರಿಯಸ್ ಲವ್ ಅಫೇರ್ಸ್ ಅಲ್ಲ, ನನ್ನ ಉದ್ದೇಶ್ಯದಲ್ಲಿ ಇವರು ವ್ಯಕ್ತಿಗಳನ್ನು ಪ್ರೀತಿಸುವುದಲ್ಲ. ಪ್ರೀತಿಸುತ್ತಿರುವೆನೆಂಬ ಭಾವತೆಯನ್ನು ಪ್ರೀತಿಸುತಿರುತ್ತಾರೆ."

"ಆದರೆ ಅವರು ಸೀರಿಯಸ್ಸಾಗೇ ತೆಗೆದುಕೊಳ್ಳುತ್ತಾರೆ. ಒಂದು ಹೊತ್ತು ಬಾಯ್‌ಫ್ರೆಂಡ್ ಬರದಿದ್ದರೆ ಊಟ ಮಾಡುವುದಿಲ್ಲ, ನಿದ್ರಿಸುವುದಿಲ್ಲ ಕೆಲವರು ಅಳುತ್ತಾರೆ ಕೂಡಾ."

"ತಾವು ಸಂತೋಷವಾಗಿ ಬದುಕಲು ಒಂದು ಆಧಾರ ಈ ಪ್ರೀತಿ, ಬೆಳಿಗ್ಗೆ ಎದ್ದವರಿಗೆ ಮೊದಲು ಪ್ರಿಯಕರನನ್ನೋ, ಪ್ರೇಯಸ್ಸಿಯನ್ನೋ ನೋಡಬೇಕೆಂಬ ಕಾತುರ. ಕಣ್ಗಳ ಮಿಲನದಿಂದ ಸಂತೋಷ, ಸಂಜೆಯಾಗುತ್ತಿದ್ದಂತೆ ಬೇಟಿ ಮಾಡುವ ಬಯಕೆ, ಆ ದಿನವೆಲ್ಲಾ ಹೇಗೆ ಕಳೆಯಿತೆಂದು ಮಾತನಾಡಿಕೊಳ್ಳುವುದು — ಆ ಎರೆಡು, ಮೂರು ಗಂಟೆಗಳ ಕಾಲ ಸ್ವೀಟ್

ನಥಿಂಗ್ಸ್‌ನೊಡನೆ ಮಧುರವಾಗಿ ಕಳೆಯುವುದು. ಬೀಳ್ಕೊಡುವಾಗ ಮತ್ತೆ ಮತ್ತೆ ನೋವು, ಈ ಪ್ರಪಂಚವೆಲ್ಲಾ ತಮಗೆ ಎದುರಾಗಿ ತಮ್ಮನ್ನು ಬೇರ್ಪಡಿಸುತ್ತಿರುವ ಫೀಲಿಂಗ್. ಮತ್ತೆ ಬೆಳಗ್ಗೆಗಾಗಿ ನಿರೀಕ್ಷೆ ಹೀಗೆ ದಿನಗಳು ಕ್ಷಣಗಳಂತೆ ಕಳೆದು ಹೋಗುತ್ತದೆ. ನನ್ನ ಅನುಮಾನ ನಿಜವಾದರೆ ಇಂತಹ ಪ್ರೇಮಿಗಳು ಆಗಾಗ ಬೇಕಂದೇ ಜಗಳವಾಡಿ ಬೇರೆಯಾಗುವುದು, ಅವರನ್ನು ಸೇರಿಸಲು ಸ್ನೇಹಿತರು ಪ್ರಯತ್ನಪಡುವುದು, ಅನಂತರ ಆನಂದ ಬಾಷ್ಪಗಳು, ಅದರೊಡನೆ ಪಾರ್ಟಿಗಳ ಸೆಲಬ್ರೇಷನ್‌ಗಳು ನಡೆಯುತ್ತಿರುತ್ತವೆ."

"ಇಷ್ಟು ಮಾತ್ರ ನಿಜ, ಇಲ್ಲಿ ಹುಡುಗಿಯರು. ಅಲ್ಲಿ ಹುಡುಗರ ಹಾಸ್ಟೆಲ್‌ಗಳಲ್ಲಿ ಹುಡುಗರು ಈ ಪ್ರೇಮಿಗಳಿಗೆ ತುಂಬಾ ಸಪೋರ್ಟ್ ಮಾಡುತ್ತಾರೆ, ಲವರ್‌ಗಳು ಬರುತ್ತಿದ್ದಂತೆ ರೂಮ್ಮೇಟ್ಸ್ ಕೋಣೆಗಳಿಂದ ಹೊರಹೋಗುವುದು ಇತ್ಯಾದಿ ಮಾಡುತ್ತಿರುತ್ತಾರೆ. ಫೋನ್ ವಿಷಯದಲ್ಲೂ ಅಷ್ಟೆ. ಗಂಟೆಗಟ್ಟಲೆ ಮಾತನಾಡುತ್ತಿದ್ದರೂ ಯಾರೂ ಅಡ್ಡಿಪಡಿಸುವುದಿಲ್ಲ."

"ಇವರ ಪ್ರೀತಿ ಸಿನ್ಸಿಯರ್, ಸೀರಿಯಸ್ ಅಲ್ಲದಿರುವುದರಿಂದ ಒಬ್ಬರು ಬಿಟ್ಟು ಹೋದರೂ ಮತ್ತೊಬ್ಬರೊಡನೆ ಸ್ನೇಹಮಾಡುತ್ತಾರೆ, ಈ ಅನುಭವದಲ್ಲಿಯ "ಥ್ರಿಲ್" ಅವರಿಗೆ ಸದಾ ಬೇಕು. ಅತಿಲ್ಲದಿದ್ದರೆ ಬದುಕುವುದು ವ್ಯರ್ಥವೆಂದೇ ಭಾವಿಸುತ್ತಾರೆ, ಮನುಷ್ಯರು ಕಂಟಿನ್ಯೂ ಆಗದಿದ್ದರೂ, ಪ್ರೀತಿ ಕಂಟಿನ್ಯೂ ಆಗಬೇಕು ಇವರಿಗೆ." ಕಿರಣ್ಮಯಿ ಅವರೊಡನೆ ಇಷ್ಟೆಲ್ಲಾ ಹೇಳುತ್ತಿದ್ದರೂ ತನ್ನೊಳಗೇ ಯೋಚಿಸುತ್ತಿದ್ದಳು,

ಅಷ್ಟು ಸಣ್ಣ ವಯಸ್ಸಿನಲ್ಲಿ ತಾನೇಕೆ ಯಾರನ್ನು ಪ್ರೀತಿಸಲಿಲ್ಲ? ಕ್ರಿಶ್ಚಿಯನ್ ಹಾಸ್ಟೆಲ್‌ನಲ್ಲಿದ್ದುದರಿಂದಲೇ? ಕ್ರಮಶಿಕ್ಷಣಕ್ಕೆ ಹೆಸರಾದ ಕಾಲೇಜಿನಲ್ಲಿ ಓದಿದ್ದರಿಂದಲೇ? ಅದಕ್ಕೆ ತನಗೆ ಈ ರೀತಿಯ ಅನುಭವಗಳಿಲ್ಲವಾ?

ಹದಿನೆಂಟನೆ ವಯಸ್ಸಿನಲ್ಲಿ ಬೇಕಾದ ಮಾದರಿ ಪ್ರೇಮ ಅನುಭವಿಸದಿದ್ದುದರಿಂದಲೇ ಹೀಗೆ — 'ಎಟುಕದ ದ್ರಾಕ್ಷಿ ಹುಳಿ' ಸೈಕಾಲಜಿ ಬೆಳೆದು ಬಂದಿದೆಯಾ? ಹಾಸ್ಟೆಲ್‌ನಲ್ಲಿ ಹುಡುಗಿಯರು ಅನುಭವಿಸುತ್ತಿರುವ ಈ ಸಂತೋಷದಿಂದ ತಾನು ಅಸೂಯೆ ಪಡುತ್ತಿದ್ದಾಳಾ?

ಇಲ್ಲ.

ಅವರದು ಪ್ರೀತಿಯಲ್ಲ....ಇನ್‌ಫ್ಯಾಕ್ಚುಯೇಷನ್....ಆಕರ್ಷಣೆ.

"ಹೇಗೆ ಹೇಳಬಲ್ಲೆ ಕಿರಣ್ಮಯಿ ?"

"ನಿಂಗೆ ಹತ್ತು ಜನರೊಡನೆ ಬೆರೆಯುವ ಅವಕಾಶವಿದೆ. ಅದರಲ್ಲಿ ವಿಶೇಷವಾಗಿ ಒಬ್ಬರೇ ಮೆಚ್ಚಿಗೆಯಾದರೆ ಅದು ಪ್ರೀತಿ !"

"ಆ ಸಮಯದಲ್ಲಿ ನೀನು ಸಂಪೂರ್ಣ ಎಚ್ಚರದಿಂದಿದ್ದರೆ ಅದು ಪ್ರೀತಿ ! ಮತ್ತೊಂದು ರೀತಿ ಹೇಳಬೇಕೆಂದರೆ ನೀನು ಹೊರಗಿನವರನ್ನು ಭೇಟಿ ಮಾಡಿದ ಹತ್ತು ಸಲದವರೆಗೊ (ಕನಿಷ್ಠ) ಪ್ರೀತಿಯಲ್ಲಿ ಬೀಳದಿದ್ದರೆ ಅದು ಪ್ರೀತಿ !"

ಹಾಗೆ ಭೇಟಿಯಾದ ಹತ್ತು ಸಲವೂ ಆ ಮನುಷ್ಯನ ಹತ್ತು ಸದ್ಗುಣಗಳಿಗಿಂತಲೂ ಒಂದು ದುರ್ಗುಣವನ್ನು ಅಥವಾ ಬಲಹೀನತೆಯನ್ನು ನೀನು ಹೇಳಿದರೆ, ಹಾಗೆ ಹೇಳಿ ಕೂಡಾ ಆ ಮನುಷ್ಯ ಇಷ್ಟವಾದರೆ ಅದು ಪ್ರೀತಿ !"

ಎಲ್ಲಕ್ಕಿಂತಲೂ ಮುಖ್ಯವಾಗಿ—

ಸಂಜೆಯ ನೆರಳಿನಂತೆ ಬೆಳೆಯುವುದು ಪ್ರೀತಿ !!!

ಹಾಗಲ್ಲದೆ—

—ಒಬ್ಬ ವ್ಯಕ್ತಿ ನಿನ್ನ ಮೇಲೆ ಆಸಕ್ತಿ ತೋರಿದ ಕೂಡಲೇ ನಿನಗೆ ಮತ್ತು ಬಂದರೆ ಅದು ಆಕರ್ಷಣೆ.

—ಆ ವ್ಯಕ್ತಿಯನ್ನು ಬಿಟ್ಟು ಬೇರಾರನ್ನು ಆಗಾಗ ಭೇಟಿಯಾಗುವ ಅವಕಾಶ, ಮಾತನಾಡುವ ಸಾಧ್ಯತೆಯೂ ಇಲ್ಲದೆ ಸಿಕ್ಕಿರುವ ಆ ಒಬ್ಬನೇ ಶ್ರೇಷ್ಠವಾಗಿ ಕಂಡು ಆ ಇಕ್ಕಟ್ಟಾದ ಜಾಗದಲ್ಲೇ ಸ್ನೇಹ ಮಾಡಬೇಕಾದರೆ ಅದು ಆಕರ್ಷಣೆ !

—ಪರಿಚಯವಾದರೂ ಮೊದಲನೆ ದಿನಕ್ಕಿಂತ ವರ್ಷದ ನಂತರ ಹೊರಗಿನ ಮನುಷ್ಯನ ಸಾನಿಧ್ಯ ಕಡಿಮೆ ಸಂತೋಷ ಕೊಟ್ಟರೆ ಅದು ಆಕರ್ಷಣೆ.

ಅಂದರೆ—

ಬೆಳಗಿನ ವೇಳೆ ನೆರಳಿನಂತಿರುವುದು ಆಕರ್ಷಣೆ !

"ಕಿರಣಕ್ಕ ! ನಾವೊಂದು ವಿಷಯವನ್ನು ಮಾತನಾಡಲಾರಂಭಿಸುತ್ತಿದ್ದಂತೆಯೇ ಯೋಚಿಸಲಾರಂಭಿಸಿಬಿಡುತ್ತೀರಲ್ಲಾ ಏಕೆ ?" ನೀಲೂ ಕೇಳಿದಳು.

"ಬಹುಶಃ ನಾವು ಹೇಳಿದ ವಿಷಯಗಳನ್ನು ಮನನ ಮಾಡಿಕೊಳ್ಳುತ್ತಾ ಅದರಲ್ಲಿಯ ಸೈಕಾಲಜಿಯನ್ನು ಸ್ಟಡಿ ಮಾಡುತ್ತಾರೇನೋ ಇಂದು ಹೇಳಿದಳು.

"ನಿಜ ಸೈಕಾಲಜಿ ತುಂಬಾ ಆಳವಾದ ಸಬ್ಜೆಕ್ಟ್ ! ಇನ್‌ಫೈನಟ್ ಅನ್ನಬಹುದು. ಶೋಧಿಸಿದರೆ ಪ್ರತಿ ವ್ಯಕ್ತಿಯಿಂದಲೂ, ಪ್ರತಿ ನಿಮಿಷವೂ ಒಂದೊಂದು ಹೊಸ ಪಾಯಿಂಟ್ ನಮಗೆ ಸಿಗುತ್ತಲೇ ಇರುತ್ತದೆ."

"ಅದಕ್ಕೇನಾ ನೀವು ಯಾವಾಗಲೂ ಕಡಿಮೆ ಮಾತನಾಡುತ್ತೀರಾ ?"

"ನಿಜ ಹೇಳಬೇಕೆಂದರೆ ನನಗೆ ಆತ್ಮೀಯರಾದ ಸ್ನೇಹಿತರಾರೂ ಇಲ್ಲ. ಏಕೆಂದು ನನ್ನಲ್ಲೇ ನಾನು ಪ್ರಶ್ನಿಸಿಕೊಂಡರೆ ಒಂದು ಅನ್ನಿಸುತ್ತದೆ. ಚಿಕ್ಕಂದಿನಿಂದ ನಾನು ಬೆಳೆದ ವಾತಾವರಣ, ನನ್ನಲ್ಲಿ ತುಂಬಾ ಇನ್ಫೀರಿಯಾರಿಟಿ ಕಾಂಪ್ಲೆಕ್ಸ್‌ನ್ನು ಬೆಳೆಸಿದೆ. ಆದರಿಂದ ನನ್ನಲ್ಲಿ ಮೆಚ್ಯೂರಿಟಿ ಬರುವವರೆಗೂ, ಅಂದರೆ ಇಪ್ಪತ್ತು ವರ್ಷ ಆಗುವವರೆಗೂ ನಾನು ಏಕಾಂಗಿಯೇ. ಅಷ್ಟು ವಯಸ್ಸಾದ ಮೇಲೆ ಮನಸ್ಸು ಬಿಚ್ಚಿ ಮಾತನಾಡುವಂತಹವರ ಸ್ನೇಹ ಮಾಡಿಕೊಳ್ಳುವುದು ಕಷ್ಟವೇ. ಚಿಕ್ಕಂದಿನಲ್ಲಿ ಆದರೆ ಭೇದಾಭಿಪ್ರಾಯಗಳಿಲ್ಲದೆ ಸ್ನೇಹ ಮಾಡಬಹುದು, ವಯಸ್ಸಿನೊಡನೆ ಸಂಕೋಚ ಕೂಡಾ ಬೆಳೆಯುತ್ತದೆ ಅಲ್ಲವಾ ! ಯಾವುದೋ ಸಂದರ್ಭದಲ್ಲಿ ಅನಿರೀಕ್ಷಿತವಾಗಿ ಬರುವ ಚರ್ಚೆಗಳಲ್ಲಿ ಬಿಟ್ಟು ಮನಸ್ಸಿನಲ್ಲಿ ಚಿಂತನೆ ಮೂಡುವ ಅವಕಾಶ ಕಡಿಮೆ. ಹಾಗೆಯೇ ಇಂಟ್ರಾವರ್ಟ್‌ಗಳಾಗಿಬಿಡುತ್ತಾರೆ ಮನುಷ್ಯರು ಅದರಲ್ಲಿ ನಾನೊಬ್ಬಳು."

"ಎಷ್ಟು ಚೆನ್ನಾಗಿ ಯೋಚಿಸುತ್ತೀರಿ ! ರಮಣಿ ಭವಿಷ್ಯತ್ತಿನ ಬಗ್ಗೆ ಏನೆಂದುಕೊಳ್ಳುತ್ತಿದ್ದಿ ಅಕ್ಕ ? ಅವಳು ಜೀವನದಲ್ಲಿ ಹೇಗೆ ಸೆಟಲ್ಲಾಗುತ್ತಾಳೆ"

"ಒಳ್ಳೆಯ ಗೃಹಿಣಿಯಾಗಿ ಸೆಟಲ್ ಆಗುತ್ತಾಳೆ, ಇಂತಹ ಹುಡುಗಿಯರಿಗೆ ಸಾಮಾನ್ಯವಾಗಿ ಬಾಯಲ್ಲಿ ನಾಲಿಗೆಯಿಲ್ಲದ ಗಂಡಂದಿರು ಸಿಗುತ್ತಾರೆ. ಗಂಡನ ಬಗ್ಗೆ ಮಕ್ಕಳ ಬಗ್ಗೆ, ಹೈ ಸೊಸೈಟಿ ಬಗ್ಗೆ ಬಿಟ್ಟು ಬೇರೆ ಮಾತನ್ನೇ

ಆಡುವುದಿಲ್ಲ. ಈಗಿನ ಸ್ನೇಹಿತರಾರಾದರೂ ಆಗ ಕಂಡರೂ ಕಾಣದವರಂತಿರು ತ್ತಾರೆ. "ಇವರು ರಾಜಾರಾವ್ ನನ್ನಣ್ಣನಂತೆ" ಎಂದು ಗಂಡನಿಗೆ ಪರಿಚಯ ಮಾಡಿದರೂ ಆಶ್ಚರ್ಯವಿಲ್ಲ. ಕೆಲಕಾಲದನಂತರ ಅವಳಿಗೆ ಹಳೇ ಬದುಕು ನೆನಪಾಗುತ್ತತೆ. ನರಮಾಂಸದ ರುಚಿ ಕಂಡ ಹುಲಿಯಂತೆ ಮತ್ತೆ ಬಯಕೆ ಮೂಡಿದರೆ, ಮತ್ತೆ ಹೊಸ ಪರಿಚಯಗಳನ್ನು ಮಾಡಿಕೊಳ್ಳಲಾರಂಭಿಸುತ್ತಾಳೆ.

"ಆದರೆ ಎಲ್ಲರೂ ಹಾಗೆ ಅಂತರಾತ್ಮಗಳನ್ನು ನಿದ್ರೆ ಮಾಡಲು ಬಿಟ್ಟು ಸಾಮಾನ್ಯವಾಗಿರುವರಾ ? ನಂಗಂತೂ ಯೋಚಿಸಿದರೇನೇ ಭಯವಾಗುತ್ತೆ."

"ಎಲ್ಲರೂ ರಮಣಿಯಂತಿರುವುದಿಲ್ಲ. ಇದಕ್ಕೊಂದು ಥಿಯರಿ ಅಂತ ಇಲ್ಲ. ಕೆಲವರು ಬದುಕಿನಲ್ಲಿ ಒಂದೇ ಸಲ ಪ್ರೀತಿಸುತ್ತಾರೆ. ಕೆಲವರು ಒಂದೇ ಟೈಮ್‌ಗೆ ಒಬ್ಬರನ್ನು ಮಾತ್ರ ಪ್ರೀತಿಸಬಲ್ಲೆವು ಅನ್ನುತ್ತಾರೆ, ಮತ್ತೆ ಕೆಲವರು ಒಂದೇ ಟೈಮ್‌ನಲ್ಲಿ ನಾಲ್ಕೈದು ಜನರೊಡನೆ ಕಳೆಯಬಲ್ಲರು, ಒಬ್ಬರನ್ನು ಪ್ರೀತಿಸುತ್ತಾ ಮತ್ತೊಬ್ಬರೊಡನೆ ಇರಬಲ್ಲರು."

"ರಮಣಿಯಂತಹವರು ತಮಗಿಷ್ಟ ಬಂದವರೊಡನೆ ತಿರುಗಬಲ್ಲರು, ಆದರೆ ಲಕ್ಷ್ಮಿಯಂತಹವರು ಮಾತ್ರ ಯಾವುದನ್ನೂ ಅನುಭವಿಸುತ್ತಿದ್ದರೂ ನಿರಂತರ ನೋವನ್ನು ಅನುಭವಿಸುತ್ತಿರುತ್ತಾರೆ."

ಆ ಮಾತಿಗೆ ಕಿರಣ್ಮಯಿ ಹೇಳಿದಳು—"ಲಕ್ಷ್ಮಿ ಹಾಗೆ ತಯಾರಾಗಲು ಕಾರಣ ಈ ವಾತಾವರಣ ! ಸಂಜೆಯಾಗುತ್ತಿದ್ದಂತೆ ಹೆಚ್ಚು ಕಡಿಮೆ ಪ್ರತಿ ಹುಡುಗಿಯರೂ ತಮ್ಮ ಬಾಯ್ ಫ್ರೆಂಡ್‌ಗಳ ಜೊತೆ ಹೊರಡುವರು, ಕಿಟಕಿ ತೆರೆದು ಹೊರಗೆ ನೋಡಿದರೆ ತೋಟದ ತುಂಬಾ ಜೊತೆಗಳು ಕಾಣುತ್ತವೆ, ಬಾಯ್ ಫ್ರೆಂಡ್‌ಗಳಿರುವ ಹುಡುಗಿಯರೆಲ್ಲಾ ಸಂತೋಷದಿಂದಿರುವುದು, ಯಾವಾಗ ಸಂಜೆಯಾಗುತ್ತದೋ ಎಂದು ಎದುರು ನೋಡುತ್ತಿರುವುದನ್ನು ಗಮನಿಸುತ್ತಿರುತ್ತಾಳೆ, ತನ್ನ ಏಕಾಂಗಿತನ ಕಳೆದುಕೊಳ್ಳಲು, ಡಿಪ್ರೆಷನ್ ಕಳೆದುಕೊಳ್ಳಲು ಹೊರಪ್ರಪಂಚದೊಳಗೆ ಕಾಲಿರಿಸಿದ್ದಾಳೆ, ಒಮ್ಮೆಗೇ ಕಾಲಿಡು ತ್ತಿದ್ದಂತೆಯೇ ತಿಮಿಂಗಲಗಳು ಕಬಳಿಸಲಾರಂಭಿಸಿದವು, ಸರಿಯಾಗಿ ಇಂತಹುದೇ ಅವಕಾಶಕ್ಕೆ ಕಾಯುತ್ತಿದ್ದ ಗಂಡುಗಳು ತಮ್ಮಲ್ಲಿಯೇ ಒಬ್ಬ ತಂದೆಯನ್ನು, ಅಣ್ಣನನ್ನು, ಪ್ರಿಯಕರನನ್ನು ಕೂಡಾ ತೋರಿಸಬಲ್ಲ ಸಮರ್ಥರು—ಇಂತಹ

ಹುಡುಗಿಯರಿಗೆ ಬಹಳ ಬೇಗ ಸ್ನೇಹಿತರಾಗುತ್ತಾರೆ. ಸ್ವೇಚ್ಛೆಗೆ ಹೊಸ ಅರ್ಥ ತೋರಿಸುತ್ತಾರೆ.

ಬಾಗಿಲ ಬಳಿ ಏನೋ ಶಬ್ದವಾದ್ದರಿಂದ ಕಿರಣ್ಮಯಿ ತಲೆ ತಿರುಗಿಸಿ ನೋಡಿದಳು. ಹುಡುಗಿಯೊಬ್ಬಳು ನಿಂತಿದ್ದಳು ಅಲ್ಲಿ. ಅವಳ ಮುಖ ಬಾಡಿ ಹೋಗಿತ್ತು. ನೀಲು ಹೇಳಿದಳು—"ಬಾ ರಾಧಾ ಇವರು ಕಿರಣ್ಮಯಿ ಅಂತ ಎಂ.ಫಿಲ್ ಮಾಡಲು ಬಂದಿದ್ದಾರೆ. ಸೈಕಾಲಜಿ ಬಗ್ಗೆ ಚೆನ್ನಾಗಿ ಮಾತನಾಡು ತ್ತಾರೆ."

"ಬೇಡ. ನನಗೆ ಅಂತಹ ವಿಷಯಗಳೆಂದರೆ ಭಯ." ಆ ಹುಡುಗಿ ಹೇಳಿದಳು. ಅವಳಿನ್ನೂ ಚಿಕ್ಕ ಹುಡುಗಿಯೇ—ಲಕ್ಷ್ಮಿಯ ವಯಸ್ಸಿನವಳಿರ ಬೇಕು."

"ಭಯವೇಕೆ ? ಎಲ್ಲರಿಗೂ ಸಂಬಂಧಪಟ್ಟ ವಿಷಯವಲ್ಲವೇ ?"

"ಆಗಿರಬಹುದು. ಆದರೆ, ಹಾಗೆ ಎಲ್ಲರ ಮನಸ್ಸುಗಳನ್ನು ವಿಶ್ಲೇಷಿಸಿ ಕೊಂಡು ಹೋಗುತ್ತಿದ್ದರೆ ಅಮ್ಮ, ಅಪ್ಪ, ಅಪ್ತರು ಕೂಡಾ ಭಯಂಕರವಾಗಿ ಕಾಣುತ್ತಾರೆ." ಆ ಹುಡುಗಿಯ ಕಣ್ಣುಗಳಲ್ಲಿ ಯಾವುದೋ ತಿಳಿಯದ ವಿಷಾದ ವನ್ನು ಗಮನಿಸಿದಳು ಕಿರಣ್ಮಯಿ.

"ಈ ಪಲಾಯನವಾದ ಏಕೆ?" ಎಂದು ಕೇಳಲಿಲ್ಲ. ನಗುತ್ತಾ ಹೇಳಿದಳು. "ಆಲೋಚನೆ ಎಂಬುದು ಅಂತರ್ಲೀನ ! ಆಲೋಚನೆಯೆಂಬುದು ಅಗತ್ಯ ವಾದಾಗ ಅದು ಊಹೆ, ಗಾಳಿ ಗೋಪುರವಾಗದೆ 'ಅಂತರ್ಮಥನ' ಆದರೆ ಒಳ್ಳೆಯದು. ನಾವು ಬದುಕುತ್ತಿರುವ ಜೀವನ ವಿಧಾನವೇ ತುಂಬಾ ದೊಡ್ಡದು ಎಂದುಕೊಳ್ಳುವವರ ಬದುಕು ಕೂಪಸ್ಥ ಮಂಡೂಕಗಳು. ನಿರಂತರ ಅಂತರ್ಮ ಥನದಿಂದಲೇ ನಮ್ಮ ಆಲೋಚನೆಗಳನ್ನು ಕನಿಷ್ಟ ಒಂದೊಂದು ಸಲವಾದರೂ ಹೊರಹಾಕಬಹುದು." ಆ ಹುಡುಗಿಯ ಮುಖ ವಿವರ್ಣವಾಯಿತು. ಸರ್ರನೆ ತಿರುಗಿ ಅಲ್ಲಿಂದ ಹೊರಟು ಹೋದಳು. ಉಳಿದ ಮೂವರೂ ಒಬ್ಬರ ಮುಖವನ್ನೊಬ್ಬರು ನೋಡಿಕೊಂಡರು.

"ಯಾರು ಆ ಹುಡುಗಿ ?" ಕಿರಣ್ಮಯಿ ಕೇಳಿದಳು.

"ಅನೂರಾಧ ಅಂತ—ಹೇಳಿದ್ದೆನಲ್ಲಾ ಲಕ್ಷ್ಮಿಗೆ ಒಬ್ಬ ಕ್ಲೋಸ್‌ಫ್ರೆಂಡ್ ಇದ್ದಾಳೆಂತ ಈ ಅನೂರಾಧಾನೆ—"

ಕಿರಣ್ಮಯಿಯ ಶರೀರದಲ್ಲಿ ರಕ್ತಚಲನೆ ಒಮ್ಮೆಗೇ ಹೆಚ್ಚಾಯಿತು.

ಅನೂರಾಧ !

ಯಾರಿಗಾಗಿ ತಾನು ಇಷ್ಟುಕಾಲ ನಿರೀಕ್ಷಿಸುತ್ತಿದ್ದಳೋ ಆ ಅನೂರಾಧ ! ....ತನ್ನಲ್ಲಿಯ ಉದ್ವೇಗ ಹೊರ ಕಾಣದಂತೆ ತುಂಬಾ ಎಚ್ಚರವಹಿಸಿದಳು ಕಿರಣ್ಮಯಿ. ತನ್ನನ್ನು ತಾನು ಪರಿಚಯ ಮಾಡಿಕೊಳ್ಳಲು ಸರಸರನೆ ಹೊರ ನಡೆದಳು. ಅನೂರಾಧ ಎಲ್ಲಿಯೂ ಕಾಣಲಿಲ್ಲ. ರೂಮ್ ನಂಬರ್ ಹುಡುಕಿ ಕೊಂಡು ಹೋದಾಗ—ಅದು ಬೀಗ ಹಾಕಿತ್ತು. ಮತ್ತೆ ತಿರುಗಿ ಬಂದಳು.

"ಏನಕ್ಕಾ ಅಷ್ಟು ಕಂಗಾಲಾಗಿದ್ದಿ ?"

"ಏನಿಲ್ಲ....ಏನಿಲ್ಲ" ಎಂದು ಮಾತು ಬದಲಾಯಿಸಿ "ಲಕ್ಷ್ಮಿ ಅನೂರಾಧ ಒಳ್ಳೆ ಫ್ರೆಂಡ್ಸಾ" ಎಂದು ಕೇಳಿದಳು.

"ಅನೂರಾಧ—ರಮಣಿ ಲೈಕರ್."

"ಲೈಕರ್ರಾ....ಅಂದರೆ ?" ಕಣ್ಣು ಕಿರಿದುಗೊಳಿಸಿ ಕೇಳಿದಳು ಕಿರಣ್ಮಯಿ.

"ಹಾಸ್ಟೆಲ್‌ಗಳಲ್ಲಿ ಸಾಮಾನ್ಯವಾಗಿ ಸೀನಿಯರ್‌ಗಳು ಸುಂದರ ಹುಡುಗಿ ಯರನ್ನು ತಮ್ಮ ಹಿಂದೆ ಕರೆದೊಯ್ಯುವುದಿಲ್ಲ. ಅದು ಅವರ ಕಾಂಪ್ಲೆಕ್ಸ್‌ಗೆ ಭಂಗ ! ಸ್ವಲ್ಪ ಒಡತನದ ಹುಡುಗಿಯರನ್ನು, ನಂಬಿಕಸ್ಥರನ್ನು ಆರಿಸಿಕೊಳ್ಳು ತ್ತಾರೆ. ಜೊತೆಯಲ್ಲೇ ಇರಿಸಿಕೊಳ್ಳುತ್ತಾರೆ. ಈ ಹುಡುಗಿಯರಿಗೆ ಕೂಡಾ ಒಬ್ಬೊಬ್ಬರಿಗೆ ಒಬ್ಬೊಬ್ಬ ಸೀನಿಯರ್ ಎಂದರೆ ಅಭಿಮಾನ. ಇವರನ್ನು 'ಲೈಕರ್ಸ್' ಎನ್ನುತ್ತಾರೆ. ಒಮ್ಮೊಮ್ಮೆ ಈ ಲೈಕರ್ಸ್ ಮತ್ತಷ್ಟು ವಿಪರೀತ ವಾದ ಅಭಿಮಾನ ತೋರಿಸಿ ಮಿತಿ ಮೀರುತ್ತಿರುತ್ತಾರೆ." ಅಂದಳು 'ಉಳಿದಿ ದ್ದನ್ನು ನೀನೇ ಅರ್ಥಮಾಡಿಕೋ' ಎಂಬಂತೆ.

ಕಿರಣ್ಮಯಿ ತುಂಬಾ ಹೊತ್ತು ಸ್ತಬ್ಧಳಾಗಿದ್ದುಬಿಟ್ಟಳು. ಇದು ತನಗೆ ತಿಳಿಯದ ಹೊಸ ವಿಷಯ !

"ಈ ರೂಮ್ಮೇಟ್ಸ್ ನಡುವೆ ಜಗಳ ಆಗುವುದಿಲ್ಲವಾ ?"

"ಯಾಕಾಗೋಲ್ಲಾ ? ನನ್ನ ಕ್ರೀಂ ನೀನು ಉಪಯೋಗಿಸಿದ್ದಿ ಅಂತ ಒಬ್ಬಳು, ನನ್ನ ಪೌಡರ್ ನೀನು ಮುಗಿಸಿದ್ದಿ ಅಂತ ಇನ್ನೊಬ್ಬಳು ಜಗಳ

ಮಾಡುತ್ತಲೇ ಇರುತ್ತಾರೆ. ಮತ್ತೆ ಸಂಜೆಯಾಗುತ್ತಿದ್ದಂತೆಯೇ ಒಬ್ಬರ ಬಟ್ಟೆಗಳನ್ನು ಒಬ್ಬರು ಹಾಕಿಕೊಳ್ಳುತ್ತಾರೆ-ಒಂದಾಗುತ್ತಾರೆ. ಹೀಗಿರುತ್ತದೆ ಇಲ್ಲಿನ ವಿಷಯಗಳು."

ಕಿರಣ್ಮಯಿ ಮತ್ತೊಂದು ವಿಶೇಷವನ್ನು ಕೂಡಾ ಗಮನಿಸಿದಳು. ಅದು ಟೆಲಿಫೋನ್ !! ರೂಪಾಯಿ ನಾಣ್ಯ ಹಾಕಿ ಮಾತನಾಡುವ ಫೋನ್ ಅದು. ಹಾಲಿನಲ್ಲೇ ಇತ್ತು. ಅದರ ಪಕ್ಕದಲ್ಲೇ ಒಂದು ನೋಟೀಸ್ ಅಂಟಿಸಿತ್ತು.

"ಡಿಯರ್ ಫ್ರೆಂಡ್ಸ್.

ಈ ಟೆಲಿಫೋನ್ ರಿಸೀವರ್ ಮುರಿದಿದೆ ಕಷ್ಟಪಟ್ಟು ಅಂಟಿಸಲಾಗಿದೆ. ಉಪಯೋಗಿಸುವಾಗ ಎಚ್ಚರಿಕೆ. ಅದಕ್ಕೇನಾದರೂ ಆದರೆ ಬಾಯ್‌ಫ್ರೆಂಡ್ಸ್‌ಗೆ ತೊಂದರೆಯಾಗುತ್ತದೆ. ಅದಕ್ಕೆ ಇದನ್ನು ಹುಷಾರಾಗಿ ಉಪಯೋಗಿಸಿ."

ಆ ಟೆಲಿಫೋನ್ ಸಾಮಾನ್ಯವಾಗಿ ಬಿಜಿಯಾಗಿಯೇ ಇರುತ್ತಿತ್ತು. ರಾತ್ರಿ ಎಷ್ಟು ಹೊತ್ತಾದರೂ ಅದರ ಸುತ್ತಲೂ ಮೂವರು. ನಾಲ್ವರು ನಿಂತೇ ಇರುತ್ತಿದ್ದರು. ಮಾತನಾಡುವುದು ಒಬ್ಬರೇ ಗಂಟೆಗಟ್ಟಲೆ ಮಾತನಾಡುತ್ತಾರೆ. ಹೆಚ್ಚಾಗಿ ಬಾಯ್‌ಫ್ರೆಂಡ್ಸ್ ಜೊತೆಗೇ. ಪಕ್ಕದಲ್ಲಿರುವವರು ಅವರ ಸಂಭಾಷಣೆ ಕೇಳಿ ಸಂತೋಷ ಪಡುತ್ತಿರುತ್ತಾರೆ. ಜೋಕ್ಸ್ ಮಾಡುತ್ತಿರುತ್ತಾರೆ, ಆ ಕಡೆಯವರನ್ನು ಫೂಲ್ ಮಾಡುತ್ತಿದ್ದೇವೆಂದು ತೃಪ್ತಿಪಡುತ್ತಾರೆ. 'ಪ್ರೀತಿ' ಯೆಂಬ ಪವಿತ್ರವಾದ ಬಂಧ ಹೇಗೆ ಛೀಪಾಗಿ ಬದಲಾಗುತ್ತದೆಯೆಂದು ತಿಳಿಯಲು ಅರ್ಧ ಗಂಟೆ ಇಲ್ಲಿ ನಿಂತರೆ ಸಾಕು.

ಹಲವು ಸಲ ಫೋನ್‌ಗಳು ಬರುತ್ತಿರುತ್ತವೆ. ಮಾಡುವವರಾರೆಂದು ತಿಳಿಯದಿದ್ದರೂ ಕೆಲವು ಹುಡುಗಿಯರು ಅವರೊಡನೆ ಮಾತನಾಡುತ್ತಲೇ ಇರುತ್ತಾರೆ. ಅಂತಹ ಫೋನ್‌ಗಳು ಹೆಚ್ಚಾಗಿ ಮೆನ್ಸ್ ಹಾಸ್ಟೆಲ್‌ನಿಂದ ಬರುತ್ತಿರುತ್ತದಂತೆ. ಲೇಡೀಸ್ ಹಾಸ್ಟೆಲ್ ನಂಬರ್ ತಿಳಿದ ಕೆಲವು ಹುಡುಗರು ಹೀಗೆ ಫೋನ್ ಮಾಡುತ್ತಿರುತ್ತಾರೆ.

ಒಂದು ಸಲ ಹುಡುಗಿಯೊಬ್ಬಳು ರಾತ್ರಿ ತುಂಬಾ ಹೊತ್ತು ತನ್ನ ಬಾಯ್ ಫ್ರೆಂಡ್ ಜೊತೆಗೆ ಮಾತನಾಡುತ್ತಲೇ ಇದ್ದಳಂತೆ. ಬೆಳಗಿನ ಜಾವ

ಅವಳ ಬಂಧುಗಳಾರೋ ಬಂದು ಹೇಳಿದರಂತೆ ಅವಳ ತಾಯಿ ಸೀರಿಯಸ್ ಆಗಿದ್ದಳು ರಾತ್ರಿ ಎಷ್ಟು ಸಲ ಎಸ್‌ಟಿ.ಡಿ. ಮಾಡಿದರೂ ಫೋನ್ ಎಂಗೇಜ್ ಆಗಿತ್ತೆಂದು. ಬೆಳಗ್ಗೆ ಇವಳು ಹೋಗುವ ವೇಳೆಗೆ ತಾಯಿ ಸತ್ತು ಹೋಗಿದ್ದರಂತೆ. ಫೋನ್ ನಂತರ ಇಂತಹ ವಿಶೇಷಗಳು ಸೀರೆಯ ಕತೆಗಳು.

ಹಾಸ್ಟೆಲ್‌ಗೆ ಸೀರೆ ಮಾರಲು ಒಬ್ಬ ಹುಡುಗ ಬರುತ್ತಿರುತ್ತಾನೆ. ಬಾಂಬೆಯಿಂದ, ಅಹಮದಾಬಾದಿನಿಂದ ತಂದಿರುವುದಾಗಿ ಹೇಳುತ್ತಾನೆ ಸೀರೆಗಳನ್ನು. ತುಂಬಾ ಸಾಮಾನ್ಯ ಸೀರೆಗಳಾದರೂ ಹುಡುಗಿಯರು ಮೇಲೆ ಬಿದ್ದು ಕೊಂಡುಕೊಳ್ಳುತ್ತಿರುತ್ತಾರೆ. ಇನ್‌ಸ್ಟಾಲ್‌ಮೆಂಟ್‌ನಲ್ಲಿ ಹಣ ಕಟ್ಟುತ್ತಿರುತ್ತಾರೆ.

ಊಟದ ವಿಷಯದಲ್ಲಿ ತುಂಬಾ ಜನ ಸಫರ್ ಆಗುತ್ತಿರುತ್ತಾರೆ. ಆ ಖಾರದ ರಸವನ್ನು ನೋಡಿ ಬೇಸರಗೊಂಡು, ಊಟ ಮಾಡದಯೇ ಕಣ್ಣೀರು ಹರಿಸುತ್ತಾ ಹೊರಬರುತ್ತಾರೆ. ಹಣವಿರುವ ಹುಡುಗಿಯರು ಆಗಾಗ ಹೋಟೆಲ್ಲಿಗೆ ಹೋಗಿ ತಿಂದು ಬರುತ್ತಾರೆ. ಉಳಿದವರು ಆ ವಯಸ್ಸಿಗೆ ಅಗತ್ಯವಾದ ಆಹಾರವಿಲ್ಲದೆ ಕುಗ್ಗಿ ಹೋಗುತ್ತಿರುತ್ತಾರೆ.

ಕಿರಣ್ಮಯಿ ಮತ್ತೊಂದು ವಿಷಯ ಗಮನಿಸಿದಳು.

ಓದಿನ ವಿಷಯದಲ್ಲಿ ಮಾತ್ರ ತುಂಬಾ ಹುಡುಗಿಯರು ಶ್ರದ್ಧೆ ತೆಗೆದುಕೊಳ್ಳುವುದಿಲ್ಲ. ದಿನಗಳನ್ನು ಹಾಯಾಗಿ ಕಳೆದುಬಿಡುತ್ತಾರೆ. ಪರೀಕ್ಷೆ ಹತ್ತಿರವಾಗುತ್ತಿದ್ದಂತೆ ರಾತ್ರಿ ಹಗಲು ಕಷ್ಟ ಪಡುತ್ತಿರುತ್ತಾರೆ. ಅದರ ಬದಲು ದಿನಕ್ಕೆರಡು ಮೂರು ಗಂಟೆಗಳಕಾಲ ಅಭ್ಯಾಸ ಮಾಡಿದರೆ ಎಷ್ಟು ಸರಿಯಿರತ್ತೆ ಎಂದುಕೊಂಡಳು.

ಕ್ಲಬ್ ರೂಮಿನಲ್ಲಿ ಟಿ.ವಿ. ಇದೆ. ಎಲ್ಲಾ ರೀತಿಯ ಮ್ಯಾಗಜೀನ್‌ಗಳೂ ಬರುತ್ತವೆ. ಚಿತ್ರಹಾರ್, ಚಿತ್ರಮಂಜರಿ, ಸಿನಿಮಾಗಳು. ಸಿನಿಮಾ ಪತ್ರಿಕೆಗಳಿಗೆ ಇರುವ ಡಿಮ್ಯಾಂಡ್ ವೈಜ್ಞಾನಿಕ ವಿಷಯಗಳಿಗಿಲ್ಲ. ಸಂಜೆ ಐದಾಗುತ್ತಿದ್ದಂತೆ ಹಾಸ್ಟೆಲ್‌ನಲ್ಲಿ ಚಟುವಟಿಕೆ ಚುರುಕಾಗಿರುತ್ತೆ. ಎಲ್ಲರೂ ಸುಂದರವಾಗಿ ತಯಾರಾಗುತ್ತಾರೆ, ಸಿನಿಮಾಗಳಿಗೆ, ಸುತ್ತಾಡಲು ಹೊರಡುತ್ತಾರೆ, ಹೊರಗೆ ಕಾಂಪೌಂಡಿನಲ್ಲಿ ಕೆಲವು ಹುಡುಗಿಯರು ಅವರ ಬಾಯ್‌ಫ್ರೆಂಡ್ಸ

ಜೊತೆಗೆ ಹರಟ್ತಿಟುತ್ತಿರುತ್ತಾರೆ. ಮತ್ತೆ ಕೆಲವು ಹುಡುಗಿಯರು ನೆಪ ಮಾತ್ರಕ್ಕೆ ಕೈಯಲ್ಲಿ ಪುಸ್ತಕ ಹಿಡಿದು ಓದುತ್ತಿರುವಂತೆ ನಟಿಸುತ್ತಾ ಆ ಜೋಡಿಗಳನ್ನು ಕದ್ದು ಕದ್ದು ನೋಡುತ್ತಿರುತ್ತಾರೆ.

ಹಾಸ್ಟೆಲ್ ಬಗ್ಗೆ ಇಷ್ಟೆಲ್ಲಾ ವಿವರಗಳನ್ನು ಸಂಗ್ರಹಿಸಿದಳಾದರೂ ಲಕ್ಷ್ಮಿಯ ಬಗ್ಗೆಯಾಗಲೀ, ಅವಳ ಕೊಲೆಯ ಬಗ್ಗೆಯಾಗಲೀ ಯಾವ ಮಾತೂ ಕಿರಣ್ಮಯಿಯ ಕಿವಿಗೆ ಬೀಳಲಿಲ್ಲ. ಅವರೆಲ್ಲಾ ಈ ವಿಷಯವನ್ನು ಮರೆತವ ರಂತೆಯೇ ವರ್ತಿಸುತ್ತಿದ್ದರು. ತನ್ನ ಪತ್ತೆದಾರಿಯನ್ನು ಹೇಗೆ ಮುಂದು ವರೆಸುವುದು ? ಅಂದುಕೊಂಡಳು...

....ಆ ಮಾರನೆ ದಿನ ಅನೂರಾಧ ಅನಿರೀಕ್ಷಿತವಾಗಿ ಸಿಕ್ಕಿದಳು.

ಪ್ರತಿ ದಿನವೂ ಬೆಳಗ್ಗೆ ವಾಕ್ ಮಾಡುವುದು ಕಿರಣ್ಮಯಿಗೆ ಅಭ್ಯಾಸ. ಹಾಸ್ಟೆಲ್‌ನ ಹಿಂಭಾಗದ ತೋಟದಲ್ಲಿ ಸುತ್ತಾಡುತ್ತಿದ್ದಳು. ತಾನಿನ್ನು ಇಲ್ಲಿ ಎಷ್ಟು ಹೊತ್ತು ಇರಬೇಕೋ, ಏನು ಮಾಡಬೇಕೋ ಅವಳಿಗೆ ಅರ್ಥವಾಗಿಲ್ಲ ಯೋಚಿಸುತ್ತಾ ನಡೆಯುತ್ತಿದ್ದ ಕಿರಣ್ಮಯಿಗೆ ಅಲ್ಲಿಗೆಬಂದ ಹುಡುಗಿ ಗಮನಕ್ಕೆ ಬರಲಿಲ್ಲ. ಆಗ ತಾನೇ ಬಿರಿಯುತ್ತಿದ್ದ ಬೆಳಕಿನ ರೇಖೆಗಳಲ್ಲಿ ಅಸ್ಪಷ್ಟವಾಗಿ ಕಂಡಳು ಅವಳು. ಅವಳು ಕೂಡಾ ತನ್ನನ್ನು ಕಂಡು ನಿಂತಿದ್ದನ್ನು ಗಮನಿಸಿ ದಳು ಕಿರಣ್ಮಯಿ.

"ಯಾರದು ?" ಅನುಮಾನದಿಂದ ಆ ಹುಡುಗಿ ಕೇಳಿದಳು.

"ನನ್ನ ಹೆಸರು ಕಿರಣ್ಮಯಿ. ನೀವು ನೆನ್ನೆ ಇಂದೂ ಕೋಣೆಗೆ ಬಂದಿದ್ದಿ ರಲ್ಲಾ ?" ಎಂದು ಕೇಳಿದಳು.

"ಹೌದು. ನನ್ನ ಹೆಸರು ಅನೂರಾಧ ರೂಂ ನಂಬರ್ ಟ್ವೆಂಟಿಟು."

"ನಾನು ಬಂದು ಒಂದು ವಾರವಾಯಿತು."

"ನಾನು ಊರಿಗೆ ಹೋಗಿದ್ದವಳು ನೆನ್ನೆಯಷ್ಟೆ ಬಂದೆ. ಬಿ.ಎಸ್ಸಿ. ಓದ್ತಿದೀನಿ. ನೀವು ?"

"ನಾನು ಎಂ'ಫಿಲ್. ಮಾಡಲು ಬಂದಿದ್ದೇನೆ. ನಿಮಗೆ ಕೂಡಾ ಮಾರ್ನಿಂಗ್ ವಾಕ್ ಅಭ್ಯಾಸವಾ ?" ಕಿರಣ್ಮಯಿ ಕೇಳಿದಳು.

"ಅಭ್ಯಾಸವೇನೂ ಇಲ್ಲ. ರಾತ್ರಿಯೆಲ್ಲಾ ನಿದ್ರೆಯೇ ಬರಲಿಲ್ಲ. ಅದಕ್ಕೆ ಹೀಗೆ ತಿರುಗಾಡಲು ಬಂದೆ." ಅನೂರಾಧ ಹೇಳಿದಳು, ಮುಂಬೆಳಕಿನಲ್ಲಿ ಅವಳ ಕಣ್ಣುಗಳಲ್ಲಿ ಮತ್ತೆ ವಿಷಾದ ಕಾಡಿತು, ಇವಳು ಲಕ್ಷ್ಮಿಯ ಸ್ನೇಹಿತೆ. ಇವಳ ಮೂಲಕ ತುಂಬಾ ವಿಷಯಗಳನ್ನು ತಿಳಿದುಕೊಳ್ಳಬಹುದೆಂಬ ಯೋಚನೆ ಬರುತ್ತಿದ್ದಂತೆಯೇ ಕಿರಣ್ಮಯಿ ಅವಳೊಡನೆ ಆತ್ಮೀಯತೆಯಿಂದ ಮಾತನಾಡ ಲಾರಂಭಿಸಿದಳು. ಆದರೆ ಅನೂರಾಧ ಸರಿಯಾಗಿ ಸಹಕರಿಸಲಿಲ್ಲ. ಬೇಗನೆ ಅಲ್ಲಿಂದ ಹೊರಟು ಹೋದಳು.

ಸರಿಯಾಗಿ ಆಗಲೇ ಟ್ರಾನ್ಸಿಸ್ಟರ್‌ನಲ್ಲಿ ವಾರ್ತೆಗಳು ಆರಂಭವಾದವು. ಭಾರತ, ಪಾಕೀಸ್ತಾನಗಳ ನಡುವೆ ಮೊದಲ ಕ್ರಿಕೆಟ್ ಟೆಸ್ಟ್ ಅಂದೇ ಕಾನ್ಪುರ ದಲ್ಲಿ ಆರಂಭವಾಗಲಿತ್ತು.

ಒಂಬತ್ತು ಗಂಟೆಯಾಗುತ್ತಿದ್ದಂತೆ ಕಿರಣ್ಮಯಿ ರೆಡಿಯಾಗಿ ಕ್ಲಬ್ ರೂಂ ನಲ್ಲಿಯ ಟಿ.ವಿ ಮುಂದೆ ಕುಳಿತಳು. ಕ್ರಿಕೆಟ್ ಅಂದರೆ ಹುಚ್ಚಿರುವ ಹುಡುಗಿಯರು ಬರುತ್ತಾರೆ. ಸಹಜವಾಗಿಯೇ ರಾಯಣ್ಣನನ್ನು ಸ್ಕ್ರೀನ್ ಮೇಲೆ ನೋಡುತ್ತಿದ್ದಂತೆಯೇ ಲಕ್ಷ್ಮಿಯ ವಿಷಯ ಬರುತ್ತದೆ. ಅವರೇನು ಮಾತನಾಡಿಕೊಳ್ಳುತ್ತಾರೋ ಎಂದು ಹಿಂಬದಿಯ ಒಂದು ಮೂಲೆಯಲ್ಲಿ ಕುಳಿತಳು ಕಿರಣ್ಮಯಿ.

ಮ್ಯಾಚ್ ಪ್ರಾರಂಭವಾಯಿತು. ಭಾರತ ಫೀಲ್ಡಿಂಗ್ ಮಾಡುತ್ತಿತ್ತು. ಹದಿನಾಲ್ಕನೆ ಓವರನ್ನು ರಾಯಣ್ಣ ಬೌಲ್ ಮಾಡಲು ಬಂದ. ಕ್ಲೋಸಪ್ ನಲ್ಲಿ ಅವನನ್ನು ನೋಡುತ್ತಿದ್ದರೆ ಒಂದೆಡೆ ಸಂತೋಷ, ಮತ್ತೊಂದೆಡೆ ಹೇಳಿ ಕೊಳ್ಳಲಾರದಂತಹ ಉದ್ವೇಗ. ಇದೊಂದು ಹೊಸ ಅನುಭವ, ಕ್ರಿಕೆಟ್ ಬಗ್ಗೆ ಅವಳಿಗೆ ಅಷ್ಟೊಂದು ತಿಳಿದಿಲ್ಲ. ಆದರೆ ರಾಯಣ್ಣನ ಪ್ರತಿಯೊಂದು ಚಲನೆ ಯನ್ನೂ ಕಂಡು ಸಂತೋಷಪಡುತ್ತಿದ್ದಳು. ಆಟದಲ್ಲಿ ಎಷ್ಟೇ ತಲ್ಲೀನನಾದರೂ ಯಾವ ಕ್ಷಣದಲ್ಲಿ ಪೋಲೀಸರಿಂದ ಕರೆ ಬರುತ್ತದೋ ಎಂದು ಅವನು ಚಿಂತಿಸು ತ್ತಲೇ ಇರುತ್ತಾನೆ. ಹತ್ತಿರವಿದ್ದು ಧೈರ್ಯ ಹೇಳುವ ಅವಕಾಶವಿಲ್ಲದೇ ಹೋಯಿತು.

ಆಶ್ಚರ್ಯವೆಂಬಂತೆ ಮಧ್ಯಾಹ್ನದವರೆಗೂ ಮ್ಯಾಚ್ ನೋಡಲು ಯಾರೂ ಬರಲಿಲ್ಲ. ಲಂಚ್ ನಂತರ ಕೂಡಾ ಒಬ್ಬಳೇ ಕುಳಿತು ಟಿ. ವಿ. ನೋಡುತ್ತಿದ್ದಳು ಕಿರಣ್ಮಯಿ. ಯಾರದೋ ಹೆಜ್ಜೆ ಸಪ್ಪಳವಾದಂತಾಗಿ ತಲೆ ತಿರುಗಿಸಿ ನೋಡಿದಳು ಅನೂರಾಧ. ಕಿರಣ್ಮಯಿ ಸ್ನೇಹಪೂರ್ವಕವಾಗಿ ನಕ್ಕಳು. ಅನೂರಾಧಳ ನಗುವಿನಲ್ಲಿ ಜೀವವಿರಲಿಲ್ಲ. ಅವಳ ಕಣ್ಣು ಟಿ. ವಿ. ಸ್ಕ್ರೀನಿನ ಮೇಲೆ, ರಾಯಣ್ಣನ ಮೇಲೆ ಕೇಂದ್ರೀಕರಿಸಿತ್ತು. ಆದರೆ ಅವಳ ಕಣ್ಣುಗಳಲ್ಲಿ ಕೋಪವಿರಲಿಲ್ಲ ನೋವಿತ್ತು, ಅಸಹ್ಯವಿರಲಿಲ್ಲ. ವೇದನೆ ತುಂಬಿದ ಕಣ್ಣು ಸೇಡು ಸ್ವಲ್ಪವೂ ಇರಲಿಲ್ಲ, ಅಸಹಾಯಕತೆಯಿತ್ತು.

"ಸ್ಕೋರ್ ನೂರಹತ್ತು, ಎರಡು ವಿಕೆಟ್ ಹೋಗಿದೆ. ಕಪಿಲ್ ಒಂದು, ರಾಯಣ್ಣ ಒಂದು ವಿಕೆಟ್ ಪಡೆದಿದ್ದಾರೆ" ಎಂದಳು ಕಿರಣ್ಮಯಿ ಮಾತನ್ನಾರಂಭಿಸುತ್ತಿರುವಂತೆ.

"ಐ. ಸಿ." ಅಂದಳು ಅನೂರಾಧ. ಅವಳೊಡನೆ ಹೇಗೆ ಮಾತನ್ನು ಹೇಗೆ ಮುಂದುವರೆಸಬೇಕೋ ಕಿರಣ್ಮಯಿಗೆ ಅರ್ಥವಾಗಲಿಲ್ಲ.

"ನಿಮಗೆ ಕ್ರಿಕೆಟ್ ಅಂದರೆ ತುಂಬಾ ಇಷ್ಟಾನಾ ?" ಕೇಳಿದಳು.

"ಇಷ್ಟವೇ" ಅಂದಳು. ಕಿರಣ್ಮಯಿ ಮತ್ತೇನೋ ಕೇಳುವಷ್ಟರಲ್ಲಿ ಕೂಡಲೇ ಅಲ್ಲಿಂದೆದ್ದು ಮಾತನಾಡದ ಹೊರಟುಹೋದಳು ಅನೂರಾಧ. ಅವಳಿಗೆ ರಾಯಣ್ಣ ತುಂಬಾ ಪರಿಚಯವೆಂದು ಅರ್ಥವಾಗುತ್ತಿತ್ತು. ಅವಳೊಡನೆ ಮಾತನಾಡಬೇಕೆಂದು ತುಂಬಾ ಕಾತರದಿಂದಿದ್ದಳು ಕಿರಣ್ಮಯಿ. ಅರ್ಧ ಗಂಟೆಯಾದರೂ ಅವಳು ಹಿಂತಿರುಗಿ ಬರದಿದ್ದುದರಿಂದ ಕಿರಣ್ಮಯಿ ಎದ್ದು ಟಿ.ವಿ. ಆಫ್ ಮಾಡಿ ಇಪ್ಪತ್ತೆರಡನೇ ರೂಮಿಗೆ ನಡೆದಳು.

ಅನೂರಾಧ ದಿಂಬಿನೆಡೆಯಲ್ಲಿ ಮುಖವಿರಿಸಿ ಮಲಗಿಕೊಂಡಿದ್ದಳು. ಕಿರಣ್ಮಯಿ ರೂಮಿನೊಳಗೆ ಬಂದಳು. ಅವಳು ಊಹಿಸಿದಂತೆ ಅನೂರಾಧ ಅಳುತ್ತಿರಲಿಲ್ಲ ನಿದ್ರಿಸುತ್ತಿದ್ದಳು. ಪಕ್ಕದಲ್ಲೇ ಟೇಬಲ್ ಮೇಲೆ ಕಾಂಪೋಸ್ ಟ್ಯಾಬ್ಲೆಟ್‌ಗಳಿದ್ದವು, ಎರಡು ತೆಗೆದುಕೊಂಡಿರುವಂತೆ ಪಕ್ಕದಲ್ಲಿರುವ ಕಾಗದ ತಿಳಿಸುತ್ತಿತ್ತು. ಕಿರಣ್ಮಯಿ ನಿರಾಸೆಯಿಂದ ತನ್ನ ರೂಮಿಗೆ ಹೊರಟುಬಿಟ್ಟಳು. ಆ ರಾತ್ರಿ ಅವಳು ನಿದ್ರಿಸಲಿಲ್ಲ.

ಅನೂರಾಧಳನ್ನು ಅವಳ 'ಮೌನಂ'ನಿಂದ ಹೊರಗೆಳೆಯುವುದು ಹೇಗೆ ಎಂದು ಅವಳಿಗೆ ಅರ್ಥವಾಗಲಿಲ್ಲ. ಹಾಸ್ಟೆಲ್‌ನಲ್ಲಿ ಕೂಡಾ ಉಳಿದ ಹುಡುಗಿಯರು ಈ ಕೊಲೆಯ ಬಗ್ಗೆ ಮಾತನಾಡಿಕೊಳ್ಳುವುದನ್ನು ಸಂಪೂರ್ಣವಾಗಿ ಬಿಟ್ಟಿದ್ದಾರೆ, ಕಿರಣ್ಮಯಿಗೆ ಅವರ ಮನಸತ್ವ ಸಂಪೂರ್ಣ ಅರ್ಥವಾಗಿದೆ. ಎಷ್ಟು ಬೇಗ ಎಗ್‌ಜೈಟ್ ಆಗುತ್ತಾರೋ ಅಷ್ಟೇ ಬೇಗ ಮರೆತುಬಿಡುತ್ತಾರೆ ಕೂಡಾ.

ಅವರನ್ನು ಮತ್ತೆ ಕದಲಿಸಬೇಕೆಂದರೆ... ಏನಾದರೂ ಮಾಡಬೇಕು, ಏನು ಮಾಡಬೇಕು ? ಆ ರಾತ್ರಿ ಕಳೆದು ಬೆಳಗಾಗುತ್ತಿದ್ದಂತೆ ಅವಳಿಗೆ ಏನು ಮಾಡಬೇಕೆಂದು ಹೊಳೆಯಿತು. ಬೆಳಗ್ಗೆ ಎದ್ದವಳೇ ಅವಳು ಲಾಯರ್ ಚಿರಂಜೀವಿಯನ್ನು ಭೇಟಿ ಮಾಡಿ ಮಾತನಾಡಿದಳು.

ಸಾಮಾನ್ಯವಾಗಿ ಭಾನುವಾರಗಳು ಹಾಸ್ಟೆಲ್‌ನಲ್ಲಿ ಒಂಭತ್ತು ಗಂಟೆಯ ವರೆಗೂ ಪ್ರಾರಂಭವಾಗುವುದಿಲ್ಲ. ಆದರೆ ಇಂದು ಏಳು ಗಂಟೆಗೇ ಗಲಾಟೆ, ಗಲಿಬಿಲಿ ಕೇಳುತ್ತಿದೆ. ಮುಖ್ಯವಾಗಿ ವಾರ್ಡನ್ ಸ್ವರ ಗೇಟಿನ ಬಳಿ ಕೇಳುತ್ತಿದೆ. ಕಿರಣ್ಮಯಿ, ಅನೂರಾಧ ಮಾರ್ನಿಂಗ್ ವಾಕ್‌ನಿಂದ ಹಿಂತಿರುಗಿ ಬರುತ್ತಿದ್ದಾರೆ.

"ಭಾನುವಾರ ಇಷ್ಟು ಬೆಳಗ್ಗೆಯೇ ಗಂಡ, ಮಕ್ಕಳನ್ನು ಬಿಟ್ಟು ಓಡಿದ್ದಾಳೆ ಅಂದ್ರೆ ಏನೋ ಅನಾಹುತ ನಡೆದಿದೆ, ಏನೋ ನೋಡೋಣ ಬನ್ನಿ" ಅನೂರಾಧ ಹೇಳಿದಳು. ಹಾಸ್ಟೆಲೆಲ್ಲಾ ಶುಭ್ರವಾಗಿ ಕ್ಲೀನ್ ಮಾಡುತ್ತಿದ್ದರು. ವಾರ್ಡನ್ ಆಫೀಸ್ ರೂಮ್ ತೆರೆದಿತ್ತು, ಎಲ್ಲಾ ನೀಟಾಗಿ ಜೋಡಿಸಿದ್ದರು. ವಾರ್ಡನ್ ಮಾತ್ರ ಅಲ್ಲಿರಲಿಲ್ಲ. ಮುಸುರೆ ಪಾತ್ರೆಗಳನ್ನು ಹೊರಗೆ ಹಾಕಿದವರ ಮೇಲೆ ರೇಗಾಡುತ್ತಿದ್ದರು.

"ಏನೋ ನಮ್ಮ ಅದೃಷ್ಟ ಇವತ್ತು ಪ್ರಧಾನ ಮಂತ್ರಿಯವರೇನಾದರೂ ಬರ್ತಿದಾರಾ ನಮ್ಮ ಹಾಸ್ಟೆಲಿಗೆ ?" ಎದುರಾದ ಹುಡುಗಿಯನ್ನು ಕೇಳಿದಳು ಅನೂರಾಧ.

"ಅದೇನೂ ಅಲ್ಲ. ಲಕ್ಷ್ಮಿಯ ಕೊಲೆ ವಿಷಯದಲ್ಲಿ ಎನ್‌ಕ್ವೈಯರಿ ಮಾಡೋಕೆ ಲಾಯರ್ ಯಾರೋ ಬರ್ತಾರಂತೆ," ಆ ಹುಡುಗಿ ಹೇಳಿದಳು. ಅನೂರಾಧಳ ಮುಖ ಬಾಡಿಹೋಯಿತು.

"ಕಿರಣ್ಮಯಿ ಇವತ್ತು ನಮ್ಮ ಪಿಕ್ಚರ್ ಪ್ರೋಗ್ರಾಂನ ಕ್ಯಾನ್ಸಲ್ ಮಾಡೋಣ. ನಾನು ನಮ್ಮ ನೆಂಟರ ಮನೆಗೆ ಹೋಗಬೇಕು ಮರೆತಿದ್ದೆ" ಅಂದಳು.

"ಹಾಗೆ ಮಾಡು ನಿನ್ನಿಷ್ಟ" ಕಿರಣ್ಮಯಿ ಹೇಳಿದಳು. ಅನೂರಾಧಳನ್ನು ಹೊರಗೆ ಹೋಗದಂತೆ ತಡೆಯುವುದು ಹೇಗೆಂದೇ ಅವಳಿಗರ್ಥವಾಗಲಿಲ್ಲ. ಜೋರು ಮಾಡಿದರೆ ಹಠ ಹಿಡಿಯುವ ಹುಡುಗಿ ಇವಳು. ಕಿರಣ್ಮಯಿ ಏನು ಮಾಡಬೇಕೆಂದು ಯೋಚಿಸುತ್ತಿದ್ದಂತೆಯೇ ರಮಣಿ ರೂಮಿನೊಳಗೆ ನುಗ್ಗಿ ಬಂದಳು ಬಿರುಗಾಳಿಯಂತೆ "ನೀವೊಂದು ಸಲ ಹೊರಗೆ ಹೋಗ್ತೀರಾ ? ನಾನು ರಾಧ ಜೊತೆ ಮಾತಾಡ್ಬೇಕು" ಕಿರಣ್ಮಯಿಗೆ ಹೇಳಿದಳು. ಅನೂರಾಧಳ ಮುಖ ಬಾಡಿಹೋಯಿತು. ಧೈರ್ಯ ತಂದುಕೊಂಡು ಜೋರಾಗಿ. "ಬೇಡ ಕಿರಣ್ಮಯಿ ನೀವಿಲ್ಲೇ ಇರಿ !" ಎಂದಳು ಕೋಪದಿಂದ.

ಕಿರಣ್ಮಯಿ ಷಾಕ್ ತಿಂದವಳಂತೆ ಇಬ್ಬರ ಮುಖವನ್ನೂ ನೋಡ ತೊಡಗಿದಳು. ರಮಣಿ ಮತ್ತಷ್ಟು ಕೋಪದಿಂದ ಏನೋ ಹೇಳಲು ಹೋಗಿ. ತಾನೇ ಸಮಾಧಾನ ತಂದುಕೊಂಡವಳಂತೆ, "ಆ ಲಾಯರ್ ಬಂದಾಗ ನೀನು ನನ್ನ ರೂಮಿನಲ್ಲೇ ಇರಬೇಕು. ನನ್ನೆದುರಿನಲ್ಲೇ ಅವರಿಗೆ ನೀನು ಉತ್ತರಿಸ ಬೇಕು" ಅಂದಳು.

"ನಾನು ನಿನ್ನ ರೂಮಿಗೆ ಸತ್ತರೂ ಬರುವುದಿಲ್ಲ. ಅವರಿಗೇನು ಉತ್ತರಿಸ ಬೇಕೆಂದು ನೀನು ನನಗೆ ಹೇಳಬೇಕಾಗಿಲ್ಲ" ಅನೂರಾಧ ಕೂಗಿದಳು.

"ಹುಚ್ಚುಚ್ಚಾಗಿ ಆಡಬೇಡ. ನೀನು ಅವರಿಗೆ ಏನು ಹೇಳಿದ್ರೂ ನಂಗೆ ತಿಳಿದೇ ತಿಳಿಯುತ್ತೆ. ಅನವಶ್ಯಕವಾಗಿ ಮಾತನಾಡಿದೆಯೆಂದರೆ ಮೊದಲು ನಿನ್ನ ವಿಷಯಗಳೇ ಹೊರಬರುವಂತೆ ಮಾಡುತ್ತೇನೆ" ಬೆದರಿಕೆ ಹಾಕುವವಳಂತೆ ಹೇಳಿ ಹೊರಟುಹೋದಳು ರಮಣಿ.

ಅನೂರಾಧಳ ಮುಖ ಕೋಪದಿಂದ ಕೆಂಪಾಯಿತು. ಏನೋ ಹೇಳಲು ಹೋದಿ ಸುಮ್ಮನಾದಳು. ಬಾಗಿಲ ಬಳಿ ವಾರ್ಡನ್ ನಿಂತಿದ್ದರು.

"ರಾಧ ಅಂದರೆ ನೀನೇನಾ ? ನೋಡಮ್ಮಾ! ಇಷ್ಟು ದಿನ ನಿಮ್ಮ ದಾರಿಗೆ ನಾನು ಅಡ್ಡ ಬರಲಿಲ್ಲ. ಇನ್ನು ಮುಂದೂ ಬರುವುದಿಲ್ಲ! ಇಂತಹ ಸಮಯದಲ್ಲೇ ನೀವೆಲ್ಲಾ ಕೋ-ಆಪರೇಟ್ ಮಾಡಬೇಕು. ಇಲ್ಲದಿದ್ದರೆ ನಾವೆಲ್ಲಾ ಇಕ್ಕಟ್ಟಿಗೆ ಸಿಕ್ಕಿಕೊಳ್ಳುತ್ತೇವೆ. ಸಾಧ್ಯವಾದಷ್ಟೂ ನಮಗೆ ಯಾವ ಅಪವಾದವೂ ಬರದಂತೆ ಉತ್ತರ ಕೊಡಿ" ಅಂದಳು.

"ಮೇಡಮ್ ನಾನು ಹೊರಗೆ ಹೋಗಬೇಕು. ನನಗೆ ಅರ್ಜೆಂಟ್ ಕೆಲಸವಿದೆ" ಅಂದಳು.

"ಹಾಗೆ ಹೋಗಲು ಸಾಧ್ಯವಿಲ್ಲ ಅವರು ಬಂದು ಹೋಗಲಿ. ಅದರಲ್ಲೂ ನಿನ್ನ ಹೆಸರನ್ನು ಕೇಳಿ ನೀನು ಇರಲೇಬೇಕೆಂದು ಹೇಳಿದ್ದಾರಂತೆ." ಕಠಿಣವಾಗಿ ಹೇಳಿದರು ವಾರ್ಡನ್. ಅನೂರಾಧಳ ಮುಖ ಮ್ಲಾನವಾಯಿತು.

ಕಿರಣ್ಮಯಿ ಇದನ್ನೆಲ್ಲಾ ಪ್ರೇಕ್ಷಕಳಂತೆ ನೋಡುತ್ತಿದ್ದಳು. ತಾನು ಬತ್ತಿ ಹಚ್ಚಿದ್ದಾಳೆ. ಇನ್ನು ಬಾಂಬ್ ಸಿಡಿಯಬೇಕು. ಅವಳು ಕಾಯುತ್ತಿದ್ದಾಳೆ. ಈಗಲ್ಲ ಇನ್ನೂ ಹಗ್ಗ ಬಲವಾಗಿ ಬಿಗಿದುಕೊಳ್ಳಬೇಕು....

ಅವಳು ಅನೂರಾಧ ಬಳಿಗೆ ಬಂದಳು.

"ನಮ್ಮ ಪ್ರೋಗ್ರಾಂ ಕ್ಯಾನ್ಸಲ್ ಆಯಿತಲ್ಲ ನಾನು ಹೋಗ್ತೀನಿ ರಾಧ" ಅಂದಳು.

ಅನೂರಾಧ ತನ್ನೆರಡು ಕೈಗಳಿಂದ ಮುಖ ಮುಚ್ಚಿಕೊಂಡು ಅಳಲು ಆರಂಭಿಸಿದಳು. ಕಿರಣ್ಮಯಿ ಅವಳ ಬಳಿಗೆ ಹೋಗಿ ಅವಳ ಭುಜದ ಮೇಲೆ ಕೈಹಾಕಿ ಹತ್ತಿರ ಎಳೆದುಕೊಂಡಳು. ಏಕಾಂಗಿತನ ರಾಧಳಿಗೀಗ ಭಯತಂದಿತ್ತು. ಆ ಭಯವನ್ನು ದೂರ ಮಾಡಿಕೊಳ್ಳಲು ಈಗ ತನ್ನೊಡನೆ ಸ್ನೇಹ ಮಾಡಿಕೊಳ್ಳುತ್ತಾಳೆ. ಆ ವಿಷಯವನ್ನು ಕಿರಣ್ಮಯಿ ಮುಂಚೆಯೇ ಗಮನಿಸಿದ್ದಳು.

"ನಿನ್ನ ಕಷ್ಟವೇನೆಂದು ನನಗ ಗೊತ್ತಿಲ್ಲ ರಾಧ. ನಿನ್ನ ಮನಸ್ಸು ಬಿಚ್ಚಿ ಹೇಳೆಂದೂ ಕೇಳಲಾರೆ. 'ನಿನ್ನ ಸಂತೋಷವನ್ನು ಹತ್ತು ಜನಕ್ಕೆ ಹಂಚು. ನೋವನ್ನು ಮಾತ್ರ ನಿನ್ನಲ್ಲೇ ಅಡಗಿಸಿಟ್ಟುಕೋ' ಅನ್ನುವ ಸೂತ್ರವನ್ನು

ನಾನೂ ಪಾಲಿಸುತ್ತೇನೆ. ಆದರೆ ನನ್ನ ದೃಷ್ಟಿಯಲ್ಲಿ ಸ್ನೇಹವೆಂಬುದು ಸಂತೋಷಕ್ಕಿಂತಲೂ ದುಃಖವನ್ನು ಹಂಚಿಕೊಂಡಾಗಲೇ ಸಾರ್ಥಕವೆನಿಸುತ್ತದೆ. ಯಾರೊಡನೆಯೂ ಹಂಚಿಕೊಳ್ಳಲಾರದ ರಹಸ್ಯ ನಿನ್ನಲ್ಲಿರಬಹುದು. ಆದರೆ ಅದನ್ನು ಹೊರಗೆಡುಹುದರಿಂದ ನಿನಗೆ ಉಪಶಮನ ಸಿಗುತ್ತದೆಂದರೆ ನನಗೆ ಹೇಳು. ಅದು ನನ್ನಲ್ಲೇ ಇರುತ್ತದೆ ಎಂದು ನಂಬು" ಅನೂರಾಧ ಸ್ವಲ್ಪ ಚೇತರಿಸಿಕೊಂಡಳು. ನಿಮ್ಮೊಡನೆ ತುಂಬಾ ಮಾತನಾಡಬೇಕೆಂದಿದೆ ಕಿರಣ್ಮಯಿ ಆದರೆ ಈಗ ಬೇಡ. ಈ ಗಲಾಟೆ ಕಳೆಯಲ್ಲಿ" ಅಂದಳು,

"ಹಾಗೇ ಆಗಲಿ. ನಿನ್ನಿಷ್ಟ ! ಇದರ ಬಗ್ಗೆ ಮತ್ತೆ ನಾನು ಕೇಳುವುದಿಲ್ಲ. ನಿನಗೆ ಯಾವಾಗ ಹೇಳಬೇಕೆನ್ನಿಸಿದರೆ ಆಗ ನನ್ನ ಬಳಿ ಬಾ." ಎಂದು ಹೇಳಿ ತನ್ನ ರೂಮಿಗೆ ಬಂದಳು ಕಿರಣ್ಮಯಿ. ಅಲ್ಲೂ ಅದೇ ಡಿಸ್ಕಷನ್ ನಡೆಯುತಿತ್ತು

"ಇದು ಇವತ್ತಿಗೂ ಮುಗಿಯೋದಿಲ್ಲ ಇಂದು ಆ ಕೇಸೇನೋ ತೀರ್ಮಾನ ಆಗೋವರೆಗೂ ನಮಗೆ ತಲೆ ತಿನ್ನೋದು ತಪ್ಪೋಲ್ಲ" ನೀಲು ಹೇಳುತ್ತಿದ್ದಳು,

"ಏನು ವಿಷಯ ? ಒಂದು ಸಣ್ಣ ಎನ್‌ಕ್ವಯರಿಗೋಸ್ಕರ ಇಷ್ಟೊಂದು ಗಡಿಬಿಡಿ ಏಕೆ ? ನಿಮಗೆ ಕೇಸಿಗೆ ಸಂಬಂಧವಿಲ್ಲದಿದ್ದರೂ ಹೊರಗೆ ಹೋಗುವ ಹಕ್ಕಿಲ್ಲವಾ ?" ಕಿರಣ್ಮಯಿ ಕೇಳಿದಳು, ಲಾಯರ್ ಚಿರಂಜೀವಿ ಇವತ್ತು ಇಲ್ಲಿಗೆ ಬರಲು ಕಾರಣ ತಾನೇ ಎಂದು ತಿಳಿದರೆ ಹೇಗಿರುತ್ತದೆಂದು ಊಹಿಸಿಕೊಳ್ಳುತ್ತ "ಆ ಕೊಲೆಯ ವಿಷಯಕ್ಕಿಂತಲೂ ಹೆಚ್ಚಾಗಿ ಈ ಹಾಸ್ಟೆಲ್ ವಿಷಯಗಳು ಎಲ್ಲಿ ಹೊರ ಬೀಳುತ್ತವೋ ಎಂದು ಅಧಿಕಾರಿಗಳ ಭಯ, ನಡೆದಷ್ಟು ದಿನ ಯಾವ ತಲೆನೋವೂ ಇಲ್ಲದೆ ದಿನ ಕಳೆದರು ಈಗ ಬರುವುದು ಲಾಯರ್, ಸ್ವಲ್ಪ ಬಾಯಿ ಜಾರಿದರೂ ಹಿಡಿದು ಬಿಡುತ್ತಾರೆ, ಹಾಸ್ಟೆಲಿನ ಬಗ್ಗೆ ಈ ಮುಂಚೆಯೇ ಆತನಿಗೆ ಸ್ವಲ್ಪ ತಿಳಿದಿರುತ್ತದೆ. ಅದು ಮತ್ತಷ್ಟು ತಿಳಿದರೆ ತೊಂದರೆ ಎಂಬ ಭಯ,"

"ಅದರೆ ಹಾಗಾದರೆ ತಾನೆ ಹಾಸ್ಟೆಲ್ ಸರಿಹೋಗುವುದು ?" ಕಿರಣ್ಮಯಿ ಕೇಳಿದಳು.

"ಏನು ಸರಿಹೋಗುತ್ತೋ, ಹಾಸ್ಟೆಲಿನಲ್ಲಿರುವ ಕೆಲವರಿಗೆ ಬಿಟ್ಟು ಬೇರೆ ಯಾರಿಗೂ ಈ ಪದ್ಧತಿ ಸರಿಹೋಗುವುದು ಇಷ್ಟವಿಲ್ಲ. ಯಾವ ಪೇಪರ್

ನಲ್ಲೇನಾದರೂ ಈ ವಿಷಯಗಳು ಬಂದರೆ ಅವರ ತಂದೆ ತಾಯಂದಿರು ಬಂದು ಮನೆಗೆ ವಾಪಸ್ಸು ಕರೆದೊಯ್ಯುತ್ತಾರೆಂದು ಅವರ ಹೆದರಿಕೆ."

"ಲಕ್ಷ್ಮಿಯ ಕೊಲೆ ನಡೆದಾಗ ಕೂಡಾ ಈ ವಿಷಯಗಳು ಪೇಪರ್‌ಗಳಲ್ಲಿ ಬರಲಿಲ್ಲವಾ ?" ಯಾರಿಗೂ ತಿಳಿಯದ ಹೇಗಿದೆ ?" ಕಿರಣ್ಮಯಿ ಕೆದಕಿದಳು.

"ಈ ಹಾಸ್ಟೆಲ್ ಎಂದು. ಇಲ್ಲಿನ ಪರಿಸ್ಥಿತಿ ಇಷ್ಟು ಘೋರವಾಗಿದೆ ಯೆಂದು ಯಾವ ಪೇಪರ್‌ಗಳಲ್ಲಿಯೂ ಬರಲಿಲ್ಲ. ಕೊಲೆಗಾರನ ಬಗ್ಗೆ ವಿಷಯ ಬಂತಾಗಲೀ, ಘಟನೆ ನಡೆದ ಪ್ರದೇಶಕ್ಕಾಗಲೀ, ವಾತಾವರಣಕ್ಕಾಗಲೀ ಯಾರೂ ಅಷ್ಟು ಪ್ರಾಮುಖ್ಯತೆ ನೀಡಲಿಲ್ಲ. ಈ ವಿಷಯದಲ್ಲಿ ಯಾರೋ ಮಂತ್ರಿ ಮೂಗು ಹಾಕಿದ್ದಾರೆಂದು ಹೇಳುತ್ತಾರೆ. ನಿಜ ಏನೆಂದು ಯಾರಿಗೂ ಗೊತ್ತಿಲ್ಲ" ಇಂದು ಹೇಳಿದಳು.

ರಾಯಣ್ಣ ಪಬ್ಲಿಕ್ ಫಿಗರ್. 'ಅವನು ಕೊಲೆ ಮಾಡಿದ್ದಾನೆ, ಕೊಲೆ ಗಾರ' ಎಂಬ ಸುದ್ದಿಗೆ ಕೊಟ್ಟ ಪ್ರಾಮುಖ್ಯತೆ, ಕೊಲೆ ನಡೆಯಲು ಕಾರಣ, ಇತರ ಪರಿಸ್ಥಿತಿಗಳಿಗೆ ಪತ್ರಿಕೆಗಳು ಗಮನ ಕೊಡಲಿಲ್ಲ. ಸತ್ತು ಹೋದ ಯುವತಿಯ ಬಗ್ಗೆ ಅನುಕಂಪವೇ ಹೊರತು ಅವಳ ನಡತೆ, ಗುಣಗಳ ಬಗ್ಗೆ ಪ್ರಸ್ತಾಪಿಸಲೇ ಇಲ್ಲ. ಒಬ್ಬ ಪಬ್ಲಿಕ್ ಫಿಗರ್ ಮೇಲೆ ಕ್ಯಾಷ್ ಮಾಡಿ ಕೊಳ್ಳುವುದು ಸುಲಭವೆಂದು ಪತ್ರಿಕೆಗಳವರಿಗೆ ಗೊತ್ತು.

"ರೇಖ ಕೊಲೆಗಾರನನ್ನು ಖುದ್ದು ನೋಡಿದ್ದಾಳೆಂದು ಹೇಳುವರಲ್ಲಾ. ಆ ಹುಡುಗಿಯಿಂದಲೇ ಹೇಳಿಸಿದರೆ ಸರಿಹೋಗುತ್ತದೆ, ಎಲ್ಲರನ್ನೂ ಪ್ರಶ್ನಿಸು ವುದೇತಕ್ಕೆ ?" ಕಿರಣ್ಮಯಿ ಏನೂ ತಿಳಿಯದವಳಂತೆ ಕೇಳಿದಳು.

ಇಂದೂ ಏನೋ ಹೇಳಲು ಹೋದಳು.

ಅಷ್ಟರಲ್ಲಿ ಲಾಯರ್ ಬಂದರೆಂದು ತಿಳಿಯುತ್ತಿದ್ದಂತೆಯೇ ಅವರ ಮಾತಿಗೆ ಬ್ರೇಕ್ ಬಿತ್ತು.

ಅವತ್ತು ಹಾಸ್ಟೆಲಿನಲ್ಲಿ ಎಂದೂ ಇಲ್ಲದಂತಹ ಶಿಸ್ತು ಕಾಣುತ್ತಿತ್ತು. ಏನೂ ತಿಳಿಯದವರಾದರೆ ತಮ್ಮ ಮಕ್ಕಳನ್ನು ಎಷ್ಟೇ ಕಷ್ಟವಾದರೂ ಅದೇ ಹಾಸ್ಟೆಲಿನಲ್ಲಿ ಬಿಡಬೇಕೆನ್ನಿಸುವಷ್ಟು ಶಿಸ್ತು ! ವಾರ್ಡನ್ ಜೊತೆಗ ಎಲ್ಲರೂ ಡೀಸೆಂಟಾಗಿ ವರ್ತಿಸಿದರು. ಹಾಸ್ಟೆಲ್ ಹುಡುಗಿಯರೆಲ್ಲಾ ತುಂಬಾ ಒಳ್ಳೆಯ

ವರೆಂದೂ, ಲಕ್ಷ್ಮಿಯಂತಹ ಒಂದಿಬ್ಬರು ಹುಡುಗಿಯರಿಂದ ಎಲ್ಲರಿಗೂ ಕೆಟ್ಟ ಹೆಸರು ಬಂತೆಂದು ಎಲ್ಲರೂ ಮಾತನಾಡಿದರು. ರಾಯಣ್ಣನಂತಹವರು ಹೆಣ್ಣು ಮಕ್ಕಳನ್ನು ಹಿಂಸೆ ಮಾಡುವ ಕೀಚಕರೆಂಬಂತೆ ಮಾತನಾಡಿದರು. ಸುಮಾರು ಎರಡೂವರೆ ಗಂಟೆಗಳ ಕಾಲ ಚಿರಂಜೀವಿ ಎಲ್ಲಾ ರೀತಿಯಿಂದಲೂ, ಎಲ್ಲರನ್ನು ಪ್ರಶ್ನಿಸಿದ. ರಮಣಿ, ಅನೂರಾಧ, ರೇಖರೊಡನೆ ಬಿಡಿ ಬಿಡಿಯಾಗಿ ಮಾತ ನಾಡಿದ. ಹೊರಡುವ ಮುಂಚೆ ಹಾಲಿನಲ್ಲಿ ನಿಂತು ಎಲ್ಲರನ್ನೂ ಉದ್ದೇಶಿಸಿ ಮಾತನಾಡಿದ.

"ಈ ಹಾಸ್ಟೆಲಿನಲ್ಲಿ ಏನು ನಡೆಯುತ್ತಿದೆಯೆಂದು ನನಗೆ ಗೊತ್ತು. ನಾನು ಹೋದ ಮೇಲೆ ಕೂಡಾ ಏನು ನಡೆಯುತ್ತದೆಂದು ನನಗೆ ಗೊತ್ತು. ನೀವೇನೂ ಹೇಳಲಿಲ್ಲವೆಂದು ನಿಮ್ಮನ್ನು ನಿಂದಿಸುವುದಿಲ್ಲ. ಇಲ್ಲಿನ ಪರಿಸ್ಥಿತಿಯ ಅರಿವು ನನಗಿದೆ, ಆದರೆ ನಿಮ್ಮಲ್ಲಿ ಯಾರಿಗಾದರೂ, ಏನಾದರೂ ಹೇಳ ಬೇಕೆಂದಿದ್ದರೆ ನನ್ನ ಆಫೀಸಿಗೆ ಬಂದು ಹೇಳಬಹುದು. ಅವರ ಹೆಸರನ್ನಾಗಲಿ ಅವರು ತಿಳಿಸಿದ ರಹಸ್ಯವನ್ನಾಗಲೀ ನಾನು ಹೊರಗೆಡಹದಂತೆ ನಾನು ಕೇಸನ್ನು ಮುಂದುವರೆಸುತ್ತೇನೆ." ಎಂದು ಅಲ್ಲಿಂದ ಹೊರಟು ಹೋದ. ಅಲ್ಲಿ ಸೂಜಿ ಬಿದ್ದರೂ ಕೇಳಿಸುವಷ್ಟು ನಿಶ್ಯಬ್ದ ಆವರಿಸಿತು.

o o o

ಸರಿಯಾಗಿ ಹತ್ತು ನಿಮಿಷಗಳ ನಂತರ ಕಿರಣ್ಮಯಿ ಇಪ್ಪತ್ತೆರಡನೆ ರೂಮನ್ನು ಪ್ರವೇಶಿಸಿದಳು.

ಅವಳು ಊಹಿಸಿದಂತೆಯೇ ಅನೂರಾಧ ತುಂಬಾ ಅಪ್‌ಸೆಟ್ ಆಗಿದ್ದಳು ಹಾಗೆ ಮಾಡುವಂತೆ ಚಿರಂಜೀವಿಗೆ ಇವಳೇ ಸೂಚಿಸಿದ್ದು. ಕಬ್ಬಿಣ ಬಗ್ಗ ಬೇಕಾದರೆ ಚೆನ್ನಾಗಿ ಕಾಯಿಸಬೇಕು. ಚಿರಂಜೀವಿ ಅನೂರಾಧಳಿಗೆ ಲಕ್ಷ್ಮಿಯ ಬಗ್ಗೆ ವಿವಿಧ ರೀತಿಯ ಪ್ರಶ್ನೆಗಳನ್ನು ಹಾಕಿ ಸತಾಯಿಸಿದ್ದ. ಹೀಗೆ ಪ್ರಶ್ನೆ ಗಳನ್ನು ಹಾಕುವುದರಿಂದ ಯಾರೂ ನಿಜ ಹೇಳುವುದಿಲ್ಲವೆಂದು ಅವನಿಗೂ ಗೊತ್ತು, ಅವಳಿಗೂ ಗೊತ್ತು.

ಆದರೆ ನ್ಯಾಯ ಶಾಸ್ತ್ರ ಮಾಡದ ಕೆಲಸವನ್ನು ಒಮ್ಮೊಮ್ಮೆ ಮನಶಾಸ್ತ್ರ ಮಾಡುತ್ತದೆ. ಈಗವಳು ಮಾಡುತ್ತಿದ್ದುದೂ ಅದನ್ನೇ, ಆ ಸಮಯದಲ್ಲಿ

ಅನುರಾಧಾಳಿಗೆ ತನ್ನ ನೋವನ್ನು ಹಂಚಿಕೊಳ್ಳುವುದಕ್ಕೆ ಜೊತೆ ಬೇಕಾಗಿತ್ತು. ಮನಸ್ಸು ಬಿಚ್ಚಿ ಮಾತಾಡಲು ಸ್ನೇಹಿತೆಯೊಬ್ಬಳು ಬೇಕಾಗಿತ್ತು.

ಇದೆಲ್ಲಾ ಕಿರಣ್ಮಯಿಗೆ ಗೊತ್ತು.

ಕಿರಣ್ಮಯಿ ಊಹಿಸಿದಂತೆಯೇ ರಾಧ ನಿದ್ರಿಸುತ್ತಿರಲಿಲ್ಲ. ಮಂಚದ ಮೇಲೆ ಮಲಗಿ ಕಣ್ಣು ಬಿಟ್ಟುಕೊಂಡು ಶೂನ್ಯವನ್ನೇ ದಿಟ್ಟಿಸುತ್ತಿದ್ದಳು. ಸಪ್ಪಳಕ್ಕೆ ತಲೆ ತಿರುಗಿಸಿ ನೋಡಿದಳು. ಅವಳ ಕಣ್ತುಂಬಾ ನೀರು—

"ರಾಧಾ ಅಳುತ್ತಿದ್ದೀಯಾ ? ಏನು ನಡೆಯಿತು ? " ಕಿರಣ್ಮಯಿ ಕಾಳಜಿ ನಟಿಸುತ್ತಾ ಕೇಳಿದಳು. ರಾಧಾ ಬಿಕ್ಕಿ ಬಿಕ್ಕಿ ಅಳಲಾರಂಭಿಸಿದಳು.

"ಲಕ್ಷ್ಮಿ ನೆನಪಿಗೆ ಬಂದಳಾ ? ನಿನಗವಳು ಒಳ್ಳೆಯ ಫ್ರೆಂಡ್ಸ್ ಅಂತ ಕಾಣುತ್ತೆ. ಸಮಾಧಾನ ಮಾಡಿಕೋ. ನಡೆದು ಹೋದದ್ದಕ್ಕೆ ಚಿಂತಿಸಿ ಲಾಭವಿಲ್ಲ." ಸಮಾಧಾನ ಪಡಿಸುತ್ತಾ ಹೇಳಿದಳು ಕಿರಣ್ಮಯಿ.

"ಹಾಗಲ್ಲ ಕಿರಣ್ಮಯಿ. ಇವರೆಲ್ಲಾ ಸೇರಿ ಕೊನೆಗೆ ಲಕ್ಷ್ಮಿಯನ್ನು ಎಷ್ಟು ಕೆಟ್ಟದಾಗಿ ಚಿತ್ರಿಸುತ್ತಿದ್ದಾರೆ ? ಅದ ನಿಜವಲ್ಲ. ಎಲ್ಲಾ ಸುಳ್ಳು. ಅವರಿಗೆ ತಿಳಿಯದಂತೆಯೇ ಒಬ್ಬ ದಾರಿ ತಪ್ಪಿದ ಹೆಣ್ಣಾಗಿ ವರ್ಣಿಸಿದ್ದಾರೆ. ಸತ್ತು ಹೋದವರ ಬಗ್ಗೆ ನಿಜವಿದ್ದರೂ ಕೂಡಾ ಕೆಟ್ಟದಾಗಿ ಮಾತನಾಡಕೂಡದೆಂದು ಹೇಳುತ್ತಾರೆ. ಇವರು ಇಲ್ಲದ ಕಥೆಗಳನ್ನೆಲ್ಲಾ ಕಟ್ಟುತ್ತಿದ್ದಾರೆ. ಆ ಲಾಯರ್ ಕೂಡಾ ತನ್ನ ಕ್ಲಯಿಂಟನ್ನು ರಕ್ಷಿಸಿಕೊಳ್ಳಲು ಲಕ್ಷ್ಮಿಯನ್ನು ಕಾಲ್‌ಗರ್ಲಾಗಿ ಚಿತ್ರಿಸುತ್ತಿದ್ದಾನೆ. ಲಕ್ಷ್ಮಿ ಎಷ್ಟು ಒಳ್ಳೆಯವಳೆಂದು ನನಗೆ ಗೊತ್ತು." ಅಳುತ್ತಲೇ ಹೇಳಿದಳು.

"ಹಾಗಾದರೆ ಈ ವಿಷಯವನ್ನು ಎಲ್ಲರೆದುರಿಗೂ ಜೋರಾಗಿ ಹೇಳ ಬೇಕಾಗಿತ್ತು."

"ಹೇಗೆ ಹೇಳಲಿ ? ಪೋಸ್ಟ್‌ಮಾರ್ಟಂ ರಿಪೋರ್ಟ್‌ನಲ್ಲಿ ಅವಳು ಕನ್ಯೆ ಯಲ್ಲವೆಂದು ತಿಳಿಯಿತಂತೆ. ಆ ಪಾಯಿಂಟ್ ಹಿಡಿದುಕೊಂಡು ನಾನಾ ಮಾತು ಗಳನ್ನಾಡುತ್ತಿದ್ದಾರೆ. ಅದಕ್ಕೆ ನಾನೇನು ಸಮಾಧಾನ ಹೇಳಲಿ ?" ಅವಳಿಗೆ ಮತ್ತೆ ದುಃಖ ಒತ್ತರಿಸಿಕೊಂಡು ಬಂತು. ಕಿರಣ್ಮಯಿ ಅವಳ ಪಕ್ಕದಲ್ಲೇ ಕುಳಿತು ಅವಳ ತಲೆ ಸವರುತ್ತಾ ಹೇಳಿದಳು.

"ನಿನ್ನ ಮನಸ್ಸಿನಲ್ಲಿ ಎಂತಹ ಅಗ್ನಿಪರ್ವತಗಳು ಸಿಡಿಯುತ್ತಿವೆಯೆಂದು ನಾನು ಅರ್ಥಮಾಡಿಕೊಳ್ಳಬಲ್ಲೆ ರಾಧಾ. ಆದರೆ ಅದನ್ನು ನಿನ್ನಲ್ಲೇ ಅಡಗಿಸಿಕೊಂಡರೆ ಅದು ನಿನಗೆ ನೋವು ನೀಡುತ್ತಲೇ ಇರುತ್ತದೆ. ನನಗೆ ಹೇಳೆಂದು ನಾನು ಕೇಳುವುದಿಲ್ಲ. ಆದರೆ ತುಂಬಾ ಆತ್ಮೀಯತೆಯಿರುವವರಿಗೆ ತಿಳಿಸಿದರೆ ಇಷ್ಟು ವೇದನೆ ಇರುವುದಿಲ್ಲ. ಅದುವರೆವಿಗೂ ನಿನಗೆ ಸಮಾಧಾನ ವಿರುವುದಿಲ್ಲ."

ಅನುರಾಧಾ ತುಂಬಾ ಹೊತ್ತು ಮಾತನಾಡಲಿಲ್ಲ. ಮತ್ತೆ ತನ್ನ 'ವೆಲ್'ನೊಳಗೆ ಸೇರಿಕೊಂಡು ಬಿಟ್ಟಳಾ ? ಈಗವಳು ಹೊರಬರದಿದ್ದರೆ ಮತ್ತೆ ತನಗಿಂತಹ ಅವಕಾಶ ಸಿಗುವುದಿಲ್ಲ.

"ನಿಮಗೆ ಲಕ್ಷ್ಮಿಯ ಬಗ್ಗೆ ತಿಳಿದುಕೊಳ್ಳಬೇಕೆಂದಿದೆಯಾ ಕಿರಣ್ಮಯಿ ?" ಹಠಾತ್ತನೆ ಕೇಳಿದಳು ಅನುರಾಧಾ.

"ಇದೆ ಎಷ್ಟು ಸಲ ಅದರ ಪ್ರಸ್ತಾಪ ಮಾಡಿದರೂ ನೀನು ಮಾತು ಬದಲಾಯಿಸುತ್ತಿದ್ದೆ. ಅದಕ್ಕೇ ಕೆದಕಿ, ಕೆದಕಿ ಕೇಳಲಿಲ್ಲ. ಅವಳ ಬದುಕು ಹೀಗೇಕಾಯಿತೆಂದು ತಿಳಿಯಲು ನನಗೂ ಕುತೂಹಲ ಅಷ್ಟೆ."

ಅನುರಾಧ ಮಂಚದ ಮೇಲಿನಿಂದ ಎದ್ದು ಸೂಟ್‌ಕೇಸ್ ತೆರೆದು ಎರಡು ಪುಸ್ತಕಗಳನ್ನು ಹೊರತೆಗೆದು, ಕೂಡಲೇ ಸೂಟ್‌ಕೇಸ್ ಬೀಗ ಹಾಕಿದಳು. ಕಿರಣ್ಮಯಿ ಟೆನ್ಷನ್‌ನಿಂದ ನೋಡುತ್ತಿದ್ದಳು.

ಇವು ಲಕ್ಷ್ಮಿಯ ಡೈರಿಗಳು. ಇವನ್ನು ಓದಿದರೆ ಅವಳೆಂತಹವಳು, ಅವಳ ಮಾನಸಿಕ ಪರಿಸ್ಥಿತಿ ಏನೆಂದು ತಿಳಿಯುತ್ತದೆ. ಅನಂತರ ನನಗೆ ತಿಳಿದದ್ದನ್ನು ನಾನು ಹೇಳುತ್ತೇನೆ. ಆದರೆ ಒಂದು ಮಾತು. ಲಕ್ಷ್ಮಿಯ ಡೈರಿಗಳು ನನ್ನ ಬಳಿಯಿರುವ ವಿಷಯ ಯಾರಿಗೂ ತಿಳಿಯಕೂಡದು. ನಾನೇಕೆ ಹೀಗೆ ಹೇಳುತ್ತಿದ್ದೀನೆಂದು ನಿಮಗೆ ಇದನ್ನು ಓದಿದ ನಂತರ ತಿಳಿಯುತ್ತದೆ."

"ಹಾಗೇ ಆಗಲಿ. ಇವನ್ನು ನಿನ್ನ ಬಳಿಯಲ್ಲೇ ಏಕೆ ಇರಿಸಿಕೊಂಡಿದ್ದೀ? ಅವರ ತಂದೆ–ತಾಯಿಯರಿಗೆ ಏಕೆ ಕೊಡಲಿಲ್ಲ ?"

"ಹೇಳಿದೆನಲ್ಲಾ, ಅದನ್ನು ಓದಿದ ನಂತರ ನಿಮಗೇ ತಿಳಿಯುತ್ತದೆಂದು!

ಸ್ನೇಹಿತರಿಗೆ ಹೇಳಿಕೊಳ್ಳುವಂತಹ ವಿಷಯಗಳು-ತಂದೆ-ತಾಯಿಯರಿಗೂ, ಅಕ್ಕ-ತಂಗಿಯರಿಗೂ ಕೂಡಾ ಹೇಳಿಕೊಳ್ಳಲಾರದಂತಹವು—ಪ್ರತಿಯೊಬ್ಬರಿಗೂ ಇರುತ್ತವೆ. ಇದನ್ನು ಓದಿ ಅವರು ನೊಂದುಕೊಳ್ಳುತ್ತಾರೆಂದು ತಿಳಿದಾಗ, ತಿಳಿದೂ ಅವರಿಗೇಕೆ ನೋವು ಕೊಡಬೇಕು? ಅದಕ್ಕೇ ಕೊಡಲಿಲ್ಲ. ಕೊಡಬೇಕೆಂದು ಕೂಡಾ ಅನ್ನಿಸಲಿಲ್ಲ. ನಿಮಗೆ ಲಕ್ಷ್ಮಿಯ ಬದುಕಿನೊಡನೆ ಯಾವ ರೀತಿಯ ಸಂಬಂಧವೂ ಇಲ್ಲದಿರುವುದರಿಂದ ನೀವು ಓದಿದರೂ ಲಕ್ಷ್ಮಿಯ ಆತ್ಮ ಶಾಂತಿಗೆ ಭಂಗ ಬರದು."

ಕಿರಣ್ಮಯಿ ತಡಬಡಿಸಿದಳು. ತಾನಾರೆಂದು ತಿಳಿದ ಮೇಲೆ ರಾಧ ನನ್ನನ್ನು ಕ್ಷಮಿಸುತ್ತಾಳಾ? 'ಇದು ನಂಬಿಕೆ ದ್ರೋಹವಾಗದಾ?' ಎಂದು ಕೊಂಡಳು. ಮತ್ತೆ ಇನ್ನೊಂದು ಆಲೋಚನೆ. ತಾನು ಮಾಡುತ್ತಿರುವುದು ಒಳ್ಳೆಯ ಕೆಲಸವೇ? ಒಂದು ಪ್ರಾಣವನ್ನು ಕಾಪಾಡಲು ತಾನು ನಿಜ ತಿಳಿದು ಕೊಳ್ಳುತ್ತಿದ್ದಾಳೆ? ಅಷ್ಟೇ. ಈ ಡೈರಿಯಿಂದ ರಾಯಣ್ಣ ಅಪರಾಧಿಯೆಂದು ತಿಳಿದರೆ ತಾನು ಕೂಡಾ ಅವನನ್ನು ಕ್ಷಮಿಸುವುದಿಲ್ಲ. ಇನ್ನೇಕೆ ಆಲೋಚನೆ? ಡೈರಿಗಳನ್ನು ಪಕ್ಕಕ್ಕಿಟ್ಟು, "ಅನುರಾಧಾ, ನಾನು ಕೇಳಿದ ಒಂದು ಪ್ರಶ್ನೆಗೆ ಉತ್ತರ ಹೇಳುತ್ತೀಯಾ?" ಅಂದಳು.

"ಏನು? ಕೇಳಿ...." ರಾಧ ಹೇಳಿದಳು.

"ರಾಯಣ್ಣ ನಿನಗೆ ಚೆನ್ನಾಗಿ ಗೊತ್ತಾ? ಆತನ ಬಗ್ಗೆ ನಿನ್ನ ಅಭಿಪ್ರಾಯ ವೇನು?"

"ನಂಗೆ ಆತ ಚೆನ್ನಾಗಿ ಗೊತ್ತು. ಎಲ್ಲರೂ ಸೇರಿಕೊಂಡು ಡಿನ್ನರಿಗೆಂದು ಆಗಾಗ ಹೊರಗೆ ಹೋಗುತ್ತಿದ್ದೆವು. ಆತ ನನಗಿಂತಲೂ, ಲಕ್ಷ್ಮಿಯೊಡನೆ ಹೆಚ್ಚು ಸಲಿಗೆಯಿಂದಿರುತ್ತಿದ್ದ. ನನಗೆ ತಿಳಿದ ಮಟ್ಟಿಗೆ ಅವರಿಬ್ಬರ ನಡುವೆ ಬೇರೆ ಯಾವ ರೀತಿಯ ಅನೈತಿಕ ಸಂಬಂಧವೂ ಇರಲಿಲ್ಲ. ಆದರೆ ಆ ಕೊನೆಯ ದಿನಗಳಲ್ಲಿ ಏನು ನಡೆಯಿತೆಂದು ನನಗೆ ಗೊತ್ತಿಲ್ಲ. ಲಕ್ಷ್ಮಿಯ ಕೊನೆಯ ಡೈರಿ ಸಿಕ್ಕಿದ್ದರೆ ಎಲ್ಲಾ ಹೊರಬೀಳುತ್ತಿತ್ತು. ಆದರೆ ಅದು ನನಗೆ ಸಿಗಲಿಲ್ಲ. ಏನಾಯ್ತೋ ಗೊತ್ತಾಗ್ತಿಲ್ಲ."

"ಅವರ ತಂದೆ ತೆಗೆದುಕೊಂಡು ಹೋಗಿದ್ದಾರೇನೋ?"

"ಇಲ್ಲ. ನನ್ನ ಎದುರಿಗೇ ಅವರು ಆ ಡೈರಿಗಾಗಿ ಹುಡುಕಿದರು, ಯಾವುದೂ ಕಾಣಲಿಲ್ಲ. ಇವಾದರೆ ಲಕ್ಷ್ಮಿ ನನ್ನ ಬಳಿಯೇ ಇಟ್ಟುಕೊಂಡಿರಲು ಕೊಟ್ಟಿದ್ದಳು. ಆದರೆ ಆ ಕೊನೆಯದು ಎಲ್ಲಿಟ್ಟಿದ್ದಾಳೋ ಏನೋ? ಬಹುಶಃ ಕೊಲೆಗಾರನ ಕೈಗೆ ಸಿಕ್ಕಿರಬಹುದು."

"ರಾಧಳ ವಸ್ತುಗಳೆಲ್ಲ ಎಲ್ಲಿ? ಅವರು ತೆಗೆದುಕೊಂಡು ಹೋಗಿದ್ದಾರಾ?"

"ಇಲ್ಲ. ಎಲ್ಲಾ ಆ ರೂಮಿನಲ್ಲೇ ಇದೆ. ಯಾವುದೂ ತಗೊಂಡು ಹೋಗೋದಿಲ್ಲ. ಯಾರಿಗಾದರೂ ಕೊಟ್ಟುಬಿಡಿ ಅಂತ ವಾರ್ಡನ್‌ಗೆ ಹೇಳಿದ್ದರು. ಅದನ್ನು ನೋಡುತ್ತಿದ್ದರೆ ಅವರಿಗೂ ಬೇಸರ ತಾನೆ? ಆ ರೂಮಿನಲ್ಲಿರಲು ಯಾರೂ ಒಪ್ಪಿಕೊಳ್ಳಲಿಲ್ಲ. ಹಾಗಾಗಿ ಅಲ್ಲೇ ಇದ್ದುಬಿಟ್ಟವೆ."

ಕಿರಣ್ಮಯಿಗೆ ಸ್ವಲ್ಪ ರಿಲೀಫ್ ಅನ್ನಿಸಿತು. ಅಲ್ಲೇ ಕುಳಿತುಕೊಂಡು ಲಕ್ಷ್ಮಿಯ ಮೊದಲನೆ ಡೈರಿ ತೆಗೆದಳು.

ಲಕ್ಷ್ಮಿಗೆ ಡೈರಿ ಬರೆಯುವ ಅಭ್ಯಾಸ ಚಿಕ್ಕಂದಿನಿಂದಲೂ ಇಲ್ಲ. ಹತ್ತನೆ ತರಗತಿ ಓದುವಾಗ ಪ್ರಾರಂಭಿಸಿದ್ದಳು. ಅದಕ್ಕೇ ಮೊದಲ ಡೈರಿಯಲ್ಲಿ ಅದುವರೆವಿಗೂ ನಡೆದ ತನ್ನ ಬದುಕನ್ನು, ನೆನಪಿರುವ ವಿಷಯವನ್ನು ಬರೆದುಕೊಂಡಿದ್ದಳು.

## ಅಧ್ಯಾಯ ಆರು

ಇವತ್ತು ಜನವರಿ ಹದಿನೈದು, ನನ್ನ ಹುಟ್ಟಿದ ದಿನ, ಹದಿನೈದು ವರ್ಷ ಆಯಿತು. ಇದುವರೆವಿಗೂ ಡೈರಿ ಬರೆಯಬೇಕೆಂಬ ಯೋಚನೆ ಎಂದೂ ಬಂದಿರಲಿಲ್ಲ. ಈ ನಡುವೆ ಸತ್ಯವತಿ ಟೀಚರ್ ಯಾವುದೋ ಸಂದರ್ಭದಲ್ಲಿ ಡೈರಿಯ ಬಗ್ಗೆ ಪ್ರಸ್ತಾಪಿಸಿದ್ದರು.

''ಡೈರಿ ಬರೆಯುವುದು ತುಂಬಾ ಒಳ್ಳೆಯ ಅಭ್ಯಾಸ. ಈಗಲ್ಲ.... ಕೆಲವು ವರ್ಷಗಳ ನಂತರ ಗತಜೀವನದ ಪುಟಗಳನ್ನು ತಿರುವಿ ಹಾಕುತ್ತಿದ್ದರೆ ಉಂಟಾಗುವ ಸಂತೋಷ ಅಷ್ಟಿಷ್ಟಲ್ಲ. ಡೈರಿ ಅಂತರಾತ್ಮಕ್ಕೆ ಪ್ರತಿಬಿಂಬ ಆಗಬೇಕು. ನಮ್ಮಲ್ಲುಂಟಾಗುವ ಬದಲಾವಣೆಗಳನ್ನು ಮನಸ್ಸಿನಲ್ಲಿ ನಿಕ್ಷಿಪ್ತ ಮಾಡಿಕೊಳ್ಳುವುದಕ್ಕಿಂತಲೂ ಕಾಗದದ ಮೇಲೆ ದಾಖಲಿಸುವುದು ಒಳ್ಳೆಯ ಅಭ್ಯಾಸ. ಆತ್ಮ ಪರಿಶೀಲನೆಗೂ, ಬಾಳನ್ನು ತಿದ್ದಿಕೊಳ್ಳಲೂ ಅದು ಉಪಯೋಗವಾಗುತ್ತದೆ. ಇವತ್ತಿಗೆ, ನಾಳೆಗೆ ನಮ್ಮಲ್ಲಿ ಬರುತ್ತಿರುವ ಬದಲಾವಣೆಗೆ ಅಳಿಸಿ ಹೋಗದ ಸಾಕ್ಷಿ ಈ ಡೈರಿ." ಟೀಚರ್ ಹೇಳಿದರು.

"ಎಲ್ಲರೂ ಮನಸ್ಸಿನಲ್ಲಿರುವ ಭಾವನೆಗಳನ್ನು ಮುಜುಗರವಿಲ್ಲದೇ ಬರೆಯುತ್ತಾರಾ ಟೀಚರ್ ? ಮನೆಯಲ್ಲಿರುವವರು ಓದುತ್ತಾರೆ, ಅಣಕಿಸುತ್ತಾರೆ." ಶ್ಯಾಮಲಾ ಕೇಳಿದ್ದಳು.

"ನಾವು ಹೇಳುವುದನ್ನು ಕೇಳುತ್ತಾರಾಗಲೀ, ಅಪ್ಪಿತಪ್ಪಿಯೂ ಯಾರೂ ಡೈರಿ ಓದುವುದಿಲ್ಲ. ಅದು ಸಂಸ್ಕಾರವಲ್ಲ. ಈ ವಿಷಯವನ್ನು ಮನೆಯಲ್ಲಿ ಕೂಡಾ ಎಲ್ಲರೂ ತಿಳಿದುಕೊಳ್ಳಬೇಕು. ಮನಸ್ಸಿನ ಪ್ರತಿಬಿಂಬ ಡೈರಿ. ಪರ್ಮಿಷನ್ ಇಲ್ಲದೆ ಅದನ್ನು ತಿಳಿದುಕೊಳ್ಳಬೇಕೆಂಬುದು ತಪ್ಪು." ಟೀಚರ್ ಹೇಳಿದರು.

ನಮ್ಮ ಮನೆಯವರು ಸಂಸ್ಕಾರದ ಜನರಲ್ಲ. ಅದು ನನ್ನ ಅದೃಷ್ಟ. ಇಲ್ಲದಿದ್ದರೆ ಅವರಿಂದ ಮುಚ್ಚಿಡುವ ವಿಷಯಗಳೂ ಕೂಡಾ ನನ್ನಲ್ಲೇನೂ ಇಲ್ಲ. ಇವತ್ತು ಬೆಳಿಗ್ಗೆ ಯಾರೋ ತಟ್ಟಿ ಎಬ್ಬಿಸುತ್ತಿದ್ದರೆ ಎಚ್ಚರವಾಯಿತು. ಕಣ್ತೆರೆದರೆ ಎದುರಿಗೆ ಜಿಮ್ಮಿ. ಅದರ ಕತ್ತಿನಲ್ಲಿ 'ಹ್ಯಾಪಿ ಬರ್ತ್‌ಡೇ ಟು ಯೂ' ಎಂಬ ಬೋರ್ಡ್ ನೇತಾಡುತ್ತಿತ್ತು. ಷೇಕ್‌ಹ್ಯಾಂಡ್ ಕೊಡು ಎಂಬಂತೆ ಕೈ ಆಡಿಸುತ್ತದೆ. ಎಷ್ಟು ಸಂತೋಷ ಅನ್ನಿಸಿತು! ಭರತ್‌ಗೆ ಇಂತಹ ಐಡಿಯಾಗಳು ಬರುತ್ತಿರುತ್ತವೆ. ಅವನಿಗಾಗಿ ಹುಡುಕುವಷ್ಟರಲ್ಲಿ ಮಂಚದ ಕೆಳಗಿನಿಂದ ಎದ್ದು ಬಂದು ನನ್ನ ಮೇಲೆ ಬಿದ್ದವನೇ, "ಹ್ಯಾಪಿ ಬರ್ತ್‌ಡೇ ಅಕ್ಕಾ" ಎಂದ.

ಉತ್ಸಾಹದಿಂದ ಎದ್ದು ವಾಷ್‌ಬೇಸಿನ್ ಬಳಿಗೆ ನಡೆದೆ, ಪಕ್ಕದಲ್ಲೇ

ಸ್ಟೂಲಿನ ಮೇಲೆ ನನಗಿಷ್ಟವಾದ ಗುಲಾಬಿ ಹೂಗಳ ಗುಚ್ಛವನ್ನಿರಿಸಿದ್ದರು. ಯಾರೋ ಪಕ್ಕದಲ್ಲೇ ನನ್ನ ಬ್ರಷ್ ಮೇಲೆ ಪೇಸ್ಟ್ ರೆಡಿಯಾಗಿತ್ತು. ಇದು ನಮ್ಮ 'ಸೌಂದರ್ಯ'ಳ ಕೆಲಸವೇ. ಬ್ರಷ್ ತೆಗೆದುಕೊಂಡು ಬಾಯಿಯಲ್ಲಿಟ್ಟುಕೊಳ್ಳುತ್ತಾ ನಿಂತುಬಿಟ್ಟೆ. ಕನ್ನಡಿಯ ಮೇಲೆ ಪೇಸ್ಟ್‌ನಿಂದ 'ಹ್ಯಾಪಿ ಬರ್ತ್‌ಡೇ' ಎಂದು ಬರೆದಿತ್ತು. ಒದ್ದೆ ಬಟ್ಟೆಯಿಂದ ಸರಸರನೆ ಒರೆಸಿ ಹಾಕಿದೆ. ಅಪ್ಪ ನೋಡಿದರೆ ಸಿಟ್ಟಾಗುತ್ತಾರೆ. ನನ್ನ ಹುಟ್ಟು ಹಬ್ಬದ ದಿನ ಬೈಗಳನ್ನು ತಿಂದರೆ ಅದು ಎಲ್ಲರಿಗೂ ಬೇಸರವೇ. ಅವರು ಹಾಗೆ ಬೈಯ್ಯುವವರಲ್ಲದಿದ್ದರೂ ನೊಂದುಕೊಳ್ಳುತ್ತಾರೇನೋ !

"ಅಕ್ಕಾ, ಅಕ್ಕಾ ಒಂದು ಸಲ ಹೊರಗೆ ಬಂದು ನೋಡು." ಭರತ್ ಓಡಿ ಬಂದು ಹೇಳಿದ. ಬ್ರಷನ್ನು ಬಾಯಲ್ಲೇ ಕಚ್ಚಿಕೊಂಡು ಹೊರಬಂದು ನೋಡಿದೆ. ಅಕ್ಕ ಬಣ್ಣ ಬಣ್ಣದ ರಂಗೋಲಿ ಹಾಕಿದ್ದಳು. ಸುತ್ತಲೂ 'ಹ್ಯಾಪಿ ಬರ್ತ್‌ಡೇ ಟು ಡಿಯರ್ ಸಿಸ್ಟರ್' ಎಂದು ಸುಂದರವಾಗಿ ಬರೆದಿದ್ದರು. ಅದು ಅಕ್ಷರಗಳಂತೆ ಕಾಣುತ್ತಿರಲಿಲ್ಲ. ಹೂಮಾಲೆಯಂತೆ ಕಾಣುತ್ತಿತ್ತು. 'ಥ್ಯಾಂಕ್ಸ್ ಅಕ್ಕಾ !' ಅಂದೆ. ಸಣ್ಣಗೆ ನಕ್ಕಳು. ಅಕ್ಕ ನಕ್ಕರೆ ಎಷ್ಟು ಚೆನ್ನಾಗಿರುತ್ತಾಳೆ. ವಸಂತ ಬಿರಿದಂತಿರುತ್ತಿತ್ತು. ಅವಳ ಹೆಸರು ಕೂಡಾ ವಸಂತಲಕ್ಷ್ಮಿ.

ಎಲ್ಲರೂ ಎಷ್ಟು ಚೆನ್ನಾಗಿ ಶುಭಾಕಾಂಕ್ಷೆಗಳನ್ನು ತಿಳಿಸಿದರು ! ಈ ಮನೆಯಲ್ಲಿ ನಾನು ಮನಸ್ಸಿನಲ್ಲಿ ಮುಚ್ಚಿಟ್ಟುಕೊಳ್ಳುವ ವಿಷಯಗಳೇನಿರುತ್ತವೆ ? ಅಮ್ಮ ಎಣ್ಣೆ ಹಚ್ಚಿ ತಲೆಗೆ ಸ್ನಾನ ಮಾಡಿಸಿದಳು. ಹೊಸಬಟ್ಟೆ ತೊಟ್ಟು ಕಾಲಿಗೆ ನಮಸ್ಕಾರ ಮಾಡಿದೆ.

"ಹದಿನೈದು ವರ್ಷದವಳಾಗಿದ್ದಿ. ಅಂದರೆ ದೊಡ್ಡವಳಾಗುತ್ತಿದ್ದಿ ಎಂದಾಯಿತು. ಇನ್ನು ಮುಂದೆ ಯಾವ ಕೆಲಸವನ್ನಾದರೂ ಯೋಚಿಸಿ ಮಾಡಬೇಕು" ಅಂದಳು. ಕಾಫಿ ಕೊಟ್ಟಳು. ಅಪ್ಪನಿಗೆ ನಾನೇ ತೆಗೆದುಕೊಂಡು ಹೋಗಿ ಕಾಫಿ ಕೊಟ್ಟೆ. ಕಾಲಿಗೆ ನಮಸ್ಕರಿಸುತ್ತಿದ್ದರೆ ಅವರು ಏನೂ ಹೇಳಲಿಲ್ಲ. ಆದರೆ ತಲೆಯ ಮೇಲಿಟ್ಟ ಕೈ ಆಶೀರ್ವದಿಸುತ್ತಿರುವಂತೆ

ಇತ್ತು. ಅವರು ಹೆಚ್ಚಿಗೆ ಏನೂ ಮಾತನಾಡಲಿಲ್ಲ. ಆದರೆ ಆ ಆಪ್ಯಾಯತೆ ಆತ್ಮೀಯತೆ ಪ್ರತಿ ಕ್ಷಣವೂ ನಮಗೆ ತಿಳಿಯುತ್ತಿತ್ತು.

"ಯಾವಾಗಲೂ ಹೊಸಬಟ್ಟೆ ಹೊಲಿಸುವುದು, ಸ್ವೀಟ್ ಕೊಡುವುದು ಇದ್ದೇ ಇರುತ್ತೆ. ಈಸರಿ ಈ ಸಣ್ಣ ಪ್ರೆಸೆಂಟೇಶನ್ ತಗೊಳಮ್ಮ." ಎನ್ನುತ್ತಾ ಒಂದು ಪ್ಯಾಕೆಟ್ ಕೊಟ್ಟರು.

ಮೇಲಿನ ಬಣ್ಣದ ಕಾಗದವನ್ನು ಬಿಚ್ಚಿದೆ ಸುಂದರವಾದ ಲೆದರ್ ಬೈಂಡ್ ಡೈರಿ, ಮತ್ತೊಂದು ಪುಸ್ತಕವಿತ್ತು. ನಿನ್ನೆಯ ದಿನ ಟೀಚರ್ ಹೇಳಿದ ವಿಷಯಗಳನ್ನೆಲ್ಲಾ ಅಭ್ಯಾಸದ ಪ್ರಕಾರ ರಾತ್ರಿ ಊಟದ ವೇಳೆಗೆ ಮರೆತು ಬಿಟ್ಟಿದ್ದೆ. ಅದನ್ನು ನೆನಪಿಸಲೇ ಇದನ್ನು ಕೊಟ್ಟರೇನೋ !

"ನೀನು ಹುಟ್ಟಿದ ದಿನಕ್ಕಿಂತಲೂ ಒಳ್ಳೆಯ ದಿನ ಯಾವುದಿದೆ? ಇವತ್ತೇ ಡೈರಿ ಬರೆಯಲು ಪ್ರಾರಂಭಿಸು. ಇದು ಕೂಡಾ ಒಳ್ಳೆಯ ಪುಸ್ತಕ" ಎನ್ನುತ್ತಾ ಡೈರಿಯೊಡನಿದ್ದ ಪುಸ್ತಕ ತೋರಿಸಿದರು. "ಇದರ ಹೆಸರು 'ಡೈರಿ ಆಫ್ ಎನ್‌ಫ್ರಾಂಕ್'. ಎರಡನೆ ಮಹಾಯುದ್ಧದ ಕಾಲದಲ್ಲಿ ನಾಜೀ ಸೈನಿಕರ ಕಣ್ಣಿಗೆ ಬೀಳದಂತೆ ಒಂದು ರಹಸ್ಯ ಗೃಹದಲ್ಲಿ ಕಳೆದ ಯಹೂದಿ ಕುಟುಂಬ ಅದು. ನಿನ್ನ ವಯಸ್ಸಿನಷ್ಟೂ ಆಗಿರದ ಆ ಹುಡುಗಿ ಮೂರು ವರ್ಷಗಳ ಕಾಲ ತಾನು ಕಳೆದ ಈ ರಹಸ್ಯ ಬದುಕನ್ನು, ತನ್ನಲ್ಲುಂಟಾಗುತ್ತಿದ್ದ ಬದಲಾವಣೆಗಳನ್ನು ತುಂಬಾ ಚೆನ್ನಾಗಿ ಬರೆದಿದ್ದಾಳೆ ಈ ಪುಸ್ತಕದಲ್ಲಿ. ಅದು ಪ್ರಪಂಚದಲ್ಲೇ ಅತ್ಯಂತ ಪ್ರಖ್ಯಾತಿ ಪಡೆಯಿತು. ನಿನ್ನ ವಯಸ್ಸಿನ ಹುಡುಗಿಯರೆಲ್ಲಾ ಓದಬೇಕಾದ ಪುಸ್ತಕ ಇದು" ಅಪ್ಪ ಹೇಳಿದರು.

ಊರಿನಿಂದ ಅಜ್ಜಿ, ತಾತ ಬಂದರು. ಚಿಕ್ಕಮ್ಮ ನನಗೋಸ್ಕರ ನುಚ್ಚಿನುಂಡೆಗಳನ್ನು ಸ್ಪೆಷಲ್ಲಾಗಿ ಕಳುಹಿಸಿದ್ದಳು. ಅವರಷ್ಟು ದೂರದಿಂದ ಬರುತ್ತಾರೆಂದುಕೊಂಡಿರಲಿಲ್ಲ. ನನ್ನ ಹುಟ್ಟಿದ ದಿನವನ್ನು ಇಷ್ಟು ಜನಗರು ತಿಸುತ್ತಿದ್ದಾರೆಂದರೆ ನನಗೆ ತುಂಬಾ ಹೆಮ್ಮೆ, ಸಂತೋಷ ಆಗುತ್ತಿತ್ತು. ತುಂಬಾ ಜನರ ಮನೆಯಲ್ಲಿ ಹೀಗೆ ನಡೆಯುವುದಿಲ್ಲವೆಂದುಕೊಂಡಿದ್ದೇನೆ.

i am happy,

ಮೊದಲನೆ ದಿನದ್ದನ್ನು ಓದಲು ತಿಳಿಸಿದರೆ ಅಪ್ಪ ಓದಲಿಲ್ಲ. "ಬೇಡ

ಬಿಡಮ್ಮಾ, ಚೆನ್ನಾಗಿ ಬರಿ" ಎಂದುಬಿಟ್ಟರು. ದಿನವೂ ಬರೆಯೋಕೆ ಏನಿರುತ್ತೆ, ಸೌಂದರ್ಯ, ಭರತ್ ಮಾಡುವ ಚೇಷ್ಟೆಯ ಕೆಲಸಗಳನ್ನು. ಜಿಮ್ಮಿ ಕೈಲಿ ಆಡಿಸಿದ ಆಟಗಳೇ ವಿಶೇಷಗಳು. ಅಕ್ಕ ಹಾಕಿದ ಹೊಸ ರಂಗೋಲಿ, ಅಮ್ಮ ಮಾಡಿದ ಹೊಸ ತಿಂಡಿ ಬಗ್ಗೆ ದಿನವೂ ಬರೆಯುತ್ತಿದ್ದೆ. ಈ ವಿಷಯವನ್ನು ಹೇಳಿದಾಗ ಅಪ್ಪ ನಕ್ಕು ಬಿಟ್ಟರು. "ಏನಮ್ಮಾ, ನಿನ್ನ ಬಗ್ಗೆ ನೀನು ಬರೆದು ಕೊಳ್ಳಲು ಏನೂ ಇಲ್ಲವಾ?" ಎಂದು ಕೇಳಿದರು. ನನ್ನ ಬಗ್ಗೆ ಬರೆದು ಕೊಳ್ಳಲು ದಿನವೂ ಏನಿರುತ್ತದೆ? "ಹದಿನೈದು ವರ್ಷಗಳಿಂದಲೂ ಡೈರಿ ಬರೆದಿಲ್ಲವಲ್ಲಾ ...ಆ ನೆನಪುಗಳನ್ನೆಲ್ಲಾ ಬರೆಯಬಹುದಲ್ಲಾ" ಅಂದರು. ನಿಜ....ನಾಳೆಯಿಂದಲೇ ಪ್ರಾರಂಭಿಸುತ್ತೇನೆ.

ನಾನು ಜನವರಿ ಹದಿನೈದರಂದು ಹುಟ್ಟಿದ್ದೇನೆ. ಅಂದರೆ ಸರಿಯಾಗಿ ಸಂಕ್ರಾಂತಿಯ ಹಬ್ಬದ ದಿನವೆಂದಾಯಿತು. ನಾಲ್ಕು ದಿನಗಳ ಮುಂಚೆಯೇ ಅಮ್ಮ ಹಾಸ್ಪಿಟಲ್‌ಗೆ ಸೇರಿದ್ದಳಂತೆ. ಪಾಪ ನಾಲ್ಕು ದಿನಗಳು ತುಂಬಾ ನೋವನ್ನು ಅನುಭವಿಸಿದ್ದಳಂತೆ. ಅದಕ್ಕಿಂತ ಹೆಚ್ಚಾಗಿ ಹಬ್ಬದ ದಿನ ಮನೆಯಲ್ಲಿಲ್ಲವಲ್ಲಾ ಎಂದು ನೊಂದುಕೊಂಡಳಂತೆ. ಆಗ ತಾತ, ಅಜ್ಜಿ, ಚಿಕ್ಕಮ್ಮ ಎಲ್ಲರೂ ನಮ್ಮ ಊರಿನಲ್ಲೇ ಇದ್ದುದರಿಂದ ಯಾರಿಗೂ ತೊಂದರೆ ಆಗಲಿಲ್ಲ. ಅಪ್ಪ ಕೆಲಸದ ಮೇಲೆ ಬೇರೆ ಊರಿಗೆ ಹೋಗುವವರೆಗೂ ಎಲ್ಲರೂ ಒಂದೇ ಕುಟುಂಬದಲ್ಲಿದ್ದೆವು. ಚಿಕ್ಕಮ್ಮ ನಮ್ಮೊಡನೆ ತುಂಬಾ ಆತ್ಮೀಯತೆಯಿಂದ ಇದ್ದರು. ನಮ್ಮ ಸಂಸಾರವನ್ನು ಕಂಡರೆ ಊರಿನಲ್ಲಿ ಎಲ್ಲರಿಗೆ ಮೆಚ್ಚಿಗೆಯೇ. ಅತ್ತೆಯರಿಬ್ಬರು ಊರಿನಿಂದ ಬಂದರೆಂದರೆ ನಮಗೆ ಹಬ್ಬ.

ನನಗೆ ಚೆನ್ನಾಗಿ ನೆನಪಿದೆ. ಅಮ್ಮ, ಅಪ್ಪ, ನಾನು ಒಂದು ತಿಂಗಳ ಮಗು-ನನ್ನ ತಂಗಿಯೊಂದಿಗೆ ತಾತನ ಮನೆಗೊಮ್ಮೆ ಹೋಗಿದ್ದೆವು. ನಮ್ಮೂರಿಗೆ ಹೋಗಬೇಕೆಂದರೆ ಎತ್ತಿನ ಸವಾರಿ ಗಾಡಿಯಲ್ಲಿ ಹೋಗಬೇಕು. ಒಂಟೆತ್ತಿನ ಗಾಡಿ !

ಚಿಕ್ಕಂದಿನ ಪ್ರತಿ ಘಟನೆಯೂ ನನಗೊಂದು ಅನುಭವವೇ. ನನ

ಗೊಬ್ಬಳಿಗೆ ಮಾತ್ರವಲ್ಲ ! ನಮ್ಮಮ್ಮ ಅವರ ತವರುಮನೆ ಹತ್ತಿರವಾಗುತ್ತಿದಂತೆ ತನ್ನ ಮುಖವನ್ನು ಸಂತೋಷದಿಂದ ಅರಳಿಸುತ್ತಿದ್ದಳು. ಅದೇನು ಸಂಭ್ರಮ ಅವಳಿಗೆ !

ಅಪ್ಪ, ನಾನು ಆಗ ಅಮ್ಮನನ್ನು ರೇಗಿಸುತ್ತಿದ್ದೆವು.

ಮಗುವನ್ನು ಸೊಂಟಕ್ಕೇರಿಸಿಕೊಂಡು ಸವಾರಿಗಾಡಿಯಿಂದ ಕೆಳಗಿಳಿಯುತ್ತಿದ್ದ ತಮ್ಮೂರಿನ ಹೆಣ್ಣನ್ನು ನೋಡಲು ಬೀದಿಯ ಜನರೆಲ್ಲಾ ಗುಂಪುಗೂಡುತ್ತಿದ್ದರು. ಮೊದಲು ಅಮ್ಮನಿಗೆ ದೃಷ್ಟಿ ತೆಗೆದು ನಂತರ ಒಳಗೆ ಕರೆದುಕೊಳ್ಳುತ್ತಿದ್ದಳು ಅಜ್ಜಿ ! ತವರು ಮನೆಯೊಳಗೆ ಹೆಜ್ಜೆಯಿರಿಸಿದ ಅಮ್ಮನ ಕಣ್ಣುಗಳು ಹೊಳೆಯುತ್ತಿದ್ದವು. ಮಗುವನ್ನು ಅಜ್ಜಿಯ ಕೈಗೆಕೊಟ್ಟು ನೆಮ್ಮದಿಯಿಂದ ಮನೆಯ ಮುಂದಿದ್ದ ಪ್ರತಿಯೊಂದು ಗಿಡವನ್ನು ಮಾತಾಡುತ್ತಿದ್ದಳು. ಹದಿನಾರು ವರ್ಷಗಳ ಸಹವಾಸವಲ್ಲವೇ !

ಅಕ್ಕ ಉಗಾದಿಯ ದಿನ ಹುಟ್ಟಿದ್ದಳು. ಅವಳ ಹೆಸರನ್ನು ವಸಂತ ಎಂದು ಇಟ್ಟಿದ್ದು ಅದಕ್ಕೆ.

ಇನ್ನು ನಾನು ತುಂಬಾ ವಿಶೇಷವಾಗಿ ಹುಟ್ಟಿದೆನಂತೆ. ಒಂದು ವಾರದ ಕಾಲ ಬದುಕುವುದೇ ಗ್ಯಾರಂಟಿಯಿರಲಿಲ್ಲವಂತೆ. ಅಮ್ಮ ಒಂದೇ ಸಮನೆ ಅಳುತ್ತಿದ್ದಳಂತೆ. ಒಟ್ಟಿನಲ್ಲಿ ಬದುಕುಳಿದೆ.

ಅಕ್ಕನೊಡನೆ ಸ್ಕೂಲಿಗೆ ಹೋಗುತ್ತಿದ್ದ ನೆನಪು ನನಗೆ ಚೆನ್ನಾಗಿದೆ. ಅಕ್ಕನಿಗೆ ಓದಿನಲ್ಲಿ ಇಂಟ್ರೆಸ್ಟ್ ಇರಲಿಲ್ಲ. ಎರಡು ಸಲ ಫೇಲಾಗಿದ್ದಳು. ಎಂಟನೆ ತರಗತಿಯನ್ನು ನಾವಿಬ್ಬರೂ ಒಂದೇ ಸಲ್ಲ ಓದಿದೆವು. ಅವಳು ಅಲ್ಲೂ ಫೇಲಾಗಿ ಓದನ್ನ ಬಿಟ್ಟು ಬಿಟ್ಟಳು. ಪ್ರೈವೇಟಾಗಿ ಎಸ್ಸೆಸ್ಸೆಲ್ಸಿ ಕಟ್ಟಿದ್ದಾಳೆ. ಓದಿನಲ್ಲಿಲ್ಲದಿದ್ದರೂ ಅಡಿಗೆ, ಮನೆ ಕೆಲಸಗಳನ್ನು ತುಂಬಾ ಅಚ್ಚುಕಟ್ಟಾಗಿ ಮಾಡುತ್ತಾಳೆ. ಚಿಕ್ಕಮ್ಮನಂತೆ ಸುಂದರವಾಗಿ ರಂಗೋಲಿ ಹಾಕುತ್ತಾಳೆ. ಅಮ್ಮನಂತೆ ಮನೆಯನ್ನೆಲ್ಲಾ ಸರಿಯಾಗಿ ವ್ಯವಸ್ಥೆಗೊಳಿಸುತ್ತಾಳೆ. ಮನೆಯ ಯಾವ ಕೋಣೆಯಲ್ಲಿ ಹೆಜ್ಜೆ ಇರಿಸಿದರೂ ಅವಳು ಹೊಲಿದಿರುವ ಡಿಸೈನ್, ಹಾಕಿರುವ ಲೇಸ್ ಕಾಣುತ್ತದೆ.

ಅಂದ ಹಾಗೆ ನಾನು ಮೊದಲ ಹೆಜ್ಜೆಯನ್ನು ನನ್ನ ಒಂದೂವರೆ ವರ್ಷ

ಗ್ರಂಥ ಸ್ವಾಮ್ಯ ವಿಭಾಗ
ರಾಜ್ಯ ಕೇಂದ್ರ ಗ್ರಂಥಾಲಯ
ಬೆಂಗಳೂರು

ದಲ್ಲಿ ಹಾಕಿದೆನಂತೆ, ಸೂಕ್ಷ್ಮ ಶರೀರವಲ್ಲವೇ. ಆರು ತಿಂಗಳ ತನಕ ಬೋರಲು ಬಿದ್ದಿರಲಿಲ್ಲವಂತೆ, ವರ್ಷವಾದರೂ ಸರಿಯಾಗಿ ಕುಳಿತುಕೊಳ್ಳುತ್ತಿರಲಿಲ್ಲವಂತೆ. ನನ್ನ ಮೊದಲನೆ ಮಾತು 'ಅಮ್ಮಾ' ಅಲ್ಲವಂತೆ 'ಅಕ್ಕ' ಎಂದಂತೆ. ಅದಕ್ಕೆ ಅಕ್ಕನಿಗೆ ನಾನೆಂದರೆ ತುಂಬಾ ಪ್ರೀತಿ.

ಅಪ್ಪನಿಗೆ ನನ್ನನ್ನು ಚೆನ್ನಾಗಿ ಓದಿಸಬೇಕೆಂದು ಆಸೆಯಿತ್ತು. 'ಇವಳಿಗೆ ದೈಹಿಕ ಶಕ್ತಿ ಇಲ್ಲವಾಗಲೀ ತಿಳುವಳಿಕೆ ಬುದ್ಧಿವಂತಿಕೆ ಜೋರಾಗಿದೆ' ಎನ್ನುತ್ತಿದ್ದರು. ಸ್ಕೂಲಿಗೆ ಕಳುಹಿಸಿದಾಗ ಬೇರೆ ಮಕ್ಕಳಂತೆ ನಾನು ಅಳಲಿಲ್ಲವಂತೆ. ನೇರವಾಗಿ ಟೀಚರ್ ಬಳಿಗೆ ಹೋಗಿ ಮಾತನಾಡಿದನಂತೆ, ಅಪ್ಪ ಈಗಲೂ ಅದನ್ನು ಹೇಳಿ ನಗುತ್ತಿರುತ್ತಾರೆ, ನನಗೆ ಆಟಗಳಲ್ಲಿ ಆಸಕ್ತಿಯಿರಲಿಲ್ಲ. ಡ್ರಾಯಿಂಗನ್ನು ಚೆನ್ನಾಗಿ ಮಾಡುತ್ತಿದ್ದೆ, ನಾನು ಬರೆದ ಮೊದಲ ಚಿತ್ರ 'ಅಮ್ಮ.' ಅಮ್ಮ ಅದನ್ನು ಭದ್ರವಾಗಿ ತೆಗೆದಿರಿಸಿಕೊಂಡಿದ್ದಾಳೆ, ತಮ್ಮನಿಗೆ ಕ್ರಿಕೆಟ್ ಅಂದರೆ ಪ್ರಾಣ.

ಅಪ್ಪ ನಮ್ಮೆಲ್ಲರಿಗೂ ಒಂದೊಂದು ಫೈಲನ್ನು ತಯಾರಿಸಿಕೊಟ್ಟಿದರು. ಬರ್ತ್ ಸರ್ಟಿಫಿಕೇಟುಗಳು, ನಮ್ಮ ರಿಪೋರ್ಟುಗಳು ಅದರಲ್ಲವೆ. ಯಾವ ಜ್ವರಕ್ಕೆ ಯಾವ ಔಷಧಿ ಉಪಯೋಗಿಸಬೇಕೆಂದು ಸಹ ಅದರಲ್ಲಿ ಬರೆದಿದ್ದರು. ಅದನ್ನು ನೋಡುತ್ತಿದ್ದರೆ ನಮಗೂ ಒಂದು ಚರಿತ್ರೆ ಇರುವಂತೆನ್ನಿಸುತ್ತದೆ. ಆಗಾಗ ಅದನ್ನು ತೆರೆದು ಕಂಪೇರ್ ಮಾಡಿಕೊಳುತ್ತಿರುತ್ತೇವೆ. ನನ್ನದರಲ್ಲಿ ಸ್ಕೂಲ್ ಸರ್ಟಿಫಿಕೇಟ್‌ಗಳಿಗಿಂತಲೂ ಹೆಚ್ಚಾಗಿ ಮೆಡಿಕಲ್ ರಿಪೋರ್ಟ್‌ಗಳೇ ಕಾಣುತ್ತವೆ.

ನಾನು ಮೂರನೆ ಕ್ಲಾಸ್ ಓದುತ್ತಿರುವಾಗ ಅಂದುಕೊಳ್ಳುತ್ತೇನೆ— ನನಗೆ ಖಾಯಿಲೆ ಬಂದಿತ್ತು ಚಿಕನ್‌ಪಾಕ್ಸ್. ಆಗ ಅಮ್ಮನೊಡನೆ ಅಪ್ಪ ಕೂಡಾ ರಾತ್ರಿಯೆಲ್ಲಾ ಎಚ್ಚರದಿಂದಿರುತ್ತಿದ್ದರು, ಹಗಲೆಲ್ಲಾ ಆಫೀಸಿನಲ್ಲಿ ಕೆಲಸ ಮಾಡಿ ಬಂದರೂ ರಾತ್ರಿ ಮಲಗುತ್ತಲೇ ಇರಲಿಲ್ಲ. ಒಂದು ಸಲ ನನಗೆ—ಸರಿಯಾಗಿ ನೆನಪಿದೆ—ಅರ್ಧ ರಾತ್ರಿಯ ವೇಳೆ ಎಚ್ಚರವಾಯಿತು. ತುಂಬಾ ಬಾಯಾರಿಕೆಯಾಗಿತ್ತು. ಅಪ್ಪ ನನ್ನನ್ನೇ ನೋಡುತ್ತಿದ್ದವರು "ಏನಮ್ಮಾ?" ಅಂದರು, "ನಿದ್ರೆ ಮಾಡಲಿಲ್ಲವಾ ಅಪ್ಪಾ?" ಎಂದು

ಎಂದು ಕೇಳಿದೆ. "ನಿನಗೆ ಹೀಗಿದ್ದರೆ ನನಗೆ ನಿದ್ರೆ ಹೇಗೆ ಬರುತ್ತಮ್ಮ?" ಅಂದರು. ಅವರ ಕಣ್ಣುಗಳಲ್ಲಿ ನೀರು ಬಂತು. ಅದು ಎಂದಿಗೂ ಮರೆಯುಲಾರದಂತಹ ಚಿತ್ರ. ಅಂತಹ ತಂದೆಗೆ ನಾನು ಮಗಳಾಗಿ ಹುಟ್ಟಿದ್ದು ನನ್ನ ಅದೃಷ್ಟ, ಮಾಡಿರುವ ಪುಣ್ಯ ಅನ್ನಿಸುತ್ತದೆ.

ಹದಿನೈದು ವರ್ಷಗಳ ಗತಬದುಕನ್ನು ಪರಿಶೀಲಿಸಿದರೆ ನನ್ನನ್ನು ತುಂಬಾ ತುಂಬಾ ಅಲುಗಿಸಿದ ವಿಷಯವೊಂದಿದೆ. ಇಷ್ಟು ವರ್ಷಗಳಲ್ಲಿ ನನ್ನನ್ನೇ ಅಲ್ಲ, ನಮ್ಮ ಒಡ ಹುಟ್ಟಿದ ಯಾರನ್ನು ಅಪ್ಪ ಅಮ್ಮ ಹೊಡದದ್ದು ಒಮ್ಮೆಯೂ ಇರಲಿಲ್ಲ. ಇದು ಸಾಧ್ಯವೇನಾ? ಯೋಚಿಸಿದರೆ ಆಶ್ಚರ್ಯವಾಗುತ್ತೆ. ಎಲ್ಲಾ ಮಕ್ಕಳಂತೆ ನಾವೂ ಚೇಷ್ಟೆ, ಹಠ ಮಾಡಿರುತ್ತೇವೆ. ಆದರೂ ಎಂದೂ ಒಂದೇಟನ್ನೂ ಹೊಡೆದಿರಲಿಲ್ಲ. ಪ್ರೀತಿಯನ್ನು ಬಿಟ್ಟು ನಮ್ಮ ಮೇಲೆ ಅವರು ಸಿಟ್ಟನ್ನು ತೋರ್ಪಡಿಸಿಯೇ ಇಲ್ಲ. ನಮ್ಮ ಕಡೆಯಿಂದ ತಪ್ಪಾದರೆ ಒಂದೆಡೆ ಕೂರಿಸಿಕೊಂಡು ಬುದ್ಧಿ ಹೇಳುತ್ತಿದ್ದರು. ಅವರಲ್ಲಿಯ ಈ ಒಳ್ಳೆಯತನವೇ ನಮ್ಮಲ್ಲಿ ಯಾವ ತಪ್ಪನ್ನೂ ಮಾಡಿಸಿಲ್ಲದಿರಬಹುದು. ನಾವು ತಪ್ಪು ಮಾಡುವುದೆಂದರೆ ಅದು ಅವರನ್ನು ಶಿಕ್ಷಿಸುವುದೆಂದೇ ಅನ್ನಿಸುತ್ತದೆ ನಮಗೆ.

ಮೊದಲ ಡೈರಿಯನ್ನು ಪೂರ್ತಿ ಮಾಡುವ ವೇಳೆಗೆ ಕಿರಣ್ಮಯಿಗೆ ಲಕ್ಷ್ಮಿಯ ಮನೆಯ ಒಬ್ಬ ಸದಸ್ಯೆಯಾದಂತೆ ಅನ್ನಿಸಿತು. ಲಕ್ಷ್ಮಿ ನಿಜವಾಗಿಯೂ ವಿಶೇಷವಾಗಿ ಬೆಳೆದಿದ್ದಾಳೆ. ಅವರು ಲಕ್ಷಾಧಿಕಾರಿಗಳಲ್ಲ. ಆದರೂ ಮಕ್ಕಳಲ್ಲಿ ಯಾವ ರೀತಿಯ ಅಸಂತೃಪ್ತಿಯೂ ಇಲ್ಲ. ಹಣದ ಮೇಲೆ, ಒಡವೆಗಳ ಮೇಲೆ ಯಾವ ವ್ಯಾಮೋಹವೂ ಇಲ್ಲ. ಅಕ್ಕ-ತಂಗಿಯರ ನಡುವೆ ಅಸೂಯೆ ಇರಲಿಲ್ಲ. ಒಬ್ಬರಿಗಾಗಿ ಮತ್ತೊಬ್ಬರು ಏನೋ ಮಾಡಬೇಕೆಂದೂ, ಅವರನ್ನು ಸಂತೋಷಗೊಳಿಸಲೇ ಬೇಕೆಂಬ ಪ್ರಯತ್ನವೇ ಕಾಣುತ್ತಿದೆ. ಆ ಡೈರಿಯಲ್ಲಿಯ ಪ್ರತಿಯೊಂದು ಘಟನೆಯೂ ಕುಟುಂಬದಲ್ಲಿಯ ಅವರ ಸಂತೋಷವನ್ನೇ ಎತ್ತಿ ತೋರುತ್ತದೆ.

ಇಂಟರ್‌ನಲ್ಲಿರುವಾಗ ಲಕ್ಷ್ಮಿ ಆರ್ಟ್ಸ್ ತೆಗೆದುಕೊಂಡು ಯಶಸ್ವಿಯಾದಳು, ಕ್ರಿಕೆಟ್ ಬಗ್ಗೆ ಕೂಡಾ ಜ್ಞಾನವನ್ನು ಹೆಚ್ಚಿಸಿಕೊಂಡಳು ತಾನು ತಯಾರಿಸಿದ ಸ್ಕ್ರಾಪ್ ಬುಕ್ ಬಗ್ಗೆ ಕೂಡಾ ಬರೆದುಕೊಂಡಿದ್ದಳು. ಅದನ್ನು ತಮ್ಮನ ಹುಟ್ಟು ಹಬ್ಬದ ದಿನ ಅವನಿಗೆ ಕೊಟ್ಟಾಗ ಅವನೆಷ್ಟು ಹಿಗ್ಗಿದ್ದನೆಂದು ವಿವರವಾಗಿ ಬರೆದುಕೊಂಡಿದ್ದಳು.

ಕಿರಣ್ಮಯಿ ಒಂದು ವಿಷಯವನ್ನು ಸ್ಪಷ್ಟವಾಗಿ ಗಮನಿಸಿದಳು. ಲಕ್ಷ್ಮಿ ಕ್ರಿಕೆಟರ್‌ಗಳ ಬಗ್ಗೆ, ಸಿನೆಮಾ ನಟರ ಬಗ್ಗೆ ಎಷ್ಟೇ ಹೊಗಳಿ ಬರೆದಿದ್ದರೂ ಅದು ಅವರ ಟ್ಯಾಲೆಂಟ್ ಬಗ್ಗೆಯಿತ್ತಾಗಲೀ, ಅವರ ವೈಯುಕ್ತಿಕವಾಗಿರಲಿಲ್ಲ, ಇಂತಹ ಡ್ರೆಸ್ಸಿನಲ್ಲಿ ಚೆನ್ನಾಗಿರುತ್ತಿದ್ದನೆಂದೋ, ಇಂತಹ ಪೋಸಿನಲ್ಲಿ ಚೆನ್ನಾಗಿ ಕಾಣುತ್ತಿದ್ದನೆಂದೋ ಎಲ್ಲಿಯೂ ಬರೆದುಕೊಂಡಿರಲಿಲ್ಲ. ಅವಳು ಅವರನ್ನು ಆ ದೃಷ್ಟಿಯಿಂದ ನೋಡಲಿಲ್ಲವೆಂಬುದು ಗಮನಾರ್ಹ....

ಕಿರಣ್ಮಯಿ ಡೈರಿ ಮಡಿಸಿಟ್ಟು ಬಿಟ್ಟು ಯೋಚಿಸಲಾರಂಭಿಸಿದಳು. ತನ್ನ ಕುಟುಂಬಕ್ಕೂ, ಲಕ್ಷ್ಮಿಯ ಕುಟುಂಬಕ್ಕೂ ಎಷ್ಟು ವ್ಯತ್ಯಾಸ! ರಕ್ತಸಂಬಂಧ ಬಿಟ್ಟು ತಮ್ಮ ನಡುವೆ ಎಂತಹ ಬಂಧವೂ ಬೆಳೆದಿರಲಿಲ್ಲ. ಮಮತಾನುರಾಗದಿಂದ ಬೆಳೆದ ಸುಂದರ ಸಂಸಾರ ಅವರದು. ತಂದೆ ತನ್ನನ್ನೆಂದಿಗೂ ಸಿನಿಮಾಗಳಿಗೆ ವಿಹಾರಗಳಿಗೆ ಕರೆದೊಯ್ದಿರಲಿಲ್ಲ. ಲಕ್ಷ್ಮಿ ಮೊದಲು ನೋಡಿದ ಸಿನೆಮಾ 'ಮಾಯಾ ಬಜಾರ್' — ಎಂದು ಅವರಪ್ಪ ಅವಳ ಚರಿತ್ರೆಯ ಫೈಲಿನಲ್ಲಿ ಬರೆದಿದ್ದಾರಂತೆ. ಚಿಕ್ಕಂದಿನಲ್ಲಿ ನೋಡಿ ಆನಂದಿಸಲು, ದೊಡ್ಡವರಾದ ಮೇಲೆ ನೋಡಿ ಅರ್ಥ ಮಾಡಿಕೊಂಡು ಆನಂದಿಸಲು ಇರುವ ವ್ಯತ್ಯಾಸವನ್ನು ವಿವರಿಸಿ ಬರೆದಿದ್ದಳು ಲಕ್ಷ್ಮಿ. ಎಷ್ಟು ಜನ ತಂದೆಯರಿಗೆ ಆ ಆಲೋಚನೆಯಿರುತ್ತೆ ?

ಅಷ್ಟೊಂದು ಆತ್ಮೀಯತೆ, ಸಂತೋಷದಲ್ಲಿದ್ದ ಆ ಸಂಸಾರದಲ್ಲಿ ಲಕ್ಷ್ಮಿಯ ಮರಣ ಎಂತಹ ಬಿರುಗಾಳಿಯನ್ನು ಎಬ್ಬಿಸಿರಬಹುದು ? ಲಕ್ಷ್ಮಿ ಇನ್ನು ನಮ್ಮ ನಡುವೆಯಿಲ್ಲ' ಎಂಬ ಆಲೋಚನೆಯೇ ಅವರಿಗೆಷ್ಟು ನೋವನ್ನು ಉಂಟುಮಾಡುತ್ತಿರಬಹುದು ? ಯಾವ ಹಬ್ಬ ಬಂದರೂ, ಯಾವ ಸಂತೋಷದ ಸಂದರ್ಭ ಬಂದರೂ ಲಕ್ಷ್ಮಿ ತಮ್ಮೊಡನಿಲ್ಲವಲ್ಲಾ ಎಂದು

ಅವರೆಷ್ಟು ದುಃಖಿಸುತ್ತಿರುತ್ತಾರೋ, ಎಷ್ಟು ವ್ಯಸನಪಟ್ಟು ಅಳುತ್ತಿರುತ್ತಾರೊ ? ಎಂತಹ ದುರವಸ್ಥೆ ಅದು,ಆ ಪರಿಸ್ಥಿತಿಯಿಂದ ಚೇತರಿಸಿಕೊಂಡು ಅವರು ಸಾಮಾನ್ಯ ಮನುಷ್ಯರಾಗಲು ಸಾಧ್ಯವಾ ? ನೆನಸಿಕೊಂಡರೇನೇ ಕಿರಣ್ಮಯಿಗೆ ಸಂಕಟವಾಗುತ್ತಿತ್ತು.

ಇನ್ನೊಂದು ಡೈರಿ ಉಳಿದಿತ್ತು, ಅದು ಹಿಂದಿನ ವರ್ಷದ್ದು ಅಂದರೆ ಲಕ್ಷ್ಮಿ ಹಾಸ್ಟೆಲಿಗೆ ಸೇರಿದ ವರ್ಷದ್ದು. ಅದನ್ನು ತೆರೆಯುತ್ತಿದ್ದಂತೆ ಕಿರಣ್ಮಯಿಯ ಕೈ ನಡುಗಿತು. ಎಂತಹ ಸುದ್ದಿಗಳಿವೆಯೋ ಏನೋ ಅದರಲ್ಲಿ !

ಆ ಡೈರಿಯ ಮೊದ ಮೊದಲು ಅಷ್ಟು ಹೆಚ್ಚಾಗಿ ಏನೂ ಬರೆದಿರಲಿಲ್ಲ, ಇಂಟರ್ ಪರೀಕ್ಷೆಗಳು ಹತ್ತಿರವಾಗುತ್ತಿದೆಯೆಂದು. ಓದಿನ ಬಗ್ಗೆ–ಬರೆದಿದ್ದಳು, ಇಂಟರ್ ರಿಸಲ್ಟ್ ಬಂದಿತ್ತು. ನಿರೀಕ್ಷಿಸಿದಂತೆಯೇ ಫಸ್ಟ್‌ಕ್ಲಾಸ್ ಬಂದಿದ್ದಳು ಅಮ್ಮ ಊರಿನಲ್ಲಿ ಎಲ್ಲರಿಗೂ ಸ್ವೀಟ್ಸ್ ಹಂಚಿದ್ದಳು, ತಾತ ಪೆನ್‌ಸೆಟ್ ಪ್ರೆಸೆಂಟ್ ಮಾಡಿದ್ದರು,

ಈಗೊಂದು ಸಮಸ್ಯೆ ಬಂದಿತು. ಅಪ್ಪನಿಗೆ ಪ್ರಮೋಷನ್, ಟ್ರಾನ್ಸ್‌ಫರ್ ಆಗುವಂತಿತ್ತು, ನಾನು ಯಾವ ಕಾಲೇಜಿಗೆ ಸೇರಬೇಕು ? 'ಹೈದರಾಬಾದಿನಲ್ಲೇ ಸೇರಮ್ಮಾ, ಹಾಸ್ಟೆಲಿನಲ್ಲಿದ್ದು ಓದಿಕೊಳ್ಳಬಹುದು. ಸಮಸ್ಯೆಗಳಿರುವುದಿಲ್ಲ' ಎಂದು ಅಪ್ಪ ಹೇಳಿದರು. 'ಹಾಸ್ಟೆಲಿನಲ್ಲಿನಾ ? ಅವಳು ನಮ್ಮನ್ನೆಲ್ಲಾ ಬಿಟ್ಟಿರಬಲ್ಲಳಾ ಅಪ್ಪಾ ? ಎಂದು ಅಕ್ಕ ಅಳುತ್ತಾ ಕೇಳಿದ್ದಳು.

ನೆನ್ನೆ ರಾತ್ರಿ ನಾನು ಮಲಗುತ್ತಿರುವಾಗ ತಂಗಿ ಬಂದಳು — 'ಅಕ್ಕಾ ನಾನು ನಿನ್ನ ಹತ್ತಿರ ಮಲಗಿಕೊಳ್ಳಲಾ?' ಅಂದಳು. 'ಅದೇನು ಹೊಸದಾಗಿ?' ಅಂದೆ, 'ನೀನು ಹಾಸ್ಟೆಲ್ಲಿಗೆ ಹೋಗುವವರೆಗೂ ನಿನ್ನ ಜೊತೆ ಮಲಗಿಕೊಳ್ಳುತ್ತೇನೆ' ಅಳುಮುಖ ಮಾಡಿಕೊಂಡು ಹೇಳಿದಳು, ಅವಳನ್ನು ಹತ್ತಿರ ಎಳೆದುಕೊಂಡು ಮಲಗಿದೆ, ಇವರನ್ನೆಲ್ಲಾ ಬಿಟ್ಟು ಹೇಗೆ ಹೋಗಬಲ್ಲೆ ? ಅಪ್ಪನ ಜೊತೆ ಮಾತನಾಡಬೇಕು.

ಅಪ್ಪ ನನ್ನನ್ನು ಕೂರಿಸಿಕೊಂಡು ತುಂಬಾ ವಿವರವಾಗಿ ಹೇಳಿದರು.

ತನ್ನ ಉದ್ಯೋಗದ ಬಗ್ಗೆ ಜವಾಬ್ದಾರಿ, ಬರುವ ಎರಡು ವರ್ಷಗಳಲ್ಲಿ ತನಗೆಲ್ಲೆಲ್ಲಿಗೆ ಟ್ರಾನ್ಸ್‌ಫರ್ ಆಗುತ್ತೆ, ಉಂಟಾಗುವ ಕಷ್ಟನಷ್ಟಗಳ ಬಗ್ಗೆ ವಿವರಿಸಿದರು. ನಾನು ಹೈದರಾಬಾದಿನ ಕಾಲೇಜಿಗೆ ಸೇರಬೇಕು. ಹಾಸ್ಟೆಲಿನಲ್ಲಿದ್ದುಕೊಂಡು ಓದಬೇಕು. ಬೇರೆ ದಾರಿಯೇ ಇಲ್ಲವೆಂದು ಸ್ಪಷ್ಟವಾಗಿ ಹೇಳಿದರು. ಅದಕ್ಕೆ ನಾನು ತಯಾರಾಗಬೇಕು.

ಸೀಟ್ ಸಿಕ್ಕಿತು. ತುಂಬಾ ಒಳ್ಳೆಯ ಕಾಲೇಜೇಗೆ, ಹಾಸ್ಟೆಲ್ ಕೂಡಾ ತುಂಬಾ ದೊಡ್ಡದಂತೆ. ನಾಲ್ಕು ದಿನಗಳಲ್ಲಿ ಪ್ರಯಾಣ. ಅಕ್ಕ ನನ್ನಿಂದ ಒಂದು ಕೆಲಸವನ್ನೂ ಮಾಡಿಸುತ್ತಿರಲಿಲ್ಲ. ಎಲ್ಲಾ ಅವಳೇ ಸಿದ್ದಗೊಳಿಸುತ್ತಿದ್ದಳು.

ನಾಳೆ ಹೈದರಾಬಾದಿಗೆ ಪ್ರಯಾಣ. ಎಲ್ಲಾ ಸರಿಪಡಿಸಿಕೊಂಡಿದ್ದಾಗಿತ್ತು. ಹತ್ತಿರವಾಗುತ್ತಿದ್ದಂತೆ ಮನದಲ್ಲಿ ಅಳುಕು ಪ್ರಾರಂಭವಾಯಿತು. ನನ್ನನ್ನು ಉತ್ಸಾಹದಿಂದ ಇಟ್ಟಿರಲು ಎಲ್ಲರೂ ಪ್ರಯತ್ನಪಡುತ್ತಿದ್ದರು. ಅವರು ಬೇಸರಮಾಡಿಕೊಳ್ಳಕೂಡದೆಂದು ನಾನೂ ಉತ್ಸಾಹದಿಂದರುವಂತೆ ನಟಿಸುತ್ತಿದ್ದೆ. ಅಮ್ಮ, ಅಕ್ಕ, ಚಿಕ್ಕಮ್ಮ ನಾನು ಅತ್ತೆಯ ಮನೆಗೆ ಹೋಗುತ್ತಿರುವಂತೆ ವಿಧ ವಿಧ ತಿಂಡಿಗಳನ್ನು ಮಾಡಿ ಬಡಿಸುತ್ತಿದ್ದರು. ತಮ ಸಂಜೆಯ ವೇಳೆ ಆಟವಾಡಿಕೊಳ್ಳಲು ಸಹ ಹೋಗುತ್ತಿರಲಿಲ್ಲ.

ಇಷ್ಟು ಏನ ಕಷ್ಟವೇನೆಂದರೆ ತಿಳಿಯದವಳು, ಅದು ದೊಡ್ಡ ಸಿಟಿ, ಅಲ್ಲಿಯವರೆಲ್ಲಾ ನಾಗರೀಕರು, ಅವರ ನಡುವೆ ಸುಲಭವಾಗಿ ಬೆರೆಯಬಲ್ಲೆನೇ ? ಎಲ್ಲರೂ ನನ್ನನ್ನು ಕಂಡು ನಗುತ್ತಾರೇನೋ ? ಫಸ್ಟ್‌ಕ್ಲಾಸ್ ಬಂದಿದ್ದರೂ ಇಂಗ್ಲೀಷಿನಲ್ಲಿ ಮಾತನಾಡಲು ಅಷ್ಟು ಚೆನ್ನಾಗಿ ಬರುತ್ತಿರಲಿಲ್ಲ. ಅಲ್ಲಿ ಬೇಕಾದಷ್ಟು ಕ್ರಿಕೆಟ್ ಮ್ಯಾಚುಗಳನ್ನು ಕಣ್ಣಾರೆ ನೋಡಬಹುದಕ್ಕಾ' ತಮ್ಮ ಹೇಳುತ್ತಿದ್ದ ನನ್ನನ್ನು ಎನ್‌ಕರೇಜ್ ಮಾಡಲು ಅವನು ಹೇಳುತ್ತಿದ್ದ. ಅವನು ಜೊತೆಗಿಲ್ಲದೆ ನಾನು ಕ್ರಿಕೆಟನ್ನು ಎಂಜಾಯ್ ಮಾಡಬಲ್ಲೆನೇ ?

ಇವತ್ತೇ ಪ್ರಯಾಣ. ಅಕ್ಕ ಚಾಕಲೇಟ್ ಪುಡ್ಡಿಂಗ್ ಮಾಡಿದಳು. ತಮ್ಮ ಡ್ಯಾನ್ಸ್ ಮಾಡಿ ನಗಿಸಿದ. ತಂಗಿ ನನಗಿಷ್ಟವಾದ ಹಾಡುಗಳನ್ನೆಲ್ಲಾ ಹಾಡಿದಳು. ನಾಳೆ ಇಷ್ಟು ಹೊತ್ತಿಗೆ ಹಾಸ್ಟೇಲಿನಲ್ಲಿರುತ್ತೇನೆ. ಹೇಗಿರುತ್ತದೋ ಏನೋ ?

ನಾಳೆಯಿಂದ ನನ್ನ ಬದುಕಿನಲ್ಲಿ ಹೊಸ ಅಧ್ಯಾಯ ಪ್ರಾರಂಭವಾಗುತ್ತೆ.

## ಅಧ್ಯಾಯ - ಏಳು

"ರೂಮ್ ನಂಬರ್ ಹದಿನೇಳು" ಅಂದಳು ಕೇರ್‌ಟೇಕರ್–ಬೀಗದ ಕೈ ಕೊಡುತ್ತಾ.

ನನ್ನ ಲಗೇಜನ್ನು ಹೊತ್ತುಕೊಂಡು ಪ್ರತಿ ಕೋಣೆಯನ್ನು ಹುಡುಕಿಕೊಂಡು ಹೊರಟೆ–ಕೊನೆಗೆ ಕಂಡಿತು–13.

ಬೀಗ ತೆಗೆದು ರೂಮಿನಲ್ಲಿ ಪ್ರವೇಶಿಸಿದೆ. ಒಳಗೆ ಮೂರು ಮಂಚಗಳಿದ್ದವು. ನನ್ನ ರೂಮ್‌ಮೇಟ್ಸ್‌ದು ಅಂದುಕೊಳ್ಳುತ್ತೇನೆ. ಒಳಗೆ ಹೋಗಿ ಕೂತೆ. ಏನೋ ಬೇಸರ, ಚೆನ್ನಾಗಿ ಅಳಬೇಕೆನ್ನಿಸಿತು. ಅಷ್ಟರಲ್ಲಿ ಹೆಜ್ಜೆಗಳ ಸಪ್ಪಳವಾಯಿತು. ರೂಮಿನೊಳಗೆ ಹುಡುಗಿಯೊಬ್ಬಳು ಬಂದಳು. ನನ್ನ ರೂಮ್‌ಮೇಟ್ ಆಗಿರಬಹುದು.

"ನಿಮ್ಮ ಹೆಸರೇನು ?" ಕೇಳಿದಳು.

ಸ್ವರ ಅಷ್ಟೊಂದು ಕಠಿಣವಾಗಿದೆಯೇಕೆ ? ಕಣ್ಣು ಮುಚ್ಚಿ ಕುಳಿತಿದ್ದರೆ ಸುಂದರಕೃಷ್ಣ ಅರಸ್‌ರವರ ಸ್ವರವೇನೋ ಅನ್ನಿಸುತ್ತಿತ್ತು.

"ನನ್ನ ಹೆಸರು ಲಕ್ಷ್ಮಿ" ಅಂದೆ.

ವಿಚಿತ್ರವಾಗಿ ನಗುತ್ತಾ ಹೊರಟು ಹೋದಳು. ಅವಳ ನಡತೆ ನನಗೆ ಕೋಪಕ್ಕಿಂತಲೂ ಹೆಚ್ಚು ಬೇಸರ ತಂದಿತು. ನನ್ನ ರೂಮ್‌ಮೇಟ್

ಹೊರಟು ಹೋದಳು. ಪುಸ್ತಕಗಳನ್ನು ಜೋಡಿಸಿ ಕೊಳ್ಳೋಣವೆಂದು ಸೂಟ್‌ಕೇಸ್ ತೆರೆದೆ.

ಮೇಲೆ ಕಾಗದ....

"ಗುಡ್‌ಮಾರ್ನಿಂಗ್ ಅಕ್ಕಾ.... ಹ್ಯಾವ್ ಎ ನೈಸ್ ಡೇ...." ಎಂದು ಬರೆದಿತ್ತು.

ಹೊರಡುವಾಗ ತಮ್ಮ ಬರೆದಿದ್ದನೇನೋ. ಅವನ ಕೈ ಬರಹ ನೋಡು ತ್ತಿದ್ದಂತೆ ಕಣ್ಣಲ್ಲಿ ನೀರು ಹರಿಯಿತು. ನಂತರ ನನ್ನಷ್ಟಕ್ಕೆ ನಾನೇ ಸಮಾಧಾನ ಮಾಡಿಕೊಂಡೆ.

ಹಾಸ್ಟೇಲಿನಲ್ಲಿ ಊಟ ದರಿದ್ರವಾಗಿತ್ತು. ನೀರು ಮಜ್ಜಿಗೆ-ತಿಳಿಸಾರು -ಪಲ್ಯ ಒಂದೂ ರುಚಿಯಿರಲಿಲ್ಲ. ಸ್ವಲ್ಪಕೂಡಾ ಊಟ ಮಾಡದೆ ಎದ್ದು ಹೋದೆ. ರೂಮಿಗೆ ಬಂದು ಅಮ್ಮ ಕಟ್ಟಿಕೊಟ್ಟಿದ್ದ ಕಜ್ಜಾಯವನ್ನು ತಿಂದೆ. ನಂತರ ಕಾಲೇಜ್ ಆಫೀಸಿಗೆ ಹೋಗಿ ಯಾವಾಗ ಪ್ರಾರಂಭವಾಗುತ್ತೋ ತರಗತಿಗಳು ಎಂದು ವಿಚಾರಿಸಿದೆ. ಮಧ್ಯಾಹ್ನ ರೂಮಿಗೆ ಹಿಂತಿರುಗಿದಾಗ ನಾನು ಕಟ್ಟಿಕೊಂಡು ಬಂದಿದ್ದ ತಿಂಡಿಗಳೆಲ್ಲಾ ಖಾಲಿಯಾಗಿ, ಅವಕ್ಕೆ ಸುತ್ತಿದ್ದ ಪೇಪರ್‌ಗಳು ನನ್ನನ್ನು ಅಣುಕಿಸುತ್ತಿದ್ದವು. ನನಗೆ ಅಸಹನೆ, ಕೋಪ ಬಂತು. ರಾತ್ರಿ ಊಟ ಮಾಡದೇನೇ ಮಲಗಿದೆ. ರೂಮ್ ಮೇಟ್ ಗಳಿಬ್ಬರೂ ಬರುವ ವೇಳೆಗೆ ರಾತ್ರಿ ಹನ್ನೊಂದು ಗಂಟೆಯಾಯಿತು. ಅತ್ತು ಅತ್ತು ಊದಿಕೊಂಡಿದ್ದ ನನ್ನ ಕಣ್ಣುಗಳನ್ನು ನೋಡಿ ಅವರಿಬ್ಬರೂ ಹೊಟ್ಟೆ ಹಿಡಿದುಕೊಂಡು ನಕ್ಕರು.

ಆ ರಾತ್ರಿ ನನಗೂ ನಿದ್ರೆ ಬರಲಿಲ್ಲ. ಹಸಿವು ಕೂಡಾ ಇಲ್ಲ.

ನನಗೆ ಸತ್ತು ಹೋಗಬೇಕೆನ್ನಿಸುತ್ತಿತ್ತು.

ಅವತ್ತು ಮನೆಯಿಂದ ಕಾಗದ ಬಂತು. ಒಂದೇ ಕವರಿನಲ್ಲಿ ಎಂಟು ಕಾಗದಗಳು—ಎಲ್ಲರೂ ಬಿಡಿ ಬಿಡಿಯಾಗಿ ಬರೆದಿದ್ದರು. ಅಮ್ಮ ಬೇಜಾರ್

ಮಾಡಿಕೊಳ್ಳಬೇಡವೆಂದು ಬರೆದಿದ್ದಳು. ಬೇಡವೆಂದರೆ ಹೊರಟು ಹೋಗುತ್ತಾ ಬೇಸರ ?

ಕವರ್ ಬಿಚ್ಚುತ್ತಿದ್ದಂತೆ ಎಲ್ಲಾ ಕಾಗದಗಳೂ ಕೆಳಗೆ ಬಿದ್ದವು. ಅದನ್ನು ಕಂಡು ನನ್ನ ರೂಂಮೇಟ್ಸ್ ನಕ್ಕಿದ್ದೇ ನಕ್ಕಿದ್ದು. ಇವರಿಗೆ ನಿಜವಾಗಿ ಸಂಬಂಧಗಳೆಂದರೆ ತಿಳಿಯದೆಂದು ಕೊಂಡಿದ್ದೇನೆ.

ನನ್ನ ರೂಂಮೇಟ್‌ಗಳ ಹೆಸರು ರಜನಿ, ಜಯಂತಿ.

ಜಯಂತಿಗೆ ಒಂದಿಷ್ಟೂ ಗಾಚಿಕೆಯಿಲ್ಲ. ನನ್ನ ಮುಂದೆಯೇ ಬಟ್ಟೆಗಳನ್ನು ಬದಲಾಯಿಸಿಕೊಳ್ಳುತ್ತಾಳೆ, ಬ್ರಾ ಹುಕ್ಸ್ ಹಾಕಿ ಕೊಳ್ಳುವಾಗ ಕೂಡಾ ಗೋಡೆಯ ಕಡೆಗೆ ತಿರುಗುವುದಿಲ್ಲ. ಮೊನ್ನೆಯಂತೂ ಸಿನಿಮಾಗೆ ಹೋಗಿ ಬಂದವಳು ಪೆಟ್ಟಿಕೋಟ್ ಬದಲಾಯಿಸಿಕೊಳ್ಳುವಾಗ ನನ್ನ ಮುಂದೆಯೇ ಬಿಚ್ಚಿದಾಗ ನಾನೇ ನೋಡಲಾರದೆ, ಗೋಡೆಯ ಕಡೆಗೆ ತಿರುಗಿ ಕಣ್ಮುಚ್ಚಿಕೊಂಡೆ.

ಮನೆಯಲ್ಲಿಯ ಎಲ್ಲರಿಗೂ ಬೇರೆ ಬೇರೆಯಾದಿ ಉತ್ತರ ಬರೆದು ಒಂದೇ ಕವರಿನಲ್ಲಿರಿಸಿ ಪೋಸ್ಟ್ ಮಾಡಿದೆ ಮಾರನೆ ದಿನ ಬೆಳಗ್ಗೆಯೇ. ಈಗ ಅನು ಮಾನ ಬರುತ್ತಿದೆ ಸ್ಟಾಂಪ್‌ಗಳನ್ನು ಸರಿಯಾಗಿ ಅಂಟಿಸಿದ್ದೆನೋ, ಇಲ್ಲವೋ ಎಂದು, ನಾಳೆ ಮತ್ತೆ ಬರೆಯಬೇಕು.

ಇವತ್ತು ಕೂಡಾ ಕಾಲೇಜಿಲ್ಲ. ಹನ್ನೊಂದು ಗಂಟೆಗೆ ಬಂದುಬಿಟ್ಟಿದ್ದೆ, ಏನೂ ತೋಚಲಿಲ್ಲ, ನನ್ನ ರೂಂಮೇಟ್‌ಗಳು ಯಾವಾಗಲೂ ರೂಮಿನಲ್ಲಿರುವುದಿಲ್ಲ. ಸದಾ ಬಿಜಿ, ಇಬ್ಬರು ಯುವಕರ ಸ್ಕೂಟರ್‌ಗಳ ಮೇಲೇರಿ ಹೋಗುತ್ತಿರುತ್ತಾರೆ.

ಸ್ವಲ್ಪ ಹೊತ್ತು ಏನಾದರೂ ಪುಸ್ತಕಗಳನ್ನು ಓದಿಕೊಳ್ಳೋಣವೆಂದರೆ ಯಾವ ಪುಸ್ತಕಗಳೂ ಇಲ್ಲ, ಜಯಂತಿಯ ಮಂಚದ ಕೆಳಗೆ ಒಂದು ಪುಸ್ತಕ ಕಂಡರೆ ಅದನ್ನು ಎಳೆದುಕೊಂಡೆ ಓದಲು, ಅದಕ್ಕೆ ಬೈಂಡ್ ಹಾಕಿತ್ತು.

ಪೇಜುಗಳನ್ನು ತಿರುವಿಹಾಕುತಾ, ಅಲ್ಲಿದ್ದ ಚಿತ್ರ ನೋಡುತ್ತಿದ್ದಂತೆಯೇ ಒಮ್ಮೆಗೆ ಹಾವನ್ನು ಕಂಡಂತಾಗಿ, ಚಕ್ಕನೆ ಪುಸ್ತಕವನ್ನು ಕೆಳಗೆ ಹಾಕಿದೆ, ನಿಜಕ್ಕೂ ಇಂತಹ ಪುಸ್ತಕಗಳು, ಚಿತ್ರಗಳು ಇರುತ್ತವೆಂದು ನನಗೆ ಗೊತ್ತಿರಲಿಲ್ಲ.

ಎದೆ ಬಡಿತ ತುಂಬಾ ಹೊತ್ತು ಕಡಿಮೆಯಾಗಲಿಲ್ಲ, ಪುಸ್ತಕವನ್ನು ಎತ್ತಿ ಮತ್ತೆ ಅದರ ಜಾಗದಲ್ಲಿಡಲು ಕೂಡಾ ಹೆದರಿಕೆಯಾಯಿತು,

ಸ್ವಲ್ಪ ಹೊತ್ತಿಗೆ ಭಯ ಕಡಿಮೆಯಾಯಿತು,

ಗಂಡಸರು–ಹೆಂಗಸರ ನಡುವೆ ಏನೋ ಇರುತ್ತದೆಂದು ಹತ್ತನೆ ಕ್ಲಾಸಿನಲ್ಲಿ ಓದುತ್ತಿದ್ದಾಗಲೇ ಅರುಂಧತಿ ಹೇಳಿದ್ದಳು, ಅವಳಿಗೂ ಸರಿಯಾಗಿ ಗೊತ್ತಿರಲಿಲ್ಲ, ಈ ಚಿತ್ರಗಳೂ ಹಾಗೆಯೇ ಇವೆ. ಮತ್ತೊಮ್ಮೆ ನೋಡಲಾ ?

ಅಮ್ಮಾ !

ನೋಡುತ್ತಿದ್ದಂತೆ ಯಾರಾದರೂ ಬಂದರೆ ? ಸ್ವಲ್ಪ ಹೊತ್ತು ಏನು ಮಾಡಬೇಕೆಂದೇ ತೋಚಲಿಲ್ಲ. ಹಾಗೆಯೇ ಕುಳಿತುಬಿಟ್ಟೆ.

ಬಾಗಿಲು ಹಾಕಿಕೊಂಡರೆ, ಜಯಂತಿಯಾಗಲೀ, ರಜನಿಯಾಗಲೀ ಬಂದರೆ ಏಕೆಂದು ಕೇಳುತ್ತಾರೆ.

ಹೊರಗೆ ಹೋಗಿ ನೋಡಿದೆ. ವರಾಂಡದಲ್ಲಿ ಯಾರೂ ಇಲ್ಲ.

ಕೈಗಳು ನಡುಗಿದವು. ಸರಸರನೆ ಚಿತ್ರಗಳನ್ನೆಲ್ಲಾ ನೋಡಿದೆ. ಎಲ್ಲಾ ಅರ್ಥವಾಯಿತು. ಆದರೆ ಅಸಹ್ಯವಾಯಿತು. ಅಬ್ಬಾ ಅಷ್ಟು ನಾಚಿಕೆಯಾಗೋಲ್ವಾ ? ನನ್ನ ಮುಖವೆಲ್ಲಾ ಬೆವರಿತು. ಕಾಲುಗಳು ಥರಥರನೆ ನಡುಗಲಾರಂಭಿಸಿದವು, ಆದರೂ ಇಂತಹ ಪುಸ್ತಕಗಳನ್ನು ಜಯಂತಿ ನೋಡುತ್ತಾಳಾ ? ಈ ವಿಷಯ ರಜನಿಗೆ ಗೊತ್ತಾ ? ಮತ್ತೊಮ್ಮೆ ಈ ಪುಸ್ತಕವನ್ನು ನೋಡಬೇಕೆನ್ನಿಸಿತು. ಕಷ್ಟಪಟ್ಟು ಅದನ್ನು ಮರೆಯಲೆತ್ನಿಸಿದೆ,

ಇವನ್ನೆಲ್ಲಾ ಡೈರಿಯಲ್ಲಿ ಬರೆಯುತ್ತಿದ್ದೀನಲ್ಲಾ. ನಾಳೆ ಬೆಳಗ್ಗೆ ಅಪ್ಪನಾಗಲೀ, ಅಮ್ಮನಾಗಲೀ ನೋಡಿದರೆ....?

ಊಹ್ಞೂ – ಇದೆಲ್ಲಾ ಚೆನ್ನಾಗಿರುವುದಿಲ್ಲ.

ಪುಸ್ತಕವನ್ನು ಅವಳ ಹಾಸಿಗೆಯಡಿಯಲ್ಲಿ ಇಟ್ಟುಬಿಟ್ಟೆ,

ರಾತ್ರಿ ಕನಸಿನಲ್ಲಿ (ನಂತರದ ಅಕ್ಷರಗಳು ಕಾಣಿಸದಂತೆ ಹೊಡೆದು ಹಾಕಲಾಗಿತ್ತು.)

ಕಿರಣ್ಮಯಿ ಪುಟ ತಿರುಗಿಸಿದಳು.

ಇವತ್ತು ಆಗಸ್ಟ್ ಹದಿನೈದು. ಮನೆಯಲ್ಲಿದ್ದಿದ್ದರೆ ಎಷ್ಟು ಸಂಭ್ರಮ ತಾತ ಫ್ರೀಡಂ ಫೈಟರ್ ಅಲ್ಲವಾ ? ಇದೇ ನಮಗೆ ದೊಡ್ಡ ಹಬ್ಬ ಅನುತ್ತಾರೆ ಅವರು. ಮನೆಯಲ್ಲಿ ಎಲ್ಲರೂ ತುಂಬಾ ಸಂತೋಷದಿಂದ ಹಬ್ಬ ಮಾಡಿ ಮಾಡಿಕೊಳ್ಳುತ್ತಿರುತ್ತಾರೆ. ನಾನು ಕೂಡ ಸ್ನಾನಮಾಡಿ ಹೊಸ ಬಟ್ಟೆ ಹಾಕಿಕೊಂಡಿದ್ದೇನೆ. ಜಯಂತಿಗೆ ನಗವೋ ನಗು. ಹಾಸ್ಟೆಲಿನಲ್ಲಿರುವ ಎಲ್ಲರಿಗೂ ಇದನ್ನು ಹೇಳಿ ಹೇಳಿ ನಗುತ್ತಿದ್ದಾಳೆ. ನಾನೇನು ತಪ್ಪು ಮಾಡಿದೆನೆಂದು ?

ಯಾವಾಗಲೋ ತಿಳಿಯದ ದಿನಾಂಕದಂದು ನರಕಾಸುರನನ್ನು ದೇವತೆ ಯೊಬ್ಬಳು ಕೊಂದಳೆಂದು ಇವತ್ತಿಗೂ ಹಬ್ಬ ಮಾಡಿಕೊಳ್ಳುತ್ತಾರೆ. ಸುಮಾರು ತೊಂಭತ್ತು ವರ್ಷಗಳ ಕಾಲ ಯುದ್ಧಮಾಡಿ ನಮಗೆ ಸ್ವಾತಂತ್ರ್ಯ ಬಂದ ದಿನವನ್ನು ಹಬ್ಬವೆಂದೇ ತಿಳಿಯುವುದಿಲ್ಲ. ನನಗೆ ಈ ವಿಷಯದಲ್ಲಿ ತುಂಬಾ ಬೇಸರವಾಯಿತು. ಇವೆಲ್ಲಕ್ಕಿಂತ ತಂಗಿ ಹಾಡಿದ್ದ ಸ್ವಾತಂತ್ರ್ಯ ಗೀತೆಯ ಕ್ಯಾಸೆಟ್ಟನ್ನು ಕೇಳುತ್ತಿದ್ದರೆ ಮತ್ತಷ್ಟು ದುಃಖವಾಯಿತು. ಎಷ್ಟೊಂದು ಬಾವುಟಗಳನ್ನು ಮಾಡುತ್ತಿದ್ದೆವು. ಮಕ್ಕಳಿಗೆ ಆಟ. ಪಾಟಗಳ ಸ್ಪರ್ಧೆ ಏರ್ಪಡಿಸುತ್ತಿದ್ದೆವು.

ಆ ದಿನಗಳಿನ್ನು ಮರಳಿ ಬರುವುದಿಲ್ಲವಾ ? ಕಾಲೇಜು ಎಷ್ಟು ಚೆನ್ನಾ ಗಿತ್ತೋ ಹಾಸ್ಟೆಲ್ ಅಷ್ಟೇ ಅಧ್ವಾನವಾಗಿತ್ತು. ನನಗೊಂದೂ ಅರ್ಥವಾಗು ತ್ತಿಲ್ಲ. ರೂಮಿನಲ್ಲಿ ಮೂರು ಮಂಚಗಳಿವೆ. ಆದರೂ ರಜನಿ, ಜಯಂತಿ ಒಂದೇ ಮಂಚದ ಮೇಲೆ ಮಲಗುತ್ತಾರೆ ಏಕೆ ? ರಾತ್ರಿ ತುಂಬಾ ಹೊತ್ತಿನ ವರೆಗೂ ಮಾತನಾಡಿಕೊಳ್ಳುತ್ತಲೇ ಇರುತ್ತಾರೆ ಕೂಡಾ....

ಎರಡು ದಿನಗಳ ಕಾಲ ಜ್ವರ.

ನಾನಿನ್ನು ಈ ಹಾಸ್ಟೆಲಿನಲ್ಲಿರಲಾರೆ. ಪ್ರತಿ ಕ್ಷಣವೂ ಮನೆಯವರ ನೆನಪು ಕಾಡುತ್ತಿದೆ. ನನಗೆ ಮನೆಯಲ್ಲಿ ಜ್ವರ ಬಂದಾಗ ಯಾರಾದರೊಬ್ಬರು

ಪಕ್ಕದಲ್ಲೇ ಕುಳಿತು ಮಾತನಾಡುತ್ತಿದ್ದರು. ಏನು ಬೇಕೆಂದರೂ ಕೂಡಲೇ ತಂದಿಡುತ್ತಿದ್ದರು. ಇಲ್ಲಿ ನನ್ನನ್ನು ವಿಚಾರಿಸುವವರು ಯಾರೂ ಇಲ್ಲ. ಇವತ್ತು ರೇಖಿ ರೂಮಿಗೆ ಬಂದರೆ ಜಯಂತಿ ಬೈದು ಕಳುಹಿಸಿದ್ದಳು. ಇವರಿಗೇಕೆ ನನ್ನ ಮೇಲೆ ಇಷ್ಟು ಸೇಡು ? ನಾನೇನು ತಪ್ಪು ಮಾಡಿದ್ದೇನೆಂದು ? ನನಗೆ ಅಮ್ಮ ಬೇಕು. ನನ್ನವರನ್ನೆಲ್ಲಾ ನೋಡಬೇಕು. ನನಗೆ ಅಳು ಬರುತ್ತಿದೆ. ಅಪ್ಪ ನನ್ನನ್ನೇಕೆ ಈ ನರಕದಲ್ಲಿ ತಳ್ಳಿ ಹೋಗಿದ್ದಾರೆ ?

[ನಂತರದ ನಾಲ್ಕು ಪುಟಗಳು ಖಾಲಿಯಾಗಿದ್ದವು.]

o o o

ತುಂಬಾ ದಿನಗಳ ತಂತರ ಆ ದಿನ ತುಂಬಾ ನಕ್ಕಿದ್ದೆ. ಸಂತೋಷದಿಂದ ನಕ್ಕಿದ್ದೆ. ಎಷ್ಟು ಚೆನ್ನಾಗಿನ್ತು ದಿನ. ಬೆಳಗ್ಗೆಯೇ ಡೈನಿಂಗ್ ಹಾಲ್‌ಗೆ ಹೋದೆ. ಎಂದಿನಂತೆಯೇ ನಮಗೆ ಬ್ರೆಡ್, ಇಡ್ಲಿಗಳ ಜೊತೆಗೆ ನೀರು ಸಾಂಬಾರ್ ಕೊಟ್ಟರು. ಜಯಂತಿ ಗುಂಪಿನವರು ಬ್ರೆಡ್, ಆಮ್ಲೆಟ್.... ಚಟ್ನಿಪುಡಿ, ಕೊಬ್ಬರಿ ಚಟ್ನಿಗಳೊಡನೆ ಇಡ್ಲಿ ತಿನ್ನುತ್ತಿದ್ದಾರೆ. ನಮ್ಮನ್ನು ನೋಡಿ ಬೇರರ್‌ಗೆ ಏನೋ ಹೇಳಿದಳು. ಬೇರರ್ ನಗುತ್ತಿದ್ದ. ನನಗೆ ಅವಮಾನದಿಂದ ಅಳು ಬಂತು. ಅಷ್ಟರಲ್ಲಿ ಹಿಂದಿನಿಂದ 'ವೆಂಕಟ್ರಾವ್ ಹೀಗೆ ಬಾ" ಎಂದು ಅಧಿಕಾರಯೀತವಾದಿ ಒಂದು ಕಂಠ ಕೇಳಿಸಿತು.

ವೆಯಿಟರ್ ಹುಡುಗ ಆ ಕಡೆ ಹೋದ. ನನ್ನ ಹಿಂದೆ ರಮಣಿ ಕುಳಿತಿದ್ದಳು.

"ಆ ಹುಡುಗಿಗೆ ಕೂಡಾ ಆಮ್ಲೆಟ್ ಕೊಡು." ನನ್ನನ್ನು ತೋರಿಸುತ್ತಾ ಹೇಳಿದಳು.

ಅವಳು ಏನು ಹೇಳುತ್ತಿದ್ದಾಳೆಂದೇ ನನಗರ್ಥವಾಗಲಿಲ್ಲ. ಅಷ್ಟರಲ್ಲಿ ರಮಣಿ ನನ್ನ ಬಳಿಗೆ ಬಂದಳು. "ನಿನ್ನ ಹೆಸರು ಲಕ್ಷ್ಮಿ ಅಲ್ಲವೆ?" ಕೇಳಿದಳು.

ತಲೆಯಾಡಿಸಿದೆ, ಅಷ್ಟರಲ್ಲಿ ವೆಂಕಟ್ರಾವ್ ಆಮ್ಲೆಟ್ ತಂದಿಟ್ಟ. ನನ್ನ ಮುಂದಿದ್ದ ಬಟ್ಟಲನ್ನು ಅವನ ಕಡೆಗೆ ತಳ್ಳುತ್ತಾ "ಇದೇನು ಸಾಂಬಾರಾ ? ಪಾತ್ರೆ ತೊಳೆದ ನೀರಾ ?" ಎಂದು ಗದರಿಸಿದಳು. ಅವನು ತಲೆತಗ್ಗಿಸಿ ನಿಂತ, "ಹೋಗು ಒಳ್ಳೆ ಚಟ್ನಿ, ಸಾಂಬಾರ್ ತಗೊಂಡು ಬಾ" ಎಂದು ಕಿರಚಿದಳು, ಅವನು ಭಯ, ಭಕ್ತಿಯಿಂದ ಹೊರಟು ಹೋದ.

ನಾನು ಓರೆಯಾಗಿ ಜಯಂತಿ, ರಜನಿಯರ ಕಡೆಗೆ ನೋಡಿದೆ. ಅವರ ಮುಖಗಳು ಸುಟ್ಟ ಬಾಣಲೆಯಂತಿದ್ದವು.

ರಮಣಿ ನನ್ನ ಬಳಿಯಲ್ಲೇ ಕುಳಿತು ವಿವರಗಳನ್ನು ಕೇಳುತ್ತಿದ್ದಳು. ನನಗೇನೋ ಎವರೆಸ್ಟ್ ಶಿಖರವನ್ನು ಏರಿದಂತಿತ್ತು. ಜಯಂತಿ, ರಜನಿ ಏನೋ ಕೆಲಸವಿರುವವರಂತೆ ಅಲ್ಲಿಂದ ಎದ್ದು ಹೊರಟುಹೋದರು.

"ಇವತ್ತಿನಿಂದ ನೀನು ನನ್ನ ಕಡೆಯವಳು" ರಮಣಿ ಹೇಳಿದಳು. ನನಗೆ ತುಂಬಾ ಸಂತೋಷವಾಯಿತು.

ಒಂದೇ ದಿನದಲ್ಲಿ ರಮಣಿ ತನಗೆ ಒಳ್ಳೆ ಫ್ರೆಂಡಾದಳು.

ರಮಣಿ ನನ್ನೊಡನೆ ಮಾತನಾಡುವುದಕ್ಕೆ ಪ್ರಾರಂಭಿಸಿದಾಗಿನಿಂದ ರೂಂಮೇಟ್‌ಗಳು ನನ್ನ ಬಗ್ಗೆ ಹಾಸ್ಯ ಮಾಡಿ ನಗುವುದು ಕಡಿಮೆಯಾಯಿತು, ಮೇಲಾಗಿ ನಾನಿದ್ದರೆ ಏನೋ ಕೆಲಸವಿರುವವರಂತೆ ಹೊರಗೆ ಹೊರಟು ಬಿಡುತ್ತಿದ್ದರು. ಮೆಸ್‌ನಲ್ಲಿ ಕೂಡಾ ವೆಂಕಟ್ರಾವ್ ಒಳ್ಳೆ ಊಟ ಕೊಡುತ್ತಿದ್ದ.

ಇವತ್ತು ರಮಣಿ ನನ್ನ ಜೊತೆ ರೂಮಿಗೆ ಬಂದಳು. ಆಗ ರಜನಿ, ಜಯಂತಿ ಒಂದೇ ಮಂಚದ ಮೇಲೆ ಮಲಗಿಕೊಂಡು ಮಾತನಾಡಿಕೊಳ್ಳುತ್ತಿದ್ದರು.

ರಮಣಿ ಒಳಗೆ ಬರುತ್ತಿದ್ದಂತೆ ಎದ್ದು ಕುಳಿತರು.

ಸ್ವಲ್ಪ ಹೊತ್ತು ಸಾಮಾನ್ಯವಾಗಿ ಮಾತನಾಡಿದ ನಂತರ ಜಯಂತಿಯ ಕಡೆಗೆ ತಿರುಗಿ, "ಹೌದೂ ಈ ರೂಮಿನಲ್ಲಿ ಇಬ್ಬರೇ ತಾನೆ ಇರಬೇಕು,

ಮೂರನೆ ಮಂಚ ಎಲ್ಲಿಂದ ಬಂತು ?" ಎಂದು ಕೇಳಿದಳು. ಆಗಲೇ ನನಗೆ ತಿಳಿದದ್ದು ಜಯಂತಿಯದು ಈ ರೂಮ್ ಅಲ್ಲವೆಂದು.

ಜಯಂತಿಯ ಮುಖ ಬಾಡಿ ಹೋಯಿತು. ರಜನಿ ಏನೋ ಗೊಣಗಿದಳು. ಈ ರೂಮಿನಲ್ಲಿ ಇಬ್ಬರೇ ಇರಬೇಕೆಂಬ ಅನುಮಾನ ನನಗಿಷ್ಟು ಕಾಲ ಬಂದೇ ಇರಲಿಲ್ಲ. ಎಷ್ಟು ಮೋಸ.... ಈಗ ಅವರಿಬ್ಬರೂ ಕೈ ಕೈ ಹೊಸಕಿಕೊಂಡು ಕುಳಿತ್ತಿದ್ದರೆ ನನಗೆ ತುಂಬಾ ಸಂತೋಷವಾಯಿತು. 'ಇಬ್ಬರೂ ಒಂದೇ ಮಂಚದ ಮೇಲೆ ಮಲಗುತ್ತಾರೆ' ಎಂದು ಕೊನೆ ತುಟಿಯವರೆಗೂ ಬಂದ ಮಾತನ್ನು ತಡೆದುಕೊಂಡೆ ಕಷ್ಟದಿಂದ.

ರಾತ್ರಿಯೇ ಜಯಂತಿ ರೂಮ್ ಖಾಲಿ ಮಾಡಿ ಹೊರಟು ಹೋದಳು.

ಜಯಂತಿ ಹೋದ ಮೇಲೆ ರಜನಿ ನನ್ನೊಡನೆ ಚೆನ್ನಾಗಿಯೇ ಇದ್ದಳು. ಆದರೆ ಹೆಚ್ಚಾಗಿ ರೂಮಿನಲ್ಲಿರುತ್ತಿರಲಿಲ್ಲ.

ಒಬ್ಬಳೇ.

ಸಂಜೆಯ ವೇಳೆ ಕಾಲ ಬೇಗ ಕಳೆದು ಹೋಗುತ್ತಿತ್ತು. ಕಿಟಕಿ ತೆರೆದ ಕುಳಿತರೆ ಹೊರಗೆ ತೋಟ. ಹುಡುಗರು.... ಹುಡುಗಿಯರು

ಗಿಡಗಳ ಹಿಂದೆ, ಪೊದೆಗಳ ಮರೆಯಲ್ಲಿ, ಸ್ಕೂಟರ್‌ಗಳ ಸೀಟುಗಳ ಮೇಲೆ ಕುಳಿತು ಗಂಟೆ ಗಟ್ಟಲೆ ಏನು ಮಾತಾಡಿಕೊಳ್ಳುತ್ತಿದ್ದಾರಪ್ಪಾ ಇವರು? ಒಂದು ಮಾತ್ರ ನಿಜ, ಎಲ್ಲರೂ ನಗುತ್ತಲೇ ಇರುತ್ತಾರೆ – ಮಾತನಾಡಿಕೊಳ್ಳುತ್ತಿರುವಷ್ಟು ಹೊತ್ತೂ! ಸಣ್ಣ ಸಣ್ಣ ಕಲ್ಲುಗಳಿಂದ ಹೊಡೆದುಕೊಳ್ಳುತ್ತಿರುತ್ತಾರೆ. ನನ್ನೊಡನೆ ಸೇರಿದ ಜ್ಯೂನಿಯರ್ಸ್‌ಗೆ ಕೂಡಾ ಫ್ರೆಂಡ್‌ಗಳಾದರು. ಅವರಿಗೆಲ್ಲಾ ಮನೆಯ ಯೋಚನೆ ಹೋಗಿರುವಂತಿತ್ತು.

ನಾನೇನು ಮಾಡಲಿ ?

ನನಗೆ ಅಮ್ಮನ ನೆನಪಾಗುತ್ತದೆ.

ಅಂದು ಅಮ್ಮ ಹುಟ್ಟಿದ ದಿನ, ಮೊದಲೆ ಗ್ರೀಟಿಂಗ್ಸ್ ಕಳಿಸಿದ್ದೆ. ಹುಟ್ಟು ಹಬ್ಬದ ದಿನ ಅಮ್ಮನನ್ನು ನಾವು ಅಡಿಗೆ ಮನೆಗೆ ಸೇರಿಸುತ್ತಿರಲಿಲ್ಲ. ಹಿಟ್ಟು ನಾನೇ ರುಬ್ಬುತ್ತಿದ್ದೆ.... ನಾನೆಷ್ಟು ಮಿಸ್ ಆಗುತ್ತಿದ್ದೇನೆಂದು ನೆನೆಸಿಕೊಂಡರೇನೇ ಅಳು ಬರುತ್ತದೆ, ಹೇಗೆ ಕಂಡು ಹಿಡಿದಳೋ ರಮಣಿ ಬಂದು ಕೇಳಿದಳು, ಹೇಳಿದೆ, "ಅದಕ್ಕೇನು ? ನಾವೂ ಸೆಲಬ್ರೇಟ್ ಮಾಡೋಣ ಬಿಡು" ಎನ್ನುತ್ತಾ ಹೊರಗೆ ಕರೆದೊಯ್ದಳು ನನ್ನನ್ನು.

ಹೋಟೆಲಿಗೆ ಹೋದೆವು. ತುಂಬಾ ಬೆಲೆಬಾಳುವ ಹೋಟೆಲ್. ಒಳಗೆ ತುಂಬಾ ತಣ್ಣಗಿತ್ತು. ಅಲ್ಲಿ ಹೇಗೆ ಬಿಹೇವ್ ಮಾಡಬೇಕು, ಹೇಗೆ ತಿನ್ನಬೇಕೆಂಬುದನ್ನು ವಿವರಿಸಿ ಹೇಳಿದಳು. ಮುನ್ನೂರು ಬಿಲ್ ಆಯಿತು. ಮು....ನ್ನೂ....ರು !

ಮೊಟ್ಟ ಮೊದಲನೆ ಸಲ ಅಂತಹ ಭಾರೀ ಹೋಟೆಲ್ಲಿಗೆ ಹೋಗಿದ್ದು.

ಕಿರಣ್ಮಯಿ ಮತ್ತೆ ಕೆಲವು ಪುಟಗಳನ್ನು ತಿರುವಿ ಹಾಕಿದಳು, ಎಲ್ಲಾ ರಮಣಿಯ ಬಗ್ಗೆಯೇ ಇತ್ತು. ಆ ಸ್ನೇಹಕ್ಕೆ ಕರಗಿ ಹೋಗುತ್ತಾ ಪುಟಗಟ್ಟಲೆ ಬರೆದಿದ್ದಳು,

ಈ ನಡುವೆ ಅವಳ ತಾತ ಹೋದರು, ಅವಳು ನೊಂದು ಕೊಳ್ಳುತ್ತಾಳೆಂದು ಕೂಡಲೇ ತಿಳಿಸಿರಲಿಲ್ಲ. ಅವತ್ತೊಂದು ದಿನ ಅವರಪ್ಪ ಬಂದು ಈ ಸುದ್ದಿಯನ್ನು ತಿಳಿಸಿ ಹೋಗಿದ್ದರು.

ಆ ದಿನವೆಲ್ಲಾ ಅವಳು ಅಳುತ್ತಲೇ ಇದ್ದಳು, ರಮಣಿಯೇ ಸಮಾಧಾನಗೊಳಿಸಿ ಸಿನಿಮಾಗೆ ಕರೆದೊಯ್ದಿದ್ದಳು.

ಥಿಯೇಟರ್ ಬಳಿ ಮತ್ತಿಬ್ಬರು ಹುಡುಗರು ಸೇರಿದರು,

ಅಲ್ಲೇ ರಮಣಿ ವೆಂಕಟ್ರಾಜುವನ್ನು ಪರಿಚಯಮಾಡಿದಳು, ಸಿನೆಮಾ ಆದ ಮೇಲೆ ಡಿನ್ನರ್ ಅಂದರು.

ಎಲ್ಲರೂ ಹೋಟೆಲ್ಲಿಗೆ ಹೋದರು,

ವೆಂಕಟ್ರಾಜುವಿನಂತಹ ಕ್ರಿಕೆಟರ್ ಜೊತೆ ಊಟ ಮಾಡುತ್ತಿರುವುದಾ

ತುಂಬಾ ಥ್ರಿಲ್ಲಿಂಗ್ ಆಗಿತ್ತು. ಅವನು ಶ್ರೇಷ್ಠ ಆಟಗಾರನಲ್ಲದಿದ್ದರೂ ರಣಜಿ ಪ್ಲೇಯರ್ ಅಲ್ಲವಾ !

ತಮ್ಮ ಈಗ ನನ್ನೊಡನೆ ಇದ್ದಿದ್ದರೆ ಎಷ್ಟು ಸಂತೋಷ ಪಡುತ್ತಿದ್ದನೋ ಏನೋ—ಎಂದು ಬರೆದುಕೊಂಡಿದ್ದಳು.

ರಾಜಾರಾವ್ ಜೊತೆ ಪರಿಚಯವಾದದ್ದೂ ಆಗಲೇ.

ಹೊಸ ಹೊಸ ಪರಿಚಯಗಳು........ ಹೊಸ ಪ್ರಪಂಚ ತುಂಬಾ ಥ್ರಿಲ್‌ಗಳು.

ತಾತನ ಮರಣದ ಬಗ್ಗೆ ಹೆಚ್ಚಿಗೆ ಇರಲಿಲ್ಲ. ಆ ಪೇಜಿನಲ್ಲಿ.

ಕಿರಣ್ಮಯಿ ಡೈರಿಯನ್ನು ಮುಚ್ಚಿಟ್ಟು ಯೋಚಿಸಲಾರಂಭಿಸಿದಳು. ರಾಯಣ್ಣ ಇನ್ನೂ ಅವಳ ಬದುಕಿನಲ್ಲಿ ಎಂಟರ್ ಆಗಿರಲಿಲ್ಲ. ಅಷ್ಟರಲ್ಲಿ ಉಳಿದ ಪುಟಗಳನ್ನು ಓದುವಷ್ಟರಲ್ಲಿ ಲಕ್ಷ್ಮಿಯ ಬಗ್ಗೆ ಸಂಪೂರ್ಣವಾಗಿ ತಿಳಿದು ಹೋಯಿತು ಅವಳಿಗೆ.

ಹದಿನೇಳು ವರ್ಷದ ಹುಡುಗಿ ! ಆತ್ಮೀಯತೆ ತುಂಬಿದ ಸಂಸಾರದಲ್ಲಿ ವಿಶೇಷವಾಗಿ ಬೆಳೆದಿದ್ದಳು. ಮುಗ್ಧ ವಾತಾವರಣಕ್ಕೆ ಹೊಂದಿಕೊಂಡು ಬಂದಿದ್ದ ಅವಳ ಬದುಕಿನಲ್ಲಿ ಪ್ರತಿ ಸಣ್ಣ ಘಟನೆಯೂ ಕೂಡಾ ತನ್ನವರೊಡನೆ ದಟ್ಟವಾದ ಪೊದೆಯಂತೆ ಬೆಳೆದು ಬಂದಿತ್ತು.

ಆ ಸಮಯದಲ್ಲಿ ಹಾಸ್ಟೆಲಿಗೆ ಬಂದಿದ್ದಳು.

ಸಮುದ್ರದ ನಡುವೆಯ ನಾವೆಯಂತಾಗಿತ್ತು ಅವಳ ಪರಿಸ್ಥಿತಿ. ಕಿಟಕಿ ತೆರೆದರೆ ಆಹ್ವಾನಿಸುವಂತೆ ಹೊಸ ಪ್ರಪಂಚ !

ಏಕಾಂಗಿತನದಿಂದ ನೊಂದಿದ್ದ ಅವಳಿಗೆ, ತನಗೆ ತಾನೇ ಧೈರ್ಯ ಹೇಳಿ ಕೊಳ್ಳುವಂತಹ ವ್ಯಕ್ತಿತ್ವ ಕೂಡಾ ಇರಲಿಲ್ಲ.

ಆ ಸಮಯದಲ್ಲಿ ರಮಣಿಯೊಡನೆ ಪರಿಚಯ — ಮೊದಲು ಕೇವಲ ಧೈರ್ಯಕ್ಕಾಗಿ ನಂತರ ರಮಣಿಯ ಮೂಲಕ ಮತ್ತಷ್ಟು ಪರಿಚಯಗಳು ಮೆಸ್‌ನಲ್ಲಿ ಒಳ್ಳೆಯ ಊಟ – ಜೊತೆಯಾ ಹಾಸ್ಟೆಲ್ ಹುಡುಗಿಯರ ಕಣ್ಣಳಲ್ಲಿ

ತನ್ನ ಬಗ್ಗೆ ಹೆದರಿಕೆ. ಗೌರವ–ಬೆಲೆ ಬಾಳುವ ಹೊಸ ಪ್ರಪಂಚ–ತುಂಬಾ ಮೇಲಕ್ಕೇರಿದ್ದೇನೆಂಬ ಭಾವನೆ–ಮನೆಯಕಡೆ ಕಡಿಮೆಯಾದ ಆಕರ್ಷಣೆ–ಇಷ್ಟು ದಿನ ಓದುಕಿನಲ್ಲಿ ಎಷ್ಟೊಂದು ಮಿಸ್ ಮಾಡಿಕೊಂಡಿದ್ದೇನೆಂಬ ಚಿಂತೆ–ಇನ್ನೂ ಏನನ್ನೋ ಅನುಭವಿಸಬೇಕೆಂಬ ಆಸೆ–ಕೂಪಸ್ಥದಿಂದ ಮೇಲೆ ಹಾರಿದ ಮಂಡೂಕ....

ಈಗ ಲಕ್ಷ್ಮಿಗೆ ಸಂತೋಷದ ಪ್ರಪಂಚ ಕಂಡಿತು.

ರಮಣಿ 'ಐಡಿಯಲ್ ಷಿ' ಆದಳು.

ದಿನಗಳು ವೇಗವಾಗಿ ಕಳೆದು ಬಿಡುತ್ತಿದ್ದವು.

ಅದೇ ಸಮಯದಲ್ಲಿ ಪರಿಚಯವಾದ ರಾಯಣ್ಣ.

ತನ್ನ ಗಂಡನ ವಿಷಯ ಡೈರಿಯಲ್ಲಿ ಬರುತ್ತಿದ್ದಂತೆಯೇ ಕಿರಣ್ಮಯಿ ನೆಟ್ಟಗಾಗಿ, ಎಚ್ಚರದಿಂದ ಓದಲು ಪ್ರಾರಂಭಿಸಿದಳು.

ಇವತ್ತು ಕ್ರಿಕೆಟ್ ಮ್ಯಾಚ್‌ಗೆ ಕರೆದೊಯ್ದಳು ರಮಣಿ. ವೆಂಕಟ್ರಾಜು ಪಾಸ್‌ಗಳನ್ನು ಕೊಟ್ಟಿದ್ದಾನಂತೆ. ಅವನೇ ಸ್ವತಃ ಬಂದು ವಿ.ಐ.ಪಿ. ಸ್ಟಾಂಡಿನಲ್ಲಿ ಕೂರಿಸಿ ಹೋಗಿದ್ದ. ರಣಜಿ ಟ್ರೋಫಿ ನೋಡಬೇಕೆಂಬ ತುಂಬಾ ದಿನಗಳ ಆಸೆ ಇವತ್ತು ನೆರವೇರಲಿತ್ತು.

ಇವತ್ತಿನ ಮ್ಯಾಚಿನಲ್ಲಿ ರಾಯಣ್ಣ ಇದ್ದಾನಂತೆ! ರಾಯಣ್ಣನನ್ನು ನೋಡುತ್ತಿದ್ದೇನೆಂದರೆ ತುಂಬಾ ರೋಮಾಂಚನ ಆಗುತ್ತಿದೆ. ಆರು ತಿಂಗಳ ಹಿಂದೆ ನಾನೂ, ತಮ್ಮ ಟಿ. ವಿ. ಯಲ್ಲಿ ನೋಡಿ ಇವನು ಶ್ರೇಷ್ಠ ಆಟಗಾರನಾಗುತ್ತಾನೆಂದುಕೊಂಡಿದ್ದೆವು.

ನಿಜವಾಗಿಯೂ ರಾಯಣ್ಣ ಇವತ್ತು ತುಂಬಾ ಚೆನ್ನಾಗಿ ಆಡಿದ್ದಾನೆ. ನನ್ನ ಫೇವರಿಟ್ ಆಗಿಬಿಟ್ಟ. ಅವನ ಒಳಗೆ ಹೋಗಿ ಆಟೋಗ್ರಾಫ್ ಪಡೆದು ಬಂದೆ. ಪೆನ್ನನ್ನು ಜೇಬಿನಲ್ಲಿರಿಸಿಕೊಂಡ. ಕೇಳಿದಾಗ ಅಭಿಮಾನದಿಂದ

ನೋಡಿದ, ತಾತನ ಕೊನೆಯ ಕಾಣಿಕೆ ಅಂದೆ. ಬದುಕಿನಲ್ಲಿ ಮರೆಯಲಾರದ ದಿನವಿದು. ಈ ದಿನವನ್ನು ಚರಿತ್ರೆಯ ಫೈಲಿನಲ್ಲಿ ನೋಟ್ ಮಾಡುವಂತೆ ಅಪ್ಪನಿಗೆ ತಿಳಿಸಬೇಕು,

ಅಂದುಕೊಳ್ಳುತ್ತಿದ್ದೇನಾಗಲೀ ಇವನ್ನೆಲ್ಲಾ ಅಪ್ಪನಿಗೆ ಹೇಗೆ ತಿಳಿಸಲಿ ? ನಾನು ತಪ್ಪು ಮಾಡುತ್ತಿಲ್ಲವಾದರೂ ಅಪ್ಪ ಇದನ್ನೆಲ್ಲಾ ತಪ್ಪಾಗಿ ಭಾವಿಸಿದರೆ !

ನಾನು ಹೀಗೆ ಹೋಟಲ್‌ಗಳಿಗೂ, ಕ್ರಿಕೆಟ್ ಮ್ಯಾಚ್‌ಗಳಿಗೂ ತಿರುಗುತ್ತಿದ್ದೇನೆಂದು ತಿಳಿದರೆ ಅವರು ನೊಂದುಕೊಳ್ಳುತ್ತಾರೆ. ಹಾಗಾಗಿ ಹೇಳದಿರುವುದೇ ಒಳ್ಳೆಯದು,

ಡೈರಿಯಲ್ಲಿ ಕೂಡಾ ಇನ್ನು ಮೇಲೆ ಇವನ್ನೆಲ್ಲಾ ಬರೆಯಕೂಡದು, ಮನೆಯಲ್ಲಿ ಯಾರಾದರೂ ಓದಿದರೆ ಚೆನ್ನಾಗಿರುವುದಿಲ್ಲ.

ಕಿರಣ್ಮಯಿ ಓದುವುದನ್ನು ನಿಲ್ಲಿಸಿದಳು, ಯೋಚಿಸುತ್ತಾ ಕಣ್ಣು ಮುಚ್ಚಿಕೊಂಡಳು, ತನ್ನವರಿಲ್ಲದೆ ತಾನಿಲ್ಲವೆಂಬ (ಒಂದು ಕಾಲದ) ಭಾವನೆಯಿಂದ ತನ್ನವರಿಗೆ ತಿಳಿಯದೆ ರಹಸ್ಯಗಳನ್ನು ಬಚ್ಚಿಟ್ಟುಕೊಳ್ಳುವ ಸ್ಥಿತಿಗೆ ಲಕ್ಷ್ಮಿ ಬಂದಿದ್ದಾಳೆಂದು ಆ ಡೈರಿಯಲ್ಲಿ ಸ್ಪಷ್ಟವಾಗಿ ತಿಳಿಯುತ್ತದೆ.

ಅನಂತರದ ಪುಟಗಳಲ್ಲಿ ಲಕ್ಷ್ಮಿ ತನ್ನಲ್ಲಾಗುತ್ತಿದ್ದ ಮಾನಸಿಕ ವೇದನೆ, ಪರಸ್ಪರ ವಿರುದ್ಧ ಭಾವನೆಗಳ ಘರ್ಷಣೆಯ ಬಗ್ಗೆ ಬರೆದಿದ್ದಳು.

ಕನ್‌ಫ್ಯೂಷನ್ !

ಆ ವಯಸ್ಸಿನಲ್ಲಿರುವ ಕನ್‌ಫ್ಯೂಷನ್ ಅವಳಲ್ಲಿ ಸ್ಪಷ್ಟವಾಗಿ ಕಾಣುತ್ತಿತು !!

ಗಂಡಸಿಗೆ ಸಿಗರೇಟ್ ಅಭ್ಯಾಸವಾಗುವ ವಯಸ್ಸು, ಹುಡುಗಿಗೆ ಪ್ರಪಂಚವೆಲ್ಲಾ ಪ್ರೇಮಮಯವಾಗಿ ಕಾಣುವ ವಯಸ್ಸು ಒಂದೇ.

ಗಂಡಿಗೆ ಸಿಗರೇಟ್ ಅಭ್ಯಾಸವಾದರೆ ಶ್ವಾಸಕೋಶಗಳಿಗೆ ಪೆಟ್ಟು, ಹೆಣ್ಣಿಗೆ ಪ್ರೀತಿ ಅಭ್ಯಾಸವಾದರೆ ಹೃದಯಕ್ಕೆ ಪೆಟ್ಟು.

ಆದರೆ ಈ ನೀತಿ ವಾಕ್ಯಗಳೆಲ್ಲಾ ಕೇವಲ ಓದಲು ಮಾತ್ರವೇ ವಿನಹ ಈ ಪ್ರಪಂಚದಲ್ಲಿ ಯಾರೂ ಇವು ತಮಗಾಗಿ ಅಂದುಕೊಳ್ಳುವುದಿಲ್ಲ. ತಮ್ಮ ಪ್ರೇಮವೇ ಶ್ರೇಷ್ಠ, ಇತರರದಂತೆ ಅಲ್ಲ. ಹುಡುಗನೊಬ್ಬನಿಗೆ ಪ್ರೀತಿ ಫಲಿಸದೆ ಬೇರೊಬ್ಬರನ್ನು ಮಾಡಿಕೊಳ್ಳಬೇಕಾಗಿ ಬಂದರೆ—'ಅದೊಂದು ಮರೆಯಲಾರದ ಗತಜೀವನದ ಅನುಭವ.'

ಬೇರೊಬ್ಬರು ಆ ಕೆಲಸ ಮಾಡಿದರೆ....! ಉಪಯೋಗಿಸಿಕೊಳ್ಳುವಷ್ಟು ದಿನ ಮಜಾ ಮಾಡಿ ಬಿಸಾಕಿದಾನೋ.

ತಾನು ಪ್ರೀತಿಸಿದರೆ ರೋಮಿಯೋ—

ಬೇರೆಯವರು ಪ್ರೀತಿಸಿದರೆ-ಅವನೊಬ್ಬ ರೋಡ್‌ಸೈಡ್ ರೋಮಿಯೋ ಇದು ತುಂಬಾ ಸಾಮಾನ್ಯವಾದ ಸೈಕಾಲಜಿ.

ಲಕ್ಷ್ಮಿ ಸರಿಯಾಗಿ ಅಂತಹ ಸ್ಟೇಜಿನಲ್ಲೇ ಇದ್ದಾಳೆ—ತಾನೇನೂ ತಪ್ಪು ಮಾಡಿಲ್ಲವೆಂದು ಪದೇ ಪದೇ ಡೈರಿಯಲ್ಲಿ ಬರದುಕೊಳ್ಳುವುದರಲ್ಲೇ ಅವಳ ಮಾನಸಿಕ ಪರಿಸ್ಥಿತಿ ಅರ್ಥವಾಗುತ್ತಿದೆ. ಈಗವಳ ಫೇವರಿಟ್ ಆಕ್ಟರ್ ಸಲ್ಮಾನ್ ಖಾನ್.

ಒಂದು ದಿನ ಕಾಲೇಜಿಗೆ ಚಕ್ಕರ್ ಹೊಡೆದು ಸಿನಿಮಾಗೆ ಹೋದಳು ಅವತ್ತು ತುಂಬಾ ನೋವು ಪಟ್ಟಿದ್ದಳು. ಮನೆಗೆ ತಿಂಗಳಿಗೊಂದಾದರೂ ಕಾಗದ ಬರೆಯಲಿಲ್ಲವೆಂದು ಮತ್ತೊಂದು ಕಡೆ ನೋವು ತೋಡಿಕೊಂಡಿದ್ದಳು.

ಹೀಗೆ ವಿರುದ್ಧ ಭಾವನೆಗಳ ಘರ್ಷಣೆಯಲ್ಲಿ ತೊಳಲಾಡುತ್ತಿದ್ದ ಲಕ್ಷ್ಮಿಗೆ ಮತ್ತೊಂದು ಕಡೆಯಿಂದ ಇನ್ನೊಂದು 'ತಲೆನೋವು' ಬಂತು.

ಆ ತಲೆನೋವಿನ ಹೆಸರು—'ರಮಣಿ'.

ರಮಣಿಯ ಮೇಲಿನ ಗೌರವದಿಂದ ಅವಳನ್ನು ಒಬ್ಬ ದೇವತೆಯಂತೆ ಪೂಜಿಸುವ ಲಕ್ಷ್ಮಿಗೆ ರಮಣಿ ಎಲ್ಲಾ ಹುಡುಗಿಯರಂತೆಯೇ ಎಂದೂ, ಅವಳಲ್ಲೂ ಮೈನಸ್ ಪಾಯಿಂಟ್‌ಗಳಿವೆಯೆಂದೂ, ತನಗೆ ಕಾಣುವ ರೂಪವಲ್ಲದೆ ಮತ್ತೊಂದು ರೂಪ ಅವಳಲ್ಲಿದೆಯೆಂದು ಗಮನಿಸುವ ವೇಳೆಗೆ

ಅದೊಂದು ದೊಡ್ಡ ಷಾಕ್ ಆಗಿತ್ತು. ಆ ನಂಬಲಾರದ ನಿಜವನ್ನು ಅವಳ ಮನಸ್ಸು ಜೀರ್ಣಿಸಿಕೊಳ್ಳಲಾರದೆ ಹೋಯಿತು. ತುಂಬಾ ಜನಕ್ಕೆ ಹಾಗೇ ಡಾಕ್ಟರ್ ಫಾಸ್ಟರ್ಸ್‌ಗಳು ಎಲ್ಲೋ ನೆಲಮಾಳಿಗೆಯಲ್ಲಿಲ್ಲವೆಂದೂ ತಮ್ಮ ನಡುವೆಯೇ ತಿರುಗುತ್ತಿರುತ್ತಾರೆಂದೂ ಗೊತ್ತಿಲ್ಲ.

o o o

"ಇವತ್ತು ರಮಣಿ ಕೂಡಾ ವ್ಹಿಸ್ಕಿ ಕುಡಿದಳು. ನನ್ನನ್ನೂ ಕೂಡಾ ರುಚಿ ನೋಡುವಂತೆ ಬಲವಂತಪಡಿಸಿದಳು ನನಗೆ ಭಯವಾಯಿತು. ಬೇಡ ವೆಂದೆ ರಮಣಿಗೂ ಕುಡಿಯಬೇಡವೆಂದೆ. ಹುಚ್ಚಿಯನ್ನು ನೋಡಿದಂತೆ ನೋಡಿ ನಕ್ಕಳು. ಇವತ್ತು ರಾಜಾರಾವ್ ಹುಟ್ಟಿದ ದಿನ. ಅದಕ್ಕೆಂದು ಕುಡಿದರು. ಹೆಂಗಸರು ಕುಡಿಯುವುದನ್ನು ನಾನು ನೋಡಿದ್ದು ಇದೇ ಮೊದಲ ಸಲ, ಇದನ್ನು ಕೂಡಾ ಚರಿತ್ರೆಯ ಫೈಲಿಗೆ ಸೇರಿಸಲು ಅಪ್ಪನಿಗೆ ಬರೆಯಬೇಕೆಂದು ಕೊಂಡೆ. ಕುಡಿದರೂ ಅವರೆಲ್ಲಾ ಸರಿಯಾಗೇ ಇದ್ದರು. ಎಂದಿನಂತೆಯೇ ಮಾತನಾಡುತ್ತಾರೆ. 'ಬೆಲೆ ಬಾಳುವ ಡ್ರಿಂಕ್ಸ್ ಸ್ವಲ್ಪ ರುಚಿ ನೋಡಿದರೆ ತಪ್ಪಿಲ್ಲ, ಸ್ವಲ್ಪ ಕುಡಿದರೆ ಪ್ರಳಯವಾಗುವುದಿಲ್ಲ' ನಗುತ್ತಾ ಹೇಳಿದಳು ರಮಣಿ. ಏನೋ ನನಗೆ ಭಯ, ಚಿಂತೆ, ಅಸಹ್ಯ, ನನ್ನ ಮೇಲೆ ನನಗೇ ಕೋಪ. ನನ್ನನ್ನು ಅರ್ಥಮಾಡಿಕೊಂಡಿರುವುದು ರಾಯಣ್ಣ ಒಬ್ಬನೇ. ಎಚ್ಚರಿಕೆಯಿಂದ ಕರೆತಂದು ಹಾಸ್ಟೆಲಿಗೆ ಬಿಟ್ಟ. ನನ್ನ ಮೂಡ್ ಚೆನ್ನಾಗಿಲ್ಲ ವೆಂದು ಹೊರಟುಹೋದ. ನನಗೆ ನಿಜಕ್ಕೂ ಸತ್ತು ಹೋಗಬೇಕೆಂದಿದೆ.

ಕಿರಣ್ಮಯಿ ಡೈರಿ ಓದುವುದನ್ನು ಪೂರ್ತಿ ಮಾಡಿದಳು.

ಅವಳಿಗೆ ಒಂದೇ ಅನ್ನಿಸಿತು,

ಈ ಪ್ರಪಂಚದಲ್ಲೆಲ್ಲಾ ದುರದೃಷ್ಟವಂತ ಯಾರೆಂದರೆ, ತಾನು ಬದುಕು ತ್ತಿರುವ ಜೀವನ ವಿಧಾನದ ಬಗ್ಗೆ ಅಸಂತೃಪ್ತಿ ಇರುವವನು!

ಅನೂರಾಧ ಡೈರಿಯನ್ನು ತೆಗೆದುಕೊಂಡು ಹೋಗಿ ಸೂಟ್‌ಕೇಸಿ ನಲ್ಲಿಟ್ಟು ಬರುತ್ತಿರುವಾಗ ಕಿರಣ್ಮಯಿ ಕೇಳಿದಳು—"ಲಕ್ಷ್ಮಿ ಬರೆದಿರುವ ಈ ವರ್ಷದ ಡೈರಿ ಸಿಕ್ಕಿತಾ ?"

"ಹಿಂದಿನ ಡಿಸೆಂಬರ್‌ನಲ್ಲಿ ಅವರ ತಂದೆ ಬಂದಿದ್ದಾಗ ಹೊಸ ಡೈರಿ ಕೊಟ್ಟರೆಂದು ನನಗೆ ಹೇಳಿದ್ದಳು, ಆದರೆ ಎಷ್ಟು ಹುಡುಕಿದರೂ ನನಗೆ ಸಿಗಲಿಲ್ಲ...."

"ಲಕ್ಷ್ಮಿ ಕನ್ಯೆಯಲ್ಲವೆಂದು ಪೋಸ್ಟ್ ಮಾರ್ಟಂ ರಿಪೋರ್ಟ್ ತಿಳಿಸುತ್ತದೆ, ನಿನ್ನ ಅನುಮಾನ ಯಾರ ಮೇಲೆ ?"

"ಆ ವಿಷಯವೇ ನನಗರ್ಥವಾಗುತ್ತಿಲ್ಲ ಕಿರಣ್ಮಯಿ ! ನಾನು ಊರಿಗೆ ಹೋಗುವವರೆಗೂ ಲಕ್ಷ್ಮಿ ಕನ್ಯೆಯೇ ! ಆ ವಿಷಯದಲ್ಲಿ ನನಗೆ ನಂಬಿಕೆಯಿದೆ. ನಾನು ಹೋದ ಮೇಲೆ ನಡೆದಿರಬೇಕು, ಅದುವರೆವಿಗೇ ರಾಯಣ್ಣ ಲಕ್ಷ್ಮಿ ನಾಲ್ಕೈದು ತಿಂಗಳ ಒಳ್ಳೆಯ ಸ್ನೇಹಿತರು. ಅದುವರೆವಿಗೂ ಇಲ್ಲದಿದ್ದುದು-ಮದುವೆ ಸೆಟಲ್ ಆದ ಮೇಲೆ ಏಕೆ ದುಡುಕಿದ ಅನ್ನುವುದೇ ಪ್ರಶ್ನೆ."

"ಇಂತಹುದಕ್ಕೆಲ್ಲಾ ಮಾಡಿಕೊಳ್ಳುವುದಕ್ಕೆ ಮುಂಚೆಯೇ ಪ್ಲಾನ್ ಮಾಡಿಕೊಳ್ಳುವ ಅವಶ್ಯಕತೆಯಿಲ್ಲ, ಅವಕಾಶ ಬರಬೇಕು, ಅಷ್ಟೆ"

"ಅವಕಾಶಗಳು ಬರಲೇಬೇಕೆಂದರೆ ಇಂತಹ ಅವಕಾಶಗಳು ಅವರ ಮಧ್ಯೆ ಸಾಕಷ್ಟು ಸಲ ಬಂದಿತ್ತು ಕಿರಣ್ಮಯಿ ! ಆದರೂ ರಾಯಣ್ಣ ಮಿತಿ ಮೀರಿರಲಿಲ್ಲವೆಂಬ ವಿಷಯ ಲಕ್ಷ್ಮಿ ತನ್ನ ಡೈರಿಯಲ್ಲೇ ಬರೆದುಕೊಂಡಿದ್ದಾಳಲ್ಲ."

"ಇನ್ನು ತನಗೆ ಹೇಗೂ ಮದುವೆಯಾಗಿ ಬಿಡುತ್ತದೆಂದೂ, ಒಂದು ಛಾನ್ಸ್ ಉಪಯೋಗಿಸಿಕೊಂಡಿದ್ದಾನಾ ?"

ಕಿರಣ್ಮಯಿಗೆ ಈ ಟಾಪಿಕ್ ತುಂಬಾ ಅಸಹ್ಯವಾಗಿಯೂ, ಅಸೀಸಿಯಾಗಿಯೂ ಇತ್ತು. ಮಾತು ಬದಲಾಯಿಸುತ್ತಾ—"ಹದಿಮೂರನೆ ನಂಬರ್ ರೂಮಿನ ಬೀಗದ ಕೈ ಯಾರ ಬಳಿಯಿದೆ ?" ಎಂದು ಕೇಳಿದಳು.

"ನನ್ನ ಬಳಿಯೇ ಇದೆ"—ಅನೂರಾಧ ಹೇಳಿದಳು....ರಜನಿ ಆ ರೂಮಿನಿಂದ ಹೋದ ಮೇಲೆ ನಾನೇ ತಾನೆ ಅಲ್ಲಿ ಸೇರಿದ್ದು."

"ರಜನಿ ಏಕೆ ಆ ರೂಮನ್ನು ಖಾಲಿ ಮಾಡಿದಳು ?"

"ಅವಳು ತುಂಬಾ ಕಷ್ಟಪಟ್ಟು ಜಯಂತಿ ರೂಮ್‌ಗೆ ಟ್ರಾನ್ಸ್‌ಫರ್ ಮಾಡಿಸಿಕೊಂಡಳು. ಎಲ್ಲಾ ರೆಕ್ಮಂಡೇಷನ್ನೂ ಉಪಯೋಗಿಸಿದಳು," ಅನೂರಾಧಳ ಮುಖದಲ್ಲಿ ಒಂದು ವ್ಯಂಗ್ಯ ನಗೆ. ಕಿರಣ್ಮಯಿ ಕೂಡಾ ಅರ್ಥವಾದಂತೆ ನಕ್ಕಳು.

"ಇವನ್ನೆಲ್ಲಾ ನೀವೇಕೆ ಕೇಳುತ್ತಿದ್ದೀರಿ ಕಿರಣ್ಮಯಿ ? ಆ ಬೀಗದ ಕೈ ನಿಮಗೇಕೆ ಬೇಕು ?"

"ಲಕ್ಷ್ಮಿಯ ಸಾಮಾನುಗಳನ್ನು ಒಮ್ಮೆ ನೋಡೋಣವೆಂದು."

"ಆ ಡೈರಿ ಇಲ್ಲ. ಎಲ್ಲರೂ ಹುಡುಕಿದೆವು."

"ಅದಕ್ಕಾಗಿ ಅಲ್ಲ. ಲಕ್ಷ್ಮಿ ಬಳಸಿದ ವಸ್ತುಗಳು, ಪುಸ್ತಕಗಳನ್ನು ನೋಡಿದರೆ ಅವಳ ಸೈಕಾಲಜಿ ಸ್ವಲ್ಪ ಅರ್ಥವಾಗುತ್ತದೇನೋ ಎಂದು."

"ಅದೆಲ್ಲಾ ಯಾತಕ್ಕೆ ಬಿಡಿ ಕಿರಣ್ಮಯಿ ಅನವಶ್ಯಕವಾಗಿ ತಲೆ ಕೆಡಿಸಿ ಕೊಳ್ಳುತ್ತಿದ್ದೀ."

ಡೈರಿಗಳೇ ಹೇಳದಿದ್ದುದು ವಸ್ತುಗಳು ಹೇಳುತ್ತಾ ?" ನಿರ್ಲಿಪ್ತವಾಗಿ ಹೇಳಿದಳು ಅನೂರಾಧ.

ಕಿರಣ್ಮಯಿ ಅವಳೆಡೆಗೆ ಸೂಕ್ಷ್ಮವಾಗಿ ನೋಡಿದಳು.

'ಅನೂರಾಧಳಿಗೆ ತಾನು ಆ ವಸ್ತುಗಳನ್ನು ನೋಡಲು ಏಕೆ ಇಷ್ಟವಿಲ್ಲ?' ಮನಸ್ಸಿನಲ್ಲಿಯೇ ಅಂದುಕೊಂಡಳು.

ಭಾರತ-ಪಾಕೀಸ್ತಾನಗಳ ನಡುವೆ ಎರಡನೆ ಕ್ರಿಕೆಟ್ ಟೆಸ್ಟ್ ಅಂದೇ ಪ್ರಾರಂಭವಾಯಿತು. ತುಂಬಾ ಆಶ್ಚರ್ಯಕರ ರೀತಿಯಲ್ಲಿ ಕ್ಲಬ್ ರೂಮ್ ಅಂದು ಹುಡುಗಿಯರಿಂದ ತುಂಬಿತ್ತು. ಅವರಲ್ಲಿ ತುಂಬಾ ಜನ ರಾಯಣ್ಣ ನನ್ನು ನೋಡಲು ಬಂದವರೆಂದು ಕಿರಣ್ಮಯಿ ಊಹಿಸಿದಳು. ಒಂದು ಪಕ್ಕ ದಲ್ಲಿ ಕುಳಿತು ಎಲ್ಲರನ್ನೂ ಗಮನಿಸುತ್ತಿದ್ದಳು.

ತಾನೇ ರಾಯಣ್ಣನ ಹೆಂಡತಿಯೆಂದು ಈಗ ಇಲ್ಲಿ ತಿಳಿದರೆ ಹೇಗಿರುತ್ತತೆ? ತನ್ನ ಆಲೋಚನೆ ತನಗೇ ನಗು ತರಿಸಿತು.

....ಮ್ಯಾಚ್ ಪ್ರಾರಂಭವಾದ ಹತ್ತು ನಿಮಿಷಕ್ಕೆ ರಾಯಣ್ಣ ಟಿ. ವಿ. ಸ್ಕ್ರೀನ್ ಮೇಲೆ ಬಂದ. ಕ್ಲೋಸಪ್‌ನಲ್ಲಿ ತೋರಿಸಿದರು.

"ಅಗೋ....ಅವನೇ" ಯಾರೋ ಕೂಗಿದರು. ಎಲ್ಲರೂ ಕುತೂಹಲ ದಿಂದ ನೋಡಿದರು.

"ಒಳ್ಳೆ ಪರ್ಸನಾಲಿಟೀನೇ—"

"ನಿಜವಾಗಿ ನೋಡೋಕೆ ಇನ್ನೂ ಚೆನ್ನಾಗಿದ್ದಾನೆ, ನಾನು ಎರಡು ಸಲ ನೋಡಿದ್ದೀನೆ." ಕಪಿಲ್ ಬೌಲ್ ಮಾಡುತ್ತಿದ್ದಾನೆ. ಇನ್ನೊಂದು ಬ್ಯಾಚ್ ಹುಡುಗಿಯರು ಬಂದರು ಹಾಲಿನೊಳಗೆ.

"ಅಯ್ಯೋ ಆಟ ಪ್ರಾರಂಭವಾಗಿಬಿಟ್ಟಿತಾ? ಕಪಿಲ್ ಬೌಲಿಂಗಾ? ರಾಯಣ್ಣ ಆದ್ರೆ ನೋಡಿ ಹೊರಟು ಹೋಗೋಣ ಅಂದ್ಕೊಂಡಿದ್ದೆ ಕಣೆ—" ಅಂದಳೊಬ್ಬಳು.

"ಈಗ ತಾನೆ ಕ್ಲೋಸಪ್‌ನಲ್ಲಿ ತೋರಿಸಿದರು, ಕವರ್ಸ್‌ನಲ್ಲಿದ್ದಾನೆ ನೋಡುತ್ತಿರು ಇನ್ನೊಮ್ಮೆ ತೋರಿಸುತ್ತಾರೆ ಆ ದುಷ್ಟನನ್ನು—" ಹುಡುಗಿಯೊಬ್ಬಳು ಹೇಳಿದಳು.

ಎಲ್ಲರೂ ನಕ್ಕರು.

ಕಿರಣ್ಮಯಿ ನೊಂದುಕೊಂಡಳು—'ಈ ರಾಯಣ್ಣನ ಹೆಸರೇನಾದರೂ ಒಬ್ಬ ಅಪರಾಧಿಯೆಂದು ಪೇಪರ್‌ಗಳಲ್ಲಿ ಬರೆದಿದ್ದರೆ, ಈ ಕಾಮೆಂಟ್ಸ್ ಎಲ್ಲಾ ಬೇರೆ ರೀತಿಯಿರುತ್ತಿತ್ತು.'

'ರಾಯಣ್ಣ ಅಲ್ಲ—ರಾವಣನಂತಿದ್ದಾನೆ' ಎಂದ ಹುಡುಗಿಯೇ 'ಭಲೇ ಇದ್ದಾನಲ್ಲಾ' ಎನ್ನುತ್ತಿದ್ದಳು.

ಅಷ್ಟರಲ್ಲಿ ಮತ್ತೊಬ್ಬ ಹುಡುಗಿ ಎದ್ದು, "ಪ್ರಮುಖರನ್ನು ಮೇಲ್ನೋಟಕ್ಕೆ ಮೆಚ್ಚಿ ಮೋಸ ಹೋಗಬೇಡಿ ಟ್ರಿಂಗ್ ಟ್ರೆಂಡ್." ಅಂದಳು ಅಡ್ವರ್ಟೈಸ್‌ನಂತೆ. ಕೂಡಲೇ ಮತ್ತೊಬ್ಬ ಹುಡುಗಿ ನಾಟಕೀಯವಾಗಿ, "ಯಾವ ಪ್ರಮುಖನ ಚರಿತ್ರೆ ನೋಡಿದರೂ ಅವಕಾಶ ಸಿಗದಿದ್ದರೆ ಸಜ್ಜನರೇ" ಕವಿತೆ ಹಾಡಿದಳು.

ಕಿರಣ್ಮಯಿ ಅವರನ್ನು ಮೌನವಾಗಿ ಗಮನಿಸುತ್ತಿದ್ದಳು, ಈ ಮಾತುಗಳೆಲ್ಲಾ ಅವರ ಹೃದಯಾಂತರಾಳದಿಂದ ಬಂದದ್ದಲ್ಲ. ಒಬ್ಬರು ಏನೋ ಹೇಳಿದಾಗ ತಾವೂ ಕಾಮೆಂಟ್ ಮಾಡದಿದ್ದರೆ ಪಕ್ಕದಲ್ಲಿರುವ ಮತ್ತೊಬ್ಬರು 'ಏನೇ, ನೀನೇನೂ ಮಾತನಾಡುವುದಿಲ್ಲವೆಂದರೆ ನಿನಗೆ ಅವನು ಮಾಡಿರುವ ಕೆಲಸ ಸರಿ ಎನ್ನಿಸುತ್ತಿದೆ ಅಂತಾಯ್ತು.' ಅನ್ನುತಾರೇನೋ ಎಂಬ ಭಯ,

ಮಾಶ್ ಮೆಂಟಾಲಿಟಿ ಬೇರೆ, ಮಾಸ್‌ನಿಂದ ಹೊರಬಂದು ನಿಂತ ಮನುಷ್ಯನ ಮನಸ್ಸತ್ವ ಬೇರೆ. ರಾಯಣ್ಣ ಸೆಂಚುರಿ ಹೊಡೆದಾಗ ಚಪ್ಪಾಳೆ ತಟ್ಟಿದ ಕೈಗಳು ಇವೇ. ಬಿಡಿಬಿಡಿಯಾಗಿ ಮಾತನಾಡಬೇಕಾದರೆ ಎಲ್ಲರೂ ಅವನೊಡನೆ ನಗುನಗುತ್ತಲೇ ಮಾತನಾಡುತ್ತಾರೆ.

ರಾಯಣ್ಣ ಮತ್ತೆ ಟಿ. ವಿ. ಸ್ಕ್ರೀನ್ ಮೇಲೆ ಬಂದ. ಯಾರೋ ಹುಡುಗಿ ಅವನನ್ನು ಪರೀಕ್ಷಿಸುವಂತೆ ನೋಡಿ ಹೇಳಿದಳು.—"ಆ ರಾಯಣ್ಣ ಎಸ್. ಸಿ. ಅಂತೆ."

ಲಕ್ಷ್ಮಿ ಹೇಗೆ ಅವನ ಪ್ರೇಮಪಾಶದಲ್ಲಿ ಸಿಲುಕಿದಳೋ ?

"ಛೇ, ಛೇ ಹಾಗೆ ಮಾತನಾಡಬೇಡ. ನಮ್ಮ ಹಾಸ್ಟೆಲಿನಲ್ಲಿ ಎಷ್ಟು ಜನ ಹುಡುಗಿಯರಿಲ್ಲ, ಹೇಳದಿದ್ದರೆ ಅವರ ಜಾತಿ ಯಾರಿಗೂ ತಿಳಿಯುವುದಿಲ್ಲ ಜಾತಿಯನ್ನು ಎತ್ತಿ ಆಡಬೇಡ" ಕೋಪಿಸಿಕೊಂಡಳು ಮತ್ತೊಬ್ಬಳು.

ಕೆಲವು ಹಾಸ್ಟೆಲ್‌ಗಳಲ್ಲಿ ಬಿ.ಸಿ. ಎಸ್.ಸಿ. ಎಸ್.ಟಿ. ಗಳಿಗೆ ಕನ್ಸೆಷನ್ ರೇಟ್‌ಗಳು, ಒಂದು ಕಿಲೋ ಸಕ್ಕರೆ, ಹಾಲು ಫ್ರೀಯಾಗಿ ಕೊಡುತ್ತಾರೆ. ಆದರೂ ಯಾರೂ, ಯಾವಾಗಲೂ ಅವರ ಮೇಲೆ ಕಾಮೆಂಟ್ ಮಾಡುವುದಿಲ್ಲ ಆದರೆ ಈ ನಡುವೆ ರಾಜಕೀಯ ನಾಯಕರ ಹೀನ ಚರ್ಯೆಗಳಿಂದ ಇಂತಹ ಬೇಧಗಳು ಹೊರಬರುತ್ತಿವೆ. ಟಾಪಿಕ್ ರಾಜಕೀಯದೆಡೆಗೆ ತಿರುಗಿತು.

"ಇವತ್ತು ನಿಮ್ಮ ಹೀರೋ ಬರುತ್ತಿದ್ದಾರಂತೆ." ಅವರ ಲೆಕ್ಚರರನ್ನು ಉದ್ದೇಶಿಸಿ ಹೇಳಿದಳು. ಆ ಲೆಕ್ಚರರ್ ಒಂದು ವರ್ಗಕ್ಕೆ ವಿಶೇಷವಾದ ಪ್ರಚಾರ ಮಾಡುತ್ತಿರುತ್ತಾರೆ, ರಾಜಕೀಯ ಭಾಷಣಗಳನ್ನು ಮಾಡುತ್ತಿರುತ್ತಾನೆ.

"ಎಲ್ಲಿಗೆ ?"

"ನಮ್ಮ ಹಾಸ್ಟೆಲ್‌ಗೆ ಎ.ಬಿ.ವಿ.ಪಿ. ಮೀಟಿಂಗ್ ಇದೆಯಂತೆ ಮಧ್ಯಾಹ್ನ"

"ಹಾದಾದರೆ ನೋಡಬೇಕು, ಪಾಠ ಹೇಳುತ್ತಿರುವಾಗಲೇ ಅವನ ಮುಖ ನೋಡಿಕೊಂಡು ಕುಳಿತುಬಿಡುತ್ತಿ. ಈಗ ರಾಜಕೀಯ ಲೆಕ್ಚರ್ ಕೊಟ್ಟರೂ ಅಷ್ಟೇನಾ ?"

"ಹೌದು. ನೋಡ್ತೀನಿ ತಪ್ಪೇನು ? ಆ ಲೆಕ್ಚರರ್ ಅಂದರೆ ನನಗಿಷ್ಟ. ಅಷ್ಟು ಚೆನ್ನಾಗಿದ್ದಾನಾದ್ದರಿಂದ ನೋಡುತ್ತೇನೆ." ಹೇಳಿದಳು ಆ ಹುಡುಗಿ ಆಕ್ರೋಷದಿಂದ.

ಹಾಸ್ಟೆಲಿನಲ್ಲಿ ಆಗಾಗ ಪಾರ್ಟಿ ಮೀಟಿಂಗ್‌ಗಳು ನಡೆಯುತ್ತಿರುತ್ತವೆ, ಪಿ.ಡಿ.ಎಸ್.ಯು., ಎ.ಬಿ.ವಿ.ಪಿ, ಗಳ ಮೀಟಿಂಗ್‌ಗಳು ನಡೆಯುತ್ತಿರುತ್ತವೆ. ಹುಡುಗಿಯರು ತುಂಬಾ ಜನ ಪಾರ್ಟಿಗಳ ಅಭಿಮಾನಿಗಳಿದ್ದಾರೆ, ಮೀಟಿಂಗ್‌ಗಳಿಗೆ ಅಟೆಂಡ್ ಆಗುತ್ತಾರಾಗಲೀ ಪಬ್ಲಿಕ್ ಆಗಿ ನಾನಿಂತಹ ಪಾರ್ಟಿ ಎಂದು ಹೇಳಿಕೊಳ್ಳುವುದಿಲ್ಲ.

ಅಷ್ಟರಲ್ಲಿ ಟಿ. ವಿ. ನೋಡುತ್ತಿದ್ದ ಯಾರೋ........"ಅಗೋ ಬಂದ ನೋಡಿ" ಎಂದು ಕಿರುಚಿದರು.

ರಾಯಣ್ಣ ಬೌಲ್ ಮಾಡಲು ಬಂದ, ಕಿರಣ್ಮಯಿ ಅವನನ್ನೇ ಎವೆಯಿಕ್ಕದೆ ನೋಡಿದಳು.

"ಈಗ ನೋಡು ಕ್ಲಿಯರ್ರಾಗಿ ಕಾಣುತ್ತಿದ್ದಾನೆ,".

"ಅವನೇನಾ ರಾಯಣ್ಣ ? ಅಲ್ಲ ಅಂದ್ಕೋತೀನಿ," ಅನುಮಾನದಿಂದ ಹೇಳಿದಳು,

ಮತ್ತೊಬ್ಬಳು,

"ಅಲ್ಲ....ಅವನೇ ನಾನು ಚೆನ್ನಾಗಿ ನೋಡಿದ್ದೀನಿ."

"ಅಲ್ಲಾ ಕಣೇ ! ನೀನು ಹೇಳೇ....ಅವನಾ ರಾಯಣ್ಣ ?" ಆ ಹುಡುಗಿ ಹೇಳಿದಳು,

ಕಿರಣ್ಮಯಿಯಲ್ಲಿ ಯಾವುದೋ ಉದ್ವೇಗ, ಏನೋ ನಡೆಯಲಿದೆಯೆಂದು ಮನಸ್ಸು ಹೇಳುತ್ತಿತ್ತು,

"ಅವನೇ....ಅವನೇ...." ತುಂಬಾ ಸ್ವರಗಳು ಒಮ್ಮೆಗೇ ಹೇಳಿದವು,

"ಆದರೆ ಲಕ್ಷ್ಮಿಯೊಡನೆ ಹೋಟೆಲಿನಲ್ಲಿ ನೋಡಿದ್ದು ನಾನು ಇವನನಲ್ಲ" ಅನುಮಾನದಿಂದ ಹೇಳಿದಳೊಬ್ಬಳು, ಕಿರಣ್ಮಯಿಯ ಹೃದಯ ಬಡಿತ ಏರಿತು. ಅಂಗೈ ಬೆವರ ತೊಡಗಿತು.

"ನೀನು ಯಾವಾಗ ನೋಡಿದ್ದಿ ?" ಯಾರೋ ಕೇಳಿದರು,

"ಲಕ್ಷ್ಮಿಯೊಡನೆ ಹೋಟೆಲ್ ಮೋಹಿನಿಯಲ್ಲಿ ನೋಡಿದ್ದೆ. ಒಂದು ಸಲ ಅಲ್ಲ ಎರಡು ಸಲ ನೋಡಿದ್ದೆ. ರಾಯಣ್ಣ—ಅಂದ್ರೆ ಈಗ ಟಿ. ವಿ. ನೋಡ್ತಿದೀವಲ್ಲಾ–ಇದೇ ವ್ಯಕ್ತಿ ಜೊತೆ ಒಳ್ಳೆ ಹೀರೋ ಥರ ಇದ್ದಾನೆ." ಉತ್ಸಾಹದಿಂದ ಹೇಳಿದಳು.

"ಅಂದರೆ ಲಕ್ಷ್ಮಿಗೂ ಕೂಡಾ ತುಂಬಾ ಜನ ಬಾಯ್‌ಫ್ರೆಂಡ್ಸ್ ಇದ್ದರು ಅಂತಾಯ್ತು."

"ಅದೇನೋ ಗೊತ್ತಿಲ್ಲ. ಆದ್ರೆ ಆಗ ಅವರಿಬ್ಬರನ್ನು ನೋಡಿದಾಗ ತುಂಬಾ ಕ್ಲೋಸಾಗಿದಾರೆ ಅನ್ನಿಸ್ತು."

"ಏನೋ ದೇವರೇ–ಯಾರ ಹಿಂದೆ ಏನೇನು ಕಥೆಗಳು ಇವೆಯೋ ಅರ್ಥವೇ ಆಗ್ತಾಯಿಲ್ಲ." ಎನ್ನುತ್ತಾ ಗುಂಪಾಗಿ ಅವರು ಹೊರಗೆ ಹೊರಟು ಹೋದರು. ಕಿರಣ್ಮಯಿ ಆ ಹುಡುಗಿಯನ್ನು ಗುರುತಿಸಿಕೊಂಡಳು. ಮೇಲಿನ ರೂಮಿನಲ್ಲಿರುತ್ತಾಳೆ ಹೆಸರು ಪ್ರೀತಿ.

ಒಮ್ಮೆಗೇ ಎಲ್ಲರೂ ನಿರ್ಗಮಿಸಿದ್ದರಿಂದ ಆ ರೂಮಿನಲ್ಲಿ ನಿಶ್ಶಬ್ದ ಆವರಿಸಿತು. ಕಿರಣ್ಮಯಿ ಅಲ್ಲಿಂದ ಲೈಬ್ರರಿಗೆ ಸರಸರನೆ ನಡೆದಳು. ಅವಳ ಮನಸ್ಸು ಉದ್ವೇಗಗೊಂಡಿತ್ತು. ಯಾವುದೋ ಬಳ್ಳಿ ಸಿಕ್ಕಿದ ಭಾವನೆ.

ಅವಳು ಪೇಪರ್‌ಗಳನ್ನೆಲ್ಲಾ ಸರಸರನೆ ಹುಡುಕಿದಳು. ಸುಮಾರು ಅರ್ಧ ಗಂಟೆ ಹುಡುಕಿದ ನಂತರ ಅವಳಿಗೆ ಆ ಫೋಟೋ ಸಿಕ್ಕಿತು. ಲೋಕಲ್ ಪೇಪರ್‌ನಲ್ಲಿ ಕೊನೆಯ ಪುಟದಲ್ಲಿ 'ಆಂಧ್ರಪ್ರದೇಶದಿಂದ ಭಾರತ ಕ್ರಿಕೆಟ್ ತಂಡಕ್ಕೆ ಆಶಾಕಿರಣ' ಎಂಬ ಹೆಡ್ಡಿಂಗ್ ಕೆಳಗಿತ್ತು ಆ ಫೋಟೋ. ಸುಮಾರು ನಾಲ್ಕು ಕಾಲಂಗಳ ಲೇಖನ. ನೋಡುತ್ತಿದ್ದರೆ ಅದು ಹಣ ಕೊಟ್ಟು ಬರೆಸಿಕೊಂಡಂತಿತ್ತು.

ಆ ಪೇಪರ್ ಹಿಡಿದುಕೊಂಡು ಅವಳು ವೇಗವಾಗಿ ಲೈಬ್ರರಿಯಿಂದ ಹಾಸ್ಟೆಲ್‌ಗೆ ಬಂದಳು. ಆ ಪೇಪರ್‌ನಲ್ಲಿಯ ಫೋಟೋ ವೆಂಕಟ್ರಾಜುದು !

ಅವಳು ಮೆಟ್ಟಿಲುಗಳನ್ನು ಹತ್ತಿ ಮೇಲಿನ ಅಂತಸ್ತಿಗೆ ಹೋದಳು. ಆ ರೂಮಿನಲ್ಲಿ ಪ್ರೀತಿಯೊಬ್ಬಳೇ ಇದ್ದಳು. ಒಳಗೆ ಬರುತ್ತಿದ್ದ ಕಿರಣ್ಮಯಿಯ ಕಡೆಗೆ ಪ್ರೀತಿ ಆಶ್ಚರ್ಯದಿಂದ ನೋಡಿದಳು. ಕಿರಣ್ಮಯಿ ತನ್ನ ಉದ್ವೇಗವನ್ನು ಮೇಲಕ್ಕೆ ತೋರ್ಪಡಿಸಿಕೊಳ್ಳದೆ,

"ನೀವು ಲಕ್ಷ್ಮಿಯೊಡನೆ ನೋಡಿದ ವ್ಯಕ್ತಿ ಇವನೇನಾ ?" ಅಂದಳು. ವೆಂಕಟ್ರಾಜುವಿನ ಫೋಟೋ ತೋರಿಸುತ್ತಾ.

ಆ ಹುಡುಗಿ ಅದಕ್ಕೆ ಉತ್ತರಿಸದೆ "ನೀವೇಕೆ ಕೇಳುತ್ತಿದ್ದೀರಿ ?" ಎಂದಳು.

"ಇವನು ನಮಗೆ ದೂರದ ಸಂಬಂಧಿ ಅದಕ್ಕೆಂದು ಕುತೂಹಲ ಅಷ್ಟೆ."

ಪ್ರೀತಿ ಆ ಫೋಟೋ ಕಡೆಗೆ ತದೇಕ ದೃಷ್ಟಿಯಿಂದ ಒಂದು ನಿಮಿಷ ನೋಡಿದಳು. ಆ ನಿಮಿಷವನ್ನು ಕಿರಣ್ಮಯಿ ತನ್ನ ಬದುಕಿನ ಅತಿ ದೀರ್ಘ ಕಾಲವೆಂಬಂತೆ ಭಾವಿಸಿದಳು.

ಆ ಹುಡುಗಿ ಕಿರಣ್ಮಯಿಗೆ ಪೇಪರನ್ನು ಹಿಂತಿರುಗಿಸುತ್ತಾ "ಉಹ್ಞೂ ಇವನಲ್ಲ" ಎಂದಳು.

"ನಿಮಗೆ ಚೆನ್ನಾಗಿ ಗೊತ್ತಾ ?"

"ಗೊತ್ತು. ಅವನು ಕ್ರಿಕೆಟ್ ಪ್ಲೇಯರಲ್ಲ."

"ಅವನನ್ನು ಲಕ್ಷ್ಮಿಯ ಜೊತೆಗಿರುವುದನ್ನು ಕೊನೆಯ ಸಲ ನೀವು ಯಾವಾಗ ನೋಡಿದಿರಿ ?"

ಆ ಹುಡುಗಿ ಅನುಮಾನದಿಂದ ನೋಡುತ್ತಾ, "ವೆಂಕಟ್ರಾಜು ಅಲ್ಲ ಅಂದೆನಲ್ಲಾ" ಅಂದಳು. ಕಿರಣ್ಮಯಿ ರಹಸ್ಯ ಹೇಳುತ್ತಿರುವವಂತೆ, "ಲಕ್ಷ್ಮಿಯನ್ನು ನೀವು ನೋಡಿದ ಹುಡುಗನೊಂದಿಗೆ ನಾನೂ ನೋಡಿದೆ. ಪೋಲಿಸರು ಪ್ರಶ್ನೆ ಕೇಳುತ್ತಿದ್ದರೆ ನಾನೊಬ್ಬಳೇ ಹೇಳಬೇಕೇನೋ ಅಂದುಕೊಂಡಿದ್ದೆ." ಅಂದಳು.

ಪೋಲೀಸರ ವಿಷಯ ಬರುತ್ತಿದ್ದಂತೆ ಪ್ರೀತಿ ಹೆದರಿದಳು. ಮತ್ತೇನೂ ಪ್ರಶ್ನಿಸದೆ, "ಲಕ್ಷ್ಮಿ ಸಾಯುವುದಕ್ಕೆ ಒಂದು ವಾರದ ಮುಂಚೆ" ಅಂದಳು.

ಕಿರಣ್ಮಯಿ ಅಲ್ಲಿಂದ ನೇರವಾಗಿ ಟೆಲಿಫೋನ್ ಬೂತ್‌ಗೆ ಹೋಗಿ ಚಿರಂಜೀವಿಗೆ ಫೋನ್ ಮಾಡಿದಳು. "ನನಗೆ ಅರ್ಜೆಂಟಾಗಿ ರಾಜಾರಾವ್ ಫೋಟೋ ಬೇಕು" ಎಂದು ವಿವರಗಳನ್ನು ತಿಳಿಸಿದಳು.

"ಎರಡು ದಿನಗಳಲ್ಲೇ ತಂದುಕೊಡುತ್ತೇನೆ" ಚಿರಂಜೀವಿ ಹೇಳಿದ ಉತ್ಸಾಹದಿಂದ.

ಚಿರಂಜೀವಿಯೊಡನೆ ಮಾತನಾಡಿ, ಮತ್ತೆ ಟಿ.ವಿ. ರೂಮಿಗೆ ಬರುವ ವೇಳೆಗೆ ಮ್ಯಾಚ್ ಮುಗಿದಿತ್ತು. ಅವಳು ತನ್ನ ರೂಮಿಗೆ ಹೋಗುತ್ತಿದ್ದಾಗ ಹೊರಗಿನಿಂದ ರೇಖ ಬರುತ್ತಿರುವುದು ಕಂಡಿತು. ಕಿರಣ್ಮಯಿ ಅವಳೊಡನೆ ಎಂದಿನಂತಲೇ ಮಾತನಾಡಬೇಕೆಂದಿದ್ದಳು.

ರೇಖಾ ತುಂಬಾ ಸುಸ್ತಾದವಳಂತೆ ಕಾಣುತ್ತಿದ್ದಳು. ಕಿರಣ್ಮಯಿ ಅವಳ ರೂಮಿನ ಬಳಿಗೆ ಹೋಗುವ ವೇಳೆಗೆ ಅವಳು ತನ್ನ ಕಾಂಟ್ಯಾಕ್ಟ್ ಲೆನ್ಸನ್ನು ತೆಗೆಯುತ್ತಿದ್ದಳು.

"ಮೆ ಐ ಕಮಿನ್" ಬಾಗಿಲ ಬಳಿ ನಿಂತು ಕೇಳಿದಳು.

ರೇಖ ಮುಖ ತಿರುಗಿಸಿ ನೋಡಿ, "ಯಾರೂ ?" ಎಂದು ಕೇಳಿದಳು.

"ನಾನು ಕಿರಣ್ಮಯಿ"

ರೇಖ ಕಣ್ಣನ್ನು ಕಿರಿದುಗೊಳಿಸಿ ನೋಡಿ, ಓ ! ನೀವಾ ?" ಗುರುತಿಸಿದವಳಂತೆ ಹೇಳಿದಳು,....ಬನ್ನಿ."

ಕಿರಣ್ಮಯಿ ಒಳಗೆ ಬರುತ್ತಾ, "ಏನಿಲ್ಲ....ನೀವು ಬರುತ್ತಿದ್ದುದನ್ನು ಕಂಡೆ, ಮಾತಾಡೋಣಾಂತ ಬಂದೆ" ನಗುತ್ತಾ ಹೇಳಿದಳು. ರೇಖಾ ಕೂಡಾ ನಗುತ್ತಾ, "ಟೀ ಕುಡಿಯುತ್ತೀರಾ ?" ಎಂದು ಕೇಳಿದಳು.

"ಬೇಡ" ಎಂದ ಕಿರಣ್ಮಯಿ ಅವಳೊಡನೆ ಸ್ವಲ್ಪ ಹೊತ್ತು ಅದೂ-ಇದು ಮಾತನಾಡಿ ಮೇಲೇಳುತ್ತಾ "ನಿಮಗೊಂದು ವಿಷಯ ಹೇಳಬೇಕು ಅನ್ನಿಸತ್ತೆ" ಎಂದಳು.

"ಏನದು ?"

"ನೀವು ತುಂಬಾ ಸುಂದರವಾಗಿ ಕಾಣುತ್ತೀರಿ"

ರೇಖಾ ಸ್ವಲ್ಪ ನಾಚಿಕೊಂಡು "ಥ್ಯಾಂಕ್ಸ್" ಎಂದಳು.

"ನೀವು ಕನ್ನಡಕ ಉಪಯೋಗಿಸುವುದಿಲ್ಲವಾ ? ನಿಮ್ಮ ಗುಂಡಗಿನ ಮುಖಕ್ಕೆ ಗುಂಡಾಗಿರುವ ಫ್ರೇಂ ಆದರೆ ಚೆನ್ನಾಗಿರುತ್ತೆ."

"ಸ್ಕಿನ್ ಅಲರ್ಜಿ ಇರುವಂತಿದೆ. ಅದಕ್ಕೆ ಗ್ಲಾಸಸ್ ಉಪಯೋಗಿಸ್ತುವುದಿಲ್ಲ."

ಕಿರಣ್ಮಯಿ ಅಲ್ಲಿಂದ ನೇರವಾಗಿ ಪೊಲೀಸ್ ಸ್ಟೇಷನ್‌ಗೆ ಹೋದಳು. ಅವಳನ್ನು ನೋಡಿ ಇನ್ಸ್‌ಪೆಕ್ಟರ್ ಆಶ್ಚರ್ಯಪಟ್ಟರು—"ಏನು ಬಂದಿರಿ ?"

"ಅವರ ಮೇಲೆ ಕೇಸು ಪೂರ್ತಿಯಾಗಿ ಕೋರ್ಟಿಗೆ ಹೋದಂತೆಯಾ ? ಇನ್ನೂ ವಿಚಾರಣೆಯಲ್ಲಿಯೇ ಇದೆಯಾ ?"

"ಇನ್ನೂ ಇನ್ವೆಸ್ಟಿಗೇಷನ್ ಲೆವೆಲ್‌ನಲ್ಲೇ ಇದೆ. ಎಫ್, ಐ, ಆರ್. ಹಾಕಿದ್ದೇವಷ್ಟೆ !" ಎಂದು ನಿಲ್ಲಿಸಿ. "ಕಂಗ್ರಾಜುಲೇಷನ್ಸ್ ನಿಮ್ಮ ಹಸ್ಬೆಂಡ್ ಚೆನ್ನಾಗಿ ಆಡುತ್ತಿದ್ದಾರೆಂದು ಕೇಳಿದೆ," ಅಂದರು.

"ನಾನೂ ಕೂಡಾ ಡೆಲ್ಲಿಗೆ ಹೋಗಿದ್ದೆ, ಅವರು ಮಾನಸಿಕವಾಗಿ ತುಂಬಾ ಕುಗ್ಗಿಹೋಗಿದ್ದಾರೆ ಇನ್ಸ್‌ಪೆಕ್ಟರ್ ! ಒಂದು ವಿಷಯ ಹೇಳಿ ಅವರಿಗೆ ಈ ಕೇಸಿನಲ್ಲಿ ಶಿಕ್ಷೆಯಾಗುತ್ತಾ ?"

"ಐಯಾಮ್ ಸಾರಿ....ಶಿಕ್ಷೆಯಾಗಬಹುದು, ಕೇಸು ತುಂಬಾ ಬಲವಾಗಿದೆ."

"ಹೇಗೆ ಹೇಳ್ತೀರಾ ?...." ಎಂದು ನಿಲ್ಲಿಸಿ "ಅವನ್ನೆಲ್ಲಾ ಕೋರ್ಟಿನಲ್ಲಿ ಹೇಳುತ್ತೀನೆಂದು ಹೇಳಬೇಡಿ ಪ್ಲೀಸ್" ಅಂದಳು.

"ಅವರು ರೂಮಿನಿಂದ ಹೊರಬರುವುದನ್ನು ಕಂಡವರಿದ್ದಾರೆ, ಆತನಿಗೆ ಆ ಹುಡುಗಿಗೆ ನಡುವೆಯಿದ್ದ ಪರಿಚಯದ ಬಗ್ಗೆ ತಿಳಿದವರಿದ್ದಾರೆ, ಎಲ್ಲಕ್ಕಿಂತಲೂ ಮುಖ್ಯವಾಗಿ ಆತ ಆ ಹುಡುಗಿಯ ಕಾಗದವನ್ನು ಫೋರ್ಜರಿ ಮಾಡಿದ ವಿಧಾನ ಆತನನ್ನು ಅಪರಾಧಿಯನ್ನಾಗಿಸುತ್ತದೆ" ಅಂದ.

"ಅವರು ಲಕ್ಷ್ಮಿಯ ರೂಮಿನಿಂದ ಹೊರಬಂದದ್ದನ್ನು ಕಂಡ ಹುಡುಗಿ ರೇಖಾ-ಕಾಂಟ್ಯಾಕ್ಟ್ ಲೆನ್ಸನ್ನು ಉಪಯೋಗಿಸುತ್ತಾಳೆ ! ಆಗತಾನೆ ನಿದ್ರೆಯಿಂದ ಎದ್ದು ಬಂದು ಅವರನ್ನು ನೋಡಿರುವುದಾಗಿ ಹೇಳುತ್ತಾಳೆ ಅವಳು. ಹಾಗೆ ಆಗತಾನೆ ಎದ್ದು ಬಂದವರು ಕಾಂಟ್ಯಾಕ್ಟ್ ಲೆನ್ಸನ್ನು ಉಪಯೋಗಿಸುವುದಿಲ್ಲ. ಅವಳಿಗೆ ಕನ್ನಡಕ ಇಲ್ಲ. ಆದ್ದರಿಂದ ನೀವು ಸ್ವಲ್ಪ ಕೂಲಂಕುಶವಾಗಿ ವಿಚಾರಣೆ ನಡೆಸಿದರೆ ನಿಜ ಹೊರಬರುತ್ತೆ. ನೀವು ನೋಡಿದ್ದು ರಾಯಣ್ಣನನ್ನೇನಾ ? ಎಂದಾಗ ಹೌದೆಂದಳು, 'ಅಲ್ಲವೇನೋ ಸ್ವಲ್ಪ ಆಲೋಚಿಸಿ' ಎಂದಿದ್ದರೆ 'ಅಲ್ಲವೇನೋ' ಎನ್ನುತ್ತಿದ್ದಳು, ಕ್ಷಮಿಸಿ ಸಾರ್, ಇವೆಲ್ಲಾ ನಿಮಗೆ ತಿಳಿಯ

ದಿದ್ದು ದೇನಲ್ಲಾ, ನನಗೆ ತಿಳಿದ ಪರಿಧಿಯಲ್ಲಿ ಹೇಳುತ್ತಿದ್ದೇನೆ."

ಇನ್ಸ್‌ಪೆಕ್ಟರ್ ಅವಳೆಡೆಗೆ ಆಶ್ಚರ್ಯದಿಂದ ನೋಡುತ್ತಾ, "ಇವೆಲ್ಲಾ ನಿಮಗೆ ಹೇಗೆ ತಿಳಿಯಿತು ?" ಎಂದು ಕೇಳಿದರು.

"ನಾನೂ ಒಬ್ಬ ಸ್ಟೂಡೆಂಟಂತೆ ಆ ಹಾಸ್ಟೆಲಿಗೆ ಸೇರಿದ್ದೇನೆ ಸಾರ್" ತಲೆತಗ್ಗಿಸಿಕೊಂಡು ಅವಳು ಹೇಳಿದಳು.

ಪಕ್ಕದಲ್ಲಿಯೇ ಅಗ್ನಿಪರ್ವತ ಸಿಡಿದಂತೆ ಬೆಚ್ಚಿಬಿದ್ದರು ಇನ್ಸ್‌ಪೆಕ್ಟರ್. ತುಂಬಾ ಹೊತ್ತು ಬೇಕಾಯಿತು ಅವರು ಚೇತರಿಸಿಕೊಳ್ಳಲು, "ನೀವು ...ನೀವು ಹೇಳುತ್ತಿರುವುದು ನಿಜವೇನಾ ?"

"ಹೌದು ಇನ್ಸ್‌ಪೆಕ್ಟರ್. ಲಕ್ಷ್ಮಿಯ ಸಾವಿಗೆ ನನ್ನ ಗಂಡನೇ ಕಾರಣ ನಾದರೆ ಅದು ಬೇರೆ ವಿಷಯ, ಹಾಗಾಗದ ಪಕ್ಷದಲ್ಲಿ ಆ ಹುಡುಗಿಯ ಸಾವು ಸೈಕಾಲಜಿ ಪುಸ್ತಕಗಳಲ್ಲಿ ಒಂದು ಹೊಸ ಅಧ್ಯಾಯವಾಗುತ್ತದೆ ! ಮನ ಶಾಸ್ತ್ರಜ್ಞರಿಗೆ ಪರಿಶೋಧಿಸಲು ಒಂದು ಹೊಸ ವಿಷಯವಾಗುತ್ತದೆ !! ಹಾಸ್ಟೆಲ್‌ಗಳಲ್ಲಿ ತಮ್ಮ ಹೆಣ್ಣು ಮಕ್ಕಳನ್ನು ಬಿಟ್ಟಿರುವ ತಾಯಿ ತಂದೆಯರಿಗೆ ಒಂದು ಎಚ್ಚರಿಕೆಯಾಗುತ್ತದೆ !!!" ಆವೇಶದಿಂದ ಕಿರಣ್ಮಯಿ ಹೇಳುತ್ತಿದ್ದಳು. ಇನ್ಸ್‌ಪೆಕ್ಟರ್ ಆಶ್ಚರ್ಯದಿಂದ ಇನ್ನೂ ಚೇತರಿಸಿಕೊಳ್ಳಲಿಲ್ಲ.

"ಐಯಾಮ್ ಸಾರಿ, ಯಾವುದೋ ಆವೇಶದಲ್ಲಿ ಮಾತನಾಡಿದೆ" ನಾಚಿ ಕೊಳ್ಳುತ್ತಾ ಹೇಳಿದಳು,

"ಪರವಾಗಿಲ್ಲ. ಆದರೆ ನನಗಿನ್ನೂ ನಂಬಿಕೆ ಉಂಟಾಗಿಲ್ಲ. ಆ ರೇಖ ಎಂಬ ಹುಡುಗಿ ಹಾಗೇಕೆ ಹೇಳಿದಳು ?"

"ಹೇಳಲಿಲ್ಲ. ನೀವು ಹೇಳಿಸಿದಿರಿ ! ನೀವು ಪ್ರಶ್ನಿಸಿದ ವಿಧಾನ ಹಾಗಿತ್ತು ಸಾರ್, ಎಲ್ಲಿ ನೋಡಿದರೂ ರಾಯಣ್ಣ-ರಾಯಣ್ಣ-ರಾಯಣ್ಣ ಹೆಸರು ಕೇಳುತ್ತಿದ್ದುದರಿಂದ ಆ ಹುಡುಗಿ ಕೂಡಾ ಆ ಕೋಣೆಯಿಂದ ಹೊರಬಂದಿದ್ದಾಳೆ. ರಾಯಣ್ಣನೇ ಆಗಿರುತ್ತಾನೆಂದುಕೊಂಡಿದ್ದಾಳೆ. ನೀವಿನ್ನೊಂದು ರೀತಿಯಿಂದ ಪ್ರಶ್ನಿಸಿ ನೋಡಿ, ಇನ್ನೊಂದು ರೀತಿಯ ಉತ್ತರ ಸಿಗುತ್ತದೆ."

"ಇನ್ನೊಂದು ರೀತಿಯಿಂದಲಾ ?"

"ಹೌದು, ಲಕ್ಷ್ಮಿಗೆ ರಾಯಣ್ಣನೇ ಅಲ್ಲ, ಮತ್ತೊಬ್ಬ ಸ್ನೇಹಿತ ಕೂಡಾ ಇದ್ದಾನೆ.

ಇನ್ಸ್‌ಪೆಕ್ಟರ್ ಕುರ್ಚಿಯಲ್ಲಿ ಕದಲುತ್ತಾ, "ನೀವು ಬಾಂಬಿನ ಮೇಲೆ ಮತ್ತೊಂದು ಬಾಂಬ್ ಹಾಕುತ್ತಿದ್ದೀರಿ" ಅಂದರು.

ಕಿರಣ್ಮಯಿ ಮನಸ್ಸಿನಲ್ಲೇ ಅಂದುಕೊಂಡಳು—'ಮೊದಲನೆ ರಾತ್ರಿ ಉಟ್ಟ ಬಟ್ಟೆಯಲ್ಲೇ ಹೊರಬಂದು—ಕೋರ್ಟುಗಳ ಸುತ್ತಲೂ ಸುತ್ತಿ—ಹಾಸ್ಟಲಿನಲ್ಲಿ ಹೀಗೆ ಸೇರಿ—ಇಷ್ಟೊಂದು ಕಷ್ಟಗಳನ್ನು ಪಡುತ್ತಿರುವುದು ಸ್ಫೋಟದಂತಹ ಮಾತುಗಳನ್ನು ಹೇಳಲು ಅಲ್ಲ—ನನ್ನ ಗಂಡನನ್ನು ರಕ್ಷಿಸಿ ಕೊಳ್ಳಲು !'

ಇನ್ಸ್‌ಪೆಕ್ಟರ್ ಕೇಳಿದ—'ಲಕ್ಷ್ಮಿಗೆ ಇನ್ನೊಬ್ಬ ಸ್ನೇಹಿತನಿದ್ದಾನೆಂಬ ವಿಷಯವನ್ನು ನಿಮಗಾರು ಹೇಳಿದರು ?"

"ಪ್ರೀತಿ ಅನ್ನೋ ಹುಡುಗಿ ಹೇಳಿದಳು ! ಲಕ್ಷ್ಮಿ ಸುತ್ತಾಡುತ್ತಿದ್ದುದು ರಾಯಣ್ಣನೊಡನೆ ಮಾತ್ರವೆಂಬ ಮಾತು ಎಲ್ಲಾ ಕಡೆಗೂ ಹಬ್ಬಿದ್ದರಿಂದ 'ನಾವೂ ನೋಡಿದ್ದೇವೆಂದು' ಹೇಳಿದ್ದರಾಗಲೀ ಅದು ರಾಯಣ್ಣನೊಡನೆ ಯೇನಾ, ಬೇರೆಯವರೊಡನೆಯೂ, ಎಂಬ ಮಾತನ್ನು ದೃಢೀಕರಿಸಲಿಲ್ಲ."

ಇನ್ಸ್‌ಪೆಕ್ಟರ್ ಎದ್ದು, "ನೀವಿಲ್ಲೇ ಇರಿ ಅರ್ಧ ಗಂಟೆಯಲ್ಲಿ ಬರುತ್ತೇನೆ" ಎಂದು ಗಡಿಬಿಡಿಯಿಂದ ಹೊರಟುಹೋದರು. ಅವರು ಹಿಂತಿರುಗುವ ವೇಳೆಗೆ ಒಂದು ಗಂಟೆಯಾಯಿತು.

ಹ್ಯಾಟನ್ನು ಟೇಬಲ್ ಮೇಲಿರಿಸುತ್ತಾ ಹೇಳಿದರು, "ನೀವು ಹೇಳಿದ್ದು ನಿಜ, ಆ ರೇಖಾ ಎಂಬ ಹುಡುಗಿಗೆ ಲೆನ್ಸ್ ಇಲ್ಲದಿದ್ದರೆ ಎರಡಡಿ ದೂರದ ವಸ್ತುಗಳು ಕೂಡಾ ಕಾಣುವುದಿಲ್ಲ. ತಾನು ಕಂಡದ್ದು ರಾಯಣ್ಣನನ್ನು ಅಲ್ಲವೋ ಎಂದು ಸರಿಯಾಗಿ ಹೇಳಲಾರೆನೆಂದಳು. ಹಾಗಾದರೆ ಈ ವಿಷಯವನ್ನು 'ಆಗ ಏಕೆ ಹೇಳಲಿಲ್ಲ' ಎಂದು ಕೇಳಿದರೆ 'ನೀವು ಕೇಳಲಿಲ್ಲವಲ್ಲಾ' ಎಂದುಬಿಟ್ಟಳು ಇನ್ನೇನಿದೆ ?" ಕಿರಣ್ಮಯಿಯ ಮನಸ್ಸಿಗೆ ಒಂದು ಸಂತೋಷ ತರಂಗ ಬಡಿದಂತೆ ಆಯಿತು, "ನಾನು ಪ್ರೀತಿಯನ್ನು ಕೂಡಾ ಕಂಡು ಬಂದೆ" ಅಂದರು ಇನ್ಸ್‌ಪೆಕ್ಟರ್, "ನೀವು ಹೇಳಿದ್ದು ನಿಜವೇ. ಕೊನೆ ದಿನಗಳಲ್ಲಿ

ರಾಯಣ್ಣನನ್ನಲ್ಲ ಲಕ್ಷ್ಮಿ ಭೇಟಿಯಾಗುತ್ತಿದ್ದುದು... ಮತ್ತೊಬ್ಬನನ್ನು ಆ ವಿಷಯವನ್ನು ಪ್ರೀತಿ ಹೇಳುತ್ತಿದ್ದಂತೆಯೇ ಎಲ್ಲಾ ಫೋಟೋಗಳನ್ನು ತರಿಸಿದೆ ಆ ಸರ್ಕಲ್‌ನಲ್ಲಿರುವ ಪ್ರತಿಯೊಬ್ಬ ಬಾಯ್ ಫ್ರೆಂಡ್‌ಗಳ ಫೋಟೋಗಳನು ತರಿಸಿ ತೋರಿಸಿದೆ. ಕೊನೆಗೆ ಅವನ್ಯಾರೆಂದು ತಿಳಿಯಿತು."

ಟೆನ್ಷನ್‌ನಿಂದ ನಡುಗುವ ಸ್ವರದಲ್ಲಿ ಕೇಳಿದಳು. "ಯಾರು ? ಯಾರವನು ?".

"ಸಾರಿ ಹೇಳಲಾರೆ, ಅವನು ತುಂಬಾ ಪ್ರಭಾವವಿರುವ ವ್ಯಕ್ತಿ. ಪ್ರೆಸಿಡೆಂಟ್ ಆಫ್ ಇಂಡಿಯಾ ಹತ್ತಿರ ಸಂಬಂಧಿಯ ಹತ್ತಿರದವನು ಒಂದನ್ನು ಮಾತ್ರ ಹೇಳಬಲ್ಲೆ ಕಿರಣ್ಮಯಿಯವರೇ, ಈ ಕೊಲೆಯ ಜೊತೆ ಆತನಿಗೇನಾದರೂ ಸಂಬಂಧವಿದ್ದರೆ ಆತನೇ ಪ್ರೆಸಿಡೆಂಟ್ ಆದರೂ ನಾನು ಬಿಡುವುದಿಲ್ಲ."

ಅವಳು ಮೇಲೆದ್ದಳು.

ಇನ್ಸ್‌ಪೆಕ್ಟರ್ ಕೂಡಾ ಎದ್ದು ಅಭಿನಂದಿಸುವಂತೆ ಹೇಳಿದರು-"ತುಂಬಾ ಕಷ್ಟಪಡುತ್ತಿದ್ದೀರಿ. ಒಂದು ರೀತಿಯಿಂದ ನನ್ನ ಕಣ್ಣು ತೆರೆಯಿಸಿದಿರಿ. ನಿಮ್ಮ ಕೆಲಸವನ್ನು ನೀವು ಮುಂದುವರೆಸಿ. ನಾನೂ ನನ್ನ ಪ್ರಯತ್ನವನ್ನು

"ಥ್ಯಾಂಕ್ಯೂ ಸರ್. ನೀವು ಇಷ್ಟೊಂದು ತಾಳ್ಮೆಯಿಂದ ನನ್ನ ಮಾತುಗಳನ್ನು ಕೇಳುತ್ತೀರೆಂದುಕೊಂಡಿರಲಿಲ್ಲ. ಇಷ್ಟು ಬೇಗ ಆಕ್ಷನ್ ತೆಗೆದುಕೊಳ್ಳುತ್ತೀರೆಂದು ಅಂದುಕೊಂಡಿರಲಿಲ್ಲ." ಅವಳು ಕೈ ಜೋಡಿಸಿ ಹಿಂತಿರುಗಿದಳು. ಬರುತ್ತಾ ಅಂದುಕೊಂಡಳು.---"ಪೊಲೀಸ್ ಡಿಪಾರ್ಟ್‌ಮೆಂಟ್ ಮೇಲೆ ನನಗಿದ್ದ ಕೀಳು ಭಾವನೆಗಳು ಹೋದವು. ಎಷ್ಟು ಕ್ರೂರವಾಗಿ ಯೋಚಿಸಿದ್ದೆ ಅಲ್ಲವಾ. "

ಅದೇ ಸಮಯದಲ್ಲಿ ಇನ್ಸ್‌ಪೆಕ್ಟರ್ ಅಂದುಕೊಂಡರು--"ಕುರುಡೆತ್ತು ಗುಂಡಿಯಲ್ಲಿ ಬಿದ್ದಂತೆ ಎಷ್ಟು ಹಗುರಾಗಿ ಡೀಲ್ ಮಾಡುತ್ತಿದ್ದೆವು ಈ ಕೇಸನ್ನು....! ಪೊಲೀಸರಿಗೆ ಮನಶಾಸ್ತ್ರದಲ್ಲಿ ಟ್ರೈನಿಂಗ್ ಕೊಟ್ಟಿದ್ದರೆ ಚೆನ್ನಾಗಿತ್ತು."

ಕಿರಣ್ಮಯಿ ಹಿಂತಿರುಗುವ ವೇಳೆಗೆ ಹಾಸ್ಟೆಲ್ಲಿನಲ್ಲೆಲ್ಲಾ ಕೋಲಾಹಲ ವೆದ್ದಿತ್ತು. ರೇಖಾಳ ಕಾಂಟಾಕ್ಟ್ ಲೆನ್ಸ್ ವಿಷಯ, ಪ್ರೀತಿ ಟಿ. ವಿ. ನೋಡುತ್ತಾ ಹೇಳಿದ ಮಾತುಗಳು ಆಗಲೇ ಪೋಲಿಸರಿಗೆ ತಿಳಿದದ್ದು, ಕ್ಷಣ ದಲ್ಲೇ ಅವರು ಎನ್‌ಕ್ವೈರೀಗೆ ಬಂದದ್ದು—ಹುಡುಗಿಯರೆಲ್ಲಾ ಬೆದರಿಬಿಟ್ಟಿದ್ದರು. ಅನುರಾಧಳಂತೂ ಇನ್ನೂ ಹೆಚ್ಚು! ಆ ಹುಡುಗಿ ಏಕಿಷ್ಟು ಕಂಗಾಲಾಗುತ್ತಿದ್ದಾಳೆಂದು ಕಿರಣ್ಮಯಿಗೆ ಅರ್ಥವಾಗಲಿಲ್ಲ. "ನಂಗೊಬ್ಬಳಿಗೇ ಆ ರೂಮಿನಲ್ಲಿ ಮಲಗಲು ಹೆದರಿಕೆ ಆಗುತ್ತೆ. ನೀವೂ ಬರ್ತೀರಾ?" ಎಂದು ಕಿರಣ್ಮಯಿಯನ್ನು ಕೇಳಿದಳು.

"ಹಾಗೇ ಆಗಲಿ ಬಿಡಿ" ಕಿರಣ್ಮಯಿ ಹೇಳಿದಳು, ತನ್ನ ಸಂತೋಷವನ್ನು ಹೊರಗೆಡುಹದಂತೆ! ನಿಜಕ್ಕೂ ಅವಳಿಗೆ ಅನುರಾಧಳೊಡನೆ ತುಂಬಾ ಮಾತನಾಡಬೇಕೆಂದಿತ್ತು.

ಕಿರಣ್ಮಯಿ ಅವಳ ರೂಮಿಗೆ ಹೋಗುವ ವೇಳೆಗೆ ಅನುರಾಧ ಹಾಸಿಗೆಗಳನ್ನು ಸರಿಪಡಿಸುತ್ತಿದ್ದಳು. ಅವಳ ಮುಖ ಭಾವರಹಿತವಾಗಿತ್ತು. ಆದರೆ ಅದುವರೆವಿಗೂ ಅತ್ತಂತೆ ಅವಳ ಕಣ್ಣುಗಳು ಹೇಳುತ್ತಿದ್ದವು.

"ಊಟ ಮಾಡಿ ಬರೋಣ ಬನ್ನಿ ಅನುರಾಧ"

"ನಂಗೆ ಹಸಿವಿಲ್ಲ, ನೀವು ಊಟ ಮಾಡಿ ಬನ್ನಿ. ನಂಗೆ ನಿದ್ರೆ ಬರುತ್ತಿದೆ. ನಾನು ಮಲಗಿಕೊಳ್ಳುತ್ತೇನೆ." ಅವಳು ಆಗಲೇ ನಿದ್ರೆ ಮಾತ್ರೆಗಳನ್ನು ತೆಗೆದುಕೊಂಡಂತಿತ್ತು.

"ರಾಧಾ! ನಾನೊಂದು ಪ್ರಶ್ನೆ ಕೇಳಲಾ?"

"ಕೇಳು" ಅಂದಳು ಅನುರಾಧ. ಆದರೆ ಎಂತಹ ಪ್ರಶ್ನೆ ಬರುತ್ತದೋ ಎಂಬ ಆಶಂಕ ಅವಳ ಸ್ವರದಲ್ಲಿ ಎದ್ದು ಕಾಣುತ್ತಿತ್ತು. ಉತ್ತರಿಸುವ ಆಗತ್ಯವಿಲ್ಲದಿದ್ದರೂ ಪ್ರಶ್ನೆಯನ್ನು ಕೇಳಿಸಿಕೊಳ್ಳಲೇ ಭಯ.

"ನೀವೇಕೆ ಹೀಗೆ ನಿದ್ರೆಮಾತ್ರೆಗಳನ್ನು ತೆಗೆದುಕೊಳ್ಳುತ್ತೀರಿ?"

"ಇಲ್ಲದಿದ್ದರೆ ನಿದ್ರೆ ಬರುವುದಿಲ್ಲ. ನಿದ್ರೆ ಇಲ್ಲದಿದ್ದರೆ ಕಾಲೇಜಿಗೆ ಹೋಗಲಾರೆ, ಓದಲಾರೆ."

"ಅದೆ— ನಿದ್ರೆಯೇಕೆ ಬರುವುದಿಲ್ಲ? ಹಗಲೆಲ್ಲಾ ದುಡಿಯುತ್ತೀರಿ;

ಓದಿಕೊಳ್ಳುತ್ತೀರಿ. ಸಾಮಾನ್ಯವಾಗಿ ನಿದ್ರೆ ಬರಬೇಕಲ್ಲಾ...."

ಅನುರಾಧ ಮಾತನಾಡಲಿಲ್ಲ.

"ರಾಧಾ ಪ್ರೇಮರಾಹಿತ್ಯ ಮನುಷ್ಯರನ್ನೆಷ್ಟು ಕೊಲ್ಲುತ್ತದೆ, ನೋವು ಕೊಡುತ್ತದೆಂದು ನನಗೆ ಗೊತ್ತು. ಆದರೆ ನಿನ್ನ ಮನಸ್ಸನ್ನು ಅರ್ಥಮಾಡಿ ಕೊಳ್ಳುವ ಸ್ನೇಹಿತರಿರುವಾಗ ಕೂಡಾ ನೋವನ್ನು ಹಂಚಿಕೊಳ್ಳದೇ ಹೋದರೆ ಅದು ಕ್ಯಾನ್ಸರಿಗಿಂತಲೂ ಕ್ರೂರವಾದ ಖಾಯಿಲೆಯಾಗಿ ಮಾರ್ಪಾಡಾಗುತ್ತದೆ. ಬೇರೆ ಔಷಧಿಯಿಲ್ಲದಿರುವುದು, ಮತ್ತೊಬ್ಬರೊಡನೆ ಹಂಚಿಕೊಂಡರೆ ಕಡಿಮೆ ಯಾಗುವುದು ಈ ಮಾನಸಿಕ ಖಾಯಿಲೆ ಮಾತ್ರ."

"ನನಗೆಲ್ಲಾ ಗೊತ್ತು, ಕಿರಣ್ಮಯಿ. ಆದರೆ ಕೆಲವು ಆಲೋಚನೆಗಳಿಗೆ ಪರಿಹಾರವಿರುವುದಿಲ್ಲ. ಕಾಲವೇ ಗುಣಪಡಿಸಬೇಕಾದ ಗಾಯವಿದು. ಆ ಕಾಲ ಪ್ರಶಾಂತವಾಗಿ ಕಳೆದು ಹೋಗಬೇಕೆಂದರೆ ನಿದ್ರೆ ಮಾತ್ರೆಗಳೇ ಔಷಧಿ", ರಾಧ ಮಲಗಿಕೊಳ್ಳುತ್ತಾ ಹೇಳಿದಳು.

ತನ್ನ ಮೌನದಿಂದ ಮತ್ತೊಬ್ಬರು ನೇಣುಗಂಬವನ್ನೇರುತ್ತಾರೆಂದು ಕೂಡಾ ಬಾಯಿ ಬಿಡದ ಇವಳನ್ನು ಕಂಡು ಕಿರಣ್ಮಯಿಗೆ ಅಸಹನೆ, ಸಿಟ್ಟು ಬಂದವು. ಆದರೆ ಅಷ್ಟರಲ್ಲೇ ಅನುಮಾನ....ರಾಯಣ್ಣನೇ ಕೊಲೆಗಾರನೆಂದು ಇವಳು ನಂಬುತ್ತಾಳೇನೋ !! ಅದಕ್ಕೆ ಯಾವ ವಿಷಯವೂ ಹೊರಬೀಳದಿದ್ದರೆ ಸಾಕೆಂದು ಆಲೋಚಿಸುತ್ತಿದ್ದಾಳೇನೋ ! ಜೋರು ಮಾಡಿ ಕೇಳಿದರೆ ಹಠ ಹಿಡಿಯುವ ಸ್ವಭಾವ ಅನುರಾಧಳದು.

"ನಾನು ಲೈಟ್ ಹಾಕಿಕೊಂಡು ಓದಿದರೆ ನಿಮಗೆ ನಿದ್ರಾಭಂಗ ಆಗುವು ದಿಲ್ಲ ತಾನೆ ? ಒಂದು ಗಳಿಗೆಯಾದರೂ ಓದದಿದ್ದರೆ ನನಗೆ ನಿದ್ರೆ ಬರುವುದಿಲ್ಲ" ಕಿರಣ್ಮಯಿ ಹೇಳಿದಳು.

"ಆಕೆ ಪರವಾಗಿಲ್ಲ. ಈಗ ಮಲಗಿಬಿಟ್ಟರೆ ಬೆಳಗಿನ ತನಕ ಏಳುವುದಿಲ್ಲ. ನನ್ನ ಆತ್ಮೀಯರಾದಲ್ಲಿ ನಾವಲ್‌ಗಳಿವೆ. ಬೇಕಾದರೆ ತೆಗೆದುಕೊಳ್ಳಿ."

ಮೆಸ್‌ಗೆ ಹೋಗಿ ಕಿರಣ್ಮಯಿ ಊಟ ಮಾಡಿ ಬರುವ ವೇಳೆಗೆ ಅನುರಾಧ ನಿದ್ರಿಸುತ್ತಿದ್ದಳು.

ಅವಳು ಹೇಳಿದ ಅಲ್ಮೇರಾ ತೆಗೆದಳು ಕಿರಣ್ಮಯಿ. ಅನುರಾಧ ಎಂತಹ

ಪುಸ್ತಕಗಳನ್ನು ಓದುತ್ತಾಳೆಂದು ನೋಡಬೇಕೆನ್ನಿಸಿತು ಅವಳಿಗೆ.

ಮೇಲಿನ ಸಾಲಿನಲ್ಲಿ ಎಲ್ಲಾ ಇಂಗ್ಲೀಷ್ ಕಾದಂಬರಿಗಳು–ಸಿಡ್ನಿ ಷೆಲ್ಡನ್, ಆರ್ಥರ್ ಹೈಲಿ, ಲುಡ್ಲುಮ್ ಇತ್ಯಾದಿ. ಮತ್ತೊಂದು ಕಡೆ ಪಠ್ಯಪುಸ್ತಕಗಳು. ಅವುಗಳ ಹಿಂದೆ ಮುಖಪುಟಗಳಿಗೆಲ್ಲಾ ಬೈಂಡ್ ಹಾಕಿದ್ದ ಕ್ರಾಂತಿ ಸಾಹಿತ್ಯ....

ಕಿರಣ್ಮಯಿಗೆ ಷಾಕ್ ಆಯಿತು.

ಅನುರಾಧ ಪಿ. ಡಿ. ಎಸ್. ಯು. ಮೆಂಬರಾ? ಆಶ್ಚರ್ಯದಿಂದ ಪುಸ್ತಕ ತೆರೆದಳು. 'ಮಾಧುರ್' ಎಂಬ ಸಹಿ ಇತ್ತು. 'ಸರಳುಗಳ ಹಿಂದೆ ಭಾರತ'—ಸರ್ಕಾರ ಬ್ಯಾನ್ ಮಾಡಿದ ಪುಸ್ತಕ....ಪುಸ್ತಕವನ್ನೆಲ್ಲಾ ಓದಿದಂತೆ ಅಲ್ಲಲ್ಲಿ ಕೆಲವು ವಾಕ್ಯಗಳನ್ನು ಅಂಡರ್‌ಲೈನ್ ಮಾಡಿದ್ದರು. ಅಲ್ಲಲ್ಲಿ ಕಾಮೆಂಟ್ಸ್ ಕೂಡಾ ಬರೆದಿದ್ದರು. ಅದು ಅನುರಾಧಾಳ ಕೈ ಬರಹವಲ್ಲ. ಭಾಷೆಯ ಮೇಲೆ ಸಂಪೂರ್ಣ ಪಾಂಡಿತ್ಯವಿರುವ ವ್ಯಕ್ತಿಯದು. ಯಾರೀ ಮಾಧು? ಅನುರಾಧಾಳ ಬಾಯ್‌ಫ್ರೆಂಡಾ? ಕಿರಣ್ಮಯಿ ಪುಸ್ತಕಗಳನ್ನು ಸರಿಸುತ್ತಾ ಒಂದು ಕಾದಂಬರಿಯನ್ನು ತೆಗೆದುಕೊಳ್ಳಲು ಹೋಗಿ ಚಕ್ಕನೆ ನಿಂತಳು.

ಅಲ್ಮೇರಾದ ಒಂದು ಪಕ್ಕದಲ್ಲಿ ರಾಧಳ ಬ್ಯಾಗಿತ್ತು. ಲಕ್ಷ್ಮಿಯ ರೂಮಿನ ಬೀಗದ ಕೈ ಅದರಲ್ಲಿದೆಯೇನೋ!

ಕಿರಣ್ಮಯಿ ಸಪ್ಪಳವಾಗದೆ ಬ್ಯಾಗ್ ತೆರೆದಳು. ನಿದ್ರೆಯಲ್ಲೇ ಅನುರಾಧ ಅತ್ತಿಂದ ಇತ್ತ ಹೊರಳಿದಳು. ಕಿರಣ್ಮಯಿಗೆ ತನ್ನ ಹೃದಯದ ಬಡಿತ ತನಗೇ ಕೇಳಿಸುತ್ತಿತ್ತು. ಎಂದೂ ಮಾಡದ ಕೆಲಸ ಅದು. ಕೈಗಳು ನಡುಗುತ್ತಿದ್ದವು. ಬ್ಯಾಗಿನಲ್ಲಿ ಪುಸ್ತಕಗಳು, ಮತ್ತೇನೋ ಕಾಗದಗಳನ್ನು ಬಿಟ್ಟು ಉಪಯೋಗಕ್ಕೆ ಬರುವ ಮತ್ತೇನೂ ಇರಲಿಲ್ಲ. ಅದರಲ್ಲಿದ್ದ ಒಂದು ಇನ್‌ಲ್ಯಾಂಡ್ ಲೆಟರ್ ಮೇಲೆ ಅವಳ ದೃಷ್ಟಿ ಬಿತ್ತು. ಫ್ರಂ ಅಡ್ರೆಸ್ ಕಡೆ 'ಲಕ್ಷ್ಮಿ' ಎಂದು ಇದ್ದುದರಿಂದ ಅವಳಲ್ಲಿ ಉತ್ಸಾಹ ಮೂಡಿತು. ಅನುರಾಧ ರಜೆಯಲ್ಲಿ ಊರಿಗೆ ಹೋದಾಗ ಲಕ್ಷ್ಮಿ ಇಲ್ಲಿಂದ ಬರೆದ ಕಾಗದ ಅದು.

ನಿದ್ರಿಸುತ್ತಿದ್ದ ಅನುರಾಧಳಿಗೆ ಎಚ್ಚರವಾಗದಂತೆ, ನಿಧಾನವಾಗಿ ಲೆಟರಿನ

ಬಳಿಗೆ ಹೋಗಿ ಆ ಕಾಗದವನ್ನು ಓದಿದಳು ಕಿರಣ್ಮಯಿ—

"ಅನೂ—

ನಿನ್ನ ಕಾಗದ ತಲುಪಿದೆ. ನಿಮ್ಮ ತಂದೆಯವರು ಆರೋಗ್ಯವಾಗಿದ್ದರೆಂದು ತಿಳಿದು ಸಂತೋಷಗೊಂಡೆ. ನಾನು ನನ್ನ ಊರಿಗೆ ಹೋಗಲಿಲ್ಲ. ಮನಸ್ಸಿಗೇಕೋ ಬೇಸರ. ಅಲ್ಲಿ ಅಮ್ಮನಿಗೆ ಜ್ವರವಂತೆ—ಆದರೂ ಹೋಗಬೇಕೆನ್ನಿಸುತ್ತಿಲ್ಲ.

ಅನೂ.

ನಿನ್ನನ್ನು ನಾನೆಷ್ಟು ಮಿಸ್ ಮಾಡಿಕೊಳ್ಳುತ್ತಿದ್ದೆ ಗೊತ್ತಾ ? ನಿನಗೆ ತುಂಬಾ ಹೇಳಬೇಕೆನ್ನಿಸುತ್ತದೆ. ಆದರೆ ಕಾಗದದಲ್ಲಿ ಬರೆಯಲು ಹೆದರಿದೆ. ಈ ಹದಿನೈದು ದಿನಗಳಲ್ಲಿ ನಡೆಯಬಾರದ್ದು ನಡೆದು ಹೋಯಿತು. 'ರೋಹಿಣಿ'ಯಿಂದ ನಾನು ಮೋಸ ಹೋದೆನೆಂದು ಹೇಳುತ್ತಿಲ್ಲ. ನಡೆದದ್ದರಲ್ಲಿ ನನ್ನ ತಪ್ಪು ಕೂಡಾ ಇದೆ. ನಾಲ್ಕು ದಿನಗಳಲ್ಲಿ ಅಪ್ಪ ಕೂಡಾ ಬರುತ್ತಿದ್ದಾರೆ. ಅವರಿಗೆ ನನ್ನ ಮುಖ ಹೇಗೆ ತೋರಿಸಲಿ ? ನನ್ನನ್ನು ನೋಡುತ್ತಿದ್ದಂತೆಯೇ ವಿಷಯವನ್ನು ಕಂಡು ಹಿಡಿದು ಬಿಡುತ್ತಾರೇನೋ ! ಹಾಗಾದರೆ ನಾನು ಮಾತ್ರ ಉಳಿಯುವುದಿಲ್ಲ. ಅದರಲ್ಲೂ 'ರಾಗಿಣಿ' ಕೂಡಾ ನನಗೆ ಮೋಸ ಮಾಡಿದಳು.

ಆಗ ಅಪ್ಪ ಬರುತ್ತಾರೆಂದರೆ ಸಂಭ್ರಮ ಪಡುತ್ತಿದ್ದೆ. ಈಗ ಅವರು ಬರದಿದ್ದರೆ ಚೆನ್ನಾಗಿತ್ತೆಂದು ಅನ್ನಿಸುತ್ತದೆ. ಅವರು ಬರುವುದರೊಳಗಾಗಿ ನೀನು ಬರಬಾರದೆ ? ನೀನು ಪಕ್ಕದಲ್ಲಿದ್ದರೆ ನನಗೆ ಧೈರ್ಯ. ಆದಿನ ನೀನು ಹೇಳಿದ್ದೆ 'ಈ ಸಮಯದಲ್ಲಿ ನೀನು ನನ್ನ ಪಕ್ಕ ಇರುವುದರಿಂದ ಬದುಕಿದೆ' ಎಂದು. ಆ ದಿನ ನಾನು ಅಂದುಕೊಂಡೆ 'ನಾನೇನು ಮಾಡಿದ್ದೇನೆ ? ಅವಳು ಅಷ್ಟೊಂದು ಕೃತಜ್ಞಳಾಗಿದ್ದಾಳಲ್ಲಾ' ಎಂದು ! ಆದರೆ... ಈಗ ಅನ್ನಿಸುತ್ತಿದೆ, ಈ ಸಮಯದಲ್ಲಿ ನೀನಿಲ್ಲದಿದ್ದರೆ ನಾನು ಬದುಕಲಾರೆನೇನೋ ಎಂದು. ಈ ಕಾಗದ ನಿನ್ನ ಕೈ ಸೇರಿದ ಕೂಡಲೇ ನೀನು ಬಂದುಬಿಡು,

ನಿನ್ನ ಲಕ್ಷ್ಮಿ"

ಕಿರಣ್ಮಯಿ ಕಾಗದವನ್ನು ಒಳಗಿಟ್ಟು ಬಿಟ್ಟಳು.

ರೋಹಿಣಿ ಯಾರು ?

ರಾಗಿಣಿ ಯಾರು ?

....ತಮ್ಮ ಬಾಯ್ ಫ್ರೆಂಡಗಳ ಬಗ್ಗೆ ಹೇಳಿಕೊಳ್ಳುವಾಗ ಹಾಗೆ ಕೋಡ್ ವರ್ಡ್‌ಗಳನ್ನು ಉಪಯೋಗಿಸುತ್ತಾರಾ ? ಯೋಚಿಸಿದಳು. ಏನೋ ಹೊಳೆದಂತಾಯಿತು,

'ರಾಗಿಣಿ-ರೋಹಿಣಿಯರಲ್ಲಿ ಒಬ್ಬ ರಾಯಣ್ಣನಾದರೆ ಮತ್ತೊಬ್ಬ ? ಆಗಲೇ ಅನುರಾಧಳನ್ನು ಎಚ್ಚರಗೊಳಿಸಿ ವಿಚಾರಿಸಿ ಬಿಡಬೇಕೆಂಬ ಆಸೆಯನ್ನು ಬಲವಂತದಿಂದ ತಡೆಹಿಡಿದು ಕೊಂಡಳು. ಬ್ಯಾಗನ್ನು ಅದರ ಜಾಗದಲ್ಲೇ ಇಟ್ಟು ಹಾಸಿಗೆಯ ಮೇಲೆ ಮಲಗಲು ಹೋಗಿ ಹಾಗೆಯೇ ನಿಂತುಬಿಟ್ಟಳು. ಅನುರಾಧಳ ತಲೆದಿಂಬಿನ ಕೆಳಗೆ ಕಾಣುತ್ತಿದೆ ಒಂದು ಕೀ ಬಂಚ್ ! ಎದೆಯಿಂದ ಉದ್ವೇಗ ನುಗ್ಗಿ ಬರುತ್ತಿದ್ದಂತೆ. ಆ ಬೀಗದ ಕೈ ಗೊಂಚಲನ್ನೂ ಅನುರಾಧಳಿಗೆ ಎಚ್ಚರವಾಗದಂತೆ ಹೊರ ತೆಗೆದಳು.

ಅದರಲ್ಲಿತ್ತು ಹದಿಮೂರನೆಯ ನಂಬರಿನ ರೂಮಿನ ಬೀಗದ ಕೈ.

ಅರ್ಧರಾತ್ರಿ ಹನ್ನೆರಡು ಗಂಟೆಯಾಗುತ್ತಿದ್ದಾಗ, ಕಿರಣ್ಮಯಿ ಮೊಟ್ಟ ಮೊದಲನೆ ಸಲ ಲಕ್ಷ್ಮಿಯ ರೂಮನ್ನು ಪ್ರವೇಶಿಸಿದಳು,

## ಅಧ್ಯಾಯ ಎಂಟು

ಹದಿಮೂರನೆ ನಂಬರ್ ರೂಮು ಒಂದು ಮೂಲೆಯಲ್ಲಿದ್ದದು ಅದೃಷ್ಟ. ಕಾರಿಡಾರಿನಲ್ಲಿ ಒಂದೇ ಒಂದು ಲೈಟ್ ಬೆಳಗುತ್ತಿತ್ತು. ಅರ್ಧರಾತ್ರಿ ದಾಟಿದ್ದರಿಂದ ಎಲ್ಲಾ ನಿಶ್ಶಬ್ದವಾಗಿತ್ತು. ಕಿರಣ್ಮಯಿ ರೂಮಿನ ಬೀಗ ತೆಗೆದು, ಒಳಗೆ ಕಾಲಿಟ್ಟಳು, ಅವಳ ಕಾಲುಗಳು ಸ್ವಲ್ಪ ನಡುಗಿದವು,

ಭಯದಿಂದಲ್ಲ, ಮನಸ್ಸಿನಲ್ಲಿ ಕಂಪನ ಶರೀರಾದ್ಯಂತ ಹರಡಿದ್ದರಿಂದ !! ಈ ರೂಮು ಲಕ್ಷ್ಮಿಯ ಸಾವಿಗೆ ಪ್ರತ್ಯಕ್ಷ ಸಾಕ್ಷಿ ! ಅವಳ ರಹಸ್ಯಗಳನ್ನು ಭದ್ರವಾಗಿ ಮುಚ್ಚಿಟ್ಟುಕೊಂಡಿರುವ ನಿಲಯ !! ರಾಮ, ಸೀತೆಗಾಗಿ ಕಾಡಿನಲ್ಲಿ ಹುಡುಕುತ್ತಾ ಗಿಡ, ಮರಗಳನ್ನು ಕೇಳಿದಂತೆ, ಈ ರೂಮಿನ ಗೋಡೆಗಳನ್ನು, ಸೀಲಿಂಗ್ ಫ್ಯಾನನ್ನು, ಬಾಗಿಲುಗಳನ್ನು ಲಕ್ಷ್ಮಿಯ ಕೊಲೆಗೆ ಕಾರಣರಾರೆಂದು ಕೇಳಬೇಕೆನ್ನಿಸಿತು.

ಕಿಟಕಿಯ ಹೊರಗಿನಿಂದ ಕಿಚ್ ಕಿಚ್ ಶಬ್ದ ಕೇಳಿಸುತ್ತಿತ್ತು.

ಟೇಬಲ್ ಮೇಲೆ ಲಕ್ಷ್ಮಿಯ ಫ್ಯಾಮಿಲಿ ಫೋಟೋ ಇರಲಿಲ್ಲ. ಗೋಡೆಗಳಿಗೆ ಮಾತ್ರ ಲಕ್ಷ್ಮಿ ಹಾಕಿದ ಚಿತ್ರಗಳಿವೆ. ಸುಂದರವಾದ ಹೂವಿನ ತೋಟ....ಗಿಡಗಳ ಕೆಳಗೆ ಕುಳಿತು ಕನಸು ಕಾಣುತ್ತಿರುವ ಹುಡುಗಿ....ಹಾರಾಡುವ ಹಕ್ಕಿಗಳು...ಎಲ್ಲಾ ಲಕ್ಷ್ಮಿಯ ಕನಸಿನ ಪ್ರತಿಮೆಗಳೇನೋ ! ಗೋಡೆಯಲ್ಲಿದ್ದ ಅಲ್ಮೇರಾದಲ್ಲಿ ಲಕ್ಷ್ಮಿಯ ಪುಸ್ತಕಗಳಿವೆ. ಕಿರಣ್ಮಯಿ ಅವನ್ನು ತಿರುವಿ ಹಾಕಿದಳು. ಎಲ್ಲಾ ಹೆಚ್ಚು ಕಡಿಮೆ ಪಠ್ಯಪುಸ್ತಕಗಳೇ. ಕೆಳಗಿನ ಕೆಳದಿನ ಸಾಲಿನಲ್ಲಿ ಮಾತ್ರ ಎಲ್ಲಾ ಮಿಲ್ಸ್ ಅಂಡ್ ಬೂನ್ ಕಾದಂಬರಿಗಳೇ. ಲಕ್ಷ್ಮಿ ಆ ಮಟ್ಟದಿಂದ ಮೇಲೇರಿ ಬಂದಿರಲಿಲ್ಲವಾ ? ಕಿರಣ್ಮಯಿ ನೋಟ್ ಬುಕ್‌ಗಳ ಹಾಳೆಗಳನ್ನು ತಿರುವಿ ಹಾಕಿದಳು. ತನಗಿಷ್ಟವಾದವರ ಹೆಸರುಗಳನ್ನು ಕೊನೆಯ ಪುಟವಲ್ಲಿ ಬರೆಯುವುದು ತುಂಬಾ ಹುಡುಗಿಯರ ಅಭ್ಯಾಸ. ಬೇಕೆಂದಲ್ಲ—ಏನೋ ಯೋಚಿಸುತ್ತಾ ಬರೆದು ಬಿಟ್ಟಿರುತ್ತಾರೆ ಹಾಗೆ. ಅವಳ ಊಹೆಯಂತೆಯೇ 'ಆರ್' ಎಂಬ ಇಂಗ್ಲೀಷ್ ಅಕ್ಷರ ತುಂಬಾ ಆರ್ಟಿಸ್ಟಿಕ್ಕಾಗಿ ಇತ್ತು. 'ಆರ್' ಅಂದರೆ ರಾಯಣ್ಣಾ ? ಇಲ್ಲಾ ಇನ್ನಾರಾದರೂನಾ ?

ಕಿರಣ್ಮಯಿಗೆ ಅನುಮಾನ ಹುಟ್ಟಿಸುವ ಮತ್ತಾವ ಆಧಾರವೂ ಕಾಣಲಿಲ್ಲ. ಕಬೋರ್ಡಿನಲ್ಲೇ ಲಕ್ಷ್ಮಿಯ ಸೂಟ್‌ಕೇಸ್ ಇತ್ತು. ಅದನ್ನು ತೆರೆದಿತ್ತು, ಬಟ್ಟೆಗಳೆಲ್ಲಾ ನೀಟಾಗಿ ಜೋಡಿಸಲ್ಪಟ್ಟಿತ್ತು. ಬಹುಶಃ ಅನುರಾಧಳ ಕೆಲಸವಿರಬೇಕು. ಕಿರಣ್ಮಯಿ ಒಂದೊಂದನ್ನೇ ತೆಗೆದು ನೋಡಿದಳು. ಬಟ್ಟೆಗಳ ಮಧ್ಯೆ ಲಕ್ಷ್ಮಿ ಮನೆಯವರ ಫ್ಯಾಮಿಲಿ ಫೋಟೋ ಕಂಡಿತು. ಅನುಮಾನದಿಂದ ಬಿಚ್ಚಿದಳು, ಒಳಗೆ ಮತ್ತೇನೂ ಇರಲಿಲ್ಲ, ಫೋಟೋ

ದಲ್ಲಿ ಅಕ್ಕ, ತಂಗಿಯರ ನಡುವೆ ಮುಗ್ಧಳಂತೆ ನಗುತ್ತಿದ್ದಾಳೆ ಲಕ್ಷ್ಮಿ. ಅವಳ ತಮ್ಮ ಅಪ್ಪ-ಅಮ್ಮನ ಮಧ್ಯೆ ಕುಳಿತಿದ್ದಾನೆ. ಅವರ ಮುಖದ ಮೇಲಿನ ಈ ಕಿರುನಗೆ ಲಕ್ಷ್ಮಿಯ ಮರಣದಿಂದ ಅಳಿಸಿ ಹೋಗಿರಬೇಕು. ಒಂದು ವ್ಯಕ್ತಿಯ ಸಾವು ಎಷ್ಟು ಜನರಿಗೆ ನೋವು.

ಸೂಟ್‌ಕೇಸಿನಲ್ಲಿ ಮತ್ತಾವ ಆಧಾರವೂ ಸಿಗಲಿಲ್ಲ. ಕೆಳಗಿದ್ದ ನ್ಯೂಸ್ ಪೇಪರ್ ಹೊರ ತೆಗೆದಳು. ಒಂದು ಡೈರಿ ! ಅದರ ಮೇಲೆ ಒಂದು ಸ್ಕೆಚ್-ಹುಡುಗನದು. ಹೋಲಿಕೆ ಸರಿಯಾಗಿ ತಿಳಿಯುತ್ತಿಲ್ಲ. , ಕಣ್ರೆಪ್ಪೆಗಳು, ಹುಬ್ಬುಗಳು, ಮುಂಗುರುಳು ಕೂಡಾ ತಿದ್ದಿದಂತಿತ್ತು. ಕೆಳಗೆ ಒಂದು ಪಕ್ಕದಲ್ಲಿ ಹೃದಯದ ಗುರುತಿನ ಮೇಲೆ ಲಕ್ಷ್ಮಿಯ ಸಹಿಯಿತ್ತು. ಮತ್ತೊಂದು ಮೂಲೆಯಲ್ಲಿ 'ಆರ್' ಎಂಬ ಇಂಗ್ಲೀಷ್ ಅಕ್ಷರ ಆರ್ಟಿಸ್ಟಿಕ್ಕಾಗಿ ಬರೆದಿತ್ತು;

ಕಿರಣ್ಮಯಿ ಅದನ್ನು ಮಾತ್ರ ತೆಗೆದುಕೊಂಡು ಹೊರ ಬಂದಳು.

ತನ್ನ ರೂಮಿಗೆ ಬಂದು ಡೈರಿಯನ್ನು ಓದಲಾರಂಭಿಸಿದಳು ಕಿರಣ್ಮಯಿ. ತುಂಬಾ ಇರಲಿಲ್ಲ. ಜನವರಿ ತಿಂಗಳಿನದು ಮಾತ್ರವಿತ್ತು. ಫೆಬ್ರವರಿ ತಿಂಗಳಿನದು ಅಲ್ಲಲ್ಲಿ ಬರೆದಿತ್ತಷ್ಟೆ. ಆದರೂ ಅಷ್ಟು ಸಾಕು. ತುಂಬಾ ಮುಖ್ಯವಾದ ಇನ್‌ಫಾರ್ಮೇಷನ್ ಇದೆ.

ರಾಯಣ್ಣನನ್ನು ಲಕ್ಷ್ಮಿ ಪ್ರೀತಿಸಿದ್ದಳು. ಎಲ್ಲಿಯೂ ಆ ವಿಷಯವನ್ನು ಬರೆದಿರಲಿಲ್ಲ. ರಾಯಣ್ಣನ ಮದುವೆಯ ವಿಷಯ ಅವಳಿಗೊಂದು ದೊಡ್ಡ ಷಾಕ್. ಆ ವಿಷಯವನ್ನು ಎಲ್ಲಿಯೂ ವ್ಯಕ್ತಪಡಿಸಿರಲಿಲ್ಲ.

ರಾಯಣ್ಣ ಮದುವೆಯ ವಿಷಯ ಹೇಳುವ ಮುಂಚೆಯೇ 'ರೋಹಿಣಿ' ಯೊಂದಿಗೆ ಲಕ್ಷ್ಮಿಯ ಪರಿಚಯವಾಗಿತ್ತು. ಈ ರೋಹಿಣಿ ಯಾರೆಂದು ಡೈರಿಯಲ್ಲಿ ಎಲ್ಲಿಯೂ ಬರೆದಿರಲಿಲ್ಲ.

ರಾಗಿಣಿ ಅಂದರೆ ರಾಯಣ್ಣ !....ಅಷ್ಟು ಮಾತ್ರ ಅರ್ಥವಾಯಿತು.

ಲಕ್ಷ್ಮಿ ಅನುರಾಧಳಿಗೆ ಬರೆದಿರುವ ಕಾಗದದಲ್ಲಿ ರಾಗಿಣಿ ಕೂಡಾ ನನಗೆ

ಮೋಸ ಮಾಡಿದ್ದಾಳೆಂದು ಬರೆದುಕೊಂಡಿದ್ದಾಳೆ. ಅಂದರೆ ರಾಯಣ್ಣ ಕೂಡಾ...

ಕಿರಣ್ಮಯಿ ಅಸಹ್ಯದಿಂದ ತಲೆ ಕೊಡವಿಕೊಂಡಳು. ಯಾವುದೋ ನುಂಗಲಾರದ ಅನುಭವ.

ಆ ರಾತ್ರಿಯೆಲ್ಲಾ ಅವಳು ನಿದ್ರಿಸಲಿಲ್ಲ. ಮಾರನೇ ದಿನವೇ ಕಲ್ಕತ್ತಾಗೆ ಟ್ರಂಕಾಲ್ ಮಾಡಿದಳು. ರಾಯಣ್ಣ ಅಲ್ಲೀ ಟೆಸ್ಟ್ ಆಡುತ್ತಿದ್ದ. ಕಿರಣ್ಮಯಿ ಸ್ವರ ಕೇಳುತ್ತಿದ್ದಂತೆಯೇ 'ಹಾಯ್' ಅಂದ ಉತ್ಸಾಹದಿಂದ. ಆ ಮುಂಚಿನ ಟೆಸ್ಟ್‌ನಲ್ಲಿ ಚೆನ್ನಾಗಿ ಆಡಿದ್ದರಿಂದ ಅವನ ಸ್ವರದಲ್ಲಿ ಆತ್ಮವಿಶ್ವಾಸ ಎದ್ದು ಕಾಣುತ್ತಿತ್ತು. ಕೇಸಿನ ವಿಷಯ ಸಂಪೂರ್ಣವಾಗಿ ಮರೆತಂತಿತ್ತು. "ಕಿರಣ್ ನೀನು ಈ ಕೂಡಲೇ ಬಂದುಬಿಡು. ಇಲ್ಲೆಲ್ಲಾ ಫೆಂಟಾಸ್ಟಿಕ್ಕಾಗಿದೆ." ಕಿರುಚಿದ.

"ನೋಡಿ ನಾನು ಟ್ರಂಕಾಲ್‌ನಲ್ಲಿ ಮಾತಾಡ್ತಿದ್ದೀನಿ. ಒಂದು ವಿಷಯವನ್ನು ಈ ಕೂಡಲೇ ಹೇಳಿ" ಅಂದಳು.

"ಓಹ್...ಸಾರಿ, ಕೇಸ್ ವಿಷಯಾನಾ ?" ನೊಂದುಕೊಂಡವನಂತೆ ಕೇಳಿದ.

"ಹೌದು. ಅದೇ."

"ಎಲ್ಲಿಯವರೆಗೂ ಬಂತು ಕಿರಣ್ ?"

ಆ ಪ್ರಶ್ನೆಗೆ ಉತ್ತರಿಸದೆ—"ನಾನೊಂದು ಪ್ರಶ್ನೆ ಕೇಳುತ್ತೇನೆ. ನಿಯತ್ತಿನಿಂದ ಉತ್ತರ ಕೊಡುವಿರಾ ?" ಅಂದಳು.

"ನಿಯತ್ತಿನಂತಹ ದೊಡ್ಡ ಪದಗಳನ್ನು ಉಪಯೋಗಿಸುತ್ತಿದ್ದೀಯಲ್ಲಾ ಏನು ವಿಷಯ ?"

"ಲಕ್ಷ್ಮಿಗೆ ನಿಮ್ಮ ಮದುವೆಯ ವಿಷಯ ತಿಳಿಸಿದಾಗ ಅವಳ ರಿಯಾಕ್ಷನ್ ಹೇಗಿತ್ತು ?" ಬಾಂಬ್ ಬ್ಲಾಸ್ಟ್ ಮಾಡುತ್ತಿರುವಂತೆ ಕೇಳಿಸುತ್ತಿತ್ತು ಅವನಿಗೆ ಅವಳ ಪ್ರಶ್ನೆ !

"ಹೇಳಿದ್ದೆನಲ್ಲಾ"

"ನೀವು ನಿಜ ಹೇಳಿರಲಿಲ್ಲ... " ಜೋರಾಗಿ ಹೇಳಿದಳು.

"ಹೇಳಿದ್ದೆ"

"ಇಲ್ಲ" ಅವಳು ಮತ್ತಷ್ಟು ಗಟ್ಟಿಯಾಗಿ ಕಿರುಚಿದಳು.

"ಏನು ? ಏನು ಹೇಳಲಿಲ್ಲ ?"

"ಅವಳನ್ನು ನೀವು ಹೊಡೆದ ವಿಷಯ ಹೇಳಿರಲಿಲ್ಲ... "

ಒಂದು ಗಾಢವಾದ ನಿಶ್ಶಬ್ಧದ ಅಲೆ ಟೆಲಿಫೋನ್ ವೈರುಗಳ ನಡುವೆ ಅಡ್ಡವಾಗಿ ಮನಸ್ಸುಗಳನ್ನು ಬೇರೆ ಮಾಡಿದ ಫೀಲಿಂಗ್.

"ಹೇಳಿ, ನಿಜವಾಗಿ ಏನು ನಡೆಯಿತು ? ಈಗಲಾದರೂ ನಿಜ ಹೇಳಿ."

ಸ್ವಲ್ಪ ಹೊತ್ತಿನ ನಿಶ್ಶಬ್ಧದ ನಂತರ ಹೇಳಿದ— "ನನ್ನನ್ನು ಪ್ರೀತಿಸುತ್ತಿದ್ದೇನಿ ಅಂದಳು. ನಾನು ಆಶ್ಚರ್ಯದಿಂದ 'ಏನು ಹೇಳ್ತಿದ್ದಿ ನೀನು ?' ಅಂದೆ. ಅಳೋದಕ್ಕೆ ಪ್ರಾರಂಭಿಸಿದಳು."

"ಅದರಿಂದ ನಿಮಗೆ ಕೋಪ ಬಂದಿದೆ. ವ್ಹಾಟ್ ನಾನ್ಸೆನ್ಸ್ ಅಂದಿದ್ದಿರಿ. ಮಾತಿಗೆ ಮಾತು ಬೆಳೆದಿದೆ. ನೀವು ಆ ಹುಡುಗಿಯ ಕೆನ್ನೆಗೆ ಹೊಡೆದಿದ್ದೀರಿ. ಇದನ್ನೆಲ್ಲಾ ಪೋಲೀಸರಿಗೆ ಹೇಳಿದರೆ ನಿಮ್ಮ ಮೇಲೆ ಅನುಮಾನ ಹೆಚ್ಚಾಗುತ್ತದೆಂದು ಆ ವಿಷಯ ಹೇಳಲಿಲ್ಲ. ಹೌದಾ ?"

"ಹೌದು."

"ಹೌದಾ ? ನಂಬದವಳಂತೆ, ಇನ್ನೊಮ್ಮೆ ಯೋಚಿಸಿ ಹೇಳು ಎಂಬಂತೆ ಕೇಳಿದಳು.

"ಹೌದು ಕಿರಣ್, ಅದಕ್ಕೆ ಪೋಲೀಸರಿಗೆ ಹೇಳಲಿಲ್ಲ."

"ಹಾಗಾದರೆ ನನಗೇಕೆ ಹೇಳಲಿಲ್ಲ ?" ಬಾಣದಂತೆ ನುಗ್ಗಿಬಂದ ಆ ಪ್ರಶ್ನೆಗೆ ರಾಯಣ್ಣ ಆ ಕಡೆಯಿಂದ ಏನೋ ಉತ್ತರಿಸಲು ಪ್ರಯತ್ನಿಸುತ್ತಿದ್ದಂತೆಯೇ ಕಿರಣ್ಮಯಿ ಹೇಳಿದಳು.

"ನಾನು ಏನಾದರೂ ಅಂದು ಕೊಳ್ಳುತ್ತೇನೆಂದು ಹೇಳಲಿಲ್ಲ, ಹೌದಾ.... ನೋಡಿ. ನಾವಿಲ್ಲಿ ಅನುಕ್ಷಣವೂ ನೋವಿನಿಂದ, ಹೆದರಿಕೆಯಿಂದ ಬದುಕುತ್ತಿದ್ದೇನೆ. ಮೇಲೆ ಸಾಮಾನ್ಯವಾಗಿ ಕಾಣಲು ಪ್ರಯತ್ನಿಸುತ್ತಾ ಒಳಗೊಳಗೇ

ಕುಗ್ಗಿ ಹೋಗುತ್ತಿದ್ದೇನೆ! ನಾನು ಸೈಕಾಲಜಿ ಸ್ಟೂಡೆಂಟ್‌ರೀ. ಆದರೆ ಅದಕ್ಕಿಂತಲೂ ಮುಖ್ಯವಾಗಿ ಒಬ್ಬ ಹುಡುಗಿ !! ಒಬ್ಬ ಸ್ತ್ರೀ !!! ನಾನೇನೂ ಈ ನೋವುಗಳಿಗೆ ಅತೀತಳಲ್ಲ. ಒಂದು ವಿಷಯ ಹೇಳಿ ಸಾಕು. ನೀವು ಈ ಕೊಲೆ ಮಾಡಿದ್ದೀರಾ.... ಇಲ್ಲವಾ ?"

"ಇಲ್ಲ" ನೇರವಾಗಿ, ಸ್ಪಷ್ಟವಾಗಿತ್ತು ಉತ್ತರ.

"ಇನ್ನೊಂದು ವಿಷಯವನ್ನು ಕೇಳುತ್ತೇನೆ. ಏನೂ ಅಂದುಕೊಳ್ಳುವುದಿಲ್ಲವಾ ?"

"ಅಂದುಕೊಳ್ಳುವುದಿಲ್ಲ. ಕೇಳು ಕಿರಣ್"

"ನಾನೇನೂ ತಪ್ಪು ತಿಳಿಯುವುದಿಲ್ಲ ಹೇಳಿ. ನಿಯತ್ತಾಗಿ ಹೇಳಿ. ನಿಮಗೂ ಆ ಹುಡುಗಿಗೂ ಸಂಬಂಧವಿತ್ತಾ ?"

"ಇಲ್ಲ"

ಸಣ್ಣ ಸಂಶಯ.... ಸಣ್ಣ ವಿರಾಮ.... "... ಚುಂಬಿಸಿದ್ದಿರಾ ?"

ಇತ್ತಕಡೆ ಕೂಡಾ ಅಷ್ಟೇ ವಿರಾಮ. "....ಚುಂಬಿಸಿದ್ದೆ."

ಒಡೆದ ನಂಬಿಕೆಯ ಗೋಡೆಯ ಬಿರುಕಿನಿಂದ ಬಂದ ಕರ್ಕಶ ಶಬ್ದ.

"ನನ್ನನ್ನು ನಂಬು ಕಿರಣ್. ಆ ಹುಡುಗಿ ನ್ಯೂಸೆನ್ಸಾಗಿ ಅಳುತ್ತಿದ್ದರೆ ನನಗೆ ಸಿಟ್ಟು ಬಂತು. ನಾನೇನೋ ತಪ್ಪು ಮಾಡಿದೆನೆಂಬಂತೆ ಹಾಗವಳು ಅಳುತ್ತಿದ್ದರೆ ತಡೆಯಲಾರದೆ ಅವಳ ಕೆನ್ನೆಗೆ ಹೊಡೆದೆ. ಅದರಿಂದ ಅವಳು ಮತ್ತಷ್ಟು ಹಿಸ್ಟೀರಿಕ್ ಆದಳು. ಹತ್ತಿರಕ್ಕೆಳೆದುಕೊಂಡು ಚುಂಬಿಸಿ ಸಮಾಧಾನಗೊಳಿಸಿದೆ. ಅದೇ ಮೊದಲು.... ಅದೇ ಕೊನೆ ಕೂಡಾ."

ಅವನ ಮಾತಿನ್ನೂ ಪೂರ್ತಿಯಾಗುವುದಕ್ಕೆ ಮುಂಚೆಯೇ ಅವಳು ಫೋನಿಡುತ್ತಾ ಹೇಳಿದಳು — "ಆ ಚುಂಬನವೇ ಅವಳ ಪ್ರಾಣ ತೆಗೆಯಿತು."

ಟೇಲಿಫೋನ್ ಬೂತ್‌ನಿಂದ ಅವಳು ಹಾಸ್ಟೆಲಿಗೆ ಬರುವ ವೇಳೆಗೆ ಚಿರಂಜೀವಿಯ ಬಳಿಯಿಂದ ಒಂದು ಕವರ್ ಬಂದಿತ್ತು. ಅದರಲ್ಲಿ ಅವಳು ಕೇಳಿದಂತೆಯೇ ರಾಜಾರಾವ್ ಫೋಟೋ ಇತ್ತು.

ಅದನ್ನು ತೆಗೆದುಕೊಂಡು ಕಿರಣ್ಮಯಿ ಪ್ರೀತಿಯ ಬಳಿಗೆ ಹೋದಳು. "ಅವತ್ತು ಹೋಟೇಲಿನಲ್ಲಿ ಲಕ್ಷ್ಮಿಯ ಜೊತೆ ನೋಡಿದ್ದು ಈತನನ್ನೇನಾ ?" ಫೋಟೋ ತೋರಿಸುತ್ತಾ ಕೇಳಿದಳು.

ಪ್ರೀತಿ ತುಂಬಾ ಹೆದರಿದ್ದಳು. "ಹೀಗೇಕೆ ನೀವೆಲ್ಲಾ ನನ್ನನ್ನು ಕಾಡುತ್ತಿದ್ದೀರಿ ? ಆ ಇನ್ಸ್‌ಪೆಕ್ಟರ್ ಕೂಡಾ ಅದನ್ನೇ ಕೇಳುತ್ತಿದ್ದಾರೆ. ಇವನೇ–ಇವನೇ–ಇವನೇ" ಎಂದು ಕಿರುಚಿದಳು.

ಕಿರಣ್ಮಯಿ ಗಾಢವಾಗಿ ಉಸಿರಾಡಿ ಅಲ್ಲಿಂದ ಎದ್ದಳು. 'ರೋಹಿಣಿ' ಎಂದರೆ ಯಾರೆಂದು ಅವಳಿಗೆ ಅರ್ಥವಾಯಿತು. ಅವಳು ಅಲ್ಲಿಂದ ಹೊರಟು ಚಿರಂಜೀವಿಗೆ ಫೋನ್ ಮಾಡಿದಳು.

"ನಂಗೆ ಸ್ವಲ್ಪ ಇನ್‌ಫಾರ್ಮೇಷನ್ ಬೇಕು."

"ಏನಮ್ಮಾ ?"

"ರಾಜಾರಾವ್‌ಗೆ ಪೊಲಿಟಿಕಲ್ ಬ್ಯಾಕಿಂಗ್ ಇದೆಯಾ ?"

"ಏಕೆ ಬಂತು ಆ ಅನುಮಾನ ?"

"ಹೇಳಿ ಪ್ಲೀಸ್"

"ಬ್ಯಾಕಿಂಗ್ ಒಂದೇ ಏನಮ್ಮಾ — ಅವನಾರೆಂದು ಕೊಂಡಿದ್ದಿ ? ಮಹಾರಾಷ್ಟ್ರ ಗೌರ್ವನರ್ ಸತ್ಯನಾರಾಯಣನ ಮಗ. ಕೋಟೀಶ್ವರ."

ಅನೂರಾಧ ಭೀಗದ ಕೈ ಸಹಾಯದಿಂದ ಸಂಪಾದಿಸಿದ ಲಕ್ಷ್ಮಿಯ ಲೇಟೆಸ್ಟ್ ಡೈರಿಯಲ್ಲಿ 'ರೋಹಿಣಿ' ಎಂದು ಬರೆದಿರುವ ಕಡೆ 'ರಾಜಾರಾವ್' ಎಂದು ಬದಲಾಯಿಸಿದರೆ—

ಕಿರಣ್ಮಯಿಗೆ ನಡೆದದ್ದು ಅರ್ಥವಾಯಿತು.

ರಾಯಣ್ಣ ಬಂದು ಮದುವೆ ಸೆಟಲ್ ಆಗಿದೆಯೆಂದು ಹೇಳಿದ ಕೂಡಲೇ ಆ ಹುಡುಗಿ ತನ್ನ ಮನಸ್ಸಿನಲ್ಲಿದ್ದನ್ನು ಹೇಳಿದ್ದಾಳೆ.... ಅತ್ತಿದ್ದಾಳೆ.... ರಾಯಣ್ಣ ಸಿಟ್ಟಾಗಿ ಅವಳನ್ನು ಹೊಡೆದಿದ್ದಾನೆ. ಮತ್ತೆ ಅನುಕಂಪ ಮೂಡಿ ಚುಂಬಿಸಿದ್ದಾನೆ. ಅವನ ಏಟು ಅವಳ 'ಅಹಂ'ಗೆ ಪೆಟ್ಟುಬಿದ್ದಿದೆ.

ಅದುವರೆವಿಗೆ ಅವಳಿಗೆ ರಾಜಾರಾವ್‌ನ ಪರಿಚಯವಾಗಿದೆ. ಸಾಮಾನ್ಯವಾಗಿ ನಮಗೆ ಹತ್ತಿರದವರೆಂದುಕೊಂಡವರು ಮೋಸ ಮಾಡಿದಾಗ, ಕಟ್ಟಿದ ಕನಸುಗಳು ಭಗ್ನವಾದಾಗ, ಮನಸ್ಸು ಕೆಟ್ಟಾಗ – ಮತ್ತೊಬ್ಬ ಆತ್ಮೀಯರ ಬಳಿಗೆ ಹೋಗುತ್ತೇವೆ. ಆ ಸ್ನೇಹಿತರ ಬಳಿ ಸಮಾಧಾನ ಹೊಂದಲು ಯತ್ನಿಸುತ್ತೇವೆ. ಅದು ಸ್ನೇಹಿತರಾಗಬಹುದು, ಸ್ನೇಹಿತೆಯರಾಗಬಹುದು.... ಸಾಂತ್ವನಕ್ಕಾಗಿ ಅವರ ಸನಿಹವನ್ನು ಬಯಸುತ್ತೇವೆ. ಆ ನೋವಿನಲ್ಲೇ ನಮ್ಮ ಮನಸ್ಸಿನ ಬಗ್ಗೆ ನಡೆದು ಹೋದ ಘಟನೆಗಳ ಬಗ್ಗೆ, ನಾವು ಅವರನ್ನು ಹೇಗೆ ನಂಬಿದೆವು, ಆ ಪರಿಚಯದ ಬಗ್ಗೆ ವಿವರವಾಗಿ ಹೇಳುತ್ತೇವೆ. ಸಹಾನುಭೂತಿ, ಸಮಾಧಾನ ಹೊಂದಿ ಕ್ರಮೇಣ ಸಾಮಾನ್ಯ ಮನುಷ್ಯರಾಗುತ್ತೇವೆ.

ಆದರೆ ಆ ಮತ್ತೊಬ್ಬ ವ್ಯಕ್ತಿಯೂ ಸ್ವಾರ್ಥಿಯಾದರ ?

ಈ ಅವಕಾಶವನ್ನು ತನಗಾಗಿ ಉಪಯೋಗಿಸಿಕೊಳ್ಳುವವರಾದರೆ ?

ಧೈರ್ಯ ಹೇಳುತ್ತಾನೆ, ಸಮಾಧಾನಪಡಿಸುತ್ತಾನೆ, ಆ ವ್ಯಕ್ತಿ ಎಷ್ಟು ಮೋಸಗಾರನೆಂದು ಮತ್ತಷ್ಟು ಹೇಳುತ್ತಾನೆ. ಮನಸ್ಸನ್ನು ಮತ್ತಷ್ಟು ಮುರಿಯುತ್ತಾನೆ, ಆ ಮುರಿದ ಚೂರುಗಳನ್ನು ಒಂದುಗೂಡಿಸುವ ಏಕೈಕ ವ್ಯಕ್ತಿ ತಾನೇ ಎಂದು ನಂಬಿಕೆ ಹುಟ್ಟಿಸುತ್ತಾನೆ. ರಾಜಾರಾವ್ ಕೂಡಾ ಮಾಡಿದ್ದು ಇದನ್ನೇ.

ಲಕ್ಷ್ಮಿ ಅವನ ಬಳಿಗೆ ಬರುವ ವೇಳಗ ಅವಳ ಮೂಡ್ ಸಂಪೂರ್ಣವಾಗಿ ಕೆಟ್ಟಿತ್ತು. ಅದನ್ನು ಆವನು ಸರಿಯಾಗಿ ಉಪಯೋಗಿಸಿಕೊಂಡ. ಸಮಾಧಾನಪಡಿಸುವನಂತೆ ಚುಂಬಿಸಿದ್ದಾನೆ ಆವಳನ್ನು. ಅಂದಿನ ಡೈರಿಯಲ್ಲಿ ಬರೆದುಕೊಂಡಿದ್ದಾಳೆ,

—'ಒಮ್ಮೆ ರಾಯಣ್ಣನ ಚುಂಬನದಿಂದ ಎಂಜಲಾದ ಈ ತುಟಿಗಳನ್ನು ಎಷ್ಟು ಜನ ಚುಂಬಿಸಿದರೆ ಏನು ?' ಎಂದು. ಅದೊಂದು ನಿರಾಸಕ್ತ ಅವಸ್ಥೆ. ಸೂಡೋ ಫಿಲಾಸಫಿ.

ಆನಂತರ ಲಕ್ಷ್ಮಿಯ ಭಾವನೆಗಳು ಬದಲಾಗಿವೆ. ತನ್ನ ಪರಿಸ್ಥಿತಿಗಳಿಗೆ ಅನುಗುಣವಾಗಿ ತನಗೆ ಬೇಕಾದಂತೆ ತನ್ನ ಭಾವನೆಗಳನ್ನು ಬದಲಾಯಿಸಿಕೊಂಡಿದ್ದಾಳೆ. ಯಾರೇ ಆದರೂ ಮಾಡುವುದು ಅದನ್ನೇ ತಾನೆ.

ಅವಳು ಓದಿದ ಮಿಲ್ಸ್ ಅಂಡ್ ಬೂನ್ ಪುಸ್ತಕಗಳ ಪ್ರಭಾವ ರಾಜಾ ರಾವ್‌ನಲ್ಲಿ ಅವಳಿಗೆ ಹೀರೊ ಕಂಡಿದ್ದಾನೆ. ರಾಜಾರಾವ್‌ಗೆ ತುಂಬಾ ಜನ ಗರ್ಲ್ ಫ್ರೆಂಡ್‌ಗಳಿದ್ದಾರೆ (ತಾನು ಅವನನ್ನು ಬದಲಾಯಿಸಬಲ್ಲಳು), ಹಣ ಹೆಚ್ಚಾಗಿ ಕೊಟ್ಟು ಹೋಗಿದ್ದಾನೆ (ಸರಿಯಾದ ಪ್ರೀತಿ ಸಿಕ್ಕದ) – ನನ್ನೊಡನೆ ಒಂದು ರಾತ್ರಿ ಕಳೆಯುತ್ತೀಯಾ ? ನಿನಗಿಷ್ಟವಾದರೆ ಮಾತ್ರ – ಇಲ್ಲದಿದ್ದರೆ ಬೇಡ ಅಂದಿದ್ದ. (ಅವನ ಫ್ರಾಂಕ್‌ನೆಸ್ ಮೆಚ್ಚಿಗೆಯಾಯಿತು) ರಾಜಾರಾವ್‌ಗೆ ಎಷ್ಟು ಜನ ಗರ್ಲ್ ಫ್ರೆಂಡ್ಸ್ ಇದ್ದರೂ ತಾನೊಬ್ಬಳೇ ಅವನ ಮನಸ್ಸಿಗೆ ಹತ್ತಿರವಾದ ಹುಡುಗಿ. ಅದು ತಮ್ಮಿಬ್ಬರಿಗೆ ಮಾತ್ರ ಗೊತ್ತು. ಆದಕ್ಕೆ ಅವನು ಉಳಿದ ಎಲ್ಲಾ ಹುಡುಗಿಯರನ್ನೂ ಆ ನಾಲ್ಕು ದಿನ ತನಗಾಗಿ ಬಿಟ್ಟು ಬಿಟ್ಟಿದ್ದ. ಆ ನಂತರ ಅವನು ಅರ್ಜೆಂಟ್ ಕೆಲಸದ ಮೇಲೆ ಡೆಲ್ಲಿಗೆ ಹೋಗ ಬೇಕಾಗಿ ಬಂತು. 'ನನ್ನನ್ನು ಮರೆತು ಬಿಡು ಅನ್ನುವುದಿಲ್ಲ, ನನ್ನ ಬದುಕಿ ನಲ್ಲೆಲ್ಲಾ ಅತ್ಯಂತ ಸಂತೋಷಕರವಾದ ದಿನಗಳು ನಿನ್ನೊಡನೆ ಕಳೆದದ್ದೇ' ಅಂದ ಕೈಯ್ಯಲ್ಲಿ ಕೈ ಹಾಕಿ.... ಚೆನ್ನಾಗಿ ಓದಿಕೋ, ನನ್ನ ಬಗ್ಗೆ ಹೆಚ್ಚು ಯೋಚಿಸಬೇಡ' ಅಂದ, ರಾಯಣ್ಣ ಹೊರಟು ಹೋಗುತ್ತಿದ್ದಾಗ ಆದಷ್ಟು ನೋವು ಈಗಿಲ್ಲ, ಎರಡನೆ ಅನುಭವವಲ್ಲವಾ ?

ಆದರೂ ಅವನ ಮೇಲಿನ ಪ್ರೀತಿಯ ಬಗ್ಗೆ ಅವಳಿಗೆ ನಂಬಿಕೆಯಿತ್ತು. ಬದಲಾಗಿರುವ ರಾಜಾರಾವ್ ಹಿಂತಿರುಗಿ ಬರುತ್ತಾನೆ, ಅವನು ಬರುವ ವರೆಗೂ ತಾನು ಎದುರು ನೋಡುತ್ತಿರುತ್ತಾಳೆ.

ಹಾಗೆ ಎದುರು ನೋಡುತ್ತಿರುವಾಗ—

ರಾಜಾರಾವ್ ವೆಡ್ಡಿಂಗ್ ಕಾರ್ಡನ್ನು ಡೆಲ್ಲಿಯಿಂದ ಪೋಸ್ಟ್ ಮಾಡಿದ್ದ. ರೋಹಿಣಿ ಎಂಬ ಕೋಡ್‌ವರ್ಡ್‌ಗೆ ರಾಜಾರಾವ್ ಎಂದು ಕಿರಣ್ಮಯಿಗೆ ಅರ್ಥವಾದದ್ದು ಇಲ್ಲೇ).

ಲಕ್ಷ್ಮಿ ಕನಸಿನ ಮನೆ ಕುಸಿದು ಚೂರು ಚೂರಾಯಿತು.

ಅವಳ ಪ್ರೀತಿಯನ್ನು, ತ್ಯಾಗವನ್ನು ಗುರುತಿಸದ ಅವಳ ಬದುಕಿನ ಎರಡನೆ ಹೀರೊ ಕೂಡಾ ಹೊರಟು ಹೋದ. ಆಗ ಬಂತು ಅವಳಿಗೆ ಅಳು, ಹಸಿ ಹಸಿ ಕಾಮುಕರಂತೆ ವರ್ತಿಸಿದೆ ಅಂದುಕೊಂಡಳು. ಅಪಾತ್ರದಾನ

ಮಾಡಿದ್ದಕ್ಕೆ ತನ್ನನ್ನು ತಾನು ನಿಂದಿಸಿಕೊಂಡಳು. ತಾನೆಷ್ಟು ಕೆಟ್ಟು ಹೋಗಿದ್ದಾಳೆಂದು ಅರ್ಥವಾದ ಮೇಲೆ ಸಂಪೂರ್ಣ ಹುಚ್ಚಿಯಂತಾದಳು. ಆ ಸಮಯದಲ್ಲಿ ಅನೂರಾಧಳೂ ಇಲ್ಲದಿದ್ದುದು ಅವಳಿಗೆ ಮತ್ತಷ್ಟು ಪೆಟ್ಟಾಯಿತು.

ನಿಧಾನವಾಗಿ ಅವಳು ಚೇತರಿಸಿಕೊಂಡಳು.

ಆಗಲೇ ಕೊನೆಯ ಸಲ ರಾಯಣ್ಣ ಬಂದ. ಲಗ್ನಪತ್ರಿಕೆ ಕೊಟ್ಟ. ಅವಳು ಸಂತೋಷವಾಗಿ ಅದನ್ನು ಸ್ವೀಕರಿಸಿ 'ಸಾರಿ' ಹೇಳಿದ್ದಾಳೆ. ಅವನು ಹಗುರವಾಗಿ ನಕ್ಕು ಹೊರಟು ಹೋಗಿದ್ದನೆ.

ಸರಿಯಾಗಿ ಇದೇ ಸಮಯದಲ್ಲಿ ತಂದೆ ಬರುತ್ತಿರುವುದಾಗಿ ಬರೆದಿದ್ದಾರೆ. ಆಗ ಅವಳು ಅನುಭವಿಸಿದ ಮಾನಸಿಕ ವೇದನೆಯನ್ನು ಡೈರಿಯಲ್ಲಿ ವಿವರವಾಗಿ ಬರೆದುಕೊಂಡಿದ್ದಾಳೆ.

**ಅದೇ ಅವಳು ಡೈರಿಯಲ್ಲಿ ಬರೆದುಕೊಂಡಿರುವ ಅಂತಿಮ ಪುಟ.**

"ನನ್ನ ಅಪ್ಪ ಬಂದರು. ಯಾವುದೋ ಮೀಟಿಂಗಿಗೆ ಬಂದಿದ್ದರಂತೆ. ರಾತ್ರಿ ಹೊರಟು ಹೋಗಬೇಕಂತೆ. ತುಂಬಾ ಸುಸ್ತಾಗಿದ್ದರು. 'ನಮ್ಮ ಬಗ್ಗೆ ಚಿಂತಿಸುತ್ತಿದ್ದೀಯಾ ತಾಯಿ. ತುಂಬಾ ಸಣ್ಣಗಾಗಿದ್ದಿ?" ಎಂದರು.

ನನ್ನ ಮುಖದಲ್ಲಿ ನಮ್ಮ ಸಂಸಾರದ ಬಗ್ಗೆಯಿದ್ದ ಅನುರಾಗ, ಅವರ ಹತ್ತಿರವಿಲ್ಲವೆಂಬ ಚಿಂತೆ ಬಿಟ್ಟು ಅವರು ಬೇರಾವ ತಪ್ಪನ್ನೂ ಕಂಡುಹಿಡಿಯಲಾರದೆ ಹೋದರು. ನಾನಿನ್ನೂ ಅದೇ ಹುಡುಗಿಯೆಂದೂ, ನನ್ನಲ್ಲಿ ಯಾವ ಕಲ್ಮಶವೂ ಇಲ್ಲವೆಂದು ನಿಶ್ಚಿತವಾಗಿಯೂ ನಂಬಿದ್ದಾರೆ.

ಸ್ವಲ್ಪ ಹೊತ್ತು ಕುಳಿತು, 'ಬರ್ತೀನಮ್ಮಾ' ಎಂದು ಎದ್ದರು.

'ಹಾಗೆ ಆಗಲಿ ಅಪ್ಪಾ' ಅಂದೆ. ಗೇಟಿನ ಹೊರಗೆ ಮೈದಾನದವರೆಗೂ ಅವರೊಡನೆ ಹೋಗಿಬರಬೇಕೆಂಬ ನನ್ನ ಉದ್ದೇಶ. ಅದನ್ನು ಗ್ರಹಿಸಿದವರಂತೆ, 'ಬೇಡಮ್ಮಾ ಕತ್ತಲಾಗಿದೆ. ಕತ್ತಲಲ್ಲಿ ನೀನೊಬ್ಬಳೇ ಹಿಂತಿರುಗಿ ಬರಲಾರೆ. ನಾನು ಹೋಗಿ ಬರ್ತೀನಿ ಬಿಡು' ಅಂದರು.

ತುಂಬಾ ಹೊತ್ತು ಸ್ತಬ್ದಳಾಗಿ ಹಾಗೆಯೇ ನಿಂತು ಬಿಟ್ಟೆ. ಅವರಿಗೆ ನನ್ನ ಮೇಲೆ ಎಷ್ಟು ನಂಬಿಕೆ! ಇಷ್ಟು ಜನ ಹಾಳುಗೆಟ್ಟ ಹುಡುಗಿಯರ ನಡುವೆಯಿದ್ದು ಕೂಡಾ ನಾನು ಪವಿತ್ರವಾಗಿ, ನಿಯತ್ತಾಗಿಯೇ ದಿನ ಕಳೆಯುತ್ತಿದ್ದೀನೆಂಬ ವಿಶ್ವಾಸ.

ಓಡಿ ಹೋಗಿ ಅವರಿಗೆ ಹೇಳಬೇಕೆನ್ನಿಸಿತು. "ಅಪ್ಪಾ, ಇಲ್ಲಿ ಕುಳಿತಿರುವ ಹುಡುಗಿಯರು ನನಗಿಂತಲೂ ಎಷ್ಟೋ ಒಳ್ಳೆಯವರು, ಪವಿತ್ರರು. ಅವರು ಸಂಜೆಯ ವೇಳೆ ಒಂದೆರಡು ಗಂಟೆಗಳ ಕಾಲ ಹೀಗೆ ಕಳೆಯುತ್ತಾರೆ, ನಾನು ಮಾತ್ರ ಅರ್ಧ ರಾತ್ರಿಯವರೆಗೂ ಹುಡುಗರೊಡನೆ ಸೇರಿ ಸುತ್ತಾಡಿಕೊಂಡು ಬರುತ್ತೀನಿ. ಪ್ರೀತಿಯೆಂಬ ಆಕರ್ಷಣೆಗೆ ಸಿಲುಕಿ ಒಬ್ಬ ಗಂಡಸಿಗೆ ಶೀಲವನ್ನು ಅರ್ಪಿಸಿಕೊಂಡ ಕುಲಟೆ. ನಾನು ಕೆಟ್ಟು ಹೋಗಿದ್ದೇನೆ ಅಪ್ಪಾ, ಮುಗ್ಧಳಾದ ಆ ನಿಮ್ಮ ಮಗಳು ಈಗಿಲ್ಲ. ಸತ್ತು ಹೋಗಿದ್ದಾಳೆ. ಈಗುಳಿದಿರುವುದು ಅಪವಿತ್ರಳಾದ ಲಕ್ಷ್ಮಿ ಮಾತ್ರ." ಎಂದು ಸ್ವರವೆತ್ತಿ ಕೂಗಬೇಕೆನ್ನಿಸಿತು.

ಅವರು ನನ್ನ ತಪ್ಪನ್ನು ಗ್ರಹಿಸಿ ನನ್ನನ್ನು ಬೈದರೂ ಪರವಾಗಿಲ್ಲ ಚೆನ್ನಾಗಿತ್ತು. ನನ್ನನ್ನು ಕೊಂದು ಹಾಕಿದ್ದರೂ ಚೆನ್ನಾಗಿತ್ತು.

ಕೊನೆಯ ಪುಟವನ್ನು ಓದಿ ಮುಗಿಸಿದ ಕಿರಣ್ಮಯಿಯ ಮನಸ್ಸೆಲ್ಲಾ ವಿಕಲ್ಪವಾಯಿತು.

ಕಿಟಕಿಯಲ್ಲಿ ಕುಳಿತು ಕತ್ತಲನ್ನೇ ನೋಡುತ್ತಿದ್ದಳು. ಅವಳಿಗೆ ಏನು ಮಾಡಬೇಕೋ, ಈ ಕೇಸಿನಲ್ಲಿ ಹೇಗೆ ಮುಂದುವರೆಯ ಬೇಕೋ ತಿಳಿಯಲಿಲ್ಲ. ಲಕ್ಷ್ಮಿಗೆ ರಾಜಾರಾವ್ - ಸ್ನೇಹಿತನೆಂಬ ವಿಷಯ ಯಾವ ರೀತಿಯಿಂದಲೂ ಕೋರ್ಟಿನಲ್ಲಿ ಉಪಯೋಗವಾಗುವುದಿಲ್ಲವೆಂದು ಲಾಯರ್ ಚಿರಂಜೀವಿ ಹೇಳಿದ. ಅಷ್ಟೇ ಅಲ್ಲ, ಲಕ್ಷ್ಮಿಗೂ, ರಾಯಣ್ಣನಿಗೂ ಯಾವ ಶಾರೀರಿಕ ಸಂಬಂಧವೂ ಇಲ್ಲವೆಂದು ನಿರೂಪಿಸಲೂ ಸಹ ಸಾಕ್ಷ್ಯಗಳಿರಲಿಲ್ಲ.

ಮತ್ತೆ ಹೇಗೆ ?

ಅವಳು ಕಿಟಕಿಯಿಂದ ಎದ್ದು ಬಂದು ಕುರ್ಚಿಯಲ್ಲಿ ಕುಳಿತಳು. ಹೊರಗೆ ಕತ್ತಲೆ ಆವರಿಸುತ್ತಿತ್ತು.

ಅವಳೀಗ ಹದಿಮೂರನೆ ರೂಮಿನಲ್ಲಿದ್ದಳು. ಅನೂರಾಧ ಇನ್ನು ಆ ರೂಮಿಗೆ ಹೋಗುವುದಿಲ್ಲವೆಂದಾಗ ಇಂದುಮತಿಗೆ ಅಲ್ಲಿಗೆ ಹೋಗಲು ತಿಳಿಸಿದರು ವಾರ್ಡನ್.

ಕಿರಣ್ಮಯಿ ಆ ಹುಡುಗಿಯನ್ನು ಹಿಪ್ನೊಸಿ ಹೆದರಿಕೆ ಓಡಿಸಿದಳು.

ಈಗವಳು ಆ ರೂಮಿನಲ್ಲಿ ಒಂಟಿಯಾಗಿಯೇ ಇದ್ದಳು.

ಹೊರಗೆ ಮತ್ತಷ್ಟು ಕತ್ತಲಾಯಿತು. ಅವಳ ಆಲೋಚನೆಗಳು ಲಕ್ಷ್ಮಿಯ ಸುತ್ತಲೂ ಸುತ್ತುತ್ತಿತ್ತು. ಬಹುಶಃ ಆ ಹುಡುಗಿ ಕೂಡಾ ಹೀಗೇ ಎಷ್ಟೋ ಏಕಾಂತ ರಾತ್ರಿಗಳನ್ನು ಇದೇ ಕುರ್ಚಿಯಲ್ಲಿ ಕುಳಿತು ಕಳೆದಿರಬಹುದು ಹೊರಗಿನ ಕತ್ತಲೆಯನ್ನು ನೋಡುತ್ತಾ.

ಹಾಸ್ಟೆಲಿಗೆ ಸೇರಿದ ಹೊಸದರಲ್ಲಿ ತಂದೆ-ತಾಯಿಯರನ್ನು ಕಾಣುವ ಹಂಬಲ, ನಂತರ ಬಾಯ್ ಫ್ರೆಂಡ್‌ಗಳನು ಕಾಣುವ ಹಂಬಲ.

ಓ ಹಾಸ್ಟೆಲ್ ! ಹದಿನಾರು ವರ್ಷದ ಹುಡುಗಿಯರಲ್ಲಿ – ಒಂದು ವರ್ಷದಲ್ಲೇ ಎಷ್ಟು ಮೆಚ್ಯೂರಿಟಿ ತರಬಲ್ಲೆ !! ನಿನಗೆ ನನ್ನ ನಮಸ್ಕಾರಗಳು.

ಕಿರಣ್ಮಯಿ ಕಣ್ಣನ್ನು ಕಿರಿದು ಮಾಡಿ ನೋಡಿದಳು. ದೂರದಲ್ಲಿ ಗಿಡಗಳ ಹಿಂದೆ ನೆರಳುಗಳು.

ಹದಿ ಮೂರನೆ ರೂಮು ವರಾಂಡದ ಕೊನೆಯಲ್ಲಿತ್ತು. ಅದರ ಪಕ್ಕದಲ್ಲೇ ತೋಟ. ಕಿಟಕಿ ತೆರೆದರೆ ತೋಟ ಕಾಣುತ್ತದೆ. ಮುಖ್ಯವಾಗಿ ಆ ಸೀಮೆಂಟ್ ಬೆಂಚುಗಳಿದ್ದ ಭಾಗ ಸ್ಪಷ್ಟವಾಗಿ ಕಾಣುತ್ತದೆ. ಇಕ್ಕಟ್ಟಾದ ದಾರಿಯಲ್ಲಿ ಅಲ್ಲಿಗೆ ಹೋಗಬೇಕು. 'no public kissing here please' ಎಂಬ ಬೋರ್ಡನ್ನು ದಾಟಿ ಇನ್ನೂ ಈಚೆಗೆ ಬಂದರೆ.... ಒಮ್ಮೆ ಆ ಸೀಮೆಂಟ್ ಬೆಂಚುಗಳ ಹಿಂದೆ ಸೇರಿದರೆ.... ಇನ್ನಾರಿಗೂ ಕಾಣುವುದಿಲ್ಲ – ಹದಿಮೂರನೆ ರೂಮಿನಿಂದ ಬಿಟ್ಟು.

ತುಂಬಾ ಕಡಿಮೆ ಜೋಡಿಗಳಿಗೆ ಮಾತ್ರ ತಿಳಿದಿರುವ ರಹಸ್ಯ ಸ್ಥಳವಾಗಿರ

ಬೇಕು ಅದು ರೂಮಿನಲ್ಲಿ ಲೈಟ್ ಆರಿಸಿದರೆ. ಕಿಟಕಿಯಿಂದ ಯಾರಾದರೂ ನೋಡುತ್ತಿರುವುದು ಕೂಡಾ ಕಾಣುವುದಿಲ್ಲ.

ಕಿರಣ್ಮಯಿಗೆ ಆ ದೃಶ್ಯ ಸ್ಪಷ್ಟವಾಗಿ ಕಾಣುತ್ತಿತ್ತು. ದೂರದಿಂದ ಅವರ ಮೇಲೆ ಬೆಳಕು ಬೀಳುತ್ತಿತ್ತು. ಆ ಹುಡುಗಿ ವನಜಾಕ್ಷಿ. ಹುಡುಗ ಯಾರೋ ಗೊತ್ತಿಲ್ಲ... ಇಬ್ಬರೂ ಒಬ್ಬರ ತೆಕ್ಕೆಯಲ್ಲಿ ಮತ್ತೊಬ್ಬರು, ತುಟಿಗಳು ಬೇರೆಯಾಗದಂತೆ ಚುಂಬಿಸಿಕೊಳ್ಳುತ್ತಿದ್ದಾರೆ. ದೂರದಿಂದ ಇತ್ತ ಕಡೆಗೆ ಯಾರು ಬಂದರೂ ಮೊದಲು ಅವರಿಗೆ ಕಾಣುತ್ತದೆ. ಅದೇ ಅವರ ಧೈರ್ಯ! ಅವರ ಹಿಂದೆ ಉದ್ದವಾದ ಗೋಡೆಯಿದೆ. ಹಾಗಾಗಿ ಆ ಕಡೆಯಿಂದ ಯಾರೂ ಬರುವ ವಿಷಯವೇ ಇಲ್ಲ. ಆ ಗೋಡೆಗೇ ಇದೆ ಹದಿಮೂರನೆ ರೂಮಿನ ಕಿಟಕಿ!

ಕಿರಣ್ಮಯಿ ಆ ದೃಶ್ಯವನ್ನು ನೋಡುತ್ತಿಲ್ಲ, ಕೆಲವು ದಿನಗಳ ಹಿಂದೆ ಇದೇ ರೀತಿಯ ದೃಶ್ಯಗಳನ್ನು ನೋಡಿದ್ದ ಲಕ್ಷ್ಮಿಯ ಮಾನಸಿಕ ಪರಿಸ್ಥಿತಿಯನ್ನು ಊಹಿಸಿಕೊಳ್ಳುತ್ತಿದ್ದಳು.

ಆ ಹುಡುಗಿ ನೆಮ್ಮದಿಯಿಂದ ಕೆಳಗೆ ಮಲಗಿಕೊಂಡಳು. ಅವನು ಪಕ್ಕದಲ್ಲಿ ಮಲಗಿ ಆ ಹುಡುಗಿಯ ಬ್ಲೌಸಿನ ಮೇಲೆ ಕೈ ಹಾಕಿದ, '... ಊಹ್ಞೂ ಇವೆಲ್ಲಾ ಬೇಡ' ಆ ಹುಡುಗಿ ಗುಸು ಗುಸು ಮಾತನಾಡಿದರೂ ಆ ನಿಶ್ಶಬ್ದದಲ್ಲಿ ಸ್ಪಷ್ಟವಾಗಿ ಕೇಳಿಸಿತು. ಅವನು ವನಜಾಕ್ಷಿಯ ಮೇಲೆ ಬಂದು ಸಂಪೂರ್ಣವಾಗಿ ಆಕ್ರಮಿಸಿಕೊಂಡ, ಇಬ್ಬರೂ ಪೂರ್ತಿಯಾಗಿ ಬಟ್ಟೆಗಳನ್ನು ಬಿಚ್ಚಿನಲಿಲ್ಲ. ವನಜಾಕ್ಷಿಯ ಮ್ಯಾಕ್ಸಿ ಮೇಲಕ್ಕೇರಿತ್ತು. ಕತ್ತಲು ಬೆಳಕಿನ ಆಟದಲ್ಲಿ ಅವನ ಚಲನೆ ತಿಳಿಯುತ್ತಿತ್ತು ಆ ಹುಡುಗಿ ಒಂದು ಕಡೆ ಆವೇಶದಿಂದಲೂ—ಸಂತೃಪ್ತಿ ಹೊಂದಿದ ಸ್ವರದಿಂದಲೂ ಮುಲುಗುತ್ತಿದ್ದಳು, ಮತ್ತೊಂದು ಕಡೆ 'ಬೇಗ – ಯಾರಾದರೂ ಬಂದರೆ ಚೆನ್ನಾಗಿರೋಲ್ಲ' ಎಂದು ಆತುರಪಡುತ್ತಿದ್ದಳು.

ವಿದ್ಯೆಯ ದೇವತೆಯಾದ ಸರಸ್ವತಿ ಕೈಯಲ್ಲಿ ವೀಣೆ – ಇಂತಹ ಕಡೆ ಮೀಟಿದರೆ ಕೇಳಿಸುವುದು ಓಂಕಾರ ವೇದವಲ್ಲ – ಶೃಂಗಾರನಾದ.

ವಿದ್ಯೆಗೆ ಸ್ಥಾವರವಾದ ಕಾಲೇಜಿನ ಪ್ರಾಂಗಣ—ಅಪವಿತ್ರ—ಜಾಗವಾದರೆ ಅಲ್ಲಿ ಸಿದ್ಧಿಸುವುದು ವಿಜ್ಞಾನವಲ್ಲ—ಕಾಮಕೇಳೀ ವಿನೋದ.

ಕಿರಣ್ಮಯಿ ಆ ದೃಶ್ಯವನ್ನು ನೋಡುತ್ತಿಲ್ಲ. ಅವಳ ಆಲೋಚನೆಗಳು ಅಲ್ಲಿ ಇರಲೇ ಇಲ್ಲ. ಹಿಂದಿನ ದಿನ ತನಗೂ ಲಾಯರ್ ಚಿರಂಜೀವಿಗೂ ನಡುವೆ ನಡೆದ ಮಾತುಗಳನ್ನು ಮೇಲಕು ಹಾಕುತ್ತಿತ್ತು. ಆ ಸಂಭಾಷಣೆಯಲ್ಲಿ ಒಬ್ಬ ವ್ಯಕ್ತಿಯ ವಿಷಯ ಬಂತು.

"ನಾವು ಮತ್ತೊಬ್ಬ ವ್ಯಕ್ತಿಯನ್ನು ಕೂಡಾ ಅನುಮಾನಿಸಬೇಕು ಅಂದುಕೊಳ್ಳುತ್ತೇನೆ" ಅವಳು ಹೇಳಿದಳು.

"ಯಾರನ್ನು ?"

"ಲಕ್ಷ್ಮಿಯ ತಂದೆಯನ್ನು."

ಚಿರಂಜೀವಿ ಬೆಚ್ಚಿ ಬಿದ್ದು, "ಯಾರನ್ನು ?" ಎಂದ ಆಶ್ಚರ್ಯದಿಂದ.

"ಆತ ಹಿಂದಿನ ದಿನ ಹೈದರಾಬಾದಿನಲ್ಲೇ ಇದ್ದ. ಹಾಸ್ಟೆಲಿಗೆ ಬಂದು ಲಾಯರನ್ನು ಕೂಡಾ ಭೇಟಿಯಾಗಿದ್ದ. ಒಂದು ವೇಳೆ ಆತನಿಗೆ ನಡೆದದ್ದೆಲ್ಲಾ ತಿಳಿದಿದೆಯಾ ?"

ತನ್ನಲ್ಲಿ ತಾನೇ ತರ್ಕ ಮಾಡಿಕೊಳ್ಳುತ್ತಿರುವಂತೆ ಅಂದುಕೊಂಡಳು.

ಲಕ್ಷ್ಮಿಯ ಡೈರಿಯಲ್ಲಿ ತಂದೆ ಊರಿಗೆ ಹೊರಟು ಹೋದಂತೆ ಬರೆದುಕೊಂಡಿದ್ದಾಳೆ. ಆದರೂ ಏನೋ ಅನುಮಾನ....

"ತಂದೆಯೇ ಮಗಳನ್ನು ಕೊಲೆಮಾಡಿ ರಾಯಣ್ಣನ ಮೇಲೆ ಬರುವಂತೆ ಪ್ರಯತ್ನಿಸಿದ್ದಾನೆಂದು ಹೇಳುತ್ತೀಯಾ ?" ಚಿರಂಜೀವಿ ಕೇಳಿದ.

"ಯಾಕೆ ? ಹಾಗೆ ನಡೆಯಕೂಡದಾ ?"

"ಸಂಪೂರ್ಣ ಸಿನಿಮ್ಯಾಟಿಕ್ ಅನ್ನಿಸುತ್ತದೆ" ಚಿರಂಜೀವಿ ಹೇಳಿದ.

"ಮನುಷ್ಯನ ಮನಸ್ತತ್ವ ಸಂಪೂರ್ಣವಾಗಿ ಅನ್‌ಪ್ರೆಡಿಕ್ಟೆಬಲ್ ಚಿರಂಜೀವಿಯವರೇ. ಆತ ಹಳೆ ಕಾಲದ ಮನುಷ್ಯ. ಮಕ್ಕಳನ್ನು ನೀತಿ, ನಿಯತ್ತಿಗೆ ಪರ್ಯಾಯವಾಗಿ ಬೆಳೆಸಿದ್ದಾನೆ. ಇಂತಹ ಅನುಚಿತ ಕೆಲಸವನ್ನು

ಮಗಳು ಮಾಡುತ್ತಾಳೆಂದು ತಿಳಿದರೆ ಆತ ಕುಟುಂಬದ ಪ್ರತಿಷ್ಠೆಯ ಬಗ್ಗೆ ಆಲೋಚಿಸುತ್ತಾನೆ. ನಾಳೆ ಹತ್ತು ಜನರ ನಡುವೆ ಮಾನ ಹೋಗುತ್ತದೆಂದು ಚಿಂತಿಸಿದ್ದಾನೆ. ಅಂತಹ ಮಗಳು ಇದ್ದರೂ, ಹೋದರೂ ಒಂದೇ ವೆಂಬ ತೀರ್ಮಾನಕ್ಕೆ ಬಂದಿದ್ದಾನೆ. ಇಂತಹ ಘಟನೆಗಳು ನಡೆಯುವುದಿಲ್ಲವಾ ?"

ಚಿರಂಜೀವಿ ಅವಳೆಡೆಗೆ ಅರ್ಥಪೂರ್ಣವಾಗಿ ನೋಡಿದ. ಇಂತಹುದೇ ಕೇಸೊಂದು ಆತನ ದೃಷ್ಟಿಗೆ ಈ ಮುಂಚೆ ಬಂದಿತ್ತು ಕೂಡಾ ಸ್ವಂತ ಅಣ್ಣನೇ ತನ್ನ ತಂಗಿ ಕೆಟ್ಟ ಮಾರ್ಗದಲ್ಲಿ ತಿರುಗುತ್ತಿದ್ದರೆ ನೋಡಲಾರದೆ ಕೆಂಡವಾಗಿ, ಅವಳು ಯಾರ ಮಾತನ್ನೂ ಕೇಳದೆ ಅದೇ ಮಾರ್ಗದಲ್ಲಿ ನಡೆಯುತ್ತಿದ್ದಾಗ ಅವಳನ್ನು ಕೊಂದು ಬಿಟ್ಟಿದ್ದ. ನೇರವಾಗಿ ಪೋಲೀಸರ ಬಳಿಗೆ ಬಂದು ಶರಣಾಗಿದ್ದ. 'ಇಂತಹವರು ಸಮಾಜಕ್ಕೆ ಕೆಟ್ಟ ಹುಳುಗಳು ಅದಕ್ಕೆ ಸಾಯಿಸಿ ಬಿಟ್ಟೆ.' ಕೋರ್ಟಿನಲ್ಲಿ ಹೇಳಿದ.

ಅದನ್ನೇ ಯೋಚಿಸುತ್ತಿದ್ದ. ಅಷ್ಟರಲ್ಲಿ ಕಿರಣ್ಮಯಿ ಹೇಳಿದಳು—

"ಲಾಯರ್‌ರವರೇ – ನಾನು ನನ್ನ ಗಂಡನನ್ನು ರಕ್ಷಿಸಿಕೊಳ್ಳುವುದಕ್ಕಾಗಿ ಎಲ್ಲರನ್ನು ಅನುಮಾನ ದೃಷ್ಟಿಯಿಂದ ನೋಡುತ್ತಿದ್ದೀನೆಂದು ತಿಳಿಯಬೇಡಿ, ಲಕ್ಷ್ಮಿಯ ಕೊಲೆ ನಡೆದ ವಿಷಯ ವಾಸ್ತವ. ರಾಯಣ್ಣ ಆ ಕೊಲೆಯನ್ನು ಮಾಡಿಲ್ಲವೆಂದು ನಾವು ಮನಸ್ಪೂರ್ತಿಯಾಗಿ ನಂಬುತ್ತಿದ್ದೇವೆ. ನನ್ನ ಗಂಡ ಕೊಲೆಗಾರನಲ್ಲವೆಂದು ರುಜುವಾತುಪಡಿಸುವುದರ ಜೊತೆಗೆ ಹದಿನೆಂಟರ ಆ ಮುಗ್ಧೆಯನ್ನು ಕೊಲೆ ಮಾಡಿ ಅದು ರಾಯಣ್ಣನ ಮೇಲೆ ಬರುಮಂತೆ ಪ್ರಯತ್ನಿಸಿದವರಾರೆಂದು ಕೂಡಾ ತಿಳಿದುಕೊಳ್ಳಬೇಕಲ್ಲಾ. ಅಷ್ಟೇ ಅಲ್ಲ ಕೊಲೆ ಹೇಗೆ ನಡೆಯಿತೆಂಬ ಪಾಯಿಂಟ್ ಜೊತೆಗೆ ಕೊಲೆ ಏಕೆ ನಡೆಯಿತೆಂದು ಕೂಡಾ ತಿಳಿದುಕೊಳ್ಳಬೇಕು. ಮನುಷ್ಯನೊಬ್ಬನನ್ನು ಕೊಲೆ ಮಾಡಲು ಕಾರಣವನ್ನು ಹುಡುಕುವ ಅಗತ್ಯವಿಲ್ಲ. ತನ್ನ ಪ್ರೀತಿಯನ್ನು ನಿರಾಕರಿಸಿದ ಳೆಂದು ಹುಡುಗಿಯೊಬ್ಬಳನ್ನು ನಡು ರಸ್ತೆಯಲ್ಲೇ ಆಸಿಡ್ ಹೊಯ್ದು ಕೊಲೆ ಮಾಡಿದ ಪ್ರಸಂಗವನ್ನು ಇತ್ತೀಚೆಗಷ್ಟೆ ಪೇಪರ್‌ನಲ್ಲಿ ಓದಿದ್ದೇನೆ. ಆ ಯುವಕ ಹೀಗೇಕೆ ತಯಾರಾದ ? ತಂದೆ ತಾಯಿಯರ ಜವಾಬ್ದಾರಿರಹಿತ ದಿಂದಲೇ ? ಎಂದು ಆಲೋಚಿಸಿದೆ.

ಹಾಗೆಯೇ ಹಾಸ್ಟೆಲ್‌ಗಳಲ್ಲಿ ಹುಡುಗಿಯರು ಹಾಳಾಗಿ ಹೋಗುತ್ತಾರೆ ಎಂದು ಚಿಂತಿಸುವುದಕ್ಕಿಂತಲೂ. ಏಕೆ ಹಾಳಾಗುತ್ತಾರೆ ಎಂದು ತಿಳಿದುಕೊಳ್ಳುವ ಜವಾಬ್ದಾರಿ ನಮ್ಮದೆಲ್ಲಾ ಆಗಿದೆ. ಕೇವಲ ಆಲೋಚಿಸುವುದಷ್ಟೇ ಅಲ್ಲ, ಪರಿಹಾರ ಮಾರ್ಗವನ್ನು ಕೂಡಾ ಸೂಚಿಸಬೇಕೆಂಬುದೇ ನನ್ನ ಅಭಿಪ್ರಾಯ. ಈ ಹಾಸ್ಟೆಲ್ ಬಗ್ಗೆ ಯೋಚಿಸಿದಾಗಲೆಲ್ಲಾ, ಇಲ್ಲಿಯ ವಾತಾವರಣದ ಬಗ್ಗೆ ಎಲ್ಲರಿಗೂ ಹೇಳಬೇಕೆಂಬ ಕೋರಿಕೆ ನನ್ನಲ್ಲಿ ಹೆಚ್ಚಾಗುತ್ತದೆ."

ಚಿರಂಜೀವಿ ಅವಳ ಕಡೆ ವಿಚಿತ್ರವಾಗಿ ನೋಡಿದ. ಈ ಯುವತಿಯ ವಯಸ್ಸೆಷ್ಟಿರಬಹುದು ? ಇಪ್ಪತ್ಮೂರು, ಇಪ್ಪತ್ನಾಲ್ಕು. ಇಷ್ಟು ಸಣ್ಣ ವಯಸ್ಸಿನಲ್ಲಿ ಇಷ್ಟು ಮೆಚ್ಯೂರಿಟಿ ಹೇಗೆ ಬಂತು ಇವಳಲ್ಲಿ ? ವ್ಯಕ್ತಿತ್ವ ವಿಕಾಸಕ್ಕೆ, ವಯಸ್ಸಿಗೆ ಸಂಬಂಧವಿಲ್ಲ, ಇಂತಹ ಸೂಕ್ಷ್ಮ ದೃಷ್ಟಿ, ಆಲೋಚನೆ ಹೆಂಗಸರಲ್ಲಿ ಅಪರೂಪಕ್ಕೆ ಕಾಣುತ್ತದೆ. ತುಂಬಾ ಜನ ಹೆಂಗಸರು ಸಂತೋಷವಾದರೂ, ದುಃಖವಾದರೂ ಕಂಟ್ರೋಲ್ ಮಾಡಿಕೊಳ್ಳಲಾರರು. ಅದಕ್ಕೆ ಆತ ಅವಳನ್ನು ಹಾಸ್ಟೆಲಿಗೆ ಕಳಿಸುವಾಗ ತುಂಬಾ ಯೋಚಿಸಿದ್ದಾನೆ. ಇವಳು ಹಾಸ್ಟೆಲಿನಲ್ಲಿದ್ದು ತನ್ನನ್ನು ತಾನು ಕಂಟ್ರೋಲ್ ಮಾಡಿಕೊಳ್ಳ ಬಲ್ಲಳು ? ಎಂದು. ಆತಂಕವನ್ನು ಹೊಂದಿ ಕೂಡಾ ಭಾವರಹಿತವಾಗಿ ಹದಿನೈದು ದಿನ ಕಳೆದಿದ್ದಾಳೆ ಅಲ್ಲಿ ಕಿರಣ್ಮಯಿ.

'ಓ ಹೆಣ್ಣೇ ನಿನಗೆ ವಂದನೆ' ಅಂದುಕೊಂಡ ಚಿರಂಜೀವಿ ಅವನಿಗೆ ಕಿರಣ್ಮಯಿ ತನ್ನನ್ನು ಮೊದಲ ಸಲ ನೋಡಿದಾಗ ಹೇಳಿದ ಮಾತುಗಳು ನೆನಪಾದವು.

'ನನ್ನ ಗಂಡ ಕೊಲೆ ಮಾಡಿದ್ದರೆ ಆತನನ್ನು ರಕ್ಷಿಸಿರೆಂದು ಕೇಳುತ್ತಿಲ್ಲ. ಯಾವ ಪರಿಸ್ಥಿತಿಯಲ್ಲಿ ನಡೆಯಿತೆಂದು ತಿಳಿದುಕೊಂಡು ಶಿಕ್ಷೆಯನ್ನು ಕಡಿಮೆ ಮಾಡಲು ಪ್ರಯತ್ನಿಸಿ' ಎಂದು.

ಈ ದಿನಗಳಲ್ಲಿ ಹಾಗೆ ಆಲೋಚಿಸುವ ಜನರೇ ಕಡಿಮೆ. ಆದರೆ ಆ ಸಂಜೆಯೇ ಕಿರಣ್ಮಯಿಯ ಅನುಮಾನವನ್ನು ಪರಿಹರಿಸಿದ್ದ ಚಿರಂಜೀವಿ.

ಲಕ್ಷ್ಮಿಯ ತಂದೆ ಮಗಳನ್ನು ಭೇಟಿಮಾಡಿದ ರಾತ್ರಿಯೇ ಹೊರಟು ಹೋಗಿದ್ದರು. ಮಾರನೆ ದಿನ ಕರ್ನೂಲಿನಲ್ಲಿ ಕಮಿಷನರ್‌ಗಳ ಮೀಟಿಂಗ್‌ಗೆ

ಅಟೆಂಡ್ ಆಗಿದ್ದರು. ಈ ವಿಷಯ ತಿಳಿದು ಕಿರಣ್ಮಯಿ ನಿರಾಶಳಾಗಲಿಲ್ಲ. ಒಂದು ಪಾಯಿಂಟ್ ಕ್ಲಿಯರ್ ಆದಂತೆ ಸಂತೋಷಪಟ್ಟಳು. ನಿಜವಾಗಿಯೂ ಲಕ್ಷ್ಮಿಯ ತಂದೆಯೇ ತನ್ನ ಮಗಳನ್ನು ಕೊಲೆ ಮಾಡಿದ್ದರೆ ಕಿರಣ್ಮಯಿಗೆ ಮನುಷ್ಯತ್ವದ ಮೇಲೆ ನಂಬಿಕೆಯೇ ಇರುತ್ತಿರಲಿಲ್ಲ.

ಕಿರಣ್ಮಯಿ ಇನ್ನೂ ಕಿಟಕಿಯಿಂದ ಹೊರಗೆ ನೋಡುತ್ತಲೇ ಇದ್ದಳು. ಕಿಟಕಿಯ ಹೊರಗೆ ವನಜಾಕ್ಷಿ, ಅವಳ ಪ್ರಿಯಕರ ಎದ್ದು ಕುಳಿತುಕೊಳ್ಳು ತ್ತಿದ್ದರು. ಆ ಹುಡುಗಿ ಬಟ್ಟೆ ಕೊಡವಿಕೊಳ್ಳುತ್ತಿದ್ದಳು.

ಕಿರಣ್ಮಯಿ ಮೇಲೆದ್ದು ರೂಮಿನ ಲೈಟ್ ಹಾಕೋಣವೇ ಅಂದು ಕೊಂಡಳು. ಆದರೆ ಆ ಬೆಳಕು ಕಿಟಕಿಯಿಂದ ಹೊರಬಿದ್ದರೆ, ಆ ಪ್ರೇಮಿಗಳಿಗೆ ಭಂಗ ಉಂಟಾಗಬಹುದು. ಅವರಿಗೆ ಮಾನವಿಲ್ಲದಿದ್ದರೂ ತನಗಿದೆ.

ಲಕ್ಷ್ಮಿ ಪ್ರತಿ ದಿನವೂ ತನ್ನ ಕೋಣೆಯಲ್ಲಿ ಕುಳಿತುಕೊಂಡು ರಹಸ್ಯ ವಾಗಿ ಈ ದೃಶ್ಯವನ್ನು ನೋಡಲು ಅಭ್ಯಾಸ ಮಾಡಿಕೊಂಡಿದ್ದಳಾ ? ರಜನಿ, ಜಯಂತಿ ಲೈಕರ್ಸ್ ಆಗಿ ಹೇಗೆ ತಯಾರಾಗಿದ್ದರೋ, ಲಕ್ಷ್ಮಿ ಹಾಗೆಯೇ 'ವ್ಯೂಯರ್' ಆಗಿ ತಯಾರಾಗಿದ್ದಳಾ ? ಸೆಕ್ಸ್‌ನಲ್ಲಿ ಪಾಲ್ಗೊಳ್ಳುವುದಕ್ಕಿಂತಲೂ ಸೆಕ್ಸನ್ನು ನೋಡುವುದರಲ್ಲಿ ಹೆಚ್ಚು ಉತ್ಸಾಹ ಹೊಂದುವುದರಲ್ಲಿ, ಸಂತೋಷ ಪಡುವುದನ್ನು ಅಭ್ಯಾಸ ಮಾಡಿಕೊಂಡಿದ್ದಳಾ ?

ಕಿಟಕಿಯ ಹೊರಗೆ ಆ ಯುವಕ 'ಇನ್ನೂ ಸ್ವಲ್ಪ ಹೊತ್ತು ಇರೋಣ' ಅನ್ನುತ್ತಿದ್ದ.

'ಯಾರಾದರೂ ಬಂದರೆ ಚೆನ್ನಾಗಿರುವುದಿಲ್ಲ' ವನಜಾಕ್ಷಿ ಹೇಳು ತ್ತಿದ್ದಾಳೆ.

'ಬಂದರೇನಂತೆ ? ನಮ್ಮನ್ನು ಕಂಡು ಈ ಸ್ಥಳ ಆಲ್‌ರೆಡಿ ರಿಸರ್ವ್ಡ್ ಅಂದುಕೊಂಡು ಹೊರಟು ಬಿಡುತ್ತಾರಷ್ಟೆ' ಅಂದ, ಅದು ತುಂಬಾ ಸರ್ವೇ ಸಾಧಾರಣ ವಿಷಯವೆಂಬಂತೆ.

"ಆದರೂ ನಿನ್ನ ರೂಮಿಟ್ಟುಕೊಂಡು ಹೀಗೆ ಇಲ್ಲೇಕೆ ಹೇಳು ?"

'ಇಲ್ಲಿ, ಈ ಬಯಲಲ್ಲಿರುವ ಥ್ರಿಲ್ ರೂಮಿನಲ್ಲಿ ಎಲ್ಲಿರುತ್ತೆ ಹೇಳು ?'

'ಏಡಿ ಹೋಗೋಣ. ಸ್ವಲ್ಪ ಹೊತ್ತು ಗೇಟಿನ ಬಳಿ ನಿಂತು ಮಾತ ನಾಡಿಕೊಳ್ಳೋಣ.' ಇಬ್ಬರೂ ಎದ್ದರು.

'ಹೆಂಗಸರಿಗೆ ಮಾತನಾಡಿಕೊಳ್ಳಬೇಕೆಂದಿರುತ್ತೆ. ಗಂಡಸರು – ದೆ ಬಿಲೀವ್ ಇನ್ ಆಕ್ಷನ್' ಚೀಪ್ ಜೋಕ್ ಮಾಡಿದ. ಇಬ್ಬರೂ ಅಲ್ಲಿಂದ ಎದ್ದು ಹಾಸ್ಟೆಲ್ ದ್ವಾರದ ಕಡೆಗೆ ಹೊರಟು ಹೋದರು.

ಕಿರಣ್ಮಯಿ ರೂಮಿನಲ್ಲಿ ಲೈಟ್ ಹಾಕಿದಳು. ಒಮ್ಮೆಗೇ ಕತ್ತಲನ್ನು ಓಡಿಸುತ್ತಾ ರೂಮೆಲ್ಲಾ ಬೆಳಕು ಆವರಿಸಿತು. ಆ ಬೆಳಕಿನಲ್ಲಿ, ರೂಮಿನ ಒಂದು ಮೂಲೆಯಲ್ಲಿ ನಾಲ್ಕೈದು ಕಾಗದದ ಚೂರುಗಳು ಕಂಡವು. ಹೋಗಿ ಸೂಕ್ಷ್ಮವಾಗಿ ನೋಡಿದಳು.

ಅವು ಬಸ್ ಟಿಕೆಟ್‌ಗಳು !

ಇದೇ ಊರಿನವು.... ಅಂದರೆ ಉಪಯೋಗಿಸದೆ ಇರುವುದು. ಈ ಊರಿನ ಡಿಪೋ ಮುದ್ರೆ ಇದೆ. ಲಕ್ಷ್ಮಿಯ ಸಾವಿನ ನಂತರ ಆ ರಮಿನಲ್ಲಿ ಯಾರೂ ಪ್ರವೇಶಿಸಿರಲಿಲ್ಲ.

ಟಿಕೆಟ್‌ಗಳ ಮೇಲಿನ ದಿನಾಂಕ ನೋಡಿದಳು. ರಾತ್ರಿ ಹನ್ನೊಂದು ಗಂಟೆಯ ಬಸ್ಸಿಗೆ ರಿಸರ್ವೇಶನ್ ಮಾಡಿಸಿದ್ದ ಟಿಕೆಟ್‌ಗಳು ಅವು. ಮಂಜು ಕರಗುತ್ತಿದೆ — ಯಾವುದೋ ರಹಸ್ಯ ಬಿಟ್ಟುಕೊಳುತ್ತಿದೆ.

ಪ್ರಾಣಕ್ಕಿಂತಲೂ ವೇಗವಾಗಿ ಹೊರಗೋಡಿ ಬಂದಳು. ಚೌಕಿದಾರ್ ಆಗತಾನೆ ಒಳಗೆ ಬರುತ್ತಿದ್ದಾನೆ.

"ನೀನು ನನಗೆ ಕೆಲವು ನಿಜಗಳನ್ನು ಹೇಳಬೇಕು." ಹೆದರಿಸುವಂತೆ ಹೇಳಿದಳು.

"ಲಕ್ಷ್ಮಿ ಸತ್ತು ಹೋದ ದಿನ ರಾತ್ರಿ ಅವಳ ರೂಮಿಗೆ ಯಾರು ಬಂದಿದ್ದರು ?"

"ಯಾರಮ್ಮ ನೀನು? ಹಾಸ್ಟೆಲಿನಲ್ಲಿ ಹೊಸದಾಗಿ ಸೇರಿದ ಸ್ಟೂಡೆಂಟಾ?

ಏನು ಜೋರು ಮಾಡಿ ಕೇಳ್ತಿದ್ದೀಯಲ್ಲಾ ? ಅವೆಲ್ಲಾ ಯಾರಿಗೆ ನೆನಪಿರುತ್ತೆ ?"

"ಸ್ಟೂಡೆಂಟಲ್ಲ. ಆ ಕೊಲೆಯ ಬಗ್ಗೆ ಶೋಧನೆ ನಡೆಸಲು ಬಂದಿರುವ ಪೋಲೀಸ್ ಸಿ.ಐ.ಡಿ. ನೀನು ಸರಿಯಾಗಿ ನೆನಪಿಸಿಕೊಂಡು ಹೇಳದಿದ್ದರೆ ಪೋಲೀಸ್ ಸ್ಟೇಷನ್‌ಗೆ ಕರೆದೊಯ್ದು ಹೇಳಿಸಬೇಕಾಗುತ್ತೆ."

ವಾಚ್‌ಮನ್ ಹೆದರಿದ. "ಅದನ್ನೆಲ್ಲಾ ನಿಮ್ಮ ಪೋಲೀಸರಿಗೆ ಆಗಲೇ ಹೇಳಿದ್ದೀನಮ್ಮ."

"ಯಾರು ಬಂದಿದ್ದರೆಂದು ಹೇಳಿದಿ ?"

"ಅವರ ಅಪ್ಪ ಬಂದಿದ್ದರೆಂದೇ ಹೇಳಿದ್ದೆ."

"ಅವರಿಬ್ಬರೂ ಎಲ್ಲಿ ಕುಳಿತುಕೊಂಡು ಮಾತನಾಡುತ್ತಿದ್ದರು ?"

"ವಿಸಿಟರ್ಸ್ ರೂಮಿನಲ್ಲಿ."

"ಅಲ್ಲ, ಸರಿಯಾಗಿ ನೆನಪಿಸಿಕೊಂಡು ಹೇಳು. ಆತನನ್ನು ಅವಳ ರೂಮಿಗೆ ಕಳುಹಿಸಿದಿ ತಾನೆ ?" ಎಂದು ದಬಾಯಿಸಿದಳು.

"ಎರಡನೆ ಸಲ ಬಂದಾಗ ಕಳುಹಿಸಿದೆನಮ್ಮ" ಅಂದ.

ಕಿರಣ್ಮಯಿಯ ಎದೆ ಬಡಿತ ಜೋರಾಯಿತು. "ಎ... ರ... ಡ....ನೆ... ಸಲ" ಅಂದಳು.

"ಹೌದು. ಆತ ಎರಡನ ಸಲ ಬಂದು ಮತ್ತೆ ಮಗಳ ಬಗ್ಗೆ ಕೇಳಿದರು. ರೂಮಿನಲ್ಲಿ ಕುಳಿತುಕೊಳ್ಳುವಂತೆ ಹೇಳಿದೆ" ಎಂದು ನಿಲ್ಲಿಸಿ, "ಅವರ ಮಗಳೇ ತಾನೇನಮ್ಮಾ.... ಕಳುಹಿಸಿದರೆ ತಪ್ಪೇನು ?" ಕೇಳಿದ.

"ನೀನು ಹೇಳಿದ್ದು ಸರಿಯೋ. ತಪ್ಪೋ ಎಂದು ಕೇಳುತ್ತಿಲ್ಲ ನಾನು. ಕಳುಹಿಸಿದೆಯಾ ಇಲ್ಲವಾ ? ಎಂದು ಕೇಳಿದ ಅಷ್ಟೆ."

"ಅವರು ಎರಡನೆ ಸಲ ಬಂದಾಗ ಲಕ್ಷ್ಮಿ ಇರಲಿಲ್ಲ. ಸ್ವಲ್ಪ ಹೊತ್ತು ವಿಸಿಟರ್ಸ್ ರೂಮಿನಲ್ಲಿ ಸ್ವಲ್ಪ ಹೊತ್ತು ಕುಳಿತಿದ್ದರು, ಲಕ್ಷ್ಮಿ ಬಂದರೆ ನೇರವಾಗಿ ರೂಮಿಗೇ ಹೋಗುತ್ತಾಳೆ, ಇಲ್ಲಿ ಕುಳಿತರೆ ಅವರಿಗೆ ಅವಳು ಬರುವುದು ತಿಳಿಯುವುದಿಲ್ಲ ಎಂದು ಹೇಳಿದೆ —"ತನ್ನ ತಪ್ಪೇನೂ ಇಲ್ಲವೆಂದು ವಿವರಣೆ ನೀಡಿದ.

"ಆತ ಎರಡನೆ ಸಲ ಎಷ್ಟು ಗಂಟೆಗೆ ಬಂದಿದ್ದ ?"

"ಹತ್ತೂವರೆ ಆಗಿರಬಹುದು."

"ಆಗ ಆತನ ಮಗಳು ಹಾಸ್ಟೆಲಿನಲ್ಲಿರಲಿಲ್ಲವಾ ?"

"ಇಲ್ಲವಮ್ಮಾ—ಮೊದಲನೆ ಸಲ ಬಂದಾಗ ತಂದೆ ಮಗಳು ಮಾತನಾಡಿಕೊಂಡರು. ತಂದೆಯನ್ನು ಹೊರಗಿನವರೆಗೂ ಜೊತೆಯಲ್ಲಿ ಹೋಗಿ ಬಿಟ್ಟು ಬಂದಳು." "ಆಗ ನಾನು ಅಲ್ಲೇ ಇದ್ದೆ. ನಂತರ ಏನು ನಡೆದಿರಬಹುದೆಂದು ಕಿರಣ್ಮಯಿ ಊಹಿಸಿದಳು. ಲಕ್ಷ್ಮಿ ಬಂದು. ರೂಮಿನಲ್ಲಿ ಕುಳಿತು ಡೈರಿ ಬರೆದಳು. ತಂದೆ ಕತ್ತಲೆಯಲ್ಲಿ ಎಚ್ಚರಿಕೆ ಎಂದು ಹೇಳಿದ ಮಾತನ್ನೂ ಅವಳು ಬರೆದಿದ್ದಾಳೆ. ಅದೇ ಅವಳ ಕೊನೆಯ ಪುಟ.

"ನಂತರ ?" ಕೇಳಿದಳು.

"ಆತ ಹೋದ ಅರ್ಧ ಗಂಟೆಯ ನಂತರ ಮತ್ತೆ ಬಂದರು. ಅದೇಕೆ ಸ್ವಾಮಿ ಹೋಗಲಿಲ್ಲವಾ ? ಎಂದು ಕೇಳಿದೆ. 'ಬಸ್‌ನಲ್ಲಿ ಹೋಗೋಲ್ಲ–ಟ್ಯಾಕ್ಸಿಯಲ್ಲಿ ಹೋಗ್ತೀನಿ' ಅಂದರು.

"ಅವತ್ತು ಬಸ್‌ಗಳ ಸ್ಟ್ರೈಕ್"

"ಹೌದಮ್ಮಾ. ನೆನಪಾಯಿತು ಮುಖ್ಯಮಂತ್ರಿಯವರ ಬಾವಮೈದುನನ ತಮ್ಮನನ್ನು ನಕ್ಸಲೈಟ್‌ಗಳು ಎತ್ತಿಕೊಂಡು ಹೋದರೆಂದು ಆ ದಿನ ಬಸ್ಸುಗಳನ್ನು ನಿಲ್ಲಿಸಿದ್ದರು. ಅವರು ಕೂಡಾ ಅದೇ ಮಾತನ್ನು ಹೇಳಿದರು. ಬೆಳಗ್ಗೆ ಟ್ಯಾಕ್ಸಿಯಲ್ಲಿ ಹೋಗುತ್ತೇನೆಂದೂ–ಲಾಡ್ಜಿಗೆ ಹೋಗುವ ಮುಂಚೆ ಈ ವಿಷಯವನ್ನು ಮಗಳಿಗೆ ಹೇಳಿ ಹೋಗಲು ಬಂದಿರುವುದಾಗಿ ತಿಳಿಸಿದರು.

"ಆಗ ಲಕ್ಷ್ಮಿ ಇರಲಿಲ್ಲವಾ ?"

"ಇಲ್ಲವಮ್ಮಾ. ನಾನು ತೋಟದಲ್ಲೆಲ್ಲಾ ಹುಡುಕಿದೆ. ಸ್ಕೂಟರ್‌ಗಳ ಬಳಿ ನೋಡಿದೆ."

"ಹೊರಗೆ ಹೋಗಿದ್ದಳೇನೋ ?"

"ನೈಟಿಯಲ್ಲಿದ್ದಳಮ್ಮಾ ಆಮೇಲೆ ಬಂದಾಗ ನೋಡಿದೆನಲ್ಲಾ."

"ಎಲ್ಲಿಗೆ ಹೋಗಿದ್ದಳಂತೆ."

"ಇಲ್ಲೇ ತೋಟದಲ್ಲಿದ್ದೆ ಅಂತ ಹೇಳಿದಳು. ನಿಮ್ಮ ತಂದೆ ಮತ್ತೆ ಬಂದರಮ್ಮಾ ಎಂದು ಹೇಳಿದಾಗ ರೂಮಿಗೆ ಓಡೋಡಿ ಬಂದಳು. ಸ್ವಲ್ಪ

ಹೊತ್ತು ಮಗಳೊಂದಿಗೆ ಮಾತನಾಡಿ ಆತ ಹೊರಟು ಹೋದರು.

"ಹಾಗಾದರೆ ತೋಟದಲ್ಲೆಲ್ಲಾ ಹುಡುಕಾಡಿದೆ ಅಂತ ಹೇಳಿದಿ ?"

"ಕತ್ತಲಲ್ಲಿ ಎಲ್ಲಾದರೂ ಇದ್ದಾಳೇನೋ ಎಂದು...." ಅದೊಂದು ರೀತಿ ನಗುತ್ತಾ ಹೇಳಿದ ವಾಚ್‌ಮನ್.

"ಹೋಗುವಾಗ ಆತ ಹೇಗಿದ್ದ ?" ಕೊನೆಯ ಪ್ರಶ್ನೆ ಕೇಳಿದಳು,

"ನೋಡಲಿಲ್ಲಮ್ಮಾ"

ಕಿರಣ್ಮಯಿ ಗಾಢವಾಗಿ ಉಸಿರಾಡಿ, "ಸರಿ. ಈ ವಿಷಯಗಳನ್ನೆಲ್ಲಾ ಇನ್ನೆಲ್ಲಿಯೂ ಹೇಳಬೇಡ. ನಾನು ಪೊಲೀಸ್ ಡಿಪಾರ್ಟ್‌ಮೆಂಟಿನಿಂದ ಬಂದವ ಳೆಂದು ಯಾರಿಗೂ ತಿಳಿಯಕೂಡದು." ಅಂದಳು. ಅವಳಿಗೆ ವಿಷಯ ಅರ್ಥ ವಾಗಿತ್ತು. ಹಾಗೆಯೇ ನಡೆದಿತ್ತಾ ?........ ನಿಜವಾಗಿಯೂ ಹಾಗೆಯೇ ನಡೆದಿತ್ತಾ ?

ಆ ರಾತ್ರಿ ಅವಳಿಗೆ ನಿದ್ರೆ ಬರಲಿಲ್ಲ. ಅವಳ ಕಣ್ಮುಂದೆ ಒಂದೇ ದೃಶ್ಯ ತೇಲಾಡುತ್ತಿತ್ತು.

ಒಬ್ಬ ತಂದೆ ರೂಮಿನಲ್ಲಿ ಕುಳಿತು ಹೊರಗೆ ನೋಡುತ್ತಿದ್ದ. ಆ ವಿಷಯ ತಿಳಿಯದ ಮಗಳು-ಕಿಟಕಿ ಹೊರಗಡೆ ತನ್ನ ಬಾಯ್ ಫ್ರೆಂಡ್ ಜೊತೆ ರೊಮ್ಯಾನ್ಸ್ ಮಾಡುತ್ತಿದ್ದಾಳೆ.

ಕಿರಣ್ಮಯಿಯ ಮೈ ನಡುಗಿತು ! ಆ ಊಹೆಯೇ ಎಷ್ಟು ಭಯಂಕರ ವಾಗಿದೆ ! ತನ್ನ ಊಹೆ ನಿಜವಾಗಿದ್ದರೆ-ಆ ತಂತೆಗೆ ಅದಕ್ಕಿಂತಲೂ ಘೋರ ವಾದ ಅನುಭವ ಮತ್ತೊಂದಿರದು. ಗಾಳಿರಾಯರ ಮೂಲಕ ವಿಷಯ ತಿಳಿಯುವುದು ಬೇರೆ, ಯಾರೋ ಬರೆದ ಪ್ರೇಮ ಪತ್ರಗಳನ್ನು ಓದುವುದು ಬೇರೆ....ಆದರೆ ಹೀಗೆ ಪ್ರತ್ಯಕ್ಷವಾಗಿ ಮಗಳನ್ನು ಮತ್ತೊಬ್ಬರ ತೋಳ್ತೆಕ್ಕೆ ಯಲ್ಲಿ ನೋಡುವುದು ..ಮಗಳು ರಮಿಸುತ್ತಿದ್ದರೆ ಅದಕ್ಕೆ ಪ್ರತ್ಯಕ್ಷ ಸಾಕ್ಷಿ ಆಗುವುದು....

'ಮೈ ಗಾಡ್' ಅಂದುಕೊಂಡಳು. ಆ ಊಹೆಗೇ ಅವಳ ಮೈ ಕಂಪಿಸಿತು ನಿದ್ರೆಯಿಲ್ಲದ್ದರಿಂದ ಕೆಂಪಗಾಗಿದ್ದ ಅವಳ ಕಣ್ಣುಗಳು... ಹಾಗೆಯೇ ಇನ್‌ಪೆಕ್ಟರ್ ನನ್ನು ನೋಡಲು ಹೊರಟಳು.

ಬಯಲು ಸೀಮೆ ಪ್ರಾಂತ್ಯದಲ್ಲಿ ಒಂದು ಹಳ್ಳಿ !

ಇನ್ಸ್‌ಪೆಕ್ಟರ್, ಲಾಯರ್, ಒಬ್ಬಾಕೆ ಕಾರಿನಿಂದ ಇಳಿಯುತ್ತಿರುವುದನ್ನ ಆತ ನೋಡಿದ.

ಅವರು ಟ್ಯಾಕ್ಸಿಯಿಂದ ಇಳಿಯುವ ಸಮಯದಲ್ಲಿ ಆತ ಮನೆಯ್ಯ ಮುಂದಿನ ಪಡಸಾಲೆಯಲ್ಲಿ ಆರಾಮ ಕುರ್ಚಿಯಲ್ಲಿ ಮಲಗಿ ಮುಖಕ್ಕೆ ಕೈಯ್ಯನ್ನು ಅಡ್ಡವಿರಿಸಿಕೊಂಡು ಯೋಚಿಸುತ್ತಿದ್ದ. ಆ ಮನೆಯಲ್ಲಿನ್ನೂ ವಿಷಾದ ಗೂಡು ಕಟ್ಟಿಕೊಂಡೇ ಇತ್ತು. ಕಾರಿನ ಶಬ್ದಕ್ಕೆ ಕಣ್ತೆರೆದ.

ಬಯಲು ಸೀಮೆಯ ಬಿಸಿಲು ತನ್ನ ಪ್ರತಾಪವನ್ನು ತೋರಿಸುತ್ತಿತ್ತು !

ಮಾನಸಿಕವಾಗಿ ದಣಿದಿದ್ದ ಕಿರಣ್ಮಯಿ. ಅಷ್ಟು ದೂರ ಕಾರಿನಲ್ಲಿ ಪ್ರಯಾಣ ಮಾಡಿದ್ದರಿಂದ ಶಾರೀರಿಕವಾಗಿ ಕೂಡಾ ಸುಸ್ತಾಗಿದ್ದಳು.

"ನಮಸ್ಕಾರ, ನನ್ನ ಹೆಸರು ಚಿರಂಜೀವಿ-ಲಾಯರ್, ಈಕೆ ಕಿರಣ್ಮಯಿ ಇವರು ನಿಮಗೆ ಗೊತ್ತಲ್ಲ-ಇನ್ಸ್‌ಪೆಕ್ಟರ್." ಪರಿಚಯ ಮಾಡಿದರು.

ಕಿರಣ್ಮಯಿ ಆತನೆಡೆಗೆ ಪರಿಶೀಲನಾತ್ಮಕವಾಗಿ ನೋಡಿದಳು. ತಿಂಗಳೊಂದರಲ್ಲೇ ವೃದ್ಧಾಪ್ಯ ಆವರಿಸಿದಂತೆ ಕುಗ್ಗಿ ಹೋಗಿದ್ದ ಆತ.

"ಇಷ್ಟು ದೂರ ಏಕೆ ಬಂದಿರಿ ?"

"ಕೇಸಿನ ಇನ್‌ವೆಸ್ಟಿಗೇಷನ್‌ಗಾಗಿ" ಇನ್ಸ್‌ಪೆಕ್ಟರ್ ಹೇಳಿದರು.

"ಆಗಿದ್ದೇನೋ ಆಯಿತು. ಹೋದ ಮಗಳು ಹೇಗೂ ಹಿಂತಿರುಗಿ ಬರುವುದಿಲ್ಲ, ಇನ್ನೇಕೆ ಇನ್‌ವೆಸ್ಟಿಗೇಷನ್ ?" ನಿರಾಸೆಯಿಂದ ಕೇಳಿದನಾತ.

"ಇನ್ನೊಬ್ಬರು ಬಲಿಯಾಗಕೂಡದೆಂದು-" ಚಿರಂಜೀವಿ ಹೇಳಿದ. "ನಿಮಗೆ ಗೊತ್ತಲ್ಲ. ಈ ಕೇಸಿನಲ್ಲಿ ರಾಯಣ್ಣನೆಂಬ ಕ್ರಿಕೆಟ್ ಪ್ಲೇಯರ್ ಅರೆಸ್ಟ್ ಆಗಿದ್ದಾನೆ."

"ಮುಗ್ಧ ಹುಡುಗಿಯರನ್ನು ತಮ್ಮ ಗ್ಲಾಮರ್‌ನಿಂದ ಮೋಸ ಮಾಡುವವರನ್ನು ಅರೆಸ್ಟ್ ಮಾಡುವುದು ಮಾತ್ರವಲ್ಲ-ನೇಣುಗಂಬಕ್ಕೇರಿಸಬೇಕು ನೇರವಾಗಿ."

'ಯಾವ ಗ್ಲಾಮರ್‌ನಿಂದ ರಾಜಾರಾವ್ ನಿಮ್ಮ ಮಗಳನ್ನು ಬಲೆಯಲ್ಲಿ ಕೆಡವಿಕೊಂಡ.' ಎಂದು ಕೇಳಬೇಕೆನ್ನಿಸಿತು ಕಿರಣ್ಮಯಿಗೆ. ತುಂಬಾ ಕಷ್ಟದಿಂದ

ತಡೆದುಕೊಂಡಳು. ಸತ್ತ ಹಾವನ್ನು ಇನ್ನೂ ಸಾಯಿಸುವುದು ಆವೆಳಿಗಿಷ್ಟ ವಿರಲಿಲ್ಲ.

ಅಷ್ಟರಲ್ಲಿ ಹದಿನೇಳು ವರ್ಷದ ಹುಡುಗಿಯೊಬ್ಬಳು ಬಾಗಿಲ ಬಳಿ ಬಂದು ಬಗ್ಗಿ ನೋಡಿ ಹೊರಟು ಹೋದಳು. 'ಲಕ್ಷ್ಮಿ ಡೈರಿಯಲ್ಲಿ ಬರೆದು ಕೊಂಡಿದ್ದ ತಂಗಿ ಇವಳೇ ಇರಬೇಕು' ಅಂದುಕೊಂಡಳು.

'ನಿಮ್ಮ ಮಗಳು ಮರಣ ಹೊಂದಿದ ದಿನ ರಾತ್ರಿ ನೀವು ಎರಡನೆ ಸಲ ನಿಮ್ಮ ಮಗಳ ರೂಮಿಗೆ ಹಿಂತಿರುಗಿ ಬಂದಿದ್ದಿರಿ ಅಲ್ಲವೆ ?" ಇನ್ಸ್‌ಪೆಕ್ಟರ್ ಹಠಾತ್ತನೆ ಕೇಳಿದರು. ಆತನ ಮುಖ ಬಾಡಿಹೋಯಿತು.

"ಹೌದು" ಎಂದ.

"ಆಗೇನು ನಡೆಯಿತು ?"

"ಏನೂ ನಡೆಯಲಿಲ್ಲ" ತಲೆ ತಗ್ಗಿಸಿಕೊಂಡು ಹೇಳಿದ. ಆದರೆ ಆತನ ಅಂಗೈ ಕುರ್ಚಿಯನ್ನು ಬಿಗಿಯಾಗಿ ಹಿಡಿದಿದ್ದನ್ನು ಕಿರಣ್ಮಯಿ ಗಮನಿಸಿದಳು. ಕೂಡಲೇ ಬಾಯಿ ಹಾಕಿದಳು. "ನೋಡಿ ನಿಮ್ಮನ್ನು ಈ ಸಮಯದಲ್ಲಿ ನೋಯಿಸುವುದು ನಮಗಿಷ್ಟವಿಲ್ಲ. ನೀವು ಎರಡನೆ ಸಲ ಬಂದಾಗ ನಿಮ್ಮ ಮಗಳು ರೂಮಿನಲ್ಲಿರಲಿಲ್ಲ ನೀವೊಬ್ಬರೇ ಕುಳಿತಿದ್ದಿರಿ. 'ಬಸ್‌ನಲ್ಲಿ ಹೋಗುವು ದಿಲ್ಲ-ಟ್ಯಾಕ್ಸಿಯಲ್ಲಿ ಹೋಗುತ್ತೇನೆಂದು ನಿಮ್ಮ ಮಗಳಿಗೆ ಹೇಳಲು ಬಂದ ನೀವು, ಆಕೆ ಇಲ್ಲದಿದ್ದುದರಿಂದ ಆ ರೂಮಿನಲ್ಲಿ ಕುಳಿತು ಕಿಟಕಿಯಿಂದ ನೋಡ ತೊಡಗಿದಿರಿ. ಅನಂತರ..."

"ನಿಲ್ಲಿಸಿ..." ಕಿರುಚಿದ ಆತನ ಸ್ವರ ನಡುಗುತ್ತಿತ್ತು. ಮನುಷ್ಯ ಸಂಪೂರ್ಣ ಸೋತು ಹೋಗಿದ್ದ. ರಕ್ತ ಒಮ್ಮೆಗೇ ನುಗ್ಗಿದ್ದರಿಂದ ಮುಖ ವೆಲ್ಲಾ ಕೆಂಪಗೆ ಉಬ್ಬಿತು. "....ಇದೆಲ್ಲಾ ನಿಮಗೆ ಹೇಗೆ ತಿಳಿಯಿತು ?"

ಅವಳು ಸುಳ್ಳು ಹೇಳದೆ ವಿಧಿಯಿರಲಿಲ್ಲ "....ನಿಮ್ಮಿಬ್ಬರಿಗೂ ನಡುವೆ ನಡೆದ ಗಲಾಟೆಯನ್ನು ನಾನು ಪಕ್ಕದ ರೂಮಿನಿಂದ ಕೇಳಿಸಿಕೊಂಡೆ." ಅಂದಳು.

ಆತ ಒಂದು ಕ್ಷಣ ಗಲಿಬಿಲಿ ನೋಟ ಬೀರಿದ. ಅದು ಆ ಗಲಿಬಿಲಿ ಯಿಂದ ಹೊರಟ ನಿಶ್ಶಬ್ದ... ಆತನ ನಿಶ್ಶಬ್ದ ಅವರ ಉದ್ವೇಗದ ಜೊತೆ

ಯಾಯಿತು. ಉಕ್ಕೇರುವ ಮುಂಚೆ ಸಮುದ್ರ ಹಾಗೆಯೇ ಇರುತ್ತದೆ....... ಆನಂತರ ಒಮ್ಮೆಗೇ ಎಚ್ಚರಗೊಂಡವನಂತೆ ಗಹಗಹಿಸಿ ನಗಲಾರಂಭಿಸಿದ, ಅಣೆಕಟ್ಟು ಒಡೆದಂತೆ ನಕ್ಕು, "ಜಗಳ ಅಂದ್ಕೊಂಡ್ರಾ ?....ಜಗಳವೇನೂ ಇಲ್ಲವ್ಮಾ....ಹೆಮ್ಮೆ ಪಟ್ಟುಕೊಂಡೆ. ಮಗಳು ಇಷ್ಟು ಕಲಿತಿದ್ದಾಳಲ್ಲ ಹೆಮ್ಮೆ ಪಟ್ಟೆ....ಹೆಣ್ಣು ಮಕ್ಕಳ ರೂಮುಗಳಿಗೆ ನನ್ನನ್ನು ವಾಚ್‌ಮನ್ ಕರೆದು ಕೊಂಡು ಹೋದಾಗ ಹೀಗೆಯೇ ಪ್ರಿಯಕರರೂ ಹೋಗುತ್ತಾರೇನೋ ಎಂದು ಅನುಮಾನಪಟ್ಟೆ ! ಯಾವುದೆಷೀ ಪೇಪರ್‌ನಲ್ಲಿ ಹಾಸ್ಟೆಲೊಂದರಲ್ಲಿ ವ್ಹಿಸ್ಕಿ ಬಾಟಲ್ ಕಾಣುತ್ತದೆಂದು ಸುದ್ದಿ ಬಂದಿದ್ದಾಗ ಆಶ್ಚರ್ಯಪಟ್ಟಿದ್ದೆ ! ನನ್ನ ನನ್ನ ಮಗಳಿರುವ ಹಾಸ್ಟೆಲ್ ಅದಕ್ಕಿಂತಲೂ ಅಧ್ವಾನ್ನವೆಂದು ತಿಳಿದು ಬೆಚ್ಚಿ ಬಿದ್ದ, ಅಷ್ಟೇ ಆಗಲೀ ಜಗಳ ಆಡಲಿಲ್ಲವ್ಮಾ---" ಎನ್ನುತ್ತಾ ಕುರ್ಚಿ ಯಿಂದ ಎದ್ದ. ಆ ಮಾತುಗಳನ್ನು ಕೇಳಿ ಒಳಗಿನಿಂದ ಹೆಂಡತಿ ಮಕ್ಕಳು ಹೊರಗೆ ಬಂದರು, ಅವನ ಹೆಂಡತಿ ಅವನನ್ನು ಸಮಾಧಾನಪಡಿಸುತ್ತಾ. "ಸುಮಸಿರ್ರೀ...." ಎಂದಳು.

ಆತ ಒಂದೇ ಕೊಡವಿಗೆ ಅವಳನ್ನು ದೂರ ತಳ್ಳಿ "ಯಾಕೆ ? ಯಾಕೆ ಸುಮ್ಮನಿರಬೇಕು ? ಹೇಳ್ತೀನಿ ಬಿಡು" ಅವರ ಕಡೆ ತಿರುಗಿ ಹೇಳಲಾರಂಭಿಸಿದ "ನಾನು ಸ್ವತಃ ನನ್ನ ಕಣ್ಣಿಂದ ನೋಡಿನವ್ಮಾ....ಮೊನ್ನೆ ಮೊನ್ನೆವರೆಗೂ ಬೊಂಬೆಗಳನ್ನು ಇಟ್ಟುಕೊಂಡು ಆಟವಾಡುತ್ತಾ ಅವುಗಳಿಗೆ ಮದುವೆ ಮಾಡು ತ್ತಿದ್ದ ನನ್ನ ಮಗಳು—ಅರ್ಧ ರಾತ್ರಿ ಪ್ರಸ್ಥ ನಡೆಸಿಕೊಳ್ಳುತ್ತಿದ್ದರೆ ನಾನು ಸ್ವತಃ ನೋಡಿದೆ. ನನ್ನ ಮಗಳ ರೂಮಿನಿಂದಲೇ ನೋಡಿದೆ, ನನ್ನ ಮಗಳು ಅದೇ ಕುರ್ಚಿಯಲ್ಲಿ ಕುಳಿತು ಎಷ್ಟು ರಾತ್ರಿಗಳು, ಎಷ್ಟು ರಾಸ ಕ್ರೀಡೆಗಳನ್ನು ನೋಡಿದ್ದಾಳೋ ? ಎಷ್ಟು ರತಿಕ್ರೀಡೆಗಳನ್ನು ಕಂಡ ಮೇಲೆ ತನಗೂ ಆ ಆಟ ದಲ್ಲಿ ಪಾಲ್ಗೊಳ್ಳಬೇಕೆಂಬ ಆಸೆ ಹುಟ್ಟಿತೋ, ಅದೇ ಕುರ್ಚಿಯಲ್ಲಿ ಕುಳಿತು ನೋಡಿದೆ."

ಆತನ ಮುಖ ವಿವರ್ಣವಾಯಿತು. ರಕ್ತಚಲನೆ ಕೂಡಾ ಹೆಚ್ಚಾದಂತೆ ಮನುಷ್ಯ ಸಂಪೂರ್ಣವಾಗಿ ಕಂಪಿಸುತ್ತಿದ್ದ, ಬಿಕ್ಕಿ ಬಿಕ್ಕಿ ಬರುತ್ತಿದ್ದ ಆವೇದನೆ ಯನ್ನು ತಡೆದುಕೊಳ್ಳುವ ಪ್ರಯತ್ನದಲ್ಲಿ ಮಾತುಗಳು ತಡಬಡಿಸುತ್ತಿದ್ದವು.

ಒಂದು ಒದ್ದೆ ಪೊರೆ ಗಂಟಲಿಗೆ ಅಡ್ಡಿಯಾದಾಗ ಸ್ವರ ವೇದನೆಯಿಂದ ನಡಗುತ್ತಿತ್ತು." "—ಅಷ್ಟು ನೋಡಿ ಕೂಡಾ ನಾನೇನೂ ಗಲಾಟೆ ಮಾಡಲಿಲ್ಲಮ್ಮ ನನ್ನ ಮಗಳನ್ನು ಒಂದು ಮಾತೂ ಅನ್ನಲಿಲ್ಲ..." "ಯಾರಮ್ಮ ಆ ಹುಡುಗ ಎಂದು ಮಾತ್ರ ಕೇಳಿದೆ. ಆಕಾಶಕ್ಕೆಲ್ಲಾ ಚಪ್ಪರ ಹಾಕಿ ಮದುವೆ ಮಾಡುತ್ತೇನಮ್ಮಾ ಅಷ್ಟರವರೆಗೂ ತಡೆಯಲಾರದೆ ಆಕಾಶದ ಕೆಳಗೇ ಬಹಿರಂಗವಾಗಿ ಶೃಂಗಾರ ನಡೆಸಬೇಡಮ್ಮಾ —" ಎಂದು ಮಾತ್ರ ಬೇಡಿಕೊಂಡೆ...." ಎನ್ನುತ್ತ ಬೋರೆಂದು ಅಳತೊಡಗಿದ. ಒಳಗಿನಿಂದ ಕೂಡಾ ಅಳುಗಳು ಜೊತೆಯಾದವು.

ಮೂವರೂ ಒಬ್ಬರನ್ನೊಬ್ಬರು ನೋಡಿಕೊಂಡರು.

ಇನ್ನಲ್ಲಿ ಮಾಡುವುದಕ್ಕೆ ಏನೂ ಇಲ್ಲವೆಂಬಂತೆ ಇನ್‌ಸ್ಪೆಕ್ಟರ್ ಮೇಲೆ ಎದ್ದರು, ಉಳಿದಿಬ್ಬರೂ ಅವರನ್ನು ಹಿಂಬಾಲಿಸಿದರು. ಟ್ಯಾಕ್ಸಿಯಲ್ಲಿ ಕುಳಿತ ನಂತರ ಚಿರಂಜೀವಿ ಹೇಳಿದ—"ಈತ ಈ ಕೊಲೆಯನ್ನು ಮಾಡಿರಲಾರ. ಮಗಳನ್ನು ಕೊಲೆ ಮಾಡಿ ಮಾಮೂಲಾಗಿ ಹೋಗಿ ಕಮೀಷನರ್ ಮೀಟಿಂಗ್‌ಗಿಗೆ ಅಟೆಂಡ್ ಆಗಲು ಸಾಧ್ಯವಿಲ್ಲ ಈತನಿಂದ."

"ಹೇಳಲಾಗುವುದಿಲ್ಲ" ಇನ್‌ಸ್ಪೆಕ್ಟರ್ ಹೇಳಿದರು. "ನನ್ನ ಸರ್ವೀಸಿನಲ್ಲಿ ಎಷ್ಟೋ ಜನ ಅಪರಾಧಿಗಳನ್ನು ನೋಡಿದ್ದೇನೆ. ಸಾಮಾನ್ಯ ಸಮಯದಲ್ಲಿ ಮಾಮೂಲಾಗೇ ಕಾಣುತ್ತಾರೆ. ಆವೇಶದಲ್ಲಿ ಮರ್ಡರ್ ಮಾಡಿದ ಕೂಡಲೇ ವಿವಿಧ ರೀತಿಯ ನಾಟಕಗಳಾಡಿ, ಮತ್ತೆ ಸಾಮಾನ್ಯರಾಗಿ ಬಿಡುತ್ತಾರೆ."

"ಅಷ್ಟೇ ಆ ಆವೇಶದಲ್ಲಿ, ಮಗಳೇ ಬರದಂತೆ ಆತ್ಮಹತ್ಯೆ ಕಾಗದ ಬರೆದು, ಶವವನ್ನು ಫ್ಯಾನಿಗೆ ನೇತುಹಾಕಿ ಟ್ಯಾಕ್ಸಿಯಲ್ಲಿ ಕರ್ನೂಲಿಗೆ ಹೊರಟು ಹೋಗಿರಬಹುದೇ ?"

"ಹಾಗಾಗಿರುವ ಛಾನ್ಸೂ ಇದೆ." ಇನ್‌ಸ್ಪೆಕ್ಟರ್ ಹೇಳಿದರು.

"ನಾವು ರಾಜಾರಾವನ್ನು ಭೇಟಿ ಮಾಡಿ ಅವರಿಂದ ಸತ್ಯ ಹೊರಡಿಸದಿದ್ದರೆ ಲಾಭವಿಲ್ಲ" ಅವತ್ತು ಹಾಸ್ಟೆಲ್ ಹೊರಗೆ ಪಾರ್ಕಿನ ಬೆಂಚಿನ ಮೇಲೆ ಲಕ್ಷ್ಮಿಯೊಡನೆ ಇದ್ದುದು ಅವನೇ ಆಗಿರಬೇಕು."

"ಅವನು ಒಪ್ಪಿಕೊಳ್ಳುವುದಿಲ್ಲ."

"ಒಪ್ಪಿಸಬೇಕು."

"ಕಷ್ಟ" ಅಂದರು ಇನ್ಸ್‌ಪೆಕ್ಟರ್, "ಅವನು ಗೌರ್ವನರ್ ಮಗ. ಪ್ರೆಸಿಡೆಂಟ್ ಆಫ್ ಇಂಡಿಯಾಗೆ ಹತ್ತಿರ. ಅವನನ್ನು ಇಂಟರಾಗೇಟ್ ಮಾಡುವುದು ಕಷ್ಟ."

"ಕಾನೂನಿನ ದೃಷ್ಟಿಯಲ್ಲಿ ಎಲ್ಲರೂ ಸಮಾನರೇ ಎಂಬುದು ಕೇವಲ ಸಿನಿಮಾಗಳಿಗೆ ಮಾತ್ರ ಸೀಮಿತವಾ ?" ವ್ಯಂಗ್ಯವಾಗಿ ಕೇಳಿದ ಚಿರಂಜೀವಿ.

"ನನ್ನ ಕಷ್ಟ ನಾನು ಹೇಳಿದೆ ಅಷ್ಟೆ."

"ಇನ್ಸ್‌ಪೆಕ್ಟರ್‌ರವರೇ— ನಿಮಗೂ ನನಗೂ ಮಧ್ಯೆ ಈ ಮೊದಲು ಒಂದು ಮಾತು ನಡೆದಿತ್ತು, 'ರಾಜರಾವೇ ನಿಜವಾಗಿ ದೋಷಿಯಾಗಿದ್ದರೆ ಆತ ಪ್ರೆಸಿಡೆಂಟ್ ಆಫ್ ಇಂಡಿಯಾದ ಮಗನೇ ಆದರೂ ಬಿಡುವುದಿಲ್ಲ ಅಂದಿದ್ದರಿ.' ನೆನಪಿಸಿದಳು ಕಿರಣ್ಮಯಿ.

"ಆತ ದೋಷಿಯಾದರೆ ಬಿಡುವುದಿಲ್ಲವೆಂದಿದ್ದೆ ಆದರೆ ಆತ ದೋಷಿಯೊ ಅಲ್ಲವೋ ತಿಳಿಯದೆ ಏನೂ ಮಾಡಲಾರೆ."

"ಏನೂ ಮಾಡದೆ ಆವನು ದೋಷಿಯೋ ಅಲ್ಲವೋ ಹೇಗೆ ತಿಳಿಯುತ್ತದೆ ?" ಮತ್ತೆ ವ್ಯಂಗ್ಯವಾಗೆಂದ ಚಿರಂಜೀವಿ. ಇನ್ಸ್‌ಪೆಕ್ಟರ್ ಮಾತನಾಡಲಿಲ್ಲ. ಟ್ಯಾಕ್ಸಿ ನಿಶ್ಯಬ್ದವಾಗಿ ಹೋಗುತ್ತಿತ್ತು.

ಆ ನಿಶ್ಯಬ್ದವನ್ನು ಭಂಗಗೊಳಿಸುತ್ತಾ—"ರಾಜಾರಾವ್‌ನನ್ನು ನಾನು ನೋಡುತ್ತೇನೆ." ಕಿರಣ್ಮಯಿ ಹೇಳಿದಳು. ಹಠಾತ್ತನೆ ಅವಳಿಂದ ಬಂದ ಈ ನಿರ್ಧಾರಕ್ಕೆ ಇಬ್ಬರೂ ಬೆಚ್ಚಿದರು.

"ಅವನು ನಿಮಗೇನೂ ಹೇಳುವುದಿಲ್ಲ. ನಿಮಗೆ ಇಂಟರ್‌ವ್ಯೂ ಕೂಡಾ ಕೊಡಲು ಒಪ್ಪಿಕೊಳ್ಳುವುದಿಲ್ಲ."

"ನಮ್ಮ ಪ್ರಯತ್ನವನ್ನು ನಾವು ಮಾಡೋಣ. ಅದರಲ್ಲಿ ತಪ್ಪೇನೂ ಇಲ್ಲವಲ್ಲ." ಕಿರಣ್ಮಯಿ ಹೇಳಿದಳು. ಟ್ಯಾಕ್ಸಿ ಹೈದರಾಬಾದ್ ಸೇರುವ ವೇಳೆಗೆ ರಾತ್ರಿ ಎಂಟು ಗಂಟೆಯಾಗಿತ್ತು.

"ನಾನೊಂದು ಸಲ ನಿಮ್ಮನ್ನು ಕಾಣಬಹುದಾ ?" ಫೋನಿನಲ್ಲಿ ಕೇಳಿಸಿದ ಹೆಣ್ಣು ಸ್ವರಕ್ಕೆ ರಾಜಾರಾವ್ ಉತ್ಸಾಹದಿಂದ "ಯಾರು ನೀವು ?" ಅಂದ.

"ನನ್ನ ಹೆಸರು ಕಿರಣ್ಮಯಿ, ಎಂ.ಎ. ಪಾಸ್ ಮಾಡಿದ್ದೇನೆ, ನಿಮ್ಮನ್ನು ಒಂದೆರಡು ಸಲ ಹಾಸ್ಟೆಲಿನಲ್ಲಿ ನೋಡಿದ್ದೇನೆ. ಅಂದಹಾಗೆ ಹೇಳಲಿಲ್ಲವಲ್ಲಾ, ನಾನೂ ಹಾಸ್ಟೆಲಿನಲ್ಲಿದ್ದೇನೆ."

ಅವನು ಸಣ್ಣಗೆ ಶಿಳ್ಳೆ ಹಾಕಿದ--- "ಹೇಳಿ ಯಾವಾಗ ಭೇಟಿ ಮಾಡೋಣ ?"

"ನಿಮ್ಮಿಷ್ಟ"

"ನಾಳೆ ಸಂಜೆ ಬ್ಲೂ ವಿಂಗ್ಸ್‌ನಲ್ಲಿ ಡಿನ್ನರ್‌ಗೆ ಹೋಗೋಣ. ಹಾಸ್ಟೆಲಿಗೆ ಬಂದು ನಿಮ್ಮನ್ನು ಕರೆದೊಯ್ಯುತ್ತೇನೆ."

ಆ ಎರಡು ವಾಕ್ಯಗಳಲ್ಲೇ ಆವನಿಗೆ ಹುಡುಗಿಯರ ಬಗ್ಗೆ ಇರುವಂತಹ ಅಭಿಪ್ರಾಯ ಅವಳಿಗೆ ಚೆನ್ನಾಗಿ ಮನವರಿಕೆಯಾಯಿತು.

ಮಾರನೆ ದಿನ ಅವನು ಬಂದು ಅವಳನ್ನು ಹೋಟೆಲಿಗೆ ಕರೆದುಕೊಂಡು ಹೋದ, ಪರಿಚಯ ಮಾಡಿಕೊಳ್ಳುತ್ತಿದ್ದಂತೆಯೇ ಅವನು ತನ್ನನು ಪರೀಕ್ಷಾತ್ಮಕವಾಗಿ ನೋಡುವುದನ್ನು ಗಮನಿಸಿ ಗಮನಿಸದಂತೆ ನಟಿಸಿದಳು.

"ನೀವು ತುಂಬಾ ಕಡಿಮೆ ಮಾತಿನವರು ಅಂದುಕೊಂಡಿದ್ದೇನೆ." ಟೇಬಲ್ ಬಳಿ ಕುಳಿತುಕೊಳ್ಳುತ್ತಾ ಹೇಳಿದ. ಅವಳು ನಕ್ಕು ಸುಮ್ಮನಾದಳು. ಅವನು ಸ್ಪೂನ್, ಫೋರ್ಕುಗಳನ್ನು ಕೈಗಳಲ್ಲಿ ಆಡಿಸುತ್ತಾ ಹೇಳಿದ--

"ನನಗೆ ನಿನ್ನೆಯಿಂದಲೂ ಸಸ್ಪೆನ್ಸಾಗಿದೆ. ನನ್ನೊಡನೆ ಪರಿಚಯ ಬೆಳೆಸಿಕೊಳ್ಳಬೇಕೆಂಬ ಕೋರಿಕೆ ನಿಮಗೇಕೆ ಬಂತು ? ನನ್ನ ಬಗ್ಗೆ ನಿಮಗ್ಯಾರು ಹೇಳಿದರು ?"

"ನನ್ನ ಗಂಡ"

ಅವನ ಕೈಗಳಿಂದ ಸ್ಪೂನ್ ಜಾರಿ ಬಿತ್ತು. "ನಿಮಗೆ ಮದುವೆ ಆಗಿದೆಯಾ ?"

"ಆಗಿದೆ"

"ನಿಮ್ಮ ಗಂಡನ ಹೆಸರು ?"

"ರಾಯಣ್ಣ –"

ಯಾರೋ ಮುಖದ ಮೇಲೆ ಬೀಸಿ ಹೊಡೆದಂತೆ ಅವನ ಮುಖ ವಿವರ್ಣವಾಯಿತು. ತುಟಿಗಳು ಅಪ್ರಯತ್ನವಾಗಿ ಬಿಗಿದುಕೊಂಡವು. "ನನಗೇಕೆ ಸುಳ್ಳು ಹೇಳಿದಿರಿ ?" ಆವೇಶವನ್ನು, ಅವಮಾನವನ್ನು ಮುಚ್ಚಿಕೊಳ್ಳುತ್ತಾ ಹೇಳಿದ.

"ನಾನೇನೂ ಸುಳ್ಳು ಹೇಳಲಿಲ್ಲವಲ್ಲಾ. ನನ್ನ ಹೆಸರು ಕಿರಣ್ಮಯಿ ಎಂ.ಎ. ಪಾಸ್ ಮಾಡಿದ್ದೇನೆ. ಹಾಸ್ಟೆಲಿನಲ್ಲಿದ್ದೇನೆ" ಅಂದಳ ಮತ್ತೊಮ್ಮೆ.

ಅವನು ತುಂಬಾ ಹೊತ್ತು ಮಾತನಾಡಲಿಲ್ಲ. ಮುಜುಗರದಿಂದ ಕುಳಿತ. ಬೇರೆ ಕಡೆಯಾಗಿದ್ದರೆ ಅವಳನ್ನು ಗೆಟೌಟ್ ಎನ್ನುತ್ತಿದ್ದ.

ವೆಯಿಟರ್ ಬಂದು ಟೇಬಲ್ ಮೇಲೆ ಪ್ಲೇಟುಗಳನ್ನಿಟ್ಟು ಹೋದ.

"ಹೇಳಿ ಏಕೆ ನನ್ನೊಡನೆ ಪರಿಚಯ ಮಾಡಿಕೊಳ್ಳಬೇಕೆಂದಿದ್ದೀರಿ ?"–

'ಪರಿಚಯ 'ಎಂಬ ಪದವನ್ನು ಒತ್ತಿ ಹೇಳಿದ.

"ಲಕ್ಷ್ಮಿಯೊಡನೆ ನಿಮ್ಮ ಸ್ನೇಹ ಎಷ್ಟಿತ್ತೆಂದು ತಿಳಿದುಕೊಳ್ಳಲು."

"ನನಗೆ ಲಕ್ಷ ಜನರೊಡನೆ ಲಕ್ಷ ಸಂಬಂಧಗಳಿರುತ್ತವೆ. ಅವನ್ನೆಲ್ಲಾ ನಿಮಗೆ ಹೇಳಬೇಕಾದ ಅವಶ್ಯಕತೆಯಿಲ್ಲವೆಂದುಕೊಳ್ಳುತ್ತೇನೆ. ಅದೂ ಅದೆಲ್ಲಾ ನಿಮಗೇಕೆ ? ಓ... ಲಕ್ಷ್ಮಿ ಕೊಲೆ ಮೊಕದ್ದಮೆಯಲ್ಲಿ ನಿಮ್ಮ ಗಂಡ ಸಿಕ್ಕಿಹಾಕಿಕೊಂಡಿದ್ದಾರೆ ಅಲ್ಲವಾ ? ಇಷ್ಟಕ್ಕೂ ನಿಮ್ಮ ಪ್ರಶ್ನೆ ಏನು ? ಲಕ್ಷ್ಮಿಯೊಡನೆ ನನ್ನ ಸ್ನೇಹ ಎಷ್ಟೆಂದು ತಿಳಿದುಕೊಳ್ಳಬೇಕಾ ? ಲಕ್ಷ್ಮಿಯೊಡನೆ ನಿಮ್ಮ ಗಂಡನ ಸ್ನೇಹ ಎಷ್ಟೆಂಬುದು ತಿಳಿದುಕೊಳ್ಳಬೇಕಾ ?"

"ಲಕ್ಷ್ಮಿಯನ್ನು ಯಾರು ಕೊಂದವರೆಂದು ತಿಳಿದುಕೊಳ್ಳಬೇಕು."

"ನಿಮ್ಮ ಗಂಡನ ಮೇಲೆಯೇ ಅನುಮಾನಪಟ್ಟು ಪೋಲೀಸರು ಅರೆಸ್ಟ್ ಮಾಡಿದ್ದಾರಲ್ಲಾ ?"

"ಹೌದು ಲಕ್ಷ್ಮಿಯ ಆತ್ಮಹತ್ಯೆಯ ನೋಟ್ ಫೋರ್ಜರಿ ಎಂದಿದ್ದಾರೆ. ಅದು ಕೊಲೆಯೆಂದೂ, ನನ್ನ ಗಂಡನೇ ಮಾಡಿದ್ದಾನೆಂದೂ ಹೇಳುತ್ತಿದ್ದಾರೆ."

"ಸತ್ಯಾಂಶ ನಿಧಾನವಾಗಿ ತಿಳಿಯುತ್ತದೆ ಬಿಡಿ"

ಅವನಿನ್ನೂ ಗೌರವಯುತವಾಗಿ ಬಹುವಚನದಿಂದಲೇ ತನ್ನನ್ನು ಮಾತನಾಡಿಸುತ್ತಿರುವುದನ್ನು ಆವಳು ಗಮನಿಸಿದಳು, "ಸತ್ಯಾಂಶ ನಿಧಾನವಾಗಿ ತಿಳಿಯುವುದಿಲ್ಲ ಮಿ. ರಾಜಾರಾವ್ ನಿಧಾನವಾಗಿ ಮುಚ್ಚಿ ಹೋಗುತ್ತದೆ! ಒಂದು ಹಿಂದುಳಿದ ವರ್ಗಕ್ಕೆ ಸೇರಿದ ನಿಸ್ಸಹಾಯಕ ಹೆಣ್ಣು ನಾನು--ಪೋಲೀಸರು ಕೂಡ ಇಂಟರಾಗೇಟ್ ಮಾಡಲು ಹೆದರುವಷ್ಟು ದೊಡ್ಡಮಟ್ಟದಲ್ಲಿರುವ ಪೊಲಿಟೀಷಿಯನ್ ಕುಟುಂಬಕ್ಕೆ ಸೇರಿದವರು ನೀವು... ನಿಮ್ಮನ್ನು ಬೆದರಿಸಲು ಬ್ಲಾಕ್‌ಮೇಯಿಲ್ ಮಾಡಲು ನಾನು ಇಲ್ಲಿಗೆ ಬರಲಿಲ್ಲ. ಸೆರಗು ಚಾಚಿ ಪ್ರಾರ್ಥಿಸುತ್ತಿದ್ದೇನೆ ನಿಜ ಹೇಳಿ."

ಅವನು ಅವಳ ಮಾತಿಗೆ ಸ್ವಲ್ಪ ಸ್ಪಂದಿಸಿದವನಂತೆ ಕಂಡ, "ಯಾವ ನಿಜ ಬೇಕು ಕೇಳಿ ಆದರೆ ಒಂದು ಷರತ್ತು, ಈಗ ನಿಮಗೆ ನಾನು ಹೇಳುವುದೇನನ್ನೂ ನಾಳೆ ಕೋರ್ಟಿಗೆ ಬಂದು ಹೇಳುವುದಿಲ್ಲ."

"ಸಾಕ್ಷಿಗಳಿಲ್ಲದೆ-ಸುಳ್ಳು ಅಪವಾದದ ಮೇಲೆ ನನ್ನ ಗಂಡ ನೇಣಗಂಬ ಏರಿದರೆ ನಾನೇನೂ ಮಾಡಲಾರೆ. ನನಗೆ ಬೇಕಾಗಿದ್ದು ನಿಜ. ಆ ನಿಜ ನನ್ನ ಗಂಡನಿಗೆ ಬಿಡುಗಡೆ ನೀಡಿದರೆ ನನಗೆ ಅದಕ್ಕಿಂತಲೂ ಹೆಚ್ಚಿನ ಭಾಗ್ಯಯೇನಿದೆ"

"ಯಾವ ನಿಜ ಬೇಕು ಹೇಳಿ"

"ಲಕ್ಷ್ಮಿ ನಿಮಗೆ ಯಾವ ರೀತಿಯಿಂದ ಸ್ನೇಹಿತೆ?"

"ತುಂಬಾ ಹತ್ತಿರ.. ಅರ್ಥವಾಗಿದೆ ಎಂದುಕೊಳ್ಳುತ್ತೇನೆ."

"ಆಯಿತು... ಆದರೆ ನನ್ನ ಗಂಡನಿಂದ ನಿಮ್ಮ ಕಡೆಗೆ ಹೇಗೆ ಆಕರ್ಷಿತಳಾದಳು?"

"ಹೆಂಗಸರನ್ನು ಸರಿಯಾದ ಮೂಡ್‌ನಲ್ಲಿರಿಸುವ ಟೆಕ್ನಿಕ್ ರಾಯಣ್ಣನಿಗೆ ಗೊತ್ತಿಲ್ಲ. ಲಕ್ಷ್ಮಿಯಂತಹ ಹುಡುಗಿಯರನ್ನು ತುಂಬಾ ಎಚ್ಚರಿಕೆಯಿಂದ ಟ್ಯಾಕಲ್ ಮಾಡಬೇಕು, ಅವನು ಅವಳನ್ನು ತುಂಬಾ ಹರ್ಟ್ ಮಾಡಿದ. ನಾನೇನಾದರೂ ಲಕ್ಷ್ಮಿಗೆ ಒಳ್ಳೆಯ ಮಾತುಗಳನ್ನು ಹೇಳದೆ ಸರಿಮಾಡದಿದ್ದರೆ ಅವಳು ಈ ಮೊದಲೇ ಆತ್ಮಹತ್ಯೆ ಮಾಡಿಕೊಳ್ಳುತ್ತಿದ್ದಳು, ರಾಯಣ್ಣನ ಮೇಲಿನ ಸಿಟ್ಟಿನಿಂದ ನನಗೆ ಹತ್ತಿರವಾದಳು, ಆ ಅವಕಾಶವನ್ನು ನಾನು ಉಪಯೋಗಿಸಿಕೊಂಡೆ."

ಅವಳು ಸ್ವಲ್ಪ ತಡಬಡಿಸಿ, "ಅವರಿಬ್ಬರ ನಡುವೆ ಹತ್ತಿರ ಸಂಬಂಧ ವಾಗಿರಲಿಲ್ಲವಾ ?" ಎಂದು ಕೇಳಿದಳು.

ಅವಳ ಪ್ರಶ್ನೆ ಅರ್ಥವಾಗದವನಂತೆ "ಇಲ್ಲ" ಅಂದ. ....ನನ್ನೊಡನೆ ಪರಿಚಯ ಆದಾಗ ಲಕ್ಷ್ಮಿಯನ್ನು ವರ್ಜಿನ್. ಮೊದಮೊದಲು ಫಿಸಿಕಲ್ಲಾಗಿ ತುಂಬಾ ನೋವು ಪಡುತ್ತಿದ್ದಳು." ಕ್ಯಾಜುಯಲ್ಲಾಗಿ ಹೇಳಿದ. ಅವನು ಎಲ್ಲಾ ಅನುಭವಿಸಿಬಿಟ್ಟವನಂತೆ ಹೇಳಿದ್ದ.

ಕಿರಣ್ಮಯಿ ಮನಸ್ಸು ಸ್ವಲ್ಪ ಹಗುರವಾಯಿತು. ಗಂಡ ಈ ವಿಷಯ ದಲ್ಲಿ ನಿಜವನ್ನೇ ಹೇಳಿದ್ದಾನೆ. ಬೇರೆ ಬೇರೆ ವ್ಯಕ್ತಿಗಳ ಜೊತೆ ಮಾತನಾಡು ತ್ತಿದ್ದರೆ ಕಿರಣ್ಮಯಿಗೆ ಗಂಡಸರ ಬಗ್ಗೆಯೇ ನಂಬಿಕೆ ಹೋಗುತ್ತಿತ್ತು.

"ಫೆಬ್ರವರಿ ಇಪ್ಪತ್ತೆರಡರ ರಾತ್ರಿ ನೀವು ಲಕ್ಷ್ಮಿಯನ್ನು ಸೇರಿದ್ದಿರಾ ?"

"ನನಗೆ ಡೇಟುಗಳ ನೆನಪಿರುವುದಿಲ್ಲ'"

"ಲಕ್ಷ್ಮಿ ಸತ್ತುಹೋದ ರಾತ್ರಿ... "

ಅವನೊಂದು ಕ್ಷಣ ತಡೆದು, "ಸೇರಿದ್ದೆ. ಆದರೆ ಈ ವಿಷಯವನ್ನು ನಾಳೆ ನೀವು ಕೋರ್ಟಿನಲ್ಲಿ ಹೇಳೆಂದರೆ ಹೇಳುವುದಿಲ್ಲ." ಅಂದ.

"ಬೇಕಾಗಿಲ್ಲ. ಇನ್ನೊಂದು ವಿಷಯವನ್ನು ಮಾತ್ರ ಹೇಳಿ. ಆ ಹುಡುಗಿ ಯನ್ನು ಆ ರಾತ್ರಿ ನೀವು ಹಾಸ್ಟೆಲಿನ ಮುಂದೆ, ಸಿಮೆಂಟ್ ಬೆಂಚಿನ ಮೇಲೆ ಸೇರಿದ್ದಿರಿ ಅಲ್ಲವಾ ?"

ಅವನು ಕಣ್ಣುಗಳನ್ನು ದೊಡ್ಡದು ಮಾಡಿ ನೋಡಿದ. ಮರೆ ಮಾಡಿ ಕೊಂಡರೂ ಮರೆಯಾಗದ ಆಶ್ಚರ್ಯ ಅವನ ಮುಖದಲ್ಲಿ ಹೊಡೆದಂತೆ ಕಂಡಿತು. "ನಿಮಗೆ....ನಿಮಗೆ ಹೇಗೆ ತಿಳಿಯಿತು ?"

"ಲಕ್ಷ್ಮಿಯ ತಂದೆ ಒಳಗೆ ರೂಮಿನಲ್ಲಿ ಕುಳಿತು ಕಿಟಕಿಯಿಂದ ನಿಮ್ಮಿಬ್ಬ ರನ್ನೂ ನೋಡಿದ್ದರು."

"ಮೈ ...ಗಾ....ಡ್" ಗೊಣಗಿದ ರಾಜಾರಾವ್, "ಲಕ್ಷ್ಮಿಗೆ ತಿಳಿದಿರ ಲಿಲ್ಲವಾ ತನ್ನ ತಂದೆ ರೂಮಿನಲ್ಲಿರುವುದು ?"

"ಅವಳು ನಿಮ್ಮನ್ನು ಸೇರಲು ಹೊರಗೆ ಬಂದಾಗ ಆತ ಬಸ್ ಸ್ಟ್ಯಾಂಡಿ ನಿಂದ ಹಾಸ್ಟೆಲಿಗೆ ಬಂದಿದ್ದರು. ವಾಚ್‌ಮನ್ ಆತನನ್ನು ಲಕ್ಷ್ಮಿಯ ರೂಮಿ ನಲ್ಲಿ ಕೂರಿಸಿದ್ದ."

ರಾಜಾರಾವ್ ಒಂದು ಮುಷ್ಠಿಯನ್ನು ಬಿಗಿಸಿಕೊಂಡು ಮತ್ತೊಂದು ಅಂಗೈ ಮೇಲೆ ಹೊಡೆದುಕೊಂಡ. ಆ ದೃಶ್ಯವನ್ನು ಊಹಿಸಿಕೊಂಡು ಅವನು ತುಂಬಾ ಫೀಲಾಗುತ್ತಿರುವಂತೆ ಅವನ ಮುಖವೇ ಹೇಳುತ್ತಿತ್ತು. ಕಿರಣ್ಮಯಿ ಕೂಡಾ ಏನನ್ನೂ ಮಾತನಾಡಲಿಲ್ಲ. ಅವನೇ ಅಂದ–"ಈ ಹೆಂಗಸರೆಲ್ಲಾ ಸೆಂಟಿಮೆಂಟಲ್ಸ್. ರಾಯಣ್ಣನ ಮದುವೆ ಅಲ್ಲಿ ನಿಮ್ಮೊಡನೆ ನಡೆಯುತ್ತಿರುವಾಗ ಇಲ್ಲಿ ಲಕ್ಷ್ಮಿ ತುಂಬಾ ಅಪ್‌ಸೆಟ್ ಆಗಿಬಿಟ್ಟಿದ್ದಳು. ಆಗ ನಾನು ಹೇಳಿದೆ ಕೂಡಾ. "ಅದೇಕೆ ಆ ರಾಯಣ್ಣನನ್ನು ಬಿಟ್ಟು ನನ್ನೊಡನೆ ಸ್ನೇಹ ಮಾಡಿದೆಯಲ್ಲಾ, ಈಗ ಮತ್ತೆ ಅವನ ಚಿಂತೆಯಲ್ಲಿ ಬೇಯುತ್ತಿದ್ದಿ." ಎಂದು. ಲಕ್ಷ್ಮಿ ಕೇಳಲಿಲ್ಲ. ಅವರ ತಂದೆ ಬಂದು ಹೋದ ನಂತರ ನನಗೆ ಫೋನ್ ಮಾಡಿ, "ಮೂಡ್ ಚೆನ್ನಾಗಿಲ್ಲ ಬಾ" ಎಂದು ತಿಳಿಸಿದಳು. ಈ ಮೂಡ್ ಚೆನ್ನಾಗಿಲ್ಲದ ಹುಡುಗಿಯರು ಒಂದು ತಲೆನೋವು. ಅವರ ತರಳೆ ತಾಪತ್ರಯಗಳನ್ನೆಲ್ಲಾ ಕುಳಿತು ಕೇಳಬೇಕು. ಅದನ್ನೇ ನಾನು ಫೋನಿನಲ್ಲಿ ಹೇಳಿಗೆ 'ನನಗೂ ಹೊಸದಾಗಿ ಮದುವೆಯಾಗಿದೆ ನನ್ನನ್ನು ಬಿಟ್ಟು ಬಿಡು." ಅಂದೆ. 'ಅಲ್ಲ. ಒಂದು ಸಲ ಬಂದು **ಹೋಗು**' ಅಂದಳು **ಹೋದೆ.** ಅವಳು ನೈಟಿಯಲ್ಲಿದ್ದಳು. ಹಾಗೆಯೇ ಬಂದು ಸೀಮೆಂಟ್ ಬೆಂಚಿನ ಮೇಲೆ ಕುಳಿತಳು. ಅವರ ತಂದೆ "ಕತ್ತಲಲ್ಲಿ ಎಚ್ಚರಿಕೆಯಮ್ಮ" ಅಂದಿದ್ದರಂತೆ. ಆದಕ್ಕೆ ಒಂದು ಹತ್ತು ನಿಮಿಷ ಅತ್ತಳು. ಅದು ನನಗೆ ಮಾಮೂಲೇ. ಅವಳು ಅಳುತ್ತಿದ್ದಾಗ ಹತ್ತಿರಕ್ಕೆಳೆದುಕೊಂಡು ಸಮಾಧಾನಪಡಿಸಲು ಅವಳ ಮೈತಡವಿದರೆ ಟೆಂಪ್ಟಾಗುತ್ತದೆ ತಾನೆ ? ನಂತರ ಅವಳು ಅಳು ನಿಲ್ಲಿಸಿದ ಕೂಡಲೇ ಅದೇ ಸೀಮೆಂಟ್ ಬೆಂಚಿನ ಹಿಂದೆ ಸೇರಿದೆವು. ಈಗ ನನಗೆ ಅರ್ಥವಾಯಿತು ಲಕ್ಷ್ಮಿ ಏಕೆ ಆತ್ಮಹತ್ಯೆ ಮಾಡಿಕೊಂಡಳೆಂದು. ಬಹುಶಃ ಅವರಪ್ಪನಿಗೆ ಈ ವಿಷಯವೆಲ್ಲಾ ತಿಳಿದಿದೆಯೆಂದು ಅವರಿಗೆ ಮುಖ ತೋರಿಸಲಾಗದೆ ಇರಬೇಕು. ಸ್ಸ್ !—ನಾನು ಬೇಡವೆಂದರೂ ಬಲವಂತಪಡಿಸಿದಳು ಹೀಗಾಗುತ್ತದೆಂದು ನಾನು ಊಹಿಸಿರಲಿಲ್ಲ."

"ನಿಮಗೆ ಹುಡುಗಿಯರ ಬಗ್ಗೆ ತುಂಬಾ ಹಗುರವಾದ ಅಭಿಪ್ರಾಯ ಇದೆ."

"ಯಾಕೆ ನಿಮಗೆ ಯಾಕೆ ಬಂತು ಈ ಅನುಮಾನ ?"

"ನಿಮ್ಮ ಮಾತಿನಲ್ಲಿ ತಿಳಿಯುತ್ತದೆ."

"ಎಲ್ಲರ ಬಗ್ಗೆಯೂ ಅಲ್ಲ. ಕೆಲವು ಹುಡುಗಿಯರಿರುತ್ತಾರೆ. 'ಗಂಡಸು ತಮ್ಮನ್ನು ಹಾಳು ಮಾಡುತ್ತಾನೆ, ತಾವೂ ಹಾಳಾಗುತ್ತಿದ್ದಾರೆ' ಎಂಬ ಅಭಿಪ್ರಾಯ ಹೊಂದಿರುತ್ತಾರೆ. ಇಬ್ಬರೂ ಸೇರಿ ಎಂಜಾಯ್ ಮಾಡುತ್ತಿದ್ದೇವೆ ಅಂದುಕೊಳ್ಳುವುದಿಲ್ಲ, ಲಕ್ಷ್ಮಿಯ ವಿಷಯವನ್ನೇ ತೆಗೆದುಕೊಳ್ಳಿ. ನಿಮ್ಮ ಗಂಡನನ್ನು ಪ್ರೀತಿಸಿದ್ದಳು. ಆದರೆ ಆ ವಿಷಯವನ್ನು ಆತನಿಗೆ ಹೇಳಲೇ ಇಲ್ಲ, ಆತನ ಮೇಲಿನ ಸಿಟ್ಟಿನಿಂದ ನನಗೆ ಹತ್ತಿರವಾದಳು, ನನಗೆ ಟೆಕ್ನಿಕ್ ಗೊತ್ತಿದೆಯಾದ್ದರಿಂದ ಸೆಕ್ಸಿನೊಳಗಿಳಿಸಿದೆ ಶುಭ್ರವಾಗಿ ಅನುಭವಿಸಿದಳು, ನಿಮ್ಮೆಲ್ಲರ ದೃಷ್ಟಿಯಲ್ಲಿ ಆ ಹುಡುಗಿ ತುಂಬಾ ಒಳ್ಳೆಯ ಹುಡುಗಿ, ಮುಗ್ಧೆ, ಒಬ್ಬನನ್ನು ಪ್ರೀತಿಸಿ, ಮತ್ತೊಬ್ಬನೊಡನೆ ಮಲಗಿ–"

"ನಿಲ್ಲಿಸಿ" ಕಿರುಚಿದಳು ಕಿರಣ್ಮಯಿ. ಹೋಟೆಲ್ ಆದ್ದರಿಂದ ಯಾರೂ ಗಮನ ಕೊಡಲಿಲ್ಲ. ಅತಿ ಕಷ್ಟದಿಂದ ಉದ್ವೇಗವನ್ನು ತಡೆಗಟ್ಟಿಕೊಂಡಳು.

ಅಷ್ಟರಲ್ಲಿ ರಾಜಾರಾವ್ ಹೇಳಿದ. "ನಿಮಗೆ ಆವೇಶ ಬರುತ್ತದೆ .. ನಿಮ್ಮ ಸ್ತ್ರೀಜಾತಿಯ ಬಗ್ಗೆ ಹೇಳುತ್ತಿದ್ದನಾದ್ದರಿಂದ !! ನಾನು ಇನ್ನೇನಾದರು. ಹೇಳಿದರೆ 'ಅವಳೇನೋ ಚಿಕ್ಕವಳು ನಿಂಗಾದರೂ ಬುದ್ಧಿ ಬೇಡವಾ ?' ಎಂದು ಕೇಳುತ್ತೀರಿ. ಆಸ್ ಇಫ್ ನನಗೂ ವಯಸ್ಸು ಚಿಕ್ಕದಾಗಿದ್ದರೆ ಸರಿಯಾಗಿರುತ್ತಿತ್ತು-ಎಂಬಂತೆ ! ನೀವು ನನ್ನ ದೃಷ್ಟಿಯಿಂದ ಏಕೆ ಆಲೋಚಿಸುವುದಿಲ್ಲ ? ನೀವು ಡಿನ್ನರ್‌ಗೆ ಹೋಗೋಣವಾ ಎಂದಿರಿ, ನನ್ನೊಡನೆ ಸ್ನೇಹಕ್ಕಾಗಿಯೇನೋ ಅಂದುಕೊಂಡೆ, ಸ್ವಲ್ಪ ಟ್ರೈ ಮಾಡಿದೆ ನಿಮ್ಮ ಉದ್ದೇಶ ಬೇರೆ ಎಂದು ತಿಳಿಯಿತು, ಆಗ ನನಗೆ ತಿಳಿದದ್ದನ್ನೆಲ್ಲಾ ಹೇಳಿದೆ. ಅಷ್ಟೇ ಆಗಲಿ ನಿಮ್ಮನ್ನು ಹೇಗೆ ಕೆಡವಿಕೊಳ್ಳಬೇಕೆಂದು ಆಟವಾಡಲಿಲ್ಲ, ರಾಯಣ್ಣನ ಮೇಲಿನ ಕೋಪದಿಂದ ಲಕ್ಷ್ಮಿ ನನ್ನ ಬಳಿಗೆ ಬಂದಾಗ, ಅವಳಿಗೆ ತಿಳಿದಿರಲಿಲ್ಲವಾ, ನನಗೆ ಸಿಕ್ಕಾಪಟ್ಟೆ ಜನ ಗರ್ಲ್ ಫ್ರೆಂಡ್‌ಗಳಿದ್ದಾರೆಂದು ? ಅವಳಿಗೆ ತಿಳಿಯದಾ ತನ್ನ ಸ್ಟೇಟಸ್ ಬೇರೆ, ನನ್ನ ಸ್ಟೇಟಸ್ ಬೇರೆಯೆಂದು ? ನಾನು ಕ್ಲಿಯರಾಗಿ ಹೇಳಿದೆ 'ಮದುವೆ ಬಗ್ಗೆ ಮರೆತು ಬಿಡು' ಎಂದು, ಅಷ್ಟೇಕೆ ?

ತನ್ನ ಮೊದಲ ಬಾಯ್ ಫ್ರೆಂಡ್ ಮದುವೆ ನಡೆಯುತ್ತದೆ ಎಂದು ಎರಡನೆ ಬಾಯ್ ಫ್ರೆಂಡ್ ನನ್ನ ಬಳಿಗೆ ಬಂದು ಅತ್ತರೆ ನನ್ನ ಪರಿಸ್ಥಿತಿ ಹೇಗಿರುತ್ತದೆ ನೀವೇ ಹೇಳಿ ? ಮೇಲಾಗಿ ಇವರೆಲ್ಲಾ ಪ್ರಿನ್ಸಿಪಲ್ಸ್ ಬಗ್ಗೆ ಬೇರೆ ಮಾತನಾಡುತ್ತಾರೆ. "ನನ್ನನ್ನು ಇಬ್ಬರು ಗಂಡಸರು ಮೋಸ ಮಾಡಿದರು." ಎಂದು ಸೂಯಿಸೈಡ್ ನೋಟ್‌ನಲ್ಲಿ ಬರೆಯುತ್ತಾರೆ ವಿನಃ–ಒಬ್ಬ ಗಂಡಸು ನಿರಾಕರಿಸಿದಾಗ ಮತ್ತೊಬ್ಬನ ಬಳಿಗೆ ಹೋದೆ-ಎಂದು ನಿಯತ್ತಾಗಿ ಬರೆಯುವುದಿಲ್ಲ." ರಾಜಾರಾವ್ ಹೇಳುತ್ತಾ ಹೋಗುತ್ತಿದ್ದ.

"ಆ ವಾಕ್ಯ ಅದರಲ್ಲಿಲ್ಲ–" ಹಠಾತ್ತನೆ ಹೇಳಿದಳು ಕಿರಣ್ಮಯಿ.

"ಇಲ್ಲವಾ ?....ಇದೆ. ನನಗೆ ಚೆನ್ನಾಗಿ ನೆನಪಿದೆ."

"ನೀವು ಯಾವಾಗ ಓದಿದಿರಿ ?" ಬುಲೆಟ್‌ನಂತೆ ಬಂತು ಅವಳಿಂದ ಪ್ರಶ್ನೆ.

ರಾಜಾರಾವ್ ತನ್ನ ಸ್ವರವನ್ನು ಸ್ವಲ್ಪ ಕಡಿಮೆಗೊಳಿಸಿ ಹೇಳಿದ--"ಈ ವಿಷಯವನ್ನು ಕೂಡಾ ನಾನು ಕೋರ್ಟಿಗೆ ಬಂದು ಹೇಳುವುದಿಲ್ಲ—ಲಕ್ಷ್ಮಿ ಆತ್ಮಹತ್ಯೆ ಮಾಡಿಕೊಂಡ ದಿನ ಬೆಳಗ್ಗೆ ಅವಳ ರೂಮಿಗೆ ಹೋಗಿದ್ದೆ ! ಅಲ್ಲೇ ಆ ಕಾಗದವನ್ನು ಓದಿದ್ದೆ." ಮಿಂಚೊಂದು ಅವಳ ಪಕ್ಕದಲ್ಲೇ ಹಾದು ಹೋದಂತನ್ನಿಸಿತು ಕಿರಣ್ಮಯಿಗೆ.

ಆ ಕಾಂಟ್ಯಾಕ್ಟ್ ಲೆನ್ಸಸ್ ಹುಡುಗಿ ರೇಖಾ ನೋಡಿದ್ದಾಳೆ ಇವನನ್ನು. ಉದ್ದ, ದಪ್ಪ, ಹೆಚ್ಚು ಕಡಿಮೆ ಒಂದೇ ಇರುವುದರಿಂದ ರಾಯಣ್ಣ ಅಂದು ಕೊಂಡಿದ್ದಾಳೆ.

ನಡುಗುತ್ತಿದ್ದ ಕಾಲುಗಳನ್ನು ಒಂದು ಸ್ಥಿಮಿತಕ್ಕೆ ತಂದುಕೊಂಡು ಮೆಲ್ಲನೆ ಮೇಲೆದ್ದು ನಿಂತು–"ಈಗಲೇ ಬರುತ್ತೇನೆ" ಎಂದು ಕೌಂಟರಿನ ಬಳಿ ಹೋಗಿ ಫೋನ್ ಮಾಡಿದಳು"–"ನೀವು ಅರ್ಜೆಂಟಾಗಿ ಲಕ್ಷ್ಮಿ ಬರೆದಿರುವ ಸೂಯಿಸೈಡ್ ನೋಟ್ ತೆಗೆದುಕೊಂಡು ಹೋಟೆಲ್ ಬ್ಲೂ ವಿಂಗ್ಸ್‌ಗೆ ಬನ್ನಿ." ಇನ್ಸ್‌ಪೆಕ್ಟರಿಗೆ ಹೇಳಿದಳು.

"ಯಾಕೆ ?"

"ರಾಜಾರಾವ್ ಇಲ್ಲೇ ಇದ್ದಾನೆ. ಅವನು ಹೇಳುತ್ತಿರುವುದೆಲ್ಲಾ ನಿಜವಾದರೆ ಅದಕ್ಕಿಂತಲೂ ದೊಡ್ಡ ಷಾಕಿಂಗ್ ನ್ಯೂಸ್ ಬೇರೆ ಇಲ್ಲ."

"ಇಂಟೆಲಿಜೆನ್ಸ್ ಡಿಪಾರ್ಟ್‌ಮೆಂಟಿಗಿಂತಲೂ ನೀವು ಫಾಸ್ಟಾಗಿದ್ದೀರಲ್ಲಾ —" ನಕ್ಕರು. ಅವಳು ಆ ಮಾತಿಗೆ ಗಮನ ಕೊಡದೆ, "ಕ್ಷಮಿಸಿ, ನನ್ನ ಎಕ್ಸೈಟ್‌ಮೆಂಟ್ ಜೊತೆಗೆ ನಿಮಗೂ ತೊಂದರೆ ಕೊಡುತ್ತಿದ್ದೇನೆ" ಅಂದಳು.

"ಐದು ನಿಮಿಷಗಳಲ್ಲಿ ಅಲ್ಲಿರುತ್ತೇನೆ." ಫೋನಿಟ್ಟುಬಿಟ್ಟರು. ಇನ್ಸ್‌ಪೆಕ್ಟರ್.

—ಅವಳು ಮತ್ತೆ ಬಂದು ರಾಜಾರಾವ್ ಮುಂದೆ ಕುಳಿತಳು. ಸರಿಯಾಗಿ ಐದು ನಿಮಿಷಗಳ ನಂತರ ಇನ್ಸ್‌ಪೆಕ್ಟರ್ ಬಂದರು. ಡ್ರೆಸ್‌ನಲ್ಲಿ ಟೇಬಲ್ ಬಳಿಗೆ ಇನ್ಸ್‌ಪೆಕ್ಟರ್ ಬರುತ್ತಿದ್ದಂತೆ ರಾಜಾರಾವ್ ಮುಖ ಕೋಪದಿಂದ ಕೆಂಪಗಾಯಿತು. "ಈ ರೀತಿಯ ಟ್ರಿಕ್‌ಗಳಿಗೆ ನಾನು ಬಾಗುವುದಿಲ್ಲ" ಕಠಿಣವಾಗಿ ಹೇಳಿದ.

"ನೀವು ನಮಗೇನೂ ಹೇಳಬೇಕಾಗಿಲ್ಲ. ಒಂದು ಕೇಳಿ ಸಾಕು. ನೀವು ನೋಡಿದ ಸೂಯಿಸೈಡ್ ನೋಟ್ ಇದೇನಾ ?" ಇನ್ಸ್‌ಪೆಕ್ಟರ್ ಕೈಯಿಂದ ಲಕ್ಷ್ಮಿ ಆತ್ಮಹತ್ಯೆ ಮಾಡಿಕೊಳ್ಳುವ ಮುಂಚೆ ಬರೆದಿದ್ದ ಕಾಗದ ತೋರಿಸಿದಳು. ಅವನು ಅದನ್ನು ಒಂದು ಕ್ಷಣ ಕೂಡಾ ನೋಡಲಿಲ್ಲ.

"ಇದೇನು ನಾಲ್ಕು ಲೈನ್‌ಗಳು ಕೂಡಾ ಇಲ್ಲ. ನಾನು ನೋಡಿದ್ದು ಪೂರ್ತಿ ಪೇಜು." ಅಂದ. ಕಿರಣ್ಮಯಿ ಗಲಿಬಿಲಿಗೊಂಡು ಇನ್ಸ್‌ಪೆಕ್ಟರ್ ಕಡೆಗೆ ನೋಡಿದಳು.

ಈ ನಾಲ್ಕು ಲೈನುಗಳ ಕಾಗದವನ್ನೇ ರಾಯಣ್ಣ ಫೋರ್ಜರಿ ಮಾಡಿದ್ದಾನೆಂದುಕೊಂಡಿದ್ದೇವೆ" ಅಂದರು.

"ಅದಕ್ಕೇ ನಿಮ್ಮದು ಪೋ...ಲೀಸ್ ಡಿಪಾರ್ಟ್‌ಮೆಂಟ್ ಅಂದಿದ್ದಾರೆ. ಲಕ್ಷ್ಮಿ ಬರೆದದ್ದು ಈ ಕಾಗದವನ್ನೇ ಅಲ್ಲ. ಬೇಕೆಂದರೆ ಅವಳ ಫ್ರೆಂಡ್ ಅನುರಾಧಳನ್ನು ಕೇಳಿ. ಸ್ನೇಹಿತೆಯ ಕೈ ಬರಹವನ್ನು ಚೆನ್ನಾಗಿ ಕಂಡು ಹಿಡಿಯುತ್ತಾಳೆ."

"ನಿಮಗೆ ಅನುರಾಧಾ ಕೂಡಾ ಚೆನ್ನಾಗಿ ಗೊತ್ತಾ ?"

"ಯಾಕೆ ಗೊತ್ತಿಲ್ಲ. ಅವಳಿಗೆ ಯಾರೋ ಬಸಿರು ಮಾಡಿದಾಗ

ಅಬಾರ್ಷನ್ ಮಾಡಿಸಿದ್ದು ನಾನೇ ತಾನೆ —"

ಕಿರಣ್ಮಯಿ ಆಗಲೇ ಸಾಕಷ್ಟು ಟೆನ್ಷನ್‌ಗಳನ್ನು ಅನುಭವಿಸಿದ್ದಳು. ಕೆಲವು ನೂರು ಮೈಲಿಗಳ ಪ್ರಯಾಣ ಮಾಡಿದ್ದಳು. ಅಷ್ಟು ಕಷ್ಟಪಟ್ಟಿದ್ದರೂ ಸುಸ್ತಾಗಿರಲಿಲ್ಲ. ಈ ಕೊನೆಯ ಮಾತು ಕೇಳಿ ಮುಂದಕ್ಕೆ ಮುಗ್ಗರಿಸಿದಳು.

ಅನುರಾಧ ಬಿಕ್ಕಳಿಸಿ ಅತ್ತಳು. ಅವಳೊಡನೆ ಕಿರಣ್ಮಯಿಯೊಬ್ಬಳೇ ರೂಮಿನಲ್ಲಿದ್ದಳು. ಅವಳು ರಾಧಳನ್ನು ಸಮಾಧಾನಪಡಿಸಲೇ ಹೋಗಲಿಲ್ಲ. ಆ ರಾತ್ರಿ ರಾಜಾರಾವ್ ಬಳಿಯಿಂದ ಬಂದ ನಂತರ. ತುಂಬಾ ಮಾಮೂಲಾಗಿ ಮಾತನಾಡುತ್ತಿರುವಂತೆ, "ರಾಜಾರಾವ್ ನಿಮಗೆ ಗೊತ್ತಾ ?" ಎಂದು ಕೇಳಿದಳು.

"ಇಲ್ಲವಲ್ಲಾ !" ಅನುರಾಧ ನಾಟಕವಾಡಿದಳು.

"ಒಂದು ಸಲ ಕೂಡಾ ನೋಡಿಲ್ವಾ ?"

"ಲಕ್ಷ್ಮಿ ಒಂದು ಸಲ ಪರಿಚಯ ಮಾಡಿಸಿದ್ದಳು ಅಷ್ಟೆ—"

"ಅವನು ಪೋಲಿಸರಿಗೆ ನಿನ್ನ ವಿಷಯ ಹೇಳಿದ್ದಾನಂತೆ—"

"ಏನೆಂದು ?" ಮುಖ ಕಿವುಚುತ್ತಾ ಕೇಳಿದಳು.

"ಅಬಾರ್ಷನ್ ವಿಷಯ— "

ಅನುರಾಧ ಒಂದೇ ನೆಗೆತಕ್ಕೆ ಹಾಸಿಗೆಯಿಂದ ಎದ್ದು ಕುಳಿತಳು. ಅವಳ ಕಣ್ಣುಗಳು ಅಗಲವಾದವು. ಫಿಟ್ಸ್ ಬರುತ್ತೇನೋ ಎಂದು ಹೆದರಿದಳು ಕಿರಣ್ಮಯಿ. ಸದ್ಯ ! ಅಂತಹುದೇನೂ ಇರಲಿಲ್ಲ. ಅವಳು ಪೂರ್ತಿ ನಡುಗುತ್ತಿದ್ದಳು.

"ಹೇಗೆ ? ಈಗ ಹೇಗೆ ?" ಸ್ವಗತದಲ್ಲೇ ಹೇಳಿದಳು. ಆಗಲೇ ಅವಳ ಸ್ವರ ಹೆದರಿಕೆ, ದುಃಖದಿಂದ ನಡುಗುತ್ತಿತ್ತು. ಕಿರಣ್ಮಯಿ ಇನ್ಸ್‌ಪೆಕ್ಟರಿಗೆ ತಾನೇ ಅನುರಾಧಳನ್ನು ಈ ವಿಷಯವಾಗಿ ಪ್ರಶ್ನಿಸುತ್ತೇನೆಂದು ಹೇಳಿದ್ದಳು. ಪೋಲೀಸ್ ಸ್ಟೇಷನ್‌ಗೆ ಕರೆದೊಯ್ದರೂ, ಇಲ್ಲವೇ, ಪೋಲಿಸರೇ ಹಾಸ್ಟೆಲ್ಲಿಗೆ

ಬಂದರೂ ಅನುರಾಧ ಮತ್ತಷ್ಟು ಹೆದರುತ್ತಾಳೆಂದು ಅವರು ಹೀಗೆ ಮಾಡಿದರು. ಇದಕ್ಕೆ ಮುನ್ನುಡಿಯಾಗಿ ಎರಡು ಬಾಣಗಳನ್ನು ಪ್ರಯೋಗಿಸಿ ಸುಮ್ಮನಿದ್ದಳು.

ತಾನು ಎಮೋಷನಲ್ ಬ್ಲಾಕ್ ಮೇಯಿಲ್ ಮಾಡುತ್ತಿದ್ದಾಳೆಂದು ಕಿರಣ್ಮಯಿಗೆ ಗೊತ್ತು. ಆದರೂ ವಿಧಿಯಿಲ್ಲ.

ಅನುರಾಧ ಏನನ್ನೂ ಮಾತನಾಡದೆ ತಲೆದಿಂಬಿನಲ್ಲಿ ಮುಖವನ್ನು ಮುಚ್ಚಿಟ್ಟುಕೊಂಡು ಮಲಗಿದಳು. ದೊಡ್ಡ ಬಿರುಗಾಳಿಯಲ್ಲಿ ಸಿಲುಕಿದ ತರಗೆಲೆಯಂತೆ ಅವಳ ಮನಸ್ಸು ಆಗಿದೆಯೆಂದು ಅವಳು ಮಲಗಿದ್ದ ಭಂಗಿಯಿಂದಲೇ ತಿಳಿಯುತ್ತಿತ್ತು. ಬಹುಶಃ ಈ ವಿಷಯ ನಾಳೆ ದೊಡ್ಡ ಅಕ್ಷರಗಳಲ್ಲಿ ಪೇಪರ್‌ಗಳಲ್ಲಿ ಬರುವುದರ ಬಗ್ಗೆ. ಅದು ತನ್ನ ಮನೆಯವರಿಗೆ ತಿಳಿಯುವುದರ ಬಗ್ಗೆ ಆಲೋಚಿಸುತ್ತಿದ್ದಳೋ ಏನೋ ? ತನ್ನ ಭವಿಷ್ಯ ಅವಳಿಗೆ ನಗ್ನವಾಗಿ ಕಣ್ಮುಂದೆ ನಾಟ್ಯಮಾಡುತ್ತಾ ಇರುವಂತೆ ಕಾಣುತ್ತಿತ್ತು.

—ಆ ರಾತ್ರಿ ಅವಳು ಆತ್ಮಹತ್ಯೆಯ ಪ್ರಯತ್ನ ಮಾಡಿದಳು.

ಕಿರಣ್ಮಯಿ ಡೈನಿಂಗ್ ಹಾಲಿಗೆ ಹೋದಾಗ, ರೂಮಿನಲ್ಲಿರಿಸಿಕೊಂಡ ಸುಮಾರು ಇಪ್ಪತ್ತೈದು ನಿದ್ರೆ ಮಾತ್ರೆಗಳನ್ನು ನುಂಗಿದಳು ಅನುರಾಧ.

ಆದರೆ ಅವಳನ್ನು ಅನುಕ್ಷಣವೂ ಗಮನಿಸುತ್ತಿದ್ದ ಕಿರಣ್ಮಯಿ ಹತ್ತು ನಿಮಿಷಗಳಲ್ಲೇ ಈ ವಿಷಯವನ್ನು ಕಂಡು ಹಿಡಿದಳು. ಚಿರಂಜೀವಿಗೆ ಫೋನ್ ಮಾಡಿ, ನಿದ್ರೆಯಲ್ಲಿ ಜಾರುತ್ತಿದ್ದ ಅವಳನ್ನು ಆಟೋವೊಂದರಲ್ಲಿ ಆಸ್ಪತ್ರೆಗೆ ಕರೆದೊಯ್ದಳು. ಚಿರಂಜೀವಿಗೆ ಪರಿಚಯವಿದ್ದ ಡಾಕ್ಟರೊಬ್ಬರು ಕೂಡಲೇ ಸ್ಟಮಕ್ ವಾಷ್ ಮಾಡಿದರು. ಸುಲಭವಾಗಿಯೇ ಅಪಾಯದಿಂದ ಪಾರಾದಳು ಅನುರಾಧ. ಮತ್ತೊಂದು ಗಂಟೆಯ ನಂತರ ಹಾಸ್ಟೆಲಿಗೆ ಕರೆತಂದಳು ಅವಳನ್ನು. ತಿಳಿದಿದ್ದ ಡಾಕ್ಟರ್ ಆದ್ದರಿಂದ ಪೋಲೀಸ್‌ಕೇಸ್ ಇಲ್ಲದೆ ಮ್ಯಾನೇಜ್ ಮಾಡಿದರು. ಅವರನ್ನಿಳಿಸಿ ಚಿರಂಜೀವಿ ಹೊರಟುಹೋದ.

ಬೆಳಗಿನಿಂದಲೂ ಅನುರಾಧ ಅಳುತ್ತಲೇ ಇದ್ದಳು. ಕಿರಣ್ಮಯಿ ಅವಳನ್ನೇನೂ ಪ್ರಶ್ನಿಸಲಿಲ್ಲ. ಒಂದು ವಿಷಯವನ್ನು ಮಾತ್ರ ಹೇಳಿದಳು ಅಷ್ಟೆ— "ಸಮಸ್ಯೆಗಳಿಗೆ ಆತ್ಮಹತ್ಯೆ ಪರಿಹಾರವಲ್ಲ ಅನುರಾಧ, ನಿನ್ನ ಸಾವಿನಿಂದ

ತ್ತಿಯೋ ಇಲ್ಲಾ ನಾನು ನಿನ್ನ ಮುಖದ ಮೇಲೆ ಈಗಲೇ ಹೊಯ್ಯಲೋ ?"

ರಾಘವರೆಡ್ಡಿ ನಡುಗುತ್ತಿದ್ದ.

ಇದರಲ್ಲಿ ಅಷ್ಟೊಂದು ಭಯಪಡಬೇಕಾದದ್ದೇನೂ ಇಲ್ಲ ರೆಡ್ಡಿ, ನೀನು ಕೇವಲ ಕಾರಿನಲ್ಲಿ ಕುಳಿತರೆ ಸಾಕು! ನಮ್ಮವರು ಇಂತಹುದರಲ್ಲಿ ಪ್ರೊಫೆಷನಲ್ಸ್ ಎಲ್ಲಾ ಅವರೇ ನೋಡಿಕೊಳ್ಳುತ್ತಾರೆ "

"ಇಲ್ಲಿ ರಾಯಣ್ಣನ ಮೇಲೆಯೇ ಆಸಿಡ್ ಹೊಯ್ಯಬಹುದಲ್ಲಾ ?"

"ಹಾಗೆ ಹೊಯ್ದರೆ ಅದನ್ನು ನಾನೇ ಮಾಡಿಸಿದೆನೆಂದುಕೊಳ್ಳುತ್ತಾರೆ, ಎಷ್ಟು ಸಲ 'ಹೇಳಬೇಕು ? ಅವನ ಹೆಂಡತಿಯ ಮೇಲಾದರೆ ಯಾರಿಗೂ ಅನುಮಾನ ಬರುವುದಿಲ್ಲ, ಹೇಳು-ನೀನು ಹೋಗುತ್ತೀಯೋ ? ನನ್ನ ಹಣ ನನಗೆ ವಾಪಸ್ಸು ಕೊಟ್ಟುಬಿಡುತ್ತೀಯೋ ?"

ರಾಘವರೆಡ್ಡಿ ಮಾತನಾಡಲಿಲ್ಲ,

"ಫ್ಲೈಟ್‌ಗೆ ಟೈಮಾಗತ್ತೆ. ಹೇ....ಳು." ಶೀಷೆಯನ್ನು ಮೇಲೆತ್ತುತ್ತಾ ಕೇಳಿದ.

"ಹೋಗ್ತೀನಿ" ರಾಘವರೆಡ್ಡಿಯ ಸ್ವರ ಆಳದಿಂದ ಬಂತು,

o o o

ಡೈನಿಂಗ್ ರೂಂನಲ್ಲಿ ಸೂಜಿ ಬಿದ್ದರೂ ಕೇಳಿಸುವಷ್ಟು ಮೌನವಾದಿತ್ತು. ಆ ರೂಮಿನಲ್ಲಿ ಸುಮಾರು ಹದಿನೈದು ಜನರಿದ್ದರು. ಎಲ್ಲರ ನೋಟವೂ ರಾಯಣ್ಣನ ಮೇಲೆಯೇ ಇತ್ತು.

kiranmayi critical (stop) face burnt with acid (stop) condition serious (stop) start immidiately.

ಅವನು ತನ್ನ ಮುಖದಲ್ಲಿ ಭಾವನೆಗಳು ಮೇಲೆ ಕಾಣದಿರದಂತೆ ಪ್ರಯತ್ನಪಡುತ್ತಿದ್ದ, ಹೃದಯದಿಂದ ದುಃಖ ಅಲೆಗಳಂತೆ ನುಗ್ಗಿ ಬರುತ್ತಿತ್ತು. "ಕಿ...ರ...ಣ್ ಕಿ....ರ...ಣ್" ಅಂದುಕೊಂಡ ಮನಸ್ಸಿನಲ್ಲೇ. ತನಗೆ ಅವಳು ಪರಿಚಯವಾಗಿ ಕೆಲವು ತಿಂಗಳುಗಳು, ವರ್ಷಗಳೂ, ಆಗಲಿಲ್ಲ. ಆದರೂ

ಕೇವಲ ಹೆಂಡತಿಯೇ ಅಲ್ಲದೆ ಉತ್ತಮ ಸ್ನೇಹಿತೆಯಾಗಿ. ಒಬ್ಬ ಗೈಡಾಗಿ ತನ್ನನ್ನು ತಿದ್ದಿದ್ದಾಳೆ. ಮದುವೆಯಾದಂದಿನಿಂದ ಸುಖಗಳನ್ನು ಹಂಚಿಕೊಳ್ಳಲು ಯಾವ ಸುಖವೂ ಇಲ್ಲದಿದ್ದರೂ ಕಷ್ಟಗಳನ್ನು ಮಾತ್ರ ಸಂಪೂರ್ಣವಾಗಿ ಸ್ವೀಕರಿಸಿದ್ದಳು. ತಾನಿಲ್ಲಿ ಆಟದ ಸ್ಥಳದಲ್ಲಿ ಆಡುತ್ತಿದ್ದರೆ. ಅಲ್ಲಿಯ ಪರಿಸ್ಥಿತಿಗಳು ಅವಳೊಡನೆ ಆಡುತ್ತಿದ್ದವು. ಅಲ್ಲಿಯ ವಿವಾದಗಳನ್ನು ಟೆನ್ಷನ್ನನ್ನು ಇಲ್ಲಿಗೆ ತಿಳಿಸದಂತೆ, ಅಲ್ಲೇನು ನಡೆಯುತ್ತದೋ ಅದು ತನ್ನವರೆಗೂ ಬರದಂತೆ ಅವಳು ಕವಚದಂತೆ ರಕ್ಷಿಸುತ್ತಿದ್ದಾಳೆ. ಶತ್ರುವಿನ ಬಾಣ ತನ್ನ ದೊರೆಗೆ ತಗುಲದಂತೆ ನಿಂತ ರಥ ಸಾರಥಿಯಂತೆ...ಅವಳು ಸುಟ್ಟು ಹೋಗಿ ತನ್ನನ್ನು ರಕ್ಷಿಸಿದ್ದಾಳೆ.

ಆಸಿಡ್‌ನಿಂದ ಮುಖ ಸುಟ್ಟು ಹೋಗಿ—ಮೂಗು, ಕಿವಿಗಳ ಆಕಾರ ವಿಕಾರವಾಗಿ ಆಸ್ಪತ್ರೆಯಲ್ಲಿ ಜೀವಚ್ಛವವಾಗಿ—ಸಾವು ಬದುಕುಗಳ ನಡುವೆ ಹೋರಾಡುತ್ತಾ ಕೊನೆಯ ಸ್ಟೇಜಿನಲ್ಲಿರುತ್ತಾಳೆ ! ತಾನು ಹೋಗಬೇಕು....

ಅವನು ತಲೆಯೆತ್ತಿ ಸುತ್ತಲೂ ನೋಡಿದ. ಟೀಮೆಲ್ಲಾ ತನ್ನೆಡೆಗೇ ನೋಡುತ್ತಿದೆ. ಇನ್ನೊಂದರ್ಧ ಗಂಟೆಯಲ್ಲಿ ಟೀಮಿನ ಪ್ಲೇಯರ್‌ಗಳನ್ನು ಫೈನಲ್ಲಾಗಿ ಪ್ರಕಟಿಸುತ್ತಾರೆ. ಅಷ್ಟರಲ್ಲಿ ತಾನೊಂದು ನಿರ್ಧಾರ ತೆಗೆದುಕೊಳ್ಳಬೇಕು.

ಅವನು ಮತ್ತೊಮ್ಮೆ ಟೆಲಿಗ್ರಾಂ ಕಡೆ ನೋಡಿದ.

'ಕಿರಣ್ಮಯಿ' ಎಂಬ ಅಕ್ಷರಗಳೇ ಆಕಾರವಾಗಿ ಕಂಡಿತು. "ನಾನಿದೆಲ್ಲಾ ಮಾಡಿದ್ದು ನಿನಗಾಗಿ....ನಿನ್ನನ್ನು ಕ್ರಿಕೆಟ್ ಫೀಲ್ಡಿನ ಮಧ್ಯದಲ್ಲಿ ಆಟಗಾರನನ್ನಾಗಿ, ದೇಶದ ಪ್ರತಿಷ್ಠೆಯನ್ನು ನಿಲ್ಲಿಸುವ ಬಾವುಟವನ್ನಾಗಿ ನಿಲ್ಲಿಸಬೇಕೆಂದು ಕನಸು ಕಂಡೆ. ಆ ಕನಸನ್ನ ನನಸು ಮಾಡಿಕೊಳ್ಳಬೇಕೆಂಬ ಉದ್ದೇಶದಿಂದಲೇ ಪ್ರಸ್ಥದ ಬಟ್ಟೆಗಳಲ್ಲೆ ಪೊಲೀಸ್ ಸ್ಟೇಷನ್ನಿಗೆ ಬಂದೆ. ಅಂತಹ ಕನಸು ನಿಜವಾಗುವ ಸ್ಥಿತಿಯಲ್ಲಿ, ಈಗ ನೀನು ಈ ಆಟದಿಂದ ಹೊರಬರುತ್ತಿದ್ದೀಯಾ ? ನಾನು ಈ ಕ್ಷಣವೇ ಸತ್ತುಹೋಗಬಹುದು, ಬದುಕಬಹುದು. ಆದರೆ ಈ ಕ್ಷಣ ನಿನ್ನ ಶತ್ರುಗಳು ವಿಜಯ ಗರ್ವದಿಂದ ಬೀಗುತ್ತಿದ್ದಾರೆ. ನಿನ್ನನ್ನು ಆಡದಂತೆ ಮಾಡಿದೆವೆಂದು ಸಂತೋಷಪಡುತ್ತಿದ್ದಾರೆ ! ಯಾವ ವೈದ್ಯದಿಂದ

ನಿನ್ನನ್ನು ದೂರ ಉಳಿಸಲು, ಮಾಡದ ತಪ್ಪಿಗೆ ಅಪರಾಧವನ್ನು ನಿನ್ನ ಮೇಲೆ ಹೇರಿ. ನಿನ್ನನ್ನು ಮಾನಸಿಕವಾಗಿ ಬಲಹೀನರನ್ನಾಗಿ ಮಾಡಿದ್ದಾರೋ........ ಯಾವ ಕೊಲೆಯ ಪ್ರಕರಣವನ್ನು ವಿಚಾರಣೆ ಮಾಡದೆ ನನ್ನನ್ನು ಜೀವಚ್ಛವ ವನ್ನಾಗಿ ಮಾಡಿದ್ದಾರೋ.....ಕ್ರಿಕೆಟ್‌ಗಿಂತಲೂ ಪಾಲಿಟಿಕ್ಸ್, ಲಂಚಗಳೇ ಹೆಚ್ಚೆಂದು ಯಾರು ನಿರೂಪಿಸಲು ಹೊರಟಿದ್ದಾರೋ........ಅವರ ಆಟಗಳು ನಡೆಯದಂತೆ. ಮಾಡಲು ನೀನು ಇವತ್ತು ಆಡಲೇಬೇಕು !!! ಆಟದಲ್ಲಿ ಪಾಲ್ಗೊಳ್ಳಲೇಬೇಕು !! ಗೆಲ್ಲಲೇ ಬೇಕು !!!

ರಾಯಣ್ಣನ ಕಣ್ಣುಗಳು ಅಪ್ರಯತ್ನವಾಗಿ ತೇವವಾದವು. ಒಳಗಿನಿಂದ ಯಾವುದೋ ಉದ್ವೇಗ ನುಗ್ಗಿ ಬರುತ್ತಿತ್ತು. ಆದರೆ ಅದರ ವಿರುದ್ಧ ಶಕ್ತಿ ಯಾಗಿ ಸೇಡು-ಹಠ ಕೂಡಾ ಬೆಳೆಯುತ್ತಿತ್ತು. ತನ್ನ ಆತ್ಮೀಯರನ್ನು ಸಾಯಿಸಿಬಿಟ್ಟರೆ....ನಿಜವಾದ ವೀರ ಶವದ ಮೇಲೆ ಬಿದ್ದು ಅಳುವುದಿಲ್ಲ. ಕೊಂದ ಶತ್ರುವನ್ನು ಕಡಿದು ಚೆಂಡಾಡಲು ಬಾಣದಂತೆ ಮುನ್ನುಗ್ಗುತ್ತಾನೆ, ಅಂತಹ ಮಾನಸಿಕ ಸ್ಥಿತಿಯಲ್ಲೇ ಇದ್ದಾನೆ ರಾಯಣ್ಣ, ಪ್ರಸ್ತುತ.

ಅವನ ಮನಸ್ಸಿನಲ್ಲೀಗ ಕಿರಣ್ಮಯಿ ಇಲ್ಲ,

ಕ್ರಿಕೆಟ್ ಬ್ಯಾಟ್ ಇದೆ.

ಕಿರಣ್ಮಯಿಗೆ, ಕ್ರಿಕೆಟ್ಟಿಗೆ ವ್ಯತ್ಯಾಸವಿಲ್ಲ. ಎರಡೂ ಬದುಕಿನ ಸಹಚರರೇ ತಾನಿನ್ನು ಕ್ರಿಕೆಟ್‌ನಲ್ಲಿಯೇ ಕಿರಣ್ಮಯಿಯನ್ನು ಕಾಣಬೇಕು, ಕಾಣುತ್ತಾನೆ.

ಅದೇ ಅವಳ ಮನಸ್ಸಿಗೆ ಶಾಂತಿ.

ಅವನು ಮ್ಯಾನೇಜರ್ ಬಳಿಗೆ ಹೋದ.

"ನಾನು ಆಡುತ್ತೇನೆ ಸಾರ್ ಅಂದ, ನನ್ನ ಆಟ ನಿಮಗೆ ತೃಪ್ತಿಕರ ವಾಗಿದ್ದರೆ ಮಾತ್ರ ನನ್ನನ್ನು ಫೈನಲ್ ಟೀಮಿಗೆ ಸೆಲೆಕ್ಟ್ ಮಾಡಿ."

ಮ್ಯಾನೇಜರ್ ತೀಕ್ಷ್ಣವಾಗಿ ರಾಯಣ್ಣನ ಕಡೆಗೆ ನೋಡಿದ,

ರಾಯಣ್ಣ ತಲೆ ತಗ್ಗಿಸಿಕೊಂಡ.

ಮ್ಯಾನೇಜರ್ ಅವನ ಭುಜದ ಮೇಲೆ ಕೈಹಾಕಿ "ಗುಡ್" ಅಂದ, "ಹನ್ನೊಂದು ಜನ ಆಡುವ ಈ ಆಟದಲ್ಲಿ ಯಾರಿಗೋ ಒಬ್ಬರಿಗೆ, ಯಾವಾ ಗಲೋ ಒಮ್ಮೆ ಈ ಪರಿಸ್ಥಿತಿ ಬರುವುದು ಹೊಸದೇನೂ ಅಲ್ಲ! ಆದರೆ

ಅವರು ಅಪಾಯದಲ್ಲಿದ್ದರೆ ಇಲ್ಲಿ ಆಡುತ್ತಾ ಕುಳಿತುಕೊಳ್ಳುವುದು ಅವಕಾಶ ವಾದವೋ, 'ಸೆಂಟಿಮೆಂಟ್ ಇಲ್ಲದಿರುವುದೋ' ಅಲ್ಲ... ಡಿಟಾಚ್‌ಮೆಂಟ್ ! ಅಂತಹ ಡಿಟಾಚ್‌ಮೆಂಟ್ ಇರುವವನೇ ನಿಜವಾದ ಕ್ರೀಡಾಪಟುವಾಗುತ್ತಾನೆ. ಅವನ ಮನಸ್ಸು ಅವನಿಗೆ ಸಂಬಂಧಿಸಿದ್ದು. ಆದರೆ ಅವನ ಕಲೆ ಅವನಿಗೆ ಸಂಬಂಧಿಸಿದ್ದಲ್ಲ ಆಟಕ್ಕೆ ಸಂಬಂಧಿಸಿದ್ದು ! ದೇಶಕ್ಕೆ ಸಂಬಂಧಿಸಿದ್ದು !! ಅವನ ಮೇಲೆ ಆಸೆಗಳನ್ನಿಟ್ಟುಕೊಂಡಿರುವ ಅಭಿಮಾನಿಗಳಿಗೆ ಸಂಬಂಧಿಸಿದ್ದು !!! ವಿಷ್ ಯು ಬೆಸ್ಟ್ ಆಫ್ ಲಕ್...."

ಮ್ಯಾಚ್ ಪ್ರಾರಂಭವಾಯಿತು.

ಭಾರತ ಮೊದಲ ಬ್ಯಾಟಿಂಗ್,

ಅದುವರೆವಿಗೆ ಎರಡೂ ದೇಶಗಳು ಸಮಾನವಾಗಿ ಟೆಸ್ಟ್‌ಗಳಲ್ಲಿ ಗೆದ್ದುದರಿಂದ ಕೊನೆಯ ಟೆಸ್ಟ್ ತುಂಬಾ ಕುತೂಹಲಕಾರಿಯಾಗಿತ್ತು. ಜನ ತುಂಬಾ ಸೇರಿದ್ದರು.

ರಾಯಣ್ಣ ಬ್ಯಾಟ್ ಹಿಡಿದುಕೊಂಡು ಫೀಲ್ಡಿನೊಳಗೆ ಬರುತ್ತಿದ್ದಂತೆ ಗಲಾಟೆ ಮತ್ತಷ್ಟು ಹೆಚ್ಚಾಯಿತು. ಕೂಗು ಚಪ್ಪಾಳೆ.

ಅವನು ತಲೆ ಎತ್ತಿ ನೋಡಿದ.

ಕಾಮೆಂಟರಿ ಬಾಕ್ಸ್ ಮೇಲೆ ಮುಂದಿನ ಸಾಲಿನಲ್ಲೇ ಕುಳಿತಿದ್ದಾನೆ ವೆಂಕಟ್ರಾಜು. ರಾಯಣ್ಣ ಕೂಡಲೇ ಮುಖ ತಿರುಗಿಸಿದ. ಎಷ್ಟು ಜನ ಶತ್ರುಗಳು ? ಎಷ್ಟು ರೀತಿಯ ಕಾಟಗಳು ?

ಅವನ ಕಣ್ಮುಂದೆ ಕಿರಣ್ಮಯಿಯ ಮುಖವೇ ಕಾಣುತ್ತಿತ್ತು.

ನಗುತ್ತಾ-ನಾಚಿಕೊಳ್ಳುತ್ತಾ ಮೊದಲ ದಿನ ರೂಮಿಗೆ ಹೆಜ್ಜೆಯಿಟ್ಟ ಮುಖದಲ್ಲಿ ಮುಗ್ಧತೆ-ಹೆಂಡತಿಯಂತೆ,

ಪೊಲೀಸ್ ಲಾಕಪ್‌ನಲ್ಲಿ ಮೊಣಕಾಲಿನ ಮೇಲೆ ತಲೆಯಿರಿಸಿಕೊಂಡು, ನಿಸ್ಸಹಾಯಕ ಸ್ಥಿತಿಯಲ್ಲಿ ತಾನಿರುವಾಗ ಅರ್ಧರಾತ್ರಿಯ ಸಮಯದಲ್ಲಿ ತನಗೆ ಮಾನಸಿಕವಾಗಿ ಧೈರ್ಯ ಹೇಳಲು ಬಂದಾಗ ಅವಳ ಮುಖದಲ್ಲಿ ಕರುಣೆ-ತಾಯಿಯಂತೆ, ತಾನು ಸಂಪೂರ್ಣ ಸಿನಿಕ್ ಆಗಿ ಬದಲಾಗಿ, ಪ್ರೇಕ್ಷಕರು

ಮಾಡುವ ಚೇಷ್ಟೆಗೆ ಹೆದರಿ ಆಡುವುದಿಲ್ಲ, ಕ್ರೀಡಾಂಗಣಕ್ಕೆ ಇಳಿಯುವುದಿಲ್ಲವೆಂದು ಹಠ ಹಿಡಿದಾಗ ಅವಳು ಬಂದು, ಮಾತಿನಲ್ಲೇ ತರ್ಕ ವಿಶ್ಲೇಷಣೆ ಮಾಡಿದಳು-ಮಂತ್ರಿಯಂತೆ. ಮೂರ್ತೀಭವಿಸಿದ 'ಸ್ತ್ರೀ'ತನ—ಕಿರಣ್ಮಯಿ.

....ಅವನಿಗೆ 'ದೋ ಆಂಖೆ ಬಾರಾಹಾತ್' ಸಿನಿಮಾ ನೆನಪಾಯಿತು. ಹೀರೋಗೆ ವಿಲನಗಳು ಮೇಲೇಳದಂತೆ ಹೊಡೆದು ಬೀಳಿಸಿದಾಗ, ಹೀರೋ ಜೊತೆಗಾರರಾದ (ಬದಲಾದ) ಅಪರಾಧಿಗಳು ಏನೂ ಮಾಡಲಾರದೆ ಆಕ್ರೋಶದಿಂದ, ಸೇಡಿನಿಂದ ಕೈಯ್ಯಲ್ಲಿದ್ದ ತರಕಾರಿಗಳನ್ನು ಚಾಕುವಿನಿಂದ ಕೊಚ್ಚಿ ಹಾಕುತ್ತಾರೆ.

ಅವನ ಸ್ಥಿತಿಯೂ ಹಾಗೆಯೇ ಇತ್ತು.

ಶತೃಗಳು ಯಾರೆಂದು ಗೊತ್ತಿಲ್ಲ.

ಯಾರ ಮೇಲೆ ಸಿಟ್ಟು ತೋರಿಸಬೇಕೆಂದು ತಿಳಿಯುತ್ತಿಲ್ಲ.

ಎದುರಿಗೆ ಬಾಲ್ ಬರುತ್ತಿರುವುದು ಕಂಡಿತು ಕಾಲನ್ನು ಮುಂದಿಟ್ಟು, ಕ್ರಾಸ್ ಬ್ಯಾಟ್‌ನಿಂದ ಬಾರಿಸಿದ. ಬಾಲ್ ಹೋಗಿ ಬೌಂಡರಿ ಲೈನ್ ಆಚೆ ಬಿತ್ತು. ಪ್ರೇಕ್ಷಕರಿಂದ ಹರ್ಷೋದ್ಗಾರಗಳು.

ಅವನು ರೂಲ್ಸ್ ಮರೆತು ಬಿಟ್ಟ. ಆಟದ ಟೆಕ್ನಿಕ್ ಮರೆತ ಬಿಟ್ಟ. ಸೇಡು.... ಸೇ....ಡು ಅಷ್ಟೆ.

ನನ್ನ ನಿಗೂಢ ಶತೃಗಳೇ ನೋಡಿ.... ನನ್ನನ್ನು ತಳ್ಳಿ ಹಾಕಬೇಕೆಂದು ಇಷ್ಟು ದಿನ ನೋಡಿದಿರಲ್ಲಾ.... ನಾನೇನೆಂದು ನಿಮಗೆ ಇಂದು ನನ್ನ ವಿಶ್ವರೂಪ ತೋರಿಸುತ್ತೇನೆ. ನನ್ನ 'ತಾಳ್ಮೆ' ನಿಮಗಿಷ್ಟು ದಿನ 'ನನ್ನ ಕೈಲಾಗದತನ'ವಾಗಿ ಕಂಡಿದೆ. ನನ್ನ 'ಸಹೃದಯತೆ' ನಿಮಗಿಷ್ಟು ದಿನ ಸೋಲಿನಂತೆ ಕಂಡಿದೆ. ನನ್ನ ನಿಕ್ಷೇಪ ಶಕ್ತಿಯನ್ನು ಇವತ್ತು ಹೊರತರುತ್ತೇನೆ. ಇಷ್ಟು ದಿನ ನನ್ನಲ್ಲಿ ಅಡಗಿ ಕೊಂಡಿದ್ದ ಕಲೆಯನ್ನು ನಿಮಗೆ ತೋರಿಸುತ್ತೇನೆ. ನನ್ನ ಅರ್ಧಾಂಗಿ ತನ್ನ ಮರಣಶಯ್ಯೆಯ ಮೇಲಿನಿಂದ ನನಗೆ ಸ್ಫೂರ್ತಿ ನೀಡು ನೀಡುತ್ತಿದ್ದಾಳೆ. ಯಾರೋ ಎಲ್ಲೋ ಆತ್ಮಹತ್ಯೆ ಮಾಡಿಕೊಂಡರೆಂದರೆ ಆ ಅಪರಾಧವನ್ನು ನನ್ನ ಮೇಲೆ ಹೊರಿಸಿದಿರಿ. ನನ್ನನ್ನು ನನ್ನ ರಂಗದ ಮೇಲೆ ಬರದಂತೆ ಮಾಡಲು ಸಿಸ್ಟಮ್ಯಾಟಿಕ್ಕಾಗಿ ವ್ಯೂಹ ರಚಿಸಿದಿರಿ. ಸುಳ್ಳು ಸಾಕ್ಷಿ

ಗಳಿಂದಲೂ, ಅನ್ಯಾಯವಾದ ಕಾರಣಗಳಿಂದಲೂ ನನ್ನನ್ನು ಅನುಕ್ಷಣವೂ ಮಾನಸಿಕವಾಗಿ ಬಲಹೀನನನ್ನಾಗಿ ಮಾಡಿ, ನನ್ನ ಸ್ಥಾನವನ್ನು ನೀವು ಹೊಡೆದು ಹಾಕಲು ನೋಡಿದಿರಿ.

ಆದರೆ ನಾನು ಹೆದರುವುದಿಲ್ಲ. ಮೇಲಕ್ಕೆ.... ಮೇಲೆ.... ಮೇಲಕ್ಕೆ ಕೆಂಡ ಕಾರುತ್ತಾ ಹಾರಿಬಿಡುತ್ತೇನೆ. ನೋಡಿ.... ನೋಡುತ್ತಲೇ ಇರಿ. ನೋಡುವುದಕ್ಕೆ ಬಿಟ್ಟು ನೀವು ಬೇರೆಯಾವುದಕ್ಕೂ ಕೆಲಸಕ್ಕೆ ಬಾರದವರು, ಅಗೋ....

ಮತ್ತೊಂದು ಬಾಲ್ ಬಂತು ಎದೆಯಲ್ಲಿದ್ದ ಸೇಡು ಕೈಗಳಲ್ಲಿ ಶಕ್ತಿಯಾಗಿ ಬದಲಾಗಿ, ಬ್ಯಾಟಿನೊಳಗೆ ಉತ್ತೇಜನವನ್ನು ಕಳುಹಿಸಿತು—ಸಿಕ್ಸರ್.

ಮತ್ತೊಂದು ಬಾಲ್ – ಫೋರ್.

ಮೊದಲನೆ ಓವರಿನಲ್ಲಿಯೇ ಅವನು ಇಪ್ಪತ್ತೆಂಟು ರನ್‌ಮಾಡಿದ. ಜನರ ಕೂಗು, ಹರ್ಷೋದ್ಗಾರ, ಶಿಳ್ಳೆ, ಚಪ್ಪಾಳೆಗಳಿಂದ ಸ್ಟೇಡಿಯಂಗೆ ಜೀವ ಬಂದಿತು.

ಓವರ್ ಪೂರ್ತಿಯಾಗುತ್ತಿದ್ದಂತೆಯೇ ಆ ಕಡೆಯಿದ್ದ ಬ್ಯಾಟ್ಸ್‌ಮನ್ ವಿಕೆಟ್ ಮಧ್ಯೆ ಬಂದು ರಾಯಣ್ಣನನ್ನು ಮಾತನಾಡಿದ "ಏನಿದು ? ನಾನಿನ್ನೂ ಮೊದಲ ದಿನದ ಆಟ ಆಡುತ್ತಿದ್ದೇವೆ. ನಮ್ಮದೇ ಮೊದಲ ಬ್ಯಾಟಿಂಗ್, ಆ ವಿಷಯ ಮರೆತು ಬಿಟ್ಟೆಯಾ ?" ಎಂದು ಕೇಳಿದ.

ರಾಯಣ್ಣ ಮಾತನಾಡಲಿಲ್ಲ. ಅವನ ಕಣ್ಣುಗಳು ಕೆಂಪಗೆ ಕೆಂಡದುಂಡೆ ಗಳಂತೆ ಇವೆ. ಸುಸ್ತಿನಿಂದಲ್ಲ—ಆವೇಶದಿಂದ ! ಅವನು ಕಣ್ಮುಚ್ಚಿದರೂ, ಕಣ್ತೆರೆದರೂ ಕಿರಣ್ಮಯಿಯೇ ಕಾಣುತ್ತಿದ್ದಳು.

"ಎಚ್ಚರಿಕೆಯಿಂದ ಆಡು, ನಂತರದ ಬ್ಯಾಟ್ಸ್‌ಮನ್‌ಗಳಿಗೆ ನಾವು ಸ್ವಲ್ಪ ಸ್ಟಾಂಡ್ ಕೊಡಬೇಕು" ಎಂದು ಹೇಳಿ ಹೊರಟು ಹೋದ. ರಾಯಣ್ಣ ತಲೆಯನ್ನು ಕೂಡಾ ಆಡಿಸಲಿಲ್ಲ. ತನ್ನ ವಿಕೆಟ್ ಕಡೆ ಬಂದು ಬಿಟ್ಟ.

ನಂತರದ ಓವರಿನಲ್ಲಿ ಮತ್ತೆ ಅವನಿಗೆ ಬ್ಯಾಟಿಂಗ್ ಬಂತು.

ಅದೇ ಪ್ರೊಸೆಸ್, ಮೊದಲ ಬಾಲ್ ಫೋರ್ ! ಎದುರಾಳಿ ಕ್ಯಾಪ್ಟನ್ ತನ್ನ ಫೀಲ್ಡರ್‌ಗಳನ್ನು ದೂರ ನಿಲ್ಲಿಸಿದ.

ಒಂದೊಂದು ಬಾಲ್ ಒಂದೊಂದು ದಿಕ್ಕಿಗೆ.

ಗುಗ್ಲಿ... ಎಕ್ಸ್ಟ್ರಾ ಫಾಸ್ಟ್.... ಇನ್‌ಸ್ವಿಂಗರ್.... ಪಾಕೀಸ್ತಾನ್ ಬೌಲರ್‌ಗಳು ವಿವಿಧ ರೀತಿ ಪ್ರಯತ್ನಿಸುತ್ತಿದ್ದಾರೆ. ಆದರೆ ರಾಯಣ್ಣನ ಆಟದಲ್ಲಿ ಟೆಕ್ನಿಕ್ ಇದೆ! ಒಬ್ಬ ಶ್ರೇಷ್ಠ ಯೋಧ! ವಿಜಯವೋ, ವೀರ ಸ್ವರ್ಗವೋ ನಿರ್ಧರಿಸಲು ಮೈಯೆಲ್ಲಾ ರಕ್ತವಾಗಿದ್ದರೂ ಇನ್ನೇನು ಮರಣ ಸನ್ನಿಹಿತವಾಗಲೂ .ಹತ್ತು ಜನ ಶತ್ರುಗಳನ್ನಾದರೂ ಸಾಯಿಸಿ ಬಿಡಬೇಕೆಂದು ಕತ್ತಿಯನ್ನು ಬಿದ್ದಲ್ಲಿಂದಲೇ ಬೀಸುತ್ತಾನೆ. ಅದ್ದರಲ್ಲಿ ಎಷ್ಟು ಸೇಡಿರುತ್ತದೋ ಅಷ್ಟೇ ಟೆಕ್ನಿಕ್ ಇರುತ್ತೆ!

ಆ ಎರಡೂ ಸೇಥಿದ ಮೇಲೆ ಇನ್ನು ಎದುರೇ ಇಲ್ಲವಾಯಿತು.

ಲಂಚ್‌ಗೆ ಐದು ನಿಮಿಷಗಳಿರುವಾಗ ಅವನು ಸೆಂಚುರಿ ಪೂರ್ತಿ ಮಾಡಿದ. ಅಷ್ಟೆ! ಕಾಮೆಂಟೇಟರ್ ಪ್ರೇಕ್ಷಕರ ಕೂಗಾಟಗಳ ನಡುವೆಯೂ ಮತ್ತಷ್ಟು ಎತ್ತರದ ಸ್ವರದಲ್ಲಿ – ಗಂಟಲು ಕಿತ್ತು ಬರುವಂತೆ – ಅನೌನ್ಸ್ ಮಾಡಿದ.

ಪ್ರಪಂಚದ ಕ್ರಿಕೆಟ್ ಚರಿತ್ರೆಯಲ್ಲಿ ಅದು ರಿಕಾರ್ಡ್! ಅಷ್ಟು ಶೀಘ್ರವಾಗಿ ಸೆಂಚುರಿ ಮಾಡಿದ್ದು!! ಫಾಸ್ಟೆಸ್ಟ್ ಸೆಂಚುರಿ ಇನ್‌ದಿ ಹಿಸ್ಟರಿ ಆಫ್ ಕ್ರಿಕೆಟ್!!!

ರಾಯಣ್ಣ ಔಟ್ ಆಗುತ್ತಿದ್ದಂತೆ ಜನರೆಲ್ಲಾ ಗೌರವ ಸೂಚಕವಾಗಿ ಎದ್ದು ನಿಂತರು. ಸಮುದ್ರದಲೆಗಳ ಮೇಲೆ ಗಾಳಿ ಬರುತ್ತಿದ್ದಂತೆ ಚಪ್ಪಾಳೆ.

ರಾಯಣ್ಣನ ಕಿವಿಗಳಿಗೆ ಮಾತ್ರ ಇದು ಕೇಳಿಸುತ್ತಿಲ್ಲ. ತಲೆ ತಗ್ಗಿಸಿ ಕೊಂಡು ನೆಲವನ್ನೇ ನೋಡಿಕೊಂಡು ಬರುತ್ತಿದ್ದ. ಮನಸ್ಸು ಸ್ತಬ್ಧವಾಗಿ, ಮೆದುಳು ಶೂನ್ಯವಾಗಿತ್ತು. ಪೆವಿಲಿಯನ್‌ನಲ್ಲಿ ನಡೆದು, ನಿಶ್ಶಬ್ದವಾಗಿ ಡ್ರೆಸ್ಸಿಂಗ್ ರೂಮಿನೊಳಗೆ ಹೊರಟ.

ಮ್ಯಾನೇಜರ್ ಅಭಿನಂದಿಸುತ್ತಿರುವಂತೆ ಭುಜ ತಟ್ಟಿದ.

"ನನ್ನವರ ಕಡೆಯಿಂದ ಏನಾದರೂ ತಿಳಿಯಿತಾ ಸಾರ್?" ಕೇಳಿದ.

"ಸಾರಿ ರಾಯಣ್ಣ. ಮನೆಗೆ ಬೀಗ ಹಾಕಿದೆಯಂತೆ, ಹೈದರಾಬಾದ್... ಕಮೀಷನರ್ ಆಫ್ ಪೋಲೀಸ್ ಈಗಲೇ ಮಾತನಾಡಿದರು. ಅಲ್ಲಿಯ ಆಸ್ಪತ್ರೆಗಳನ್ನು ಹುಡುಕುವಂತೆ ತಿಳಿಸಿದ್ದೇನೆ. ಇನ್ನೊಂದು ಗಂಟೆಯಲ್ಲಿ ತಿಳಿಯುತ್ತದೆ."

ರಾಯಣ್ಣ ಹೆಚ್ಚು ಮಾತನಾಡಲಿಲ್ಲ. ತಲೆ ತಗ್ಗಿಸಿಕೊಂಡೇ ಡ್ರೆಸ್ಸಿಂಗ್ ರೂಮಿನಿಂದ ಹೊರಗೆ ಬಂದ. ಪ್ಯಾಡುಗಳೂ, ಗಾರ್ಡ್ರೂ ಬಿಚ್ಚಿ ತನ್ನ ಬೇರೆ ಷರಟನ್ನು ಹಾಕಿಕೊಂಡ. ಲಂಚ್‌ಗೆ ಎಲ್ಲರೂ ಹೊರಡುತ್ತಿದ್ದಾರೆ.

ಟೀಂ ಮೆಂಬರ್ಸ್ ಹಿಂದೆ ಅವನು ನಡೆಯುತ್ತಿದ್ದಾನೆ.

ಅವನ ಮಾನಸಿಕ ಪರಿಸ್ಥಿತಿ ಗಮನಿಸಿ ಯಾರೂ ಅವನ ಬಳಿಗೆ ಬಂದು ಸಂತೋಷದಿಂದ ಅಭಿನಂದಿಸಲಾರದೆ ಹೋದರು,

ಸ್ನಾಕ್ಸ್ ಕಡೆಗೆ ಮೌನವಾಗಿ ನೋಡುತ್ತಾ ಕುಳಿತು ಬಿಟ್ಟ.

"ಒಂದು ಕಪ್ ಟೀ ಆದರೂ ಕುಡೀರಿ. ಪ್ಲೀಸ್.... ನಮಗೋಸ್ಕರ ನಾದರೂ" ಜೊತೆಯ ಪ್ಲೇಯರ್ ಆತ್ಮೀಯತೆಯಿಂದ ಬಲವಂತಪಡಿಸಿದ,

ತಾನು ಅಲ್ಲಿದ್ದರೆ ಉಳಿದ ಆಟಗಾರರಿಗೂ ಮೂಡ್ ಇರುವುದಿಲ್ಲವೆಂದು ಹೊರಗೆ ಬಂದು ಬಿಟ್ಟ ರಾಯಣ್ಣ. ಅವನ ಪರಿಸ್ಥಿತಿಯನ್ನು ಅರ್ಥಮಾಡಿ ಕೊಂಡವರಂತೆ ಯಾರೂ ಅವನನ್ನು ಫಾಲೋ ಮಾಡಲಿಲ್ಲ.

ಬಿಸಿಲು ಕೆಂಡ ಕಾರುತ್ತಿತ್ತು

ದೂರದಿಂದ ಸ್ಟೇಡಿಯಂನಲ್ಲಿ ಜನರ ಕೂಗಾಟ ಕೇಳುತ್ತಿತ್ತು.

ರಾಯಣ್ಣ ಮತ್ತೆರಡು ಮೆಟ್ಟಿಲುಗಳನ್ನು ಇಳಿದ.

ಆಗ ಬಂತು ಆ ಪರಿಮಳ.

ನಾಸಿಕ ಗುರುತು ಹಿಡಿಯುವ ಪರಿಮಳ ಅಲ್ಲ, ಮನಸ್ಸು ಮಾತ್ರ ಗುರುತಿಸುವ ಪರಿಮಳ.

ನಮ್ಮ ಹತ್ತಿರದವರು, ಆಪ್ತರು, ನಾವು ಪ್ರೀತಿಸಿದವರು ಹತ್ತಿರ ಬರುತ್ತಿದ್ದರೆ ಬರುವ ಹೆಜ್ಜೆಗಳ ಸಪ್ಪಳ,

ಅದು ಸಪ್ಪಳ ಕೂಡಾ ಅಲ್ಲ ... ಕಿವಿಗಳು ಅದನ್ನು ಕೇಳಲಾರದು ! ಮನಸ್ಸು ಮಾತ್ರ ಕೇಳಬಲ್ಲದು.

ಅವನು ಚಕ್ಕನೆ ತಲೆ ಎತ್ತಿ ನೋಡಿದ.

ಎದುರಿಗೆ ಕಿರಣ್ಮಯಿ ಬರುತ್ತಿದ್ದಾಳೆ,

ಕಿ....ರ....ಣ್ಮ... ಯಿ !!!

ತಾನೇನು ನೋಡುತ್ತಿದ್ದೇನೆಂದು ಮರೆತು, ನಿಶ್ಚೇಷ್ಟಿತನಾಗಿದ್ದುಬಿಟ್ಟ ರಾಯಣ್ಣ.

"ಏನ್ರಿ ಹೀಗೆ ನೋಡುತ್ತಿದ್ದೀರಿ ? ಕಂಗ್ರಾಟ್ಸ್.... ಬರುತ್ತಿದ್ದಾಗ ಏರಪೋರ್ಟಿನಲ್ಲಿ ತಿಳಿಯಿತು. ಸೆಂಚುರಿ ವಿಷಯ." ಮಿಂಚುತ್ತಿದ್ದ ಕಣ್ಣಿಗಳಿಂದ ಹೇಳಿದಳು.

ಅವನಿನ್ನೂ ಷಾಕಿನಿಂದ ಚೇತರಿಸಿಕೊಂಡಿರಲಿಲ್ಲ. "ನಿ....ನಗೆ ಏನೂ ಆಗಿಲ್ಲವಾ ?"

"ನಂಗೇನು ಆಗುತ್ತೆ ? ಹ್ಞಾ.... ಏನು ಆಗುತ್ತೆ ?" ಗಲಿಬಿಲಿಯಿಂದ ಕೇಳಿದಳು.

ಅವನು ಓಡಿದ. ಬಾಲ್ ಬೌಂಡರಿ ದಾಟುತ್ತಿರುವಾಗ ಫೀಲ್ಡರ್ ಅದನ್ನು ತಡೆಯಲು ಹೇಗೆ ಓಡುತ್ತಾನೊ ಹಾಗೆ ಓಡಿದ, ಎಷ್ಟು ಹೊತ್ತು ಔಟ್ ಆಗದ ಬ್ಯಾಟ್ಸ್‌ಮನ್ ಮೇಲೆ ಬೌಲರ್ ಬೌನ್ಸರ್ ಹಾಕಿದರೆ, ಆಗಲೇ ಸೆಟಲ್ ಆಗಿದ್ದ ಬ್ಯಾಟ್ಸ್‌ಮನ್ ಹೇಗೆ ಹುಕ್ ಮಾಡಲು ಬ್ಯಾಟ್ ಎತ್ತುತ್ತಾನೋ ಅಷ್ಟೇ ಹಗುರವಾಗಿ ಅವಳನ್ನು ಗಾಳಿಯಲ್ಲಿ ಎತ್ತಿದ. ಅವಳು ತಡೆಯುತ್ತಿದ್ದಾಳೆ. ಅವನು ನಿಲ್ಲಲಿಲ್ಲ.

ಗಾಳಿಯಲ್ಲಿ ಗಿರ್ರನೆ ತಿರುಗಿಸಿದ.

"ಏನ್ರೀ.... ಏನ್ರೀ ಇದು.... ಬಿಡ್ರೀ

ಅವಳನ್ನು ಹಾಗೆಯೇ ಎದೆಯ ಮೇಲೆ ಜಾರಿಸಿಕೊಂಡ, ಹೃದಯಕ್ಕೆ.... ಅಲ್ಲ.... ಹೃದಯದೊಳಗೇ ಒತ್ತಿಕೊಂಡ.

ದೂರದಿಂದ ಚಪ್ಪಾಳೆಗಳು ಕೇಳಿಸಿದವು. ಆಗವನು ಎಚ್ಚರಗೊಂಡು, ಸ್ವಲ್ಪ ನಾಚಿಕೊಂಡು ತಲೆತಿರುಗಿಸಿ ನೋಡಿದ.

ಎಲ್ಲಾ ಆಟಗಾರರೂ ವಲಯಾಕಾರದಲ್ಲಿ ನಿಂತು ಚಪ್ಪಾಳೆ ತಟ್ಟುತ್ತಿದ್ದಾರೆ.

ವೆಂಕಟ್ರಾಜು ಟೀಂ ಜೊತೆ ಸೇರಿ ಲಂಚ್‌ಗೆ ಹೋಗಲಿಲ್ಲ.

ಒಬ್ಬನೇ – ಕಾಮೆಂಟೇಟರ್ ಬಾಕ್ಸ್‌ನ ಪಕ ದಲ್ಲಿಯ ಪ್ರೇಕ್ಷಕರ ಮೇಲಿದ್ದ ಬಾಲ್ಕನಿಯಲ್ಲಿ ಕುಳಿತಿದ್ದ.

ರಾಯಣ್ಣ ಆಡಲು ನಿರ್ಧರಿಸಿದ್ದು ಅವನಿಗೆ ಊಹಿಸದ ಪೆಟ್ಟು. ರಾಯಣ್ಣ ಆಟಕ್ಕಾಗಿ ತನ್ನ ಹೆಂಡತಿಯನ್ನು ಬಿಡುತ್ತಾನೆಂದುಕೊಳ್ಳಲಿಲ್ಲ.

ಆಟ ನಡೆಯುತ್ತಿರುವಷ್ಟು ಹೊತ್ತು ಅವನು ಮುಳ್ಳಿನ ಮೇಲೆ ಕುಳಿತವ ನಂತೆ ಕುಳಿತಿದ್ದ ! ಲಂಚ್ ಟೈಂಗೆ ರಾಯಣ್ಣ ಸೆಂಚುರಿ ಮಾಡಿ ವರ್ಲ್ಡ್ ರೆಕಾರ್ಡ್ ಸ್ಥಾಪಿಸುತ್ತಿದ್ದಂತೆಯೇ ಒಂದು ಕ್ರೈಮ್‌ನ್ನು ಮುಕ್ತಿ ಮಾಡಿ ಮತ್ತೊಂದು ಅಂಗೈಗೆ ಬಡಿದುಕೊಂಡ ತನ್ನ ಭವಿಷ್ಯ ಸಂಪೂರ್ಣ ಸೀಲ್ ಆಗಿ ಹೋದಂತೆ ಅವನಿಗೆ ತಿಳಿದು ಹೋಯಿತು. ರಾಯಣ್ಣ ಟೀಮಿನಲ್ಲಿ ಇರುವಷ್ಟು ದಿನ ತನಗೆ ಛಾನ್ಸ್ ಇಲ್ಲ. ತಾನಿನ್ನು ಬದುಕಿನಲ್ಲಿ ಟೆಸ್ಟ್ ಪ್ಲೇಯರ್ ಆಗುವುದಿಲ್ಲ.

ಆ ಚಿಂತೆಯಲ್ಲೇ ಅವನು ಲಂಚ್‌ಗೆ ಹೋಗದೆ ಕುಳಿತುಬಿಟ್ಟ. ಹತ್ತು ನಿಮಿಷಗಳ ನಂತರ ಆ ದೃಶ್ಯವನ್ನು ನೋಡಿದ ಅವನು !

ಬಾಲ್ಕನಿ ಪಕ್ಕದಲ್ಲಿ, ರೆಯಿಲಿಂಗ್ ಆಚೆ ರಾಯಣ್ಣ ತನ್ನ ಹೆಂಡತಿ ಯನ್ನು ಗಾಳಿಯಲ್ಲಿ ತಿರುಗಿಸುತ್ತಿರುವುದನ್ನು !

ಮೊದಲು ಅವನಿಗೆ ಅರ್ಥವಾಗಲಿಲ್ಲ. 'ಏನು ನಡೆಯಿತು ?' ಅಂದು ಕೊಂಡು, ಕಣ್ಣುಗಳನ್ನುಜ್ಜಿ ನೋಡಿದ. ಕಿ. ರ.. ಣ್ಣ ಯಿ ಅವಳೇ. ಅವನ ಹೆಂಡತಿ.

ಅವನು ಆ ಕನ್‌ಫ್ಯೂಜನ್‌ನಲ್ಲಿರುವ-ಗಲೇ ದೂರದಿಂದ ರಾಘವರೆಡ್ಡಿ ಕುರ್ಚಿಗಳ ಮಧ್ಯದಿಂದ ಬರುವುದು ಕಂಡಿತು. ಅವನು ಹೆಜ್ಜೆ ಮುಂದಕ್ಕೆ ಹಾಕಿದ. ರಾಘವರೆಡ್ಡಿ ಹತ್ತಿರ ಬಂದ ! ಅವನ ಮುಖದಲ್ಲಿ ರಿಲೀಫ್ ಕಾಣುತ್ತಿತ್ತು. ಒಂದು ಕಷ್ಟವಾದ ಕೆಲಸವನ್ನು ಮಾಡದೆ ತಪ್ಪಿಹೋದ ರಿಲೀಫ್ ಅದು !

"ಏನು ನಡೆಯಿತು ?" ವೆಂಕಟ್ರಾಜು ಕೇಳಿದ.

ಅವನ ಸ್ವರದಲ್ಲಿಯ ಕರ್ಕಶವನ್ನು ರೆಡ್ಡಿ ಗಮನಿಸಲಿಲ್ಲ. "ರಾಯಣ್ಣ ಆಡುತ್ತಿದ್ದಾನಲ್ಲಾ " ಅಂದ.

"ಅದನ್ನು ಬೆಳಗಿನಿಂದಲೂ ನೋಡುತ್ತಲೇ ಇದ್ದೇನೆ. ನೀನು ಹೋದ ಕೆಲಸ ಏನಾಯಿತು ?" ಕಟುವಾಗಿ ಕೇಳಿದ.

"ಈಗ ತಾನೆ ಫ್ಲೈಟ್‌ನಲ್ಲಿ ಬರುತ್ತಿದ್ದೇನೆ. ನನ್ನೊಡನೆ ಅವನ ಹೆಂಡತಿ ಕೂಡಾ ಬಂದಳು.

"ಅವಳನ್ನು ಕೂಡಾ ನೋಡಿದೆ. ನಾನು ಕೇಳುತ್ತಿರುವ ಪ್ರಶ್ನೆ ಅದಲ್ಲ. ನಮ್ಮವರು ನಿನ್ನನ್ನು ಭೇಟಿ ಮಾಡಲಿಲ್ಲವಾ ?"

"ಸಿಕ್ಕಿದ್ದರು."

"ಆಸಿಡ್ ಹಾಕೋದು ಆಗಲಿಲ್ಲವಾ ?

"ಎಲ್ಲರೂ ಸೇರಿಯೇ ಹೊರಟೆವು. ಮಧ್ಯದಲ್ಲಿ ನನಗೊಂದು ಆಲೋಚನೆ ಬಂತು. ನಮಗೆ ಬೇಕಾಗಿದ್ದು ಅವಳ ಕಣ್ಣುಗಳಲ್ಲಿ ಆ್ಯಸಿಡ್ ಹೊಯ್ದಂತೆ ರಾಯಣ್ಣನಿಗೆ ತಿಳಿಯ ಬೇಕಾದ್ದು ತಾನೆ ? ಆ ಟೆಲಿಗ್ರಾಂ ತಲು ಪಿದ ಕೂಡಲೆ ಅವನು ಆಟ ಆಡುವುದಿಲ್ಲ. ಆಟ ಆಡದಿದ್ದರೆ ಸಾಕು.... ಆ್ಯಸಿಡ್ ಉಯ್ಯುವ ಅಗತ್ಯವಿಲ್ಲ ಅದಕ್ಕೆಂದು... "

"....ಅದಕ್ಕೆಂದು" ಮುಖ ಕಿವುಚುತ್ತಾ ಕೇಳಿದ.

"ಟ್ಯಾಕ್ಸಿಯನ್ನು ಕೂಡಲೇ ಟೆಲಿಗ್ರಾಫ್ ಆಫೀಸ್ ಕಡೆಗೆ ತಿರುಗಿಸಿ ಅಲ್ಲಿಂದಲೇ ರಾಯಣ್ಣನಿಗೆ ಟೆಲಿಗ್ರಾಂ ಕೊಟ್ಟೆ."

ವೆಂಕಟ್ರಾಜು ಶ್ವಾಸಕೋಶದ ತುಂಬಾ ಗಾಳಿಯನ್ನು ತುಂಬಿಸಿಕೊಂಡು ಆವೇಶಗೊಂಡ.

"ನಾವು ನಿಜವಾಗಿಯೂ ಆ್ಯಸಿಡ್ ಹೊಯ್ದಿದ್ದರೂ ರಾಯಣ್ಣ ಆಡುತ್ತಿದ್ದ" ರಾಘವರೆಡ್ಡಿ ಹೇಳುತ್ತಿದ್ದ.

ವೆಂಕಟ್ರಾಜು ಜೇಬಿಗೆ ಕೈ ಹಾಕಿದ.

"ದೊಡ್ಡ ಅಪಾಯದಿಂದ ನಾವು ತಪ್ಪಿಸಿಕೊಂಡೆವು. ಅನವಶ್ಯಕವಾಗಿ ಅಷ್ಟು ಕಷ್ಟಪಟ್ಟಿದ್ದರೂ ಇದೇ ನಡೆಯುತ್ತಿತ್ತು. ನಾವು ಪೋಲೀಸ್ ಕೇಸಿನಲ್ಲಿ ಸಿಕ್ಕಿಹಾಕಿಕೊಳ್ಳುತ್ತಿದ್ದೆವು ಅಷ್ಟೆ.

ವೆಂಕಟ್ರಾಜು ಕೈ ಜೇಬಿನಲ್ಲಿದ್ದ ಆ್ಯಸಿಡ್ ಬಾಟಲನ್ನು ಗಟ್ಟಿಯಾಗಿ ಹಿಡಿದುಕೊಂಡಿತು.